# ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

[ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ]


ಸಂಶೋಧಕರು

**ಗಾದೆಪ್ಪ**

ಮಾರ್ಗದರ್ಶಕರು

**ಡಾ. ಆರ್. ವೆಂಕಟೇಶನ್**

ಪ್ರವಾಚಕರು





ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-583276

2009

# ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

ಸಂಶೋಧಕರು

ಗಾದೆಪ್ಪ

ಮಾರ್ಗದರ್ಶಕರು

ಡಾ.ಆರ್.ವೆಂಕಟೇಶನ್

ಪ್ರವಾಚಕರು



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-583276

2009

## ಮಾರ್ಗದರ್ಶಕರ ಪ್ರಮಾಣ ಪತ್ರ

ಗಾದೆಪ್ಪ ಇವರು *"ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ"* ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

**ಡಾ.ಆರ್.ವೆಂಕಟೇಶನ್**
ಮಾರ್ಗದರ್ಶಕರು ಮತ್ತು ಪ್ರವಾಚಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ: 28.02.2009

# ಸಂಶೋಧಕರ ಪ್ರಮಾಣ ಪತ್ರ

*"ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ"* ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ. ಪದವಿಗಾಗಿ ಡಾ.ಆರ್.ವೆಂಕಟೇಶನ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಗಾದೆಪ್ಪ)
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ: 28.02.2009

# ಪರಿವಿಡಿ


ಅಧ್ಯಾಯ–1 : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ 1–30

1.1 ಪ್ರಸ್ತಾವನೆ

1.2 ಅಧ್ಯಯನದ ಉದ್ದೇಶ ಮತ್ತು ಮಹತ್ವ

1.3 ಅಧ್ಯಯನದ ವ್ಯಾಪ್ತಿ

1.4 ಅಧ್ಯಯನದ ವಿಧಾನ

1.5 ಇದುವರೆಗಿನ ಅಧ್ಯಯನಗಳು

1.6 ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ–2 : 1900 ರಿಂದ 1956ರ ವರೆಗಿನ ಸ್ಥಿತಿಗತಿ 31–51

ಅಧ್ಯಾಯ–3 : ಭಾಷಣ ಮತ್ತು ಲೇಖನಗಳಲ್ಲಿ ವಿಜಯನಗರದ ಪ್ರತಿನಿಧೀಕರಣ 52–83

ಅಧ್ಯಾಯ–4 : ನಾಟಕಗಳಲ್ಲಿ ವಿಜಯನಗರದ ಪ್ರತಿನಿಧೀಕರಣ 84–125

ಅಧ್ಯಾಯ–5 : ಗೀತ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ 126–159

ಅಧ್ಯಾಯ–6 : ಕಾದಂಬರಿಗಳಲ್ಲಿ ವಿಜಯನಗರದ ಪ್ರತಿನಿಧೀಕರಣ 160–204

ಅಧ್ಯಾಯ–7 : ಪ್ರವಾಸಿ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ 205–220

ಅಧ್ಯಾಯ–8 : ಸಮಾರೋಪ 221–227

8.1 ಅಧ್ಯಯನದ ಫಲಿತಗಳು

8.2 ಮುಂದಿನ ಅಧ್ಯಯನಕ್ಕಿರುವ ಸಾಧ್ಯತೆಗಳು

ಅನುಬಂಧ–1

ಛಾಯಚಿತ್ರಗಳು

ಆಕರ ಗ್ರಂಥಗಳು

ಅನುಬಂಧ–2

ವಕ್ತೃಗಳ ವಿವರ

# ಅಧ್ಯಾಯ–1

## ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.1. ಪ್ರಸ್ತಾವನೆ

1.2. ಅಧ್ಯಯನದ ಉದ್ದೇಶ ಮತ್ತು ಮಹತ್ವ

1.3. ಅಧ್ಯಯನದ ವ್ಯಾಪ್ತಿ

1.4. ಅಧ್ಯಯನದ ವಿಧಾನ

1.5. ಇದುವರೆಗಿನ ಅಧ್ಯಯನಗಳು

1.6. ಪರಿಕಲ್ಪನಾತ್ಮಕ ಚರ್ಚೆ

ಏಳು ಸಾಯಣ ಕಟ್ಟು ಗ್ರಂಥವ
ನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ
ಏಳು ಕ್ಷಣ ಈ ಮಾತ್ರಕೆ॥

–ಶಾಂತಕವಿ

# ಅಧ್ಯಾಯ-1

# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

## 1.1 ಪ್ರಸ್ತಾವನೆ :

ಸ್ವಾತಂತ್ರ್ಯ ಪೂರ್ವದ ಸಂದರ್ಭದಲ್ಲಿ ಭಾರತ ಪಾಕಿಸ್ತಾನ ಎಂದು ಗುರುತಿಸುವ ಪ್ರದೇಶವು ರಾಜಕೀಯವಾಗಿ ಹಲವಾರು ಸಂಸ್ಥಾನಗಳಾಗಿ ವಿಭಜನೆ ಹೊಂದಿದ್ದವು. ಈ ಸಂಸ್ಥಾನಗಳ ಆಡಳಿತವನ್ನು ರಾಜ ಮಹಾರಾಜರು, ನವಾಬರು, ಪಾಳೆಗಾರರು, ಸುಲ್ತಾನರು ನಿರ್ವಹಿಸುತ್ತಿದ್ದರು. ಈ ಸಂಸ್ಥಾನಗಳಲ್ಲಿನ ಆಡಳಿತವು ಒಂದು ಸಂಸ್ಥಾನಕ್ಕಿಂತ ಮತ್ತೊಂದು ಸಂಸ್ಥಾನಕ್ಕೆ ಭಿನ್ನವಾಗಿರುತ್ತಿತ್ತು. ಹದಿನಾರನೇ ಶತಮಾನದ ಆದಿಯಲ್ಲಿ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲೀಷರು ಮುಂತಾದ ಐರೋಪಿಯನ್ನರು ಭಾರತಕ್ಕೆ ವರ್ತಕರಾಗಿ ಆಗಮಿಸಿದರು. ಈ ವರ್ತಕರು ಆ ಸಂದರ್ಭದಲ್ಲಿ ಆಡಳಿತ ಮಾಡುತ್ತಿದ್ದ ಅನೇಕ ರಾಜ ಮಹಾರಾಜರ, ನವಾಬರ, ಪಾಳೇಗಾರರ ಸಂಸ್ಥಾನಗಳ ಮೇಲೆ ಆಕ್ರಮಣ/ಸಂಧಾನ ಕಾರ್ಯಗಳ ಮೂಲಕ (ಭಾರತದಲ್ಲಿ) ವಾಣಿಜ್ಯ ಕೇಂದ್ರಗಳ ಸ್ಥಾಪನೆ ಮತ್ತು ಅವಶ್ಯಕ ಅನುಕೂಲತೆಗಳನ್ನು ಪಡೆದುಕೊಂಡರು.

ಭಾರತದಲ್ಲಿನ ಕಚ್ಚಾವಸ್ತುಗಳನ್ನು ತಮ್ಮ ದೇಶಕ್ಕೆ ಕೊಂಡೊಯ್ಯಲು ಹಾಗೂ ಅಲ್ಲಿನ ಸರಕುಗಳನ್ನು ತಂದು (ಭಾರತ) ಆಯಾ ಸಂಸ್ಥಾನಗಳಲ್ಲಿ ಮಾರಾಟ ಮಾಡಲು ಐರೋಪ್ಯ ಕಂಪನಿ (ಫ್ರೆಂಚ್ ಮತ್ತು ಇಂಗ್ಲಿಷ್) ಯೊಳಗೆ ಪೈಪೋಟಿ ಉಂಟಾಯಿತು. ಕಾಲ ಕ್ರಮೇಣ ಹಲವಾರು ಸಂಸ್ಥಾನಗಳಲ್ಲಿನ ರಾಜಕೀಯ ಅಧಿಕಾರ ಮತ್ತು ಆರ್ಥಿಕ ಪ್ರಯೋಜನವನ್ನು ಪಡೆಯುವಲ್ಲಿ 'ಬ್ರಿಟೀಷ್ ಈಸ್ಟ್ ಇಂಡಿಯಾ' ಕಂಪನಿ ಯಶಸ್ವಿಯಾಯಿತು. ಕೆಲವು ಪ್ರಾಂತ್ಯಗಳನ್ನು ಹೊರತುಪಡಿಸಿ ಇಡೀ ಹಿಂದೂಸ್ಥಾನವೇ ಬ್ರಿಟಿಷ್ ವಸಾಹತುಶಾಹಿ ರಾಷ್ಟ್ರವಾಗಿ 'ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ'ಯ ಮೂಲಕ ಆಳಲ್ಪಟ್ಟಿತು.

ವಸಾಹತುಶಾಹಿ ಆಳ್ವಿಕೆಯ ಹಿಡಿತದಿಂದ ದೇಶವನ್ನು ವಿಮೋಚನೆಗೊಳಿಸುವ ಹೆಗ್ಗುರಿಯುಳ್ಳ ಭಾರತೀಯರ ದೃಷ್ಟಿಕೋನ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಕಾರಣವಾಯಿತು. ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಬಹುಮುಖ್ಯ ಪ್ರೇರಣೆ ಎಂದರೆ ವಸಾಹತುಶಾಹಿ ಸಂದರ್ಭದ ಶಿಕ್ಷಣ ಎನ್ನುವುದು ಕುತೂಹಲದ ಸಂಗತಿಯಾಗಿದೆ. ಏಕೆಂದರೆ ವಸಾಹತುಶಾಹಿ ಶಿಕ್ಷಣ ಪಡೆದ ಭಾರತೀಯ ಮೇಲ್ವರ್ಗದ ವಿದ್ಯಾವಂತ ವರ್ಗವು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಶತಮಾನಗಳಿಂದ ಜಿಡ್ಡುಗಟ್ಟಿದ ಕೆಲವು ಅನಿಷ್ಟ ಪದ್ಧತಿಗಳನ್ನು ಗುರುತಿಸಿ ಕೆಲವು ಸುಧಾರಣೆಗಳನ್ನು ತರುವ ಪ್ರಯತ್ನ ಮಾಡಿದರು. ಹಾಗೆಯೇ ಯುರೋಪಿನ ಚರಿತ್ರೆಯ ಅಭ್ಯಾಸ ಮಾಡಿದ ಈ ವಿದ್ಯಾವಂತ ವರ್ಗವು ಆ (ಬ್ರಿಟಿಷ್ ಶಿಕ್ಷಣ) ಮಾದರಿಯಲ್ಲಿ ತಮ್ಮ ಚರಿತ್ರೆಯನ್ನು (ಭಾರತ) ಕಟ್ಟಿಕೊಳ್ಳುವ ಕಾರ್ಯದಲ್ಲಿ ತೊಡಗಿದರು. ಚಾರಿತ್ರಿಕ

ಘಟನೆ/ನೆನಪುಗಳನ್ನು ಎಲ್ಲೋ ಬಿಡಿ ಬಿಡಿಯಾಗಿ ಬೇರೆ ಬೇರೆ ಹಂದರದಲ್ಲಿ ಮತ್ತು ವ್ಯವಸ್ಥೆಯಲ್ಲಿ ಅಡಕವಾಗಿ ಚದುರಿ ಹೋಗಿದ್ದವು. ಅವುಗಳನ್ನು ಹೊಸ ಅರ್ಥ ಮತ್ತು ಆಶಯಗಳಿಗೆ ತಕ್ಕಂತೆ ಜೋಡಿಸಿಕೊಂಡು ತಮ್ಮ ಕಾಲದ ಸಂಸ್ಕೃತಿಕ ಒತ್ತಡಗಳಿಗನುಗುಣವಾಗಿ ಚರಿತ್ರೆಯನ್ನು ವ್ಯಾಖ್ಯಾನ ಮಾಡಲಾಗಿದೆ. ಅಂದರೆ ಹಳೆಯ ಕಾಲದ ರಾಜಕೀಯ ಮತ್ತು ಧಾರ್ಮಿಕ ಘಟನೆ/ನೆನಪುಗಳನ್ನು ತಮ್ಮ ಕಾಲದ ರಾಜಕೀಯ ಉದ್ದೇಶಗಳಿಗೆ ಬದ್ಧವಾಗಿ ದುಡಿಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ವೇದ, ಪುರಾಣ ಮತ್ತು ರಾಮಾಯಣ, ಮಹಾಭಾರತಗಳಂತಹ ಕಾವ್ಯಗಳಲ್ಲಿ ಉಲ್ಲೇಖವಾಗಿರುವಂತಹ ಸಾಂಸ್ಕೃತಿಕ ಮೌಲ್ಯಗಳ ಆಧಾರದ ಮೇಲೆ 18ನೇ ಶತಮಾನದ ಮಧ್ಯಭಾಗದಲ್ಲಿ ಭಾರತೀಯರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ವಿಕಾಸಗೊಂಡಿತು. ಈ ರಾಷ್ಟ್ರೀಯ ಪ್ರಜ್ಞೆಯ ಜೊತೆ ಜೊತೆಯಾಗಿಯೇ ಕರ್ನಾಟಕ ಪುನರುಜ್ಜೀವನ ಚಿಂತನಾ ಸಾಧನೆ ಸ್ವಾತಂತ್ರ ಪೂರ್ವದ ಮಹತ್ ಕಾರ್ಯವಾಗಿದೆ. ಈ ಸಾಧನೆ ಹಿಂದೆ ಅನೇಕ ಮಹನಿಯರ ಚಿಂತನ ಕರ್ತೃತ್ವ ಶಕ್ತಿಗಳು ಕಾರಣವಾಗಿವೆ.

ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಹಲವು ಪ್ರಾಂತ್ಯಗಳಲ್ಲಿ ವಿಭಜನೆಗೊಂಡಿದ್ದ ಕನ್ನಡಿಗರನ್ನು ಏಕೀಕರಣಗೊಳಿಸುವುದು, ಆ ಮೂಲಕ ಕನ್ನಡ ರಾಷ್ಟ್ರೀಯತೆಯೊಂದಿಗೆ ಭಾರತೀಯ ರಾಷ್ಟ್ರೀಯ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳುವ ಕಾರ್ಯವನ್ನು ಹೋರಾಟಗಾರರು, ಚಿಂತಕರು, ಸೃಜನಶೀಲ ಬರಹಗಾರರು ಪ್ರಯತ್ನ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಜನತೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳೆಯಲು ಭಾಷೆ, ಧರ್ಮ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಜನಾಂಗವೊಂದರ ನೆನಪುಗಳನ್ನು ಪುನರ್ ಸಂಘಟಿಸುವ ಒಂದು ಮಹಾನ್ ಪ್ರಕ್ರಿಯೆಯೇ ಪ್ರಾರಂಭವಾಗಿರುವುದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಜಯನಗರದ ಆಡಳಿತ ಸುವರ್ಣಯುಗದ ಕಲ್ಪನೆಯ ಚಾರಿತ್ರಿಕ ಘಟನೆ/ನೆನಪುಗಳನ್ನು ಆಧರಿಸಿ (ಕಟ್ಟಿಕೊಂಡ) ರೂಪುಗೊಂಡ ಆಧುನಿಕ ಕನ್ನಡ ಸಾಹಿತ್ಯ ಸಂಕಥನದಲ್ಲಿ ಕನ್ನಡ, ಭಾರತ(ರಾಷ್ಟ್ರ), ಹಿಂದೂ ಗುರುತುಗಳು ಹೇಗೆ ಪ್ರತಿನಿಧೀಕರಣಗೊಂಡಿವೆ? ಈ ಗುರುತುಗಳು ರೂಪುಗೊಳ್ಳಲು ಆ ಕಾಲದ ಸಾಂಸ್ಕೃತಿಕ ಒತ್ತಡಗಳೇನು? ಇಂತಹ ಗುರುತುಗಳಿಂದ ಸಮಾಜದಲ್ಲಿ ಉಂಟಾಗಬಹುದಾದ ಪರಿಣಾಮಗಳ ಸ್ವರೂಪ ಎಂಥದು? ಪ್ರಸ್ತುತ ಸಂದರ್ಭದಲ್ಲಿ ಈ ಗುರುತು ರಾಜಕಾರಣವು ಕೋಮು ಭಾವನೆಗೆ ಕಾರಣವಾಗಿದೆಯೇ?! ಎಂಬ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗುವುದು.

## 1.2. ಅಧ್ಯಯನದ ಉದ್ದೇಶ ಮತ್ತು ಮಹತ್ವ :

ವಸಾಹತುಶಾಹಿ ಆಡಳಿತದ ಪೂರ್ವದಲ್ಲಿ ಭಾರತವೆಂದು ಗುರುತಿಸುವ ಪ್ರದೇಶದಲ್ಲಿ ಜಾತಿ, ಧರ್ಮ, ಭಾಷೆಯಂತಹ ಸಾಂಸ್ಕೃತಿಕ ನೆಲೆಯಲ್ಲಿಯೂ, ರಾಜಕೀಯವಾಗಿಯೂ ವ್ಯವಸ್ಥೆಯೇ ದುರ್ಬಲಗೊಂಡಿತು. ಅದಕ್ಕೆ ಪುರೋಹಿತಶಾಹಿ ವ್ಯವಸ್ಥೆಯಿಂದ ಉಂಟಾದ

ಮೌಢ್ಯತೆ ಮತ್ತು ಅರಸರುಗಳ ಒಳಜಗಳಗಳು ಕಾರಣವಾಗಿದ್ದವು. ಎಲ್ಲೆಲ್ಲೂ ಅಸಮಾಧಾನದ ಹೊಗೆಯಾಡುತ್ತಿತ್ತು. ಇದರ ಪರಿಣಾಮದಿಂದ ದೇಶದಲ್ಲಿ ಹೊರಗಿನ ಶಕ್ತಿಗಳ ಪ್ರವೇಶಕ್ಕೆ ಅವಕಾಶವೊಂದು ಸೃಷ್ಟಿಯಾಗಿತ್ತು. ಇಂಥ ಸಂದರ್ಭದಲ್ಲಿ ವ್ಯಾಪಾರದ ಉದ್ದೇಶದಿಂದ ಬಂದ ಪಾಶ್ಚಾತ್ಯರಿಗೆ ತಮ್ಮ ರಾಜಕೀಯ ಅಸ್ತಿತ್ವವನ್ನು ಸ್ಥಾಪಿಸಲು ಅನುಕೂಲವಾಯಿತು. ಇಲ್ಲಿನ ಆಂತರಿಕ ರಾಜಕೀಯ ದ್ವೇಷಗಳು ಅವರಿಗೆ ಅನುಕೂಲಕರವಾಗಿ ಪರಿಣಮಿಸಿದವು. ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸಿ ಆಂತರಿಕ ಕಲಹಗಳನನ್ನು ಪ್ರೇರೇಪಿಸುತ್ತಲೇ ಅವುಗಳ ಲಾಭ ಪಡೆದವುದರೊಂದಿಗೆ ತಮ್ಮ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಈ ಚಕ್ರಾಧಿಪತ್ಯವು ಹಿಂದೂಸ್ತಾನದ ಬಹು ಪ್ರದೇಶಗಳನ್ನು ಒಂದುಗೂಡಿಸುವುದರ ಮೂಲಕ ಒಂದು ರಾಜಕೀಯ ಘಟಕವಾಗಿ ರೂಪಿಸಿದವು. ತತ್‌ಪರಿಣಾಮವಾಗಿ ರಾಷ್ಟ್ರ (ಭಾರತ) ಎನ್ನುವ 'ಗುರುತು' ರೂಪುಗೊಂಡಿತು.

ಭಾರತೀಯರಲ್ಲಿ ರಾಜಕೀಯ ಪ್ರಜ್ಞೆ ಪ್ರಬಲವಾಗುತ್ತಿದ್ದಂತೆ ರಾಷ್ಟ್ರೀಯತೆಯ ಪ್ರಜ್ಞೆಯು ಎಚ್ಚರವಾಯಿತು. ಸ್ವಾತಂತ್ರ್ಯದ ಹಂಬಲ ಭಾರತೀಯರದಾಯಿತು. ಈ ಹಂಬಲವನ್ನು ಪ್ರಚಾರಕ್ಕೆ ತರುವುದು, ಸ್ವಾತಂತ್ರ್ಯದ ಅಗತ್ಯದ ಬಗೆಗಿನ ತಿಳುವಳಿಕೆಗಳಿಂದ ಜನತೆಯಲ್ಲಿ ಎಚ್ಚರ ಮೂಡಿಸುವುದು, ಆ ಮೂಲಕ ಭಾರತೀಯರಲ್ಲಿ ಐಕ್ಯತೆಯನ್ನು ಉಂಟು ಮಾಡುವುದು ಅಂದಿನ ಸಾಂಸ್ಕೃತಿಕ ಸಂವೇದನೆಯ ಬಹುಮುಖ್ಯ ಹೊಣೆಗಾರಿಕೆಯಲ್ಲಿ ಒಂದಾಗಿತ್ತು. ಆದ್ದರಿಂದ ರಾಷ್ಟ್ರದ ಅನನ್ಯತೆಗಳಿಗೆ ಪೂರಕವಾಗುವ ಹೊರಗಿನ ಶಕ್ತಿಗಳನ್ನು ವಿರೋಧಿಸುವಂತೆ ಪ್ರೇರೇಪಿಸಬೇಕಾಗಿತ್ತು. ಹೀಗಾಗಿ ಸಾಂಸ್ಕೃತಿಕ ಪರಿಸರದ ಜನತೆಯಲ್ಲಿ ದೇಶಾಭಿಮಾನ, ಭಾಷಾಭಿಮಾನವನ್ನು ಒಂದುಗೂಡಿಸುವುದು ಮತ್ತು ತಮ್ಮ ಅನನ್ಯತೆಯನ್ನು ಸ್ಥಾಪಿಸಲು ಪ್ರಯತ್ನಗಳು ನಡೆದವು. (ಬಂಗಾಳ, ಮಹಾರಾಷ್ಟ್ರ, ಆಂಧ್ರಗಳಂತೆ) ಕನ್ನಡ ನಾಡಿನಲ್ಲಿ ತಮ್ಮ ಅನನ್ಯತೆಯನ್ನು ಸ್ಥಾಪಿಸುವ ಸಲುವಾಗಿ ಅನೇಕ ಬರಹಗಾರರು, ಸಾಹಿತಿಗಳು ಪ್ರಯತ್ನಿಸಿದ್ದಾರೆ. ಈ ಬರಹಗಾರರು ಸ್ಥಳೀಯ ಐತಿಹಾಸಿಕತೆಯನ್ನು ವಸ್ತುವಾಗಿಸಿಕೊಂಡು ಹಲವಾರು ಸಾಹಿತ್ಯ ಪಠ್ಯಗಳನ್ನು ರಚಿಸಿದ್ದಾರೆ. ಈ ಸಾಹಿತ್ಯ ಪಠ್ಯಗಳಲ್ಲಿ ಚಾರಿತ್ರಿಕ ಸಂಗತಿಗಳೊಂದಿಗೆ ಲೇಖಕರು ಕಲ್ಪಿತ ಸಂಗತಿಗಳನ್ನು ಸೃಷ್ಟಿಸಿದ್ದಾರೆ. ಇಲ್ಲಿನ ಮುಖ್ಯ ಸಂದೇಶವೆಂದರೆ; ದೇಶ ಪಾರತಂತ್ರಕ್ಕೆ ಒಳಗಾದ ಸಂದರ್ಭದಲ್ಲಿ ರಾಜಕೀಯವಾಗಿ ಮಾತ್ರವಲ್ಲದೆ, ಸಾಂಸ್ಕೃತಿಕವಾಗಿ ಉಂಟಾಗಬಹುದಾದ ಪರಿಣಾಮಗಳನ್ನು ಹೇಳುವುದರ ಮೂಲಕ ಪ್ರತಿಯೊಬ್ಬರಲ್ಲೂ ಸ್ವದೇಶಾಭಿಮಾನ, ಸ್ವಭಾಷಾಭಿಮಾನಗಳನ್ನು ಉಂಟುಮಾಡುವುದಾಗಿತ್ತು.

ದೇಶಾಭಿಮಾನವನ್ನು ಹುಟ್ಟಿಸಲು ಚಾರಿತ್ರಿಕವಾದ ಘಟನೆಗಳು ನಮ್ಮ ಲೇಖಕರಿಗೆ ಆದರ್ಶವಾಗಿ ಕಂಡವು. ಅಂತಹ ಘಟನೆಗಳನ್ನು ಕರ್ನಾಟಕದ ಮಟ್ಟದಲ್ಲಿ ಆಯ್ದುಕೊಂಡದ್ದು ವಿಜಯನಗರ ಕಾಲದಲ್ಲಿನ ಚರಿತ್ರೆಯಿಂದ. ವಿಜಯನಗರಕ್ಕಿಂತಲೂ ಪೂರ್ವ ಕಾಲದಲ್ಲಿ ಕನ್ನಡ ನಾಡು ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಕಂಡಿದೆ. ಆದರೆ ಅವುಗಳೆಲ್ಲವುಕ್ಕಿಂತ ವಿಜಯನಗರಕ್ಕೆ ವಿಶೇವಾದ ಸ್ಥಾನ, ಮಹತ್ವ ದೊರೆತಿದೆ. ಏಕೆಂದರೆ, ವಿಜಯನಗರವು ಹಿಂದೂಸ್ತಾನದಲ್ಲಿ

ಮರೆಯಾಗಿದ್ದ ಸ್ವಾತಂತ್ರ್ಯವನ್ನು ಮರಳಿ ಗಳಿಸಿ, ಅತ್ಯಂತ ವೈಭವದ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದ ಮೊದಲ ರಾಜ್ಯ. ಅದಕ್ಕೂ ಪೂರ್ವದಲ್ಲಿ ಸ್ವಾತಂತ್ರ್ಯ ಸಂಪಾದನೆಯ ಕಾರ್ಯವನ್ನು ವಿಜಯನಗರದಂತೆ ಮತ್ತಾವ ರಾಜ್ಯವೂ ಮಾಡಿರಲಿಲ್ಲ. ಇಂತಹ ಅದ್ಭುತವೂ ಅಪೂರ್ವವೂ ಚಿರಪರಿಣಾಮಕಾರಿಯೂ ಆದ ಕಾರ್ಯವನ್ನು ಮಾಡಿದ್ದಕ್ಕಾಗಿ ವಿಜಯನಗರವು ಕರ್ನಾಟಕಕ್ಕೆ ಅಷ್ಟೇ ಅಲ್ಲ, ಅಖಿಲ ಭಾರತದ ಮಟ್ಟದಲ್ಲಿಯೂ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹ ಮಹಾನ್ ಸಾಮ್ರಾಜ್ಯದ ಸ್ಮರಣೆಯು ನಮ್ಮಲ್ಲಿ ನವಚೈತನ್ಯವನ್ನೂ ನವಸ್ಫೂರ್ತಿಯನ್ನೂ ಹುಟ್ಟಿಸುತ್ತದೆ. ಈ ಕಾರಣದಿಂದಾಗಿ ನಮ್ಮ ಲೇಖಕರು ತಮ್ಮ ಸಮಕಾಲೀನ ಸಂದರ್ಭದ ಸಮಸ್ಯೆ-ಸವಾಲುಗಳನ್ನು ಎದುರಿಸಲು ವಿಜಯನಗರದ ಚರಿತ್ರೆಯನ್ನು ಬಳಸಿಕೊಳ್ಳುತ್ತಾರೆ. ಆ ಮೂಲಕ ವಸಾಹತುಶಾಹಿ ಆಡಳಿತಕ್ಕೆ ವಿಜಯನಗರದ ಸ್ಮರಣೆಯು ಯಾವ ಬಗೆಯಲ್ಲಿ ಪ್ರತಿಕ್ರಿಯಿಸಿತು ಎನ್ನುವುದನ್ನು ಅಧ್ಯಯನದ ಉದ್ದೇಶ ಒಳಗೊಂಡಿದೆ.

ಹಕ್ಕ-ಬುಕ್ಕರ ಪರಾಕ್ರಮದಿಂದಲೂ ಸತ್ ಶಕ್ತಿಗಳ ಆಶೀರ್ವಾದದಿಂದಲೂ ಜನರ ತ್ಯಾಗ-ಬಲಿದಾನ, ದೇಶಭಕ್ತಿ, ಧರ್ಮಾಭಿಮಾನದಿಂದ ಸ್ಥಾಪಿತಗೊಂಡ ವಿಜಯನಗರ ಹೇಗೆ ಆಂತರಿಕ ಕಲಹಗಳಿಂದ ಶಿಥಿಲಗೊಂಡಿತು. ಸಿಂಹಾಸನಾಧಿಕಾರಿಗಳು ಹೇಗೆ ಕಚ್ಚಾಡತೊಡಗಿದರು, ಇದರಿಂದಾಗಿ ಬಾಹ್ಯ ವೈರಿಗಳಿಗಿಂತಲೂ ಆಂತರಿಕ ವೈರಿಗಳು ದೇಶದ ಸ್ವಾತಂತ್ರ್ಯ ನಷ್ಟಕ್ಕೆ ಹೇಗೆ ಕಾರಣರಾಗುತ್ತಾರೆ. ಮತ್ತು ದೇಶಾಭಿಮಾನಿಗಳು ಸ್ವಾಮಿನಿಷ್ಠರು ತಮ್ಮ ತ್ಯಾಗ-ಬಲಿದಾನ, ಸಾಹಸ-ಕರ್ತವ್ಯ, ತತ್ಪರತೆ ತಾಳ್ಮೆಯಿಂದ ವರ್ತಿಸಿ ಸಾಮ್ರಾಜ್ಯಕ್ಕೆ ಒದಗಲಿರುವ ಗಂಡಾಂತರವನ್ನು ತಪ್ಪಿಸುತ್ತಾರೆ ಎಂಬಿತ್ಯಾದಿ ವಿಷಯಗಳು ಒಳಗೊಂಡಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಐತಿಹಾಸಿಕವಾಗಿ ಪ್ರಸಿದ್ಧವಾದ ವಿಜಯನಗರ ಸಾಮ್ರಾಜ್ಯವು ಹಲವಾರು ವಿಚಾರಗಳ ಹಿನ್ನೆಲೆಯಲ್ಲಿ ಜನಸಾಮಾನ್ಯರ ಮತ್ತು ವಿದ್ವಾಂಸರ ಮನ್ನಣೆಯನ್ನು ಪಡೆದುಕೊಂಡಿದೆ. ಪ್ರಾಚೀನ ಜನ ವಸತಿಯ ನೆಲೆಯಾಗಿ, ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ, ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧವಾಗಿರುವ ಹಂಪಿ ಕ್ಷೇತ್ರವು ಇಂದು ಕನ್ನಡಿಗರ/ಕನ್ನಡನಾಡಿನ ಅನನ್ಯ ಪ್ರವಾಸಿ ಕೇಂದ್ರವಾಗಿದೆ. ಇತಿಹಾಸ ಪೂರ್ವಕಾಲದಿಂದ ಇಲ್ಲಿಯವರಗೆ ಹಂಪಿಯ ಭೂತ, ವರ್ತಮಾನ, ಭವಿಷ್ಯತ್ತನ್ನು ಗಮನದಲ್ಲಿರಿಸಿಕೊಂಡು ಅಧ್ಯಯನಗಳು ನಡೆದಿವೆ, ನಡೆಯುತ್ತಿವೆ. ಈಗಾಗಲೇ ಮಾನವಶಾಸ್ತ್ರ, ಪುರಾತತ್ವಶಾಸ್ತ್ರ, ಶಾಸನಶಾಸ್ತ್ರ, ಚರಿತ್ರೆ, ಜಾನಪದ ಮತ್ತು ಪ್ರವಾಸೋದ್ಯಮದ ನೆಲೆಯಿಂದ ಅಧ್ಯಯನಗಳು ನಡೆದಿವೆ. ಆದರೆ ಕನ್ನಡ ಸಾಹಿತ್ಯಿಕ ನೆಲೆಯಿಂದ ಅಧ್ಯಯನಗಳು ನಡೆದಿಲ್ಲ. ಆದರೂ ನಿರಂತರ ಉತ್ಖನನ ಮತ್ತು ಅನ್ವೇಷಣೆಗಳಿಗೆ ಒಳಗಾಗಿರುವ ಹಂಪೆಯ ನಿಜವಾದ ಚರಿತ್ರೆ ಇನ್ನೂ ಲಭ್ಯವಾಗಿಲ್ಲವೆಂದು ಹೇಳಬಹುದಾಗಿದೆ. ಏಕೆಂದರೆ ಹೊಸ ಹೊಸ ಆಕರಗಳ ಶೋಧದಿಂದಾಗಿ ಹಂಪಿಯ ಚರಿತ್ರೆಯು ಬದಲಾಗುತ್ತಾ ಹೋಗುತ್ತಿರುವುದು ಹೊಸ ವಿಚಾರವೇನಲ್ಲ. ಜಾಗತೀಕರಣದ ಪ್ರಭಾವಕ್ಕೆ ಒಳಗಾದ

ಹಂಪಿಯು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಿರುವುದರಿಂದ ಇದೊಂದು ಜಾಗತಿಕ ಮಟ್ಟದ ಮಹತ್ವ ಪ್ರವಾಸಿ ಕೇಂದ್ರವಾಗಿ ರೂಪುಗೊಂಡಿದೆ.

ಹೊಸ ಹೊಸ ಆಕರ ಸಾಮಗ್ರಿಗಳ ನೆರವಿನಿಂದ ಹಂಪಿಯನ್ನು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ಹೀಗಾಗಿ ವಿಜಯನಗರದ ಐತಿಹಾಸಿಕತೆಯನ್ನು ಆಕರವಾಗಿರಿಸಿಕೊಂಡು ರೂಪುಗೊಂಡ ಆಧುನಿಕ ಕನ್ನಡ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನ ಇದಾಗಿದೆ. ಆಧುನಿಕ ಕವಿ-ಲೇಖಕರು ವಿಜಯನಗರದ ಚಾರಿತ್ರಿಕ ವಸ್ತುವನ್ನು ವರ್ತಮಾನಕ್ಕೆ ಅನುಗುಣವಾಗಿ ಹೇಗೆ ದುಡಿಸಿಕೊಂಡಿದ್ದಾರೆ. ಈ ಸಾಹಿತ್ಯ ಕೃತಿಗಳಿಂದ ಉಂಟಾಗಬಹುದಾದ ಪರಿಣಾಮಗಳ ಸ್ವರೂಪ ಯಾವ ಬಗೆಯದೆಂಬ ಇತ್ಯಾದಿ ಮುಖ್ಯವಾದ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶದಿಂದ ಅಧ್ಯಯನ ಕೈಗೊಳ್ಳಲಾಗಿದೆ. ಅಂದರೆ ಕರ್ನಾಟಕ ಏಕೀಕರಣ ಮತ್ತು ಭಾರತ ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಚರಿತ್ರೆಯ ಮುಖೇನ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಹೇಗೆ ನಿರ್ವಚಿಸಿಕೊಳ್ಳಲಾಯಿತು. ಇದರಿಂದ ಉಂಟಾದ ಪರಿಣಾಮಗಳೇನು? ಆ ಪರಿಣಾಮಗಳಿಂದಾಗಿ ಇಂದು ಎದುರಿಸುತ್ತಿರುವ ಸಮಸ್ಯೆಗಳ ಸ್ವರೂಪ ಯಾವ ಬಗೆಯದು ಇತ್ಯಾದಿ... ಮುಖ್ಯವಾದ ಸಂಗತಿಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಈ ಸಂಕೀರ್ಣ ಸಂದರ್ಭದಲ್ಲಿ ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಈ ನಾಡಿನ ಚರಿತ್ರೆಯ ಮುಕುಟ ಮಣಿಯಾದ ವಿಜಯನಗರದ ಇತಿಹಾಸವನ್ನು ಆಧರಿಸಿ ರೂಪುಗೊಂಡ ಸಾಹಿತ್ಯ ರಾಜಕಾರಣದ ಸ್ವರೂಪ ಯಾವ ಬಗೆಯದು ಎನ್ನುವುದನ್ನು ತಿಳಿಯುವ ಪ್ರಯತ್ನವಾಗಿದೆ. ಅಂದಿನ ವಸ್ತುವನಾಧರಿಸಿ ರಚನೆಯಾದ ಕೃತಿಗಳಲ್ಲಿ ಪ್ರತಿನಿಧೀಕರಣಗೊಂಡ ಬಗೆ ಯಾವ ಸ್ವರೂಪದ್ದು ಮತ್ತು ನಿರ್ಲಕ್ಷಕ್ಕೆ ಒಳಪಟ್ಟ ಹಲವು ಸಂಗತಿಗಳನ್ನು ಮರು ಪರಿಶೀಲಿಸುವ ಉದ್ದೇಶ ಇದಾಗಿದೆ. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಯಾವುದೋ ಒಂದು ಧರ್ಮದ ಮತ ಪಂಥಗಳ ಹಿನ್ನೆಲೆಯಲ್ಲಿ ರೂಪುಗೊಂಡ ಈ ಗುರುತುಗಳು ರೂಪುಗೊಂಡಿವೆ. ಇಂದಿನ ಸಂದರ್ಭದಲ್ಲಿ ಆಯಾ ಸಮುದಾಯಗಳು ತಮ್ಮ ತಮ್ಮ ಚಾರಿತ್ರಿಕ ಮಹಾನ್ ವ್ಯಕ್ತಿಗಳಿಂದ ತಮ್ಮನ್ನು ತಾವು ಹೇಗೆ ನಿರ್ವಚಿಸಿಕೊಳ್ಳುತ್ತವೆ. ಈ ರೀತಿ ಗುರುತಿಸಿಕೊಳ್ಳುವ ಸಂದರ್ಭದಲ್ಲಿ, ಸಮಾಜದಲ್ಲಿ ಉಂಟಾಗಬಹುದಾದ ಸಂದಿಗ್ಧತೆ ಯಾವ ಸ್ವರೂಪದ್ದು, ಈ ಗುರುತು ರಾಜಕಾರಣವು (Identity Politics) ಸಾಮಾಜಿಕ ಸಂಘಟನೆ ಮತ್ತು ವಿಘಟನೆಗೆ ಹೇಗೆ ಕಾರಣೀಭೂತವಾಗಿದೆ ಮತ್ತು ಇಂದಿನ ಕನ್ನಡ ಚಳುವಳಿಯ ಸ್ವರೂಪವನ್ನು ಚಾರಿತ್ರಿಕವಾಗಿ ತಿಳಿದುಕೊಳ್ಳುವಲ್ಲಿ ಈ ಅಧ್ಯಯನ ಸಹಾಯಕವಾಗಿದೆ.

**1.3. ಅಧ್ಯಯನದ ವ್ಯಾಪ್ತಿ :**

ಆಧುನಿಕ ಕನ್ನಡ ಸಾಹಿತ್ಯವು ಹತ್ತು ಹಲವು ಆಯಾಮ/ನೆಲೆಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಹೀಗೆ ವಿಶಾಲವಾದ ವ್ಯಾಪ್ತಿಯನ್ನು ಹೊಂದಿರುವ ಸಾಹಿತ್ಯದಲ್ಲಿ ಚಾರಿತ್ರಿಕ ವಸ್ತುವನ್ನು ಆಕರವಾಗಿಸಿಕೊಂಡು ರೂಪುಗೊಂಡಿರುವ ಮಾದರಿಯು ಮೊದಲಿನಿಂದಲೂ ಬೆಳೆದುಬಂದಿದೆ. ಈ ಹಿನ್ನೆಲೆಯಲ್ಲಿ ಅನೇಕ ರಾಜರುಗಳ, ಪಾಳೇಗಾರರ, ನಾಯಕರ, ಸುಲ್ತಾನರ ಮುಂತಾದವರನ್ನು ಕುರಿತಾದ ಚಾರಿತ್ರಿಕ ದಾಖಲೆಗಳನ್ನು ಆಕರವಾಗಿಟ್ಟುಕೊಂಡು ಅನೇಕ ಸಾಹಿತ್ಯ ಕೃತಿಗಳು ರಚನೆಗೊಂಡಿವೆ. ಈ ಹಿನ್ನೆಲೆಯಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳಲ್ಲಿ ದಕ್ಷಿಣ ಭಾರತದ ಆದರ್ಶ ಸಾಮ್ರಾಜ್ಯ/ಧರ್ಮಸಂಸ್ಥಾನವೆಂದು ಬಹು ಪ್ರಖ್ಯಾತಿ ಪಡೆದ ವಿಜಯನಗರವನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ಜೀವ ಪ್ರಭೇದಗಳಾದ ನಾಟಕ, ಕವನ, ಕಾದಂಬರಿಗಳನ್ನು ಮತ್ತು ಲೇಖನಗಳನ್ನು (ಲಭ್ಯವಿರುವ ಪ್ರಾತಿನಿಧಿಕ ಸಾಹಿತ್ಯ ಸಂಕಥನಗಳನ್ನು) ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಉಳಿದ ಸಾಹಿತ್ಯ ಪ್ರಕಾರಗಳನ್ನು ಆನುಷಂಗಿಕವಾಗಿ ಬಳಸಿಕೊಳ್ಳಲಾಗುವುದು.

ಸಾಮಾನ್ಯವಾಗಿ 1900ರ ನಂತರದ ಅವಧಿಯನ್ನು ಕನ್ನಡ ಸಾಹಿತಿಗಳು ಅಧುನಿಕ ಕಾಲ ಎಂದು ಗುರುತಿಸುತ್ತಾರೆ. ಆಧುನಿಕತೆ ಎನ್ನುವುದರ ಆರಂಭವನ್ನು ಮಾತ್ರ ಗುರುತಿಸಲಾಗಿದೆ. ಅದರ ಮುಕ್ತಾಯದ ಅವಧಿಯು ಸ್ಪಷ್ಟಗೊಂಡಿಲ್ಲ. ಆದರೂ 1956ರ ನಂತರ ಕಾಲವನ್ನು 'ಆಧುನಿಕೋತ್ತರ ಕಾಲ'ವೆಂದು ಕೆಲ ವಿದ್ವಾಂಸರು ಗುರುತಿಸಿದ್ದಾರೆ. (ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಚಳುವಳಿ ಈ ಎರಡು ಉದ್ದೇಶ(ಆಶಯ)ಗಳು ರಾಜಕೀಯವಾಗಿ ಕೈಗೂಡಿದ ಕಾಲವೆಂದು ಪರಿಭಾವಿಸಲಾಗಿದೆ.) ಕಾಲದ ದೃಷ್ಟಿಯಿಂದ ಈ ಅಧ್ಯಯನದ ವ್ಯಾಪ್ತಿಯನ್ನು ಕ್ರಿ.ಶ. 1900ರಿಂದ 1956ರ ಅವಧಿಗೆ ಸೀಮಿತ ಪಡಿಸಿಕೊಳ್ಳಲಾಗಿದೆ. ಈ ಆಧುನಿಕ ಸಂದರ್ಭದಲ್ಲಿ ಕನ್ನಡಿಗರಿಗೆ ಎದುರಾದದ್ದು ಎರಡು ಬಗೆಯ ಹೋರಾಟಗಳು. ಒಂದು. ಭಾರತ ಸ್ವಾತಂತ್ರ್ಯ, ಇನ್ನೊಂದು ಕರ್ನಾಟಕ ಏಕೀಕರಣ. ಈ 56 ವರ್ಷಗಳ ಅವಧಿಯಲ್ಲಿ ಈ ಎರಡೂ ಹೋರಾಟಕ್ಕೆ ಸ್ಫೂರ್ತಿಯಾಗಬಲ್ಲ ಸಂವೇದನೆಗಳನ್ನು ಸಾಹಿತ್ಯದ ಮೂಲಕ ಹೊರಬಂದವು. ಈ ಅವಧಿಯ ತಲ್ಲಣಗಳೊಂದಿಗೆ ಚರಿತ್ರೆಯನ್ನು ನೋಡುವ ಬಗೆ ಮತ್ತು ಭವಿಷ್ಯತ್ತನ್ನು ರೂಪಿಸಿಕೊಳ್ಳುವ ವಿಧಾನವನ್ನು ಆ ಸಂದರ್ಭದಲ್ಲಿ ನೋಡಬಹುದು. ಈ ಹಿನ್ನೆಲೆಯಲ್ಲಿ ವಿಜಯನಗರ ಕುರಿತು ಈ ಅವಧಿಯಲ್ಲಿ ಬಂದಿರುವ ಸಾಹಿತ್ಯ ಪಠ್ಯಗಳನ್ನ ಅಧ್ಯಯನದ ಉದ್ದೇಶದ ಹಿನ್ನೆಲೆಯಲ್ಲಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಆದರೆ ಹಂಪೆಯ ಇಂದಿನ ನಿರ್ವಚನ ಎನ್ನುವ ಅಧ್ಯಾಯದಲ್ಲಿ ಈ ಕಾಲಘಟ್ಟವನ್ನು ಮೀರಲಾಗಿದೆ. ಸ್ವತಂತ್ರ್ಯ ಪೂರ್ವದಲ್ಲಿ ಐಕ್ಯತೆಗೆ ಸಂಕೇತವಾಗಿದ್ದ ಹಂಪೆಯನ್ನು ಪ್ರಸ್ತುತ ಸಂದರ್ಭದಲ್ಲಿ ಯಾವ ರೀತಿ ನಿರ್ವಚಿಸಲಾಗಿದೆ. ಈ ವಿಶ್ಲೇಷಣೆಗೆ ಜನಪ್ರಿಯ ಮಾರ್ಗದರ್ಶಿ ಕೈಪಿಡಿಗಳನ್ನು ಮತ್ತು ಮಾರ್ಗದರ್ಶಕರ ನಿರೂಪಣೆಯನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ.

**1.4. ಅಧ್ಯಯನದ ವಿಧಾನ :**

ಪ್ರತಿಯೊಂದು ಅಧ್ಯಯನಕ್ಕೂ ಪ್ರತ್ಯೇಕ ಅಧ್ಯಯನದ ವಿಧಾನಗಳಿರುತ್ತವೆ. ಈ ವಿಧಾನವು ಅಧ್ಯಯನಕ್ಕೆ ಚೌಕಟ್ಟನ್ನು ಒದಗಿಸುತ್ತದೆ. ಅಂದರೆ ಈ ಅಧ್ಯಯನವನ್ನು ಯಾವ ಬಗೆಯಲ್ಲಿ ಹೇಳಲಾಗಿದೆ, ಅಲ್ಲಿ ಅಧ್ಯಯನಕ್ಕೊಳಪಡಿಸಿದ ವಿಷಯವನ್ನು ವಿಶ್ಲೇಷಿಸಿದ ಬಗೆ ಯಾವುದು ಮತ್ತು ಅಧ್ಯಯನಕ್ಕೆ ಒಳಪಡಿಸಿದ ವಿಷಯವನ್ನು ಗುರುತಿಸುವ ಪರಿಯನ್ನು ಕುರಿತು ಹೇಳುವುದೇ ವಿಧಾನವಾಗುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರವನ್ನು ಪ್ರತಿನಿಧೀಕರಿಸಿದ ಬಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಸಾಹಿತ್ಯ ಕೃತಿಗಳು ರಚನೆಗೊಂಡ ಕಾಲದಿಂದ ಇಲ್ಲಿಯವರೆಗೂ ಬಹುಮಟ್ಟಿಗೆ ಚಾರಿತ್ರಿಕ ವಸ್ತುವನ್ನು ಆಧರಿಸಿ ರೂಪುಗೊಂಡಿರುವುದು ಕಾಣಸಿಗುತ್ತದೆ. ಇದಕ್ಕೆ ಬಹುಮಟ್ಟಿಗೆ ಆ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ, ವೈಯಕ್ತಿಕ ಮನೋವೃತ್ತಿಗಳು ಕಾರಣವಾಗಿರಬೇಕು. ಚಾರಿತ್ರಿಕ ವಿಧಾನವು ಗತಕಾಲದ ಸತ್ಯದ ಹುಡುಕಾಟ ಎನ್ನುವ ಪರಿಕಲ್ಪನೆಯ ಹಿನ್ನಲೆಯಲ್ಲಿ ಚರಿತ್ರೆಯ ಪಠ್ಯಗಳು ರಚಿತವಾಗುತ್ತವೆ. ಆದರೆ ಸಾಹಿತ್ಯ ಕೃತಿಗಳು ಈ ಆಕರಗಳನ್ನು/ವಸ್ತುವನ್ನು ಬಳಸಿಕೊಂಡು ಸೃಜನಶೀಲ ಕೃತಿಗಳು ರಚನೆಯಾಗಿವೆ. ಹೀಗೆ ರಚನೆಯಾಗುವಾಗ ಅವು ತಮ್ಮ ಕಾಲದ ಸಾಂಸ್ಕೃತಿಕ ಒತ್ತಡಗಳಿಗೆ ಅನುಗುಣವಾಗಿ ಚರಿತ್ರೆಯನ್ನು ಸಂಮಿಲನಗೊಳಿಸಿ ಹೊಸದೊಂದು ವಿಧಾನದ ಮೂಲಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿವೆ. ವಿಜಯನಗರದ ಐತಿಹಾಸಿಕತೆಯನ್ನು ಒಳಗೊಂಡು ಅನೇಕ ಬರಹಗಾರರು ಸಾಹಿತ್ಯ ರಚನೆ ಮಾಡಿದ್ದಾರೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಗೊಳಿಸುವ ಉದ್ದೇಶದ ಹಿನ್ನೆಲೆಯಲ್ಲಿ ರೂಪುಗೊಂಡ ಸಾಹಿತ್ಯಿಕ ಪಠ್ಯಗಳನ್ನು ಅಧ್ಯಯನ ಮಾಡುವುದು. ಆ ಮೂಲಕ ಒಂದು ಆದರ್ಶ ಸಾಮ್ರಾಜ್ಯವೊಂದರ ಚರಿತ್ರೆಯನ್ನು ಸಮಕಾಲೀನ ಸಂದರ್ಭದ ಉದ್ದೇಶದ ಈಡೇರಿಕೆಗಾಗಿ ಅಭಿವ್ಯಕ್ತಿಸಿದ ರೀತಿಯನ್ನು ಗುರುತಿಸುವ ವಿಧಾನವನ್ನು ಅನುಸರಿಸಲಾಗಿದೆ.

ಒಂದೇ ಐತಿಹಾಸಿಕ ವಸ್ತುವನ್ನು ಬೇರೆ ಬೇರೆ ಲೇಖಕರು ಭಿನ್ನ ಮಾದರಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಹೀಗಾಗಿ ವಿಜಯನಗರವನ್ನು ಕುರಿತು ಬಂದಿರುವ ನಾಟಕ, ಕವನ, ಕಾದಂಬರಿ, ಪ್ರವಾಸಿ ಸಾಹಿತ್ಯ, ಲೇಖನಗಳು ಹಾಗೂ ಸಭೆ ಸಮಾರಂಭಗಳಲ್ಲಿ ಮಾಡಿದ ಭಾಷಣಗಳನ್ನು ಪ್ರತ್ಯೇಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರತ್ಯೇಕವಾಗಿ ವಿವರಿಸಿದ್ದರೂ ಸಹ ಅವು ಆಂತರ್ಯದಲ್ಲಿ ಒಂದೇ ಬಗೆಯ ಸಂಬಂಧವನ್ನು ಹೊಂದಿವೆ. ಹಾಗೆಯೇ ಜನಪ್ರಿಯ ಪ್ರವಾಸಿ ಕೈಪಿಡಿಗಳನ್ನು ಮತ್ತು ಟೂರಿಸ್ಟ್ ಗೈಡ್‌ಗಳನ್ನು ಸಂದರ್ಶಿಸಿ ಹಂಪೆಯ ಇಂದಿನ ನಿರ್ವಚನ ಯಾವ ಸ್ವರೂಪದ್ದು ಎನ್ನುವುದನ್ನು ಪರಿಶೀಲಿಸಲಾಗಿದೆ.

ಚರಿತ್ರೆಯನ್ನು ಆಕರವನ್ನಾಗಿಟ್ಟುಕೊಂಡು ರಚನೆಯಾದ ಸಾಹಿತ್ಯಿಕ ಪಠ್ಯಗಳನ್ನೇ ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗಂತ ಚರಿತ್ರೆಯೊಂದಿಗೆ ಆ ಪಠ್ಯಗಳನ್ನು ತೌಲನಿಕವಾಗಿ

ನೋಡುವ ಕ್ರಮವನ್ನು ಇಲ್ಲಿ ಅನುಸರಿಸಿಲ್ಲ. ಏಕೆಂದರೆ ಚರಿತ್ರೆಯಾಗಲಿ, ಸಾಹಿತ್ಯವಾಗಲಿ ಹೇಳುವ ಕಥೆ ಒಂದೇ ಆಗಿರುತ್ತದೆ. ಆದರೆ ಅದನ್ನು ಅಭಿವ್ಯಕ್ತಿಸುವ ವಿಧಾನದ ರೂಪದಲ್ಲಿ ವ್ಯತ್ಯಾಸವಿರುತ್ತದೆ.

ಈ ಅಧ್ಯಯನದಲ್ಲಿ ಬಳಸಿಕೊಂಡ ಬರಹಗಾರರ ಚಿಂತನೆಗಳು ನೇರವಾಗಿ ಕನ್ನಡ, ಭಾರತ(ರಾಷ್ಟ್ರ), ಹಿಂದೂ ಗುರುತುಗಳ ನಿರ್ಮಾಣದ ವಿಷಯವನ್ನು ಒಳಗೊಂಡಿಲ್ಲದಿರಬಹುದು. ಆದರೆ ಆ ಚಿಂತನೆಗಳ ಆಂತರ್ಯದಲ್ಲಿರುವ ತೀವ್ರತೆಯನ್ನು ಅನುಸರಿಸಿ, ಕನ್ನಡ, ಭಾರತ(ರಾಷ್ಟ್ರ), ಹಿಂದೂ ನಿರ್ಮಾಣದ ಗುರುತಗಳನ್ನು ಅಧ್ಯಯನಕ್ಕೆ ತೊಡಕಾಗದಂತೆ ಗುರುತಿಸಲಾಗಿದೆ.

ಅಧ್ಯಯನಕ್ಕೆ ರೂಪಿಸಿಕೊಂಡಿರುವ ಪರಿಕಲ್ಪನೆಯನ್ನು ನಿರೂಪಿಸುವ ಮೊದಲು ಪ್ರವೇಶಿಕೆ ರೂಪದ ಭಾಗಗಳನ್ನು ರೂಪಿಸಿಕೊಳ್ಳಲಾಗಿದೆ. ವಿಷಯಕ್ಕೆ ಸಂಬಂಧಪಟ್ಟ ಪೂರಕ ಮಾಹಿತಿಯನ್ನು ವಿಶ್ಲೇಷಿಸಲಾಗುವುದು. ಇದರ ಉದ್ದೇಶವು ಕನ್ನಡ ನಾಡು ನುಡಿ, ಧರ್ಮಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಗ್ರಹಿಕೆಗಳೊಂದಿಗೆ ಚರ್ಚಿಸಲಾಗಿದೆ.

ವಿಜಯನಗರವನ್ನು ಕುರಿತು ಅನೇಕ ಕೃತಿಗಳು ರಚನೆಗೊಂಡಿವೆ. ಇಲ್ಲಿ ಆ ಎಲ್ಲವನ್ನು ಅಧ್ಯಯನಕ್ಕೊಳಪಡಿಸಿಕೊಂಡಿಲ್ಲ. ಪ್ರಾತಿನಿಧಿಕವಾಗಿ ಪಠ್ಯಗಳನ್ನು ಆಯ್ದುಕೊಂಡು ಪರಿಕಲ್ಪನಾತ್ಮಕ ಚರ್ಚೆಗೆ ಒಳಪಡಿಸಲಾಗಿದೆ.

**1.5 ಇದುವರೆಗಿನ ಅಧ್ಯಯನಗಳು :**

ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧಿತ್ವವನ್ನು ಕುರಿತು ಇದುವರೆಗೂ ನೇರವಾದ ಅಧ್ಯಯನಗಳು ನಡೆದಿಲ್ಲ. ಆದರೆ ಹಲವು ಅಧ್ಯಯನಗಳಲ್ಲಿ ಪ್ರಾಸಂಗಿಕವಾಗಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಅವುಗಳನ್ನು ಎರಡು ರೀತಿಯಿಂದ ನೋಡಬಹುದಾಗಿದೆ. ಒಂದು, ರಾಷ್ಟ್ರ, ನಾಡು, ನುಡಿಗಳ ಕುರಿತಾಗಿ ನಡೆದಿರುವ ಅಧ್ಯಯನಗಳು. ಎರಡನೆಯದು ವ್ಯಕ್ತಿ ಅಧ್ಯಯನಗಳು.

ನಾಡು ನುಡಿಯ ಕುರಿತು ಅಧ್ಯಯನ ಕೈಗೊಂಡ ಅಧ್ಯಯನಗಳಲ್ಲಿ ವಿಜಯನಗರದ ಕುರಿತು ಬಂದಿರುವ ಸಾಹಿತ್ಯವನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಶಿವರಾಮ ಪಡಿಕ್ಕಲ್‌ರ 'ನಾಡು–ನುಡಿಯ ರೂಪಕ'() ಈ ನಿಟ್ಟಿನಲ್ಲಿ ಕಾಣುವ ಕೃತಿಯಾಗಿದೆ. ವಸಾಹತೀಕರಣ, ವಸಾಹತುಶಾಹಿ ಆಧುನಿಕತೆಯ ಸಂದರ್ಭದಲ್ಲಿ ಕರ್ನಾಟಕ ಮತ್ತು ಭಾರತದ ಅಸ್ಮಿತೆಯನ್ನು ಹಿನ್ನೆಲೆಯಲ್ಲಿ ಆರಂಭ ಕಾಲದಲ್ಲಿ ಬಂದ ಕಾದಂಬರಿಗಳನ್ನು ಚರ್ಚಿಸಿದ್ದಾರೆ. ವಿಜಯನಗರದ ವಸ್ತುವನ್ನು ಹೊಂದಿರುವ ಗಳಗನಾಥರ 'ಮಾಧವ ಕರುಣಾವಿಲಾಸ' ಕಾದಂಬರಿಯನ್ನು ಇವರು ವಿಶ್ಲೇಷಿಸಿದ್ದಾರೆ. ಕಲ್ಪನೆ ಮತ್ತು ತಾತ್ವಿಕತೆಗಳ ನಿಬಿಡದಲ್ಲಿ ಈ ಕಾದಂಬರಿಯನ್ನು ಚರ್ಚಿಸಿದ್ದಾರೆ.

ಕಾ.ವೆಂ.ಶ್ರೀನಿವಾಸಮೂರ್ತಿಯವರು 'ಕನ್ನಡ ಪರ ಚಿಂತನೆ ಮತ್ತು ಪರಂಪರೆ' ಕೃತಿಯಲ್ಲಿ ಆರಂಭಕಾಲದ ಸಾಹಿತ್ಯದಿಂದ ಆಧುನಿಕ ಸಂದರ್ಭದವರೆಗಿನ ಸಾಹಿತ್ಯ ಸಂಕಥನದಲ್ಲಿ ಅಭಿವ್ಯಕ್ತಗೊಂಡ ವಿಚಾರಗಳನ್ನು ಐತಿಹಾಸಿಕ ವಿಧಾನದ ಮೂಲಕ ಚರ್ಚಿಸುತ್ತಾರೆ. ಬ್ರಿಟಿಷ್ ಪೂರ್ವದ ಸ್ಥಳೀಯ ಅರಸರ ಕಾಲೀನ ಸಾಹಿತ್ಯ, ಬ್ರಿಟಿಷರ ಆಡಳಿತ ಅವಧಿಯಲ್ಲಿನ ಸಾಹಿತ್ಯ ಮತ್ತು ಸ್ವಾತಂತ್ರ್ಯ ನಂತರದ ಸಾಹಿತ್ಯದಲ್ಲಿ ಬೆಳೆದು ಬಂದಿರುವ ನಾಡು-ನುಡಿಯನ್ನು ಪ್ರಾತಿನಿಧಿಕ ಕೃತಿಗಳ ಹಿನ್ನೆಲೆಯಲ್ಲಿ ವಿಷಯ ಮಂಡಿಸಿದ್ದಾರೆ. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕತ್ವವು ಪಡೆದುಕೊಂಡ ಭಿನ್ನ ಆಯಾಮಗಳನ್ನು ಗುರುತಿಸಿದ್ದಾರೆ. ಕರ್ನಾಟಕತ್ವದ ವಿಕಾಸದ ಸಂದರ್ಭದಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಪಠ್ಯಗಳನ್ನು ಚರ್ಚಿಸಿದ್ದಾರೆ. ಅವರು ಕನ್ನಡ, ಕರ್ನಾಟಕ. ನೆಲದಾಯಿ, ನಾಡದೇವಿ, ಭುವನೇಶ್ವರಿ ಮೊದಲಾದ ಪರಿಕಲ್ಪನೆಗಳನ್ನಿಟ್ಟುಕೊಂಡಿದ್ದಾರೆ. ಇವುಗಳ ವಿಶ್ಲೇಷಣೆಯಲ್ಲಿ ವಿಜಯನಗರ ಕುರಿತ ಪಠ್ಯಗಳೇ ಹೆಚ್ಚಾಗಿ ಅಧ್ಯಯನಕ್ಕೊಳಪಟ್ಟಿವೆ. ವಿಜಯನಗರದ ವಿನಾಶಕ್ಕೆ ಕಾರಣವಾದ ಮುಸ್ಲಿಮರನ್ನು ಬ್ರಿಟಿಷ್ ಪೂರ್ವದ ಬ್ರಿಟಿಷರನ್ನಾಗಿ ಗ್ರಹಿಸಲಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ಕನ್ನಡ ರಾಷ್ಟ್ರೀಯತೆ' ಎನ್ನುವ ಕೃತಿಯಲ್ಲಿ ಬಂಜಗೆರೆ ಜಯಪ್ರಕಾಶ ಅವರು ರಾಜಕೀಯ ಮತ್ತು ಆರ್ಥಿಕ ನೆಲೆಯಲ್ಲಿ ರಾಷ್ಟ್ರೀಯತೆಯನ್ನು ಗುರುತಿಸಿದ್ದಾರೆ. ಒಂದೂವರೆ ಸಾವಿರ ವರ್ಷಗಳ ಚರಿತ್ರೆಯ ಹಿನ್ನೆಲೆಯಲ್ಲಿ ರೂಪುಗೊಂಡ ರಾಷ್ಟ್ರೀಯ ಪ್ರಜ್ಞೆಯನ್ನು ಕುರಿತು ಚರ್ಚಿಸಿದ್ದಾರೆ. ಈವರೆಗಿನ ಚರ್ಚೆಗಿಂತ ಭಿನ್ನವಾದ ನೆಲೆಗಳಲ್ಲಿ ಚರ್ಚಿಸಲಾಗಿದೆ. ಕೃತಿಯುದ್ದಕ್ಕೂ ಎಡಪಂಥೀಯ ಚಿಂತನೆಗಳು ಕಾಣಿಸಿಕೊಳ್ಳುತ್ತವೆ. ವಿಜಯನಗರ ಕಾಲವನ್ನು 'ವಾಣಿಜ್ಯದ ಉತ್ಕರ್ಷ ಹಾಗೂ ವಸಾಹತು ಲೂಟಿಯ ಆರಂಭ ಕಾಲ'ವೆಂದು ಗುರುತಿಸುತ್ತಾರೆ. ಇಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಸಾಹಿತ್ಯಿಕ ಪಠ್ಯಗಳಿಗಿಂತ ಚಾರಿತ್ರಿಕವಾದ ಅಂಶಗಳಿಂದಲೇ ವಿಜಯನಗರ ಕಾಲವನ್ನು ನಿರ್ವಚಿಸುತ್ತಾರೆ. ಈ ಹಿಂದೆ ಚಿಂತನೆಗಳು ಕನ್ನಡಕ್ಕೆ ಉಪರಾಷ್ಟ್ರೀಯತೆ ಸ್ಥಾನ ನೀಡಿದ್ದವು. ಬಂಜಗೆರೆ ಜಯಪ್ರಕಾಶರವರ 'ಕನ್ನಡ ರಾಷ್ಟ್ರೀಯತೆ' ಎನ್ನುವ ಕೃತಿಯು ಕನ್ನಡಕ್ಕೆ ಅದರದೇ ಆದ ರಾಷ್ಟ್ರೀಯತೆ ಇದೆ ಎನ್ನುವ ಸೈದ್ಧಾಂತಿಕ ನಿಲುವನ್ನು ಪ್ರತಿಪಾದಿಸಿತು. ಇದರಿಂದಾಗಿ ಕನ್ನಡ ರಾಷ್ಟ್ರೀಯತೆ ಕುರಿತ ಅಧ್ಯಯನಗಳಿಗೆ ಹೊಸ ಚಿಂತನೆಯನ್ನು ಪರಿಚಯಿಸಿತು.

ಛಿದ್ರಗೊಂಡಿದ್ದ ಕನ್ನಡಿಗರ ಪ್ರದೇಶವನ್ನು ಒಗ್ಗೂಡಿಸುವಲ್ಲಿ ಕನ್ನಡ ಸಾಹಿತ್ಯವು ಬಹುವಾಗಿ ಶ್ರಮಿಸಿದೆ ಎನ್ನುವುದನ್ನು ಸಿ.ಆರ್.ಗೋವಿಂದರಾಜ ಅವರ 'ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ' ಕೃತಿಯಲ್ಲಿ ಕಾಣಬಹುದಾಗಿದೆ. ಐತಿಹಾಸಿಕ ವಿಷಯವನ್ನು ಸಾಹಿತ್ಯಿಕ ಕೃತಿಗಳ ಮೂಲಕ ಹೇಳುತ್ತಾ ಅಂತರ್‌ಶಿಸ್ತೀಯ ಅಧ್ಯಯನದ ಮಾದರಿಯನ್ನು ಅನುಸರಿಸಿದ್ದಾರೆ. ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಹುಟ್ಟಿದ ಸಾಹಿತ್ಯವು ಕನ್ನಡಿಗರನ್ನು ಭಾವನಾತ್ಮಕವಾಗಿ ಒಂದಾಗುವಂತೆ ಪ್ರೇರೇಪಿಸಿತು. ಸಾಮರಸ್ಯದ ಚಿಂತನೆ ಮತ್ತು

ಉದ್ವೇಗರಹಿತ ಸಮಚಿತ್ತದಿಂದಲೇ ಸಾಹಿತ್ಯ ಈ ಕಾರ್ಯಕ್ಕೆ ಕೈ ಹಾಕಿದೆ ಎನ್ನುವುದನ್ನು ಹೇಳುತ್ತಾರೆ. ಏಕೀಕರಣದಂತಹ ಐತಿಹಾಸಿಕ ಘಟನೆಯು ಮೊದಲು ರಾಜಕೀಯವಾಗಿ ಒಂದು ಗೂಡುವುದನ್ನು ಪ್ರಸ್ತಾಪಿಸಿತು. ಈ ಆಶಯಕ್ಕೆ ಬೆಂಬಲವಾಗಿ ನಿಂತದ್ದು ಸಾಂಸ್ಕೃತಿಕ ವಿಚಾರ. ಇಂತಹ ಸಾಂಸ್ಕೃತಿಕ ವಿಚಾರಗಳನ್ನು ಪ್ರಚಾರ ಮಾಡಿದ್ದು ಸಾಹಿತ್ಯ ಎನ್ನುವ ನಿಲುವನ್ನು ತಾಳುತ್ತಾರೆ. ಆ ಮೂಲಕ ಏಕೀಕಗಣದಂತಹ ಘಟನೆಯನ್ನು ಎದುರಿಸಲು ಆಧುನಿಕ ಸಾಹಿತ್ಯ ಸ್ಫೂರ್ತಿ ನೀಡಿತು ಎನ್ನುವ ವಿಚಾರಗಳನ್ನು ಇಲ್ಲಿ ಹೇಳಲಾಗಿದೆ. ಹಾಗೆಯೇ ಇತಿಹಾಸದ ರಚನೆಗೆ ಸಾಹಿತ್ಯ ಆಕರವಾಗಿದೆ ಎನ್ನುವುದನ್ನು ಹೇಳುವುದರ ಮೂಲಕ ಸಾಹಿತ್ಯಕ್ಕೆ ಅನನ್ಯತೆಯನ್ನು ಕಲ್ಪಿಸುವ ಪ್ರಯತ್ನ ಮಾಡಿದ್ದಾರೆ.

ಇತರೆ ಪ್ರಾಂತೀಯರಿಗೆ ಪ್ರೇರಕ ಶಕ್ತಿಗಳಾಗಿ ಹಲವು ಸಂಕೇತಗಳು ಕೆಲಸ ಮಾಡಿವೆ. ಅದರಂತೆ ಕನ್ನಡಿಗರಿಗೂ ವಿಜಯನಗರಕ್ಕೆ ಸಂಬಂಧಿಸಿದ ವಿದ್ಯಾರಣ್ಯರ ವಿಚಾರಗಳು, ಭುವನೇಶ್ವರಿಯ ಕಲ್ಪನೆ ಮತ್ತು ಕರ್ನಾಟಕ ಸಿಂಹಾಸನ ಎನ್ನುವ ಪರಿಕಲ್ಪನೆಗಳು ಕನ್ನಡಿಗರ ಭಾವನಾತ್ಮಕ ಸಾಂಸ್ಕೃತಿಕ ಚಿಂತನೆಗೆ ಹಾಗೂ ತಾತ್ವಿಕ ಐಕ್ಯತೆಗೆ ಪ್ರೇರಕವಾದವು ಎನ್ನುವುದನ್ನು ಚಿತ್ರಿಸಿದ್ದಾರೆ. ಇದಕ್ಕೆ ವಿಜಯನಗರವನ್ನು ಕುರಿತು ಬಂದಿರುವ ಸಾಹಿತ್ಯವೇ ಅವರಿಗೆ ಪ್ರಮುಖ ಆಕರವಾಗಿದೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ವಿಜಯನಗರವನ್ನು ನಿರ್ಮಾಣ ಮಾಡುವಾಗ ವಿದ್ಯಾರಣ್ಯರಿಗೆ ಮುಖಾಮುಖಿಯಾದ ಸಾಂಸ್ಕೃತಿಕ ವಿಚಾರಗಳು, ಏಕೀಕರಣದ ಸಂದರ್ಭದಲ್ಲಿ ಕನ್ನಡಿಗರಿಗೆ ಎದುರಾದವು. ವಿದ್ಯಾರಣ್ಯರ ಸಾಂಸ್ಕೃತಿಕ ವಿಚಾರಗಳು ಸಮಕಾಲೀನ ಸಂದರ್ಭದ ಸಮಸ್ಯೆಗೆ ಹೇಗೆ ಪರಿಹಾರ ಸೂಚಿಸಿ ಪ್ರೇರಕವಾಗಬಲ್ಲವು ಎನ್ನುವ ವಿಚಾರಗಳನ್ನು ಇಲ್ಲಿ ಹೇಳಲಾಗಿದೆ.

ನೆಲವನ್ನು ಹೆಣ್ಣು ಸಂಕಥನದೊಂದಿಗೆ ಸಮೀಕರಿದ್ದರ ಕುರಿತು ಸಿ.ಆರ್.ಗೋವಿಂದರಾಜ ಅವರು 'ಕನ್ನಡಮ್ಮ' ಎನ್ನುವ ಕೃತಿಯಲ್ಲಿ ಚರ್ಚಿಸುತ್ತಾರೆ. ನೆಲವನ್ನು ಹೆಣ್ಣಿಗೆ ಹೋಲಿಸಿದ್ದನ್ನು ಚಾರಿತ್ರಿಕವಾಗಿ ವಿಶ್ಲೇಷಿಸುತ್ತಾ, ಆಧುನಿಕ ಕವಿಗಳು ಯಾವ ಪ್ರಭಾವದಿಂದ ಈ ಪ್ರಯೋಗ ಮಾಡಿದ್ದಾರೆ. ಅವರ ಪ್ರಯೋಗಕ್ಕೆ ಪ್ರೇರಕವಾದ ಅಂಶ ಯಾವುವು ಎನ್ನುವುದನ್ನು ಹುಡುಕುವ ಪ್ರಯತ್ನ ಇಲ್ಲಿದೆ. ಈ ನೆಲವನ್ನು ತಾಯಿ, ಮಾತೆ, ಲಕ್ಷ್ಮೀ, ಜನನಿ, ಕಾಳಿ, ಚಂಡಿ, ದುರ್ಗೆ, ಕನ್ನಡಮ್ಮ, ಭುವನೇಶ್ವರಿ, ರಾಜೇಶ್ವರಿ ಎನ್ನುವ ಪರಿಕಲ್ಪನೆಯು ಭಾರತದ ದಾಸ್ಯದ ಬಿಡುಗಡೆಗೆ ಹಾಗೂ ಕನ್ನಡಿಗರ ಒಗ್ಗೂಡುವಿಕೆಗೆ ಹೇಗೆ ಪ್ರೇರಕವಾದವುಗಳು ಎನ್ನುವುದರ ಕಡೆಗೆ ಹೆಚ್ಚು ಗಮನ ಹರಿಸಿದಂತಿದೆ.

ಈ ಮೇಲಿನವುಗಳು ನಾಡು, ನುಡಿ, ರಾಷ್ಟ್ರದ ಕುರಿತ ಅಧ್ಯಯನಗಳಾದರೆ, ವ್ಯಕ್ತಿ ಅಧ್ಯಯನಗಳಾಗಿ ಬಂದ ಕೃತಿಗಳು ಕೆಲವು. ವಿಜಯನಗರದ ಐತಿಹಾಸಿಕ ವಿಷಯವನ್ನಾಧರಿಸಿ ರೂಪುಗೊಂಡ ಸಾಹಿತಿಗಳ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅಂತಹ ಕೃತಿಗಳಲ್ಲಿ ಲೇಖಕರ ವೈಯಕ್ತಿಕ ಪರಿಚಯದೊಂದಿಗೆ, ಅವರ ಸಾಹಿತ್ಯ ಕೃಷಿ ಮತ್ತು ಅವರ ಕೃತಿಗಳ ಅನನ್ಯತೆಯ ಸ್ವರೂಪ ಇತ್ಯಾದಿ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅಲ್ಲಿ

ತಮ್ಮ ಸಾಹಿತ್ಯ ಕೃತಿಯ ಮೂಲಕ ಆ ಲೇಖಕರು ರಾಷ್ಟ್ರೀಯ ಹೋರಾಟ ಹಾಗೂ ಕರ್ನಾಟಕ ಏಕೀಕರಣಕ್ಕೆ ವಿಜಯನಗರದ ಚಾರಿತ್ರಿಕ ಘಟನೆಗಳನ್ನು ಯಾವ ರೀತಿ ಬಳಸಿಕೊಂಡಿದ್ದಾರೆ ಎನ್ನುವುದನ್ನು ಕ್ವಚಿತ್ತಾಗಿ ಚರ್ಚಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಗಳಗನಾಥ, ಗರುಡ ಸದಾಶಿವರಾಯ, ಕಂದಗಲ್ಲ ಹನುಮಂತರಾಯ, ಡಿ.ವಿ.ಜಿ., ಎಂ.ಆರ್.ಶ್ರೀ. ರಾ.ಗೌ., ಆನಂದಕಂದ ಮುಂತಾದವರ ಕುರಿತ ಅಧ್ಯಯನಗಳಾಗಿವೆ.

**1.6 ಪರಿಕಲ್ಪನಾತ್ಮಕ ಚರ್ಚೆ :**

**1.6.1. ಪ್ರತಿನಿಧೀಕರಣ ಹಾಗೆಂದರೇನು?**

ಇಂಗ್ಲೀಷನ 'Representation' ಎಂಬ ಪದಕ್ಕೆ ಸಂವಾದಿವಾಗಿ ಕನ್ನಡದಲ್ಲಿ 'ಪ್ರತಿನಿಧೀಕರಣ' ಎಂದು ಕರೆಯಲಾಗುತ್ತದೆ. ಇದು ಸಾಹಿತ್ಯ ಪಠ್ಯದಲ್ಲಿನ ಸತ್ಯದ ಪರ್ಯಾಯ ನೆಲೆಯಲ್ಲಿ ಬಳಸುವ ಪದವಾಗಿದೆ. ಬರಹಗಾರನ ಅನುಭವವು ಸಾಹಿತ್ಯಿಕವಾಗಿ ಸೃಜನಶೀಲ ರೂಪುಪಡೆದಾಗ, ಅದು ಲೋಕಾನುಭವವಾಗಿ ಸಾಹಿತ್ಯದಲ್ಲಿ ಪ್ರತಿನಿಧಿತ್ವವನ್ನು ಪಡೆಯುತ್ತದೆ. ಹೀಗೆ ಸಾಹಿತ್ಯ ಸತ್ಯ ಮತ್ತು ಲೋಕಾನುಭವಗಳು ಒಂದರೊಡನೊಂದು ನಿಕಟ ಸಂಬಂಧವನ್ನು ಹೊಂದಿರುತ್ತವೆ. ಈ ವ್ಯವಸ್ಥೆಯಲ್ಲಾಗುವ ಪ್ರಕ್ರಿಯೆಯ ಚಾರಿತ್ರಿಕ ನೋಟಗಳು ಬರಹಗಾರರಲ್ಲಿ ಪಠ್ಯಗಳಾಗಿ ರೂಪುಗೊಳ್ಳುತ್ತವೆ. ಇದನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವುದು ಸೂಕ್ತವೆನಿಸುತ್ತದೆ.

ಹೊಸ ಓದಿನ ಮೂಲಕ ಕನ್ನಡ ಸಾಹಿತ್ಯಕ್ಕೆ ಅಂಟಿಕೊಂಡಿರುವ ನಿರ್ದಿಷ್ಟ ಓದಿನ ಮಾದರಿಗಳನ್ನು ಮರು ಪರಿಶೀಲಿಸುವ ಅಗತ್ಯವಿದೆ. ಏಕೆಂದರೆ ಪ್ರಜಾಪ್ರಭುತ್ವದ ಆಶಯವನ್ನು ಹೊಂದಿರುವ ಇಂದಿನ ಸಂದರ್ಭದಲ್ಲಿ ಹಲವಾರು ಸಮುದಾಯಗಳು ಹಲವು ಅಭಿವ್ಯಕ್ತಿಗಳು ನಮ್ಮ ಮುಂದಿವೆ. ಈ ಸಂದರ್ಭದಲ್ಲಿ ಒಂದೇ ಓದಿನ ಅಥವಾ ನಿರ್ದಿಷ್ಟ ಶಾಸ್ತ್ರೀಯ ಚೌಕಟ್ಟಿನಲ್ಲಿ ಸಾಹಿತ್ಯಕೃತಿ (ಪಠ್ಯ) ಗ್ರಹಿಸುವುದು ಎಷ್ಟು ಸಮಂಜಸ ಎನ್ನುವ ಪ್ರಶ್ನೆಗಳು ನಮ್ಮೆದುರಿಗಿವೆ.

ಕೃತಿಯೊಂದರ ಹುಟ್ಟಿನ ಹಿಂದೆ ಅನೇಕ ಅನುಭವಗಳು, ಲೋಕಗ್ರಹಿಕೆಗಳು ಸಮ್ಮಿಳಿತವಾಗಿರುತ್ತವೆ. ಇಂತಹ ಅನುಭವಜನ್ಯ ಪಠ್ಯಗಳು ಹಲವು ಓದಿನ ನೆಲೆಯಲ್ಲೂ ಗ್ರಹಿಸಲು ಕಾರಣವಾಗಿವೆ. ಇದನ್ನು ಕನ್ನಡ ಸಾಹಿತ್ಯ ಪರಂಪರೆಯ ಮೂಲಕ ಸ್ಪಷ್ಟ ಪಡಿಸಿಕೊಳ್ಳುವುದು ಉಚಿತವೆನಿಸುತ್ತದೆ. ಕನ್ನಡ ಸಾಹಿತ್ಯ ರಚನೆಗೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಇತಿಹಾಸವಿದೆ. ಇಷ್ಟೊಂದು ದೀರ್ಘವಾದ ಕಾಲಾವಧಿಯಲ್ಲಿ ರೂಪುಗೊಂಡ ಸಾಹಿತ್ಯವು ವೈವಿಧ್ಯಮಯವಾಗಿದೆ. ಈ ವೈವಿಧ್ಯವು ಭಾಷೆ, ವಸ್ತು ಮತ್ತು ವಿನ್ಯಾಸ ಇತ್ಯಾದಿಗಳಲ್ಲಿ ಕಂಡು ಬರುತ್ತದೆ. ಈ ರೀತಿಯ ವೈವಿಧ್ಯಮಯವಾದ ಸಾಹಿತ್ಯ ರೂಪುಗೊಳ್ಳಲು ಬರಹಗಾರರ ಮೇಲೆ ಅವರ ಕಾಲದ ಸಾಮಾಜಿಕ, ರಾಜಕೀಯ, ಧಾರ್ಮಿಕ

ಹಾಗೂ ಸಾಂಸ್ಕೃತಿಕ ಒತ್ತಡಗಳಿರುತ್ತವೆ. ಹಾಗೆಯೇ ಅವರಗಿಂತ ಪೂರ್ವದಲ್ಲಿ ರೂಪುಗೊಂಡ ಹಲವಾರು ವಿಚಾರಧಾರೆಗಳ ಪ್ರಭಾವವಿರುತ್ತದೆ. ಈ ಹಿನ್ನೆಲೆಯಲ್ಲಿ ರಚಿಸಲ್ಪಟ್ಟ ಸಾಹಿತ್ಯಿಕ ಪಠ್ಯಗಳು ಹಲವಾರು ವಿಚಾರಗಳನ್ನು ಒಳಗೊಂಡಿರುತ್ತವೆ. ಈ ಪಠ್ಯಗಳು ಹಲವಾರು ವಿಚಾರಗಳನ್ನು ಮುಂದಿನ ಪೀಳಿಗೆಗೆ ರವಾನಿಸುವ ಮತ್ತು ಸೃಜನಶೀಲ ಲೇಖಕರಿಗೆ ವಸ್ತುವಾಗಿರುವುದು ಕಂಡುಬರುತ್ತದೆ. ಉದಾ: ವ್ಯಾಸಭಾರತ ನಂತರದ ಅದೆಷ್ಟೋ ಬರಹಗಾರರಿಗೆ ವಸ್ತುವಾಗಿದೆ. ಆ ವಸ್ತುವು ನೇರವಾಗಿ ಬಳಕೆಯಾಗದೆ, ಅವರವರ ವಿಚಾರಧಾರೆಗಳಿಗೆ ಅನುಗುಣವಾಗಿ, ಅವರ ಗ್ರಹಿಕೆಗೆ ಅನುಗುಣವಾಗಿ ಭಿನ್ನ ರೂಪ ತಾಳಿದೆ. ಇದರ ಹಿಂದೆ ಪ್ರತಿಯೊಬ್ಬ ಬರಹಗಾರನ ಕಾಲದ ಸಾಂಸ್ಕೃತಿಕ ಒತ್ತಡಗಳು ಪ್ರಭಾವ ಬೀರಿರುವುದು ಕಂಡುಬರುತ್ತದೆ. ವಾಲ್ಮೀಕಿ ರಾಮಾಯಣವನ್ನಿಟ್ಟುಕೊಂಡೇ ಆಧುನಿಕ ಸಂದರ್ಭದಲ್ಲಿ ಕುವೆಂಪು ಗ್ರಹಿಸುವ ರೀತಿಗೂ ವೀರಪ್ಪ ಮೊಯಿಲಿಯವರು ಗ್ರಹಿಸುವ ರೀತಿಗೂ ವ್ಯತ್ಯಾಸವಿದೆ. ಕುವೆಂಪುರವರು ರಾವಣನನ್ನು ಖಳನಾಯಕನನ್ನಾಗಿ ಚಿತ್ರಿಸದೆ ಪ್ರತಿನಾಯಕನನ್ನಾಗಿ ಚಿತ್ರಿಸುತ್ತಾರೆ. ರಾಮನ ಬರುವಿಕೆಗೆ ರಾವಣ ಕಾರಣನಾಗುತ್ತಾನೆ. ರಾಮನ ಬರುವಿಕೆಯಿಂದ ಇಡೀ ಲಂಕೆ ಪವಿತ್ರವಾಗುತ್ತದೆ. ಆದರೆ ಒಬ್ಬ ರಾಜಕಾರಣಿಯಾಗಿ ವೀರಪ್ಪ ಮೊಯಿಲಿಯವರು ವಾಸ್ತವದ ರಾಜಕಾರಣದೊಂದಿಗೆ ರಾಮಾಯಣ ಕಾಲದ ರಾಜಕಾರಣವನ್ನು ಸಮೀಕರಿಸುತ್ತಾರೆ. ಇಲ್ಲಿ ಬರಹಗಾರನ ಪರಿಸರ ಮತ್ತು ಅವರ ಚಿಂತನಾ ಕ್ರಮಗಳು ಕೆಲಸ ಮಾಡಿರುತ್ತವೆ.

ಹೀಗೆ ವಿವಿಧ ನೆಲೆಯಲ್ಲಿ ರೂಪುಗೊಂಡ ಸಾಹಿತ್ಯ ಪಠ್ಯಗಳನ್ನು ನಮ್ಮ ಕಾಲದಲ್ಲಿನ ಸಾಂಸ್ಕೃತಿಕ ಒತ್ತಡಗಳು ಮತ್ತು ನಮ್ಮನ್ನು ಪ್ರಭಾವಿಸಲ್ಪಟ್ಟ ವಿಚಾರಧಾರೆಯ ಹಿನ್ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸುತ್ತಿರುತ್ತೇವೆ. ಅಂದರೆ ವಾಸ್ತವದಲ್ಲಿನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಈ ಪಠ್ಯಗಳನ್ನು ಆಕರವಾಗಿ ಬಳಸಿಕೊಳ್ಳುವುದು ಕಾಣಸಿಗುತ್ತದೆ. ಏಕೆಂದರೆ ನಮ್ಮ ಸಮಸ್ಯೆಯ ಬೇರುಗಳು ಆ ಪಠ್ಯದಲ್ಲಿ ಅಡಕವಾಗಿದ್ದು ಅವು ಮುಂದಿನ ಪೀಳಿಗೆಗೆ ರವಾನಿಸಲ್ಪಡುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ಕೆಲವು ಸಮಸ್ಯೆಗಳು ಉದ್ಭವಿಸುತ್ತವೆ. ಕಾರಣವೆಂದರೆ ಯಾವುದೋ ಒಂದು ಕಾಲದಲ್ಲಿ ನಿರ್ದಿಷ್ಟ ಉದ್ದೇಶದ ಹಿನ್ನೆಲೆಯಲ್ಲಿ ಪ್ರಸ್ತುತವೆನಿಸಿದ ಸಂಗತಿಗಳು/ವಿಚಾರಗಳು ಪರಿವರ್ತಿತ ಕಾಲ(ಸಂದರ್ಭ)ದಲ್ಲಿ ಓದುಗರಿಗೆ ಅಪ್ರಸ್ತುತ ಎನಿಸಬಹುದು. ಈ ಪ್ರಸ್ತುತ ಅಪ್ರಸ್ತುತ ಎನ್ನುವ ವಿಚಾರಗಳು ಕೂಡ ಓದುಗ/ಓದುಗಳ ಮನೋವೃತ್ತಿಯನ್ನು ಅವಲಂಬಿಸಿರುತ್ತವೆ. ಹೀಗೆ ಹಲವಾರು ನೆಲೆಯ ಓದಿನ ಮೂಲಕ ರೂಪುಗೊಂಡ ವಿಚಾರಗಳನ್ನು, ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು, ವ್ಯಾಖ್ಯಾನಗಳನ್ನು ನಿರ್ದಿಷ್ಟ ಮಾದರಿಯೊಂದರಲ್ಲಿ ಗ್ರಹಿಸಿ ಶ್ರೇಷ್ಠ ಮತ್ತು ಕನಿಷ್ಠ ಎಂದು ಮೌಲ್ಯಮಾಪನ ಮಾಡುವುದರ ಮೂಲಕ ಸಮಸ್ಯೆಯನ್ನುಂಟು ಮಾಡುವುದಕ್ಕಿಂತ ಪ್ರತಿನಿಧೀಕರಣ ಎಂದು ಪರಿಭಾವಿಸುವುದು ಸೂಕ್ತ ಎನಿಸುತ್ತದೆ.

ಅನುಭವದ ಮತ್ತು ಲೋಕಗ್ರಹಿಕೆಗಳ ಸಮ್ಮಿಳಿತದಿಂದ ರೂಪುಗೊಂಡ ಪಠ್ಯಯೊಂದರಲ್ಲಿ ಅಡಕವಾದ ವಿಚಾರಧಾರೆಗಳನ್ನು, ಓದಿನ/ಗ್ರಹಿಕೆಯಿಂದ ಅಭಿವ್ಯಕ್ತಗೊಂಡ ಅಭಿಪ್ರಾಯಗಳನ್ನು ಪ್ರತಿನಿಧೀಕರಣ ಎಂದು ಕರೆಯಬಹುದಾಗಿದೆ. ಈಗಾಗಲೇ ಪ್ರಸ್ತಾಪಿಸಿರುವಂತೆ ಯಾವುದೇ ಒಂದು ಸಾಹಿತ್ಯಿಕ ಪಠ್ಯವೊಂದರಲ್ಲಿ ಅಡಕವಾಗಿರುವ ವಿಚಾರಗಳನ್ನು ಆ ಪಠ್ಯ ರೂಪುಗೊಂಡ ಕಾಲವನ್ನು ಅನುಲಕ್ಷಿಸಿ, ಆ ಕಾಲದ ಸಮಾಜಕ್ಕೆ ಹಿಡಿದ ಕನ್ನಡಿ ಎಂದು ಪರಿಭಾವಿಸಿ ಅರ್ಥೈಸುವುದರಿಂದ ಮತ್ತು ಆ ಪಠ್ಯದಲ್ಲಿನ ವಿಚಾರಗಳನ್ನು ಸತ್ಯ ವಾಸ್ತವದ ನೆಲೆಯಲ್ಲಿ ಗುರ್ತಿಸಿ ಆತ್ಯಂತಿಕವಾಗಿ ನೋಡುವುದರಿಂದ ಹಲವು ಸಂದರ್ಭದಲ್ಲಿ ಗೊಂದಲಗಳಿಗೆ ದಾರಿ ಮಾಡಿ ಕೊಡುತ್ತದೆ. ಏಕೆಂದರೆ ಸತ್ಯ ಮತ್ತು ವಾಸ್ತವ ಎನ್ನುವ ಎರಡು ಪರಿಕಲ್ಪನೆಗಳ ಅರ್ಥವು ಸಾಪೇಕ್ಷವಾದದ್ದು. ಪರಿವರ್ತಿತ ಸಮಾಜದಲ್ಲಿ ಆ ಪರಿಕಲ್ಪನೆಯ ಅರ್ಥವಂತಿಕೆಯ ಭಿನ್ನತೆಯನ್ನು ಹೊಂದಿರುತ್ತದೆ. ಹೀಗಾಗಿ ಸಾಹಿತ್ಯಿಕವಾಗಿ ಅಭಿವ್ಯಕ್ತಗೊಂಡ ವಿಚಾರಗಳನ್ನು 'ಪ್ರತಿನಿಧೀಕರಣ' ಎಂದು ಕರೆಯಬಹುದಾಗಿದೆ.

ಸಾಹಿತ್ಯಿಕ ಪಠ್ಯವನ್ನು ವೈದ್ಯನಿಗೆ ಹೋಲಿಸಬಹುದಾಗಿದೆ. ರೋಗಿಗಳು ವೈದ್ಯರ ಬಳಿಗೆ ಹೋಗಿ ತಮಗೆ ಇರುವ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ವೈದ್ಯರ ಸಲಹೆಯನ್ನು ಪಡೆಯುವಂತೆ, ಓದುಗ/ಓದುಗಳು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಪಠ್ಯವನ್ನು ಪ್ರವೇಶ ಮಾಡಿ ಹಲವಾರು ವಿಚಾರಗಳನ್ನು ಕಟ್ಟಿಕೊಳ್ಳುತ್ತಾರೆ/ಅಭಿವ್ಯಕ್ತಿಸುತ್ತಾರೆ. ಹೀಗೆ ಅಭಿವ್ಯಕ್ತಗೊಂಡ ವಿಚಾರಗಳು ಅವರವರ ಕಾಲದ ಸಾಂಸ್ಕೃತಿಕ ಒತ್ತಡಗಳಿಗೂ ಮತ್ತು ವೈಯಕ್ತಿಕ ಹಿತಾಸಕ್ತಿಗಳಿಗೆ ಅನುಗುಣವಾಗಿ ಭಿನ್ನತೆಯನ್ನು ಹೊಂದಿರುತ್ತವೆ. ಹೀಗೆ ಒಂದು ಸಾಹಿತ್ಯಿಕ ಪಠ್ಯವನ್ನು ಕುರಿತು ವೈವಿಧ್ಯತೆಯಿಂದ ಕೂಡಿದ ಅಭಿಪ್ರಾಯಗಳ ಯಾವುದಾದರೊಂದು ನೆಲೆಯಿಂದ ನೋಡಿ ಕೆಲವು ಅಭಿಪ್ರಾಯಗಳನ್ನು ಸರಿಯೆಂದು ಕೆಲವು ಅಭಿಪ್ರಾಯಗಳನ್ನು ತಪ್ಪೆಂದು ಹೇಳುವುದು ಸರಿಯಲ್ಲ. ಏಕೆಂದರೆ ಭಾರತದಂತಹ ವೈವಿಧ್ಯಮಯವಾದ ಬದುಕಿನಲ್ಲಿ ನಿರ್ದಿಷ್ಟ ಓದಿನ ಅಥವಾ ನಿರ್ದಿಷ್ಟ ಗ್ರಹಿಕೆಯ ವಿಧಾನ ಇರಲು ಸಾಧ್ಯವಿಲ್ಲ. ಇಲ್ಲಿ ಯಾವುದು ಸರಿ? ಯಾವುದು ತಪ್ಪು? ಎನ್ನುವುದಕ್ಕಿಂತ ಒಂದೇ ವಿಷಯವನ್ನು ಕುರಿತು ಹುಟ್ಟುವ ಹಲವು ಬಗೆಯ ಅಭಿಪ್ರಾಯಗಳನ್ನು ಕುರಿತು ಚಿಂತಿಸುವುದು/ವಿಶ್ಲೇಷಿಸುವುದು ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಹಲವು ಮಾದರಿಯ ಓದುಗಳಿಂದ ಅಭಿವ್ಯಕ್ತಗೊಂಡ ವಿಚಾರಗಳು 'ಪ್ರತಿನಿಧೀಕರಣ'ದ ವ್ಯಾಪ್ತಿಗೆ ಒಳಪಡುತ್ತವೆ. ಉದಾ: ಧರ್ಮಾಮೃತ ಪಠ್ಯವು ಮೇಲು ನೋಟಕ್ಕೆ ಧಾರ್ಮಿಕ ಸಂಘರ್ಷವನ್ನು ಒಳಗೊಂಡ ಕೃತಿಯಾಗಿ ಕಂಡರೂ ಆ ಪಠ್ಯವು ಸಾಮಾಜಿಕ, ರಾಜಕೀಯ ಇತ್ಯಾದಿ ವಿವರಗಳನ್ನು ಒಳಗೊಂಡಿದೆ. ಸಹೃದಯರ ಉದ್ದೇಶ ಮತ್ತು ಅವರ ಆಸಕ್ತಿಗಳಿಗೆ ಅನುಗುಣವಾಗಿ ಆ ಪಠ್ಯದಲ್ಲಿ ವಿವಿಧ ವಿಚಾರಗಳು ಕಾಣಸಿಗುತ್ತವೆ. ಹೀಗೆ ಅಭಿವ್ಯಕ್ತಗೊಂಡ ಅಭಿಪ್ರಾಯ/ವಿಚಾರಗಳನ್ನು ಸರಿತಪ್ಪಿನ ಹಿನ್ನಲೆಯಲ್ಲಿ ನೋಡುವುದಕ್ಕಿಂತ 'ಪ್ರತಿನಿಧೀಕರಣ'ಯೆಂದು ಗುರುತಿಸುವುದು ಸೂಕ್ತವೆಂದು ಹೇಳಬಹುದು.

ಯಾವುದೇ ಘಟನೆ ಅಥವಾ ವಸ್ತುವನ್ನು ಕಾಲದ ಒತ್ತಡಗಳು, ವಾಸ್ತವತೆ ಮತ್ತು ಕಲ್ಪನೆಯ ಅಂಶಗಳಲ್ಲಿ ಯಾವುದನ್ನು ಪ್ರತಿನಿಧಿಸುತ್ತಾನೊ ಅಂತಹದನ್ನು 'ಪ್ರತಿನಿಧೀಕರಣ'ಯೆಂದು ಕರೆಯಬಹುದಾಗಿದೆ. ಬರಹಗಾರ ಭೂತದ ವಸ್ತುವನ್ನು ಆಯ್ದುಕೊಂಡು ವರ್ತಮಾನದ ಒತ್ತಡಗಳಿಗನುಗುಣವಾಗಿ ಕಥನಗಳನ್ನು ರೂಪಿಸುತ್ತಾನೆ. ಚರಿತ್ರೆಯಲ್ಲಿದ್ದುದನ್ನು ಕಥನ ರೂಪದಲ್ಲಿ ಹೇಳಬೇಕಾದ ಅಗತ್ಯವೇನು? ಎಂಬ ಪ್ರಶ್ನೆ ಮೂಡುತ್ತದೆ. ಆದರೆ ಕಥನಕಾರನಲ್ಲಿ ಇತಿಹಾಸವು ಮರುಹುಟ್ಟು ಪಡೆದು ಬರುವಾಗ ವರ್ತಮಾದ ತಲ್ಲಣಗಳ ಜೊತೆಗೆ ಬೆಳೆಯುತ್ತದೆ ಎಂಬ ಅಂಶವನ್ನು ಗಮನಿಸಬೇಕಾಗುತ್ತದೆ. ಇದಲ್ಲದೆ ವರ್ತಮಾನದ ವಾಸ್ತವವನ್ನು ಕಾಲ್ಪನಿಕವಾಗಿ ಪ್ರತಿನಿಧಿಸುವುದರ ಹಿಂದೆ ಇನ್ನುಳಿದ ಸತ್ಯಾಂಶಗಳಿವೆ. ಸಮಾಜಕ್ಕೆ ನೀಡಬೇಕಾದ ಒತ್ತಾಸೆಯ ಆಶಯಗಳು ಕನ್ನಡ ಕಥನ ಸಂದರ್ಭದಲ್ಲಿ ಲೇಖಕರ ಮೂಲಕ ಧ್ವನಿಸುತ್ತವೆ. ಈ ಹಿನ್ನಲೆಯಲ್ಲಿ ವಿಜಯನಗರದ ಕುರಿತು ರಚಿತವಾಗಿರುವ ಸಾಹಿತ್ಯ ಪಠ್ಯಗಳನ್ನು ಗಮನಿಸಲಾಗುವುದು.

### 1.6.2. ರಾಷ್ಟ್ರೀಯತೆಯ ಸ್ವರೂಪ :

ಈಗಾಲೇ ರಾಷ್ಟ್ರೀಯತೆಯ ಉಗಮ ಮತ್ತು ವಿಕಾಸ ಕುರಿತ ಚರ್ಚೆಗಳು ನಡೆದಿವೆ, ನಡೆಯುತ್ತಿವೆ. ಆದರೂ ಇಲ್ಲಿ ಅಧ್ಯಯನಕ್ಕೆ ಪೂರಕವಾದ ಚರ್ಚೆಯನ್ನು ಮಾಡಲಾಗುವುದು. ಇಂದು 'ರಾಷ್ಟ್ರೀಯತೆ' ಎನ್ನುವುದು ಸಮಕಾಲೀನ ರಾಜಕೀಯ ಜೀವನದ ಅತ್ಯಂತ ಪ್ರಬಲ ಮೌಲ್ಯವಾಗಿ, ಸಾರ್ವತ್ರಿಕವಾಗಿ ಮಾನ್ಯಗೊಳ್ಳುತ್ತಲೇ ಬೆಳೆದಿದೆ/ಬೆಳೆಯುತ್ತಿದೆ. ನಮ್ಮ ವರ್ತಮಾನದ ಸಂದರ್ಭದಲ್ಲಿ ಇಷ್ಟೊಂದು ಪ್ರಬಲ ಇಚ್ಛೆಯಾಗಿ ಒಂದು ಧೋರಣೆಯಾಗಿ ನೆಲೆಗೊಂಡಿದೆ. ರಾಷ್ಟ್ರೀಯತೆ ಎಂಬುದು ಅಸ್ತಿತ್ವಕ್ಕೆ ಬಂದಿದೆ. ಕಾಲಕಾಲಕ್ಕೆ ಹೇಗೆ ಅದರ ಅರ್ಥ ಬದಲಾಗುತ್ತಿದೆ. ಅದು ಇಂದು ಹೇಗೆ ಅಷ್ಟೊಂದು ಸರ್ವವ್ಯಾಪಿ ಭಾವನಾತ್ಮಕ ಮಂಜೂರಾತಿಯನ್ನು ಪಡೆದುಕೊಂಡಿದೆ ಎಂಬುದನ್ನು ಗಮನಿಸುವುದು ಅಗತ್ಯವೆನಿಸುತ್ತದೆ.

ರಾಷ್ಟ್ರೀಯತೆಯ ಬೆಳವಣಿಗೆಯನ್ನು ಕುರಿತ ಈ ಚರ್ಚೆಯಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಎರಡು ಮಾದರಿಯನ್ನು ಅನುಸರಿಸಲಾಗಿದೆ. ಮೊದಲನೆಯದು ಭಾರತೀಯ ರಾಷ್ಟ್ರೀಯತೆ. ಎರಡನೆಯದು ಪ್ರಾಂತೀಯ ರಾಷ್ಟ್ರೀಯತೆ ಎಂದು ಗುರುತಿಸಲಾಗುವುದು. ಈ ಚರ್ಚೆಯಲ್ಲಿ ಪ್ರಾದೇಶಿಕ ರಾಷ್ಟ್ರೀಯತೆಯೊಂದಿಗೆ (ಕನ್ನಡ) ಭಾರತೀಯ ರಾಷ್ಟ್ರೀಯತೆಯು ಹೇಗೆ ಬೆಳೆದು ಬಂದಿದೆ ಎಂಬುದರ ಕಡೆಗೆ ಹೆಚ್ಚು ಗಮನ ಹರಿಸಲಾಗುವುದು. ಏಕೆಂದರೆ ಭಾರತೀಯ ರಾಷ್ಟ್ರತ್ವದ ಭಾವನೆಯನ್ನು ಗಳಿಸಿಕೊಳ್ಳತೊಡಗಿದ ಸಂದರ್ಭದಲ್ಲಿ ಪ್ರಾದೇಶಿಕ ರಾಷ್ಟ್ರೀಯತೆ ಜಾಗೃತವಾಗತೊಡಗಿದ್ದವು. ಅಲ್ಲದೆ ರಾಷ್ಟ್ರೀಯ ಚಳುವಳಿಯಲ್ಲಿ ಕರ್ನಾಟಕವು (ಬೇರೆ ಬೇರೆ ಪ್ರಾಂತ್ಯಗಳಾಗಿ) ರಾಷ್ಟ್ರದ ಒಂದು ಅಂಗವಾಗಿ ಭಾಗವಹಿಸಿತ್ತೇ ಹೊರತು ಪ್ರತ್ಯೇಕವಾಗಿ ಅಲ್ಲ ಎಂಬ ಮಾತು ಸ್ಪಷ್ಟವಾಗಿದೆ. ಈ ಮೇಲೆ ಹೇಳಿರುವಂತೆ ಭಾರತದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನೊಂದಿಗೆ ಬೆಳೆದು

ಬಂದ ರಾಷ್ಟ್ರೀಯತೆಯನ್ನು ಕುರಿತು ಸಮಸ್ಯೆಗಳು ಹಾಗೂ ಅವುಗಳ ಕುರಿತಾದ ವಾಗ್ವಾದಗಳು ತೀರಾ ಹೊಸದೇನೂ ಅಲ್ಲ. ಆದರೂ ಈ ಸಮಸ್ಯೆ ಮತ್ತು ಅವುಗಳ ಬಗೆಗಿನ ವಾಗ್ವಾದಗಳ ಪರಿಶೀಲಿಸುವುದು ಹಾಗೂ ಅವುಗಳ ಕುರಿತ ಕ್ರಿಯಾತ್ಮಕವಾದ ಪ್ರತಿಫಲನ ಇಂದಿನ ನಮ್ಮ ನೈತಿಕ ರಾಜಕೀಯಕ್ಕೆ ಅಗತ್ಯವಾಗಿದೆ. ಈ ದೃಷ್ಟಿಯಿಂದ ಇಲ್ಲಿ ಪರಿಶೀಲಿಸ ಬಯಸುವ ಅಂಶಗಳು ಈ ಮುಂದಿನಂತಿವೆ.

1. ಭಾರತದಲ್ಲಿ 'ರಾಷ್ಟ್ರೀಯತೆ'ಯ ಬೆಳವಣಿಗೆಗೆ ಪ್ರೇರಣೆಯಾದ ಅಂಶಗಳು.
2. ರಾಷ್ಟ್ರೀಯತೆ ಹಾಗೆಂದರೇನು?
3. ಭಾರತದ ರಾಷ್ಟ್ರೀಯ ಹೋರಾಟ ಸಂದರ್ಭದಲ್ಲಿ ರೂಪುಗೊಂಡ ರಾಷ್ಟ್ರೀಯತೆಯ ಸ್ವರೂಪ.
4. ಸ್ವಾತಂತ್ರ್ಯ ನಂತರ ರಾಷ್ಟ್ರೀಯತೆಯ ಸ್ವರೂಪ.

'ರಾಷ್ಟ್ರೀಯತೆ' ಎನ್ನುವುದು ಒಂದು ಪರಿಕಲ್ಪನೆಯಾಗಿ ಹಾಗೂ ಒಂದು ಆಂದೋಲನವಾಗಿ ಪಾಶ್ಚಿಮಾತ್ಯ ಜಗತ್ತಿನಲ್ಲಿ ರೂಪುಗೊಂಡಂಥ ಒಂದು ವಿದ್ಯಮಾನವಾಗಿದೆ. ಅದು ಯುರೋಪಿನಲ್ಲಿ ರೂಪುಗೊಂಡು, ಇತರ ಹಲವಾರು ವಿದ್ಯಮಾನಗಳ ಜೊತೆಗೆ ರಾಜಕೀಯ ಹಾಗೂ ಮತೀಯ ಸಂಬಂಧ ಹೊಂದಿದೆ. ಆದ್ದರಿಂದಲೇ ಒಂದು ಪರಿಕಲ್ಪನೆಯಾಗಿ ಅದರ ಚಾರಿತ್ರಿಕ ಬೆಳವಣಿಗೆ ಕೆಲವು ನಿರ್ದಿಷ್ಟವಾದ ಅಂಶಗಳನ್ನು ತನ್ನಲ್ಲಿ ಒಳಗೊಂಡಿದೆ. ಈ ಕಾರಣದಿಂದಲೇ ಚರಿತ್ರೆ, ಜನಾಂಗಿಕ, ಧರ್ಮ, ಭಾಷೆ ಮತ್ತು ಸಂಸ್ಕೃತಿ ಇವೇ ಮೊದಲಾದ ಸಮಾನವಾದ ಅಂಶಗಳು ರಾಷ್ಟ್ರೀಯತೆಯನ್ನು ಕಟ್ಟಿಕೊಳ್ಳಲು, ರೂಪುಗೊಳ್ಳಲು ಅಗತ್ಯವಾದ ಅಂಶಗಳು ಎಂದು ಕರೆಯಲಾಗಿದೆ/ಗುರುತಿಸಲಾಗಿದೆ. ಅಲ್ಲದೆ ಪಾಶ್ಚಿಮಾತ್ಯ (ಯುರೋಪ್) ದೇಶಗಳಲ್ಲಿ ಮತ್ತು ಅರಸೊತ್ತಿಗೆಯ ನಡುವಿನ ಘರ್ಷಣೆ, ಪುನರುಜ್ಜೀವನ, ವೈಜ್ಞಾನಿಕಕ್ರಾಂತಿ, ಬಂಡವಾಳವಾದದ ಬೆಳವಣಿಗೆ, ಜ್ಞಾನಯುಗ ಮೊದಲಾದವುಗಳು ಸೃಷ್ಟಿಸಿದ ಮೌಲ್ಯಗಳೇ ರಾಷ್ಟ್ರೀಯತೆಯ ಮೌಲ್ಯಗಳೂ ಆಗಿ ಬಿಟ್ಟಿವೆ. ಅಂದರೆ ಯುರೋಪಿನಲ್ಲಿ ಹದಿನಾರನೆಯ ಶತಮಾನದಿಂದೀಚೆಗೆ ಸಂಭವಿಸಿದ ವಿಭಿನ್ನವಾದ ಪ್ರಗತಿಶೀಲ ವಿದ್ಯಮಾನಗಳು ರಾಷ್ಟ್ರೀಯತೆಯ ಪರಿಕಲ್ಪನೆಗೆ ಒಂದು ನಿರ್ದಿಷ್ಟ ಅರ್ಥವಂತಿಕೆಯನ್ನು ಒದಗಿಸಿ ಕೊಡುವಲ್ಲಿ ಸಹಾಯಕವಾದವು.

ಆದರೆ ಭಾರತದಲ್ಲಿ 'ರಾಷ್ಟ್ರೀಯತೆ' ಉದಯವಾದದ್ದು 19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಎನ್ನಬಹುದು. ಈ ಹಿಂದೆ 'ರಾಷ್ಟ್ರ'ವೆಂಬ ಕಲ್ಪನೆ ಭಾರತದಲ್ಲಿ ಇರಲಿಲ್ಲವೆಂದು ಅರ್ಥವಲ್ಲ. ಇಂದು ಭಾರತವೆಂದು ಗುರ್ತಿಸುವ ಪ್ರದೇಶವು ಹಲವಾರು ಪ್ರಾಂತ್ಯಗಳ, ಭಾಷೆಗಳ ಹಾಗೂ ಧರ್ಮಗಳ ತವರಾದರೂ ಪರೋಕ್ಷವಾಗಿ ಒಂದು ರಾಷ್ಟ್ರವಾಗಿತ್ತು. ಆದರೆ ವಸಾಹತುಶಾಹಿ ಸಂದರ್ಭದಲ್ಲಿ ನಿರ್ಮಾಣವಾದ ಏಕರಾಷ್ಟ್ರದ ಕಲ್ಪನೆ ಭಿನ್ನ ನೆಲೆಯದು. ನಮ್ಮದು ಒಂದು ರಾಷ್ಟ್ರವಾಗಿದ್ದರಿಂದಲೇ ಇಂಗ್ಲೀಷರಿಗೆ ಒಂದು ರಾಜ್ಯ

ಕಟ್ಟಲು ಅವಕಾಶವಾದದ್ದು ಎನ್ನುವುದನ್ನು ನಾವು ಮರೆಯುವಂತಿಲ್ಲ. ಭಾರತದ ಮೇಲೆ ಅನೇಕ ವಿದೇಶಿಯರ ಅಕ್ರಮಣಗಳು, ದಾಳಿಗಳು ನಡೆದಿವೆ. ಹೀಗಾಗಿ ಭಾರತೀಯ ಸಂಸ್ಕೃತಿಯು ಅನೇಕ ಸಂಘರ್ಷಗಳಿಗೆ ಒಳಗಾಗುತ್ತಾ ಬೆಳೆದು ಬಂದಿದೆ. ಈ ಸಂಘರ್ಷಗಳಿಂದಾಗಿ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ಅನ್ಯ ಸಂಸ್ಕೃತಿಯ ಅಂಶಗಳು ಸೇರಿಕೊಂಡಿವೆ. ನಮ್ಮ ಸಂಸ್ಕೃತಿ(ಭಾರತೀಯ)ಯು ಅನ್ಯ ಸಂಸ್ಕೃತಿಯ ಉತ್ತಮಾಂಶಗಳನ್ನು ಸ್ವೀಕರಿಸಿ, ತನ್ನ ಅಸ್ತಿತ್ವಕ್ಕೆ ಧಕ್ಕೆ ತರುವ ಪ್ರತಿಗಾಮಿ ನೆಲೆಗಳಿಗೆ ಪ್ರತಿರೋಧವನ್ನು ಒಡ್ಡುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆಯುತ್ತಾ, ಬೆಳೆದು ಬಂದಿರುವುದು ಈ ಸಂಸ್ಕೃತಿಯ ವಿಶಿಷ್ಟತೆಯಾಗಿದೆ.

ಭಾರತದ ಮೇಲೆ ಅಕ್ರಮಣ ಮಾಡಿದ ವಿದೇಶಿಯರಲ್ಲಿ ಬ್ರಿಟಿಷರು ಅತ್ಯಂತ ಪ್ರಬಲರಾಗಿದ್ದಾರೆ. ಇಂಗ್ಲೀಷ ವರ್ತಕರು ಪೌರ್ವಾತ್ಯ ದೇಶಗಳೊಡನೆ ವ್ಯಾಪಾರ ಸಂಪರ್ಕ ಹೊಂದಲು ಮೊದಲಿನಿಂದಲೂ ಆಸಕ್ತಿ ಹೊಂದಿದ್ದರು. ಕ್ರಿ.ಶ.1591 ರಿಂದ ಕ್ರಿ.ಶ.1593ರ ನಡುವಿನ ಅವಧಿಯಲ್ಲಿ ಜೇಮ್ಸ್ ಲ್ಯಾಂಕಸ್ಟರ್ ಕನ್ಯಾಕುಮಾರಿ ಮತ್ತು ಪೆನಾಂಗವನ್ನು ತಲುಪಿದ. 1596ರಲ್ಲಿ ಬೆಂಜಾಮಿನ್‌ವುಡ್‌ನ ನಾಯಕತ್ವದಲ್ಲಿ ಹಲವು ನೌಕೆಗಳು ಪೂರ್ವದತ್ತ ಯಾನ ಹೊರಟವು. ಜಾನ್ ಮಿಲ್ಡನ್ ಹಾಲ್ ಎಂಬ ಲಂಡನ್ನಿನ ಸಾಹಸಿ ವರ್ತಕ 1599ರಲ್ಲಿ ಮೆಡಿಟೆರೀಯನ್ ಸಮುದ್ರ ಮಾರ್ಗದ ಮೂಲಕ ಭಾರತವನ್ನು ತಲುಪಿದನು. ಇದು ಮುಂದೆ ಭಾರತದೊಂದಿಗೆ ವ್ಯಾಪಾರ ಸಂಪರ್ಕ ಹೊಂದಲು ದಾರಿ ಮಾಡಿಕೊಟ್ಟಿತು. ಕ್ರಿ.ಶ. 1600ರ ಡಿಸೆಂಬರ್ 31 ರಂದು ಈಸ್ಟ್ ಇಂಡಿಯಾ ಕಂಪನಿಯು 15 ವರ್ಷಗಳ ಕಾಲ ಪ್ರಾಚ್ಯ ವಾಣಿಜ್ಯದಲ್ಲಿ ಸ್ವಾಮ್ಯ ಪಡೆಯುವ ಸನ್ನದನ್ನು ಎಲಿಜಬೆತ್ ರಾಣಿಯಿಂದ ಪಡೆಯುವ ಮೂಲಕ ಇಂಗ್ಲೆಂಡಿನ ವಾಣಿಜ್ಯ ಅಭ್ಯುದಯದತ್ತ ಮೊತ್ತ ಮೊದಲ ಹೆಜ್ಜೆಯನ್ನು ಇಟ್ಟಿತು. ನಂತರ ಬ್ರಿಟಿಷ್ ವ್ಯಾಪಾರಿ ಸಂಘವು (ಈಸ್ಟ್ ಇಂಡಿಯಾ ಕಂಪನಿ) ಕ್ರಿ.ಶ.1613ರಲ್ಲಿ ಸುಲ್ತಾನ ಜಹಾಂಗೀರ್‌ನಿಂದ ಅನುಮತಿಯನ್ನು ಪಡೆದು ಸೂರತ್‌ನಲ್ಲಿ ಮೊಟ್ಟಮೊದಲ ಕೋಠಿಯನ್ನು ಸ್ಥಾಪಿಸುವುದರ ಮೂಲಕ ಬ್ರಿಟಿಷರು ಭಾರತದಲ್ಲಿ ಭದ್ರವಾಗಿ ನೆಲೆಯೂರಿದರು. ಅನಂತರ ಮಚಲಿಪಟ್ಟಣ, ಹರಿಹರಪುರ, ಮದ್ರಾಸ್, ಬೊಂಬಾಯಿ, ಕಲ್ಕತ್ತಾ ಮುಂತಾದ ಪ್ರಮುಖ ಪ್ರದೇಶಗಳನ್ನು ವಶಪಡಿಸಿಕೊಂಡು ವ್ಯಾಪಾರ ಮತ್ತು ರಾಜಕೀಯ ತಂತ್ರಗಳಿಗೂ ನೆಲೆಯನ್ನು ಸ್ಥಾಪಿಸಿಕೊಂಡಿತು. ಈ ವೇಳೆಯಲ್ಲಿ ಹಲವಾರು ಪ್ರಾಂತೀಯ ರಾಜರು ಒಳಜಗಳಗಳಿಂದಾಗಿ ಪ್ರಾಂತೀಯ ಆಡಳಿತದಲ್ಲಿ ಅನೇಕ ಸಮಸ್ಯೆಗಳನ್ನು ತಲೆದೋರಿದ್ದವು. ಇದರ ಲಾಭ ಪಡೆದ ಬ್ರಿಟಿಷರು ಪ್ರಾಂತೀಯ ರಾಜರ ಮೇಲೆ ಆಕ್ರಮಣ ದಾಳಿಗಳನ್ನು ಮಾಡುವುದರ ಮೂಲಕ ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದರ ಮೂಲಕ ಹತ್ತೊಂಬತ್ತನೆಯ ಶತಮಾನದ ವೇಳೆಗೆ ಭಾರತವನ್ನು ತಮ್ಮ ವಸಾಹತು ರಾಷ್ಟ್ರವಾಗಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾದರು. ಭಾರತದಲ್ಲಿ ಆರ್ಥಿಕ ಮತ್ತು ರಾಜಕೀಯ ಹಿಡಿತ ಸಾಧಿಸಿದ ಬ್ರಿಟಿಷರು ತಮ್ಮ ಆಡಳಿತ ಭದ್ರವಾಗಿ ಮುಂದುವರೆಸುವ ಉದ್ದೇಶದಿಂದ ಭಾರತದಲ್ಲಿ ಸುಧಾರಣೆಯ ನೆಪದಲ್ಲಿ ವಿದೇಶಿ

ವ್ಯಾಪಾರ, ಬ್ಯಾಂಕುಗಳನ್ನು, ವಿಮಾ ಕಂಪನಿಗಳನ್ನು, ರೈಲ್ವೆ ಹಾದಿ, ಇಂಗ್ಲೀಷ್ ವೈದ್ಯಕೀಯ ಪದ್ಧತಿಗಳನ್ನು ಇಲ್ಲಿ ನೆಲೆಗೊಳಿಸುವುದರ ಮೂಲಕ ನಾವು ಭಾರತೀಯರ ಒಳಿತಿಗಾಗಿಯೇ ಆಡಳಿತ ಮಾಡುತ್ತೇವೆಂಬ ಮನೋಭಾವನೆಯನ್ನು ಭಾರತೀಯರ ಮನದಾಳದಲ್ಲಿ ಬಿತ್ತಲು ಪ್ರಯತ್ನಿಸಿದರು.

ಈ ವೇಳೆಗಾಗಲೇ ಪುರೋಹಿತಶಾಹಿಯ ಕಪಿಮುಷ್ಠಿಗೆ ಸಿಕ್ಕ ಭಾರತೀಯರ ಸಾಂಸ್ಕೃತಿಕ ಬದುಕು ದಿಕ್ಕು ತಪ್ಪಿ ಅನೇಕ ಶತಮಾನಗಳೇ ಕಳೆದುಹೋಗಿದ್ದವು. ಈ ಸಂದರ್ಭದಲ್ಲಿ ಇಂಗ್ಲೀಷ್‌ಶಿಕ್ಷಣ ಹಾಗೂ ಅವರ ವೈಜ್ಞಾನಿಕ ವಿಚಾರಧಾರೆಗಳು ಭಾರತದಲ್ಲಿ ಶತಶತಮಾನಗಳಿಂದ ಆಚರಣೆಯಲ್ಲಿದ್ದ ಮೌಢ್ಯತೆ, ಧಾರ್ಮಿಕ, ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು, ಆಚಾರ-ವಿಚಾರಗಳನ್ನು ಕುರಿತ ನಮ್ಮ ಸಾಂಸ್ಕೃತಿಕ ಬದುಕಿನ ಮೂಲಭೂತ ನೆಲೆಗಳನ್ನು ಪುನರ್ ಮೌಲ್ಯಮಾಪನಕ್ಕೆ ಗುರಿಪಡಿಸಲು ಪ್ರೋತ್ಸಾಹಿಸಿದವು. ಆ ಹೊಸ ವಿಚಾರಧಾರೆಯನ್ನು ಶೋಧಿಸಿಕೊಳ್ಳಲು ಪ್ರಯತ್ನಗಳು ನಡೆದವು. ಹಾಗೆಯೇ ಇಂಗ್ಲೀಷ್ ಶಿಕ್ಷಣದ ಮೂಲಕ ಪಾಶ್ಚಾತ್ಯ ಜ್ಞಾನಕ್ಕೆ ಭಾರತೀಯರನ್ನು ಪರಿಚಯಿಸಿದರು. ಇದರಿಂದಾಗಿ ಭಾರತೀಯ ವಿದ್ಯಾವಂತ ವರ್ಗವು ಹೊಸ ರೀತಿಯ ತಾರ್ಕಿಕ ಪ್ರಜ್ಞೆ ಮತ್ತು ತೀರ್ಮಾನವನ್ನು ತೆಗೆದುಕೊಳ್ಳುವ ಶಕ್ತಿಯನ್ನು ಬೆಳೆಸಿಕೊಂಡರು. ಅಲ್ಲದೆ ಪಾಶ್ಚಾತ್ಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಚಿಂತನೆಗಳ ಸಂಪರ್ಕ ಪಡೆಯುವುದಕ್ಕೂ ಸಾಧ್ಯವಾಯಿತು.

ಆದರೆ ಭಾರತೀಯರ ಒಳಿತಿಗಾಗಿಯೇ ನಾವು ಆಡಳಿತ ಮಾಡುತ್ತಿದ್ದೇವೆ ಎಂಬ ನಂಬಿಕೆಯು ಹೆಚ್ಚು ಕಾಲ ಉಳಿಯಲಿಲ್ಲ. ಏಕೆಂದರೆ ಬ್ರಿಟಿಷರು ಕೊಟ್ಟ ಶಿಕ್ಷಣ ಸಾಮಾಜಿಕ ಸುಧಾರಣೆಗೆ ಕಾರಣವಾದರೂ ಮತ್ತೊಂದು ದೃಷ್ಟಿಯಿಂದ ಅಂದರೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ದುರ್ಬಲಗೊಂಡಿತು. ಆದರೂ ಅಸಂಖ್ಯಾತ ಸಂಸ್ಥಾನಗಳು, ವಿವಿಧ ಭಾಷೆಗಳ ಮತ್ತು ಮತಧರ್ಮಗಳ ತವರಾಗಿದ್ದ ಭಾರತವನ್ನು ಬ್ರಿಟಿಷರು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡು ದೇಶವನ್ನು ರಾಜಕೀಯವಾಗಿ ಐಕ್ಯಗೊಳಿಸಲು ಪ್ರಯತ್ನಿಸಿದರು. ಭಾರತದ ಇತಿಹಾಸದಲ್ಲಿ ಇಂತಹ ಒಂದು ಕಾರ್ಯವು ಮೌರ್ಯರ ಮತ್ತು ಮೊಗಲರ ಆಳ್ವಿಕೆಯ ಕಾಲದಲ್ಲಿ ಬಿಟ್ಟರೆ ಮತ್ತೆ ಬೇರಾವ ರಾಜರ ಆಳ್ವಿಕೆಯ ಕಾಲದಲ್ಲೂ ಸಾಧ್ಯವಾಗಲೇ ಇಲ್ಲ. ಕೆಲವು ಪ್ರಾಂತ್ಯಗಳು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟರೆ ಮತ್ತೆ ಕೆಲವು ಪರೋಕ್ಷ ಆಡಳಿತಕ್ಕೆ ಒಳಪಟ್ಟವು. ಬ್ರಿಟಿಷರು ಜಾರಿಗೆ ತಂದ ಏಕರೀತಿಯ ಕಾನೂನು, ಆಡಳಿತ ಪದ್ಧತಿ ಭಾರತ ದೇಶಕ್ಕೆ ರಾಜಕೀಯವಾಗಿ ಒಂದು ನಿರ್ದಿಷ್ಟ ಸ್ವರೂಪವನ್ನು ಕೊಟ್ಟು ಭಾರತೀಯರಲ್ಲಿ ನಾವೆಲ್ಲ ಒಂದೇ ರಾಷ್ಟ್ರದ ಪ್ರಜೆಗಳು ಎಂಬ ಕಲ್ಪನೆ ಬೆಳೆಯಲು ಕಾರಣವಾಯಿತು.

ಬ್ರಿಟಿಷರ ಸಾಮ್ರಾಜ್ಯವು ಭಾರತದಲ್ಲಿ ರಾಜಕೀಯ ಶಕ್ತಿಯಾಗಿ ಭದ್ರ ಬುನಾದಿ ಹಾಕುತ್ತಿದ್ದಾಗಲೇ ಕ್ರೈಸ್ತ ಪಾದ್ರಿಗಳು ಕ್ರೈಸ್ತಮತ ಪ್ರಚಾರಕ್ಕಾಗಿ ಭಾರತಕ್ಕೆ ಆಗಮಿಸತೊಡಗಿದರು. ಧರ್ಮ ಪ್ರಚಾರಕ್ಕಾಗಿ ಬಂದ ಪಾದ್ರಿಗಳು ಶಿಕ್ಷಣಕ್ಷೇತ್ರದಲ್ಲಿ ಕೈ ಹಾಕಿದರು. ಅವರ ಉದ್ದೇಶವು

ಶಿಕ್ಷಣದ ಮೂಲಕ ಭಾರತೀಯ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕ್ರೈಸ್ತಧರ್ಮದ ವಿಚಾರಗಳನ್ನು ಭದ್ರವಾಗಿ ನೆಲೆಸುವಂತೆ ಮಾಡುವುದಾಗಿತ್ತು. ಮೊದಲ ಹಂತದಲ್ಲಿ ಅವರ ಧೋರಣೆಯ ಪ್ರಯತ್ನವು ಸಫಲತೆಯನ್ನು ಪಡೆದುಕೊಂಡಿತು. ಅಂತೆಯೇ ವೈದಿಕ ಧರ್ಮದ ಮತ ಧರ್ಮದಲ್ಲಿನ ಅವೈಜ್ಞಾನಿಕ ಮತ್ತು ಅನಿಷ್ಟ ಪದ್ಧತಿಗಳು ನಿಂದನೆಗೆ ಗುರಿಯಾದವು. ಆ ಸಂದರ್ಭದಲ್ಲಿ ಪಾದ್ರಿಗಳ ಪ್ರಭಾವಕ್ಕೆ ಒಳಗಾದ ಹಲವಾರು ಭಾರತೀಯ ಸ್ವಧರ್ಮ ಖಂಡನೆಗೆ ತೊಡಗಿಸುವುದು ಬಹುಮುಖ್ಯವೆಂದು ಭಾವಿಸಿದ್ದರು. ಆದರೆ ಅನಂತರ ಅವಧಿಯಲ್ಲಿ ಎಲ್ಲವನ್ನೂ ವೈಜ್ಞಾನಿಕ ಮತಿಯಿಂದ ವಿಮರ್ಶಿಸಿ, ಪರೀಕ್ಷಿಸಿ ಸ್ವೀಕರಿಸಬೇಕೆಂಬ ವಿಚಾರವನ್ನು ಬ್ರಿಟಿಷರಿಂದ ಕಲಿತರೂ ಅದೇ ಮುಂದೆ ಬ್ರಿಟಿಷರ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಪ್ರೇರಣೆಯಾಯಿತು. ಭಾರತದ ಪ್ರಾಂತ್ಯಗಳಲ್ಲಿ/ಸಂಸ್ಥಾನಗಳಲ್ಲಿ ಶತಮಾನಗಳಿಂದಲೂ ಉನ್ನತವಾದ ಸ್ಥಾನ-ಮಾನಗಳನ್ನು, ಸಕಲ ಸೌಲಭ್ಯಗಳನ್ನು ಪಡೆದುಕೊಂಡಿದ್ದ ಪುರೋಹಿತಶಾಹಿ ಮತ್ತು ಮೇಲು ವರ್ಗದವರೇ ಇಂಗ್ಲೀಷ್ ಶಿಕ್ಷಣ ಪಡೆಯುವುದರಲ್ಲಿ ಮೊದಲಿಗರಾಗಿದ್ದರು. ಈ ವರ್ಗವು ಬ್ರಿಟಿಷರ ಆಡಳಿತದಲ್ಲಿ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದರು. ಬ್ರಿಟಿಷರ ಆಡಳಿತ ಮತ್ತು ಕ್ರೈಸ್ತ ಧರ್ಮವು ನಮ್ಮ ಸ್ಥಾನಮಾನ, ಸೌಲಭ್ಯಗಳಿಗೆ ತಡೆಯನ್ನುಂಟು ಮಾಡುತ್ತದೆ ಎಂಬ ಎಚ್ಚರಿಕೆಯನ್ನು ಕಂಡುಕೊಂಡ ಈ ವರ್ಗಗಳು ಪಾಶ್ಚಾತ್ಯ ಆಡಳಿತ ಮತ್ತು ಧಾರ್ಮಿಕ ನೀತಿಗೆ ವಿರೋಧವನ್ನು ವ್ಯಕ್ತಪಡಿಸಿದರು. ಅಲ್ಲದೆ ಈ ಮುಂಚೆ ಕ್ರೈಸ್ತಪಾದ್ರಿಗಳು ವೈದಿಕ ಪುರಾಣಗಳ ಅಪ್ರಸ್ತುತತೆಯನ್ನು ಟೀಕೆಗೆ ಗುರಿಪಡಿಸಿರುವಂತೆ ನಂತರದ ಅವಧಿಯಲ್ಲಿ ಭಾರತೀಯ ಮೇಲುವರ್ಗಗಳ ವಿದ್ಯಾವಂತರು ಕ್ರಿಸ್ತನ ಅವತಾರಗಳನ್ನು ಪ್ರಶ್ನಿಸುವುದರ ಮೂಲಕ ಅನ್ಯಮತ-ಧರ್ಮಗಳನ್ನು ವಿರೋಧಿಸುತ್ತಾ ವೈದಿಕಧರ್ಮ ಶ್ರೇಷ್ಠವಾದದ್ದು ಎಂದು ಪ್ರಚಾರ ಮಾಡಲು ಪ್ರಯತ್ನಿಸಿದರು. ಇಂತಹ ಪ್ರಯತ್ನಗಳೆ ಹಿಂದುತ್ವವಾದಿ ರಾಷ್ಟ್ರೀಯತೆಯನ್ನು ನಿರ್ಮಾಣ ಮಾಡಿಕೊಳ್ಳಲು ಪ್ರೇರಣೆಯಾದವು.

ಆದರೆ ಇಂಗ್ಲೀಷ್ ಶಿಕ್ಷಣವು ಕೇವಲ ಮತ ಪ್ರಚಾರಕ್ಕೆ ಮಾತ್ರ ಸೀಮಿತವಾಗಲಿಲ್ಲ ಬದಲಾಗಿ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸುವಲ್ಲಿ ಸಹಕಾರಿಯಾಯಿತು. ಅಲ್ಲದೆ ಪಾಶ್ಚಿಮಾತ್ಯ ರಾಜಕೀಯ ವಿಚಾರಧಾರೆ ಮತ್ತು ವಿಜ್ಞಾನವನ್ನು ಜೊತೆಗೆ ತಂದಿತು. ಈ ಘಟನೆ 19ನೆಯ ಶತಮಾನದ ಆದಿ ಭಾಗದಲ್ಲಿ ಭಾರತೀಯ ಬುದ್ಧಿ ಜೀವಿಗಳನ್ನು ಪ್ರಚೋದಿಸಿತು. ಅಲ್ಲದೆ ರಾಷ್ಟ್ರೀಯ ಹೋರಾಟದ ರಂಗದ ಮೇಲೆ ಇಂಗ್ಲೀಷ್ ವಿದ್ಯಾಭ್ಯಾಸ ಪಡೆದ ಮಧ್ಯಮವರ್ಗ ಕಾಣಿಸಿಕೊಂಡಿತು. ಇವರು ಇಂಗ್ಲೀಷ್ ಭಾಷೆಯನ್ನು ಬಳಸಲಾರಂಭಿಸಿ ಪಾಶ್ಚಿಮಾತ್ಯ ಉದಾರವಾದದ ಬಗ್ಗೆ ಒಮ್ಮತ ಅಭಿಪ್ರಾಯವನ್ನು ಈ ವರ್ಗ ಹೊಂದಿತ್ತು. ಯುರೋಪಿನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳಿಗೆ ಇಟಲಿ, ಜರ್ಮನಿಯ ಏಕೀಕರಣ ಮತ್ತು ಯುರೋಪಿನಲ್ಲಾದ ಬದಲಾವಣೆಗಳು ಮನದಟ್ಟಾಗಿ ಅದೇ ರೀತಿಯ ಬದಲಾವಣೆಗಳನ್ನು ಭಾರತದಲ್ಲಿ ತಂದು ಬ್ರಿಟಿಷರ ದಾಸ್ಯದಿಂದ

ಬಿಡುಗಡೆಯಾಗಬೇಕೆಂದು ಯೋಚಿಸಲಾರಂಭಿಸಿದರು. ಅಲ್ಲದೇ ವಿದ್ಯಾವಂತ ಭಾರತೀಯರು ಯುರೋಪಿನ ಪ್ರಸಿದ್ಧ ಚಿಂತಕರುಗಳಾದ ಮೆಕಾಲೆ, ಬರ್ಕ್, ಮಿಲ್ ಮತ್ತು ಹರ್ಬರ್ಟ್ ಸ್ಪೆನ್ಸರ್ ಮುಂತಾದವರ ಬರವಣಿಗೆಗಳಲಿದ್ದ ಸ್ವತಂತ್ರ್ಯ, ರಾಷ್ಟ್ರೀಯತೆ, ಉದಾರವಾದ ಮುಂತಾದ ಭಾವನೆಗಳು ಭಾರತೀಯರಲ್ಲಿ ಮೂಡುವಂತಾಯಿತು. ಭಾರತದಲ್ಲಿ ಇಂಗ್ಲೀಷರು ತಮ್ಮ ಸ್ವಾರ್ಥ ಸಾಧನೆಗಾಗಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಆರಂಭಿಸಿದರೂ ಇದು ಭಾರತೀಯರಿಗೆ ಅತ್ಯಂತ ಹೆಚ್ಚು ಉಪಯುಕ್ತವಾಯಿತು.

ಪಾಶ್ಚಿಮಾತ್ಯರು ಆರಂಭದಲ್ಲಿ ಮುದ್ರಣಯಂತ್ರಕ್ಕೂ ಮುಂಚೆ ಹಲವಾರು ಪತ್ರಿಕೆಗಳನ್ನು ಆರಂಭಿಸಿದರು. 19ನೆಯ ಶತಮಾನದ ಉತ್ತರಾರ್ಧ ಭಾಗದಲ್ಲಿ ಪತ್ರಿಕೋದ್ಯಮ ಸಾಕಷ್ಟು ಬೆಳವಣಿಗೆ ಹೊಂದಿತು. ಬೇರೆ ಬೇರೆ ಭಾಷೆಯಲ್ಲಿ ಪ್ರಕಟಣೆಗೊಳ್ಳುತ್ತಿದ್ದ ಪತ್ರಿಕೆಗಳು ಜನ ಸಾಮಾನ್ಯರಲ್ಲಿ ಬ್ರಿಟಿಷರ ಆಳ್ವಿಕೆಯಿಂದ ಉಂಟಾದ ದುಷ್ಪರಿಣಾಮಗಳ ಬಗ್ಗೆ ಅರಿವನ್ನು ಉಂಟುಮಾಡಿದವು. ಹಾಗೆಯೇ ಜನಸಾಮಾನ್ಯರ ಅಭಿಪ್ರಾಯಗಳನ್ನು ಸಂಗ್ರಹಿಸಿ ರಾಜಕೀಯ ಚಳುವಳಿಗಳನ್ನು ಸಂಘಟಿಸಿದರು. ಆ ಮೂಲಕ ಜನರಲ್ಲಿ ರಾಷ್ಟ್ರೀಯತೆಯ ಬೀಜ ಅಂಕುರಿಸಿ ಅವರು ರಾಷ್ಟ್ರೀಯತೆಯ ಪ್ರಮುಖ ವಾಹಿನಿಯಲ್ಲಿ ಸೇರುವಂತೆ ಪತ್ರಿಕೆಗಳು ಪ್ರಮುಖ ಪಾತ್ರವಹಿಸಿದವು.

ಪಾಶ್ಚಾತ್ಯ ಸಂಶೋಧಕರು, ವಿದ್ವಾಂಸರು ಪ್ರಾಚೀನ ಭಾರತದ ಇತಿಹಾಸದ ಮೇಲೆ ಬೆಳಕು ಚೆಲ್ಲಿ ಹಲವಾರು ಸಂಶೋಧನೆಗಳನ್ನು ಕೈಗೊಂಡರು. ಸರ್ ಜಾನ್ ಮಾರ್ಷಲ್, ಕನ್ನಿಂಗ್ ಹ್ಯಾಮ್ ಮುಂತಾದವರು ಭೂ ಸಂಶೋಧನೆಯನ್ನು ಕೈಗೊಂಡು ಭಾರತದ ಪ್ರಾಚೀನ ಭವ್ಯ ಸಂಸ್ಕೃತಿಯಾದ ಹರಪ್ಪಾ ನಾಗರಿಕತೆಯನ್ನು ಸಂಶೋಧಿಸಿ ಗ್ರೀಕ್, ರೋಮನ್ ನಾಗರಿಕತೆಗಳಿಗಿಂತ ಭಾರತೀಯ ನಾಗರಿಕತೆಯೇನೂ ಕಡಿಮೆ ಇಲ್ಲ ಎಂಬುದನ್ನು ತೋರಿಸಿದರು. ಇದರಿಂದಾಗಿ ಭಾರತೀಯರು ತಮ್ಮ ಭವ್ಯ ಪರಂಪರೆ ಬಗ್ಗೆ ಮತ್ತಷ್ಟು ಜಾಗೃತಿಗೊಳ್ಳುವಂತಾಯಿತು. ಐತಿಹಾಸಿಕ ಸಂಶೋಧನೆಗಳಿಂದ ಭಾರತೀಯರಲ್ಲಿ ತಮ್ಮ ಭವ್ಯ ಸಂಸ್ಕೃತಿಯ ಬಗ್ಗೆ ಯೋಚಿಸಿ ರಾಷ್ಟ್ರೀಯತೆಯನ್ನು ಬೆಳೆಸಿಕೊಳ್ಳುವಂತೆ ಪ್ರೇರಣೆ ನೀಡಿದವು. ಹಾಗೆಯೇ ಭಾರತದ ವಿವಿಧ ಭಾಷೆಗಳ ಸಾಹಿತ್ಯವು ರಾಷ್ಟ್ರೀಯ ಮತ್ತು ದೇಶಭಕ್ತಿ ಭಾವನೆಯನ್ನು ಬೆಳೆಸುವಲ್ಲಿ ಸಹಕಾರಿಯಾದವು. ಉದಾ: ಬಂಕಿಮಚಂದ್ರ ಚಟರ್ಜಿಯವರ ವಂದೇ ಮಾತರಂ, ದುರ್ಗೇಶ ನಂದಿನಿ ಮುಂತಾದವು.

ಈಗಾಗಲೇ ಈ ಮೇಲೆ ವಿವರಿಸಿದಂತೆ ಬ್ರಿಟಿಷರ ಶಿಕ್ಷಣ ಸಾಮಾಜಿಕ ಸುಧಾರಣೆಗೆ ದಾರಿ ತೋರಿತು. ಹೀಗಾಗಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸುಧಾರಣೆ ಮಾಡಲು ಭಾರತೀಯ ಸಮಾಜದಲ್ಲಿ ಹಲವಾರು ಚಳುವಳಿಗಳು ನಡೆದವು. ಇದರ ಪರಿಣಾಮವಾಗಿ ಬ್ರಹ್ಮ ಸಮಾಜ, ಆರ್ಯ ಸಮಾಜ, ರಾಮಕೃಷ್ಣಮಿಷನ್, ಥಿಯೋಸೊಫಿಕಲ್ ಸೊಸೈಟಿಯಂತಹ ಸಂಸ್ಥೆಗಳು ಹಿಂದೂ ಧರ್ಮದ ಸುಧಾರಣೆಗಾಗಿ ಹುಟ್ಟಿಕೊಂಡವು.

ಹಾಗೆಯೇ ಮುಸ್ಲಿಮರಲ್ಲಿ, ಸಿಖ್‌ರಲ್ಲಿ ಮತ್ತು ಪಾರ್ಶಿಗಳಲ್ಲಿ ಸುಧಾರಣವಾದಿ ಚಳುವಳಿಗಳು ಆರಂಭವಾದವು. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣವಾದಿ ಚಳುವಳಿಗಳು ಭಾರತದಲ್ಲಿ ಶತಶತಮಾನಗಳಿಂದಲೂ ತಾಂಡವಾಡುತ್ತಿದ್ದ ಮೂಢನಂಬಿಕೆ, ಅಂಧಾನುಕರಣೆ, ವಿಗ್ರಹಾರಾಧನೆ, ಬಹುದೇವತಾರಾಧನೆ, ಪುರೋಹಿತರ ಪ್ರಭಾವ ಮುಂತಾದವುಗಳನ್ನು ತೀವ್ರವಾಗಿ ವಿರೋಧಿಸಿದವು. ಜೊತೆಗೆ ಸಮಾಜದಲ್ಲಿದ್ದ ದುಷ್ಟ ಪಿಡುಗುಗಳಾದ ಜಾತಿ ಪದ್ಧತಿ, ಅಸ್ಪೃಶ್ಯತೆ, ಸತಿಪದ್ಧತಿಯಂತಹ ಸಾಮಾಜಿಕ ಅಸಮಾನತೆಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಸುಧಾರಣೆಯನ್ನು ಕೈಗೊಂಡವು. ಈ ರೀತಿಯಾಗಿ ಚಳುವಳಿಯು ಪ್ರಗತಿಪರ ಲಕ್ಷಣಗಳನ್ನು ಹೊಂದಿತ್ತು. ಮತ್ತು ಸಮಾಜವನ್ನು ಪ್ರಜಾಪ್ರಭುತ್ವ ತತ್ವ, ವ್ಯಕ್ತಿ ಸಮಾನತೆ, ಸಮಾಜಿಕ ಸಮಾನತೆ ಮತ್ತು ಉದಾರವಾದದ ತಳಹದಿಯ ಮೇಲೆ ಸಂಘಟನೆ ಮಾಡುವ ದಿಕ್ಕಿನಲ್ಲಿ ಕೆಲಸವನ್ನು ಆರಂಭಿಸಿದವು. ಭಾರತದಲ್ಲಿ ರಾಷ್ಟ್ರೀಯ ಐಕ್ಯತೆ, ಸಾಮಾಜಿಕ ಸಂಬಂಧವನ್ನು ರೂಪಿಸಲು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿಸುವುದು ಅತ್ಯಂತ ಅವಶ್ಯಕವಾದದ್ದು. ಶಕ್ತಿಯುತವಾದ ರಾಷ್ಟ್ರೀಯ ಐಕ್ಯತೆಯನ್ನು ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಗತಿಯನ್ನು ಭಾರತೀಯರು ಸಾಧಿಸುವುದು ಬಹಳ ಮುಖ್ಯವೆಂದು ಸಮಾಜ ಸುಧಾರಕರು ವಾದಿಸಿದರು. ಈ ಧಾರ್ಮಿಕ ಸಂಘ ಸಂಸ್ಥೆಗಳು ನಡೆಸಿದ ಸಾಮಾಜಿಕ, ಧಾರ್ಮಿಕ ಚಳುವಳಿಗಳಿಂದಾಗಿ ಭಾರತೀಯರಲ್ಲಿ ಸ್ವಾಭಿಮಾನ, ದೇಶಪ್ರೇಮ ಚಿಗುರೊಡೆಯಲಾರಂಭಿಸಿತು. ಇವು ಮುಂದೆ ರಾಷ್ಟ್ರೀಯತೆ ಬೆಳೆಯಲು ಪ್ರೇರಣೆಯಾದವು.

ಬ್ರಿಟಿಷರಿಗೂ ಭಾರತೀಯರಿಗೂ ಶಾಶ್ವತ ವೈರತ್ವ ಬೆಳೆಯಿತು. ಇದಕ್ಕೆ ಕಾರಣ ಅವರು ಅನುಸರಿಸಿದ ಜನಾಂಗೀಯ ನೀತಿ. ಬ್ರಿಟಿಷರು ತಾವೇ ಶ್ರೇಷ್ಠರು ಎಂಬ ಮನೋಭಾವನೆ ಹೊಂದಿದವರಾಗಿದ್ದು; ಭಾರತೀಯರನ್ನು ಹೀನಾಯವಾಗಿ ನಡೆಸಿಕೊಳ್ಳಲಾರಂಭಿಸಿದರು. ಅವರ ಆಡಳಿತದಲ್ಲಿ ಸಣ್ಣ ತಪ್ಪಿಗೆ ಉಗ್ರವಾದ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಇಂತಹ ಅನೇಕ ಅಂಶಗಳು ಭಾರತೀಯರಲ್ಲಿ ಬ್ರಿಟಿಷರ ವಿರೋಧಿ ಭಾವನೆ ಬೆಳೆಯಲು ಕಾರಣವಾಗಿ ಇದು ರಾಷ್ಟ್ರೀಯತೆಯ ಬೆಳವಣಿಗೆಗೆ ನಾಂದಿಯಾಯಿತು.

ಒಟ್ಟಾರೆಯಾಗಿ ಹೇಳುವುದಾದರೆ ಬ್ರಿಟಿಷರ ಆಡಳಿತ ಅವಧಿಯಲ್ಲಿ ರಾಜಕೀಯ, ಆರ್ಥಿಕ, ಧಾರ್ಮಿಕ, ಭಾಷಿಕವಾಗಿ ಅನೇಕ ಸಮಸ್ಯೆಗಳು ದಿನದಿಂದ ದಿನಕ್ಕೆ ದ್ವಿಗುಣಗೊಳ್ಳತೊಡಗಿದವು. ಈ ವೇಳೆಗಾಗಲೇ ಪ್ರಜ್ಞಾವಂತರಾದ ಕನ್ನಡಿಗರು ತಮಗಾಗಿರುವ ಹಾನಿಯ ಪ್ರಮಾಣವನ್ನು, ಸಮಸ್ಯೆಗಳನ್ನು ಅರ್ಥಮಾಡಿಕೊಂಡರು. ಈ ಸಮಸ್ಯೆಗಳ ಬೇರುಗಳು ಅಡಗಿರುವುದೆಲ್ಲಿ ಎಂದು ಯೋಚಿಸತೊಡಗಿದರು. ಈ ಬಗೆಯ ಆಲೋಚನೆಯು ಸರ್ವಾಧಿಕಾರತ್ವ ಹೊಂದಿದ್ದ ವಿದೇಶಿಯರ ಆಡಳಿತದಿಂದಾಗಿಯೇ ಎಂಬುದನ್ನು ಮನಗಂಡರು. ಆದ್ದರಿಂದ ವಿದೇಶಿಯರ ಆಡಳಿತದಿಂದ ಮುಕ್ತರಾಗುವವರೆಗೂ ನಮ್ಮ ಸಮಸ್ಯೆಗಳಿಗೆ ಪರಿಹಾರವಿಲ್ಲ. ವಿದೇಶಿಯರ ಆಡಳಿತದ ಬದಲು ದೇಶೀಯರ ಆಡಳಿತ

ಜಾರಿಯಾದರೆ ಮಾತ್ರ ನಮ್ಮ ಸಮಸ್ಯೆಗೆ ಪರಿಹಾರ ದೊರೆಯುತ್ತದೆ ಎಂಬ ತೀರ್ಮಾನವನ್ನು ತೆಗೆದುಕೊಂಡರು. ಹೀಗಾಗಿ ಬ್ರಿಟಿಷರ ಆಡಳಿತ ಕ್ರಮವನ್ನು ವಿರೋಧಿಸುವ ನೆಲೆಯಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯು ಬೆಳವಣಿಗೆ ಹೊಂದಿತು ಎಂದು ಹೇಳಬಹುದಾಗಿದೆ. ಈ ರಾಷ್ಟ್ರೀಯತೆಯ ಉಗಮಕ್ಕೆ ಪಾಶ್ಚಾತ್ಯ ರಾಷ್ಟ್ರೀಯ ಪ್ರಭುತ್ವದ ಸಂಪರ್ಕವೇ ಪ್ರಧಾನ ಪ್ರೇರಣೆಯಾಗಿದೆ. ಏಕೆಂದರೆ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಸಂದರ್ಭದಲ್ಲಿ ಅವರಿಂದಲೇ ಕಲಿತ, ಅಂತರಂಗೀಕರಿಸಿಕೊಂಡ ಗ್ರಹಿಕೆಗಳೇ ಬಳಕೆಯಾಗಿವೆ. ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ರಾಷ್ಟ್ರೀಯತೆಯ ಹೋರಾಟ ಸಂದರ್ಭದಲ್ಲಿ ನಾವು ಕಲ್ಪಿಸಿಕೊಂಡಿರುವ ರಾಷ್ಟ್ರ ಪರಿಕಲ್ಪನೆಯಲ್ಲಿ ದೇಶೀಯ ವಿಚಾರಗಳೆಷ್ಟು, ಪರಕೀಯರ ವಿಚಾರಗಳೆಷ್ಟು ಯೋಚಿಸಿದರೆ ನಮಗೆ ಗಾಬರಿಯಾಗುತ್ತದೆ. ಅಂದರೆ ಇಂಗ್ಲೀಷ್ ಶಿಕ್ಷಣ ಎಲ್ಲವನ್ನು ಕಲಿಸಿತು ಎಂದು ಇದರರ್ಥವಲ್ಲ. ಬದಲಾಗಿ ಹೊಸಬಗೆಯ ಆಲೋಚನೆ ಕ್ರಮಕ್ಕೆ ನಮ್ಮನ್ನು ಪ್ರೇರೇಪಿಸಿತು ಎಂದು ಹೇಳಬಹುದಾಗಿದೆ.

**ರಾಷ್ಟ್ರೀಯತೆ ಹಾಗೆಂದರೇನು ?**

ರಾಷ್ಟ್ರೀಯತೆ ಎಂದರೇನು? ಎಂಬ ಪ್ರಶ್ನೆಗೆ ಒಂದು ನಿರ್ದಿಷ್ಟವಾದ ಉತ್ತರ ಕೊಡುವುದು ಕಷ್ಟಸಾಧ್ಯವೆನಿಸುತ್ತದೆ. ಏಕೆಂದರೆ ಈ ಪರಿಕಲ್ಪನೆಯ ಅರ್ಥವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬೆಳೆದು ಬಂದಿದೆ. ನಿರ್ದಿಷ್ಟ ಉದ್ದೇಶ ಮತ್ತು ಸಂಬಂಧಗಳಿಗೆ ಅನುಗುಣವಾಗಿ ಈ ಪರಿಕಲ್ಪನೆಯ ಅರ್ಥ ರೂಪುಗೊಳ್ಳುತ್ತದೆ. ಈ ಹಿನ್ನಲೆಯಲ್ಲಿ ಈಗಾಗಲೇ ಹಲವಾರು ಅಭಿಪ್ರಾಯಗಳು ವ್ಯಕ್ತವಾಗಿವೆ. ಆದರೂ ಸಾಮಾನ್ಯವಾದ ಅರ್ಥದಲ್ಲಿ ರಾಷ್ಟ್ರೀಯತೆ ಎಂದರೇನು ಎಂಬುದನ್ನು ಗುರುತಿಸಲು ಪ್ರಯತ್ನಿಸಲಾಗುವುದು.

ಗೊತ್ತಾದ/ಗೊತ್ತುಪಡಿಸಿಕೊಂಡಿರುವ ನಿರ್ದಿಷ್ಟ ಭೂಪ್ರದೇಶದಲ್ಲಿ ಸಮಾನ ಭಾಷೆ, ಸಮಾನ ಪ್ರಭುತ್ವ, ಸಂಸ್ಕೃತಿಯನ್ನು ಕುರಿತಾಗಿ ಭಾವನಾತ್ಮಕವಾಗಿ ತಾವೆಲ್ಲರೂ ಒಂದೇ ಬದುಕಿಗೆ ಸಂಬಂಧಪಟ್ಟವರೆಂಬ ಕಲ್ಪನೆಯನ್ನು ಹೊಂದಿರುವ ಸಮುದಾಯವನ್ನು ಗುರ್ತಿಸುವ ಪರಿಕಲ್ಪನೆಯೇ 'ರಾಷ್ಟ್ರೀಯತೆ' ಎಂದು ಗುರುತಿಸಲಾಗುತ್ತದೆ.

ರಾಷ್ಟ್ರೀಯತೆಯನ್ನು ಕುರಿತು ಬೆನಿಡಿಕ್ಟ್ ಆಂಡರ್ಸನ್‌ರವರು ಈ ರೀತಿ ಅಭಿಪ್ರಾಯ ಪಡುತ್ತಾರೆ. "ಅದೊಂದು ಕಲ್ಪಿತ ರಾಜಕೀಯ ಸಮುದಾಯ; ಅದು ತನ್ನನ್ನು ಸ್ವಯಂ ಸರ್ವಭೌಮನೆಂತಲೂ, ಪರಿಮಿತವೆಂತಲು ಕಲ್ಪಿಸಿಕೊಂಡಿರುತ್ತದೆ." (ಬಂಜಗೆರೆ ಜಯಪ್ರಕಾಶ, 2000:7) ಆತನ ಪ್ರಕಾರ ರಾಷ್ಟ್ರೀಯತೆ ಎನ್ನುವುದು ಯಾಕೆ ಕಲ್ಪಿತವೆಂದರೆ ಯಾವುದೇ ಒಂದು ಅತ್ಯಂತ ಸಣ್ಣ ರಾಷ್ಟ್ರದ ಸದಸ್ಯರು ಕೂಡ ಆ ರಾಷ್ಟ್ರದ ಇತರ ಹೆಚ್ಚಿನ ಸದಸ್ಯರೊಂದಿಗೆ ವ್ಯಕ್ತಿಗತವಾದ ಪರಿಚಯ ಹೊಂದಿರುವುದಿಲ್ಲ. ಅವರ ಬಗೆಗಿನ ಸಂಪೂರ್ಣವಾದ

ಮಾಹಿತಿಯನ್ನು ಪಡೆದಿರುವುದಿಲ್ಲವಾದರೂ ಇತರ ಸಮುದಾಯಗಳ ಸಹಚರ್ಯದಲ್ಲಿ ಬಾಳುತ್ತಿದ್ದೇನೆಂಬ ಕಲ್ಪನೆಯಲ್ಲಿ ಹೊಂದಿರುತ್ತಾರೆ ಎಂಬುದಾಗಿದೆ.

ಯಾವುದೇ ಒಂದು ಜನಸಮುದಾಯದಲ್ಲಿ ತಾವೆಲ್ಲರೂ ಭಾವನಾತ್ಮಕವಾಗಿ ಒಂದೇ ಎಂಬ ಭಾವನೆಯು ಮೂಡಲು ಕಾರಣಗಳೇನು? ಎಂಬುದನ್ನು ಗಮನಿಸಬೇಕಾಗುತ್ತದೆ. ಏಕೆಂದರೆ ಈ ಭಾವನಾತ್ಮಕ ಸಂಬಂಧ ಏರ್ಪಡಲು ಭಾಷೆ, ಧರ್ಮ, ಬಣ್ಣ, ದೇಹರಚನೆ, ಚಾರಿತ್ರಿಕ ಘಟನೆ ಮುಂತಾದ ಸಂಬಂಧಗಳು ಕಾರಣವಾಗಿರುತ್ತವೆ. ಅಂದರೆ ಪ್ರತಿಯೊಂದು ರಾಷ್ಟ್ರದಲ್ಲಿ ಜನಸಮುದಾಯಗಳು ವ್ಯಕ್ತಿಗತವಾದ ಪರಿಚಯವನ್ನು ಹೊಂದಿಲ್ಲದಿದ್ದರೂ, ಪರೋಕ್ಷವಾಗಿಯಾದರೂ ತಮ್ಮ ಭಾವನಾತ್ಮಕ ಸಂಬಂಧ ಅರಿವು ಅವರಿಗೆ ಇದ್ದೇ ಇರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಯಾವುದೋ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಏರ್ಪಟ್ಟ ಈ ಭಾವನಾತ್ಮಕ ಸಂಬಂಧವು ಹಾಗೆಯೇ ಕೆಲವು ದಿನಗಳವರೆಗೂ ಮುಂದುವರೆಯಬಹುದು. ಹೀಗಾಗಿ ಅವರು ತಾವು ಅನಾದಿ ಕಾಲದಿಂದಲೂ ಪರಸ್ಪರ ಸಂಬಂಧಿಗಳಾಗಿದ್ದೇವೆ ಎಂಬ ಕಲ್ಪನೆ ತಳೆದಿರಲೂ ಸಾಧ್ಯವಿದೆ. ಈ ಕಲ್ಪನೆಯು ಎಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದರೆ ಅದೇ ಸಮುದಾಯದ ಪ್ರತಿಯೊಬ್ಬ ಸದಸ್ಯರ ನಡುವೆ ಇರಬಹುದಾದ ಅಸಮಾನತೆಯನ್ನು, ಶೋಷಣೆಯ ಮುಖಗಳನ್ನು ಪರಿಗಣನೆಗೆ ಭಾರದಂತೆ ನೋಡಿಕೊಳ್ಳುತ್ತದೆ. ಇಂತಹ ಭಾವನಾತ್ಮಕ ಸಂಬಂಧಗಳಿಂದಾಗಿಯೇ ಲಕ್ಷಾಂತರ ಜನರು ಪ್ರಾಣತ್ಯಾಗ ಮಾಡಿರುವ ಉದಾಹರಣೆಗಳು ಚರಿತ್ರೆಯಲ್ಲಿ ಕಾಣಸಿಗುತ್ತವೆ. ಉದಾ: ಭಾರತೀಯ ರಾಷ್ಟ್ರೀಯ ಹೋರಾಟ ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಪ್ರಾಣತ್ಯಾಗ ಮಾಡಿದ ವಿವರಗಳನ್ನು ಗಮನಿಸಿದಾಗ ಇದರ ಪರಿಣಾಮ ಸ್ಪಷ್ಟವಾಗುತ್ತದೆ. ಇಂತಹ ಭಾವನಾತ್ಮಕ ಸಂಬಂಧಗಳಿಂದಾಗಿಯೇ ಈ ಶತಮಾನದಲ್ಲಿ ನಡೆದ ಯುದ್ಧದ ಸಂದರ್ಭದಲ್ಲಿ ಲಕ್ಷಾಂತರ ಜನರು ತಮ್ಮ ರಾಷ್ಟ್ರಕ್ಕಾಗಿ ಪ್ರಾಣ ಕೊಡಲು, ಹಾಗೆಯೇ ತಮ್ಮ ರಾಷ್ಟ್ರಕ್ಕೆ ವಿರುದ್ಧವಾಗಿದ್ದವರನ್ನು ಕೊಲ್ಲಲು ಸ್ವಯಂ ಇಚ್ಛೆಯಿಂದ ಮುಂದೆ ಬಂದಿರುವ ಉದಾಹರಣೆಗಳು ನಮ್ಮ ಮುಂದಿವೆ.

ಖ್ಯಾತ ವಿಮರ್ಶಕರಾದ ಡಿ.ಆರ್.ನಾಗರಾಜ ಅವರು 'ರಾಷ್ಟ್ರೀಯತೆಯ ಪರಿಕಲ್ಪನೆಯ ಕೆಲವು ಟಿಪ್ಪಣಿಗಳು' ಎಂಬ ಲೇಖನದಲ್ಲಿ ಈ ರೀತಿ ಹೇಳುತ್ತಾರೆ. "ರಾಷ್ಟ್ರೀಯತೆಯ ಪ್ರಮುಖ ಲಕ್ಷಣಗಳನ್ನು ಈ ಮುಂದಿನಂತೆ ಪಟ್ಟಿಮಾಡಬಹುದು. ಈ ಲಕ್ಷಣಗಳು ವಾಸ್ತವದ ರೂಪದಲ್ಲೇ ಇರಬೇಕೆಂದೇನಿಲ್ಲ. ಸೈದ್ಧಾಂತಿಕ ಆದರ್ಶದ ರೂಪದಲ್ಲಿ ಇವು ವಾಸ್ತವವಾಗುವ ಚಾರಿತ್ರಿಕ ಪ್ರಕ್ರಿಯೆಯ ಪ್ರಾರಂಭವಾಗುವುದು.

1. ಸಮಾನ ಪ್ರಾದೇಶಿಕತೆ
2. ಸಮಾನ ಮಾರುಕಟ್ಟೆ
3. ಸಮಾನ ಭಾಷೆ (ಹಲವಾರು ಭಾಷೆಗಳಿದ್ದರೂ ಸರಿ ಎಂಬ ನಿಲುವು ಕೂಡ

ಸಮರ್ಥನೀಯವೇ. ಉದಾ: ಭಾರತ, ರಷ್ಯಾ ಮುಂತಾದವು)

4. ರಾಷ್ಟ್ರೀಯ ಪ್ರಭುತ್ವ ('ನೇಷನ್ ಸ್ಟೇಟ್' ಎಂಬರ್ಥದಲ್ಲಿ)
5. ಸಮಾನ ಮಾನಸಿಕ ಸ್ವರೂಪ (ಇದನ್ನೇ ಕೆಲವರು ಹಿಗ್ಗಿಸಿ ಸಂಸ್ಕೃತಿ ಎಂಬರ್ಥದಲ್ಲಿ ಬಳಸುತ್ತಾರೆ.)"

ಈ ಐದು ಲಕ್ಷಣಗಳನ್ನು ಹೇಳಿದ ಅವರು ಸಾಹಿತ್ಯ ಚರ್ಚೆಯಲ್ಲಿ ನಮಗೆ ಅತ್ಯಂತ ಹೆಚ್ಚು ಪ್ರಸ್ತುತವಾದ ಕ್ಷೇತ್ರ, ಲಕ್ಷಣ ಎಂದರೆ ಪಟ್ಟಿಯಲ್ಲಿರುವ ಕಡೆಯ ಸಂಗತಿ ಎಂದಿದ್ದಾರೆ.

ಡಿ.ಆರ್.ನಾಗರಾಜ ಅವರು ಹೇಳಿರುವ ಮಾತುಗಳನ್ನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಲು ಅರ್ಹವಾಗಿವೆ ಎಂದು ಹೇಳಬಹುದಾಗಿದೆ. ಅವರು ರಾಷ್ಟ್ರೀಯತೆ ಎಂದರೇನು? ಎನ್ನುವುದನ್ನು ಹೇಳುವುದಿಲ್ಲ. ಬದಲಾಗಿ ಅದರ ಗುಣಲಕ್ಷಣಗಳನ್ನು ಗುರ್ತಿಸುತ್ತಾರೆ. ಅವರು ಗುರ್ತಿಸಿದ ಎಲ್ಲಾ ಗುಣಲಕ್ಷಣಗಳು ಎಲ್ಲಾ ಕಾಲದಲ್ಲಿ ಸತ್ಯವಾದವು ಎಂದು ಪರಿಭಾವಿಸಲು ಸಾಧ್ಯವಿಲ್ಲ. ಆದರೆ ಸಾಮಾನ್ಯವಾಗಿ ಈ ಲಕ್ಷಣಗಳನ್ನು ಆಧರಿಸಿ ರಾಷ್ಟ್ರೀಯತೆ ಮನೋಭಾವ ರೂಪುಗೊಳ್ಳುತ್ತದೆ ಎಂದು ಹೇಳಬಹುದಾಗಿದೆ. ಇದಕ್ಕೆ ಯಾವುದಾದರೂ ಚಾರಿತ್ರಿಕ ಘಟನೆಯು ಕಾರಣವಾಗಿ ಅದು ಹಾಗೆಯೇ ಮುಂದುವರೆಯಲು ಕಾರಣವಾಗಿರುತ್ತದೆ. ಅವಳಿ ಮಕ್ಕಳಲ್ಲಿ ಭಿನ್ನತೆಯನ್ನು ಗುರ್ತಿಸುವ ಸಂದರ್ಭದಲ್ಲಿ 'ಸಮಾನ' ಎಂಬ ಪರಿಕಲ್ಪನೆಯೇ ಹಾಸ್ಯಾಸ್ಪದವಾಗಿ ಕಾಣುತ್ತದೆ. ಏಕೆಂದರೆ ಸಾಂಸ್ಕೃತಿಕ ಬದುಕಿನಲ್ಲಿ ಹಲವಾರು ಭಿನ್ನತೆಗಳು ಇದ್ದೇ ಇರುತ್ತವೆ. ಆದರೆ ಮನುಷ್ಯನು ಮೂಲತಃ ಸಮಾಜ ಜೀವಿಯಾಗಿರುವಂತೆ ಸಂಘ ಜೀವಿಯಾಗಿದ್ದಾನೆ. ಆತನ ಪ್ರಯತ್ನವು ಸುಖಕರವಾದ ಸಾಂಸ್ಕೃತಿಕ ಬದುಕನ್ನೇ ನಿರ್ಮಾಣ ಮಾಡಿಕೊಳ್ಳಲು ನಿರಂತರ ಹೋರಾಟ ಮಾಡಬೇಕಾಗಿದೆ. ಈ ಹೋರಾಟದ ಮೂಲಕ ಅಭಿವೃದ್ಧಿಯ ಗುರಿಯನ್ನು ಹೊಂದಿರುತ್ತಾರೆ. ಆದರೆ ತಮ್ಮ ಅಭಿವೃದ್ಧಿಗೆ ಮತ್ತು ಸಾಂಸ್ಕೃತಿಕ ಬದುಕಿಗೆ ಅನ್ಯರಿಂದ ಅಥವಾ ಅನ್ಯ ಸಂಸ್ಕೃತಿಯಿಂದ ಧಕ್ಕೆಯಾಗುತ್ತದೆ ಎಂಬ ತಿಳುವಳಿಕೆ/ಎಚ್ಚರಿಕೆಯಿಂದ ಈ ಕೂಡುವಿಕೆಯು ಅನಿವಾರ್ಯವಾಗಿ ಬಿಡುತ್ತದೆ. ಇಂತಹ ಕೂಡುವಿಕೆಯು ಯಾವುದೋ ಸಂದರ್ಭದಲ್ಲಿ ನಡೆದು ಆ ಸಮುದಾಯಗಳಲ್ಲಿ ತಾವೆಲ್ಲರೂ ಒಂದು ಎಂಬ ಭಾವನೆಯನ್ನು ಬೆಳೆಯಲು, ಮುಂದುವರೆಯಲು ಸಹಾಯಕವಾಗುತ್ತದೆ. ಈ ಭಾವನೆಯು ತಮ್ಮ ತಮ್ಮ ಸಮುದಾಯಗಳಲ್ಲಿನ ಹಲವಾರು ಭಿನ್ನತೆಯನ್ನು ಮುಚ್ಚಿಹಾಕಿ ಬಿಡುತ್ತವೆ.

'ರಾಷ್ಟ್ರೀಯತೆ ಎನ್ನುವುದೊಂದು ಮನಃಸ್ಥಿತಿ; ಸಮೂಹ ಕಲ್ಯಾಣಕ್ಕೆ ಅಗತ್ಯವೆನಿಸುವ ಒಂದು ಧರ್ಮದ ಕುರಿತಾದ ಅರಿವು; ಅದು ವರ್ಣವನ್ನಾಗಲಿ ವಂಶವನ್ನಾಗಲಿ ಅವಲಂಬಿಸದೆ, ಸಮಾನ ಚಿಂತನೆ ಹಾಗೂ ಉದ್ದೇಶಗಳನ್ನು ಅವಲಂಬಿಸಿರುತ್ತದೆ'-ಎನ್ನುತ್ತಾನೆ ಇಟಲಿಯ ಕ್ರಾಂತಿಕಾರಿ ಜೊಸೆಫ್ ಮ್ಯಾಜಿನಿ.

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ರಾಷ್ಟ್ರೀಯತೆ ಎಂಬ ಪರಿಕಲ್ಪನೆಯ ಅರ್ಥವು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುವುದರಲ್ಲಿ ಆಶ್ಚರ್ಯವೇನಿಲ್ಲ. ರಾಷ್ಟ್ರಿಯತೆ ಎನ್ನುವುದು ಯಾವುದೇ ಒಂದು ನಿರ್ದಿಷ್ಟ ಉದ್ದೇಶ ಅಥವಾ ಸಂದರ್ಭದಲ್ಲಿ ಸಮುದಾಯ ಇಲ್ಲವೆ ಸಮುದಾಯಗಳು ತನಗೆ ಆದ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಸಲುವಾಗಿ ಸಮಾನ ಚಿಂತನೆ ಹಾಗೂ ಉದ್ದೇಶಗಳಿಂದ ಒಗ್ಗೂಡುವುದಾಗಿದೆ. ಈ ಮೊದಲೆ ತಿಳಿಸಿರುವಂತೆ ಈ ತರಹದ ಒಗ್ಗೂಡುವಿಕೆಯು ಕೆಲವು ದಿನಗಳವರೆಗೂ ಮುಂದುವರೆಯಬಹುದು. ಬದಲಾದ ಸಮಾಜದಲ್ಲಿ ಅವುಗಳಲ್ಲಿಯೇ ಭಿನ್ನತೆ ಕಾಣಿಸಿಕೊಂಡು ವಿಭಾಗಗಳು ಹುಟ್ಟಿಕೊಂಡು ದ್ವಿರಾಷ್ಟ್ರ ಕಲ್ಪನೆಗೂ ಅವಕಾಶ ಮಾಡಿಕೊಟ್ಟಿರುವುದು ಚರಿತ್ರೆಯಿಂದ ತಿಳಿಯಬಹುದಾಗಿದೆ. ಅಂದರೆ ರಾಷ್ಟ್ರಗಳು ಹುಟ್ಟುತ್ತವೆ, ಬೆಳೆಯುತ್ತವೆ, ನಾಶ ಹೊಂದುತ್ತವೆ. ಈ ಹುಟ್ಟು ಸಾವಿನ ನಡುವಿನ ಸಂಘರ್ಷದಲ್ಲಿ ಅನೇಕ ಬದಲಾವಣೆಗಳು ಸೇರಿಕೊಳ್ಳುತ್ತವೆ ಎಂಬುದನ್ನು ಮರೆಯುವಂತಿಲ್ಲ.

ರಾಷ್ಟ್ರೀಯತೆ ಎಂದರೇನು? ಎಂಬುದನ್ನು ಸರಳವಾಗಿ ಹೇಳುವುದಾದರೆ, 'ರಾಷ್ಟ್ರೀಯತೆ' ಎನ್ನುವುದು ಒಂದು **'ಗುರುತು' (Identity)** ಎಂದು ಹೇಳಬಹುದು. ಚಾರಿತ್ರಿಕವಾಗಿ ನಿರ್ದಿಷ್ಟವಾದ ಸಮಾಜಗಳಲ್ಲಿ ಬದುಕುವ ನಾವು ವಿಭಿನ್ನ ಬಗೆಯ ಅಸಂಖ್ಯಾ ಗುರುತು-ಗೆರೆಗಳ ಜಾಲದಲ್ಲಿ ಸಿಲುಕಿಕೊಂಡಿದ್ದೇವೆ. ಈ ಗುರುತುಗಳು ನಮ್ಮನ್ನು ಪ್ರತಿಬಿಂಬಿಸುತ್ತವೆ. ಅಥವಾ ಪ್ರತಿನಿಧಿಸುತ್ತವೆ ಎಂದು ತಿಳಿಯುತ್ತೇವೆ. ಇಂತಹ ಗುರುತುಗಳನ್ನು ಕೆಲವು ಸಲ ನಾವೇ ಬಯಸುತ್ತೇವೆ ಅಥವಾ ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳುತ್ತೇವೆ. ಮತ್ತೆ ಕೆಲವು ಗುರುತುಗಳು <u>ಆಯಾಂತವಾಗಿ</u> ನಮ್ಮನ್ನು ಅಂಟಿಕೊಳ್ಳುತ್ತವೆ. ರಾಷ್ಟ್ರ, ಪ್ರದೇಶ, ಜನಾಂಗ, ಸಮುದಾಯ, ಜಾತಿ, ಮತ, ಧರ್ಮ ಹಾಗೂ ಭಾಷೆ ಇವೇ ಮೊದಲಾದ ಇಂತಹ ಗುರುತಗಳಲ್ಲಿ ಕೆಲವು ಅಮೂರ್ತವಾದವುಗಳು ಹಾಗೂ ಅಸ್ಪಷ್ಟವಾದವುಗಳು. ಮತ್ತೆ ಕೆಲವು ಸ್ಪಷ್ಟ ರೂಪವನ್ನು ಹೊಂದಿರುವ ನಿಗದಿತವಾದ ನೆಲೆಗಳಿರುವ ಮೂರ್ತ ಸ್ವರೂಪದ ಗುರುತುಗಳಾಗಿವೆ.

ಈ ಮೇಲೆ ವಿವರಿಸಿದಂತೆ ಹತ್ತು ಹಲವು ಗುರುತುಗಳನ್ನು ಆಯ್ಕೆ ಮತ್ತು ನಿರಾಕರಣೆಯ ವಿಷಯದಲ್ಲಿ ನಾವು ಸಂಪೂರ್ಣ ಸ್ವಾತಂತ್ರ್ಯರು ಎಂದು ಪರಿಗಣಿಸುವಂತಿಲ್ಲ. ನಿರ್ದಿಷ್ಟ ಸಮಾಜಗಳ ಸನ್ನಿವೇಶ ಹಾಗೂ ಸಂದರ್ಭಗಳಲ್ಲಿ ಗುರುತಿಸಬಹುದಾದ ಶಕ್ತಿ ಹಾಗೂ ಹಿತಾಸಕ್ತಿಗಳ ಮೂಲಕ ಅವು ನಿರೂಪಿಸಲ್ಪಡುತ್ತವೆ ಅಥವಾ ಆರೋಪಿಸಲ್ಪಡುತ್ತವೆ. ಆದ್ದರಿಂದಲೇ ಈ ಗುರುತುಗಳು ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿ ಮಾನ್ಯತೆಯನ್ನು ಪಡೆಯುವುದಿಲ್ಲ. ನಿರ್ದಿಷ್ಟ ಉದ್ದೇಶ ಮತ್ತು ಸಂದರ್ಭಕ್ಕನುಸಾರವಾಗಿ ಕೆಲವೊಮ್ಮೆ ಕೆಲವು ಗುರುತುಗಳು ಮುಂದಕ್ಕೆ ಬರುತ್ತವೆ. ಮತ್ತೆ ಕೆಲವು ಗುರುತುಗಳು ಹಿಂದಕ್ಕೆ ಸರಿಯುತ್ತವೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಪ್ರಶ್ನೆಯು ನಿರಂತರವಾಗಿ ಹಲವು

ಬದಲಾವಣೆಗಳೊಂದಿಗೆ ಪುನರಾವರ್ತನೆಗೊಳ್ಳುತ್ತವೆ. ತತ್ಪರಿಣಾಮವಾಗಿ ಈ ಗುರುತುಗಳ ಸಂಘಟನೆ, ಮರು ಸಂಘಟನೆ ನಡೆಯುತ್ತಲೇ ಇರುತ್ತದೆ.

'ರಾಷ್ಟ್ರ' ಅಥವಾ 'ರಾಷ್ಟ್ರೀಯತೆ' ಎನ್ನುವುದು ನಮ್ಮೊಂದಿಗೆ ಇರುವ, ನಮ್ಮ ಬದುಕಿನಲ್ಲಿ ಇಂದು ಹಾಸು ಹೊಕ್ಕಂತಿರುವ ನಮ್ಮ ಅಸಂಖ್ಯ ಗುರುತುಗಳಲ್ಲಿ ಮುಖ್ಯವಾದದ್ದು. ಇದು ಮೂಲತಃ ಒಂದು ರಾಜಕೀಯ ಸಮುದಾಯಿಕ ಕಲ್ಪನೆ. 'ಇದು ಭಾರತ' ಇಲ್ಲಿ ವಾಸಿಸುವ ನಾವೆಲ್ಲರೂ 'ಭಾರತೀಯರು' ಎನ್ನುವ ಮಾತುಗಳ ಹಿಂದೆ ಅಮೂರ್ತವಾದ, ಭಾವನಾತ್ಮಕವಾದ ಕಲ್ಪನೆಯಿದೆ. ಈ ಕಲ್ಪನೆಯು ಚಾರಿತ್ರಿಕವಾಗಿ ರೂಪುಗೊಂಡ ಸಮುದಾಯಿಕ ಕಲ್ಪನೆಯಾಗಿದೆ. ರಾಷ್ಟ್ರೀಯತೆ ಎನ್ನುವ ಈ ಭಾವನಾತ್ಮಕ ಆಯಾಮಕ್ಕೆ ಬಹುಮಟ್ಟಿಗೆ ಒಂದು ಬಗೆಯ ಚಾರಿತ್ರಿಕ ಸ್ಮೃತಿಯ ಅಗತ್ಯವಿದೆ. ಸುಖ ದುಃಖಗಳನ್ನೆ ಸಮನಾಗಿ ಹಂಚಿಕೊಂಡು ಸಮಾನ ವೈರಿಯ ವಿರುದ್ಧ ದೀರ್ಘ ಕಾಲದ ಹೋರಾಟ ನಡೆಸಿದ ಚಾರಿತ್ರಿಕ ನೆನಪು ಈ ರಾಷ್ಟ್ರೀಯತೆಯ ಭಾವನಾತ್ಮಕತೆಗೆ ಒಂದು ತಳಹದಿಯನ್ನು ಒದಗಿಸಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ಸ್ವಾತಂತ್ರ್ಯಕ್ಕಾಗಿ ಹೋರಾಟದ ಸಂದರ್ಭದಲ್ಲಿ ರೂಪುಗೊಂಡ ರಾಷ್ಟ್ರೀಯತೆ ಯಾವ ಸ್ವರೂಪದ್ದು ಎನ್ನುವುದನ್ನು ಚರ್ಚೆಗೆ ಒಳಪಡಿಸಲಾಗುವುದು. ಈ ಚರ್ಚೆಯನ್ನು ರಾಷ್ಟ್ರೀಯ ಅಥವಾ ಸ್ವಾತಂತ್ರ್ಯ ಹೋರಾಟಗಾರರ ಪ್ರಮುಖ ನಾಯಕರ ಮಾತುಗಳ ಹಿನ್ನೆಲೆಯಲ್ಲಿ ಚರ್ಚೆಯನ್ನು ಮುಂದುವರೆಸಲಾಗುವುದು.

ಭಾರತದ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ರೂಪುಗೊಂಡ ರಾಷ್ಟ್ರೀಯತೆಯ ಕಲ್ಪನೆಯು ಭಾರತವನ್ನು ಒಂದು ರಾಷ್ಟ್ರವಾಗಿ ಪರಿಕಲ್ಪಿಸುವ ಹಾಗೂ ಕಟ್ಟುವ ಉದ್ದೇಶವನ್ನು ಹೊಂದಿತ್ತು. ಈ ಉದ್ದೇಶ ನಿರ್ವಹಣೆಗೆ ಅದು ಬಳಸಿಕೊಂಡ ಬೌದ್ಧಿಕ ಪರಿಕರಗಳ ಹಿನ್ನೆಲೆಯಲ್ಲಿ ಗಮನಿಸುವುದು ಸೂಕ್ತವೆನಿಸುತ್ತದೆ. ಏಕೆಂದರೆ ವಸಾಹತುಶಾಹಿ ಆಡಳಿತವು ಒಂದು ರಾಜಕೀಯ ಆಳ್ವಿಕೆ ಮಾತ್ರವಾಗಿರದೆ, ಅದು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಭುತ್ವವಾಗಿತ್ತು. ಹೀಗಾಗಿಯೇ ವಸಾಹತುಶಾಹಿ(ಬ್ರಿಟಿಷ) ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದ ಮುಖೇನ ರೂಪುಗೊಂಡ ರಾಷ್ಟ್ರೀಯತೆ ಕೂಡ ಸಾಂಸ್ಕೃತಿಕ ಸ್ವರೂಪದಲ್ಲಿಯೇ ಪ್ರಾರಂಭವಾಯಿತು ಎಂದು ಹೇಳಬಹುದಾಗಿದೆ. ಚರಿತ್ರೆಕಾರರು ರಾಜಾರಾಮ ಮೋಹನರಾಯರನ್ನು ನವಭಾರತದ ಹರಿಕಾರ ಎಂದು ಕರೆಯುತ್ತಾರೆ. ವಿವಿಧ ಭಾಷೆಗಳಲ್ಲಿ (ಸಂಸ್ಕೃತ, ಪರ್ಶಿಯನ್, ಬೆಂಗಾಲಿ) ಪರಿಣಿತರಾದ ಮೋಹನರಾಯರು ವಸಾಹತುಶಾಹಿ ಆಧುನಿಕತೆಯಿಂದ ಪ್ರಭಾವಿತರಾಗಿದ್ದರು. ವೈಜ್ಞಾನಿಕವಾದ ವಿಜ್ಞಾನ ಶಿಕ್ಷಣ ಬೇಕೆಂದು ಒತ್ತಾಯಿಸಿದರು. ವೈದಿಕ ಧರ್ಮದಲ್ಲಿ ಪುರಾತನ ಕಾಲದಿಂದಲೂ ಮನೆಮಾಡಿಕೊಂಡಿದ್ದ ಜಾತಿ ಪದ್ಧತಿ, ಸತಿ ಪದ್ಧತಿ, ಬಹುಪತ್ನಿತ್ವ, ಧಾರ್ಮಿಕ ಮೌಢ್ಯತೆ ಮುಂತಾದ ಅನಿಷ್ಠ ಪದ್ಧತಿಗಳನ್ನು ನಿರ್ಮೂಲನೆ ಮಾಡಿ, ಆಧುನಿಕ ಕಾಲಕ್ಕೆ ಸರಿಹೊಂದುವಂತೆ ಸುಧಾರಣೆಗೊಳಿಸಬೇಕೆಂಬ ಆಶಯವನ್ನು ಹೊಂದಿದ್ದರು. ಈ

ಹಿನ್ನೆಲೆಯಲ್ಲಿ ದಯಾನಂದ ಸರಸ್ವತಿ, ಈಶ್ವರಚಂದ್ರ ವಿದ್ಯಾಸಾಗರ, ವಿವೇಕಾನಂದರು ಮುಂತಾದ ಸಮಾಜ ಸುಧಾರಕರು ಪ್ರಯತ್ನಿಸಿದ್ದಾರೆ. ಈ ಪ್ರಯತ್ನವು ಆಧುನಿಕ ಭಾರತವನ್ನು ಒಂದು ರಾಷ್ಟ್ರವಾಗಿ ನಿರ್ಮಾಣ ಮಾಡಿಕೊಳ್ಳುವುದಾಗಿತ್ತೇ ಹೊರತು ವೈದಿಕ ಸಂಸ್ಕೃತಿಯಿಂದ ವಿಮೋಚನೆ ಮಾಡುವ ಉದ್ದೇಶ ಹೊಂದಿರಲಿಲ್ಲ.

ಭಾರತದ ರಾಷ್ಟ್ರೀಯತೆಯ ಸ್ವರೂಪಕ್ಕೆ ಸಂಬಂಧಿಸಿದಂತೆ ಕಾಂಗ್ರೇಸ್ ಪ್ರತಿಪಾದಿಸಿದ ರಾಷ್ಟ್ರೀಯತೆಯು ಉದಾರವಾದ ನಿಲುವನ್ನೇ ಹೊಂದಿದೆ. ಅದು ವಿವಿಧ ಸಂಸ್ಕೃತಿ, ಭಾಷೆ, ಜನಾಂಗ, ಮತ, ಧರ್ಮ, ಪ್ರಾಂತ್ಯಗಳ ಭೇದಭಾವಗಳಿಲ್ಲದೆ ಒಗ್ಗೂಡುವಿಕೆ ಎಂದು ಗ್ರಹಿಸುತ್ತದೆ. ಈ ವಿಭಿನ್ನ ಸಂಬಂಧಗಳ ನಡುವೆ ಶಾಂತಿಯುತ ಪ್ರಜಾಸತ್ತಾತ್ಮಕ ಒಗ್ಗೂಡುವಿಕೆಯ ಸಂಬಂಧವನ್ನು ಒಂದು ಬಗೆಯ ಆಶಾವಾದದಲ್ಲಿ ಗ್ರಹಿಸುತ್ತದೆ. ಈ ವಿವಿಧತೆಯಲ್ಲಿ ಏಕತೆ ಎನ್ನುವ ಪರಿಕಲ್ಪನೆಯನ್ನು ಒಂದು ಚಾರಿತ್ರಿಕ ವಾಸ್ತವದ ನಿರೂಪಣೆ ಎನ್ನುವುದಕ್ಕಿಂತಲೂ ಮಿಗಿಲಾಗಿ ಅದೊಂದು ಆಶಾವಾದವಾಗಿ, ಆಕಾಂಕ್ಷೆಯಾಗಿ ಸಾಧಿಸಬೇಕಾದ ಗುರಿಯಾಗಿತ್ತು ಎಂದು ಹೇಳಬಹುದು.

ಭಾರತದಲ್ಲಿನ ರಾಷ್ಟ್ರೀಯತೆಯ ಸಮಸ್ಯೆಯನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ಗುರುತಿಸಲು ಸಾಧ್ಯವಿದೆ. ಒಂದು ಹಿಂದೂ (ವೈದಿಕ) ನೆಲೆಯಲ್ಲಿ ರೂಪುಗೊಂಡ ರಾಷ್ಟ್ರೀಯತೆ. ಮತ್ತೊಂದು ಲೌಕಿಕವಾದ ನೆಲೆಯಲ್ಲಿ ರೂಪುಗೊಂಡ ರಾಷ್ಟ್ರೀಯತೆ. ಈ ಎರಡು ನೆಲೆಯ ರಾಷ್ಟ್ರೀಯತೆ ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ವಿಶೇಷವಾಗಿ ಕಾಂಗ್ರೇಸ್ ರಾಷ್ಟ್ರೀಯ ನಾಯಕರ ನಾಯಕತ್ವದಲ್ಲಿ ಬೆಳೆದು ಬಂದಿವೆ. ರಾಷ್ಟ್ರೀಯ ಕಾಂಗ್ರೇಸ್‌ನಲ್ಲಿ ಉಗ್ರಗಾಮಿ ನಾಯಕರೆಂದು ಪ್ರಸಿದ್ಧರಾಗಿರುವ ಬಾಲಗಂಗಾಧರನಾಥ ತಿಲಕ್ ಅವರು ರಾಷ್ಟ್ರೀಯ ಆಂದೋಲನವನ್ನು ತೀವ್ರಗೊಳಿಸುವ ಸಲುವಾಗಿ ಗಣೇಶೋತ್ಸವವನ್ನು ಪ್ರಾರಂಭಿಸಿದರು. ಈ ಆಂದೋಲನವು ತಾಂತ್ರಿಕ ಕ್ರಿಯೆಯಾಗಿದ್ದರೂ ರಾಷ್ಟ್ರೀಯತೆಗೆ ಒಂದು ಸಾಂಸ್ಕೃತಿಕ ಸ್ವರೂಪ ಕೂಡ ಪ್ರಾಪ್ತವಾಯಿತು. ಇದು ಹಿಂದೂ ಸಾಂಸ್ಕೃತಿಕ ಶಕ್ತಿಯ ಸಮ್ಮಿಳಿತವಾಗುವುದಕ್ಕೆ ಅವಕಾಶ ಮಾಡಿಕೊಟ್ಟರು.

'ಮುಸ್ಲಿಂ ಲೀಗ್' ನಾಯಕರಾದ ಮಹ್ಮದ್‌ಅಲಿ ಜಿನ್ನಾರವರು ಹಿಂದೂಗಳ ಕಾಂಗ್ರೆಸ್‌ನಲ್ಲಿ ತನಗೆ ನಂಬಿಕೆ ಇಲ್ಲವೆಂದು, ತಲೆ ಎಣಿಸುವ ಪ್ರಜಾಪ್ರಭುತ್ವ ಆಧಾರಿತ ಸರಕಾರದಿಂದ ತಮ್ಮ ಜನಾಂಗಕ್ಕೆ ಸಾಮಾಜಿಕ ನ್ಯಾಯ ದೊರೆಯುವುದಿಲ್ಲ. ಹಿಂದೂ ಮುಸ್ಲಿಮರು ಎರಡು ಪ್ರತ್ಯೇಕ ರಾಷ್ಟ್ರೀಯರೆಂದು, ಅವರೆಂದೂ ಒಂದಾಗಲು ಸಾಧ್ಯವಿಲ್ಲವೆಂದು ಹೇಳುವುದರ ಮೂಲಕ ದ್ವಿರಾಷ್ಟ್ರ ಕಲ್ಪನೆಯನ್ನು ಪ್ರತಿಪಾದಿಸಿದರು. ಹೀಗೆ ಇಸ್ಲಾಂ ಸಾಂಸ್ಕೃತಿಕ ರಾಷ್ಟ್ರ ನಿರ್ಮಾಣಕ್ಕೆ ಪ್ರಯತ್ನಿಸುವುದರ ಮೂಲಕ ಮತೀಯವಾದಿ ರಾಷ್ಟ್ರೀಯತೆಯನ್ನು ರೂಪುಗೊಳ್ಳುವಂತೆ ಮಾಡಿದರು.

ಆದರೆ ಗಾಂಧೀಜಿ ನೇತೃತ್ವದಲ್ಲಿ ಕಾಂಗ್ರೆಸ್ ಕೇವಲ ರಾಜಕೀಯ ಉದ್ದೇಶಕ್ಕೆ ಮಾತ್ರ ಸೀಮಿತವಾಗಿದರೆ, ಭಾರತೀಯ ಸಮಾಜದಲ್ಲಿ ಸಾಮಾಜಿಕ ಸುಧಾರಣೆ ಹಾಗೂ ಆರ್ಥಿಕ ಬದಲಾವಣೆಯನ್ನು ತರುವ ಉದ್ದೇಶದಿಂದ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಗಾಂಧೀಜಿಯವರು ತಮ್ಮ ಅನುಯಾಯಿಗಳಿಗೆ, ಕಾರ್ಯಕರ್ತರಿಗೆ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದರು. ಹಳ್ಳಿಗಳಿಗೆ ಹೋಗುವಂತೆ ಹೇಳಿದರು. ಭಾರತದ ಜೀವಾಳ ಹಳ್ಳಿಗಳು. ಸಮಾಜ ಸೇವಕರು ಹಳ್ಳಿಗರೊಂದಿಗೆ ಬೆರೆಯುವಂತೆ ಮಾಡಿದರು. ಸಮಾಜದಲ್ಲಿ ಶತಮಾನಗಳಿಂದಲೂ ಪರಂಪರಾಗತವಾಗಿ ಬೆಳೆದು ಬಂದಿರುವ ಸಾಮಾಜಿಕ ಅನಿಷ್ಟಗಳನ್ನು, ಪಿಡುಗುಗಳನ್ನು ತೊಡೆದು ಹಾಕುವಂತೆ ಕರೆನೀಡಿದರು. ಹಿಂದೂ-ಮುಸ್ಲಿಮ ಸೌಹಾರ್ದತೆ, ಗ್ರಾಮ ಸ್ವರಾಜ್ಯ, ಸ್ವದೇಶಿ ಚಳುವಳಿ, ಖಾದಿಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ, ರಾಷ್ಟ್ರೀಯ ಶಿಕ್ಷಣ ಮೊದಲಾದವುಗಳು ಮುಖ್ಯವಾದ ಕಾರ್ಯಕ್ರಮಗಳಾಗಿದ್ದವು. ಖಾದಿಯು ವಸಾಹತುಶಾಹಿ ಅರ್ಥ ವ್ಯವಸ್ಥೆಗೆ ಪ್ರತ್ಯುತ್ತರವೆಂದು, ಅದು ಅಹಿಂಸೆಯ ಬಂಧು ಎಂದು ನುಡಿದರು. ಜನರ ಮನಃಪರಿವರ್ತನೆಯಿಂದ ಸಮಾಜದ ಶಾಪವಾದ ಅಸ್ಪೃಶ್ಯತೆಯನ್ನು ತೊಲಗಿಸಬಹುದೆಂದು ಸ್ಪಷ್ಟಪಡಿಸಿದರು. ಅಹಿಂಸಾತ್ಮಕ ಹಾಗೂ ಸ್ವಯಂ ಪ್ರೇರಣೆಯಿಂದ ಅಪರಿಗ್ರಹ ತತ್ವದಂತೆ ಭೂ ಸುಧಾರಣೆಯನ್ನು ಜಾರಿಗೊಳಿಸಬೇಕೆಂದು, ರೈತರ ಬವಣೆ ನೀಗಬೇಕೆಂದು ಬಯಸಿದರು. ದೈಹಿಕ ಶ್ರಮಕ್ಕೆ ಮಹತ್ವ ನೀಡಿದರು. ದುಡಿಮೆಯ ಬೆಲೆ ತಿಳಿಸಿದರು. ಕರಕುಶಲ ಕೆಲಸ, ಮಹಿಳೆಯರಿಗೆ ಮುಂತಾದ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಪ್ರಯತ್ನಿಸಿದರು. ಸಹಸ್ರಾರು ಸ್ವಯಂ ಸೇವಕರು ಗಾಂಧೀಜಿಯವರ ಈ ತತ್ವಗಳನ್ನು ಸಾಕಾರಗೊಳಿಸಲು ಉತ್ಸಾಹದಿಂದ ದುಡಿಯುವುದರ ಮೂಲಕ ಲೌಕಿಕವಾದ ರಾಷ್ಟ್ರೀಯತೆ ನಿರ್ಮಾಣ ಮಾಡಿಕೊಳ್ಳಲು ಹೋರಾಡಿದರು.

ಒಟ್ಟಾರೆಯಾಗಿ ಹೇಳುವುದಾದರೆ ರಾಷ್ಟ್ರೀಯ ಕಾಂಗ್ರೆಸ್ ಮತೀಯವಾದಿ ವೇದಿಕೆಯಾಗಿರಲಿಲ್ಲ. ಮಹಾತ್ಮಗಾಂಧಿ ವೈದಿಕ ಧರ್ಮದವರೇ ಆಗಿದ್ದರು ಅವರ ಕಾಲದಲ್ಲಿ ಸ್ವಾತಂತ್ರ್ಯ ಆಂದೋಲನವು ಸ್ಪಷ್ಟವಾಗಿ ಧರ್ಮನಿರಪೇಕ್ಷತೆಯನ್ನು-ಸೆಕ್ಯೂಲರಿಸಂ ಬೆಳೆಸಿಕೊಂಡು ಬಂತು. ಆದರೆ ಇದೇ ಸಂದರ್ಭದಲ್ಲಿ ಹಿಂದುತ್ವವಾದವೆಂಬ ಮತ್ತು ಮುಸ್ಲಿಮತ್ವ ಎಂಬ ಎರಡು ರಾಷ್ಟ್ರೀಯ ವಾದವೂ ಬೆಳೆದು ಬಂದವು. ಧರ್ಮನಿರಪೇಕ್ಷತೆ-ಹಿಂದೂತ್ವವಾದ ಮತ್ತು ಮುಸ್ಲಿಂ ರಾಷ್ಟ್ರೀಯವಾದ ಇವು ತ್ರಿಕೋನದಲ್ಲಿ ಸಂಘರ್ಷ ನಡೆಸಿದವು. ಇದರಿಂದಾದ ಪರಿಣಾಮವೆಂದರೆ ಗಾಂಧೀಜಿಯವರ ಧರ್ಮನಿರಪೇಕ್ಷತವಾದ ಹಿಂದು-ಮುಸ್ಲಿಂ ಒಗ್ಗಟ್ಟಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಆ ಕಾರಣಕ್ಕಾಗಿಯೇ ಹಿಂದುತ್ವವಾದಿ ರಾಷ್ಟ್ರೀಯತೆ ಅವರನ್ನೇ ಬಲಿತೆಗೆದುಕೊಂಡಿದ್ದು ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಹಾಗೆಯೇ ಮುಸ್ಲಿಂ ರಾಷ್ಟ್ರೀಯತೆ ಎಂಬ ಇಸ್ಲಾಂ ಧರ್ಮವನ್ನು ಆಧರಿಸಿ ಪಾಕಿಸ್ತಾನ ಎಂಬ ರಾಷ್ಟ್ರವು ಉದಯವಾಯಿತು. ಈ ಸಂದರ್ಭದಲ್ಲಿ ಬಹುಮುಖ್ಯವಾಗಿ

ಗಮನಿಸಬೇಕಾದ ವಿಚಾರವೆಂದರೆ ಧರ್ಮನಿರಪೇಕ್ಷಿತವಾದ ಮುಸ್ಲಿಮರು ಇರಲಿಲ್ಲವೆಂದಲ್ಲ. ಮೌಲನ ಅಬ್ದುಲ್ ಕಲಾಂ, ಖಾನ ಅಬ್ದುಲ್ ಗಫರ್ ಖಾನ್ ಮುಂತಾದ ನಾಯಕರು ರಾಷ್ಟ್ರ ವಿಭಜನೆಗೆ ವಿರೋಧವಾಗಿದ್ದರು. 1931ರಲ್ಲಿ ಪಂಜಾಬಿನಲ್ಲಿ ಜರುಗಿದ ಪಂಜಾಬ್ ನ್ಯಾಷನಲಿಸ್ಟ್ ಮುಸ್ಲಿಂ ಕಾನ್ಫರೆನ್ಸ್ ಸಮ್ಮೇಳನದ ಸ್ವಾಗತ ಭಾಷಣದಲ್ಲಿ ಮಲಿಕ್ ಬರ್ಕಟ್ ಈ ರೀತಿ ಅಭಿಪ್ರಾಯ ಪಡುತ್ತಾರೆ.

> "ನಾವು ಸ್ವತಂತ್ರ ಇಂಡಿಯಾದಲ್ಲಿ ಅಷ್ಟೇ ಅಲ್ಲ, ಅಖಂಡ ಇಂಡಿಯಾದಲ್ಲಿ ನಂಬಿಕೆಯುಳ್ಳವರಾಗಿದ್ದೇವೆ. ಆ ಇಂಡಿಯಾ ಹಿಂದೂಗಳದ್ದಾಗಲಿ ಅಥವಾ ಸಿಖ್‌ರದ್ದಾಗಲಿ, ಯಾವ ಜಾತಿಯರದ್ದೇ ಆಗಿರಲಿ ಸರ್ವಜನತೆಯ ಇಂಡಿಯಾ ಆಗಿರುತ್ತದೆ. ಇದು ನಮ್ಮ ಅಚಲ ಶ್ರದ್ಧೆಯಾಗಿರುವುದರಿಂದ ಹಿಂದೂ ಅಥವಾ ಮುಸ್ಲಿಂ ಇಂಡಿಯಾ ಎನ್ನುವ ಇಂಡಿಯಾದ ವಿಭಜನೆಗೆ ನಾವು ಭಾಗೀದಾರರಾಗುವುದಿಲ್ಲ ಎಂದು ಅದನ್ನು ತಿರಸ್ಕರಿಸುತ್ತೇವೆ. ಹಿಂದೂ ಮತ್ತು ಮುಸ್ಲಿಂ ಇಂಡಿಯಾ ಪರಿಕಲ್ಪನೆ ಆಯಾ ಪಕ್ಷಗಳ ಜಾತ್ಯಂಧರಿಗೆ ಅವರಲ್ಲಿ ಎಷ್ಟೇ ಉನ್ಮಾದದ ಅಲೆಗಳನ್ನು ಹುಟ್ಟಿಸಲಿ ಅದನ್ನು ನಾವು ಎತ್ತರ ಧ್ವನಿಯಲ್ಲಿ ವಿರೋಧಿಸುತ್ತೇವೆ." (ಡಾ.ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ–8, ಪು.420)

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರೂಪುಗೊಂಡ ರಾಷ್ಟ್ರೀಯತೆಯ ಸಮಸ್ಯೆ ಇಂದಿಗೂ ಮುಂದುವರೆಯುತ್ತಿರುವುದು ನಮ್ಮ ಮುಂದಿದೆ. ಇವತ್ತು ನಾವು ಯಾವುದನ್ನು ಹಿಂದೂ ಧರ್ಮ ಎಂದು ಕರೆಯುತ್ತೇವೆಯೋ ಆ ವೈದಿಕ ಪರಂಪರೆಯಲ್ಲಿ ಹಿಂದಿನಿಂದಲೂ ಹುಟ್ಟಿನ ಆಧಾರದ ಮೇಲೆ ಕೆಲವು ಸಮುದಾಯಗಳು ಉನ್ನತ ಮಟ್ಟದ ಜೀವನವನ್ನು ನಡೆಸಿಕೊಂಡು ಮುಂದೆ ಸಾಗಿವೆ. ಆದರೆ ಕೆಲವು ಸಮುದಾಯಗಳು ಅತ್ಯಂತ ಕೆಳಮಟ್ಟದ ಬದುಕನ್ನು ಮೈಗೂಡಿಸಿಕೊಂಡು ಬೆಳೆದು ಬಂದಿವೆ. ವೈದಿಕ ಪರಂಪರೆಯಲ್ಲಿ ಚಾತುರ್ವರ್ಣದ ಜೊತೆಗೆ ಪಂಚಮ ವರ್ಣವೊಂದನ್ನು ಸೃಷ್ಟಿಸಿ 'ಅತಿಶೂದ್ರ' ಸಮುದಾಯವೆಂದು ಗುರುತಿಸಲಾಗಿದೆ. ಈ ಮೇಲ್ಜಾತಿಯ ಸಮುದಾಯಗಳು ಸಮಾಜದಲ್ಲಿ ಹಲವು ಬಗೆಯ ಅಸಮಾನತೆಯನ್ನು ಸೃಷ್ಟಿಸಿವೆ. ಮೇಲು–ಕೀಳು ಎಂಬ ಭಾವನೆಯನ್ನು ಸೃಷ್ಟಿಸಿಕೊಂಡು ಶತಶತಮಾನಗಳಿಂದಲೂ ತಳ ಸಮುದಾಯಗಳನ್ನು ಶೋಷಣೆಗೆ ಒಳಪಡಿಸುತ್ತಾ ಬಂದಿವೆ. ಇಂತಹ ಹಲವಾರು ಶೋಷಣೆಯ ಪರಿಣಾಮದಿಂದಾಗಿ ತಳ ಸಮುದಾಯದವರು ಅಸ್ಪೃಶ್ಯರಾದರು, ಜೀತದವರಾದರು. ಆದರೆ ದಲಿತರಿಗೆ ವಿಮೋಚನೆ ಸಿಕ್ಕಿದ್ದು ಬ್ರಿಟಿಷ್ ವಸಾಹತುಶಾಹಿ ಆಡಳಿತದ ಅವಧಿಯಲ್ಲಿ ಎನ್ನಬಹುದು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕೆಲವು ಉದಾರವಾದಿಗಳು ಧಾರ್ಮಿಕ–ಸಾಮಾಜಿಕ ಸುಧಾರಣೆಯನ್ನಾಗಿಸಿಕೊಂಡು ಒಂದು ಚಳುವಳಿಯನ್ನು

ಪ್ರಾರಂಭಿಸಿದರು. ಈ ಚಳುವಳಿಯನ್ನು ಮುನ್ನಡೆಸಿದ ನಾಯಕತ್ವ ವಹಿಸಿಕೊಂಡವರೂ ಕೂಡ ಮೇಲ್ಜಾತಿಯ ಹಿಂದೂಗಳೇ ಹಾಗಿದ್ದರು. ಹೀಗಾಗಿ ಈ ಚಳುವಳಿಯು ಕೆಳವರ್ಗಗಳನ್ನು ಒಳಗೊಳ್ಳದೇ ಹೋಯಿತು. ಆದರೆ ಪಾಶ್ಚಾತ್ಯ ಪ್ರಭಾವ ಹೆಚ್ಚಾದಂತೆಲ್ಲಾ ಮಧ್ಯಮ ಮತ್ತು ಕೆಳವರ್ಗದವರು ಈ ಚಳುವಳಿಯಲ್ಲಿ ಆಸಕ್ತಿ ತೆಗೆದುಕೊಳ್ಳುವಂತಾಗಿ ಕ್ರಮೇಣ ತಮ್ಮ ಕೋಮುಗಳು ಅನುಭವಿಸುತ್ತಿದ್ದ ಅಮಾನುಷ ಯಾತನೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು. ಆದರೂ ದಲಿತರ ಏಳ್ಗೆಗಾಗಿ ಸಂಘಟಿತ ಕೆಲಸ ಪ್ರಾರಂಭವಾದದ್ದು ನಿಧಾನವಾಗಿಯೇ. ಕೆಳವರ್ಗಗಳಲ್ಲಿ ಮೊದಲಿಗರಾಗಿ ಈ ಕಾರ್ಯದಲ್ಲಿ ತೊಡಗಿಸಿ ಕೊಂಡವರೆಂದರೆ ಮಹಾರಾಷ್ಟ್ರದ ಮಹಾತ್ಮ ಜ್ಯೋತಿಬಾಪುಲೆಯವರಾಗಿದ್ದಾರೆ. ಅವರು ಆಗಿನ ವೈದಿಕ ಶಾಹಿಯನ್ನು ಖಂಡಿಸಿ ಜನ ಸಂಘಟನೆ ಮಾಡಿದರು. ಸಂಘಟನೆ, ಬರಹಗಳ ಮೂಲಕ ಆಂದೋಲನ ಪ್ರಾರಂಭಿಸಿದರು. ಆಗಿನ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ ಅರಸರಾದ ಪೇಶ್ವೆಗಳ ಕಾಲ ಆದರೂ ಅವರು ಕೆಳಜಾತಿಯವರಿಗೆ, ಮಹಿಳೆಯರಿಗೆ, ವಿಧವೆಯರಿಗೆ, ಅಸ್ಪೃಶ್ಯರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಧೀಮಂತರಾಗಿ ಹೋರಾಟ ಮಾಡಿದವರು.

ಅದೇ ತಾತ್ವಿಕ ಹಿನ್ನೆಲೆಯಲ್ಲಿ ದಲಿತರ ಪರನಿಂತು ಡಾ.ಬಿ.ಆರ್.ಅಂಬೇಡ್ಕರ್ ಹೋರಾಡಿದವರು. ಸ್ವಾತಂತ್ರ್ಯ ಹೋರಾಟಗಾರರ ಭೂರ್ಜ್ವಾ ಉದಾರವಾದಿ ನಾಯಕರುಗಳಾದ ಕಾಂಗ್ರೆಸ್ ಮುಖಂಡರೊಡನೆ ಸೆಣಸಬೇಕಾಯಿತು. ಯಾಕೆಂದರೆ ಕಾಂಗ್ರೆಸ್ಸಿಗರಿಗೆ ಸ್ವಾತಂತ್ರ್ಯ ಬಹುಮುಖ್ಯವಾಗಿತ್ತು. ಆದರೆ ಅಂಬೇಡ್ಕರರಿಗೆ ಸ್ವಾತಂತ್ರ್ಯ ಎನ್ನುವುದು ಕೇವಲ ರಾಜಕೀಯ ಅಧಿಕಾರದ ಹಸ್ತಂತರವಾಗಿರದೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿರಬೇಕೆಂದಿತ್ತು. ಅಂದರೆ ಸ್ವಾತಂತ್ರ್ಯ ದಲಿತರ ದಾಸ್ಯ ವಿಮೋಚನೆಯ ಸಂಗಡವೇ ಅಥವಾ ದಲಿತರ ಸಮಾನತೆಯ ಅವಕಾಶ–ಹಕ್ಕಿನೊಡನೆಯೇ ಬರಬೇಕೆಂದರು. ಆ ಸಂದರ್ಭದಲ್ಲಿ ಬ್ರಿಟಿಷ್ ವಿರೋಧ ನಿಲುವಿನ ಹಿನ್ನೆಲೆಯಲ್ಲಿ ಎಲ್ಲರ ಯೋಗ್ಯತೆ–ದೇಶಭಕ್ತಿಯಿಂದ ಅಳೆಯಲಾಗುತ್ತಿತ್ತು. ಅಂದಿನ ಪರಿಸರದಲ್ಲಿ ಸಾಮಾಜಿಕ, ಧಾರ್ಮಿಕ ಬದಲಾವಣೆಯ ಬಗ್ಗೆ ಹೆಚ್ಚು ಗಮನಹರಿಸಿದ ಅಂಬೇಡ್ಕರ್ ಅಪಾರ ಟೀಕೆ ಮೂದಲಿಕೆಗೆ ಗುರಿಯಾದರು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಕಾರ ಮತ್ತು ಸವರ್ಣೀಯ ಹಿಂದೂಗಳ ವಿರುದ್ಧವೂ ಹೋರಾಟ ಮಾಡಿದರು.

ಅಂಬೇಡ್ಕರ್ ದೃಷ್ಟಿಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಎಲ್ಲ ರೀತಿಯ ಆಂತರಿಕ ಶೋಷಣೆಯಿಂದಲೂ ವಿಮುಕ್ತಿ ಪಡೆಯುವ ಸಲುವಾಗಿ ನಡೆದ ಸಮಗ್ರ ಹೋರಾಟ ಮಾತ್ರ ನಿಜವಾದ ಸ್ವಾತಂತ್ರ್ಯ ಹೋರಾಟ. ಅದೇ ನಿಜವಾದ ರಾಷ್ಟ್ರೀಯತೆ ಎನ್ನುವುದಾಗಿತ್ತು. ಯಾಕೆಂದರೆ ಒಂದು ದೇಶ ತನ್ನ ಎಲ್ಲಾ ಪ್ರಜೆಗಳಿಗೂ ರಾಜಕೀಯ ಸ್ವಾತಂತ್ರ್ಯದೊಂದಿಗೆ ಸಾಮಾಜಿಕ–ಆರ್ಥಿಕ ಸ್ವಾತಂತ್ರ್ಯಗಳಿಸಿಕೊಟ್ಟರೆ ಮಾತ್ರ ಅದು ಒಂದು ರಾಷ್ಟ್ರವೆಂದು ಮತ್ತು

ಅದರ ಪ್ರಜೆಗಳೆಲ್ಲಾ ರಾಷ್ಟ್ರೀಯವಾದಿಗಳೆಂದು ಕರೆಯಿಸಿಕೊಳ್ಳುತ್ತಾರೆ. ಬಹಳ ಮುಖ್ಯವಾಗಿ ಆಗಬೇಕಾಗಿದ್ದು ರಾಜಕೀಯಏಕತೆ ಒಂದೇ ಅಲ್ಲ. ಅದರೊಂದಿಗೆ ಸಾಮಾಜಿಕಏಕತೆಯು ಮುಖ್ಯವೆಂದು ಅಭಿಪ್ರಾಯ ಪಡುತ್ತಾರೆ.

ಜಾತ್ಯಾಧಾರಿತ ಅಸಮಾನತೆ ತಾಂಡವವಾಡುತ್ತಿದ್ದ ವಸಾಹತುಶಾಹಿ ವಿರೋಧಿ ಭಾರತದಲ್ಲಿ ಪ್ರತಿಯೊಬ್ಬರಿಗೂ ರಾಷ್ಟ್ರೀಯತಾ ಭಾವನೆ ಇರದಿರಲು ಸಾಧ್ಯವಿಲ್ಲವೆನ್ನುವ ಮಾತ್ರ ಸತ್ಯಕ್ಕೆ ಹತ್ತಿರವಾದದ್ದಲ್ಲಿ ಎನ್ನಬಹುದು. ಏಕೆಂದರೆ ತನ್ನ ನಾಡಿನಲ್ಲೇ ತನ್ನನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲ್ಪಟ್ಟ ತಳಸಮುದಾಯಗಳು, ಅಲ್ಪಸಂಖ್ಯಾತರು ಹೇಗೆ ಹೆಮ್ಮೆಯಿಂದ ತಾನು ಈ ನಾಡಿನ ಪ್ರೇಮಿ, ದೇಶಭಕ್ತನೆಂದು ಹೇಳಿಕೊಳ್ಳಲು ಸಾಧ್ಯ ಎನ್ನುವ ಅಂಬೇಡ್ಕರ್‌ರವರ ಮಾತುಗಳು ಬಹಳ ಅರ್ಥಪೂರ್ಣವಾದವು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಅವರು ಅಂದಿನ ರಾಷ್ಟ್ರೀಯ ಚಳುವಳಿಯ ನಾಯಕತ್ವ ಏಕೆ ಸೇರಲಿಲ್ಲವೆಂದು ಸ್ಪಷ್ಟವಾಗುತ್ತದೆ.

ಹೀಗೆಂದ ಮಾತ್ರಕ್ಕೆ ಸಾಮ್ರಾಜ್ಯಶಾಹಿ ಬ್ರಿಟಿಷರ ವಿಷಯದಲ್ಲಿ ವಿರೋಧಿಯಲ್ಲವೆಂದು ಅರ್ಥೈಸಿಕೊಳ್ಳಬೇಕಿಲ್ಲ. ಅಂಬೇಡ್ಕರ್ ವಸಾಹತುಶಾಹಿ ಆಡಳಿತವನ್ನು ಖಂಡ-ತುಂಡವಾಗಿ ಖಂಡಿಸಿದ ಹಲವು ಉದಾಹರಣೆಗಳಿವೆ. ಬ್ರಿಟಿಷ್ ಸರಕಾರವನ್ನು ದುಂಡು ಮೇಜಿನ ಪರಿಷತ್ತಿನಲ್ಲಿ ಬ್ರಿಟಿಷ್ ಪ್ರಧಾನಿ ಮತ್ತವರ ಸಹೋದ್ಯೋಗಿಗಳ ಸಮ್ಮುಖದಲ್ಲಿ ತರಾಟೆಗೆ ತೆಗೆದುಕೊಂಡು, ಸ್ವಾತಂತ್ರ್ಯ ಭಾರತದ ಸಂವಿಧಾನದಲ್ಲಿ ಮಾತ್ರ ದಲಿತೋದ್ಧಾರ ಸಾಧ್ಯವೆಂದು ಹೇಳಿದ್ದಾರೆ. ಅಲ್ಲದೆ ಅವರು ಅನೇಕ ಸ್ವಾತಂತ್ರ್ಯ ಹೋರಾಟಗಾರರ ಪರವಾಗಿ ಕೋರ್ಟುಗಳಲ್ಲಿ ವಾದಿಸಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಅಂಬೇಡ್ಕರ್ ಸಮಾಜದಲ್ಲಿ ತೀರ ಕೆಳ ದರ್ಜೆಯಲ್ಲಿರುವ ವ್ಯಕ್ತಿಗಳು ಸ್ವಾತಂತ್ರ್ಯ ಸವಿಯುವುದು ಸಾಧ್ಯವಾಗಿಸಬಲ್ಲದ್ದು ಮಾತ್ರ ರಾಷ್ಟ್ರೀಯತೆ ಅದನ್ನೊಳಗೊಳ್ಳದ ರಾಷ್ಟ್ರೀಯತೆ ದಲಿತ-ಅಸ್ಪೃಶ್ಯರಿಗೇನು ಅದು ಸವರ್ಣೀಯರಿಗೆ ಹಕ್ಕು ಚಲಾಯಿಸುವ ಶಕ್ತಿಯಿರುವ ಮಾತ್ರ ಸ್ವಾತಂತ್ರ್ಯವಾಗುತ್ತದೆ ಎಂಬುದಾಗಿದೆ.

* * *

**ಉಲ್ಲೇಖಗಳು :**

ಜಯಪ್ರಕಾಶ್ ಬಂಜಗೆರೆ, 2000, *ಕನ್ನಡ ರಾಷ್ಟ್ರೀಯತೆ*, ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು.

ಡಾ.ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ-8, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

# ಅಧ್ಯಾಯ–2

## 1900 ರಿಂದ 1956ರ ವರೆಗಿನ ಸ್ಥಿತಿಗತಿ

ಲಕ್ಷ ಶಾಸ್ತ್ರಗಳೇಕೆ ಸಾಯಣ
ಲಕ್ಷ ಸೂತ್ರಗಳೇತಕೆ ।
ಮೋಕ್ಷ ಸಂಪಾದನಕೆ ನಿಶ್ಚಯ
ಮೋಕ್ಷ ಕೇಳು ಸ್ವತಂತ್ರತೆ

– ಶಾಂತಕವಿ

# ಅಧ್ಯಾಯ-2

## 1900 ರಿಂದ 1956ರ ವರೆಗಿನ ಸ್ಥಿತಿಗತಿ

ರಾಷ್ಟ್ರೀಯ ಚಳುವಳಿಗೆ ಸುಮಾರು ಒಂದು ಶತಮಾನಕ್ಕೂ ಅಧಿಕ ಇತಿಹಾಸವಿದೆ. ಇಷ್ಟು ದೀರ್ಘವಾದ ಇತಿಹಾಸವನ್ನು ಹೊಂದಿರುವ ಈ ಆಂದೋಲನದಲ್ಲಿ ಸುಮಾರು ಮೂರ್ನಾಲ್ಕು ತಲೆಮಾರುಗಳ ಜನ ಪಾಲ್ಗೊಂಡಿರಬಹುದು. ಕಾಲ, ದೇಶಗಳ ದೃಷ್ಟಿಯಿಂದಲೂ ಇದರ ವ್ಯಾಪ್ತಿ ವಿಶಾಲವಾದುದು. ಪ್ರಮುಖವಾದ ಹೋರಾಟಗಳೊಂದಿಗೆ ಸಾವಿರಾರು ಸಣ್ಣಪುಟ್ಟ ಹೋರಾಟಗಳು ನಡೆದಿವೆ. ಹೋರಾಟ ತೀವ್ರವಾದಾಗ ಬಂಧನ, ಗಡಿಪಾರು, ಮರಣದಂಡನೆ, ಗೋಲಿಬಾರು ಇವುಗಳು ಅಸಂಖ್ಯಾತವಾದವುಗಳು. ಇವೆಲ್ಲವುಗಳನ್ನೂ ಇಲ್ಲಿ ಅಧ್ಯಯನಕ್ಕೊಳಪಡಿಸಿಲ್ಲ. 1900 ರಿಂದೀಚೆಗೆ ಇಂದು ಕರ್ನಾಟಕ ಎಂದು ಗುರುತಿಸುವ ಪ್ರದೇಶದಲ್ಲಿ ಕರ್ನಾಟಕ ಪ್ರಾಂತ್ಯದ ಏಕೀಕರಣ ಮತ್ತು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ನಡೆದ ಪ್ರಮುಖ ರಾಜಕೀಯ ಘಟನೆಗಳನ್ನು ಮಾತ್ರ ಲಕ್ಷಿಸಲಾಗಿದೆ.

1900ರ ವೇಳೆಗಾಗಲೇ ಬ್ರಿಟಿಷರು ಕನ್ನಡ ಭಾಷಿಕರ ಬಹುತೇಕ ಭಾಗಗಳನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಿದ್ದರು. ಕೆಲವೊಂದು ಸ್ಥಳೀಯ ಸಂಸ್ಥಾನಗಳಿದ್ದರೂ ಅವು ಬ್ರಿಟಿಷರ ಅಧೀನದಲ್ಲಿದ್ದವು. ಇಂತಹ ಸಂದರ್ಭದಲ್ಲಿ ಕನ್ನಡ ಮಾತನಾಡುವ ಜನರ ಪ್ರದೇಶವು ಮುಖ್ಯವಾಗಿ ಮೈಸೂರು, ಮದ್ರಾಸ್, ಮುಂಬೈ ಹಾಗೂ ಹೈದ್ರಾಬಾದ್ ಸಂಸ್ಥಾನಗಳಲ್ಲಿ ಹಂಚಿ ಹೋಗಿತ್ತು. ಕೊಡಗು, ಸಂಡೂರು ಮುಂತಾದವು ಪ್ರತ್ಯೇಕವಾಗಿದ್ದವು. ಹೀಗೆ ಕನ್ನಡಿಗರ ಪ್ರದೇಶಗಳು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸೇರಿಹೋಗಲಿಕ್ಕೆ ಬ್ರಿಟಿಷರು ಸ್ಥಳೀಯ ಸಂಸ್ಥಾನಗಳೆಲ್ಲವನ್ನೂ ಒಂದೇ ಸಾರಿ ಗೆಲ್ಲಲಿಲ್ಲ. ಒಂದು ಸಂಸ್ಥಾನ ವಶವಾದ ಮೇಲೆ ಅಲ್ಲಿನ ಬೇರೆ ಬೇರೆ ಭಾಷೆಯ ಜನರನ್ನು ಈಗಾಗಲೇ ಇದ್ದಂತಹ ಆಡಳಿತ ವಿಭಾಗಕ್ಕೆ ಸೇರಿಸಿದರು. ಉದಾ: ಬಳ್ಳಾರಿ ಮತ್ತು ಮಂಗಳೂರು ಮುಂಬೈನಲ್ಲಿದ್ದರೆ ಚೆನ್ನಾಗಿತ್ತೆಂದು ನಾವು ತಿಳಿಯಬಹುದು. ಆದರೆ ಈ ಪ್ರದೇಶಗಳು ಬ್ರಿಟಿಷರ ವಶವಾದಾಗ ಮುಂಬೈ ಅವರಿಗೆ ದಕ್ಕಿರಲಿಲ್ಲ. ಆ ಕಾರಣಕ್ಕಾಗಿ ಗತ್ಯಂತರವಿಲ್ಲದೆ ಅವುಗಳನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿದರು. ಹೀಗೆ ಹಲವು ಭಾಗಗಳಾಗಿ ಹಂಚಿ ಹೋಗಿದ್ದ ಕನ್ನಡ ಭಾಷಿಕರ ಪ್ರದೇಶವು ವಿವಿಧ ಪ್ರಾಂತ್ಯಗಳಲ್ಲಿ ನೆಲೆನಿಲ್ಲುವಂತಾಯಿತು. ಹೀಗಾಗಿ ಒಟ್ಟು 21 ಭಾಗಗಳಲ್ಲಿ ಕನ್ನಡಿಗರು ಹಂಚಿ ಹೋಗಿದ್ದರು.

20ನೆಯ ಶತಮಾನದ ಆರಂಭದ ವೇಳೆಗೆ ರಾಷ್ಟ್ರೀಯ ಹೋರಾಟವು ಚುರುಕುಗೊಳ್ಳತೊಡಗಿತ್ತು. 1857ರಲ್ಲಾದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮತ್ತು 1885ರಲ್ಲಿ ಕಾಂಗ್ರೆಸ್ ಸ್ಥಾಪನೆಯು ಈ ಹೋರಾಟಕ್ಕೆ ಪ್ರೇರಕವಾಗಿದ್ದವು. ಆಗ ರಾಷ್ಟ್ರೀಯತೆ ಎನ್ನುವುದು

ರಾಜಕೀಯ ಕಲ್ಪನೆಯಾದರೂ, ಅದು ಅಭಿವ್ಯಕ್ತವಾಗಿದ್ದು ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಧಾರ್ಮಿಕ ವಲಯಗಳಲ್ಲಿ.

> "ವಸಹಾತುಶಾಹಿಯ ಎಲ್ಲ ಕುರೂಪಗಳನ್ನು ಕುರಿತು ಬೌದ್ಧಿಕ ತೀಕ್ಷ್ಣತೆಯಿಂದ ಅದನ್ನು ಬೆತ್ತಲುಗೊಳಿಸಿ, ಪರೋಕ್ಷವಾಗಿ ಪ್ರತಿರೋಧ ಒಡ್ಡಿದ ಮೊದಲಿಗರು ಸಾಹಿತಿಗಳು. ಅನಂತರ ಇತರರು. ವಿವಿಧ ಭಾಷೆ–ಸಂಸ್ಕೃತಿ–ಜನಾಂಗಗಳ ಭಾರತ ತನ್ನ ಸಾಹಿತ್ಯಾಭಿವ್ಯಕ್ತಿಯಲ್ಲಿ ಆಯಾ ಸಾಂಸ್ಕೃತಿಕ–ಪ್ರಾದೇಶಿಕ ವೈಶಿಷ್ಟ್ಯಗಳನ್ನು ಉಳಿಸಿಕೊಂಡೇ ದೇಶೀಯವೂ, ರಾಷ್ಟ್ರೀಯವೂ, ವಸಹಾತುಶಾಹಿ ವಿರೋಧಿಯೂ ಆಗಬೇಕಾಗಿತ್ತು ಮತ್ತು ಅದು ಅನಿವಾರ್ಯವೂ ಆಗಿತ್ತು. ಹಾಗೆ ನೋಡಿದರೆ ಭಾರತದ ಸಾಂಸ್ಕೃತಿಕ ಸ್ವಾಯತ್ತತೆ–ಸ್ವಾತಂತ್ರ್ಯಗಳನ್ನು ಕಾಯ್ದಶಕ್ತಿ, ವಿಶಾಲಾರ್ಥದಲ್ಲಿ ರಾಷ್ಟ್ರೀಯತೆಯೇ. ಈ ಪ್ರಯತ್ನ ತನ್ನ ಪರಿಸರವನ್ನು ಬಣ್ಣಿಸುವಲ್ಲಿ, ತನ್ನ ಭಾಷೆಯ ವಿಸ್ತೃತ ಬಳಕೆಯಲ್ಲಿ ತನ್ನ ಸುತ್ತಲಿನವರ ಪ್ರಗತಿಗಾಗಿ ದುಡಿಯುವಲ್ಲಿ ತನ್ನ ಪರಂಪರೆಯನ್ನು ಉಳಿಸಿ, ಬೆಳೆಸುವುದರಲ್ಲಿ ಮತ್ತು ಆ ಮೂಲಕ ತನ್ನ ಅನನ್ಯತೆಯನ್ನು ಗಟ್ಟಿಗೊಳಿಕೊಳ್ಳುವುದರಲ್ಲಿ ಕಂಡು ಬರುತ್ತದೆ." (ಚಂದ್ರಶೇಖರ ಎಸ್., 2005:7) ಇವುಗಳ ಚೌಕಟ್ಟಿನಲ್ಲಿ ಹುಟ್ಟಿದ್ದೇ ಏಕೀಕರಣ.

20ನೆಯ ಶತಮಾನದ ಆರಂಭದಲ್ಲಿ ಕನ್ನಡಿಗರು ಹಂಚಿ ಹೋಗಿದ್ದ ಪ್ರದೇಶಗಳನ್ನು ಸ್ಥೂಲವಾಗಿ ಎರಡು ಭಾಗಗಳಲ್ಲಿ ವಿಭಾಗಿಸಬಹುದು. ಮೊದಲನೆಯದು ಬ್ರಿಟಿಷರ ನೇರ ಆಡಳಿತದ ಭಾಗವಾದ ಕನ್ನಡಿಗರ ಪ್ರದೇಶಗಳು. ಎರಡನೆಯದು ಭಾರತೀಯ ದೇಶೀ ರಾಜರುಗಳ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶಗಳು. ಮೊದಲನೆಯ ಗುಂಪಿಗೆ ಮದ್ರಾಸ್, ಮುಂಬೈ ಮುಂತಾದ ಕನ್ನಡಿಗರ ಪ್ರದೇಶಗಳು ಸೇರಿದರೆ; ಎರಡನೆಯ ಗುಂಪಿಗೆ ಮೈಸೂರು, ಸಂಡೂರು, ಕೊಡಗು, ರಾಮದುರ್ಗ, ಸವಣೂರು ಮುಂತಾದ ಪ್ರದೇಶಗಳು ಸೇರುತ್ತವೆ.

> "ಮುಂಬಾಯಿ ಕರ್ನಾಟಕ ಪ್ರಾಂತ್ಯದ ಜನರು ಪ್ರಬಲರಾದ ಮರಾಠಿಗರು ಹಾಗೂ ಮರಾಠಿ ಭಾಷೆಯಿಂದ ಹೆಚ್ಚು ಸಂಕಷ್ಟಗೊಳಗಾದಂತೆ ಕಂಡರು. ಇಂಗ್ಲೀಷ್ ಭಾಷೆಯ ಪ್ರಭಾವದಿಂದ ನಲುಗುವುದು ಒಂದು ಬಗೆಯಾದರೆ, ಶಾಲೆ ಹಾಗೂ ಕಾಲೇಜುಗಳಲ್ಲಿ ಮರಾಠಿ ಭಾಷೆಯ ಹೇರಿಕೆಯಿಂದ ಇನ್ನೊಂದು ರೀತಿಯಲ್ಲಿ ಬಳಲಿದರು. ಇದೂ ಸಾಲದೆಂಬಂತೆ ಈ ಪ್ರದೇಶವು 'ದಕ್ಷಿಣ ಮರಾಠ ದೇಶ'ವೆಂದು ಕರೆಯಲ್ಪಟ್ಟಿತು. ಹೈದರಾಬಾದ ಕರ್ನಾಟಕ ಪ್ರದೇಶವನ್ನು ಇನ್ನೂ ದಮನಕಾರಿ ರೀತಿಯಲ್ಲಿ ಹೈದರಾಬಾದಿನ ನಿಜಾಮ ಆಳುತ್ತಿದ್ದ. 1940ರ ತನಕ ಈ ರಾಜ್ಯದಲ್ಲಿ ರಾಜಕೀಯ ಚಟುವಟಿಕೆಯ ಮಾತಂತಿರಲಿ, ಯಾವುದೇ ಬಗೆಯ ಸಾಂಸ್ಕೃತಿಕ ಅಥವಾ ಸಾಮಾಜಿಕ ಚಟುವಟಿಕೆಗೂ ಆಸ್ಪದವಿರಲಿಲ್ಲ. ಈ ಪ್ರದೇಶಗಳಲ್ಲಿ ಜನರು ತಾವು ಶೋಷಣೆಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ

ಬದುಕತೊಡಗಿದರು. ಮದರಾಸು ಪ್ರಾಂತ್ಯದಲ್ಲಿ ಕನ್ನಡಿಗರು, ತೆಲುಗರು ಹಾಗೂ ತಮಿಳರ ದ್ವಿವಿಧವಾದ ಹೊರೆಯಿಂದ ನಲುಗಿದರು. ಜನರಲ್ಲಿ ಈ ಬಗೆಯಾದ ಭಾವನೆ ಇದ್ದದ್ದು ಸಹಜವಾದರೂ ವಸ್ತುಸ್ಥಿತಿ ಅಷ್ಟು ಗಂಭೀರವಾಗಿರಲಿಲ್ಲ, ವಸಹಾತು ನೀತಿಯೇ ಒಡೆದು ಆಳುವುದಾಗಿದ್ದರಿಂದ ಆ ಸನ್ನಿವೇಶ ನಿರ್ಮಾಣವಾಗಿತ್ತು. ಕರ್ನಾಟಕದ ಜನತೆಯ ಹಾಗೆ ನಿಕೃಷ್ಟವಾದ ರೀತಿಯಲ್ಲಿ ರಾಷ್ಟ್ರದ ಯಾವುದೇ ಪ್ರದೇಶದ ಜನರು ಒಡೆದು ಹೋಗಿರಲಿಲ್ಲ." (ಚಂದ್ರಶೇಖರ್ ಎಸ್, 2005:10)

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಜನಜೀವನ ಕಷ್ಟಕರವಾಗಿತ್ತು. ಅಲ್ಲಿ ನಿಜಾಮನ ವಿರುದ್ಧ ಬಂಡೇಳುವುದು ಅಷ್ಟು ಸುಲಭವಾಗಿರಲಿಲ್ಲ. ಅಂತಹವರನ್ನು ಗಡಿಪಾರು ಮಾಡಲಾಗುತ್ತಿತ್ತು. ಹಿಂದೂ ಪತ್ರಿಕೆಯಲ್ಲಿ ನಿಜಾಮನ ಕಾರ್ಯವೈಖರಿಯನ್ನು ಕುರಿತು 'ಇಂಡಿಯನ್ ಡಾಯರ್' ಎಂದು ಲೇಖನ ಬರೆದಿದ್ದ ಪಂ. ತಾರಾನಾಥರನ್ನು ಗಡಿಪಾರು ಮಾಡಿದ್ದನ್ನು ಈ ಸಂದರ್ಭಲ್ಲಿ ನೆನಪಿಸಿಕೊಳ್ಳಬಹುದು. ಇಂತಹ ಸಮಯದಲ್ಲಿ ಆರ್ಯಸಮಾಜವು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ರಾಷ್ಟ್ರೀಯ ಶಾಲೆಗಳನ್ನು ಪ್ರಾರಂಭಿಸಿತು. ಆ ಮೂಲಕ ರಾಷ್ಟ್ರೀಯ ಜಾಗೃತಿಯನ್ನು ಉಂಟು ಮಾಡುವುದು ಅದರ ಉದ್ದೇಶವಾಗಿತ್ತು. ಆಗ ಚಿಂಚೋಳಿ, ಕಲ್ಬುರ್ಗಿ, ರಾಯಚೂರು ಮತ್ತು ಕುಕನೂರುಗಳಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು. ಹಳೆಯ ಮೈಸೂರು ಭಾಗದಲ್ಲಿ ಆ್ಯನಿಬೆಸೆಂಟ್‌ರ ನೇತೃತ್ವದಲ್ಲಿ ಥಿಯೊಸಾಫಿಕಲ್ ಸೊಸೈಟಿ ರಾಷ್ಟ್ರೀಯ ಭಾವನೆಗಳನ್ನು ಬೆಳೆಸಲು ಪ್ರಯತ್ನಿಸಿತು.

ಮೈಸೂರು ಪ್ರಾಂತ್ಯವು ಸ್ಥಳೀಯ ಕನ್ನಡಿಗರ ಆಡಳಿತದಲ್ಲಿದ್ದುದರಿಂದ ಅಲ್ಲಿ ಕನ್ನಡಿಗರ ಸ್ಥಿತಿಗತಿ ಇತರ ಪ್ರಾಂತ್ಯಗಳ ಜನರಿಗಿಂತ ಸ್ವಲ್ಪ ಸುಧಾರಿಸಿದ್ದವು. ಆದರೆ ಉಳಿದ ಭಾಗಗಳಲ್ಲಿ ಅಂದರೆ ಹೈದ್ರಾಬಾದ್, ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಿಗೆ ಸೇರಿಸಲ್ಪಟ್ಟಿದ್ದ ಪ್ರದೇಶಗಳು ಮಾತ್ರ ತೀರಾ ಹಿಂದುಳಿದವುಗಳಾಗಿದ್ದು, ಆ ಪ್ರಾಂತ್ಯಗಳಲ್ಲಿನ ಕನ್ನಡಿಗರನ್ನು ನಿರ್ಲಕ್ಷ್ಯ ಭಾವನೆಯಿಂದ ನೋಡಲಾಗುತ್ತಿತ್ತು. ಮದ್ರಾಸ್ ಪ್ರಾಂತ್ಯದಲ್ಲಿ ತಮಿಳರ ಪ್ರಾಬಲ್ಯ, ಮುಂಬೈ ಪ್ರಾಂತ್ಯದಲ್ಲಿ ಮರಾಠಿಗರ ಪ್ರಾಬಲ್ಯ ಹಾಗೂ ಹೈದ್ರಾಬಾದ್ ಪ್ರಾಂತ್ಯದಲ್ಲಿ ಅಲ್ಪಸಂಖ್ಯಾತರಾಗಿದ್ದ ಮುಸ್ಲಿಂರ ಪ್ರಾಬಲ್ಯ ಅಧಿಕವಾಗಿದ್ದವು. ಇವರೆಲ್ಲರ ಮಧ್ಯ ಕನ್ನಡಿಗರು ಶೋಷಣೆಗೆ ಒಳಗಾಗಿದ್ದರು. ಕನ್ನಡಿಗರ ಕೂಗನ್ನು ಕೇಳುವವರು ಯಾರೂ ಇದ್ದಿಲ್ಲ.

ಇಂತಹ ಸಂದರ್ಭದಲ್ಲಿ ಭಾಷಾವಾರು ಏಕೀಕರಣದ ಕೂಗು ಆರಂಭವಾಯಿತು. ಆದರೆ ಇಲ್ಲಿ ಗಮನಿಸತಕ್ಕ ಒಂದು ಗಮನಾರ್ಹ ಅಂಶವೆಂದರೆ, ಈ ಮೊದಲೇ ಕನ್ನಡ ಭಾಷೆಯನ್ನಾಡುವ ಜನರ ಪ್ರದೇಶಗಳನ್ನು ಒಂದೇ ಪ್ರಾಂತ್ಯದಡಿಯಲ್ಲಿ ತರಬೇಕೆಂದು ಬ್ರಿಟಿಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಸೂಚಿಸಿದ್ದ. ಆತ ಆಗ ಕೊಟ್ಟ ಕಾರಣ ಈ ಮುಂದಿನಂತಿದೆ.

"ಈ ಪ್ರದೇಶಗಳನ್ನು ಮದರಾಸು ಆಡಳಿತಕ್ಕೆ ವರ್ಗಾಯಿಸುವುದರಿಂದ ಅಲ್ಲಿ ಹಳೆಯ ಮರಾಠರ ಆಳಿಕೆಯ ನೆನಪು ಉಳಿಯದಂತೆ ಮಾಡಲು ಸಾಧ್ಯವಾಗುತ್ತದೆ. ಈ ಪ್ರದೇಶಗಳಲ್ಲಿ ಪ್ರಭಾವಶಾಲಿಗಳಾದವರು ಕೊಂಕಣದ ಜನ; ಬಹುಸಂಖ್ಯಾತ ಕನ್ನಡಿಗರ ಆಶೋತ್ತರಗಳನ್ನು ಗಮನಕ್ಕೆ ತಂದುಕೊಳ್ಳಲಾರದೆ ಅಲ್ಪ ಸಂಖ್ಯಾತರಾದ ಆಗಂತುಕರು; ಕೃಷ್ಣಾ ನದಿಯನ್ನು ದಾಟಿ ಬಂದು ನೆಲಸಿ, ಜಹಗೀರುದಾರರಾಗಿ ಜರ್ಬು ಮಾಡಿದವರು. ಈಗ ಹೇಗೂ ಈ ಪ್ರದೇಶ ಮದರಾಸಿನ ದಂಡಿನ ವಶದಲ್ಲಿದೆ. ಪೌರಾಧಿಕಾರವೂ ಮದರಾಸು ಸರಕಾರದ ವಶಕ್ಕೆ ಬಂದರೆ ಆಡಳಿತವು ಸುಗಮವಾಗುತ್ತದೆ. ಧಾರವಾಡ ಜಿಲ್ಲೆಯ ಪೂರ್ವಕ್ಕೂ ಪಶ್ಚಿಮಕ್ಕೂ ಮದರಾಸಿನ ಜಿಲ್ಲೆಗಳು ಹೊಂದಿಕೊಂಡಿವೆ. ಆದ್ದರಿಂದ ಆಡಳಿತ ಸೌಕರ್ಯಕ್ಕೋಸ್ಕರ ಈ ವರ್ಗಾವಣೆ ವಿಹಿತವಾದದ್ದು. ಮರಾಠರು ದಾಳಿಯಿಟ್ಟು ಬಂದು ಪ್ರಬಲರಾಗಿದ್ದರೂ ಧಾರವಾಡವು ಮರಾಠಾ ಸೀಮೆಯಲ್ಲ. ಈಗಾಗಲೆ ಮದರಾಸಿನ ವಶದಲ್ಲಿರುವ ಕನ್ನಡದ ಪ್ರದೇಶಗಳೊಂದಿಗೆ ಪ್ರತಿನಿತ್ಯದ ಸಂಬಂಧವುಳ್ಳದ್ದು ಈ ಧಾರವಾಡ ಸೀಮೆ; ಮತ್ತು ಮದರಾಸಿನ ವಶದಲ್ಲಿರುವ ಕನ್ನಡ ಪ್ರದೇಶಗಳಿಗೂ ಬಳ್ಳಾರಿ, ಸೊಂಡ(ಸೊಂಡೂರು) ಮತ್ತು ಮೈಸೂರು ಸೀಮೆಗಳಿಗೂ ಯಾವ ದೃಷ್ಟಿಯಿಂದಲೂ ವ್ಯತ್ಯಾಸವಿಲ್ಲ. ಆಡುವ ಭಾಷೆ ಕನ್ನಡ. ಸ್ವಾಭಾವಿಕವಾಗಿ ಒಂದೇ ಆಗಿರುವ ಸೀಮೆಗೆ ಸೇರಬೇಕಾದವರನ್ನು ಆ ಸೀಮೆಗೆ ಸೇರಿಸುವುದರಿಂದ ಜನ ಸಂತೋಷಪಡುತ್ತಾರೆ. ಹೀಗೆ ಮಾಡದೆ ಮರಾಠರ ಪ್ರಭಾವ ಬೆಳೆಯುವುದಕ್ಕೆ ಆಸ್ಪದ ಕೊಡುವ ಮತ್ತು ಸ್ವಾಭಾವಿಕವಾದ ನಂಟು ಇಲ್ಲದ ಮುಂಬಯಿ ಪ್ರಾಂತ್ಯಕ್ಕೆ ಧಾರವಾಡ ಸೀಮೆಯನ್ನು ಸೇರಿಸುವುದು ಸೂಕ್ತವಲ್ಲ. ಈ ಒಂದು ಶಾಶ್ವತವಾದ ಏಕೀಕರಣವನ್ನು ಸಾಧಿಸುವುದರಲ್ಲಿ ಒಟ್ಟು ಕನ್ನಡ ಜನದ ಹಿತದೃಷ್ಟಿ ಎದ್ದು ಕಾಣುತ್ತದೆ. ನಮ್ಮ ಯೋಗಕ್ಷೇಮಕ್ಕೋಸ್ಕರ ಪುಣೆ ಮುಂಬಯಿ ನಗರಗಳ ಕಡೆ ನೋಡುವ ಮರಾಠಾ ಸರದಾರರ ಹಿತರಕ್ಷಣೆಗಿಂತ ಈ ಒಟ್ಟು ಜನಹಿತದ ದೃಷ್ಟಿ ಮೇಲ್ಪಟ್ಟದ್ದು." (ವೆಂಕಟಚಲಪತಿ, 2006:321)

ಈ ದೀರ್ಘವಾದ ಉದ್ಧರಣೆಯನ್ನು ನೋಡಿದಾಗ ಬಹುಶಃ ಆ ಬ್ರಿಟಿಷ್ ಅಧಿಕಾರಿಯ ಈ ಹೇಳಿಕೆಯು ಕನ್ನಡ ಭಾಷಿಕರ ಪ್ರದೇಶವನ್ನು ಒಂದೇ ಪ್ರಾಂತ್ಯದಡಿಯಲ್ಲಿ ತರಬೇಕೆಂಬುದು ಸ್ಪಷ್ಟಪಡಿಸುತ್ತದೆ. ಅವರ ಈ ಉದ್ದೇಶದ ಹಿಂದೆ ಬೇರೆ ಕಾರಣಗಳಿದ್ದರೂ ಸಹ ಈ ತೀರ್ಮಾನವು ಕನ್ನಡಿಗರಿಗೆ ಒಳಿತಾಗುತ್ತಿತ್ತು. ಕನ್ನಡಿಗರು ಒಂದೇ ಆಡಳಿತದ ವ್ಯಾಪ್ತಿಗೆ ಬರುವುದರಿಂದ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು, ಕನ್ನಡಿಗರಲ್ಲಿ ಸುಲಭವಾಗಿ ಒಗ್ಗಟ್ಟು ಮೂಡಲು ಸಹಾಯಕವಾಗುತ್ತಿತ್ತು. ಆದರೆ ಆ ಸಂದರ್ಭದಲ್ಲಿ ಸರ್ಕಾರ ಇದನ್ನು ಪರಿಗಣಿಸಲಿಲ್ಲ.

ಕರ್ನಾಟಕದಲ್ಲಿ ಏಕೀಕರಣದ ಜೊತೆಜೊತೆಗೆ ರಾಷ್ಟ್ರೀಯ ಹೋರಾಟವು ನಡೆದಿತ್ತು. ಇಂಗ್ಲೀಷ್ ಶಿಕ್ಷಣದ ಪ್ರಭಾವದಿಂದ ರಾಷ್ಟ್ರೀಯತೆಯ ಕಲ್ಪನೆಯು ಚಿಗುರೊಡೆಯಿತು. ಆಲೂರು ವೆಂಕಟರಾಯ, ಶಾಂತಕವಿ, ಗಳಗನಾಥ, ಕೆ.ವಾಸುದೇವಾಚಾರ್ಯ, ಸುಬೋಧ ರಾಮರಾಯರು, ಬಿ.ವೆಂಕಟಾಚಾರ್ಯರು ಮುಂತಾದವರು ಆರಂಭ ಹಂತದಲ್ಲಿ ರಾಷ್ಟ್ರೀಯ ಭಾವನೆಗಳನ್ನು ಮೂಡಿಸಿದರು. ಬಂಗಾಲ ವಿಭಜನೆಯ ನಂತರ ರಾಷ್ಟ್ರೀಯ ಚಳುವಳಿಯೊಂದಿಗೆ ಏಕೀಕರಣ ಚಳುವಳಿಯೂ ಆರಂಭಗೊಂಡಿತು. ಮುಂಬೈ ಕರ್ನಾಟಕ ಭಾಗದಲ್ಲಿ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು. 1907ರ ಸೂರತ್ ಅಧಿವೇಶನಕ್ಕೆ ಆಲೂರು ವೆಂಕಟರಾಯರು, ಅಣ್ಣಾಚಾರ್ಯ ಹೊಸಕೇರಿ, ಶ್ರೀನಿವಾಸರಾವ ಕೌಜಲಗಿ, ಗಂಗಾಧರರಾವ್ ದೇಶಪಾಂಡೆಯವರು ಹೋಗಿದ್ದರು. ಅಲ್ಲಿ ಕಾಂಗ್ರೇಸ್ ಪಕ್ಷ ಇಬ್ಭಾಗವಾಯಿತು. ಆಗ ಕರ್ನಾಟಕದಿಂದ ಹೋಗಿದ್ದವರು ತಿಲಕರ ಪರವಾಗಿದ್ದರು. ತಿಲಕರು ಕರ್ನಾಟಕಕ್ಕೆ ಆಗಾಗ ಭೇಟಿ ನೀಡುತ್ತಿದ್ದರು. 1905ರಲ್ಲಿ ಬಳ್ಳಾರಿಗೆ, 1906ರಲ್ಲಿ ಬೆಳಗಾವಿ ಮತ್ತು ಗುರ್ಲ ಹೊಸೂರುಗಳಿಗೆ ಭೇಟಿ ನೀಡಿದ್ದರು. ಅವರ ಪ್ರಭಾವ ಕರ್ನಾಟಕದ ರಾಷ್ಟ್ರೀಯ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ನಾಯಕರ ಮೇಲೆ ಆಗಿದ್ದಂತಿದೆ. ಮುಂದೆ ಹೋಂರೂಲ್ ಲೀಗ್‌ನ ಶಾಖೆಗಳನ್ನು ಆರಂಭಿಸಲು 1916ರಲ್ಲಿ ಬೆಳಗಾವಿ, ಸಂಕೇಶ್ವರ ಮತ್ತು ನಿಪ್ಪಾಣಿಗಳಿಗೂ ಸಹ ಬಂದಿದ್ದರು.

ಉತ್ತರ ಕರ್ನಾಟಕ ಪ್ರದೇಶವನ್ನು ದಕ್ಷಿಣ ಮಹಾರಾಷ್ಟ್ರ ಎಂದು ಕರೆಯಲಾಗುತ್ತಿತ್ತು. ಎಲ್ಲಿ ನೋಡಿದರೂ ಮರಾಠಿಯೇ ತುಂಬಿಕೊಂಡಿತ್ತು. ಧಾರವಾಡದಲ್ಲಿಯೂ ಅನೇಕ ಮರಾಠಿ ಶಾಲೆಗಳು ವಿಜೃಂಭಿಸುತ್ತಿದ್ದವು. ಅಂತಹ ಸಂದರ್ಭದಲ್ಲಾದ ಇನ್ನೊಂದು ಮುಖ್ಯ ಬೆಳವಣಿಗೆಯೆಂದರೆ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆದದ್ದು. ಈ ಕೆಲಸವನ್ನು ಡಬ್ಲ್ಯೂ.ಎ.ರಸೆಲ್‌ರು ಆರಂಭಿಸಿದರು. ಆತನು ಅಸಿಸ್ಟಂಟ್ ಕಲೆಕ್ಟರ್ ಆಗಿ ಬಂದು ಈ ಭಾಗದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಸ್ಥಾಪಿಸಿದರು.

> "ನಿಜವಾದ ಶಿಕ್ಷಣ ಪ್ರಸಾರವಾಗಬೇಕಾದರೆ, ನಾಡಿನ ಮಣ್ಣಿನ ಮಕ್ಕಳಾದ ಒಕ್ಕಲಿಗರು, ವೀರಶೈವರು ಮತ್ತು ವರ್ತಕರಲ್ಲಿ ಶಿಕ್ಷಣ ಹೆಚ್ಚಬೇಕೆಂಬುವ ವಿಚಾರವನ್ನು ಮೊದಲಿಗೆ ಕಂಡುಹಿಡಿದವರು ರಸೆಲ್‌ರವರು. ಆನುವಂಶಿಕವಾಗಿ ಶಾಲೆಗಳಿಗೆ ಹೋಗುತ್ತ ಬಂದು ನೌಕರಿಯನ್ನು ಮಾಡುತ್ತಿದ್ದ ಬ್ರಾಹ್ಮಣ ವರ್ಗದಲ್ಲಿ ಮಾತ್ರ ಶಿಕ್ಷಣ ಹೆಚ್ಚಾದರೆ ಶಿಕ್ಷಣ ಪ್ರಸಾರವಾದಂತಲ್ಲ. ಒಕ್ಕಲು ಮಕ್ಕಳು ಮತ್ತು ವರ್ತಕ ವರ್ಗದಲ್ಲಿ ಶಿಕ್ಷಣ ಹೆಚ್ಚಾಗಬೇಕು." (ಧಾರವಾಡಕರ ರಾ.ಯ., 1975:85)

ಪಾರಂಪರಿಕವಾಗಿ ಬಂದಿದ್ದ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕೆನ್ನುವುದು ರಸೆಲ್‌ರ ಆಶಯವಾಗಿತ್ತು. ಆನುವಂಶಿಕವಾಗಿ ಬೆಳೆದು ಬಂದಿರುವ ಶಿಕ್ಷಣ ಪದ್ಧತಿಯು ಹೋಗಿ ಶಿಕ್ಷಣವು ಸಾರ್ವತ್ರಿಕವಾಗಬೇಕೆಂಬುದನ್ನು ರಸೆಲ್ ಮನಗಂಡಿದ್ದರು. ಕನ್ನಡ ಭಾಷೆಗೆ

ಒಂದು ಸ್ಥಾನಮಾನವನ್ನು ದೊರಕಿಸಿಕೊಟ್ಟರು. ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಸರಕಾರದಿಂದ ಹಣಕಾಸಿನ ನೆರವು ಕೊಡಿಸಿದರು. ಅಲ್ಲದೆ ಸ್ವತಃ ತಮ್ಮ ಹಣವನ್ನೂ ಸಹಾಯ ಮಾಡಿದರು. ರಸೆಲ್‌ನಂತಹ ಆಂಗ್ಲ ಅಧಿಕಾರಿಗಳ ಸಹಕಾರದಿಂದ ದೇಶೀಯ ವಿದ್ವಾಂಸರು ಕೂಡ ಇಂತಹ ಕಾರ್ಯಗಳಲ್ಲಿ ದುಡಿಯುತ್ತಿದ್ದರು. ಆದರೆ ಆ ಸಂದರ್ಭದಲ್ಲಿ ಸಮಗ್ರವಾದ ಕನ್ನಡ ಪ್ರಾಂತ್ಯ ರಚನೆಯಾಗಬೇಕು, ಅದರ ರೂಪುರೇಷಗಳು ಯಾವುವು ಎಂಬುದರ ಕುರಿತು ಸ್ಪಷ್ಟವಾದ ಚಿತ್ರಣ ಇರಲಿಲ್ಲ.

ಕರ್ನಾಟಕದಲ್ಲಿ ಏಕೀಕರಣದ ಧ್ವನಿ ಮೊದಲು ಮೊಳಗಿದ್ದು ಉತ್ತರ ಕರ್ನಾಟಕ ಭಾಗದಲ್ಲಿ. ಬಂಗಾಳದ ವಿಭಜನೆಯ ನಂತರ ಅಲ್ಲಿನ ಜನರು ಹೋರಾಟದ ಮೂಲಕ ಮತ್ತೆ ಬಂಗಾಳವನ್ನು ಹೊಂದಾಗುವಂತೆ ಮಾಡಿದರು. ಇದರ ಪ್ರಭಾವ ಮತ್ತು ಪ್ರೇರಣೆಯಿಂದಾಗಿ ಏಕೀಕರಣ ಕೂಗು ಮತ್ತಷ್ಟು ಚುರುಕಾಗತೊಡಗಿತ್ತು. ಮರಾಠಿಗರ ಪ್ರಾಬಲ್ಯದಿಂದ ಬೇಸತ್ತು ಹೋಗಿದ್ದರು. ಉತ್ತರ ಕರ್ನಾಟಕ ಜನರಲ್ಲಿ ಕನ್ನಡ ಭಾಷಿಕರೆಲ್ಲ ಒಂದಾದರೆ ಆ ಸಂದರ್ಭದಲ್ಲಿ ತಮಗೆದುರಾಗುವ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದು ಎಂಬ ಅಭಿಪ್ರಾಯ ಉಂಟಾಯಿತು. ಈ ವೇಳೆಗಾಗಲೇ ಪುಣೆಯಲ್ಲಿ ಶಿಕ್ಷಣಾರ್ಥಿಗಳಾಗಿದ್ದ ಕನ್ನಡಿಗರನ್ನು ಅಲ್ಲಿನ ಮರಾಠಿಗರು 'ಕಾನಡಿ ಅಪ್ಪ' ಎಂದು ಗುರುತಿಸುತ್ತಿದ್ದರು. ಈ ಗುರುತು ಕನ್ನಡ ಶಿಕ್ಷಣಾರ್ಥಿಗಳು ಜಾತಿ, ಮತ, ಪಂಥಗಳನ್ನು ಮೀರಿ ಒಂದಾಗುವುದಕ್ಕೆ ಉತ್ತೇಜನಕಾರಿಯಾಯಿತು. ಇದು ಮುಂದಿನ ದಿನಗಳಲ್ಲಿ ಸ್ವ-ದ ನಿರ್ವಚನಕ್ಕೆ ದಾರಿ ಮಾಡಿಕೊಟ್ಟಿತು. ಹೀಗೆ ಕನ್ನಡಿಗರು ತಾವೆಲ್ಲ ಒಂದೇ ಎನ್ನುವ ಭಾವನೆಯನ್ನು ಬೆಳೆಸಿಕೊಂಡಾಗ ಕನ್ನಡ ಭಾಷಿಕರ ಮೇಲಾಗುತ್ತಿದ್ದ ದೌರ್ಜನ್ಯವನ್ನು ತಡೆಯಲಿಕ್ಕೆ ಸಾಧ್ಯ ಎನ್ನುವುದನ್ನು ಅರಿತರು. ಹಾಗೆಯೇ ಭಾಷಾವಾರು ಏಕೀಕರಣವಾದರೆ, ಇಂಗ್ಲೀಷ್ ಭಾಷೆ ಮತ್ತು ವಸಾಹತುವಾದಿ ಸಂಸ್ಕೃತಿಗಳಿಗೆ ದೇಶೀಯರು ಮಾರುಹೋಗದಂತೆ ತಡೆಯಬಲ್ಲದೆಂಬ ಅಂಶಗಳೂ ಸೇರಿದ್ದವು.

19ನೆಯ ಶತಮಾನದ ಕೊನೆಯ ದಶಕದಲ್ಲಿ ವ್ಯಕ್ತಿಗತವಾಗಿ ಹುಟ್ಟಿಕೊಂಡ ಏಕೀಕರಣ ಪ್ರಜ್ಞೆಯು, 20ನೆಯ ಶತಮಾನದ ಎರಡನೆಯ ದಶಕದಲ್ಲಿ ಸಾಂಘಿಕ ರೂಪ ಪಡೆದುಕೊಂಡಿತು. ರಾ.ಹ.ದೇಶಪಾಂಡೆಯವರ ಒತ್ತಾಸೆಯಿಂದ 1890ರಲ್ಲಿ ಹುಟ್ಟಿದ 'ಕರ್ನಾಟಕ ವಿದ್ಯಾವರ್ಧಕ ಸಂಘ'ವು ಮೊದಲು ಕನ್ನಡ ರಕ್ಷಣೆಯ ಮಾತುಗಳನ್ನಾಡುತ್ತಾ, ಬರುಬರುತ್ತಾ ಏಕೀಕರಣ ಚಳುವಳಿಗೆ ಪ್ರಮುಖವಾದ ಧ್ವನಿಯಾಯಿತು. ವಿದ್ಯಾವರ್ಧಕ ಸಂಘದಿಂದ ಹೊರಬರುತ್ತಿದ್ದ 'ವಾಗ್ಭೂಷಣ' ಪತ್ರಿಕೆಯ ಕೆಲಸವೂ ಈ ಸಂದರ್ಭದಲ್ಲಿ ಗಮನಾರ್ಹವಾದುದು. ನಾಡಿನ ಪರಂಪರೆಯನ್ನು ಹೊಗಳುತ್ತ ಸಮಕಾಲೀನ ಸಂದರ್ಭದಲ್ಲಿ ಎದುರಾಗುತ್ತಿದ್ದ ಸಮಸ್ಯೆ ಸವಾಲುಗಳನ್ನು ಎದುರಿಸಲು ಆ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು ಜನರನ್ನು ಸಿದ್ಧರನ್ನಾಗಿಸುವ ಕೆಲಸ ಮಾಡಿದವು. ಮುಂದೆ ಇದೇ ದಾರಿಯಲ್ಲಿ ನಡೆದದ್ದು 1915ರಲ್ಲಿ ಸ್ಥಾಪಿತವಾದ ಕರ್ನಾಟಕ(ಕನ್ನಡ) ಸಾಹಿತ್ಯ ಪರಿಷತ್ತು.

ವಿ.ಪಿ.ಮಾಧವರಾವ್ ಅವರ ಅಧ್ಯಕ್ಷತೆಯಲ್ಲಿ 1920ರಲ್ಲಿ ಧಾರವಾಡದಲ್ಲಿ ನಡೆದ ಕರ್ನಾಟಕ ರಾಜ್ಯ ರಾಜಕೀಯ ಸಮ್ಮೇಳದ ಫಲವಾಗಿ ಸು. 800 ಜನರು ನಾಗಪುರ ಕಾಂಗ್ರೇಸ್ ಅಧಿವೇಶನಕ್ಕೆ ಹೋದರು. ಅಲ್ಲಿ ಪ್ರತ್ಯೇಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಸ್ಥಾಪಿಸಿಕೊಳ್ಳಲು ಅನುಮತಿ ಸಿಕ್ಕಿತು. ಗಂಗಾಧರರಾವ್ ದೇಶಪಾಂಡೆ ಕೆ.ಪಿ.ಸಿ.ಸಿ.ಯ ಪ್ರಥಮ ಅಧ್ಯಕ್ಷರಾದರು. ಅದೇ ವರ್ಷ ಗಾಂಧೀಜಿಯವರು ಕರ್ನಾಟಕ ಪ್ರವಾಸ ಕೈಗೊಂಡು ಮಂಗಳೂರು, ಬೆಂಗಳೂರು, ಬೆಳಗಾವಿ, ಹಳಿಯಾಳ, ಧಾರವಾಡ ಮತ್ತು ಗದಗಗಳಿಗೆ ಭೇಟಿ ನೀಡಿದರು. ಆಗ ಅಲಿ ಸೋದರರೂ ಗಾಂಧೀಜಿಯವರ ಜೊತೆಗಿದ್ದರು. ಖಿಲಾಫತ್ ಚಳುವಳಿಯ ಪರಿಣಾಮವಾಗಿ ಅನೇಕ ಜನ ಮುಸ್ಲಿಮರು ಕಾಂಗ್ರೆಸ್ಸನ್ನು ಸೇರಿದರು.

ಈ ವೇಳೆಗಾಗಲೆ ಭಾಷೆಯ ಮೇಲಿನ ಅಭಿಮಾನವು ಹೆಚ್ಚಾಗ ತೊಡಗಿತು. ಪರಿಣಾಮವಾಗಿ ಹಲವಾರು ಜನರು ಭಾಷಿಕವಾಗಿ ಒಂದಾಗಬೇಕೆಂಬ ಕರೆಗೆ ಬದ್ಧರಾದರು. ಅಂಥವರಲ್ಲಿ ಮೊದಲ ಸಾಲಿಗೆ ನಿಲ್ಲುವವರು ಆಲೂರು ವೆಂಕಟರಾರು. ರಾಷ್ಟ್ರೀಯ ಹೋರಾಟದಲ್ಲಿ ನಿರತರಾಗಿದ್ದ ವೆಂಕಟರಾಯರು, ಬೇರೆ ಬೇರೆ ಭಾಷೆಯ ಜನರು ತಮ್ಮ ತಮ್ಮ ಪರಂಪರೆಯ ಮೂಲಕ ತಮ್ಮ ಗುರುತನ್ನು ಕಂಡುಕೊಳ್ಳಲು ಪ್ರಯತ್ನಿಸುವುತ್ತಿರುವುದನ್ನು ಗಮನಿಸಿದರು. ಹಾಗೆಯೇ ಬಾಲಗಂಗಾಧರ ತಿಲಕರು ಸಹ ಭಾಷಾವಾರು ಪ್ರಾಂತ್ಯ ರಚನೆಗೆ ಮಹತ್ವವನ್ನು ನೀಡಿದ್ದರು. ಈ ಅಂಶಗಳು ಆಲೂರರಿಗೆ ಗಾಢವಾದ ಪರಿಣಾಮ ಬೀರಿದವು. ತತ್ಫಲವಾಗಿ ಆಲೂರರು ರಾಷ್ಟ್ರಿಯ ಚಳುವಳಿಯಿಂದ ಏಕೀಕರಣ ಚಳುವಳಿಯೆಡೆಗೆ ವಾಲಿದರು. ಅವರೇ ಹೇಳುವಂತೆ

> "ಕೀರ್ತಿ ಕಾಮಿನಿಯ ಕುಡಿನೋಟಗಳು ಕೆಲವೊಮ್ಮೆ ನನ್ನನ್ನು ಭಾರತ ಸೇವೆಯ ಕಡೆಗೆ ಮನವೊಲಿಸುತ್ತಿದ್ದವು. ಏಕೆಂದರೆ ಭಾರತ ಸೇವೆಗೆ ಬಲುಬೇಗ ಕೀರ್ತಿ. ಆದರೆ ಅವುಗಳ ಮೋಹವನ್ನು ತೊರೆದೆ. ಮತ್ತು ಅಚ್ಚುಕಟ್ಟಿನ ಕೃತಿ(Solid Work) ಆಗಬೇಕಾದರೆ ಕರ್ನಾಟಕವನ್ನಷ್ಟೇ ಕಾರ್ಯ ಕ್ಷೇತ್ರವನ್ನಾಗಿ ಇಟ್ಟುಕೊಳ್ಳುವುದೇ ಲೇಸೆಂದು ದೃಢ ನಿಶ್ಚಯ ಮಾಡಿ ಅದನ್ನೆ ಧ್ಯೇಯವಾಗಿ ಇಟ್ಟುಕೊಂಡೆ. ಹೆಚ್ಚಿನ ಹವ್ಯಾಸಕ್ಕೆ ಹೋಗಲಿಲ್ಲ. ಇದಕ್ಕಿಂತ ಹೆಚ್ಚಿನ ಕಾರಣವೆಂದರೆ ಕನ್ನಡಿಗರೆ ಕರ್ನಾಟಕದಲ್ಲಿ ಕಾರ್ಯ ಮಾಡದಿದ್ದರೆ ಇನ್ನಾರು ಮಾಡುವವರು? ಹಿಂದುಳಿದ ಪ್ರಾಂತ್ಯದಲ್ಲಿ ಕಾರ್ಯ ಮಾಡುವುದು ಹತ್ತು ಪಟ್ಟು ಕಠಿಣವೆಂಬುದೇನೋ ನಿಜ. ಆದರೆ ಯಾರಾದರೂ ಒಮ್ಮೆ ಅದನ್ನು ಕೈಗೊಳ್ಳಲೇಬೇಕಲ್ಲವೆ? ಕನ್ನಡಿಗರಲ್ಲಿ ಈ ಕಲ್ಪನೆಯಿಲ್ಲದ ಮೂಲಕವೇ ಕರ್ನಾಟಕದ ಬುದ್ಧಿಯ ಉಪಯೋಗವು ಕರ್ನಾಟಕಕ್ಕಾಗದೇ, ಅನ್ಯರಿಗಾಗಹತ್ತಿದೆ; ಕರ್ನಾಟಕದ ಹಣದ ಲಾಭವು ಕನ್ನಡಿಗರಿಗೆ ಆಗದೇ ಅನ್ಯರಿಗೆ ಆಗಹತ್ತಿದೆ. ಈ

ಬಗೆಯ ವಿಚಾರಗಳೇ ನಾನು ಕರ್ನಾಟಕವನ್ನಷ್ಟೇ ಧ್ಯೇಯವನ್ನಾಗಿ ಇಟ್ಟುಕೊಳ್ಳಲು ಕಾರಣಗಳಾದವು." (ರಿತ್ತಿ ಶ್ರೀನಿವಾಸ, ದಾಸಿ ಸುರೇಂದ್ರ, 2007:362)

ಆಲೂರರು ರಾಷ್ಟ್ರ ಹೋರಾಟಕ್ಕಿಂತ ಮೊದಲು ಪ್ರಾಂತ್ಯಗಳ ರಚನೆ ಸಮರ್ಪಕವಾದರೆ ಮಾತ್ರ ರಾಷ್ಟ್ರೀಯತೆಯನ್ನು ಕಟ್ಟಿಕೊಳ್ಳಲು ಸಾಧ್ಯ ಎನ್ನುವ ಅಭಿಪ್ರಾಯವನ್ನು ಹೊಂದಿದ್ದರು. ಅಂದರೆ ಮೊದಲು ಕರ್ನಾಟಕ, ನಂತರ ಭಾರತ, ಆನಂತರ ಪ್ರಪಂಚ ಎನ್ನುವ ಕಲ್ಪನೆ ಅವರದಾಗಿತ್ತು. ಕನ್ನಡಿಗರಾದ ನಾವುಗಳೇ ಕರ್ನಾಟಕದ ಕೆಲಸವನ್ನು ಮಾಡಿಕೊಳ್ಳಬೇಕು, ಇದಕ್ಕೆ ಅನ್ಯರು ಕೈ ಹಾಕುವುದಿಲ್ಲ ಎಂದು ಅವರು ನಂಬಿದ್ದರು. ಹೀಗಾಗಿ ಅವರು ರಾಷ್ಟ್ರೀಯತ್ವಕ್ಕಿಂತ ಕರ್ನಾಟಕತ್ವಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದರು. ಕರ್ನಾಟಕತ್ವದ ಪ್ರಚಾರಕ್ಕಾಗಿ ಅಂದಿನ 'ಕರ್ನಾಟಕ ಕೇಸರಿ', 'ಕರ್ನಾಟಕ ವೃತ್ತ', 'ವಾಗ್ಭೂಷಣ', 'ಲೋಕಬಂಧು, 'ಚಂದ್ರೋದಯ', 'ಕರ್ಮವೀರ' ಮುಂತಾದ ಪತ್ರಿಕೆಗಳಲ್ಲಿ ಲೇಖನ ಬರೆದರು.

ಆ ಸಂದರ್ಭದಲ್ಲಿ ಕನ್ನಡಿಗರಿದ್ದ ಅಭಿಮಾನ ಶೂನ್ಯತೆಯನ್ನು ಹೋಗಲಾಡಿಸಲು ಮತ್ತು ಕನ್ನಡಿಗರ ಪರಂಪರೆಯನ್ನು ತಿಳಿಸುವುದಕ್ಕಾಗಿಯೇ 1917ರಲ್ಲಿ 'ಕರ್ನಾಟಕ ಗತವೈಭವ' ಕೃತಿಯನ್ನು ರಚಿಸಿದರು. ಈ ಕೃತಿಯು ಕರ್ನಾಟಕ ಇತಿಹಾಸವನ್ನು ಹೊತ್ತಿದ್ದಾದರೂ, ಅದರ ಉದ್ದೇಶ ಮಾತ್ರ ಬೇರೆಯದು. ಈ ಕೃತಿ ಕೇವಲ ಚರಿತ್ರೆಯ ಘಟನಾವಳಿಗಳ ನಿರೂಪಣೆಯಾಗದೆ, ಚರಿತ್ರೆಯಲ್ಲಿನ ಸಂಗತಿಗಳನ್ನು ತಿಳಿಸುವುದರ ಮೂಲಕ ಸಮಕಾಲೀನ ಸಂದರ್ಭದಲ್ಲಿ ಜನರ ಭಾವನೆಗಳನ್ನು ಪ್ರಚೋದಿಸುವ, ಅಭಿಮಾನವನ್ನು ಕೆರಳಿಸುವ ಕೆಲಸ ಮಾಡುತ್ತದೆ.

> "…. ಪೂಜ್ಯಭಾವವೂ, ಅಭಿಮಾನವೂ, ಅನುರಾಗವು ನಮ್ಮ ಐತಿಹಾಸಿಕ ಪುರುಷರ ವಿಷಯದಲ್ಲಿಯೂ ನಮ್ಮಲ್ಲಿ ಹುಟ್ಟುವುದೇ ರಾಷ್ಟ್ರೀಯತ್ವದ ಪರಿಣತಾವಸ್ಥೆ. ಅಂತಹ ಸ್ಥಿತಿಯುಂಟಾಗಬೇಕಾದರೆ, ನಾವು ನಮ್ಮ ಪ್ರಾಂತ್ಯಗಳಲ್ಲಿ ಮಹಾಕಾರ್ಯಗಳನ್ನೆಸಗಿದ ಮಹಾಪುರುಷರ ವಿಷಯವಾಗಿ ಅಭಿಮಾನವನ್ನು ತಾಳಿ, ಅವರ ಉತ್ಸವಗಳನ್ನು ಎಡೆಬಿಡದೆ ನಡೆಯಿಸಿ, ಅವರನ್ನು ರಾಷ್ಟ್ರೀಯ ಮಹಾಪುರುಷರ ಪಂಕ್ತಿಯಲ್ಲಿ ಕುಳ್ಳಿರಿಸಬೇಕು. ನಮ್ಮ ಸತ್ಪುರುಷರ ಅಭಿಮಾನವು ನಮಗೇ ಇಲ್ಲದ ಬಳಿಕ ಮಿಕ್ಕ ಪ್ರಾಂತ್ಯದವರಿಗೆ ಅವರ ವಿಷಯವಾಗಿ ಅಭಿಮಾನ ಹುಟ್ಟುವುದು ಹೇಗೆ?" (ವೆಂಕಟರಾಯರು ಆಲೂರು, 2006:3)

ಈಗಾಗಲೇ ಬೆಂಗಾಲಿಗಳು, ಮರಾಠಿಗರು, ತೆಲುಗರು, ತಮಿಳಿಗರು ತಮ್ಮ ತಮ್ಮ ಪೂರ್ವಿಕರ ಇತಿಹಾಸವನ್ನು ಸ್ಮರಿಸಿಕೊಳ್ಳುತ್ತಾ, ತಮ್ಮ ಗುರುತುಗಳನ್ನು ನಿರ್ಮಿಸಿಕೊಂಡಿದ್ದಾರೆ. ಬೆಂಗಾಲವನ್ನು ಎರಡೇ ಭಾಗಗಳಾಗಿ ವಿಭಜಿಸಿದ್ದರಿಂದ, ಬೆಂಗಾಲಿಗಳು ಚಳುವಳಿಯನ್ನೇ ಪ್ರಾರಂಭಿಸಿದರು. ಆದರೆ ಕರ್ನಾಟಕವು ಸುಮಾರು 21 ಭಾಗಗಳಲ್ಲಿ ಹಂಚಿಹೋಗಿದ್ದರೂ

ಕನ್ನಡಿಗರು ಸುಮ್ಮನೆ ಇರುವುದಕ್ಕೆ ಮುಖ್ಯ ಕಾರಣ ಐತಿಹಾಸಿಕ ಪ್ರಜ್ಞೆ ಇಲ್ಲದಿರುವುದು. ಇದನ್ನು ಮನಗಂಡಿದ್ದ ಆಲೂರರು ಗತ ವೈಭವವನ್ನು ಬರೆಯುವುದರ ಮೂಲಕ ಕನ್ನಡದ ಗುರುತನ್ನು ಕಟ್ಟಿಕೊಳ್ಳಲು ಪ್ರೇರೇಪಣೆ ನೀಡುತ್ತಾರೆ.

ಹಾಗೆಯೇ ತಮ್ಮದೇ ಆದ 'ಕರ್ನಾಟಕತ್ವದ' ಪರಿಕಲ್ಪನೆಯನ್ನು ಪ್ರತಿಪಾದಿಸಿದರು. ಆ ಕುರಿತು ಅವರು ಈ ಮುಂದಿನಂತೆ ಅಭಿಪ್ರಾಯ ಪಡುತ್ತಾರೆ.

> "ಕರ್ನಾಟಕತ್ವವೆಂಬುದು ನನ್ನ ವಿಶಿಷ್ಟ ವಿಚಾರ. ಆ ಶಬ್ದವೂ ಕೂಡ ನನ್ನ ಟಂಕಶಾಲೆಯಲ್ಲಿ ಹುಟ್ಟಿದ್ದು. ಅದೊಂದು ಶಬ್ದದಲ್ಲಿ ರಾಜಕಾರಣ, ಧರ್ಮ, ವಾಙ್ಮಯ, ಇತಿಹಾಸ, ಕಲೆ ಮುಂತಾದ ಯಾವತ್ತೂ ವಿಷಯಗಳು ಸೇರ್ಪಡೆಯಾಗುತ್ತವೆ. ಅದರಲ್ಲಿ ಸೇರದ ವಿಷಯವಿಲ್ಲ. ನನ್ನ ಜೀವನದ ಯಾವತ್ತೂ ಚಟುವಟಿಕೆಗಳ ಅದೃಶ್ಯವಾದ ಉಗಮವು ಈ ಕರ್ನಾಟಕತ್ವದ ಕಲ್ಪನೆಯಲ್ಲಿ."(ವೆಂಕಟರಾಯರು ಆಲೂರು, 1999:9)

ಈ ಮೊದಲ ಇತಿಹಾಸವನ್ನು ಅವಲೋಕಿಸಿದಾಗ ಕನ್ನಡ, ಕರ್ನಾಟಕ ಎನ್ನುವ ಪದಗಳು ಬಳಕೆಯಲ್ಲಿದ್ದರೂ, ಕರ್ನಾಟಕತ್ವ ಎನ್ನುವ ಹೊಸ ಪರಿಕಲ್ಪನೆಯನ್ನು ಹುಟ್ಟುಹಾಕಿದರು. ಈ ಪರಿಕಲ್ಪನೆಯು ಕರ್ನಾಟಕವನ್ನು ನಿರ್ಮಾಣ ಮಾಡಿಕೊಳ್ಳಲು ಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಅಲ್ಲಿ ಗತದ ಪರಂಪರೆಯಿದೆ, ಸನಾತನವಾದ ಧರ್ಮವಿದೆ, ಪ್ರಾಚೀನ ಸಾಹಿತ್ಯ ಪರಂಪರೆಯಿದೆ, ಇವೆಲ್ಲವುಗಳ ಜೊತೆಗೆ ವರ್ತಮಾನದ ತಲ್ಲಣಗಳೂ ಸೇರಿಕೊಂಡಿವೆ. ಇವುಗಳ ಮೂಲಕ ಮುಂದೆ ಕಟ್ಟಿಕೊಳ್ಳಬೇಕಾದ ಕರ್ನಾಟಕದ ವಿಸ್ತೃತ ರೂಪವೇ 'ಕರ್ನಾಟಕತ್ವ'ವಾಗಿದೆ.

ಈ ಮೊದಲೇ ಉಲ್ಲೇಖಿಸಿರುವಂತೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಐತಿಹಾಸಿಕ ಮತ್ತು ಪೌರಾಣಿಕ ವ್ಯಕ್ತಿಗಳ ಉತ್ಸವಗಳನ್ನು ಆಚರಿಸಿಕೊಳ್ಳುತ್ತಿದ್ದರು. ಈ ಪ್ರಭಾವದಿಂದಾಗಿ ಕರ್ನಾಟಕದಲ್ಲಿಯೂ ವಿದ್ಯಾರಣ್ಯ ಉತ್ಸವ, ವಿಜಯನಗರ ಉತ್ಸವ, ಬಸವೇಶ್ವರ ಉತ್ಸವ, ನಿಜಗುಣ ಶಿವಯೋಗಗಿಗಳ ಉತ್ಸವ, ಕುಮಾರವ್ಯಾಸ ಉತ್ಸವ, ಪಂಪ ಉತ್ಸವ ಇತ್ಯಾದಿ ಆಚರಣೆಗಳನ್ನು ಕರ್ನಾಟಕ ಸಭೆಯ ಮೂಲಕ ಆಚರಿಸಲಾಯಿತು. ಆಗ ಗತವೈಭವಕ್ಕೆ ಮತ್ತಷ್ಟು ಮಹತ್ವ ದೊರಕಿತು. ಇದರ ಭಾಗವಾಗಿಯೇ 1936ರಲ್ಲಿ ವಿಜಯನಗರ ಸ್ಮಾರಕೋತ್ಸವ ಆಚರಿಸಲ್ಪಟ್ಟಿತು.(ಈ ಕುರಿತು ಮುಂದಿನ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.) ಇದಲ್ಲದೆ ಅನೇಕ ಲೇಖಕರ ಸಮ್ಮೇಳನಗಳೂ ನಡೆಯುತ್ತಿದ್ದವು. ಇಂತಹ ಸಮ್ಮೇಳನಗಳಲ್ಲಿ, ಸ್ಮಾರಕೋತ್ಸವಗಳ ಪ್ರಧಾನ ಆಶಯ ಕರ್ನಾಟಕ ಏಕೀಕರಣದ ಚಿಂತನೆಯೇ ಆಗಿತ್ತು.

ಅಸಹಕಾರ ಚಳುವಳಿಯ ಪರಿಣಾಮವು ಕರ್ನಾಟಕದ ಮೇಲೆ ಪ್ರಭಾವ ಬೀರಿತು. ಗಾಂಧೀಜಿಯ ಕರೆಗೆ ಓಗೊಟ್ಟು ಕಾಲೇಜು ವಿದ್ಯಾರ್ಥಿಗಳು ಕಾಲೇಜ್‌ನ್ನು ತ್ಯಜಿಸಿದರು. ಅನೇಕರು ವಕೀಲಿ ವೃತ್ತಿ ಬಿಟ್ಟು ಹೋರಾಟಕ್ಕೆ ಧುಮುಕಿದರು. ಈ ಸಂದರ್ಭದಲ್ಲಿ ಅಲ್ಲಲ್ಲಿ ಗಲಾಟೆಗಳಾದವು. 70ಕ್ಕೂ ಅಧಿಕ ಜನರನ್ನು ಬಂಧಿಸಲಾಯಿತು. ಧಾರವಾಡದಲ್ಲಿ ನಡೆದ ಗೋಲಿಬಾರ್‌ನಲ್ಲಿ ಮೂವರು ಮರಣಹೊಂದದರು. 29 ಜನರನ್ನು ಬಂಧಿಸಲಾಯಿತು. 1922ರಲ್ಲಿ ಬೆಂಗಳೂರಿನಲ್ಲಿ ಮದ್ಯದಂಗಡಿಗೆ ಮುತ್ತಿಗೆ ಹಾಕಿದ ಯುವಕರ ಮೇಲೆ ಪೋಲಿಸರು ಗುಂಡು ಹಾರಿಸಿದ ಪರಿಣಾಮವಾಗಿ ಇಬ್ಬರು ಮರಣಹೊಂದಿದರು. ನವಲಗುಂದದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದರೆಂಬ ಕಾರಣಕ್ಕಾಗಿ ಗಂಗಾಧರರಾವ್ ದೇಶಪಾಂಡೆಯವರನ್ನು ಬಂಧಿಸಲಾಯಿತು. ವಿಜಾಪುರದಲ್ಲಿ ವಿದ್ರೋಹಕಾರಿ ಲೇಖನ ಬರೆದಿದ್ದಕ್ಕಾಗಿ ಜಯರಾವ್ ನರಗುಂದ, ಕೌಜಲಗಿ ಶ್ರೀನಿವಾಸರಾವ್, ಹಣಮಂತರಾವ್ ಕೌಜಲಗಿ ಮೊದಲಾದವರನ್ನು ಬಂಧಿಸಲಾಯಿತು. ಇಷ್ಟೆಲ್ಲಾ ಆದರೂ ರಾಷ್ಟ್ರೀಯತೆಯನ್ನು ಬಿತ್ತುವ ಕಾರ್ಯ ನಿರಂತರವಾಗಿ ನಡೆದಿತ್ತು. ಆ ಸಮಯದಲ್ಲಿ 50 ರಾಷ್ಟ್ರೀಯ ಶಾಲೆಗಳು ಇದೇ ಕೆಲಸದಲ್ಲಿ ನಿರತವಾಗಿದ್ದವು.

1921ರಲ್ಲಿ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ರಚನೆಯಾದ ನಂತರ ಕರ್ನಾಟಕ ಏಕೀಕರಣಕ್ಕೆ ಮತ್ತಷ್ಟು ಪ್ರೋತ್ಸಾಹ ಸಿಕ್ಕಿತು. ಕಾಂಗ್ರೆಸ್ ರಾಷ್ಟ್ರೀಯ ಹೋರಾಟದಲ್ಲಿದ್ದುದರಿಂದ, ಏಕೀಕರಣದ ಸಮಸ್ಯೆಯನ್ನು ರಾಷ್ಟ್ರಮಟ್ಟದಲ್ಲಿ ಪ್ರತಿಬಿಂಬಿಸಬಲ್ಲದೆಂಬ ನಂಬಿಕೆಗಳು ಹುಟ್ಟಿಕೊಂಡವು. 1924ರಲ್ಲಿ ಬೆಳಗಾಂವಿಯಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನವು ನಡೆಯಿತು. ಆ ಸಮಾವೇಶಕ್ಕೆ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದರು. ಅಲ್ಲಿ 150 ಜನ ಮಹಿಳೆಯರನ್ನೊಳಗೊಂಡಂತೆ 1,700 ಜನ ಸ್ವಯಂ ಸೇವಕರು ಅದರ ಯಶಸ್ವಿಗಾಗಿ ದುಡಿದರು. ಈ ಸಮಾವೇಶ ಮುಗಿಯುತ್ತಿದ್ದಂತೆ ಅಲ್ಲಿಯೇ ಕರ್ನಾಟಕ ಏಕೀಕರಣ ಸಮಾರಂಭ ನಡೆಯಿತು. ಇದಕ್ಕೆ ಸರ್ ಸಿದ್ಧಪ್ಪ ಕಂಬಳಿಯವರು ಅಧ್ಯಕ್ಷರಾಗಿದ್ದರು. ಇಲ್ಲಿನ ಇನ್ನೊಂದು ವಿಶೇಷವೆಂದರೆ, ಆ ಸಮ್ಮೇಳನ ನಡೆದ ಸ್ಥಳಕ್ಕೆ 'ವಿಜಯನಗರ' ಎಂದು, ನೀರಿನ ಭಾವಿಗೆ 'ಪಂಪಾ ಸರೋವರ' ಎಂದೂ ಹೆಸರಿಟ್ಟಿದ್ದರು. ಪ್ರವೇಶ ದ್ವಾರವು ಹಂಪೆಯ ವಿರೂಪಾಕ್ಷ ದೇವಾಲಯದ ಗೋಪುರದಂತೆ ನಿರ್ಮಿಸಲಾಗಿತ್ತು. ರಾಷ್ಟ್ರೀಯವಾದಿಗಳು ಆಗಿನ ಸಂದರ್ಭದಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಮತ್ತು ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ಚರಿತ್ರೆಯ ಘಟನೆಗಳನ್ನು ಆಯ್ದುಕೊಂಡರು. ಬ್ರಿಟಿಷರ ಒಡೆದು ಆಳುವ ನೀತಿಗೆ ವಿರುದ್ಧವಾಗಿ ವಿಜಯನಗರದ ಚರಿತ್ರೆಯನ್ನು ಬಳಸಿಕೊಳ್ಳಲಾಯಿತು.

ಆ ಸಂದರ್ಭದಲ್ಲಿ ಕನ್ನಡಿಗರ ಹಂಬಲವನ್ನು ಅಭಿವ್ಯಕ್ತಿಸುವ ಹಾಗೂ ಕರ್ನಾಟಕದ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗೆಗೆ ಪರಿಚಯ ಹೊಂದಿದ 'ಕರ್ನಾಟಕ ಕೈಪಿಡಿ' ಮತ್ತು 'ಕನ್ನಡಿಗನ ಸರ್ವಸ್ವ' ಕೃತಿಗಳು ಬಿಡುಗಡೆಗೊಂಡವು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಪ್ರಯತ್ನದಿಂದಾಗಿ ದ.ಕೃ.ಭಾರದ್ವಾಜ ಅವರ ಸಂಪಾದಕತ್ವದಲ್ಲಿ 'ಕರ್ನಾಟಕ ಕೈಪಿಡಿ' ಕೃತಿ ಪ್ರಕಟಗೊಂಡಿತು. ಸಂಪಾದಕರು ಮುನ್ನುಡಿಯಲ್ಲಿ ಈ ಪುಸ್ತಕದ ಉದ್ದೇಶವನ್ನು ಕುರಿತು ಈ ಮುಂದಿನಂತೆ ಅಭಿಪ್ರಾಯ ಪಡುತ್ತಾರೆ. 'ಹಿಂದೆ ಕರ್ನಾಟಕವು ಭರತ ವರ್ಷದ ಇತಿಹಾಸದಲ್ಲಿ ಎಂತಹ ಸ್ಥಾನವನ್ನು ಹೊಂದಿ ಏನೇನು ಕಾರ್ಯಗಳನ್ನು ಮಾಡಿತು, ಈಗ ಯಾವ ಸ್ಥಿತಿಯಲ್ಲಿದೆ, ಅದರ ಚಳುವಳಿಗೇನು ಎಂಬ ವಿಷಯವನ್ನು ತಿಳಿಸುವುದೇ ನಮ್ಮ ಈ ಪ್ರಯತ್ನದ ಮುಖ್ಯ ಉದ್ದೇಶ.' ಎಂದು ಕೃತಿ ರಚನೆಯ ಹಿಂದಿನ ಒತ್ತಾಸೆಯನ್ನು ಸ್ಪಷ್ಟಪಡಿಸಿದ್ದಾರೆ.

'ಕನ್ನಡಿಗರ ಸರ್ವಸ್ವ' ಅಥವಾ 'ಕರ್ನಾಟಕ ಸಂಯುಕ್ತ ಪ್ರಾಂತ್ಯ' ಎನ್ನುವ ಕೃತಿಯನ್ನು ಆರ್.ಬಿ.ಕುಲಕರ್ಣಿಯವರು ರಚಿಸಿದ್ದಾರೆ. ಈ ಕೃತಿಯನ್ನು 'ಭಾರತಮಾತೆಯ ಸೇವೆಗೆ ಸಮರ್ಥರಾಗಬೇಕೆಂದು ಕರ್ನಾಟಕ ಏಕೀಕರಣಕ್ಕೆ ಹಗಲಿರುಳು ಹಂಬಲಿಸುತ್ತಿರುವ ನನ್ನ ಕನ್ನಡ ಬಂಧುಭಗಿನಿಯರ ಅಡಿದಾವರೆಗಳಿಗೆ ಪ್ರೀತಿಯಿಂದ ಅರ್ಪಿಸುವೆನು.' ಎನ್ನುವುದು ಈ ಕೃತಿಯ ಮಹತ್ವವನ್ನು ಎತ್ತಿ ಹಿಡಿಯುತ್ತದೆ. 20 ಅಧ್ಯಾಯಗಳಲ್ಲಿ ಹರಡಿರುವ ಈ ಕೃತಿಯು ಕನ್ನಡ ಭಾಷಿಕರ ಪ್ರದೇಶಗಳನ್ನು ಒಂದು ಮಾಡಬೇಕಾದ ಅಗತ್ಯತೆ ಮತ್ತು ಭಾವೀ ಕರ್ನಾಟಕ ಹೇಗೆ ರೂಪುಗೊಳ್ಳಬೇಕೆಂಬ ಅಂಶಗಳನ್ನು ತಿಳಿಸುತ್ತದೆ.

ಭಾಷೆಯನ್ನಾಧರಿಸಿದ ಪ್ರಾಂತ್ಯಗಳ ರಚನೆಯನ್ನು ಈ ಕೃತಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಕೃತಿಯ ಪ್ರಸ್ತಾವನೆಯಲ್ಲಿ ಸವಣೂರ ಅವರು ಈ ರೀತಿ ಅಭಿಪ್ರಾಯ ಪಡುತ್ತಾರೆ.

> "ಭಾಷೆಯಂತೆ ಪ್ರಾಂತ್ಯಗಳನ್ನು ವಿಭಾಗಿಸುವ ಚಳುವಳಿಯು ಪ್ರಜೆಗಳ ಹಿತಕ್ಕೆ ಅವಶ್ಯಕವಾಗಿದೆ. ಸರಕಾರವೂ ಇದಕ್ಕೆ ಒಪ್ಪಿರುತ್ತದೆ. ನಮ್ಮಂತೆ ಇತರ ಪ್ರಾಂತ್ಯದವರೂ ಬೇಡುತ್ತಿರುವರು. ಇದರಲ್ಲಿ ದ್ವೇಷದ ಭಾವನೆಯು ಇರುವುದಿಲ್ಲ. ಇದು ಜಾತಿಯ ಪ್ರಶ್ನವಲ್ಲ. ವಿಶಿಷ್ಟ ರಾಜಕೀಯ ಪಕ್ಷದ ಪ್ರಶ್ನವೂ ಅಲ್ಲ. ಇದು ಕೇವಲ ಕರ್ನಾಟಕದ ಅಭ್ಯುದಯದ ಪ್ರಶ್ನವಿರುತ್ತದೆ. ಆದ್ದರಿಂದ ಎಲ್ಲ ಜಾತಿಯ ಹಾಗೂ ಎಲ್ಲ ಪಕ್ಷದ ಜನರು ಇದರಲ್ಲಿ ಸಮಾವಿಷ್ಟರಾಗಿ ಪ್ರಯತ್ನಿಸಿದರೆ, ಬೇಗನೆ ಭಾಗ್ಯೋದಯವು ಗೋಚರವಾಗುವಂತಿದೆ."(ಕುಲಕರ್ಣಿ ಆರ್.ಬಿ., 1924:2–3)

ಕರ್ನಾಟಕ ಪ್ರಾಂತ್ಯವು ಭಾಷೆಯ ಆಧಾರದ ಮೇಲೆ ರಚಿತವಾದರೆ, ಇಲ್ಲಿನ ಆಡಳಿತ ಭಾಷೆಯು ಕನ್ನಡವಾಗುತ್ತದೆ. ಆ ಮೂಲಕ ಕರ್ನಾಟಕದ ಅಭ್ಯುದಯವಾಗುತ್ತದೆ ಎನ್ನುವ ಸಂದೇಶವಿದೆ. ಹಾಗೆಯೇ ಈ ಕೃತಿಯಲ್ಲಿ ಕನ್ನಡಿಗರ ವೈಶಿಷ್ಟ್ಯ, ಕರ್ನಾಟಕದ ಅಂದಿನ ಸ್ವರೂಪ, ಸಂಯುಕ್ತ ಕರ್ನಾಟಕ ಪ್ರಾಂತ್ಯದ ಅವಶ್ಯಕತೆ, ಸ್ಥಿತ್ಯಂತರಗಳು, ಭಾವೀ ಕರ್ನಾಟಕದ ರೂಪುರೇಷೆಗಳನ್ನು ಕುರಿತು ಚರ್ಚಿಸಲಾಗಿದೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ಆ ಪ್ರಾಂತೀಯ ನಾಯಕರುಗಳು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿರುವುದರಿಂದ ಅಲ್ಲಿ ಸಮಸ್ಯೆಗಳು ರಾಷ್ಟ್ರಮಟ್ಟದ

ಸಮಸ್ಯೆಗಳಾಗಿ ರೂಪುಗೊಳ್ಳುತ್ತವೆ. ಆದರೆ ಕರ್ನಾಟಕದಲ್ಲಿ ಅಂತಹ ನಾಯಕರು ಆ ಸಂದರ್ಭದಲ್ಲಿ ಇರಲಿಲ್ಲ. ಆದುದರಿಂದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನವು ಬೆಳಗಾವಿಯಲ್ಲಿ ಜರುಗಿದಾಗ ಇಲ್ಲಿನ ಕನ್ನಡಿಗರ ಸಮಸ್ಯೆಗಳಾವುವು, ಅವುಗಳನ್ನು ಪರಿಹರಿಸಿಕೊಳ್ಳಬೇಕಾದ ವಿಧಾನಗಳು ಯಾವುವು ಎನ್ನುವುದನ್ನು ರಾಷ್ಟ್ರ ನಾಯಕರ ಮುಂದೆ ಪ್ರಸ್ತಾಪಿಸಬೇಕೆಂಬ ಉದ್ದೇಶದಿಂದ ಆ ವೇದಿಕೆಯನ್ನು ಬಳಸಿಕೊಂಡರು.

1915ರಲ್ಲಿ ಸ್ಥಾಪಿಸಲ್ಪಟ್ಟ 'ಕರ್ನಾಟಕ ಸಾಹಿತ್ಯ ಪರಿಷತ್ತು' ಏಕೀಕರಣದ ಬಗೆಗೆ ಹೆಚ್ಚು ಗಮನ ಹರಿಸಲಿಲ್ಲ. ಆದುದರಿಂದ ಆಲೂರು ವೆಂಕಟರಾಯರು 1917ರಲ್ಲಿ 'ಕರ್ನಾಟಕ ಸಭೆ' ಯನ್ನು ಸ್ಥಾಪಿಸಿದರು. ಈ ವೇಳೆಗಾಗಲೇ ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯದ ಕನ್ನಡಿಗರು ಬ್ರಿಟಿಷ್ ಸರ್ಕಾರದ ಜೊತೆಗೆ ಏಕೀಕರಣದ ಕುರಿತು ಪತ್ರ ವ್ಯವಹಾರ ಮಾಡಿರುವುದು ಕಂಡು ಬರುತ್ತದೆ. 1918ರಲ್ಲಿ ಮಾಂಟ್-ಫೋರ್ಡ್ ಸಮಿತಿಯು ಭಾಷಾವಾರು ಪ್ರಾಂತ್ಯ ರಚನೆಯ ಅಧ್ಯಯನಕ್ಕಾಗಿ ಬಂದ ಸಮಿತಿಗೆ ಒಂದು ಲಕ್ಷ ಕನ್ನಡಿಗರು ಸಹಿ ಮಾಡಿದ ಮನವಿಯನ್ನು ಕರ್ನಾಟಕ ಸಭೆಯ ವತಿಯಿಂದ ನೀಡಲಾಯಿತು. ಪತ್ರವೊಂದು ಈ ಮುಂದಿನಂತಿದೆ.

ನೇಕನಾಮದಾರ ಈ.ಎಸ್.ಮಾಂಟಿಗೂ ಸಾ। ಬಾಹದ್ದೂರ,
ಸೆಕ್ರೇಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ,
ಖಾವಂದರವರ ಹೂಜೂರಿಗೆ:

ಘನವಂತರಾದ ದೊರೆಗಳೇ,............

ಮುಂಬಯಿ, ಮದ್ರಾಸ್ ಇಲಾಖೆಗಳ ಕನ್ನಡ ಜಿಲ್ಲೆಗಳಲ್ಲಿ ಹಾಗೂ ಕೊಡಗು ಪ್ರಾಂತ್ಯದಲ್ಲಿ ವಾಸಿಸುವ ಬ್ರಿಟಿಷ್ ಪ್ರಜೆಗಳಾದ ನಾವು ಹಿಂದೂಸ್ಥಾನಕ್ಕೆ ಬಂದಿರುವ ತಮಗೆ ಅಂತಃಕರಣಪೂರ್ವಕವಾಗಿ ಸ್ವಾಗತ ಮಾಡುತ್ತೇವೆ ಮತ್ತು ತಾವು ಈ ದೇಶದ ಈಗಿನ ಪ್ರಸಂಗದೊಳಗೆ ಇಲ್ಲಿಗೆ ಬಂದುದಕ್ಕಾಗಿ ತಮಗೆ ಅನಂತ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ಭಾಷೆಯಂತೆ ಹಿಂದುಸ್ಥಾನದೊಳಗಿನ ಪ್ರಾಂತ್ಯಗಳ ಪುನರ್ಘಟನೆಯಾಗಿ ಮುಂಬಯಿ, ಮದ್ರಾಸ ಇಲಾಖೆಗಳಿಗೆ ಸೇರಿದ ಹಾಗೂ ಕೊಡಗು ಪ್ರಾಂತ್ಯದ ಕನ್ನಡಿಗರ ಪ್ರದೇಶವನ್ನೆಲ್ಲ ಒಂದುಗೂಡಿಸಿ, ಒಂದು ಸ್ವತಂತ್ರವಾದ ರಾಜಕೀಯ ವಿಭಾಗವನ್ನು ಮಾಡಿಕೊಡಬೇಕೆಂಬುದೇ ನಮ್ಮ ಪ್ರಾರ್ಥನೆಯಿರುತ್ತದೆ, ಹಿಂದುಸ್ಥಾನದಲ್ಲಿದ್ದ ರಾಜಕೀಯ ವಿಭಾಗಗಳು ಜನಾಂಗಗಳ ಸ್ವಾಭಾವಿಕ ಭಾಗಗಳಾಗಿರುವುದಿಲ್ಲವೆಂಬುದನ್ನು ತಮಗೆ ಆದರಪೂರ್ವಕವಾಗಿ ತಿಳಿಸುತ್ತೇವೆ. ಈಗಿರುವ ಪ್ರಾಂತ್ಯಗಳು, ಅವುಗಳಲ್ಲಿಯ ಜನರು ಕ್ರಮಶಃ ಅಭಿವೃದ್ಧಿಯನ್ನು ಹೊಂದುವಂತೆ ವಿಭಾಗಿಸಲ್ಪಟ್ಟಿರುವುದಿಲ್ಲ. ಭಿನ್ನ ವಾಙ್ಮಯ, ಭಿನ್ನ ಪರಂಪರೆಯುಳ್ಳ ಭಿನ್ನ ಭಿನ್ನ ಜನರನ್ನು ಒಂದು ಪ್ರಾಂತ್ಯದಲ್ಲಿ

ಒಂದುಗೂಡಿಸುವುದು ಆ ಜನರ ರಾಷ್ಟ್ರೀಯತ್ವದ ಪರಿಪೋಷಣಕ್ಕಾಗಲಿ, ಐಕ್ಯ ಭಾವನೆಯ ಅಭಿವೃದ್ಧಿಗಾಗಲಿ, ಭೌತಿಕ ಮತ್ತು ನೈತಿಕ ಉತ್ಕರ್ಷಕ್ಕಾಗಲಿ ಸಹಾಯಕವಾಗಲಾದರು. ಏಕಭಾಷೆಯೆಂಬುದು ಪ್ರಜೆಗಳ ಐಕ್ಯಕ್ಕೆ ಬಲವತ್ತರವಾದ ಸಾಧನವಾಗಿರುತ್ತದೆ. ಆದ್ದರಿಂದ ಭಾಷೆಯಂತೆ ಪ್ರಾಂತ್ಯಗಳ ಪುನರ್ಘಟನೆಯಾಗುವುದು ಅಗತ್ಯವಾಗಿದೆ.

ಮುಂಬಯಿ, ಮದ್ರಾಸ ಇಲಾಖೆಗಳಲ್ಲಿರುವ ಕನ್ನಡ ಭಾಗವೂ, ಕೊಡಗು ಸೀಮೆಯೂ ಒಂದಕ್ಕೊಂದು ಹೊಂದಿದ್ದು, ಸು.30,597 ಚ.ಮೈ. ಕ್ಷೇತ್ರವುಳ್ಳದ್ದೂ, 64,40,895 ಜನಸಂಖ್ಯೆಯುಳ್ಳದ್ದೂ ಆಗಿದೆ. ಆದ್ದರಿಂದ ಇದನ್ನೊಂದು ಸ್ವತಂತ್ರವಾದ ಪ್ರಾಂತ್ಯವಾಗಿ ಮಾಡಿ, ಇದಕ್ಕೆ ಕಾರ್ಯಕಾರಿ ಸಭೆ ಮತ್ತು ನಿಯಮ ನಿರ್ಮಾಣ ಸಭೆ ಇವುಗಳಿಂದ ಯುಕ್ತವಾದ ಸ್ವತಂತ್ರ ರಾಜ್ಯ ವ್ಯವಸ್ಥೆಯನ್ನ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇವೆ.

ನಾವು ನಮಗಿಂತ ಮುಂದಾದವರೊಂದಿಗೆ ಸ್ಪರ್ಧಿಸಬೇಕಾಗಿರುವುದರಿಂದ ಪ್ರಗತಿಯಲ್ಲಿ ಹಿಂದುಳಿದಿರುತ್ತೇವೆ. ಆದ್ದರಿಂದ ಕನ್ನಡಿಗರನ್ನೆಲ್ಲಾ ಒಂದುಗೂಡಿಸಿ ಅಖಂಡವಾದ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ಘನವಂತರಾದ ದೊರೆಗಳವರ
ಅತ್ಯಂತ ನಮ್ರ ಮತ್ತು ಆಜ್ಞಾಧಾರಕ ಪ್ರಜೆಗಳು.
(ಕುಲಕರ್ಣಿ ಆರ್.ಬಿ., 1924:149–150)

ಹೀಗೆ ಏಕೀಕರಣದ ಸಂದರ್ಭದಲ್ಲಿ ಅಗತ್ಯವಿದ್ದ ಕಡೆಗೆ ಪತ್ರ ವ್ಯವಹಾರ ಮಾಡಿರುವುದು ಕಂಡು ಬರುತ್ತದೆ. ಮಾಂಟ್-ಪೋರ್ಡ್ ಸಮಿತಿಯು ಧಾರವಾಡ ಜನರ ಮನವಿಯನ್ನು ಸ್ವೀಕರಿಸಿತು ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆ ಸೂಕ್ತವೆಂದು ಪರಿಗಣಿಸಿತ್ತು. ಆದರೆ ಸರ್ಕಾರ ಇದನ್ನು ಜಾರಿಗೆ ತರಲಿಲ್ಲ. ಇದೇ ರೀತಿ ಮುಂದೆ ನೆಹರೂ ಸಮಿತಿ, ಸೈಮನ್ ಆಯೋಗ ಮುಂತಾದವುಗಳು ಬಂದವು. ಆದರೆ ಭಾಷಾವಾರು ಪ್ರಾಂತ್ಯ ರಚನೆ ಮಾತ್ರ ನೆರವೇರಲಿಲ್ಲ.

"ಕರ್ನಾಟಕ ಏಕೀಕರಣಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಸರ್ಕಾರದ ಆಕ್ಷೇಪಣೆಗಳು ಕೆಳಗಿನಂತಿದ್ದವು.

1. ಕರ್ನಾಟಕಕ್ಕೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಇಲ್ಲ. ಜನಾಂಗಿಕ ಏಕತೆಯಾಗಲೀ ಸಾಂಸ್ಕೃತಿಕ ಸಂಪರ್ಕವಾಗಲಿ ಇಲ್ಲಿನ ಜನರಲ್ಲಿಲ್ಲ.
2. ಅದಕ್ಕೆ ತನ್ನದೇ ಆದ ಒಂದು ಇತಿಹಾಸವಿರದೆ, ಎಂದೂ ಅದು ಒಂದು

ಪ್ರಾಂತ್ಯವಾಗಿರಲಿಲ್ಲ.

3. ಕರ್ನಾಟಕದ ಭಾಷೆ ಕನ್ನಡ ಒಂದೇ ಅಲ್ಲ.
4. ಈಗಿರುವ ಆಡಳಿತ ವ್ಯವಸ್ಥೆಯಲ್ಲಿ ಕರ್ನಾಟಕಕ್ಕೆ ತೊಂದರೆಯೇನಿಲ್ಲ.
5. ಕರ್ನಾಟಕದ ವಿಸ್ತಾರ ಮತ್ತು ಜನಸಂಖ್ಯೆಯ ಪ್ರಮಾಣ ಕಡಿಮೆ.
6. ಕರ್ನಾಟಕದ ಪ್ರಾಂತ್ಯಗಳಲ್ಲಿ ನಿರಂತರತೆ/ಸಂಪರ್ಕ ಇಲ್ಲ.
7. ಕರ್ನಾಟಕದಲ್ಲಿ ಸಂಸ್ಥಾನಗಳ ಸಮಸ್ಯೆಗಳಿವೆ.
8. ಸಾರಿಗೆ ಸಂಪರ್ಕ, ರಾಜಧಾನಿಯಾಗಬಲ್ಲ ಪಟ್ಟಣಗಳು, ಪ್ರಭಾವ ಬೀರಬಲ್ಲ ನಾಯಕರು, ಬಂದರುಗಳು– ಇತ್ಯಾದಿ ಕೊರತೆಗಳು ಕರ್ನಾಟಕದಲ್ಲಿವೆ.
9. ಕರ್ನಾಟಕವು ಸ್ವಾಲವಂಬಿಯಾಗುವ ಸಾಧ್ಯತೆ ಕಡಿಮೆ. (ಗೋಪಾಲರಾವ್ ಎಚ್.ಎಸ್.,2005:94) ಎಂದು ಅಭಿಪ್ರಾಯ ಪಟ್ಟಿತು.

ಯುರೋಪಿನಲ್ಲಿ ಈಗಾಗಲೇ ಭಾಷಾವಾರು ರಾಷ್ಟ್ರಗಳು ರೂಪುಗೊಂಡಿದ್ದವು. ಆದರೆ ಆ ಮಾದರಿಯಲ್ಲಿ ಕರ್ನಾಟಕ ಪ್ರಾಂತ್ಯವನ್ನು ವಿಭಜಿಸಲು ಸಾಧ್ಯವಿದ್ದಿಲ್ಲ. ಏಕೆಂದರೆ ಈ ಮೊದಲೇ ಯಾವ ರಾಜರ ಆಡಳಿತಾವಧಿಯಲ್ಲಿ ಸಮಗ್ರವಾದ ಆಳ್ವಿಕೆ ಮಾಡಿದ ಪರಂಪರೆ ಕರ್ನಾಟಕ ಪ್ರಾಂತ್ಯಕ್ಕಿಲ್ಲ ಎನ್ನುವುದು ಬ್ರಿಟಿಷರ ಅಭಿಪ್ರಾಯವಾಗಿತ್ತು.

ಬ್ರಿಟಿಷರ ಈ ಆಕ್ಷೇಪಣೆಗಳಿಗೆ ಕರ್ನಾಟಕ ಏಕೀಕರಣ ಸಂಘವು ಇವು ಹುರುಳಿಲ್ಲದ, ಸಂಪೂರ್ಣವಾದ ಅರಿವಿರದ ಆಕ್ಷೇಪಗಳೆಂದು ಹೇಳಿತು. ಹಾಗೆಯೇ ಬ್ರಿಟಿಷ ಕರ್ನಾಟಕ ಪ್ರಾಂತ್ಯಗಳ ಆದಾಯ ಮತ್ತು ಖರ್ಚಿನ ವಿವರಗಳ ಪಟ್ಟಿ ತಯಾರಿಸಿ, ಉಳಿತಾಯವೇ ಹೆಚ್ಚಾಗುತ್ತದೆ ಎನ್ನುವುದನ್ನು ತೋರಿಸಿಕೊಟ್ಟಿತು. ಅಲ್ಲದೆ ಕರ್ನಾಟಕ ಸಂಸ್ಕೃತಿಗೆ ಭವ್ಯವಾದ ಪರಂಪರೆಯಿದೆ, ಇತಿಹಾಸವೂ ಇದೆ ಎಂದು ಸಾಬೀತು ಪಡಿಸಬೇಕಾಗಿತ್ತು. ಹೀಗಾಗಿ ಐತಿಹಾಸಿಕ ಅಂಶಗಳಿಗೆ ಮಹತ್ವ ಮತ್ತಷ್ಟು ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ವಿಜಯನಗರಕ್ಕೆ ಹೆಚ್ಚಿನ ಮಹತ್ವವು ಪ್ರಾಪ್ತವಾಯಿತು. ಏಕೆಂದರೆ ಹಿಂದೆ ವಿಜಯನಗರ ಸಾಮ್ರಾಜ್ಯವು ಒಂದು ದೊಡ್ಡ ಸಾಮ್ರಾಜ್ಯವಾಗಿದ್ದು, ಅದರ ಆಡಳಿತ ಭಾಷೆ ಕನ್ನಡವಾಗಿತ್ತು ಎನ್ನುವುದನ್ನು ತೋರಿಸಿ ಕೊಡಹತ್ತಿದರು. ವಿಜಯನಗರ ಕಾಲದ ಶಾಸನಗಳನ್ನೇ ತೆಗೆದುಕೊಂಡರೆ ಅಲ್ಲಿ ಕನ್ನಡ ಭಾಷೆಯ ಶಾಸನಗಳಿವೆ. ಕೆಲವೊಂದು ಬೇರೆ ಭಾಷೆಯ ಶಾಸನಗಳಿದ್ದರೂ ಅಲ್ಲಿ ಶ್ರೀವಿರೂಪಾಕ್ಷ ಎನ್ನುವ ಹೆಸರು ಮಾತ್ರ ಕನ್ನಡದಲ್ಲಿದೆ. ಅಲ್ಲದೆ ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಎನ್ನುವ ಬಿರುದು ಕೂಡ ವಿದ್ಯಾರಣ್ಯರಿಗಿತ್ತು. ಹಾಗೆಯೇ ಶ್ರೀಕೃಷ್ಣ ದೇವರಾಯನಿಗೆ 'ಕನ್ನಡರಾಜ್ಯ ರಮಾ ರಮಣ' ಎನ್ನುವ ಬಿರುದು ಇತ್ತು. ಅಲ್ಲದೆ ವಿಜಯನಗರದ ಅನೇಕ ರಾಜನರಿಗಿದ್ದ ಬಿರುದುಗಳಲ್ಲಿ ಕನ್ನಡಕ್ಕೆ ನೀಡಿದ್ದ ಪ್ರಾಸಶ್ತ್ಯ ಕಂಡು ಬರುತ್ತದೆ.

ಹೀಗೆ ಒಂದೆಡೆ ಏಕೀಕರಣ ಚಳುವಳಿ ನಡೆಯುತ್ತಿದ್ದರೆ, ಮತ್ತೊಂದೆಡೆ ರಾಷ್ಟ್ರೀಯ ಚಳುವಳಿಯು ನಿರಂತರವಾಗಿ ಸಾಗಿತ್ತು. 1930ರ ಕಾಯಿದೆಭಂಗ ಚಳುವಳಿಯಲ್ಲಿ ಕರ್ನಾಟಕದ ಅನೇಕ ಜನ ಜೈಲು ಸೇರಿದರು. ಅದೇ ವರ್ಷ ಏಪ್ರೀಲ್ 13 ರಂದು ಅಂಕೋಲಾದಲ್ಲಿ ಎಂ.ಪಿ.ನಾಡಕರ್ಣಿ ಸೇರಿಂದತೆ 30 ಸಾವಿರ ಜನರು ಉಪ್ಪಿನ ಸತ್ಯಾಗ್ರಹ ನಡೆಸಿದರು. ಇದು 30 ಭಾಗಗಳಲ್ಲಿ ನಡೆಯಿತು. ಉಪ್ಪು ತಯಾರಿಕಾ ಕೇಂದ್ರಗಳಿಗೆ ಸತ್ಯಾಗ್ರಹಿಗಳು ಮುತ್ತಿಗೆ ಹಾಕಿ, ಏಪ್ರೀಲ್ 25, 27 ಮತ್ತು ಮೇ 3 ರಂದು ಕರಮುಕ್ತ ಉಪ್ಪಿನ ಮಾರಾಟ ಮಾಡಿದರು. ಆ ಕಾಯ್ದಿದೆ ವಿರುದ್ದ ಹೋರಾಟ ನಡೆಸಿದರು. ಹಿರೇಕೆರೂರು, ಅಂಕೋಲಾ, ಶಿರಸಿ ಮತ್ತು ಸಿದ್ದಾಪುರಗಳಲ್ಲಿ ಕರ ನಿರಾಕರಣೆ ಚಳುವಳಿ ಬಿರುಸಿನಿಂದ ಸಾಗಿತ್ತು. 1930-31ರಲ್ಲಿ ಕೆ.ಪಿ.ಸಿ.ಸಿ.ಯ ಪ್ರಕಟಣೆಯನುಸಾರ ಬಂಧಿತರಾದ ಸತ್ಯಾಗ್ರಹಿಗಳ ಸಂಖ್ಯೆ ಪಟ್ಟಿ ಈ ರೀತಿ ಇದೆ.

> "ಬೆಳಗಾವಿ ಜಿಲ್ಲೆ 442, ಧಾರವಾಡ 202, ದಕ್ಷಿಣ ಕನ್ನಡ 159, ಬಿಜಾಪುರ 158, ಬಳ್ಳಾರಿ 77 ಮತ್ತು ಕೊಡಗು 20. ಸಭೆ ಮೆರವಣಿಗೆಗಳಲ್ಲಿ ಭಾಗವಹಿಸಿದ್ದಕ್ಕೆ, ಈಚಲುಮರ ಕಡಿದಿದ್ದಕ್ಕೆ, ಮದ್ಯದಂಗಡಿಯ ಮತ್ತು ವಿದೇಶೀ ಬಟ್ಟೆಗಳ ಮಾರಾಟ ವಿರುದ್ಧ ಪ್ರದರ್ಶನ ನಡೆಸಿದ್ದಕ್ಕೆ, ಸರ್ಕಾರಿ ಜಮೀನಿನಿಂದ ಕೊಯ್ದುಕೊಂಡು ಬಂದ ಹುಲ್ಲಿಗಾಗಿ ತೆರಿಗೆ(ಹುಲ್ಲುಬನ್ನಿ) ಪಾವತಿ ಮಾಡದೆ ಇದ್ದುದಕ್ಕೆ, ಗಂಧದ ಮರ ಕಡಿದದ್ದಕ್ಕೆ, ಉರವಲು ಮುಂತಾದ ಅರಣ್ಯ ಉತ್ಪನ್ನ ಸಾಗಿಸಿ ತಂದದ್ದಕ್ಕೆ, ಭೂಕಂದಾಯ ಮತ್ತಿತರ ಕರ ತೆರದೆ ಹೋದುದಕ್ಕೆ- ಹೀಗೆ ನಾನಾ ಕಾರಣಗಳ ಮೇಲೆ ವಿಧಿಸಿದ ನಾನಾ ಅವಧಿಯ ಜೈಲುಶಿಕ್ಷೆಯನ್ನು ಸತ್ಯಾಗ್ರಹಿಗಳು ಅನುಭವಿಸಬೇಕಾಯಿತು. ಅದರಲ್ಲಿ ಮಹಿಳೆಯರೂ ಗಣನೀಯ ಸಂಖ್ಯೆಯಲ್ಲಿ ಇದ್ದರು." (ಸೂರ್ಯನಾಥ ಕಾಮತ್, 209)

ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದರೆ ರಾಷ್ಟ್ರೀಯ ಹೋರಾಟದಲ್ಲಿ ಮುಂಬೈ ಕರ್ನಾಟಕದವರು ಹೆಚ್ಚಿನ ಪ್ರಮಾಣದಲ್ಲಿದ್ದುದು ತಿಳಿದು ಬರುತ್ತದೆ. ಬ್ರಿಟಿಷರ ನೇರ ಆಡಳಿತವಿರುವ ಸಂಸ್ಥಾನಗಳಲ್ಲಿ ಹೋರಾಟ ತೀವ್ರವಾಗಿತ್ತು ಎನ್ನುವ ಅಂಶವೂ ಕೂಡ ಕಂಡು ಬರುತ್ತದೆ.

1932ರಲ್ಲಿ ಬಾಗಲಕೋಟೆಯಲ್ಲಿ ನಡೆದ ಕರ್ನಾಟಕ ರಾಜಕೀಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಹ.ರಾ.ಪುರೋಹಿತರನ್ನು ಬಂಧಿಸಲಾಯಿತು. ಅನೇಕ ಜನರನ್ನೂ ಸೆರೆ ಹಿಡಿಯಲಾಯಿತು. ದಕ್ಷಿಣ ಕನ್ನಡದ ಜಿಲ್ಲಾ ರಾಜಕೀಯ ಸಮ್ಮೇಳನ ಜರುಗಿದಾಗ ಅಲ್ಲಿಯೂ ಅನೇಕರನ್ನು ಬಂಧಿಸಲಾಯಿತು. 1934ರಲ್ಲಿ ಹೈದರಬಾದು ಕರ್ನಾಟಕ ಪರಿಷತ್ತು ಆರಂಭವಾಯಿತು. ಆ ಮೂಲಕ ರಾಷ್ಟ್ರೀಯ ಚಟುವಟಿಕೆಗಳನ್ನು ನಡೆಸತೊಡಗಿತು. 1938ರಲ್ಲಿ ಹೈದರಾಬಾದ್ ಕಾಂಗ್ರೆಸ್ ಸ್ಥಾಪನೆಯಾಯಿತು. 1937ರಲ್ಲಿ ಮುಂಬಯಿ ಮತ್ತು ಮದ್ರಾಸ ಶಾಸನ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರು ಅನೇಕರು ಗೆದ್ದರು.

ಎರಡನೆ ಮಹಾಯುದ್ಧದಲ್ಲಿ ಬ್ರಿಟಿಷ್ ಸರ್ಕಾರವು ಭಾರತವನ್ನು ಭಾಗೀರದಾರರನ್ನಾಗಿ ಮಾಡಲು ಹೊರಟದಾಗ ಈ ಸದಸ್ಯರು ರಾಜೀನಾಮೆ ನೀಡಿದರು. 1940-41ರಲ್ಲಿ 1,700 ಜನರು ಯುದ್ಧ ವಿರೋಧಿ ಘೋಷಣೆ ಕೂಗಿದ್ದಕ್ಕಾಗಿ ಮೂರು ತಿಂಗಳಿನಿಂದ ಒಂದು ವರ್ಷದವರೆಗೆ ಜೈಲು ಶಿಕ್ಷೆ ಅನುಭವಿಸಬೇಕಾಯಿತು.

ಮೈಸೂರು ರಾಜ್ಯದಲ್ಲಿ ನಡೆದ ದೊಡ್ಡ ಸಮ್ಮೇಳನವೆಂದರೆ 1938ರ ಏಪ್ರೀಲ್‌ನಲ್ಲಿ ನಡೆದ ಶಿವಪುರ ಅಧಿವೇಶನ. ಟಿ.ಸಿದ್ಧಲಿಂಗಯ್ಯ ಇದರ ಅಧ್ಯಕ್ಷರು. ತ್ರಿವರ್ಣ ಧ್ವಜ ಏರಿಕೆಗೆ ನಿಷೇದಾಜ್ಞೆ ಇದ್ದರೂ ಧ್ವಜ ಏರಿಸಿದ್ದಕ್ಕಾಗಿ ಅನೇಕ ನಾಯಕರನ್ನು ಬಂಧಿಸಲಾಯಿತು. ಮುಂದೆ ರಾಜ್ಯಾದ್ಯಂತ ಧ್ವಜ ಸತ್ಯಾಗ್ರಹ ನಡೆಯಿತು. 1938 ಏಪ್ರೀಲ್ 25 ರಂದು ವಿದುರಾಶ್ವತ್ಥದಲ್ಲಿ ಧ್ವಜ ಹಾರಿಸಿದ್ದಕ್ಕಾಗಿ ಒಬ್ಬ ಮಹಿಳೆ ಸೇರಿದಂತೆ 10 ಜನರು ಪೋಲಿಸರ ಗುಂಡಿಗೆ ಬಲಿಯಾದರು.

ಕರ್ನಾಟಕದಲ್ಲಿ ರಾಷ್ಟ್ರೀಯ ಹೋರಾಟ ಮತ್ತಷ್ಟು ತೀವ್ರ ಸ್ವರೂಪ ಪಡೆದದ್ದು 1942ರಲ್ಲಿ. ಗಾಂಧೀಜಿಯವರು ಕ್ವಿಟ್ ಇಂಡಿಯಾ ಚಳುವಳಿಯನ್ನು ಘೋಷಿಸಿದರು. ಅನೇಕ ನಾಯಕರ ಬಂಧನವಾಯಿತು. ಆದರೂ ಹೋರಾಟ ಮಾತ್ರ ನಿಲ್ಲಲಿಲ್ಲ. ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನೇಕ ಗ್ರಾಮ ಚಾವಡಿಗಳನ್ನು ಸುಡಲಾಯಿತು. ರೈಲು ಹಳಿಗಳನ್ನು ಕೀಳಲಾಯಿತು. ರೈಲ್ವೆ ನಿಲ್ದಾಣ ಮತ್ತು ಸರಕಾರಿ ಕಛೇರಿಗಳಿಗೆ ಬೆಂಕಿ ಹಚ್ಚಲಾಯಿತು. ಬೆಂಗಳೂರು, ಭದ್ರಾವತಿ, ದಾವಣಗೆರೆ, ಕೆ.ಜಿ.ಎಫ್. ಬೆಳಗೊಳ ಮುಂತಾದ ಕಡೆ ಗಾಂಧೀಜಿ ಮತ್ತು ಅನೇಕ ನಾಯಕರ ಬಂಧನಕ್ಕೆ ಕಾರ್ಮಿಕರು ಮುಷ್ಕರ ಆರಂಭಿಸಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ತೊರೆದು ಹೋರಾಟಕ್ಕೆ ಧುಮುಕಿದರು. ಆ ಸಂದರ್ಭದಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಮೂರು ತಿಂಗಳ ಕಾಲ ಶಾಲಾ ಕಾಲೇಜುಗಳನ್ನು ಮುಚ್ಚಲಾಗಿತ್ತು. ಮೈಸೂರು ಪ್ರಾಂತ್ಯದಲ್ಲಿ ಮೂರು ತಿಂಗಳು ಹೋರಾಟ ನಡೆದರೆ, ಮುಂಬಯಿ ಕರ್ನಾಟಕದಲ್ಲಿ ಎರಡು ವರ್ಷಗಳ ಕಾಲ ಹೋರಾಟ ನಡೆಯಿತು.

1942ರ ಸೆಪ್ಟಂಬರ್‌ನಲ್ಲಿ ಈಸೂರು ಸ್ವತಂತ್ರವೆಂದು ಘೋಷಿಸಿಕೊಂಡಿತು. ಅಲ್ಲಿಗೆ ಬಂದ ಇಬ್ಬರು ಸರ್ಕಾರಿ ಅಧಿಕಾರಿಗಳನ್ನು ಕೊಲ್ಲಲಾಯಿತು. ಪ್ರತೀಕಾರವಾಗಿ 1943ರಲ್ಲಿ ಈಸೂರಿನ ಐದು ಜನ ರಾಷ್ಟ್ರಪ್ರೇಮಿ ಯುವಕರನ್ನು ಸರ್ಕಾರ ಗಲ್ಲಿಗೇರಿಸಿತು. 1942-43ರಲ್ಲಿ ಕರ್ನಾಟಕದಾದ್ಯಂತ ಜೈಲುವಾಸಿಯಾದವರ ಸಂಖ್ಯೆ ಸುಮಾರು 15,000.

ಏಕೀಕರಣಕ್ಕಾಗಿ ಹೋರಾಟ ಮಾತ್ರ ಹಾಗೆಯೇ ಮುಂದುವರೆದಿತ್ತು. ಶಾಸನ ಸಭೆಗಳಲಿಯೂ ಏಕೀಕರಣದ ಪ್ರಸ್ತಾಪ ಮಾಡಲಾಯಿತು. ಆದರೆ ಶಾಸನ ಸಭೆಗಳಲ್ಲಿ ಕನ್ನಡಿಗರ ಬಹುಮತವೇ ಇದ್ದಿಲ್ಲ. ಮುಂಬಯಿ ವಿಧಾನ ಸಭೆಯ 111 ಸದಸ್ಯರಲ್ಲಿ ಕನ್ನಡ ಸದಸ್ಯರ ಸಂಖ್ಯೆ 2. ಮದ್ರಾಸ ವಿಧಾನಸಭೆಯಲ್ಲಿನ 123 ಸದಸ್ಯರಲ್ಲಿ ಕನ್ನಡ ಸದಸ್ಯರ ಸಂಖ್ಯೆ

5. ಇಂತಹ ಸಂದರ್ಭದಲ್ಲಿ ಕನ್ನಡಿಗರ ಕೂಗಿಗೇ ಬಹುಮತ ಎಲ್ಲಿಂದ ಬರುತ್ತದೆ. ಹಾಗಾಗಿ ಕನ್ನಡಿಗರ ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತಿದ್ದವು. ಆದರೆ ಏಕೀಕರಣ ಕುರಿತ ಹೋರಾಟ ಮಾತ್ರ ನಿರಂತರವಾಗಿ ಸಾಗಿತ್ತು. ಕರ್ನಾಟಕ ಏಕೀಕರಣ ಪರಿಷತ್ತು ಹಲವಾರು ಸಭೆಗಳನ್ನು ಮಾಡಿ ಸತತವಾಗಿ ಒತ್ತಡ ಹಾಕುತ್ತಿತ್ತು. ಈ ಮಧ್ಯೆ ಮೈಸೂರು ಏಕೀಕೃತ ಕರ್ನಾಟಕಕ್ಕೆ ಸೇರಬೇಕೆ ಬೇಡವೇ ಎನ್ನುವಂತಹ ಪ್ರಶ್ನೆಯೂ ಹುಟ್ಟಿಕೊಂಡಿತ್ತು. ಬಹುಸಂಖ್ಯಾತರು ಮೈಸೂರನ್ನು ಏಕೀಕೃತ ಕರ್ನಾಟಕಕ್ಕೆ ಸೇರಲೇಬೇಕೆಂದು ಒತ್ತಾಯಿಸಿದರು. ಒಂದು ವೇಳೆ ಮೈಸೂರು ಸೇರ್ಪಡೆಯಾಗದಿದ್ದರೆ, ಧಾರವಾಡ ಅಥವಾ ಹಂಪೆಯನ್ನು ರಾಜಧಾನಿಯನ್ನಾಗಿ ಮಾಡುವುದಾಗಿ ಚರ್ಚೆ ಆರಂಭಗೊಂಡಿದ್ದವು. ಸಾಹಿತ್ಯ ಸಮ್ಮೇಳನಗಳಲ್ಲಿಯೂ ಏಕೀಕರಣದ ಕುರಿತು ಚರ್ಚೆಯಾಗುತ್ತಿತ್ತು. ಸಾಹಿತಿಗಳೆಲ್ಲರೂ ಕರ್ನಾಟಕ ಏಕೀಕರಣವನ್ನೇ ಬೆಂಬಲಿಸಿದರು. ಆ ಸಂದರ್ಭದಲ್ಲಿದ್ದ ವಾಗ್ಭೂಷಣ, ಜಯ ಕರ್ನಾಟಕ, ಕರ್ನಾಟಕ ಪತ್ರ, ಕರ್ನಾಟಕ ಕೇಸರಿ, ಕರ್ನಾಟಕ ವೃತ್ತ, ಲೋಕಬಂಧು, ಚಂದ್ರೋದಯ, ರಾಷ್ಟ್ರಮತ, ವಿಹಾರಿ, ಕಾಳ, ಧಾರವಾಡ ವೃತ್ತ, ರಾಜಹಂಸ, ವಿಜಯ, ಹಿಂದುಸ್ಥಾನ ಸಮಾಚಾರ, ನುಡಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಶಿವಾನುಭವ, ಸಂಯುಕ್ತ ಕರ್ನಾಟಕ, ಕನ್ನಡ ನುಡಿ, ವಿಶ್ವ ಕರ್ನಾಟಕ, ಧುರೀಣ, ಕರ್ಮವೀರ, ಕರ್ನಾಟಕ ವೈಭವ, ಕರ್ನಾಟಕ(ಇಂಗ್ಲೀಷ್)– ಮುಂತಾದ ಪತ್ರಿಕೆಗಳೂ ಸಹಿತ ಏಕೀಕರಣಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿ ಏಕೀಕರಣ ಚಳುವಳಿಗೆ ಪ್ರೋತ್ಸಾಹ ನೀಡಿದವು. ಬಾಲ್ಕಿ, ಕೊಂಡಕುಂದಿ, ಮೈಂದರ್ಗಿಯಂತಹ ಮುಂತಾದ ಮಠಗಳು ಸಹಿತ ಈ ಹೋರಾಟಕ್ಕೆ ಬೆಂಬಲ ಕೊಟ್ಟವು. ಎರಡನೆ ಜಾಗತಿಕ ಮಹಾಯುದ್ಧದಿಂದ ಉಂಟಾದ ಪರಿಣಾಮದಿಂದಾಗಿ ಬ್ರಿಟಿಷ್ ಸರ್ಕಾರವು ಪ್ರಾಂತ್ಯಗಳ ರಚನೆ ಕುರಿತು ಯಾವುದೇ ನಿರ್ಣಯವನ್ನು ಕೈಗೊಳ್ಳಲಿಲ್ಲ. ಅಲ್ಲದೆ ರಾಷ್ಟ್ರೀಯ ಹೋರಾಟ ತೀವ್ರಗೊಂಡಿದ್ದರಿಂದ ಬ್ರಿಟಿಷ್ ಸರ್ಕಾರವು ಅಧಿಕಾರ ಹಸ್ತಾಂತರಿಸುವ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿತ್ತು. ಈಗಾಗಿ ಪ್ರಾಂತ್ಯ ರಚನೆಯ ಬೇಡಿಕೆ ಬೇಡಿಕೆಯಾಗಿಯೇ ಉಳಿಯಿತು.

1947ರಲ್ಲಿ ಬ್ರಿಟಿಷರಿಂದ ಬಿಡುಗಡೆಗೊಂಡು ಭಾರತವು ಸ್ವಾತಂತ್ರ್ಯವಾಯಿತು. ಭಾರತ ಸ್ವಾತಂತ್ರ್ಯಗೊಂಡರೂ ಸ್ಥಳೀಯ ಅರಸರೆಲ್ಲರೂ ಈ ಒಕ್ಕೂಟದಲ್ಲಿ ಸೇರಲು ಒಪ್ಪಲಿಲ್ಲ. ಮೈಸೂರು ಮಹಾರಾಜರು ಭಾರತ ಒಕ್ಕೂಟಕ್ಕೆ ಸೇರಲು ಒಪ್ಪಿದರಾದರೂ ಜವಾಬ್ದಾರಿ ಸರಕಾರ ರಚನೆಗೆ ಒಪ್ಪಲಿಲ್ಲ. ಆಗ 'ಮೈಸೂರು ಚಲೋ' ಚಳುವಳಿ ಆರಂಭವಾಯಿತು. ಹೋರಾಟ ತೀವ್ರ ಸ್ವರೂಪ ಪಡೆಯಿತು. ಮೈಸೂರು ಅರಮನೆಯ ಎದುರು ಸತ್ಯಾಗ್ರಹ ಆರಂಭವಾಯಿತು. ಕೆಲವರನ್ನು ಬಂಧಿಸಲಾಯಿತು. ಚಳುವಳಿಯಲ್ಲಿ ಸು 20 ಜನ ಮರಣ ಹೊಂದಿದರು. ಕೊನೆಗೆ 1947ರ ಅಕ್ಟೋಬರ್ 24 ರಂದು ಜವಾಬ್ದಾರಿ ಸರ್ಕಾರ ರಚಿಸಲು ಸಮ್ಮತಿ ಸಿಕ್ಕಿತು. ಕೆ.ಸಿ.ರೆಡ್ಡಿ ಮೊದಲ ಮುಖ್ಯಮಂತ್ರಿಯಾದರು. ಹೈದ್ರಾಬಾದ್ ಪ್ರಾಂತ್ಯದ ಸ್ಥಿತಿ ಇನ್ನೂ ಗಂಭೀರವಾಗಿತ್ತು. ದೇಶ ಸ್ವಾತಂತ್ರ್ಯ ಗೊಂಡು ಇತರೆ ಪ್ರದೇಶದ ಜನ

ಸಂಭ್ರಮದಲ್ಲಿದ್ದರೂ ಈ ಭಾಗದ ಜನರು ನಿಜಾಮ ಸರ್ಕಾರದ ಕರಿ ನೆರಳಿನಿಂದ ಹೊರಬರಲಾಗಲಿಲ್ಲ. ಮತಾಂಧ ಬುದ್ಧಿಯ ಕಾಶೀಂ ರಜ್ವಿಯ ಮಾತನ್ನು ಕೇಳಿ ನಿಜಾಮನು ಭಾರತ ಒಕ್ಕೂಟಕ್ಕೆ ವಿಲೀನವಾಗಲು ತಿರಸ್ಕರಿಸಿದ. ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಹೋರಾಟ ಬಿರುಸುಗೊಂಡಿತು. ಈ ಹೋರಾಟದಲ್ಲಿ ಅನೇಕ ಜನ ತಮ್ಮ ಪ್ರಾಣ ಕಳೆದುಕೊಂಡರು. ಅಸಂಖ್ಯಾತ ಜನರನ್ನು ಬಂಧಿಸಲಾಯಿತು. ನಿಜಾಮನ ಪೋಲಿಸರನ್ನು ಮತ್ತು ರಜಾಕಾರರನ್ನು ಎದುರಿಸಲು ಸ್ವತಂತ್ರ್ಯ ಯೋಧರಿಂದ ಗಡಿ ಸೇನಾ ಶಿಬಿರಗಳು ಹುಟ್ಟಿಕೊಂಡವು. ಸಿಂಧಗಿ, ದುಧನಿ, ಗೌಡಗಾಂವ, ಮಾದನಹಿಪ್ಪರಗಿ, ತಾಳಿಕೋಟೆ, ಮುಂಡರಗಿ, ಗದಗ, ವಾಗ್ಧರಿ, ತುಂಗಭದ್ರಾ, ಗಜೇಂದ್ರಗಡ, ಇಟಗಿ, ಕಂಪ್ಲಿ, ಶಿರಗುಪ್ಪ, ಮಂತ್ರಾಲಯ, ಕಕ್ಕಲಮೇಲಿ ಇತ್ಯಾದಿ ಕಡೆಗಳಲ್ಲಿ ಶಿಬಿರಗಳನ್ನು ಸ್ಥಾಪಿಸಲಾಯಿತು. ಇದಕ್ಕೆ ವಿರುದ್ಧವಾಗಿ ನಿಜಾಮ ಸರ್ಕಾರ ಗಡಿ ಪೋಲಿಸ್ ಪಡೆಗಳನ್ನು ನೇಮಿಸಿತು.

ಗಡಿ ಶಿಬಿರಗಳಿಗೆ ಬೆಂಬಲ ನೀಡುತ್ತಿವೆ ಎನ್ನುವ ಕಾರಣಕ್ಕೆ ಅನೇಕ ಗ್ರಾಮಗಳ ಜನರಿಗೆ ಚಿತ್ರ ಹಿಂಸೆ ಕೊಡಲಾಯಿತು. ಬೀದರ್ ಜಿಲ್ಲೆಯ ಗೋರ್ಟಾ ಮತ್ತು ಮುಚಳಂಬಿ ಗ್ರಾಮಗಳನ್ನು ಸುತ್ತುವರಿದ ರಜಾಕಾರರು ಮತ್ತು ನಿಜಾಮ ಪೋಲಿಸ್ ಪಡೆಗಳು ಮನಬಂದಂತೆ ಹತ್ಯೆಗೈದರು. ಜೀವಂತವಾಗಿ ದಹನಮಾಡಿದರು. ಊರಿನ ಗಂಡಸರನ್ನು, ಹೆಂಗಸರನ್ನು ವಿವಸ್ತ್ರರನ್ನಾಗಿ ಮಾಡಿ ನಿಲ್ಲಿಸಿ ಅಮಾನವೀಯವಾದ ಹಿಂಸೆ ನೀಡಿದರು. ರಜಾಕಾರರ ಹಿಂಸೆಗೆ ಇದೊಂದು ಸಣ್ಣ ನಿದರ್ಶನ. ಇಂತಹ ಕೃತ್ಯಗಳು ಅದೆಷ್ಟೋ ನಡೆದವು. ಇಂಥ ಸಂದರ್ಭದಲ್ಲಿ ನಿಜಾಮ ಸರ್ಕಾರವು ಪಾಕಿಸ್ತಾನದೊಂದಿಗೆ ಸಂಧಿಸಿ ಅಲ್ಲಿಂದ ಸೈನ್ಯ ಮತ್ತು ಶಸ್ತ್ರಾಗಳ ಸಹಾಯ ಕೋರಿತು. ಈ ಸುದ್ದಿ ತಿಳಿದ ಗಡಿ ಶಿಬಿರಗಳು ಸ್ವಾಮಿ ರಮಾನಂದ ತೀರ್ಥರ ಮೂಲಕ ಈ ವಿಷಯವನ್ನು ವಲ್ಲಭಬಾಯಿ ಪಟೇಲರಿಗೆ ತಿಳಿಸಿದರು. ನೆಹರು ಆಗ ಲಂಡನ್‌ಗೆ ಹೋಗಿದ್ದರು. ವಿಳಂಬವಾದರೆ ಅನಾಹುತವಾಗುವುದು ನಿಶ್ಚಿತ ಎಂದರಿತ ಪಟೇಲರು ಸೈನ್ಯವನ್ನು ಕಳುಹಿಸಿ ಕಾರ್ಯಾಚರಣೆ ಆರಂಭಿಸಿದರು. ಅಂದಿನ ಕಾನೂನು ಮಂತ್ರಿಗಳಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ಇದಕ್ಕೆ ಸೇನಾ ಕಾರ್ಯಚರಣೆ ಎಂದು ಕರೆಯದೆ, ಪೋಲಿಸ್ ಕಾರ್ಯಾಚರಣೆ ಎಂದು ಕರೆಯಲು ಸೂಚಿಸಿದರು. ಸೇನಾ ಕಾರ್ಯಾಚರಣೆ ಅನ್ಯ ದೇಶಗಳ ಮೇಲೆ ನಡೆಯುವಂತಹದ್ದು, ಪೋಲಿಸ್ ಕಾರ್ಯಾಚರಣೆ ನಮ್ಮ ದೇಶದ ಒಳಗಡೆಯೇ ನಡೆಯುವಂತಹದ್ದು. ಏಕೆಂದರೆ ಹೈದ್ರಾಬಾದ್ ಪ್ರಾಂತ್ಯ ಈ ದೇಶದ ಒಂದು ಭಾಗ. ಈ ಕಾರ್ಯಾಚರಣೆಯ ಫಲವಾಗಿ ಹೈದ್ರಾಬಾದ್ ನಿಜಾಮನು ಭಾರತ ಒಕ್ಕೂಟಕ್ಕೆ ಒಪ್ಪಲು ಸಮ್ಮತಿಸಿದ. ಹಿಂಸೆ ನೀಡುತ್ತಿದ್ದ ರಜಾಕಾರರನ್ನು ಸಾಮಾನ್ಯ ಜನರೂ ಪೋಲಿಸರ ಕೈಗೆ ಒಪ್ಪಿಸಿದರು. ಅಂತು ಈ ಸಂಸ್ಥಾನ 1948 ಸೆಪ್ಟಂಬರ್ 17 ರಂದು ಭಾರತ ಒಕ್ಕೂಟಕ್ಕೆ ವಿಲೀನವಾಯಿತು. ಅಂದಿಗೆ ರಜಾಕಾರರ ಹಿಂಸೆಯಿಂದ ಹೈದ್ರಾಬಾದ್ ಕರ್ನಾಟಕದ ಜನ ಮುಕ್ತರಾದರು.

ಆ ಸಂದರ್ಭದಲ್ಲಿ ದೇಶೀಯ ಆಡಳಿತ ವರ್ಗವು ಹಲವು ಮಿತಿಗಳೊಂದಿಗೆ ಆಡಳಿತ ನಡೆಸುತ್ತಿತ್ತು. ಈ ದೇಶೀಯ ಆಡಳಿತ ವರ್ಗದ ಮುಂದೆ ಹಲವಾರು ಪ್ರಶ್ನೆಗಳಿದ್ದವು. ಮುಖ್ಯವಾಗಿ ಆ ಸಂದರ್ಭದಲ್ಲಿ ಭಾರತಕ್ಕೆ ಒಂದು ಸಂವಿಧಾನ ಇರಲಿಲ್ಲ. ಹಾಗಾಗಿ ಆಡಳಿತ ನಿರ್ವಹಣೆ ತುಂಬ ಕಷ್ಟವಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಸಂವಿಧಾನ ರಚನಾ ಸಮಿತಿಯನ್ನು ರಚಿಸಲಾಯಿತು. ಆ ವೇಳೆಯಲ್ಲಿ ಪ್ರಾಂತ್ಯಗಳ ಏಕೀಕರಣ ಸಮಸ್ಯೆಯು ಹಿಂದಿಗಿಂತ ಮತ್ತಷ್ಟು ಜಟಿಲಗೊಂಡಿತು. ಭಾರತದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವ ವರ್ಗವು ಒಂದುಕಡೆ, ಇನ್ನೊಂದು ಕಡೆ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಪ್ರಾಂತೀಯ ವಾದವನ್ನು ಮುಂದಿಟ್ಟ ವರ್ಗ, ಮತ್ತೊಂದೆಡೆ ಸ್ವತಂತ್ರ ಆಡಳಿತಾಧಿಕಾರಿಗಳಾಗಬೇಕೆಂಬ ಆಸೆ ಹೊಂದಿದ್ದ ಸ್ಥಾನೀಯ ರಾಜರುಗಳು. ಇಂತಹ ಸಂಕೀರ್ಣ ಸ್ಥಿತಿಯಲ್ಲಿಯೂ ಪ್ರಾಂತೀಯ ಘಟಕಗಳನ್ನು ರಚನೆ ಮಾಡುವುದು ಅನಿವಾರ್ಯ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿತ್ತು.

ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಕನ್ನಡ ಭಾಷೆಯನ್ನಾಧರಿಸಿ ಪ್ರಾಂತ್ಯ ರಚಿಸಬೇಕೆಂದಾಗ ಕೊಡವ ಪ್ರಾಂತ್ಯದಲ್ಲಿ ಕೊಡವ ಭಾಷೆ, ಮಂಗಳೂರು ಆಚೀಚಿನ ಪ್ರದೇಶಗಳಲ್ಲಿ ತುಳು, ಕೊಂಕಣಿ, ಗಡಿ ಭಾಗದಲ್ಲಿ ದ್ವಿಭಾಷಿಕರಿದ್ದರು. ಆಗ ಒಂದೇ ಭಾಷೆಯನ್ನಾಡುವ ಪ್ರದೇಶವನ್ನು ಪ್ರತ್ಯೇಕ ಪ್ರಾಂತ್ಯ ಎಂದು ಗುರುತಿಸುವುದು ಕಷ್ಟವಾಯಿತು. ಇದಲ್ಲದೆ ಈ ವೇಳೆಗಾಗಲೇ ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂಬ ಹೆಗ್ಗಳಿಕೆ ಪಡೆದಿತ್ತು. ಆದರೆ ಮುಂಬಯಿ, ಮದ್ರಾಸ ಮತ್ತು ಹೈದ್ರಾಬಾದ್ ಪ್ರಾಂತ್ಯಗಳಲ್ಲಿನ ಕನ್ನಡ ಪ್ರದೇಶಗಳು ಹಿಂದುಳಿದವುಗಳಾಗಿದ್ದವು. ಅವರೊಂದಿಗೆ ಕೂಡಿಕೊಂಡರೆ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ ಎಂಬ ಭೀತಿ ಕಾಡುತ್ತಿತ್ತು. ಈ ಪ್ರಾಂತ್ಯಗಳಲ್ಲಿ ಲಿಂಗಾಯತ ಸಮುದಾಯವು ಮೇಲುಗೈ ಸಾಧಿಸಬಹುದೆಂಬ ಭಯವೂ ಇತ್ತು. ಹೀಗಾಗಿ ಅವರು ಏಕೀಕರಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರು.

> "ಈ ಬೆಳವಣಿಗೆಯ ಬಗ್ಗೆ ಕೇಂದ್ರವು ದಿವ್ಯ ನಿರ್ಲಕ್ಷ್ಯವನ್ನು ತಾಳಿದ ಪರಿಣಾಮವಾಗಿ ಕೆಲವು ಮಂದಿ ಲೋಕಸಭಾ ಸದಸ್ಯರೊಡಗೂಡಿ ಕೆಪಿಸಿಸಿ ಅಧ್ಯಕ್ಷರಾಗಿದ್ದ ಎಸ್.ನಿಜಲಿಂಗಪ್ಪನವರು 1953ರ ಏಪ್ರೀಲ್‌ನಲ್ಲಿ ಪಂಡಿತ ನೆಹರೂರವರನ್ನು ಭೇಟಿಯಾದರು. ಇಲ್ಲಿ ನಡೆದ ಘಟನಾವಳಿಗಳ ಬಗ್ಗೆ ಪ್ರಧಾನ ಮಂತ್ರಿಗಳ ಗಮನ ಸೆಳೆದ ನಾಯಕರು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುವುದರ ಬಗ್ಗೆಯೂ ಕೂಡ ಮನವರಿಕೆ ಮಾಡಲಾಯಿತು. ಸಮಸ್ಯೆಗೆ ಶೀಘ್ರ ಪರಿಹಾರ ಅಗತ್ಯವಿದೆಯೆಂದು ಮನಗಂಡ ನೆಹರೂರವರು ಪುನರ್ವಿಂಗಡನೆಯ ಕುರಿತು ಚರ್ಚಿಸಲು ಒಂದು ಸಮಿತಿಯನ್ನು ರಚಿಸುವುದಾಗಿ ಭರವಸೆ ನೀಡಿದರು. ಹಾಗಾಗಿ, 1953 ಡಿಸೆಂಬರ್ 22ರಂದು ರಾಜ್ಯಗಳ ಪುನರ್ರಚನಾ ಸಮಿತಿಯನ್ನು ನೇಮಕ ಮಾಡಲಾಯಿತು.

ಪುನರ್ರಚನೆಯ ಸಮಸ್ಯೆಯನ್ನು 'ವಸ್ತುನಿಷ್ಠವಾಗಿ ಹಾಗೂ ನಿಷ್ಪಕ್ಷಪಾತವಾಗಿ' ಪರಿಶೀಲಿಸುವುದು ಸಮಿತಿಯ ಜವಾಬ್ದಾರಿಯಾಗಿತ್ತು." (ಜಮುನ ಎಂ. 1997:234)

ಹೀಗೆ ರಚನೆಗೊಂಡ ಸಮಿತಿಯ ಮುಂದೆ ಇದ್ದಂತಹ ಸಮಸ್ಯೆಗಳೆಂದರೆ, ಯಾವ ಮಾನದಂಡಗಳ ಹಿನ್ನೆಲೆಯಲ್ಲಿ ಪ್ರಾಂತ್ಯವನ್ನು ರಚಿಸಬೇಕೆಂಬ ಪ್ರಶ್ನೆ ಎದುರಾಯಿತು. ಚಾರಿತ್ರಿಕವಾದ ಸಂಗತಿಗಳನ್ನು ಆಧರಿಸುವುದು, ನೈಸರ್ಗಿಕವಾದ ಬೃಹತ್ ಪರ್ವತ ಶ್ರೇಣಿಗಳು ಹಾಗೂ ನದಿಗಳನ್ನಾಧರಿಸಿ, ಸಂಪನ್ಮೂಲಗಳ ಹಂಚಿಕೆಯನ್ನಾಧರಿಸಿ ಇವುಗಳೊಂದಿಗೆ ಭಾಷೆಯನ್ನಾಧರಿಸಿ ಪ್ರಾಂತ್ಯ ರಚನೆ ಸಾಧ್ಯ ಎನ್ನುವುದನ್ನು ಶಿಫಾರಸ್ಸು ಮಾಡಿತು. ಹೀಗೆ ಹಲವು ಅಡೆತಡೆಗಳ ನಡುವೆಯೂ ಕೇಂದ್ರ ಸರ್ಕಾರವು 1956ರಲ್ಲಿ ಮೈಸೂರು ರಾಜ್ಯವನ್ನಾಗಿ ರಚನೆ ಮಾಡಿತು.

1900ರಿಂದ ಕರ್ನಾಟಕದಲ್ಲಿ ಎರಡು ಬಗೆಯ ಹೋರಾಟ ತೀವ್ರಗೊಂಡಿತ್ತು. ಒಂದು. ಭಾರತದ ಸ್ವಾತಂತ್ರ್ಯ ಚಳುವಳಿಯ ತೀವ್ರ ಸ್ವರೂಪವನ್ನು ಪಡೆದುಕೊಂಡಿತ್ತು. ಮತ್ತೊಂದು ಏಕೀಕರಣ ಚಳುವಳಿ ಆರಂಭಗೊಂಡಿತು. ಈ ಎರಡು ಬಗೆಯ ಹೋರಾಟದಲ್ಲಿ ನಮ್ಮ ನಾಯಕರು ತಮ್ಮನ್ನು ತೊಡಗಿಸಿಕೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದವರು 1905ರಲ್ಲಾದ ಬಂಗಾಳ ವಿಭಜನೆ, ಅದಕ್ಕಾಗಿ ಅಲ್ಲಿನ ಜನರು ಮಾಡಿದ ಹೋರಾಟವನ್ನು ಕಂಡು ಪ್ರೇರಿತರಾಗಿ ಹರಿದು ಹಂಚಿ ಹೋಗಿದ್ದ ಕನ್ನಡ ಭಾಷಿಕ ಪ್ರದೇಶವನ್ನು ಒಂದೇ ಆಡಳಿತದಡಿಯಲ್ಲಿ ತರಬೇಕೆಂಬ ಉತ್ಕಟೇಚ್ಛೆಯಿಂದ ಹೋರಾಟ ತೀವ್ರಗೊಳಿಸಿದರು. ರಾಜಕೀಯವಾಗಿ ಸ್ಥಿರಗೊಂಡಾಗ ಮಾತ್ರ ಹೋರಾಟ ಯಶಸ್ವಿಯಾಗಲು ಸಾಧ್ಯ ಎನ್ನುವುದನ್ನು ಮನಗಂಡರು. ಅದಕ್ಕಾಗಿ ಬೇರೆ ಬೇರೆ ಸಂಸ್ಥಾನಗಳ ಅರಸರಿಗೆ ಕನ್ನಡ ನಾಡು ಒಂದಾಗಬೇಕೆಂಬುದನ್ನು ಒತ್ತಿ ಹೇಳಿದರು. ಅವರ ಸಹಾಯ ಕೋರಿದರು. ಸ್ಮಾರಕೋತ್ಸವಗಳನ್ನು ಮಾಡಿದರು. ಆ ಮೂಲಕ ಪ್ರಚಾರ ಕಾರ್ಯ ಕೈಗೊಂಡರು. ಅಲ್ಲದೆ ಮಾಧ್ಯಮಗಳನ್ನು ಬಳಸಿಕೊಂಡು ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿದರು. ಈ ಹೋರಾಟದಲ್ಲಿ ಪಾಲ್ಗೊಂಡ ಮಹನೀಯರ ಸಂಖ್ಯೆ ಅಗಣಿತ. ಅವರೆಲ್ಲರೂ ದೇಶಕ್ಕಾಗಿ, ನಾಡಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಬ್ರಿಟಿಷ ಅಧಿಕಾರಿಗಳು ಕೊಟ್ಟ ಹಿಂಸೆಯನ್ನು ಅನುಭವಿಸಿದರು; ಸೆರೆಮನೆವಾಸ ಕಂಡರು; ಕೆಲವರು ಪ್ರಾಣ ಕಳೆದುಕೊಂಡರು.

* * *

**ಉಲ್ಲೇಖಗಳು :**

ಚಂದ್ರಶೇಖರ ಎಸ್., 2005, *ಏಕೀಕರಣ:ಒಂದು ಕಥನ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಚಂದ್ರಶೇಖರ್ ಎಸ್: 1997, *ರಾಷ್ಟ್ರವಾದದ ಉಗಮ: ಸಮಾಜ ಸುಧಾರಣಾ ಚಳುವಳಿಗಳು* (ಕರ್ನಾಟಕ ಚರಿತ್ರೆ ಸಂ–7, ಪ್ರ.ಸಂ:ಷೇಕ್‌ಅಲಿ ಬಿ.), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಉದ್ಧೃತ:ವೆಂಕಟಚಲಪತಿ(ಅನು): *ಬ್ರಿಟಿಷರ ಪ್ರಾಬಲ್ಯ* (ಕರ್ನಾಟಕದ ಪರಂಪರೆ, ಸಂ–2, 2006), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಧಾರವಾಡಕರ ರಾ.ಯ., 1975, *ಹೊಸಗನ್ನಡದ ಉದಯ ಕಾಲ.* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ರಿತ್ತಿ ಶ್ರೀನಿವಾಸ, ದಾಸಿ ಸುರೇಂದ್ರ(ಸಂ), 2007, *ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾಯರ ಸಮಗ್ರ ಕೃತಿಗಳು*, ಸಂ–1,

ವೆಂಕಟರಾಯರು ಆಲೂರು, 2006, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,

ವೆಂಕಟರಾಯರು ಆಲೂರು, 1999, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,

ಕುಲಕರ್ಣಿ ಆರ್.ಬಿ., 1924, *ಕನ್ನಡಿಗನ ಸರ್ವಸ್ವ*, ಆರ್.ಬಿ.ಕುಲಕರ್ಣಿ, ಕಾವ್ಯರತ್ನ, ಬೆಳಗಾವಿ.

ಅದೇ.



ಗೋಪಾಲರಾವ್ ಎಚ್.ಎಸ್.,2005, ಕರ್ನಾಟಕ ಏಕೀಕರಣದ ಇತಿಹಾಸ, ನವ ಕರ್ನಾಟಕ ಪಬ್ಲಿಕೇಷನ್ ಬೆಂಗಳೂರು

ಸೂರ್ಯನಾಥ ಕಾಮತ್, 1998, ಸ್ವಾತಂತ್ರ್ಯೋದಯದ ಮೈಲುಗಲ್ಲುಗಳು, (ಸಂ:ರಾಮಸ್ವಾಮಿ) ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

ಉದ್ಧೃತ:ಜಮುನ ಎಂ.:ಏಕೀಕರಣ ಚಳುವಳಿ, (ಷೇಕಅಲಿ ಬಿ.(ಪ್ರ.ಸಂ.), 1997, ಕರ್ನಾಟಕ ಚರಿತ್ರೆ,) ಪು.234) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ಅಧ್ಯಾಯ–3

# ಭಾಷಣ ಮತ್ತು ಲೇಖನಗಳಲ್ಲಿ ವಿಜಯನಗರದ ಪ್ರತಿನಿಧೀಕರಣ

* ಭಾಷಣಗಳು
* ಲೇಖನಗಳು



ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು
ಕಾಳ ರಕ್ಕಸನ ಕಡೆಕೂಳು– ಬಾಳಕವಾದ
ನಾಡ ನಡುಮನೆಯ ಕಂಡೆ–

–ಬೇಂದ್ರೆ

## ಅಧ್ಯಾಯ-3

## ಭಾಷಣ ಮತ್ತು ಲೇಖನಗಳಲ್ಲಿ ವಿಜಯನಗರದ ಪ್ರತಿನಿಧೀಕರಣ

**ಭಾಷಣಗಳು :**

ರಾಷ್ಟ್ರೀಯ ಹೋರಾಟ ಜೊತೆಗೇನೆ ಕರ್ನಾಟಕ ಏಕೀಕರಣ ಚಳುವಳಿಯು ಬೆಳೆದು ಬಂದಿದೆ. 20ನೆಯ ಶತಮಾನದ ಆದಿ ಭಾಗದಿಂದ ರಾಷ್ಟ್ರೀಯ ಹೋರಾಟವು ತೀವ್ರ ಸ್ವರೂಪ ಪಡೆದುಕೊಂಡಿತು. ಅದರ ಜೊತೆಗೆ ಕರ್ನಾಟಕ ಏಕೀಕರಣ ಹೋರಾಟವೂ ಕೂಡ ಸಾಗಿತ್ತು. ಭಾಷಿಕ ಆಧಾರದ ಮೇಲೆ ಕರ್ನಾಟಕತ್ವವನ್ನು ನಿರ್ಮಾಣ ಮಾಡಿಕೊಳ್ಳುವ ಹೋರಾಟವು ಸಾಂಸ್ಥಿಕ ರೂಪ ಪಡೆದುಕೊಂಡಿತ್ತು. ಈ ವೇಳೆಗಾಗಲೆ ಆಲೂರರು ಆನೆಗುಂದಿ/ಹಂಪೆಗೆ ಹೋಗಿದ್ದ ಅಲ್ಲಿನ ಅವಶೇಷಗಳನ್ನು ನೋಡಿದಾಗ ಕರ್ನಾಟಕದ ಭವ್ಯ ಪರಂಪರೆಯನ್ನು ಕಂಡು ಬೆರಗಾದರು. ಆ ಸಂದರ್ಭಕ್ಕಾಗಲೇ ಆಲೂರರು ರಾಷ್ಟ್ರೀಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಬಂಗಾಲದ ವಿಭಜನೆಯ ಕಾರಣಕ್ಕಾಗಿ ಹುಟ್ಟಿಕೊಂಡಿದ್ದ ವಂಗಭಂಗ ಚಳುವಳಿಯನ್ನು ಕಂಡಿದ್ದರು. ಮೊದಲೇ ಇದ್ದ ರಾಷ್ಟ್ರೀಯತ್ವದ ಭಾವನೆಗೆ ಆನೆಗುಂದಿಯ ದರ್ಶನದಿಂದ ಕರ್ನಾಟಕತ್ವದ ಸ್ವರೂಪ ಹುಟ್ಟಿಕೊಂಡಿತು. ಆಗ ಕರ್ನಾಟಕಕ್ಕೆ ತಮ್ಮ ಸೇವೆ ಮೀಸಲೆಂದು ಭಾವಿಸಿದರು. ಅದಕ್ಕಾಗಿ ಗತವೈಭವ ಕೃತಿಯನ್ನು ರಚಿಸುವುದರ ಮೂಲಕ ತಮ್ಮಲ್ಲಿದ್ದ ಕರ್ನಾಟಕತ್ವದ ಕಲ್ಪನೆಗೆ ಸಾಂಘಿಕ ರೂಪ ನೀಡಲು ಪ್ರಯತ್ನಿಸಿದರು. ಹಾಗೆಯೇ ಈ ಸಂದರ್ಭಕ್ಕಾಗಲೇ ರಚಿಸಲ್ಪಟ್ಟಿದ್ದ ರಾಬರ್ಟ್ ಸಿವೆಲ್ಲರ 'ಮರೆತುಹೋದ ಸಾಮ್ರಾಜ್ಯ' (Forgotten Empire), ಬಿ.ಸೂರ್ಯನಾರಾಯಣರಾಯರ 'ಎಂದೂ ಮರೆಯದ ಸಾಮ್ರಾಜ್ಯ' (Never-to be Forgotten Empire) ಕೃತಿಗಳು ಪ್ರಕಟಗೊಂಡು ವಿಜಯನಗರದ ಅಭಿಮಾನವನ್ನು ವೃದ್ಧಿಸಿದ್ದವು. ಮುಂದೆ ಬಂದಂತಹ ಆಲೂರರ 'ವಿದ್ಯಾರಣ್ಯ ಚರಿತ್ರೆ', ಶಾಂತಕವಿಗಳ 'ವಿದ್ಯಾರಣ್ಯ ಕೀರ್ತನ' ಹಾಗೂ ರಾಜಪುರೋಹಿತ, ನರಗುಂದಕರ ಮುಂತಾದವರ ಲೇಖನಗಳಿಂದ ವಿಜಯನಗರದ ಅಭಿಮಾನವು ಕರ್ನಾಟಕ ತುಂಬೆಲ್ಲ ಹಬ್ಬಿತು. ಹೀಗೆ ವಿಜಯನಗರಕ್ಕೆ ಐತಿಹಾಸಿಕ ಮಹತ್ವ ಪ್ರಾಪ್ತಿಯಾಯಿತು.

1920ರ ದಶಕದಲ್ಲಿ ಕರ್ನಾಟಕ ಏಕೀಕರಣ ಸ್ಪಷ್ಟ ರೂಪವನ್ನು ಪಡೆಯುತ್ತಿತ್ತು. ಭಾವೀ ಕರ್ನಾಟಕದ ನೀಲ ನಕ್ಷೆಯನ್ನು ಸಹ ರೂಪಿಸಿಕೊಂಡಿದ್ದರು. ಆಗ ಕರ್ನಾಟಕದ ಕಾಯದೆ ಮಂಡಲವನ್ನಾಗಿ ಯಾವ ಪ್ರದೇಶವನ್ನು ಮಾಡಬೇಕೆಂಬ ಚರ್ಚೆ ಹುಟ್ಟಿಕೊಂಡಿತು. ಈ ಕುರಿತು ಆರ್.ಬಿ.ಕುಲಕರ್ಣಿಯರವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

> "ಭಾವೀ ಕರ್ನಾಟಕವು ಮಾಲಾಕರವಾಗಿ ಹಬ್ಬುವುದರಿಂದ ಒಂದೇ ಕೇಂದ್ರ ಸ್ಥಾನದಲ್ಲಿ ಕಾಯದೆ ಮಂಡಳವು ಸತತವಾಗಿ ಉಳಿಯುತ್ತ ಹೋದರೆ, ಉಳಿದ

> ಕರ್ನಾಟಕ ಭಾಗವು ಉದಾಸೀನವಾಗಬಹುದು. ಈಗ ಪುಣೆಯಲ್ಲಿ ಸರಕಾರದ ಕಾಯದೆ ಮಂಡಳವು ಕೂಡುವಂತೆ ಭಾವೀ ಕರ್ನಾಟಕದಲ್ಲಿಯೂ ಒಂದೆರಡು ಸ್ಥಾನಗಳನ್ನು ಗೊತ್ತು ಮಾಡಬೇಕಾಗುತ್ತದೆ. ಅವುಗಳಲ್ಲಿ ಒಂದು ಸ್ಥಾನವು ಹಂಪಿ! ಎರಡನೆಯದು ಮಡಿಕೇರಿ ಅಥವಾ ಉದಕಮಂಡಲ! ಇವುಗಳಲ್ಲಿ ಹಂಪಿಯ ಮಹತ್ವವನ್ನು ಕನ್ನಡಿಗರು ಮರೆಯಲಾಗದು. ಎಲ್ಲ ಕನ್ನಡ ಭಾಗದ ಸಭಾಸದರು ಹಂಪಿಯಲ್ಲಿ ಒಟ್ಟುಗೂಡಿ ರಾಜಕಾರಣವನ್ನು ಸಾಗಿಡುವ ಸುದಿನವು ಬಂದರೆ, ಕರ್ನಾಟಕದ ನಷ್ಟಸ್ಮೃತಿಯ ಸಾಮ್ರಾಜ್ಯವನ್ನು ಉದ್ಧರಿಸಿದಂತೆ ಆಗುವುದಲ್ಲದೆ, ಹಂಪೆಯ ಕಾಯದೆ ಮಂಡಳದ ಮಂದಿರವೆಂದರೆ ಕರ್ನಾಟಕದ ವಿಜಯಮಂದಿರವೆಂದೇ ಭಾಸವಾಗುವುದು. ಇದಲ್ಲದೆ ಕನ್ನಡಿಗರು ತಮ್ಮ ಪೂರ್ವಜರ ಋಣವನ್ನು ತೀರಿಸಿ ಕೃತಾರ್ಥರಾಗುವರೆಂದು ಭಾವಿಸಬಹುದು. ಇನ್ನು ಎರಡನೆಯ ಸ್ಥಾನವೆಂದರೆ ಮಡಿಕೇರಿ ಅಥವಾ ಉದಕಮಂಡಲ. ಆರೋಗ್ಯ ದೃಷ್ಟಿಯಿಂದ ಇವೆರಡೂ ಉತ್ತಮವಾಗಿರುವುದರಿಂದ ಇವೆರಡಲ್ಲಿ ಬೇಕಾದ ಒಂದನ್ನು ಆರಿಸಬಹುದು." **(ಕುಲಕರ್ಣಿ ಆರ್.ಬಿ., 1924:56)**

ಇಂತಹ ಚಿಂತನೆಗಳ ಪರಿಣಾಮ ಹಾಗೂ ಈಗಾಗಲೇ ಹಂಪೆಗೊದಗಿದ್ದ ಮಹತ್ವದಿಂದಾಗಿ, 1936ರಲ್ಲಿ ವಿಜಯನಗರ ಸ್ಮಾರಕೋತ್ಸವ ಆಯೋಜಿಸಲು 1929ರ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ಸ್ವೀಕರಿಸಲ್ಪಟ್ಟಿತು.

ಅಂತೆಯೇ 1936ರ ಡಿಸೆಂಬರ್ 25 ರಿಂದ 28ರ ವರೆಗೆ ವಿಜಯನಗರ ಸ್ಮಾರಕೋತ್ಸವ ಹಂಪೆಯಲ್ಲಿ ನಡೆಯಿತು. ಈ ಉತ್ಸವವನ್ನು ಹಂಪೆಯಲ್ಲೇ ನಡೆಸಿದ್ದರ ಬಗ್ಗೆ ಸ್ಮಾರಕೋತ್ಸವ ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ.

> "ಹಿಂದಕ್ಕೆ ಕರ್ನಾಟಕವು ವಿಜಯನಗರಕ್ಕಿಂಲೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಕಟ್ಟಿರುತ್ತದೆ. ಆದರೆ ಅವೆಲ್ಲವುಗಳಿಗಿಂತ ವಿಜಯನಗರಕ್ಕೆ ಒಂದು ವಿಶೇಷವಾದ ಮಹತ್ವವಿರುತ್ತದೆ. ಅದೇನೆಂದರೆ, ವಿಜಯನಗರವು ಹಿಂದುಸ್ತಾನದ ಇತಿಹಾಸದಲ್ಲಿ ಕಳೆದು ಹೋದ ಸ್ವಾತಂತ್ರ್ಯವನ್ನು ಮರಳಿ ಗಳಿಸಿ, ಅತ್ಯಂತ ವೈಭವದಿಂದ ರಾಜ್ಯವನ್ನು ಕಟ್ಟಿದ ಎಲ್ಲಕ್ಕೂ ಮೊಟ್ಟಮೊದಲಿನ ಸಾಮ್ರಾಜ್ಯವು. ಆ ಮೊದಲು ಈ ಸ್ವಾತಂತ್ರ್ಯ ಸಂಪಾದನೆಯ ಕಾರ್ಯವನ್ನು ವಿಜಯನಗರದಂತೆ ಹಿಂದುಸ್ತಾನದ ಮತ್ತಾವ ರಾಜ್ಯವೂ ಯಶಸ್ವಿಯಾಗಿ ಕೊನೆಗಾಣಿಸಿರಲಿಲ್ಲ." (ವಿಜಯನಗರ ಸ್ಮಾರಕೋತ್ಸವ, 1936:3)

ಆ ಸಂದರ್ಭದಲ್ಲಿ ಭಾರತದಲ್ಲಿ ಮುಸ್ಲಿಮರ ವಿರುದ್ಧ ಸೆಡ್ಡು ಹೊಡೆದು ನಿಲ್ಲಬಲ್ಲ ಸಂಸ್ಥಾನಗಳು ಯಾವುವು ಇದ್ದಿಲ್ಲ. ಅಂತಹ ಕಾಲದಲ್ಲಿ ಮುಸ್ಲಿಮರನ್ನು ಎದುರು

ಹಾಕಿಕೊಂಡು ಹುಟ್ಟಿದ್ದು ವಿಜಯನಗರ. ಪ್ರಬಲರಾದ ಮುಸ್ಲಿಮರ ವಿರುದ್ಧ ರಾಜ್ಯ ಕಟ್ಟುವುದು ಸುಲಭದ ಮಾತಾಗಿರಲಿಲ್ಲ. ಅಂತಹ ಕೆಲಸ ಕನ್ನಡಿಗರಿಂದಾದದ್ದಕ್ಕೆ ಹೆಮ್ಮೆ ಪಡುತ್ತಾ, ಆ ಸವಿನೆನಪಿಗೋಸ್ಕರವಾಗಿ, ಮತ್ತು ಸಮಕಾಲೀನ ಸಂದರ್ಭದಲ್ಲಿ ಮತ್ತೆ ನಾಡನ್ನು ಕಟ್ಟಿಕೊಳ್ಳಬೇಕೆಂಬ ಹಂಬಲದಿಂದ ಆ ಸ್ಥಳದಲ್ಲಿಯೇ ಸ್ಮಾರಕೋತ್ಸವ ನಡೆಸುವುದರ ಮೂಲಕ ಕನ್ನಡ, ಭಾರತ ಗುರುತನ್ನು ವೈದಿಕ ಧರ್ಮದ ಹಿನ್ನೆಲೆಯಲ್ಲಿ ಕಟ್ಟಿಕೊಳ್ಳಲು ಪ್ರಯತ್ನಿಸಿದ್ದಾರೆ.

ಈ ಉತ್ಸವ ನಡೆಸುವ ಉದ್ದೇಶವನ್ನು ಕುರಿತು ವಿಜಯನಗರ ಸ್ಮಾರಕೋತ್ಸವ ವರದಿಯ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ.

> "ಈ ಮಹೋತ್ಸವವನ್ನು ಜರುಗಿಸುವ ಮುಖ್ಯ ಉದ್ದೇಶಗಳು ಎರಡು. 1. ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಕರ್ನಾಟಕಸ್ಥರಲ್ಲಿ ಜಾಗ್ರತಗೊಳಿಸುವುದು. 2. ಮರೆತುಹೋದ ವಿಜಯನಗರ ಸಾಮ್ರಾಜ್ಯದ ಇತಿಹಾಸವನ್ನು ಉದ್ಧಾರ ಮಾಡುವುದು. ರಾಷ್ಟ್ರೀಯತ್ವವನ್ನು ಜಾಗ್ರತೆಗೊಳಿಸುವ ಮತ್ತು ಅಭಿವೃದ್ಧಿಗೊಳಿಸುವ ಪ್ರತಿಯೊಂದು ಪ್ರಸಂಗದ ಲಾಭವನ್ನು ತೆಗೆದುಕೊಳ್ಳುವುದು, ದೂರದೃಷ್ಟಿಯುಳ್ಳ ರಾಷ್ಟ್ರ ನಿರ್ಮಾತರ ಕರ್ತವ್ಯವು. ಕರ್ನಾಟಕತ್ವವನ್ನೂ ರಾಷ್ಟ್ರೀಯತ್ವವನ್ನೂ ಜಾಗ್ರತಗೊಳಿಸುವುದಕ್ಕೆ ಕರ್ನಾಟಕಸ್ತರಿಗೆ ವಿಜಯನಗರ ಸ್ಮಾರಕೋತ್ಸವಕ್ಕಿಂತ ಹೆಚ್ಚು ಅನುಕೂಲವಾದ ಸಂಧಿಯು ಸಿಕ್ಕಬಹುದೇ?" (ವಿಜಯನಗರ ಸ್ಮಾರಕೋತ್ಸವ, 1936:3)

ಹಾಲಭಾವಿಯರು ಸ್ಮಾರಕೋತ್ಸವದ ಸ್ವಾಗತಾಧ್ಯಕ್ಷರ ಭಾಷಣದಲ್ಲಿ ಈ ರೀತಿ ಅಭಿಪ್ರಾಯ ಪಡುತ್ತಾರೆ.

> "ನಮ್ಮ ಪೂರ್ವಜರು ಕಟ್ಟಿದ ಸಾಮ್ರಾಜ್ಯದ, ಅವರು ಕಾಯ್ದ ಸಂಸ್ಕೃತಿಯ ನೆನಪು ಮಾಡಿ ಈ ಬಗ್ಗೆ ಅವರಿಗೆ ಕೃತಜ್ಞತೆಯನ್ನು ಸಮರ್ಪಿಸುವುದಲ್ಲದೆ ನಮ್ಮನಮ್ಮೊಳಗಿನ ಭೇದಭಾವಗಳು ಅಳಿದು ಸಾಮ್ರಾಜ್ಯ ಸ್ಥಾಪನೆಯಾದಬಗ್ಗೆ ಯಾವ ಉಜ್ವಲ ಗುಣಗಳು ಜನರಲ್ಲಿ ಉಂಟಾಗಿದ್ದವೊ ಆ ಗುಣಗಳನ್ನು ನಮ್ಮಲ್ಲಿ ತಂದುಕೊಳ್ಳುವುದು. ಕನ್ನಡಿಗರನ್ನಷ್ಟೇ ಅಲ್ಲ ಕರ್ನಾಟಕರಸ್ಥರೆಲ್ಲರನ್ನೂ ಒಂದೇ ಸ್ಥಳದಲ್ಲಿ ಒಟ್ಟುಗೂಡಿಸಿ ಅವರಲ್ಲಿ ಪರಸ್ಪರ ಸ್ನೇಹಭಾವವನ್ನು ಐಕ್ಯತೆಯನ್ನು ಉಂಟು ಮಾಡುವುದು." (ವಿಜಯನಗರ ಸ್ಮಾರಕೋತ್ಸವ, 1936:2)

ಹಲವು ಪ್ರಾಂತ್ಯಗಳಲ್ಲಿ ಚದುರಿ ಹೋಗಿರುವ ಕನ್ನಡಿಗರನ್ನು ಒಂದೇ ಪ್ರಾಂತ್ಯದಡಿ ತರಬೇಕೆಂಬ ಉದ್ದೇಶ ಇಲ್ಲಿ ಕಾಣುತ್ತದೆ.

ಈ ಸಂದರ್ಭದಲ್ಲಿ ಮಾಡಿದ ಭಾಷಣಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಶಂಕರಾಚಾರ್ಯರು(ಡಾ.ಕುರ್ತುಕೋಟಿಯವರು) ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಕುರಿತು ಈ ಮುಂದಿನಂತೆ ನೋಡಬಹುದು.

> "ಕರ್ನಾಟಕ ಪುತ್ರನಾಗಿದ್ದರೂ ಹಿಂದುಸ್ತಾನದ ನಾಗರಿಕನೊಬ್ಬನೂ ನಾನೆಂದು ನನ್ನ ಭಾವನೆ; ಮತ್ತು ಶ್ರೀಶಂಕರ ವಿದ್ಯಾರಣ್ಯರ ಅನುಯಾಯಿಯಾಗಿದ್ದರೂ ರಾಮಾನುಜ, ಮಧ್ವ, ವಲ್ಲಭಾದಿ ಆಚಾರ್ಯರ ಬಗ್ಗೆ ಕಡಿಮೆ ಆದರವುಳ್ಳವನಾಗಿಲ್ಲ. ಅಲ್ಲದೆ, ಬಸವೇಶ್ವರರೇ ಮೊದಲಾದವರ ಹಿಂದೂ ಧರ್ಮದಲ್ಲಿ ಸಮಾವಿಷ್ಟವಾಗಿರುವ ಮತಗಳ ಬಗ್ಗೆಯೂ ನಾನು ಅಷ್ಟೇ ಗೌರವ ಭಾವನೆಯುಳ್ಳವನಾಗಿದ್ದೇನೆ." (ವಿಜಯನಗರ ಸ್ಮಾರಕೋತ್ಸವ, 1936:9)

ಅಂದರೆ ಅವರು ಕರ್ನಾಟಕದಲ್ಲಿ ನಿಂತು ಭಾರತವನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಭಾರತದೊಳಗೆ ಕರ್ನಾಟಕವಿದೆ, ನನ್ನದು ಕರ್ನಾಟಕ ನೆಲ, ಅದರ ಸುತ್ತಲಿರುವುದು ಭಾರತ ಎಂದು ಅಭಿಪ್ರಾಯ ಪಡುತ್ತಾರೆ. ಅಂದರೆ ಭಾರತ ಮತ್ತು ಕರ್ನಾಟಕ ಬೇರೆ ಬೇರೆಯಲ್ಲ ಎರಡೂ ಒಂದೇ ಎನ್ನುವ ಅರ್ಥದಲ್ಲಿ ಅವರು ಬಳಸುತ್ತಾರೆ. ಶಂಕರಾಚಾರ್ಯರು (ಡಾ.ಕುರ್ತಕೋಟಿ) ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದರು. ಹಾಗಾಗಿ ಗಾಂಧೀಜಿಯವರಂತೆಯೇ ಅವರು ಮೊದಲು ಭಾರತದ ಸ್ವಾತಂತ್ರ್ಯವನ್ನು ಆಪೇಕ್ಷಿಸಿ, ನಂತರದಲ್ಲಿ ಪ್ರಾಂತೀಯ ಕಲ್ಪನೆಯನ್ನು ಹೊಂದಿದ್ದಂತೆ ಕಾಣುತ್ತದೆ.

ವಿಜಯನಗರ ಸಾಮ್ರಾಜ್ಯವು ಮುಸಲ್ಮಾರ ದಾಳಿಯನ್ನು ಲೆಕ್ಕಿಸದೆ ಸ್ವಾತಂತ್ರ್ಯವಾಗಿ ತಲೆ ಎತ್ತಿ ಮೆರೆದ ಸಾಮ್ರಾಜ್ಯ. ಅಂತಹ ಸಾಮ್ರಾಜ್ಯದಲ್ಲಿನ ಸ್ವಾತಂತ್ರ್ಯದ ಬಗ್ಗೆ ಕುರ್ತಕೋಟಿಯವರು ಈ ಮುಂದಿನಂತೆ ಹೇಳುತ್ತಾರೆ.

> "ವಿಜಯನಗರದ ಸಾಮ್ರಾಜ್ಯದಲ್ಲಿನ ಪ್ರತಿ ರೈತನು ತನ್ನ ತನ್ನ ಕಬ್ಬಿನ ಹೊಲದಲ್ಲಿ ತನ್ನ ಭಾಗದ ಕಬ್ಬಿನ ಹಾಲನ್ನು, ತನ್ನ ತನ್ನ ಮಾವಿನ ತೋಪಿನಲ್ಲಿ ತನ್ನ ಪಾಲಿನ ಮಾವಿನ ಹೋಳನ್ನೂ ಸುಖಸಂತೋಷದಿಂದ ಸವಿಯುತ್ತಿದ್ದನೆಂದು ಹೇಳಬಹುದು. ಆ ಸಾಮ್ರಾಜ್ಯದ ಆಶ್ರಯದಲ್ಲಿ ಆತನು ಅನುಭವಿಸಬಹುದಾದ ಅಕಲಂಕಿತ ಸ್ವಾತಂತ್ರ್ಯ-ಸುಖಾನುಭವದ ಪರಿಣಾವಾಗಿ, ಆ ಕಾಲದ ಸ್ತ್ರೀ-ಪುರುಷರು ದೇಶಕ್ಕಾಗಿ, ಸಂಸ್ಕೃತಿ, ಸ್ವಾಧೀನತೆಗಳ ಸಂರಕ್ಷಣೆಗಾಗಿ ಪ್ರಾಣಾಹುತಿಯನ್ನು ಮಾಡಲು ಸಿದ್ಧರಾಗಿದ್ದರು." (ವಿಜಯನಗರ ಸ್ಮಾರಕೋತ್ಸವ, 1936:10)

ಇಷ್ಟೊಂದು ಸುಖಸಂತೋಷದಿಂದ ಕಾಲ ನೂಕಲು ಅಲ್ಲಿನ ಆಡಳಿತವೇ ಕಾರಣವಾಗಿತ್ತು. ಆ ಆಡಳಿತಕ್ಕೆ ಧಕ್ಕೆಯುಂಟಾದಾಗ ಸ್ವಾತಂತ್ರ್ಯದಿಂದ ಜೀವನ ಕಳೆಯುತ್ತಿದ್ದ ಜನರು ಸಮಯ ಬಂದಾಗ ಸಾಮ್ರಾಜ್ಯದ ಉಳಿವಿಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು

ಹೋರಾಡಿದರು. ದೇಶದ ಮೇಲಿನ ಪ್ರೀತಿಯಿಂದಾಗಿಯೇ ಅಷ್ಟು ಶೌರ್ಯ ಅವರಲ್ಲಿ ಉಕ್ಕಿ ಬಂತು. ಅಂತಹ ನೆಲದಲ್ಲಿರುವ ಕನ್ನಡಿಗರಾದ ನಾವು ಸಮಕಾಲೀನ ಸಂದರ್ಭದಲ್ಲಿ ದೇಶ ಸ್ವಾತಂತ್ರ್ಯದ ಹೋರಾಟಕ್ಕೆ ಧುಮುಕಲು ಸನ್ನದ್ಧರಾಗಬೇಕೆಂದು ಕರೆ ಕೊಟ್ಟಿದ್ದಾರೆ.

> "ನನ್ನ ಕಣ್ಣೆದುರಿಗಿರುವ ಹಂಪಿಯು ಈ ಹಳೆಯ ಅವಶೇಷಗಳನ್ನು ನೋಡಿದೊಡನೆ, ರಾಮಾಯಣ ಕಾಲದಿಂದಲೂ ಪ್ರಸಿದ್ಧವಾಗಿರುವ ಪಂಪಾಕ್ಷೇತ್ರದ ನೆನಪು ನನಗಾಗುತ್ತದೆ. ಅಯೋಧ್ಯೆಯ ಶ್ರೀರಾಮಚಂದ್ರನೂ ಕಿಷ್ಕಿಂಧೆಯ ಸುಗ್ರೀವನೂ ಇಲ್ಲಿ ಕೂಡಿದ ಚಿತ್ರವು ನನ್ನ ಕಣ್ಣೆದುರಿನಲ್ಲಿ ನಿಲ್ಲುತ್ತದೆ. ಇಬ್ಬರಿಗೂ ಒಂದೇ ತರದ ದುಃಖ; ದುಷ್ಟರಿಂದಾದ ಪತ್ನಿ ವಿಯೋಗ ಇವರಿಬ್ಬರಲ್ಲಿಯೂ; ಸೇವಾಧರ್ಮದ ಉತ್ತಮ ಪ್ರತಿನಿಧಿಯಾದ ಹನುಮಂತನು ಇವರಿಬ್ಬರಲ್ಲಿ ಸ್ನೇಹ ಬೆಳಿಸಿದನು. ಈ ಸ್ನೇಹ ಸಂಬಂಧದದಲ್ಲಿ ಶ್ರೀರಾಮಚಂದ್ರನಿಗೆ ಯಾವ ತರಹದ ವೈಗುಣ್ಯವೂ ಕಂಡುಬರಲಿಲ್ಲ; ತನಗಿಂತ ಕೀಳುತರಗತಿಯವನೊಡನೆ ತಾನು ಸ್ನೇಹ ಬದ್ಧನಾದದೆಂದು ಅವನಿಗೆ ಅನಿಸಲಿಲ್ಲ. ಅವರಿಬ್ಬರ ಏಕೀಕೃತವಾದ ಶಕ್ತಿಗಳು ಜಯವನ್ನು ಪಡೆದವು. ಅವರಿಬ್ಬರ ಸ್ನೇಹಸಂಬಂಧದಲ್ಲಿ ಶಾಠ್ಯವಿರಲಿಲ್ಲ; ಅದೊಂದು ಅತ್ಯಂತ ಪವಿತ್ರ ಸಂಬಂಧವಾಗಿದ್ದಿತು." (ವಿಜಯನಗರ ಸ್ಮಾರಕೋತ್ಸವ, 1936 :11–12)

ಈ ಮಾತಿನಿಂದ ಹಿಂದೂಗಳು ಒಂದು ಮಾತನ್ನು ಅರಿತುಕೊಳ್ಳಬೇಕಾಗಿದೆ. ಆತ್ಮಶ್ರದ್ಧೆಯುಳ್ಳವರಾಗಿ ಬದುಕಬೇಕಾಗಿದೆ. ಮೈಮರೆತು ಕುಳಿತುಕೊಳ್ಳದೆ ಅನ್ಯರೊಡನೆ ವ್ಯವಹರಿಸುವಾಗ ಎಚ್ಚೆತ್ತುಕೊಂಡಿರಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟದ್ದು. ಹಾಗೆಯೇ ತಮ್ಮತಮ್ಮಲ್ಲಿರುವ ತಂಟೆ ತೊಡರುಗಳನ್ನು ತಾವೇ ಪರಿಹರಿಸಿಕೊಳ್ಳಬೇಕು ಎನ್ನುವುದನ್ನು ಪೌರಾಣಿಕ ನಿದರ್ಶನದ ಮೂಲಕ ಸ್ಪಷ್ಟಪಡಿಸುತ್ತಾರೆ.

ಆರ್ಯ ಧರ್ಮವು ಇಂದು ನಾಶವಾಗುವ ಭಯದಲ್ಲಿದೆ. ಇದಕ್ಕೆ ಕಾರಣರು ಮುಸಲ್ಮಾನ ಮತ್ತು ಕ್ರಿಶ್ಚಿಯನ್ ಪ್ರಚಾರಕರೇ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಆರ್ಯ ಧರ್ಮಲ್ಲಿರುವ ಜಾತಿಭೇದದ ಅತಿರೇಕತೆಯೇ ಆಗಿದೆ. ಇದೇ ನೆಲದಲ್ಲಿ ಹುಟ್ಟಿದ ವಿಜಯನಗರ ಸಾಮ್ರಾಜ್ಯವು ಹೇಗೆ ಹಿಂದೂ ಧರ್ಮವನ್ನು ರಕ್ಷಿಸಿತೋ ಅಂತಹದೇ ಜವಾಬ್ದಾರಿ ಇಂದು ನಮ್ಮ ಮೇಲಿದೆ. "ಪುನರುಜ್ಜೀವಿತವಾದ ಹಿಂದೂ ಧರ್ಮಕ್ಕೆ ಪಗಾರಿನ ಪ್ರಚಾರಕರು ಬೇಕಿಲ್ಲ. ಅದು ಸ್ವಯಂ ಪ್ರಕಾಶಿತವಾಗಿ ಕೋಟಿಗಟ್ಲೆ ಜನರನ್ನು ತನ್ನ ಕಡೆಗೆ ಎಳೆದುಕೊಳ್ಳುವುದು." (ವಿಜಯನಗರ ಸ್ಮಾರಕೋತ್ಸವ, 1936:16) ಎಂದು ಹೇಳಿರುವಲ್ಲಿ, ಅಂದಿನ ಸಂದರ್ಭದಲ್ಲಿ ಬ್ರಿಟಿಷರಿಂದ ನೇಮಿಸಲ್ಪಟ್ಟ ಕ್ರೈಸ್ತ ಪಾದ್ರಿಗಳನ್ನು ಮತ ಪ್ರಚಾರ ಕಾರ್ಯಕ್ಕೆಗೊಳ್ಳುತ್ತಿದ್ದರು. ಮತ ಪ್ರಚಾರಕನ್ನು ಪರೋಕ್ಷವಾಗಿ ಟೀಕಿಸುತ್ತಾರೆ. ಬಹುಶಃ ಆ ಸಂದರ್ಭಕ್ಕಾಗಲೇ ಕ್ರೈಸ್ತ ಧರ್ಮವು ಭಾರತದಾದ್ಯಂತ ಅನೇಕ ಜನರನ್ನು ತನ್ನ ತೆಕ್ಕೆಗೆ ಎಳೆದುಕೊಂಡಿತ್ತು. ಆಗ

ಮತಾಂತರಕೊಂಡವರಲ್ಲಿ ಹಿಂದೂ ಧರ್ಮದ ಕೆಳಜಾತಿಯವರೇ ಅಧಿಕರಾಗಿದ್ದರು. ಬಹುಶಃ ಈ ಕಾರಣಕ್ಕಾಗಿಯೇ ಕುರ್ತುಕೋಟಿಯವರು ಹಿಂದೂಗಳು ತಮ್ಮೊಳಗಿನ ಜಾತಿಭೇದವನ್ನು ಬಿಡಬೇಕು ಎನ್ನುತ್ತಾರೆ.

ಅವರು ಹಿಂದೂಸ್ತಾನವನ್ನು ಪ್ರದೇಶವಾಚಿಯಾಗಿ ಗುರುತಿಸುತ್ತಾರೆ. ಅಲ್ಲದೆ ಅದನ್ನು ಆರ್ಯರ ಮೂಲ ಸ್ಥಾನವೆಂತಲೂ ಕರೆಯುತ್ತಾರೆ. ಹಿಂದೂ ಎನ್ನುವುದನ್ನು ವೈದಿಕ ಧರ್ಮ ಎನ್ನುವ ಅರ್ಥದಲ್ಲಿ ಬಳಸಿದ್ದಾರೆ. ಹಿಂದೂಸ್ತಾನದಲ್ಲಿರುವರೆಲ್ಲರೂ ಹಿಂದೂಗಳೇ ಎನ್ನುತ್ತಾರೆ. ಆರ್ಯ ಸಂಸ್ಕೃತಿಯೂ, ಹಿಂದೂ ಧರ್ಮವೂ ಇಡೀ ಮನುಷ್ಯ ಜಾತಿಯ ಅತ್ಯಂತ ಶ್ರೇಷ್ಠವಾದ ವಸ್ತುವು ಎಂದು ಅಭಿಪ್ರಾಯ ಪಡುತ್ತಾರೆ.

> "ಬ್ಯಾರಿಸ್ಟರ ವ್ಯಾಸ್ಪಿಸ್ಟಾ ಇವರು ಕ್ರಿಶ್ಚನ ಧರ್ಮಕ್ಕೆ ಸೇರಿದರೂ ತಾವು ಹಿಂದುಗಳೆಂದು ಹೇಳಿಕೊಳ್ಳಲು ಅಭಿಮಾನ ಪಡುತ್ತಿದ್ದರು. ಕೆಲವು ಶತಮಾನಗಳ ಹಿಂದೆ ಜನ್ಮದಿಂದ ಮುಸಲ್ಮಾನನಾದ ಕಬೀರನಲ್ಲಿ ಹಿಂದೂ ಧರ್ಮವೂ ಹಿಂದೂ ತತ್ವಜ್ಞಾನವೂ ಸಾರ್ಥವಾಗಿ ರೂಪುಗೊಂಡಿದ್ದವು. ಹಿಂದೂ ಧರ್ಮವು ಸರ್ವಸಂಗ್ರಾಹಕ ಧರ್ಮವಾಗಿದೆ, ಆದುದರಿಂದ ಇಡಿಯ ಜಗತ್ತಿನವರೆ ಅದನ್ನು ಉಳಿಸಬೇಕು, ಪೋಷಿಸಿ ಬೆಳೆಸಬೇಕು." (ವಿಜಯನಗರ ಸ್ಮಾರಕೋತ್ಸವ, 1936:17)

ನಿಜವಾದ ಆಧ್ಯಾತ್ಮಿಕತೆಯನ್ನು ಹೊಂದಿರುವ ಧರ್ಮ ಇದಾಗಿದೆ. ಅದಕ್ಕಾಗಿಯೇ ಹಿಂದೂ ಧರ್ಮವನ್ನು ಅನ್ಯ ಮತ ಧರ್ಮೀಯರು ಇದನ್ನು ಒಪ್ಪಿಕೊಂಡಿದ್ದರು. ಇಂತಹ ಧರ್ಮವನ್ನು ಜಗತ್ತಿನ ಧರ್ಮವಾಗಬೇಕಾಗಿದೆ ಎನ್ನುತ್ತಾರೆ. ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಆ ವೇಳೆಗೆ ಭಾರತ ಎನ್ನುವ ಗುರುತು ಸ್ಪಷ್ಟವಾಗಿ ರೂಪುಗೊಂಡಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆ ಸಂದರ್ಭದಲ್ಲಿ ರಾಷ್ಟ್ರೀಯ ಹೋರಾಟವು ಬ್ರಿಟಿಷರ ವಿರುದ್ಧ ನಡೆದಿರುವುದರಿಂದ, ಇಲ್ಲಿರುವ ಎಲ್ಲಾ ಮತ ಧರ್ಮೀಯರು ಒಗ್ಗಟ್ಟಾಗಿ ಬ್ರಿಟಿಷ್ ಪ್ರಭುತ್ವವನ್ನು ವಿರೋಧಿಸಿ, ಆ ಮೂಲಕ ಸ್ವರಾಜ್ಯ ಸ್ಥಾಪಿಸಿಕೊಳ್ಳಬೇಕೆಂದು ಹೇಳುತ್ತಾರೆ.

ಪ್ರತಿಯೊಂದು ಸಂಸ್ಕೃತಿಯ ಜನಾಂಗಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಇಸ್ಲಾಮ್‌ಗೆ ಇರಾನ್, ಬೌದ್ಧರಿಗೆ ಚೀನಾ, ಜಪಾನ್ ಕ್ರಿಶ್ಚಿಯನ್‌ರಿಗೆ ಕ್ರಿಶ್ಚಿಯನ್ ರಾಷ್ಟ್ರಗಳು ಪ್ರಮುಖವಾದ ಸ್ಥಾನಗಳಾಗಿವೆ. ಅದರಂತೆ ಹಿಂದೂ ಸಂಸ್ಕೃತಿಗೆ ಹಿಂದೂಸ್ತಾನವೇ ಪ್ರಮುಖ ಸ್ಥಾನ. ಇಲ್ಲಿ ಹಿಂದೂ ಧರ್ಮವನ್ನು ಕಾಪಾಡಿಕೊಳ್ಳಲೇಬೇಕು.

> "ಹಿಂದೂಸ್ತಾನದಲ್ಲಿ ಉಳಿದವರಿಗೆ ಸ್ಥಾನವಿಲ್ಲೆಂತಲ್ಲ. ಆದರೆ ಅವರು ಮನೆಯ ಯಜಮಾನರಾಗಿತಕ್ಕದ್ದಲ್ಲ ಮಿತ್ರರಂತಿರತಕ್ಕದ್ದು. ಇದನ್ನು ಯಾರೂ ಮರೆಯಕೂಡದು. ನಿಮ್ಮ ಕ್ಷಮಾಗುಣವನ್ನವಲಂಬಿಸಿ ಅದರ ಲಾಭವನ್ನು

> ಹೊಂದಿ ನಿಮ್ಮನ್ನೇ ಹೊರದೂಡಬೇಕೆಂದರೆ, ನಿಮ್ಮನ್ನೇ ದಾಸ್ಯತ್ವದಲ್ಲಿಡಲೆತ್ನಿಸಿದರೆ ಮಾತ್ರ ನೀವು ಯಾರನ್ನೂ ಕ್ಷಮಿಸಕೂಡದು. ಕ್ಷಮಿಸಬಾರದ ಸಮಯದಲ್ಲಿ ಕ್ಷಮಿಸಿ, ದಯೆತೋರಬಾರದ ವಿಷಯದಲ್ಲಿ ದಯೆತೋರಿ ವಿಜಯನಗರದ ಅರಸರು ಸಾಮ್ರಾಜ್ಯವನ್ನು ಕಳೆದುಕೊಂಡಂತೆ ನೀವು ಮಾತ್ರ ಅದೇ ತಪ್ಪನ್ನು ಮಾಡಿ ನಿಮ್ಮ ಹಿಂದೂ ಸಂಸ್ಕೃತಿಯನ್ನು ಹಾಳು ಮಾಡಿಕೊಳ್ಳಬೇಡಿ, ಹಿಂದೂಸ್ತಾನವನ್ನು ಕಳೆದುಕೊಳ್ಳಬೇಡಿರೆಂದೇ ನನ್ನ ಹೇಳಿಕೆ." (ವಿಜಯನಗರ ಸ್ಮಾರಕೋತ್ಸವ, 1936:51)

ಹಿಂದೂಗಳದೇ ದೇಶವಾದ ಹಿಂದೂಸ್ತಾನದಲ್ಲಿ ಎಲ್ಲಾ ಧರ್ಮೀಯರು ಬಂದು ವಾಸಿಸಬಹುದು. ವ್ಯವಹರಿಸಬಹುದು. ಆದರೆ ಒಡೆತನವನ್ನು ಮಾತ್ರ ಅನ್ಯರಿಗೆ ಬಿಟ್ಟುಕೊಡಬಾರದು. ಒಂದು ವೇಳೆ ಅನ್ಯರಿಗೆ ಒಡೆತನ ಮಾಡುವ ಅವಕಾಶ ನೀಡಿದರೆ ಧರ್ಮ ಸಹಿಷ್ಣತೆಗೆ ಪ್ರಾಧಾನ್ಯ ನೀಡಿ ವಿಜಯನಗರ ಸಾಮ್ರಾಜ್ಯವು ಅಳಿದು ಹೋಯಿತು. ಅಂತಹ ತಪ್ಪು ಮರುಕಳಿಸದಂತೆ ಇಂದು ನಡೆದುಕೊಳ್ಳಬೇಕಾಗಿದೆ ಎಂದು ಹೇಳುವುದರ ಮೂಲಕ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ನಮ್ಮನ್ನು ಆಳುತ್ತಿರುವುದನ್ನು ಪರೋಕ್ಷವಾಗಿ ಟೀಕಿಸುತ್ತಾರೆ. ಆ ಮೂಲಕ ಅಧಿಕಾರವನ್ನು(ಸ್ವಾತಂತ್ರ್ಯ) ಪಡೆಯಲು ಪ್ರೋತ್ಸಾಹಿಸುತ್ತಾರೆ.

ಇತಿಹಾಸ ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಡಾ.ಬಿ.ಎ.ಸಾಲೇತೊರೆ ಅವರು ನಾವೆಲ್ಲರೂ(ಕನ್ನಡಿಗರು) ಇಲ್ಲಿ ಕೂಡಿರುವ ಉದ್ದೇಶವೇನೆಂದರೆ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವುದೇ ಆಗಿದೆ. ಎಂದು ಮಾತು ಪ್ರಾರಂಭಿಸಿದ ಅವರು, ವಿಜಯನಗರವು ಸ್ಥಳದ ಮಹತ್ವವನ್ನು ಕುರಿತು ಹೇಳುತ್ತಾ,

> "ಈ ದೇಶವಾದರೂ ಎಂತಹುದು? ನಮ್ಮ ದೇಶದ ಇತಿಹಾಸದಲ್ಲಿ ಅತಿ ಪ್ರಖ್ಯಾತಿಯನ್ನು ಹೊಂದಿದ ಕಿಷ್ಕಿಂಧಾ ಮತ್ತು ಪಂಪಾ ಈ ಹೆಸರುಗಳನ್ನು ಕೇಳಿದ ಕೂಡಲೆ ನಮಗೆ ರಾಮಾಯಣದ ಸ್ಮರಣೆಯಾಗದೆ ಹೋಗುವುದಿಲ್ಲ. ಇದರಂತೆ ವಿರೂಪಾಕ್ಷ ದೇವಾಲಯದ ಹೆಸರು ಕಿವಿಗೆ ಬಿದ್ದ ಕೂಡಲೇ ನಮಗೆ ನಮ್ಮ ದೇಶದ ಇತಿಹಾಸದಲ್ಲಿ ಕೀರ್ತಿವೆತ್ತು ಅಜರಾಮರವಾಗಿ ಹೋದ ಅರಸರ ಹೆಸರು ನೆನಪಾಗುತ್ತವೆ." (ವಿಜಯನಗರ ಸ್ಮಾರಕೋತ್ಸವ, 1936:18)

ಭವ್ಯ ಪರಂಪರೆಯನ್ನು ಹೊಂದಿರುವ ಈ ಸ್ಥಳಕ್ಕೆ ಕ್ರಿ.ಶ.ಪೂರ್ವದ ಇತಿಹಾಸವಿದೆ. ಈ ಪ್ರದೇಶಕ್ಕೆ ರಾಮಾಯಣದ ನಂಟಿದೆ. ಹಾಗೆಯೇ ಇತಿಹಾಸ ಕಾಲದ ಪ್ರಖ್ಯಾತ ಅರಸರ ಕಾಣಿಕೆಯಿದೆ. ಇಂತಹ ಪರಂಪರೆಯನ್ನು ಸ್ಮರಿಸುವುದು ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಕಟ್ಟಿಕೊಳ್ಳುವುದೇ ನಮ್ಮ ಉದ್ದೇಶ ಎಂದು ಹೇಳುತ್ತಾರೆ. ದೇಶ ಎನ್ನುವುದನ್ನು ಹಿಂದೂಸ್ತಾನ ಎನ್ನುವ ಅರ್ಥದಲ್ಲಿ ಬಳಸಿದ ಇವರು ಹಿಂದೂಸ್ತಾನಕ್ಕೆ ಕನ್ನಡಿಗರ ಸೇವೆ ಅಮೂಲ್ಯವಾದುದು

ಎನ್ನುತ್ತಾರೆ. ದೇಶ ಸ್ವತಂತ್ರವಾದರೆ ಮಾತ್ರ ಕಲೆ, ಸಾಹಿತ್ಯ, ಸಂಸ್ಕೃತಿ, ವ್ಯಾಪಾರ, ಧರ್ಮಗಳು ಬೆಳವಣಿಗೆ ಹೊಂದುವವು ಎನ್ನುವ ಮೂಲಕ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಕರೆ ಕೊಡುತ್ತಾರೆ.

ಇತಿಹಾಸ ಸಮ್ಮೇಳನಾಧ್ಯಕ್ಷರಾದ ಡಾ.ಎಚ್.ಕೃಷ್ಣರವರು ತಮ್ಮ ಭಾಷಣದಲ್ಲಿ ವಿಜಯನಗರವನ್ನು ಹಿಂದೂ(ವೈದಿಕ) ಸಂಸ್ಕೃತಿಯ ಭದ್ರಕೋಟೆ ಎಂದು ಕರೆಯುತ್ತಾರೆ. ದಕ್ಷಿಣ ಹಿಂದೂಸ್ಥಾನದಲ್ಲಿ ದೊರೆಯುವ ಇಂದಿನ ಸಂಸ್ಕೃತಿಯ ಅವಶೇಷವೆಲ್ಲ ವಿಜಯನಗರ ಸಾಮ್ರಾಜ್ಯದ ಕುರುಹೆಂದು ಹೇಳುತ್ತಾರೆ. ವಿಜಯನಗರವು ಕನ್ನಡಿಗರ ಸಾಮ್ರಾಜ್ಯವೆಂದು ಪರಿಗಣಿಸಿದರೂ ಭಾರತೀಯರಿಗೂ ಅದು ಹೆಮ್ಮೆಯ ವಿಷಯವೆಂದು ಅವರು ಅಭಿಪ್ರಾಯ ಪಡುತ್ತಾರೆ. ಇವರು ಈ ಸಾಮ್ರಾಜ್ಯವು 1336ರಲ್ಲಿ ಸ್ಥಾಪಿತವಾಗಿ 30 ಜನ ಅರಸರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳುತ್ತಾರೆ. ಹಾಗೆಯೇ ಕಲೆ, ಸಾಹಿತ್ಯ(ಸಂಸ್ಕೃತ, ಕನ್ನಡ, ತೆಲುಗು, ತಮಿಳು), ಧರ್ಮಕ್ಕೆ ವಿಶೇಷ ಪ್ರಾಧಾನ್ಯತೆ ನೀಡಿದ ಸಾಮ್ರಾಜ್ಯವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ.

ಡಾ.ಎಸ್.ಸಿ.ನಂದಿಮಠ ಅವರು ಸಾಹಿತ್ಯೋತ್ಸವದ ಭಾಷಣವನ್ನು ಮಾಡುತ್ತಾ, ಹಂಪೆಯ ಪರಿಸರದಲ್ಲಿ ಸಾಹಿತ್ಯ ರಚಿಸಿದ ಕವಿಗಳನ್ನು ಹೆಸರಿಸುತ್ತಾರೆ. ಹಾಗೆಯೇ ಹಂಪೆಯನ್ನು ಸರಸ್ವತಿಯ ಮಂದಿರವೆಂದು ಕರೆಯುತ್ತಾರೆ. ಹಿಂದೆ ಸಂಸ್ಕೃತವನ್ನು ಅನುಸರಿಸುತ್ತಿದ್ದ ಕನ್ನಡ ಸಾಹಿತ್ಯವು ಈಗ ಇಂಗ್ಲೀಷನ್ನು ಅನುಕರಿಸುತ್ತಿದೆ. ಇದರಿಂದಾಗಿ ಕನ್ನಡ ಸಾಹಿತ್ಯಕ್ಕೆ ಸೋಪಜ್ಞತೆ ಇಲ್ಲವೆ ಎನ್ನುವ ಪ್ರಶ್ನೆಯನ್ನು ಎತ್ತಿಕೊಂಡು, ಅದಕ್ಕೆ ಅವರು ಈ ಮುಂದಿನಂತೆ ಉತ್ತರಿಸುತ್ತಾರೆ.

> "ಇಂಗ್ಲೀಷ್ ಸಾಹಿತ್ಯದ ಸಂಪರ್ಕದಿಂದ ಕನ್ನಡ ಸಾಹಿತ್ಯಕ್ಕೆ ಒಳ್ಳೆ ಪರಿಣಾಮವುಂಟಾಗಿದೆಯೆಂದು ನಾನು ಹೇಳಬಲ್ಲೆ. ಇಂಗ್ಲೀಷಿನ ವರ್ಚಸ್ಸಿನಿಂದ ನಮ್ಮ ಸಾಹಿತ್ಯದಲ್ಲಿ ಮುಖ್ಯವಾಗಿ ಮೂರು ಮಹತ್ವದ ಮಾರ್ಪಾಟುಗಳು ಕಂಡು ಬರುತ್ತವೆ. 1. ಎಲ್ಲ ಜನರಿಗೂ ತಿಳಿಯುವಂಥ ಸುಲಭ ಸಾಹಿತ್ಯದ ಆವಿರ್ಭಾವವು 2. ಸಾಹಿತ್ಯದಲ್ಲಿ ಸಾಮಾನ್ಯ ಜನರ ಜೀವನವನ್ನು ಚಿತ್ರಿಸುವದು. 3. ಸಾಹಿತ್ಯದಲ್ಲಿ ಹೊಸ ರೀತಿಯ ಬೆಳವಣಿಗೆಗಳು." (ವಿಜಯನಗರ ಸ್ಮಾರಕೋತ್ಸವ, 1936:32)

ಒಂದು ಭಾಷಾ ಸಾಹಿತ್ಯವು ಅನ್ಯ ಭಾಷಾ ಸಾಹಿತ್ಯದಿಂದ ಎರವಲು ಪಡೆದುಕೊಂಡಾಗ, ನಮ್ಮ ಸಾಹಿತ್ಯದಲ್ಲಿರುವ ಕೊರತೆಯನ್ನು ತುಂಬಿಕೊಳ್ಳಲು ಸಹಾಯಕವಾಗುತ್ತದೆ. ಆ ಮೂಲಕ ಇಂಗ್ಲೀಷ್ ಭಾಷಾ ಸಂಪರ್ಕವು ಅಗತ್ಯ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ.

ನಮ್ಮಲ್ಲಿ ವಿವಿಧ ಬಗೆಯ ಗದ್ಯ ಸಾಹಿತ್ಯ ಸೃಷ್ಟಿಯಾಗಬೇಕಿದೆ ಎನ್ನುತ್ತಾ, ಜನರಿಗೆ ಜ್ಞಾನವನ್ನುಂಟು ಮಾಡುವ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪ್ರಾಣಿಶಾಸ್ತ್ರ, ವಿಜ್ಞಾನಶಾಸ್ತ್ರ, ಇತಿಹಾಸ ಮತ್ತು ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಯಾಗಬೇಕು ಎನ್ನುತ್ತಾರೆ. ನಮ್ಮ

ಸಾಹಿತ್ಯದಲ್ಲಿ ನಮ್ಮ ಜೀವನದ ಎಷ್ಟೋ ಭಾಗಗಳು ಸ್ಥಾನವನ್ನು ಪಡೆದಿಲ್ಲ. ಸಾಹಿತ್ಯವು ಜೀವನದಷ್ಟೆ ವಿಶಾಲವಾಗಬೇಕು ಎಂದು ಹೇಳುವ ಮೂಲಕ ಯಾವ ಬಗೆಯಲ್ಲಿ ಸಾಹಿತ್ಯ ರೂಪುಗೊಳ್ಳಬೇಕು ಎನ್ನುವುದನ್ನು ಅಭಿವ್ಯಕ್ತಿಸುತ್ತಾರೆ.

ಕರ್ನಾಟಕವನ್ನು ಏಕೆ ಒಂದೇ ಪ್ರಾಂತ್ಯಕ್ಕೆ ತರಬೇಕು ಎನ್ನುವ ವಿಷಯವಾಗಿ ಅವರು ಈ ಮುಂದಿನಂತೆ ಅಭಿಪ್ರಾಯ ಪಡುತ್ತಾರೆ. ಬೇರೆ ಬೇರೆ ಪ್ರದೇಶದಲ್ಲಿರುವ ಒಂದೇ ಭಾಷೆಯನ್ನಾಡುವ ಜನರನ್ನು ಒಂದೇ ಕಾಲಕ್ಕೆ ಬಳಕೆಯಲ್ಲಿ ತರಲು ಸಾಧ್ಯವಾಗುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿನ ಬಳಕೆ ಹೆಚ್ಚಾದರೆ ಮಾತ್ರ ಅದನ್ನು ಸಾಧಿಸಬಹುದು. ಈ ರೀತಿ ಆಗಬೇಕಾದರೆ ಕರ್ನಾಟಕ ಒಂದೇ ಪ್ರಾಂತ್ಯ ಆಗಬೇಕು ಎನ್ನುತ್ತಾರೆ.

ಸಾಹಿತ್ಯೋತ್ಸವ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ.ಬಿ.ಎಂ.ಶ್ರೀಕಂಠಯ್ಯನವರು ಕನ್ನಡ ಭಾಷೆಯನ್ನು ತಾಯಿಯೊಂದಿಗೆ ಸಮೀಕರಿಸುತ್ತಾರೆ. ಕನ್ನಡಿಗರೆಲ್ಲರೂ ಅವಳ ಮಕ್ಕಳೆಂದು ಪರಿಭಾವಿಸಿದಂತಿದೆ. ಕನ್ನಡ ಭಾಷೆಯ ಪ್ರಾಚೀನತೆಯನ್ನು ಹೇಳುತ್ತಾ ತಮ್ಮ ಭಾಷಣವನ್ನು ಆರಂಭಿಸುತ್ತಾರೆ. ಕನ್ನಡ ಭಾಷೆಗೆ 5000 ವರ್ಷಗಳ ಪ್ರಾಚೀನತೆಯಿದೆ. ಅದು ಸಂಸ್ಕೃತದ ಮಗಳಲ್ಲ. ಸಂಸ್ಕೃತದ ಸಮಾನವಾಗಿ ಹುಟ್ಟಿದ ತಂಗಿಯಂತೆ ಎಂದು ಹೇಳುತ್ತಾರೆ. ಇಷ್ಟು ಪ್ರಾಚೀನವಾದ ಭಾಷೆ ಇಂದು ಯಾವ ಸ್ಥಿತಿಯಲ್ಲಿದೆಯೆಂದರೆ ಅವಳು(ಕನ್ನಡ ತಾಯಿ) ಬಡವಳಾಗಿದ್ದಾಳೆ ಎನ್ನುತ್ತಾರೆ. ಇದಕ್ಕೆ ಕಾರಣ ಅವಳಲ್ಲ ಅವಳ ಮಕ್ಕಳಾದ ನಮ್ಮಲ್ಲಿ ಆವರಿಸಿರುವ ಮಂಕುತನವೇ ಕಾರಣ. ಆ ಮಂಕುತನದಿಂದ ಹೊರಬಂದು ಬಡವಳಾಗಿ ಸೊರಗಿಸುವ ಕನ್ನಡ ತಾಯಿಯನ್ನು ಸಂರಕ್ಷಿಸಬೇಕಾದದು ನಮ್ಮ ಕರ್ತವ್ಯ ಎನ್ನುತ್ತಾರೆ. ಬೌದ್ಧರು, ಜೈನರು, ವೀರಶೈವರು, ವೈಷ್ಣವ ಕವಿಗಳು ಕನ್ನಡ ಭಾಷೆಗೆ ಒಲಿದರು. ಕನ್ನಡಕ್ಕೆ ಕನ್ನಡವನ್ನೇ ಕುಣಿಸಿದರು ಎನ್ನುವ ಮೂಲಕ ಕನ್ನಡ ಸಾಹಿತ್ಯ ಚಾರಿತ್ರಿಕ ಪರಂಪರೆಯಲ್ಲಾದ ಪಲ್ಲಟಗಳನ್ನು ಗುರುತಿಸುತ್ತಾರೆ.

> "ವಿಜಯನಗರ ಸಾಮ್ರಾಜ್ಯದ ರಾಜ್ಯವೈಭವವನ್ನುಂಟು ಪ್ರಪಂಚದಲ್ಲಿಯೆ ಹೆಮ್ಮೆಯವಳಾಗಿ ಬಾಳಿ ಬೆಳೆವ ಕನ್ನಡ ತಾಯಿ ಇಂದು ಯಾವ ಅವಸ್ಥೆಯಲ್ಲಿದ್ದಾಳೆ? ಯಾವ ರೀತಿಯಲ್ಲಿದ್ದಾಳೆ? ಎಂಬುದನ್ನು ವಿಚಾರಿಸಿದ್ದೀರಾ? ಈ ಹಂಪೆಯಲ್ಲಿ ಈ ಹಾಳು ಹಂಪೆಯಲ್ಲಿ ನೀವೇನಾದರೂ ಆಕೆಯನ್ನು ಕಂಡಿದ್ದೀರಾ? ಇಲ್ಲವೆ? ಇಲ್ಲವಾದರೆ ನಾನು ಕಂಡಿದ್ದೇನೆ- ಈ ಬಡತನವ ಕೊರಕಿನಲ್ಲಿ ಈ ತುಂಗಾ ತೀರದಲ್ಲಿ ಕಂಣೀರು ಹರಿಸುತ್ತ, ಹರಕು ಚಿಂದೆಯನ್ನುಟ್ಟು ಮರುಗುತ್ತಿರುವ ತಾಯಿಭುವನೇಶ್ವರಿ ಕಾಣಲಾರಳೇ ನಿಮಗೆ? ನಿರ್ವೀರ್ಯರಾದ ನನ್ನನ್ನು ತೊರೆದು ಎಲ್ಲೆಲ್ಲೋ ಹಾರುತ್ತಿರುವ "ನನ್ನ ಮಕ್ಕಳು ಸಾಯುವುದಕ್ಕಿಂತ ಮೊದಲು ನಾನು ಸಾಯಬಾರದೇನಪ್ಪಾ" ಎಂದು

ಮರುಗುತ್ತಿದ್ದಾಳೆ.... ಅದಕೆ ಅದಕ್ಕೇನುತ್ತರ?–" (ವಿಜಯನಗರ ಸ್ಮಾರಕೋತ್ಸವ, 1936:37–38) ಎಂದು ಭಾವನಾತ್ಮಕವಾಗಿ ನುಡಿದಿದ್ದಾರೆ.

ಕನ್ನಡ ಭಾಷೆಯು ಹರಿದು ಹಂಚಿ ಹೋಗಿ, ದೀನಾವಸ್ಥೆಯನ್ನು ತಲುಪಿದ ಸ್ಥಿತಿಯನ್ನು ಕಂಡಂತಹ ಬಿ.ಎಂ.ಶ್ರೀಯವರು ಕನ್ನಡ ತಾಯಿಯ ಸ್ಥಿತಿಯನ್ನು ಅಂದರೆ ಭಾಷೆಯನ್ನು ರಕ್ಷಿಸಿಕೊಳ್ಳಬೇಕಾದ ಅಗತ್ಯತೆಯನ್ನು ಹೇಳುತ್ತಾರೆ. ಇತರೆ ಭಾಷೆಯ ಪ್ರಾಂತ್ಯಗಳಲ್ಲಿನ ಕನ್ನಡಿಗರು ಇನ್ನೊಬ್ಬರ ಭಾಷೆಯನ್ನು ಅನುಕರಿಸುವುದು ಹಿತವಲ್ಲ. ತಾವೆಲ್ಲರೂ ಒಂದು ಪ್ರಾಂತ್ಯಕ್ಕೆ ಸೇರಿ ಆ ಮೂಲಕ ಕನ್ನಡಕ್ಕೆ ಒದಗಿದ ಆಪತ್ತನ್ನು ಪರಿಹರಿಸಿಕೊಳ್ಳಬೇಕಿದೆ. ಇದೇ ನೆಲದಲ್ಲಿ ಹಿಂದೊಮ್ಮೆ ವೈಭವದ ಸಾಮ್ರಾಜ್ಯಗಳನ್ನು ಮೆರೆಸಿದ ಆ ಭುವನೇಶ್ವರಿ ದೇವಿಯನ್ನು ಇಂದು ಮತ್ತೆ ಕಂಡುಕೊಳ್ಳಬೇಕಾಗಿದೆ. ಅಂದರೆ ಕಳೆದು ಹೋದ ವೈಭವವನ್ನು ಪುನರ್ ಸ್ಥಾಪಿಸಬೇಕು. ಎನ್ನುವ ಮಾತುಗಳು ವಿಜಯನಗರದ ಮೂಲಕ ಕನ್ನಡಿಗರು ತಮ್ಮ ಗುರುತನ್ನು ನಿರ್ಮಾಣಮಾಡಿಕೊಳ್ಳಬೇಕಾಗಿದೆ ಎಂದು ಕರೆ ನೀಡುತ್ತಾರೆ.

ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಮನೋಹರರಾವ ದೇಶಪಾಂಡೆ ಅವರು ತಮ್ಮ ಭಾಷಣದಲ್ಲಿ, ಕನ್ನಡ ನಾಡಿನ ಯುವಕರ ಬಲವನ್ನು ಬೆಳಸಿ, ಅವರನ್ನು ಭಾರತದಲ್ಲಷ್ಟೇ ಅಲ್ಲ, ಇಡೀ ಜಗತ್ತಿಗೇ ಮೀರುವಂತೆ ಬೆಳೆಸಬೇಕು ಎಂದು ಹೇಳುತ್ತಾರೆ. ಕನ್ನಡಿಗರೆಂದರೆ ಕಲಿಗಳು. ಅಂತಹ ಕಲಿಗಳ ನಾಡಿನಲ್ಲಿ ಇಂದು ಎಂತಹ ಸ್ಥಿತಿ ಎದುರಾಗಿದೆ. ಆದರೂ ಕೂಡ ಯುವ ಜನತೆ ಇತ್ತ ಗಮನ ಹರಿಸುತ್ತಿಲ್ಲ. ಯುವಕರು ಎದ್ದರೇ ದೇಶವೂ ಎದ್ದೀತು ಎನ್ನುವಂತೆ, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಬಹುಮುಖ್ಯವಾದುದು ಎಂದು ಹೇಳುತ್ತಾರೆ. ಹಾಗೆಯೇ

"ಆದರೆ ಇಂದು ನಾವು ಇರುವುದು ಎಲ್ಲಿ? ನಮ್ಮ ಕಲಿತನವೆಲ್ಲಿ? ಒಂದಾನೊಂದು ಕಾಲದಲ್ಲಿ ಸಿಡಿಲಿನ ಗುಡುಗಿನಿಂದ ಅರಿಗಳನ್ನು ಹೆದರಿಸಿದ ಕನ್ನಡಿಗರು, ಚದುರಿಸಿದ ಕನ್ನಡಿಗರು, ಇಂದು ಇಲಿಗಳಾಗಿ ಎಲ್ಲಿಯೋ ಅಡಗಿಕೊಂಡಿರುವರು. ಅವರ ಪ್ರಭೆಯು ಅಳಿಯಿತು! ಹಿರಿತನವು ಉಳಿಯಲಿಲ್ಲ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ನಾವು ಹೇಳ ಹೆಸರಿಲ್ಲದವರಾದೆವು. ಭಾರತದ ಬೇರೆ ಬೇರೆ ಪ್ರಾಂತ್ಯಗಳು ಜಗತ್ತಿನಲ್ಲಿಯ ಬೇರೆ ಬೇರೆ ದೇಶಗಳು ಪ್ರಗತಿಯ ಪಥದಲ್ಲಿ ಭರದಿಂದ ಮುಂದಡಿಯನ್ನು ಇಡುತ್ತಿರಲು ನಾವೇ ಹಿಂದುಳಿಯುವುದು ನಮಗೂ ನಮ್ಮ ಹಿರಿದಾದ ಪರಂಪರೆಗೂ ಸರಿಯಾದುದೆ?" (ವಿಜಯನಗರ ಸ್ಮಾರಕೋತ್ಸವ, 1936:50)

ಹಿಂದೆ ಕಲಿತನದಿಂದ ಹೋರಾಡಿ ಸಾಮ್ರಾಜ್ಯದ ಏಳ್ಗೆಯನ್ನು ಬಯಸಿದ ಕನ್ನಡಿಗರು ಇಂದು ನಾನಾ ಪ್ರಾಂತ್ಯಗಳಲ್ಲಿ ಚದುರಿ ಅವರ ಬಾಳು ಇಲಿಯಂತಾಗಿದೆ

ಎಂದು ಖೇದ ವ್ಯಕ್ತಪಡಿಸಿದ್ದಾರೆ. ನಮ್ಮ ಸ್ಥಿತಿ ಹೀಗೆಯೇ ಮುಂದುವರೆದರೆ ಕನ್ನಡ ಸಂಸ್ಕೃತಿ ಒಂದು ದಿನ ನಶಿಸಿ ಹೋಗುತ್ತದೆ. ಈಗಾಗಲೇ ಬೇರೆ ಬೇರೆ ಪ್ರಾಂತ್ಯಗಳವರು ತಮ್ಮ ಅನನ್ಯತೆಯನ್ನು ರೂಪಿಸಿಕೊಂಡಿದ್ದಾರೆ. ಕನ್ನಡಿಗರಾದ ನಾವು ಒಂದೆಡೆ ಸೇರಿ ನಮ್ಮ ಅನನ್ಯತೆಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ.

ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತಿನ ಅಧ್ಯಕ್ಷರಾದ ಪ್ರೊ.ಕೆ.ವ್ಹಿ.ಅಯ್ಯರ್ ತಮ್ಮ ಭಾಷಣದಲ್ಲಿ ಈ ರೀತಿ ಅಭಿಪ್ರಾಯ ಪಡುತ್ತಾರೆ.

> "ನಾವು ಈಗ ನಿಂತಿರುವ ಸ್ಥಳವು ಪವಿತ್ರವಾದುದು, ಚರಿತ್ರಾರ್ಹವಾದುದು. ಕರ್ನಾಟಕವು ಕಳೆದುಕೊಂಡ ತೌರು. ತಾಯ್ಮನೆಯ ಭಗ್ನಾವಶೇಷ ಗತವೈಭವವನ್ನು ನೆನೆಸಿಕೊಂಡು ಕಣ್ಣೀರಿಡುವ ಹೆಣ್ಣೊಡಲಾಗಕೂಡದು ನಾವು. ಕಳೆದ ದಿನಗಳನ್ನು ಕಣ್ಣ ಮುಂದೆ ಕರೆಯಿಸಿಕೊಂಡು ಕರೆಕರೆ ಪಡಬಾರದು. ಕಡುಗಲಿ ಕನ್ನಡಿಗರ ಹೆತ್ತೊಡಲ ಹೆರಿಗೆ ನಿಂತಿಲ್ಲವೆನ್ನಿಸಬೇಕು." (ವಿಜಯನಗರ ಸ್ಮಾರಕೋತ್ಸವ, 1936:54)

ವಿಜಯನಗರವು ಇಂದು ಅಳಿದು ಹೋಗಿದೆ, ನಿಜ. ಅಳಿದು ಹೋದುದರ ನೆನಪಿನಲ್ಲಿಯೇ ಕಾಲ ಕಳೆಯಬಾರದು. ಕನ್ನಡಿಗರ ಗುಣವೂ ಅದಲ್ಲ. ಎಂತಹ ವೈಭವ ನಮ್ಮ ಕೈ ತಪ್ಪಿ ಹೋಗಿದೆಯೋ ಅಂತಹ ವೈಭವವನ್ನು ಮರುನಿರ್ಮಾಣ ಮಾಡಲಿಕ್ಕೆ ಕನ್ನಡಿಗರೆಲ್ಲರೂ ಸಿದ್ಧರಾಗಬೇಕೆಂದು ಹೇಳುತ್ತಾರೆ. ಆ ಮೂಲಕ ಕನ್ನಡಿಗರು ತಮ್ಮ ಪ್ರಾಂತ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಕರೆ ನೀಡುತ್ತಾರೆ.

ಅರ್ಧ ಜಗತ್ತನ್ನೇ ಜಯಿಸಿದ್ದ ರೋಮ್ ಸಾಮ್ರಾಜ್ಯವು, ಅತಿಯಾದ ವಿಷಯ ಲೋಲುಪತೆಗೆ ಸಿಲುಕಿ ಹೇಗೆ ಅವನತಿ ಹೊಂದಿತೋ, ಹಾಗೆಯೇ ವಿಜಯನಗರ ಸಾಮ್ರಾಜ್ಯವು ಕೂಡ ಅವನತಿ ಹೊಂದಿದ್ದು. ಹಿಂದಿನವರು ಹಾಕಿದ ದಾರಿಯಲ್ಲಿ ನಡೆಯದೇ ಯಾವಾಗ ಸಂಪತ್ತು ಅಧಿಕವಾಯಿತೋ ಆಗ ಸೌಖ್ಯದ ಜೀವನದ ಕಡೆ ಗಮನ ಹೋಗಿ, ಸಾಮ್ರಾಜ್ಯದ ರಕ್ಷಣೆಯ ವಿಚಾರ ನಿರ್ಲಕ್ಷ್ಯಕ್ಕೆ ಒಳಗಾಯಿತು. ಅದಕ್ಕಾಗಿ ನಾವು ಕಟ್ಟಿಕೊಳ್ಳಬೇಕಾದ ಪ್ರಾಂತ್ಯವು ಆಗಾಗ ಬಾರದು ಎನ್ನುವ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಅಖಿಲ ಕರ್ನಾಟಕ 3ನೆಯ ವ್ಯಾಪಾರಿ ಹಾಗೂ ಔದ್ಯೋಗಿಕ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಬೆಲ್ಲದ ಚನ್ನಪ್ಪನವರು ವಿಜಯನಗರ ಸಾಮ್ರಾಜ್ಯದ ವ್ಯಾಪಾರದ ಸ್ಥಿತಿಯನ್ನ ತಿಳಿಸುತ್ತಾ, ಸ್ವಾವಲಂಬಿಗಳಾಗಲು ಸೂಚಿಸುತ್ತಾರೆ. ಬ್ರಿಟಿಷರು ಇಲ್ಲಿನ ಕಚ್ಚಾ ಪದಾರ್ಥಗಳನ್ನು ಬಳಸಿಕೊಂಡು ಅಪಾರವಾದ ಲಾಭ ಗಳಿಸುತ್ತಿದ್ದಾರೆ. ನಾವು ಮಾತ್ರ ನಷ್ಟದಲ್ಲಿಯೇ ಇದ್ದೇವೆ. ಅದಕ್ಕಾಗಿ ದೇಶೀಯರೆಲ್ಲ ಎಚ್ಚೆತ್ತುಕೊಳ್ಳದಿದ್ದರೆ, ಬಡತನದ ಗಂಟನ್ನು

ಬಿಡಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಬ್ರಿಟಿಷರ ಆಡಳಿತ ವ್ಯವಸ್ಥೆಯಿಂದಾಗಿ ನಮ್ಮ ಆರ್ಥಿಕ ಪರಿಸ್ಥಿತಿ ಕುಸಿಯುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅಖಿಲ ಕರ್ನಾಟಕ ಮೂರನೆಯ ವ್ಯಾಪಾರಿ ಪರಿಷತ್ತಿನ ಅಧ್ಯಕ್ಷರಾದ ಪ್ರೊ.ವ್ಹಿ.ಸೀತಾರಾಮಯ್ಯನವರು ಮುಖ್ಯವಾಗಿ ನಾವು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾಗಿದೆ ಎನ್ನುತ್ತಾರೆ. ಆರ್ಥಿಕ ಸ್ಥಿತಿ ಮತ್ತು ನಿರುದ್ಯೋಗ ಇವೆರಡೂ ಸಮಸ್ಯೆಗಳಿಲ್ಲದಿದ್ದರಿಂದಲೇ ವಿಜಯನಗರ ಜನತೆಯು ಸುಖದಿಂದ ಬಾಳಲು ಸಾಧ್ಯವಾಗಿದೆ. ನಮ್ಮ ದೇಶದಲ್ಲಿ ಪ್ರತಿಶತ 70 ರಷ್ಟು ಜನ ಒಕ್ಕಲುತನವನ್ನೇ ಅವಲಂಬಿಸಿದ್ದಾರೆ. ಉಳಿದ ಬಹುತೇಕ ಜನ ಗುಡಿ ಕೈಗಾರಿಕೆಯನ್ನು ನಂಬಿ ಜೀವನ ಸಾಗಿಸುತ್ತಿದ್ದಾರೆ. ಬ್ರಿಟಿಷರ ಆಡಳಿತದಿಂದಾಗಿ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಯಂತ್ರಗಳ ಬಳಕೆ ಮತ್ತು ಸಿದ್ಧ ಮಾದರಿಯ ವಸ್ತುಗಳನ್ನು ಇಂಗ್ಲೇಂಡ್‌ನಿಂದ ತರಿಸುತ್ತಿದ್ದಾರೆ. ಇದರಿಂದಾಗಿ ನಮ್ಮ ಆರ್ಥಿಕ ಪರಿಸ್ಥಿತಿಯು ದಿನದಿಂದ ಕುಸಿಯುತ್ತಿದೆ ಎಂದು ಖೇದ ವ್ಯಕ್ತಪಡಿಸುತ್ತಾರೆ. ಅವರು ಮೊದಲು ಬದುಕು ನಂತರ ಧರ್ಮ ಎಂದು ಹೇಳುತ್ತಾರೆ.

> "ಹೊಟ್ಟೆಗಿಲ್ಲದೆ ಹೊಡೆದಾಡುತ್ತಿರುವವರಿಗೆ ಧರ್ಮ ಬೋಧೆ ಮಾಡುವುದು ಅಧರ್ಮ. ಹೊಟ್ಟೆಗಿಲ್ಲದವರಿಗೆ ಧರ್ಮ ಬೋಧೆಯೇಕೆ? ಮೊದಲು ಬದುಕು ಚೆನ್ನಾಗಿದ್ದರೆ ಎಲ್ಲವೂ ಚೆನ್ನಾಗಿರುವುದು." (ವಿಜಯನಗರ ಸ್ಮಾರಕೋತ್ಸವ, 1936:64)

ಅಂದಿನ ಅಬ್ಬರದ ಧರ್ಮ ಪ್ರಚಾರವನ್ನು ಕಂಡು ಕೆರಳಿದಂತಿದೆ. ಪ್ರಾಂತ್ಯ ನಿರ್ಮಾಣಕ್ಕೆ ಕೇವಲ ಧರ್ಮದವೊಂದೆ ಮುಖ್ಯವಲ್ಲ. ಆರ್ಥಿಕ ಸ್ಥಿತಿಯು ಬಹಳ ಮುಖ್ಯವಾದದ್ದು. ಆರ್ಥಿಕ ಸ್ಥಿತಿಯು ಸುಧಾರಿಸಿದರೆ ನಮ್ಮನ್ನು, ನಮ್ಮ ಧರ್ಮವನ್ನು ರಕ್ಷಿಸಿಕೊಳ್ಳಬಹುದು ಎಂದು ಹೇಳಿದ್ದಾರೆ.

ಆರ್ಥಿಕ ವ್ಯವಸ್ಥೆಯಲ್ಲಿ ಬ್ಯಾಂಕುಗಳ ಪಾತ್ರ ಮಹತ್ವದ್ದು. ಗುಜರಾತ ಪ್ರಾಂತ್ಯದಲ್ಲಿ ಈಗಾಗಲೇ ಬ್ಯಾಂಕುಗಳು ಸಾಕಷ್ಟು ಅಭಿವೃದ್ಧಿ ಹೊಂದಿರುವುದು ನಮಗೆ ಮಾದರಿಯಾಗಬೇಕಾಗಿದೆ. ಬಹುಸಂಖ್ಯಾತ ಬ್ಯಾಂಕುಗಳು ಪರದೇಶದವರ ಒಡೆತನದಲ್ಲಿವೆ. ಅಲ್ಲದೆ ಹತ್ತಿ, ಕಬ್ಬಿಣ, ಗೋಧಿ ವ್ಯಾಪಾರಗಳೂ ಕೂಡ ಅವರ ಕೈಯಲ್ಲಿವೆ. ಇವೆಲ್ಲವನ್ನು ದೇಶೀಯ ಒಡೆತನಕ್ಕೆ ತರುವುದು ಅಗತ್ಯವಿದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ. ನಿರುದ್ಯೋಗ, ಬಡತನ, ಆರ್ಥಿಕ ಮುಗ್ಗಟ್ಟು ಇವುಗಳೆಲ್ಲವಕ್ಕೂ ಬ್ರಿಟಿಷರ ಆಡಳಿತವೇ ಕಾರಣ ಎಂದು ಹೇಳುವ ಮೂಲಕ ಬ್ರಿಟಿಷ್ ಸಾರ್ವಭೌಮತ್ವವನ್ನು ವಿರೋಧಿಸುತ್ತಾರೆ. ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ವ್ಯಾಪಾರದ ಅಭಿವೃದ್ಧಿಯ ಮೂಲಕ ಹೇಗೆ ರಾಷ್ಟ್ರವನ್ನು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಹಾಗೆಯೇ ನಾವು ನಮ್ಮ ಆರ್ಥಿಕ ಸ್ಥಿತಿಯನ್ನು ಸುಭದ್ರ

ಪಡಿಸಿಕೊಳ್ಳಬೇಕು. ಆರ್ಥಿಕವಾಗಿ ಸಬಲರಾದರೆ ರಾಷ್ಟ್ರ ನಿರ್ಮಾಣ ಕಾರ್ಯ ಸುಲಭವಾಗುತ್ತದೆ. ಆದರೆ ನಮ್ಮ ಆರ್ಥಿಕ ಸ್ಥಿತಿಯು ಇಳಿಮುಖವಾಗಿದೆ. ಹೀಗೆ

> "ನಮ್ಮ ದೇಶದ ಮೇಲೆ ಪರದೇಶದವರ ಕೈವಾಡವು ಹೆಚ್ಚುತ್ತಿದೆ. ರಾಜಕೀಯ ಗುಲಾಮಗಿರಿಯು ಆರ್ಥಿಕ ದಾಸ್ಯಕ್ಕೆ ಕಾರಣವಾಗುತ್ತದೆಂಬ ಮಾತು ಸುಳ್ಳಲ್ಲ. ನಾವು ಬ್ರಾಹ್ಮಣ ಬ್ರಾಹ್ಮಣೇತರ ಮೊದಲಾದ ಭೇದಭಾವದ ಬೀಜಗಳನ್ನು ಬಿತ್ತಿ, ನಮ್ಮ ಆರ್ಥಿಕ ಜೀವನವನ್ನು ಆಳುಮಾಡಿಕೊಂಡಿದ್ದೇವೆ." (ವಿಜಯನಗರ ಸ್ಮಾರಕೋತ್ಸವ, 1936:66)

ಕನ್ನಡಿಗರಲ್ಲಿರುವ ಜಾತಿ-ಮತಗಳ, ದ್ವೇಷ ಅಸೂಯೆಗಳನ್ನು ಮರೆತು ನಾವೆಲ್ಲರೂ ಒಂದಾಗಬೇಕಾಗಿದೆ. ಎಲ್ಲಾ ಅಂಶಗಳನ್ನು ಗಮನಿಸಿದಾಗ ನಾವು ನಾಡು ಮತ್ತು ರಾಷ್ಟ್ರಗಳಲ್ಲಿ ಆಡಳಿತವನ್ನು ಪರಕೀಯರಿಂದ ಮುಕ್ತಗೊಳಿಸಬೇಕೆಂಬುದು ಸ್ಪಷ್ಟವಾಗುತ್ತದೆ.

ಸಮಾರೋಪ ಸಮಾರಂಭದಲ್ಲಿ ಬಿ.ಎಂ.ಶ್ರೀಯವರು ವಿಜಯನಗರ ಸ್ಮಾರಕ ಮಹೋತ್ಸವ ಸಮಾರಂಭದ ಉದ್ದೇಶವನ್ನು ಕುರಿತು ಹೇಳುತ್ತಾ,

> "ಕನ್ನಡಿಗರು 600 ವರ್ಷಗಳ ಹಿಂದೆ ಮಾಡಿದ್ದನ್ನು ಕೇವಲ ನೆನಿಸಲಿಕ್ಕೆ ಅಲ್ಲ, ಇನ್ನು ಮುಂದೆಯೂ ಮಾಡಲು ಶಕ್ತರಾಗಿದ್ದೇವೆಂದು ತೋರಿಸಲಿಕ್ಕೆ. ಯಾವ ಮಹಾಶಕ್ತಿ ಅಮೂರ್ತವಾಗಿ ಖಂಡಖಂಡವಾಗಿ ಮೂಲೆಮೂಲೆಯಲ್ಲಿ ಬಿದ್ದದ್ದನ್ನು ಒಂದುಗೂಡಿಸಿ ಇಟ್ಟಿದೆಯೋ ಆ ಮಹಾಶಕ್ತಿಯೆ ಮುಂದಿನ ಕಾರ್ಯದಲ್ಲಿಯೂ ನಮಗೆ ಶಕ್ತಿಯನ್ನು ಕೊಡಲಿ." (ವಿಜಯನಗರ ಸ್ಮಾರಕೋತ್ಸವ, 1936:46)

ವಿಜಯನಗರ ಉದಯಿಸಲಿಕ್ಕೆ ಪೂರ್ವದಲ್ಲಿರುವ ಸ್ಥಿತಿಯು ಇಂದು ನಮ್ಮೆದುರಿಗಿದೆ. ಅವರು ಮಾಡಿದ ಕಾರ್ಯವು ಇಂದು ನಮಗೆ ಆದರ್ಶವಾಗಬೇಕಾಗಿದೆ. ಅವರಂತೆ ನಾಡಿಗಾಗಿ, ದೇಶಕ್ಕಾಗಿ, ಧರ್ಮಕ್ಕಾಗಿ ನಿಸ್ವಾರ್ಥದಿಂದ ಹೋರಾಡಿ ಆ ಮೂಲಕ ಸ್ವರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಬೇಕೆಂಬ ಸಂದೇಶವನ್ನು ಕೊಡುತ್ತಾರೆ.

ಸ್ಮಾರಕೋತ್ಸವ ಸಮಾರಂಭದ ಅಧ್ಯಕ್ಷರಾಗಿದ್ದ ಶ್ರೀಶಂಕರಾಚಾರ್ಯ ಕುರ್ತುಕೋಟಿಯವರು ಸಮಾರೋಪ ಭಾಷಣದಲ್ಲಿ,

> "ಈ ಉತ್ಸವವನ್ನು ರಕ್ತದ ಅಕ್ಷರಗಳಿಂದ ಬರೆಯಬೇಕು. ಬದುಕಿದ್ದು ಸಾಯಲಿಕ್ಕೆ ತಯಾರಾಗಿರುವವರು ಇತಿಹಾಸವನ್ನು ರಕ್ತದಿಂದ ಬರೆಯಬಲ್ಲರು. ಅಂಥವನ ರಕ್ತದ ಅಕ್ಷರವಾಗದೆ ರತ್ನದ ಅಕ್ಷರವಾಗಬಹುದು. ಹಿಂದುಸ್ತಾನವು ಎಷ್ಟು ಸೌಮ್ಯವೊ ಅಷ್ಟೇ ಕಠೋರವಾಗಬೇಕು. ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ, ಈ ತರದ ವೃತ್ತಿಯಿರಬೇಕು. ವಿಜಯನಗರವು

ಉದಯೋನ್ಮುಖವಾಗಲಿಕ್ಕೆ ನಷ್ಟವಾದ ರಾಜ್ಯ ಈ ಹಾಳಿನಲ್ಲಿ ಎಲ್ಲಿ ಹೋದರೂ ಒಂದು ತರಹದ ಚೈತನ್ಯವು ಕಂಡುಬರುತ್ತದೆ. ಇದು ನಷ್ಟ ಆದವರನ್ನು ಬದುಕಿಸುವ ಸ್ಥಾನ. ನಿದ್ರೆಯು ವಿಶ್ರಾಂತಿಗಾಗಿ, ಪುನಃ ಹೆಚ್ಚು ಶ್ರಮ ಮಾಡಲಿಕ್ಕೆ. ವಿಜಯನಗರವು ನಷ್ಟವಾದಂತೆ ಕಾಣಿಸುವುದಿಲ್ಲ. ಈ ಮೂರ್ತಿಗಳನ್ನು ಭಂಗಮಾಡಿದವರು ಚೈತನ್ಯವನ್ನು ಉತ್ಪನ್ನ ಮಾಡಲಿಕ್ಕೆ ಮಾಡಿರುವರು. ನಮ್ಮ ನರಸಿಂಹನು ಭಿನ್ನನಾಗಿಲ್ಲ. ಅವನು ನಮಗೆ ಸ್ಫೂರ್ತಿಯನ್ನು ಕೊಡುತ್ತಲಿರುವನು." (ವಿಜಯನಗರ ಸ್ಮಾರಕೋತ್ಸವ, 1936:52–53) ಎನ್ನುತ್ತಾರೆ.

ವಿಜಯನಗರ ಸಾಮ್ರಾಜ್ಯವು ಇಂದು ಹಾಳು ಹಂಪೆಯಾಗಿದ್ದರೂ, ಅದು ಚೈತನ್ಯವನ್ನು ನೀಡುವ ತಾಣವಾಗಿದೆ. ಪರರಲ್ಲಿರುವ ಹಿಂಸಾವೃತ್ತಿಯನ್ನು ತಳ್ಳಿಹಾಕುವುದಕ್ಕಾಗಿ ನಾವು ಬಲಶಾಲಿಗಳಾಗಬೇಕು. ವಿಷಯ ಸುಖವನ್ನು ಬಿಟ್ಟು ದೇಶ ಸೇವೆಗಾಗಿ ನಮ್ಮ ಪ್ರಾಣಾಹುತಿಯಾದರೂ ಚಿಂತೆಯಿಲ್ಲ. ಪರತಂತ್ರದಿಂದ ದೇಶಕ್ಕೊದಗಿದ ಗಂಡಾಂತರವನ್ನು ತಪ್ಪಿಸಬೇಕು. ಸುವರ್ಣ ಅಕ್ಷರಗಳಲ್ಲಿ ನಮ್ಮ ಚರಿತ್ರೆಯನ್ನು ಬರೆದಿಡಬೇಕು. ಅದಕ್ಕಾಗಿ ಕಂಕಣ ಬದ್ಧರಾಗಿ ನಿಲ್ಲಿ. ನಾಡಿಗಾಗಿ, ದೇಶಕ್ಕಾಗಿ, ಧರ್ಮಕ್ಕಾಗಿ ಹೋರಾಡಲು ಸಿದ್ಧರಾಗಿ ಎಂದು ಕರೆ ಕೊಡುತ್ತಾರೆ.

ವಿಜಯನಗರ ಸ್ಮಾರಕೋತ್ಸವದ ಆಚರಣೆಯಿಂದ ತಿಳಿದು ಬರುವ ಪ್ರಮುಖವಾದ ಅಂಶವೆಂದರೆ, 1. ಈ ಸ್ಮಾರಕೋತ್ಸವು ಕನ್ನಡಿಗರಿಗಷ್ಟೇ ಸೀಮಿತವಾಗಿದ್ದಿಲ್ಲ. ಹಿಂದೂಸ್ತಾನದ ಬೇರೆ ಬೇರೆ ಪ್ರಾಂತ್ಯಗಳ ಜನರು ಆಗಮಿಸಿದ್ದರು. 2. ಕನ್ನಡ ಮಾತನಾಡುವ ಜನರು ಹಲವು ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದರು. ಈ ಸ್ಮಾರಕೋತ್ಸವಕ್ಕೆ ಮೈಸೂರು ಕನ್ನಡಿಗರು, ಬ್ರಿಟಿಷ್ ಪ್ರಾಂತ್ಯದಲ್ಲಿದ್ದಂತಹ ಕನ್ನಡಿಗರು, ಸ್ಥಳೀಯ ಸಂಸ್ಥಾನದಲ್ಲಿನ ಕನ್ನಡಿಗರು ಹೀಗೆ ಕನ್ನಡ ಭಾಷಿಕರೆಲ್ಲರೂ ಸೇರಿದ್ದರು. ಇಲ್ಲಿ ಪಂಡಿತರೂ, ಜನರಂಜಕರು, ಸಾಧು ಸತ್ಪುರುಷರು, ಕವಿಪುಂಗವರು, ಇತಿಹಾಸಜ್ಞರು, ಕರ್ನಾಟಕ ಸಾಹಿತ್ಯ ಪರಿಷತ್ತಿನವರು, ಕರ್ನಾಟಕ ಆಯುರ್ವೇದಿಕ್‌ನವರು, ಅಖಿಲ ಕರ್ನಾಟಕ ವ್ಯಾಯಾಮ ಪರಿಷತ್ತಿನವರು, ವ್ಯಾಪಾರ ಮತ್ತು ಔದ್ಯೋಗಿಕ ಸಂಘದವರು ಈ ಸ್ಮಾರಕೋತ್ಸವದಲ್ಲಿ ಭಾಗವಹಿಸಿದ್ದರು. ಹೀಗೆ ಬೇರೆ ಬೇರೆ ಪ್ರಾಂತೀಯ ಕನ್ನಡಿಗರು ಈ ಸ್ಮಾರಕೋತ್ಸವದಲ್ಲಿ ಭಾಗವಹಿಸಿದ್ದನ್ನು ನೋಡಿದರೆ, ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತ್ಯವಾಗುವುದಕ್ಕೆ ಎಲ್ಲರ ಸಹಮತಿ ಇತ್ತು ಎನ್ನುವ ಅಂಶ ಕಂಡುಬರುತ್ತದೆ.

**ಲೇಖನಗಳು :**

ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ವಿಷಯವನ್ನೊಳಗೊಂಡು ರೂಪುಗೊಂಡ ಲೇಖನಗಳು ಹಲವಿವೆ. ಅವುಗಳಲ್ಲಿ ಈ ಮೇಲೆ ವಿವರಿಸಿದಂತೆ ರಾಷ್ಟ್ರೀಯವಾದಿ ಚರಿತ್ರೆಕಾರರ ಮಾದರಿಯಲ್ಲಿ ರೂಪುಗೊಂಡವುಗಳಾಗಿವೆ. ಈ ಲೇಖನಗಳಲ್ಲಿ ಎಲ್ಲಿಯೂ ಸಹ ವಿಜಯನಗರವನ್ನು ಟೀಕಿಸುವುದಾಗಲಿ, ಅಲ್ಲಿನ ಕೊರತೆಗಳನ್ನು ಹೇಳುವುದಾಗಲಿ ಕಂಡು ಬರುವುದಿಲ್ಲ. ಅದೊಂದು ಆದರ್ಶ ಸಾಮ್ರಾಜ್ಯವೆಂದು ಪರಿಗಣಿಸಿ ಅಲ್ಲಿರುವುದೆಲ್ಲವೂ ಶ್ರೇಷ್ಠವೆಂದು ಪರಿಗ್ರಹಿಸಿದಂತಿದೆ.

ವಿಜಯನಗರದ ಕುರಿತು ಪ್ರಕಟವಾಗಿರುವ ಲೇಖನಗಳಲ್ಲಿ ವ್ಯಕ್ತವಾಗಿರುವ ನಾಡು, ರಾಷ್ಟ್ರ ಹಾಗೂ ಧರ್ಮದ ಕುರಿತ ವಿಚಾರಗಳು ಹೇಗೆ ಪ್ರತಿನಿಧೀಕರಣಗೊಂಡಿವೆ ಎನ್ನುವುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

1918ರಲ್ಲಿ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ 'ವಿಜಯನಗರ ಸಾಮ್ರಾಜ್ಯವೂ, ಕನ್ನಡಿಗಗರೂ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ರಾಮರಾವ ನರಗುಂದಕರ ಲೇಖನದಲ್ಲಿ, ಪೂರ್ವದ ಚರಿತ್ರೆಯನ್ನು ಕಟ್ಟಿಕೊಳ್ಳುವಲ್ಲಿ ಕನ್ನಡಿಗರು ಹಿಂದೆ ಬಿದ್ದಿರುವುದರ ಬಗ್ಗೆ ತಿಳಿಸಲಾಗಿದೆ. ಇಂಗ್ಲೀಷ್ ಶಿಕ್ಷಣದ ಪರಿಣಾಮದಿಂದಾಗಿ ನೆರೆಯ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು ತಮ್ಮ ಚರಿತ್ರೆಯನ್ನು ಯುರೋಪನ ಮಾದರಿಯಲ್ಲಿ ಕಟ್ಟಿಕೊಳ್ಳುತ್ತಿದ್ದಾರೆ. ಆ ಭರದಲ್ಲಿ ಅವರು ಕನ್ನಡಿಗರ ಪ್ರದೇಶಗಳನ್ನು ತಮ್ಮವೆಂದು ಹೇಳಿಕೊಂಡಿದ್ದಾರೆ. ಇದನ್ನು ಓದಿದವರು ಅದೇ ಸತ್ಯವೆಂದು ಪರಿಗಣಿಸಿದ್ದಾರೆ. ಅದನ್ನು ಓದಿರುವ ನಮ್ಮವರೂ ಸಹಿತ

> "ನಿಜಸಂಗತಿ ತಿಳಿಯದೆ ಇದ್ದುದರಿಂದ ಅನೇಕ ಮೂಢ ಕನ್ನಡಿಗರು ಅವರ ಲೇಖನಗಳನ್ನು ಓದಿ ಅವು ನಿಜವೆಂದು ಭಾವಿಸಿ 'ಕನ್ನಡಿಗರಿಗೆ ಇತಿಹಾಸವಿಲ್ಲ. ಕನ್ನಡಿಗರಲ್ಲಿ ಶೌರ್ಯವಿಲ್ಲ, ಕನ್ನಡನುಡಿ ಕಾಡುನುಡಿ' ಎಂದು ಪ್ರಲಾಪಗಳನ್ನು ಮಾಡಿ ಕರ್ಣಾಟಕ ದೇಶ ದ್ರೋಹವನ್ನು ಮಾಡತೊಡಗಿದ್ದಾರೆ. ವಿಜಯನಗರವು ಇದ್ದ ನಾಡಿನಲ್ಲಿ ಈವತ್ತಿಗೂ ಕೇವಲ ಶುದ್ಧ ಕನ್ನಡ ನುಡಿಯೇ ಪ್ರಚಾರದಲ್ಲಿದೆ. ವಿಜಯನಗರದ ಒಂದು ಭಾಗವಾದ ಹೊಸಪೇಟೆಯ ಹೆಸರು ಕನ್ನಡವೇ. ವಿಜಯನಗರದಲ್ಲಿ ಸದ್ಯಕ್ಕೆ ದೊರೆಯುವ ಶಿಲಾಲಿಪಿಗಳು ಕೇವಲ ಕನ್ನಡದಲ್ಲಿಯೇ ಇರುತ್ತವೆ. ವಿಜಯನಗರದ ಹಾಳ ಪಟ್ಟಣಗಳಲ್ಲಿ ಎತ್ತ ನೋಡಿದರತ್ತ ಕಾಣುವ ಮೂರ್ತಿಗಳೂ ಗುಡಿಗಳೂ ಪೇಟೆಗಳೂ ಈವತ್ತಿಗೂ ಕನ್ನಡ ಹೆಸರನ್ನೇ ಧರಿಸಿರುತ್ತವೆ." (ರಾಮರಾವ ನರಗುಂದಕರ, 1918: 178)

ವಿಜಯನಗರವು ಕನ್ನಡದ್ದೇ ಎಂದು ಹೇಳಲಿಕ್ಕೆ ಏನೆಲ್ಲಾ ಆಕರಗಳು ಇದ್ದರೂ ಸಹಿತ ದುರಾಭಿಮಾನದ ಅನ್ಯ ಭಾಷಿಕರು ಇದನ್ನು ತಮ್ಮದೆಂದು ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ

ಇರುವ ಆಕರಗಳನ್ನೆಲ್ಲಾ ಶೋಧಿಸಿ ಕನ್ನಡ ನಾಡನ್ನು ಕಟ್ಟಿಕೊಂಡು ಹಿಂದೂಸ್ತಾನದಲ್ಲಿ ನಾವೆಲ್ಲರೂ ಕರ್ನಾಟಕಸ್ಥರೆಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ.

'ಕರ್ನಾಟಕತ್ವದ ಬೆಳವಣಿಗೆಯಲ್ಲಿ ವಿಜಯನಗರದವರ ಕಾರ್ಯ' ಎನ್ನುವ ಲೇಖನದಲ್ಲಿ ಕುಲಕರ್ಣಿ ಪ್ರಹ್ಲಾದರಾಯರು ಕರ್ನಾಟಕತ್ವದ ಬೆಳವಣಿಗೆ ಪ್ರಾಚೀನತೆ ಇದೆ ಎಂದು ಪ್ರತಿಪಾದಿಸುತ್ತಾರೆ. ಕರ್ನಾಟಕತ್ವ ಎನ್ನುವುದಕ್ಕೆ ಅವರು ಈ ರೀತಿ ಹೇಳುತ್ತಾರೆ.

> "ಕರ್ಣಾಟಕ ಕನ್ನಡವೆಂಬ ಹೆಸರಿನ ಜನಾಂಗವೊಂದು ರೂಪುಗೊಂಡಿದ್ದಿತೆಂದು ಹೇಳಿದ ಮಾತ್ರಕ್ಕೆ ಅವರಲ್ಲಿ ಕರ್ನಾಟಕತ್ವದ ಕಲ್ಪನೆ ಬಂದಿತ್ತೆಂದು ಹೇಳಲಿಕ್ಕೆ ಬರುವುದಿಲ್ಲ. ಜನಾಂಗವಾಗಿ ರೂಪುಗೊಂಡ ಹಲವು ಪಂಗಡಗಳು ಇಂದಿಗೂ ತಮ್ಮತನದ ಅರಿವಿಲ್ಲದೆ ಇರುತ್ತವೆ. ಜನಾಂಗಗಳಲ್ಲಿ ತಾವಾಡುವ ಭಾಷೆಗೆ ಮೂರ್ತ ಸ್ವರೂಪ ಕೊಡಬೇಕೆಂಬ, ವ್ಯವಹಾರದ ಭಾಷೆ ಮಾಡಬೇಕೆಂಬ ಕಲ್ಪನೆ ಎಂದು ಬರುವುದೋ ಅಂದೇ ಅವರಲ್ಲಿ ತಮ್ಮತನದ ಹೊಳವು ಬಂದಂತಾಗುವುದು. ಕನ್ನಡಿಗರಲ್ಲಿ ಎಲ್ಲಿಯವರೆಗೆ ತಮ್ಮ ಭಾಷೆಯನ್ನೇ ವ್ಯವಹಾರದ ಭಾಷೆಯನ್ನಾಗಿ ಮಾಡಬೇಕೆಂಬ ಕಲ್ಪನೆಯಿದ್ದಿಲ್ಲವೋ ಅಲ್ಲಿಯವರೆಗೆ ಅವರಲ್ಲಿ ಕರ್ನಾಟಕತ್ವದ, ಕನ್ನಡತನದ ಅರಿವು ಇರಲಿಲ್ಲವೆಂಬುದು ಸ್ಪಷ್ಟವೆ ಇದೆ."
> (ಪ್ರಹ್ಲದರಾಯ ಕುಲಕರ್ಣಿ, 1936:109)

ಯಾವುದೇ ವಸ್ತುವೊಂದು ಇದ್ದು ಅದು ತನ್ನದೆಂಬ ತಿಳಿವಳಿಕೆ ಬಂದ ಮೇಲೆ ಅದರ ಮೇಲೆ ಅಭಿಮಾನ ಹುಟ್ಟುತ್ತದೆ. ಅಂತಹ ಅಭಿಮಾನವೇ ಅವರಲ್ಲಿ ತಮ್ಮತನದ ಗುರುತನ್ನು ಹುಟ್ಟಿಸುತ್ತದೆ. ಭಾಷೆಯ ವಿಷಯದಲ್ಲೂ ಹಾಗೆ, ಕನ್ನಡ ಭಾಷೆ ಎನ್ನುವುದು ಇದೆ. ಆದರೆ ಆ ಭಾಷೆ ತಮ್ಮದೆಂದು ಗುರುತಿಸಿಕೊಳ್ಳುವುದು, ಅದನ್ನು ತಮ್ಮ ವ್ಯವಹಾರಕ್ಕಾಗಿ ಬಳಸಬೇಕೆಂಬ ಇಚ್ಛೆ ಉಂಟಾದಾಗ ಅಲ್ಲಿಯೂ ತಮ್ಮತನದ ಗುರುತು ಹುಟ್ಟಿಕೊಳ್ಳುತ್ತದೆ. ಕನ್ನಡ ಭಾಷೆ ಕೇವಲ ಜನರಾಡುವ ಭಾಷೆಯಾಗಿತ್ತು. ಅದನ್ನು ತಮ್ಮ ಗುರುತೆಂದು ಭಾವಿಸಿಕೊಂಡಾಗ ಅದನ್ನು ಅದು ತಮ್ಮ ಆಡಳಿತ ಭಾಷೆಯಾಗಬೇಕೆಂಬ ಹಂಬಲ ಹುಟ್ಟಿಕೊಂಡಿತು. ಭಾಷೆಯ ಮೇಲಿನ ಈ ಅಭಿಮಾನವೇ ಕನ್ನಡತ್ವವಾಗಿ, ಕನ್ನಡ ಭಾಷೆಯನ್ನಾಡುವ ಪ್ರದೇಶವೇ ಕರ್ನಾಟಕತ್ವವಾಗಿ ರೂಪುಗೊಳ್ಳುತ್ತದೆ.

ಹೀಗೆ ರೂಪುಗೊಂಡ ಕರ್ನಾಟಕತ್ವದ ಪ್ರಾಚೀನತೆಯನ್ನು ಕುರಿತು ಅವರು ಯಾವ ರಾಜ ಮನೆತನವು ಕನ್ನಡವನ್ನು ಆಡಳಿತದಲ್ಲಿ ಬಳಸಿಕೊಂಡಿತೋ, ಆವಾಗಲೇ ಕರ್ನಾಟಕತ್ವದ ಕಲ್ಪನೆ ಹುಟ್ಟಿತು ಎನ್ನುತ್ತಾರೆ. ಚಾಲುಕ್ಯರು ತಮ್ಮ 'ಸೈನ್ಯಕ್ಕೆ ಕರ್ನಾಟಕ ಸೈನ್ಯ' ಎಂದು ಕರೆದುಕೊಂಡಿದ್ದು ಕನ್ನಡ ಭಾಷೆಯ ಗುರುತಾಗಿಯೆ. ಮುಂದೆ ಬಂದಂತಹ ರಾಷ್ಟ್ರಕೂಟ, ಹೊಯ್ಸಳರ ಕಾಲದಲ್ಲಿ ಸೃಷ್ಟಿಯಾದ ಸಾಹಿತ್ಯವನ್ನು ನೋಡಿದರೆ ಅವರು ಕನ್ನಡ ಭಾಷೆಗೆ

ಅಗ್ರಸ್ಥಾನ ನೀಡಿದ್ದರೆಂಬುದಾಗಿ ತಿಳಿದು ಬರುತ್ತದೆ. ಅದೂ ಕೂಡ ಕರ್ನಾಟಕತ್ವದ ಕಲ್ಪನೆ. ಆ ಸಂದರ್ಭದಲ್ಲಿನ ಕನ್ನಡ ಶಾಸನಗಳು ಇರುವುದನ್ನು ನೋಡಿದರೆ ಅಲ್ಲಿನ ಆಡಳಿತ ಭಾಷೆ ಕನ್ನಡವಾಗಿತ್ತು ಎಂದು ಹೇಳಬಹುದಾಗಿದೆ. ಹಾಗೆಯೇ ಈ ಕರ್ನಾಟತ್ವದ ಕಲ್ಪನೆಗೆ ಹೆಚ್ಚಿನ ಮೆರಗನ್ನು ನೀಡಿದ್ದು ವಿಜಯನಗರ ಸಾಮ್ರಾಜ್ಯ. ವಿದ್ಯಾರಣ್ಯರಿಗೆ 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎಂಬ ಬಿರುದು ಕರ್ನಾಟಕತ್ವದ ಆಧಾರದ ಮೇಲೆಯೇ ಇದ್ದಂತದ್ದು. ಅದೊಂದು ಕನ್ನಡಿಗರ ಸಾಮ್ರಾಜ್ಯ ಎನ್ನುವ ಕಾರಣಕ್ಕಾಗಿಯೇ ಆ ಬಿರುದು ಕರೆಯಲ್ಪಟ್ಟಿದ್ದು. ಹಾಗೆಯೇ ಆ ಕಾಲದ ಶಾಸನಗಲ್ಲಿನ 'ಕರ್ನಾಟಕ ವಿಧಿವಿಲಾಸ', 'ಕರ್ನಾಟಕ ಲಕ್ಷ್ಮೀ', 'ಕನ್ನಡ ರಾಜ್ಯರಮಾರಮಣ' ಎನ್ನುವಂತಹವು ಕನ್ನಡದ ಗುರುತನ್ನೇ ಹೇಳುತ್ತವೆ. ವಿಜಯ ನಗರದ ರಾಜರು ಕೊಟ್ಟ ದಾನಪತ್ರ ಬೇರೆ ಬೇರೆ ಭಾಷೆಗಳಲ್ಲಿದ್ದರೂ ಸಹ ರಾಜಮುದ್ರೆಯಲ್ಲಿ 'ಶ್ರೀವಿರೂಪಾಕ್ಷ' ಎನ್ನುವುದು ಮಾತ್ರ ಕನ್ನಡದಲ್ಲಿಯೇ ಇದೆ. ಅಂದರೆ ಕನ್ನಡಕ್ಕೆ ಹೆಚ್ಚಿನ ಸ್ಥಾನ ಇಲ್ಲಿತ್ತು ಎನ್ನುವುದು ಈ ಮೇಲಿನ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ. ಯಾವ ಭಾಷೆಗೆ ಮನ್ನಣೆ ಸಿಕ್ಕು, ಆ ಭಾಷೆಯನ್ನಾಡುವ ಜನರ ಗುರುತಾಗಿ ಅದು ಕಾಣಿಸಿಕೊಳ್ಳುತ್ತದೆ. ಕನ್ನಡ ಭಾಷೆಗೆ ರಾಜರುಗಳ ಆಳ್ವಿಕೆಯ ಅವಧಿಯಲ್ಲಿ ಸಿಕ್ಕ ಮಾನ್ಯತೆಯೇ ಕನ್ನಡಿಗರ ಗುರುತು, ಅದೇ ಕರ್ನಾಟಕತ್ವ ಎಂದು ಹೇಳಬಹುದಾಗಿದೆ.

> "ವಿಜಯನಗರ ಸಾಮ್ರಾಜ್ಯದ ನಾಶದ ಕೂಡ ಕನ್ನಡಿಗರಲ್ಲಿ ಕರ್ಣಾಟಕತ್ವವೂ ಸುಷುಪ್ತಾವಸ್ಥೆಯಲ್ಲಿದ್ದಿತು. ಅದರ ತರುವಾಯ ಆ ಕರ್ಣಾಟಕತ್ವವು ನಡುವೆ ನಡುವೆ ಎಲ್ಲಿಯೋ ಚೇತರಿಸಿಕೊಂತೆ ಕಂಡು ಬರುತ್ತದೆ. ಆದರೆ ಅದು ಸಂಪೂರ್ಣ ಎಚ್ಚರವಲ್ಲ. ಬ್ರಿಟಿಷರ ಆಳಿಕೆಯಲ್ಲಿ ಕನ್ನಡ ನಾಡು ಹರಿದು ಹಂಚಿ ಹೋಗಿ ಕನ್ನಡಿಗರು ಅತಿ ದೈನ್ಯಾವಸ್ಥೆಗಿಳಿದಿದ್ದಾರೆ. ಅದರ ಫಲವಾಗಿಯೂ ಪಾಶ್ಚಾತ್ಯ ಶಿಕ್ಷಣದ ಫಲವಾಗಿಯೂ ಕನ್ನಡಿಗರಲ್ಲಿ ಇಂದು ಹೊಸ ರೀತಿಯಲ್ಲಿ ಕರ್ಣಾಟಕತ್ವವು ತಲೆದೋರಿದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬಂದ ಫಲವ ಬೀಜ ಹೊಸ ಅಂಕುರದೊಡನೆ ಕಾಣಿಸಿಕೊಂಡಿದೆ." (ಪ್ರಹ್ಲದರಾಯ ಕುಲಕರ್ಣಿ, 1936:109)

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಬ್ರಿಟಿಷರ ಆಡಳಿತದಿಂದ ಹರಿದು ಹಂಚಿ ಹೋದ ಕನ್ನಡ ಪ್ರದೇಶಗಳನ್ನು ಏಕೀಕೃತಗೊಳಿಸುವ ನೆಲೆಯಲ್ಲಿಯೇ ಕರ್ನಾಟಕತ್ವದ ಗುರುತು ಮತ್ತಷ್ಟು ನಿಚ್ಚಳಗೊಂಡಿದೆ.

ಹಿಂದೆ ಕನ್ನಡ ಭಾಷೆಗೆ ಸಿಕ್ಕ ಮಹತ್ವವವು ಕರ್ನಾಟಕತ್ವವಾದಂತೆ, ಸಮಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ಅನ್ಯ ಭಾಷಿಕ ಪ್ರಾಂತ್ಯಗಳಲ್ಲಿ ಹಂಚಿಹೋಗಿರುವ ಕನ್ನಡಿಗರು ತಮ್ಮ ಭಾಷೆಯ ಮೇಲಿನ ಅರಿವಿನಿಂದ ಇಂದು ಎಚ್ಚೆತ್ತುಕೊಂಡಿದ್ದಾರೆ. ಆ ಎಚ್ಚರಿಕೆಯ ಪರಿಣಾಮವಾಗಿಯೇ ಅವರು ಕನ್ನಡ ಭಾಷಿಕರೆಲ್ಲರೂ ಒಂದೇ ವ್ಯವಹಾರಿಕ

ಭಾಷೆಯಡಿಯಲ್ಲಿರಬೇಕೆಂದು ಒತ್ತಾಯಿಸುತ್ತಿದ್ದಾರೆ. ಆ ಕರ್ನಾಟಕತ್ವ ಎಂಬ ತಮ್ಮ ಗುರುತನ್ನು ಕಟ್ಟಿಕೊಳ್ಳುತ್ತಿದ್ದಾರೆ.

'ಕರ್ನಾಟಕ ಸಿಂಹಾಸನಾ ಸ್ಥಾಪನಾಚಾರ್ಯ' ಎನ್ನುವ ಲೇಖನದಲ್ಲಿ ಮಧುರ ಚೆನ್ನರು ಹಾಗೂ ಸಿಂಪಿ ಲಿಂಗಣ್ಣನವರು, ವಿದ್ಯಾರಣ್ಯರನ್ನು ಬಸವಣ್ಣನೊಂದಿಗೆ ಸಮೀಕರಿಸುತ್ತಾರೆ. 12ನೆಯ ಶತಮಾನದಲ್ಲಿ ಬಸವಣ್ಣನವರು ಅಂದಿನ ಸಮಾಜದಲ್ಲಿ ಬೇರೂರಿದ್ದ ಅನಿಷ್ಠ ಪಿಡುಗಳಳಾದ ಜಾತಿ ಪದ್ಧತಿ, ಲಿಂಗ ತಾರತಮ್ಯ, ವರ್ಗಭೇದ, ಢಾಂಬಿಕತೆ ಮುಂತಾದವುಗಳ ವಿರುದ್ಧ ಹೋರಾಡಿ, ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಹದಿನಾಲ್ಕನೆಯ ಶತಮಾನದಲ್ಲಿ ಪರಧರ್ಮೀಯರಿಂದ ರಾಜ್ಯಕ್ಕೊದಗಿದ, ಧರ್ಮಕ್ಕೊದಗಿದ ಆಪತ್ತನ್ನು ತಪ್ಪಿಸಲು ವಿದ್ಯಾರಣ್ಯರು ಹೊಸ ಸಾಮ್ರಾಜ್ಯದ ಉದಯಕ್ಕೆ ಕಾರಣರಾದರು. ಇಬ್ಬರೂ ಮಂತ್ರಿವರ್ಯರು; ಇಬ್ಬರೂ ಹುಟ್ಟಿದ್ದು ಬ್ರಾಹ್ಮಣ ಕುಲ; ತೊಟ್ಟದ್ದು ಕನ್ನಡ ಕುಲ. 'ಕುಲ' ಎನ್ನುವ ಪರಿಭಾಷೆಯನ್ನು ಮಾನವಶಾಸ್ತ್ರಜ್ಞರು ತಳಿ, ವಂಶಜರು ಎನ್ನುವ ಅರ್ಥದಲ್ಲಿ ಬಳಸುತ್ತಾರೆ. ಆದರೆ ಇಲ್ಲಿ ಹುಟ್ಟಿದ್ದು ಅವರು ಬ್ರಾಹ್ಮಣ ಕುಲ ತೊಟ್ಟದ್ದು ಕನ್ನಡ ಕುಲ ಎನ್ನುವುದು, ಕನ್ನಡಿಗ ಕುಲ ಎನ್ನುವುದು ವಿಸ್ತೃತ ರೂಪದಲ್ಲಿ ಕನ್ನಡಿಗರ ಕುಲಗುರುಗಳು ಎಂದು ಹೇಳಲಾಗಿದೆ. ಈ ಸಮೀಕರಣವನ್ನು ಗಮನಿಸಿದಾಗ ಇವರಿಬ್ಬರನ್ನು ಕನ್ನಡದ ಮತ್ತು ಬ್ರಾಹ್ಮಣರ ಸಂಕೇತವಾಗಿ ಗುರುತಿಸಲಾಗಿದೆ.

ರಾಷ್ಟ್ರೀಯವಾದಿ ಇತಿಹಾಸಕಾರರು ಯುರೋಪಿನ ಮಾದರಿಯನ್ನು ಅನುಸರಿಸಿ ಇತಿಹಾಸವನ್ನು ವಿಭಾಗಿಸಿದ್ದಾರೆ. ಅದಕ್ಕೆ ಕನ್ನಡವೂ ಹೊರತಲ್ಲ. ಭಾರತದ ಇತಿಹಾಸವನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಎಂದು ವಿಭಾಗಿಸಲಾಗಿದೆ. ಮಧ್ಯಕಾಲೀನ ಇತಿಹಾಸವು ಮಹಮ್ಮದೀಯರ ಆಡಳಿತವನ್ನು ಒಳಗೊಂಡಿದೆ. ಅದೇ ಮಾದರಿಯು ಈ ಲೇಖನದಲ್ಲಿಯೂ ಕಂಡುಬರುತ್ತದೆ. ಮಧ್ಯಕಾಲೀನ ಚಾರಿತ್ರಿಕ ಅಂಶಗಳನ್ನು ಇಲ್ಲಿ 'ವಿಚಿತ್ರ ಕಾಲ' ಎಂದು ಕರೆಯಲಾಗಿದೆ. ಮಹಮ್ಮದೀಯ ಅಕ್ರಮ ಆಡಳಿತವನ್ನು ಜರಿಯಲಾಗಿದೆ. ಅಂದರೆ ಇಡೀ ದಕ್ಷಿಣ ಭಾರತದಲ್ಲಿ ಮುಹಮ್ಮದೀಯರ ಆಡಳಿತದಿಂದ ಹಿಂದೂ ಧರ್ಮವು ಮೃತ ಹಾದಿಯನ್ನಿಡಿದಿತ್ತು. ಅಂತಹ ಸಂದರ್ಭದಲ್ಲಿ ವಿದ್ಯಾರಣ್ಯರು ಧರ್ಮ ರಕ್ಷಣೆಗಾಗಿ ಏನೆಲ್ಲಾ ತ್ಯಾಗ ಮಾಡಿದರು ಎನ್ನುವುದನ್ನು ಹೇಳುತ್ತಾ, ವಿದ್ಯಾವ್ಯಾಸಂಗ ಮುಗಿಸಿ ಗೃಹಸ್ಥನಾಗಬೇಕು ಎನ್ನುವ ಹಂಬಲವನ್ನು ಹೊತ್ತಿದ್ದರು. ಆದರೆ ದೈವಲೀಲೆ ಆಗಿರಲಿಲ್ಲ. ಬಡತನ ಕುಟುಂಬದಲ್ಲಿ ಹುಟ್ಟಿದ ಅವರು ಉಗ್ರವಾದ ತಪಸ್ಸನ್ನು ಆಚರಿಸಿದರು. ಭುವನೇಶ್ವರಿಯನ್ನು ಒಲಿಸಿಕೊಂಡು ಧರ್ಮ ಮತ್ತು ದೇಶ ಸೇವೆಗಾಗಿ ತಮ್ಮ ಐಹಿಕ ಸುಖಗಳನ್ನು ತ್ಯಾಗ ಮಾಡಿದರು ಎನ್ನುವುದನ್ನು ಭಾವನಾತ್ಮಕವಾಗಿ ಹೇಳಲಾಗಿದೆ.

ಸಂಗಮನ ಮಕ್ಕಳಾದ ಹರಿಹರಾದಿ ಸಹೋದರರನ್ನು ಪಂಚಪಾಂಡವರೆಂದು ಕರೆಯುತ್ತಾರೆ. ವಿದ್ಯಾರಣ್ಯರನ್ನು ಕೃಷ್ಣನಿಗೆ ಹೋಲಿಸಿ, ಹರಿಹರನನ್ನು ಅರ್ಜುನನಿಗೆ

ಹೋಲಿಸುತ್ತಾರೆ. ಮಹಾಭಾರತ ಯುದ್ಧದಲ್ಲಿ ಅರ್ಜುನನ ಮೂಲಕ ಕೃಷ್ಣನು ಪಾಂಡವರಿಗೆ(ಧರ್ಮಕ್ಕೆ) ಗೆಲುವನ್ನು ತಂದುಕೊಟ್ಟಂತೆ. ವಿದ್ಯಾರಣ್ಯರು ಹರಿಹರನ ಮೂಲಕ ಧರ್ಮ(ವೈದಿಕ) ರಕ್ಷಣೆಗಾಗಿ ರಾಜ್ಯವನ್ನು ಸ್ಥಾಪಿಸಿದರು. 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎನ್ನುವ ಖ್ಯಾತಿಗೆ ಪಾತ್ರರಾದರು. ಇದು ವಾಸ್ತವ ಸಂದರ್ಭದಲ್ಲಿ ಕನ್ನಡ ಮತ್ತು ಕನ್ನಡಿಗರ ಎನ್ನುವ ಗುರುತನ್ನು ರೂಪಿಸಿಕೊಳ್ಳಲು ಪ್ರೇರಣೆಯಾಗಿದೆ.

ವಿಜಯನಗರವು ಸರ್ವಧರ್ಮ ಸಹಿಷ್ಣತೆಯಿಂದ ಕೂಡಿದ್ದು. ಅದಕ್ಕೆ ಹಲವು ನಿದರ್ಶನಗಳಿವೆ. ಹರಿಹರ ಎನ್ನುವ ಹೆಸರಿನಲ್ಲಿಯೇ ವೈಷ್ಣವ ಮತ್ತು ಶೈವರ ಅನ್ಯೋನ್ಯತೆಯ ಸಂಕೇತವಿದೆ. ಬುಕ್ಕನು ಜೈನರಿಗೂ ಮತ್ತು ವೈಷ್ಣವರಿಗಿದ್ದ ಕಲಹವನ್ನು ಬಗೆಹರಿಸಿ ಅವರಲ್ಲಿ ಒಗ್ಗಟ್ಟು ಮೂಡಿಸಿದ. ವಿಜಯನಗರದ ಧ್ವಜಕ್ಕೆ ಹಂದಿಯ ಚಿತ್ರವನ್ನಿಟ್ಟುಕೊಂಡ್ಡದ್ದೂ ಕೂಡ ಮಹಮ್ಮದೀಯರ ವಿರುದ್ಧವಲ್ಲ. ವರಹಾವತಾರವು ಪರಮಾತ್ಮನ ಅವತಾರಗಳಲ್ಲೊಂದು ಎಂದು ಹೇಳುವುದು ಸಮಂಜಸವಾದುದು. ಹೀಗೆ ವಿಜಯನಗರವು ಪರಧರ್ಮ ಸಮಾನತೆಯನ್ನು ಹೊಂದಿದ ರಾಜ್ಯವಾಗಿತ್ತೆಂದು ಹೇಳುವಲ್ಲಿ ವಾಸ್ತವದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಒಗ್ಗಟ್ಟು ಮುಖ್ಯ ಎನ್ನುವುದನ್ನು ಪ್ರತಿನಿಧಿಸಲಾಗಿದೆ.

> "ರಾಜ್ಯವು ಪ್ರಜೆಗಳದು. ಅರಸು ಬೇಕಿಲ್ಲ. ರಾಜ್ಯಾಧಿಕಾರಿಗಳು ಜನಸೇವಕರು" ಎಂದು ಹೇಳುವುದು ಆಧುನಿಕ ರಾಷ್ಟ್ರ ಧರ್ಮ. "ರಾಜ್ಯವು ನನ್ನದೂ ಅಲ್ಲ, ಪ್ರಜೆಗಳದೂ ಅಲ್ಲ ದೇವನದು. ರಾಜನು ಧರ್ಮ ಸೇವಕ" ಎಂದು ಹೇಳುವುದು ರಾಜಧರ್ಮ. ಈಗ ರಾಷ್ಟ್ರವೇ ದೇವರೆಂದೂ, ಅದರ ಕಲ್ಯಾಣವೇ ತಮ್ಮ ಕಲ್ಯಾಣವೆಂದೂ ತಿಳಿದಿದ್ದರೆ, ಆಗ ಧರ್ಮವೇ ದೇವರೆಂದೂ, ಅದರ ಅನುಸರಣೆಯೇ ತಮ್ಮ ಕಲ್ಯಾಣವೆಂದು ಭಾವಿಸಿದ್ದರು. ರಾಜ್ಯವು ಪ್ರಜಾಪ್ರಭುತ್ವಕ್ಕೊಳಪಟ್ಟಾಗ ಲೋಕಹಿತದ ಕಾರ್ಯಗಳಾಗುವುದಕ್ಕಿಂತ ಹೆಚ್ಚಾಗಿ, ಋಷಿತುಲ್ಯನಾದ ಮಂತ್ರಿಯ ಆಲೋಚನೆ ಕೇಳುವ ಒಬ್ಬ ಧರ್ಮವಂತ ರಾಜನ ಅಧಿಕಾರಕ್ಕೊಳಪಟ್ಟಾಗ ನ್ಯಾಯ-ಶಾಂತಿಗಳು ಲಭಿಸುತ್ತಿದ್ದರೆ ಪ್ರಜಾಪ್ರಭುತ್ವವೇ ಶ್ರೇಷ್ಠವೆಂದು ಹಠವೇಕೆ?" (ಮಧುರ ಚೆನ್ನ, ಸಿಂಪಿ ಲಿಂಗಣ್ಣ, 1936:39)

ರಾಜ್ಯವು ಯಾವುದೇ ಮಾದರಿಯಲ್ಲಿರಲಿ ಅದು ಮುಖ್ಯವಲ್ಲ. ಅಲ್ಲಿ ಧರ್ಮ(ನ್ಯಾಯ ಮಾರ್ಗದಲ್ಲಿ ನಡೆಯುವುದು) ಮುಖ್ಯ. ಎಲ್ಲಿ ನಿಜವಾದ ಧರ್ಮವಿದೆಯೋ, ಅಲ್ಲಿ ನಂಬಿದ ದೇವರಿರುತ್ತಾನೆ. ಅವನ ಆಜ್ಞಾನುಸಾರವೇ ರಾಜ್ಯ ನಡೆಯುತ್ತದೆ. ದೇವರೆನ್ನುವವನು ಇದ್ದಾನೆನ್ನುವುದಾದರೆ ಅಲ್ಲಿ ಅನ್ಯಾಯ, ಅನೀತಿ ನಡೆಯಲಿಕ್ಕೆ ಸಾಧ್ಯವಿಲ್ಲ. ಅದು ಕೂಡ ಪ್ರಜಾಪ್ರಭುತ್ವಕ್ಕೆ ಸಮಾನವಾದುದು ಎಂದು ಹೇಳುವುದರ ಮೂಲಕ ವಿಜಯನಗರದ ಆಡಳಿತವನ್ನು ಸಮರ್ಥಿಸಿಕೊಂಡಿದ್ದಾರೆ. ಜೊತೆಗೆ ವಿಜಯನಗರದ ಅರಸರ ಆಡಳಿತವು ಪ್ರಜಾಪ್ರಭುತ್ವದ ಮಾದರಿಗೆ ಸಮಾನವಾದುದು ಎಂದು ಅಭಿಪ್ರಾಯ ಪಡುತ್ತಾರೆ.

ಈಗಾಗಲೇ ಮರಾಠರು ಶಿವಾಜಿಯನ್ನು ಸಂಕೇತವನ್ನಾಗಿಟ್ಟುಕೊಂಡು ಒಗ್ಗೂಡಿದ್ದಾರೆ. ಲೋಕಮಾನ್ಯ ತಿಲಕ್‌ನಂಥವರು ಶಿವಾಜಿಗೆ ವಿಜಯನಗರ ಸಾಮ್ರಾಜ್ಯವೇ ಮಾದರಿಯಾಗಿತ್ತು ಎಂದು ಗುರುತಿಸಿದ್ದಾರೆ. ಆದರೆ ಕನ್ನಡಿಗರಾದ ನಾವುಗಳೇ ನಮ್ಮ ಪರಂಪರೆಯನ್ನು ಸರಿಯಾಗಿ ಗುರುತಿಸಿಕೊಳ್ಳುತ್ತಿಲ್ಲ. ಹಿಂದಿನ ವೈಭವದ ವಿಜಯನಗರ ನಮಗೆ ಕಾಣದೆ ಅದು ಹಾಳು ಹಂಪೆಯಾಗಿ ಮಾತ್ರ ಕಾಣಿಸುತ್ತಿದೆ. ವಿಜಯನಗರದ ಸ್ಮಾರಕಗಳು ಹಾಳು ಕೊಂಪೆಯಲ್ಲ. ಅವು ಜಡವಾಗಿಲ್ಲ. ಅಲ್ಲಿ ಭವಿಷ್ಯತ್ತನ್ನು ರೂಪಿಸಿಕೊಳ್ಳಲಿಕ್ಕೆ ಬೇಕಾದ ಪ್ರೇರಕ ಶಕ್ತಿಯಿದೆ. ಆ ಶಕ್ತಿಯನ್ನು ಬಳಸಿಕೊಂಡು ಕನ್ನಡಿಗರೆಲ್ಲರೂ ಒಂದಾಗಿ ಆ ಮೂಲಕ ತಮ್ಮ ನಾಡನ್ನು ಕಟ್ಟಿಕೊಳ್ಳಬೇಕಾಗಿದೆ ಎಂದು ಸೂಚಿಸುತ್ತಾರೆ.

'ಹಿಂದೂ ಸಂಸ್ಕೃತಿಯು ವಿಜಯನಗರ ರಾಜ್ಯಕ್ಕೆ ಋಣಿಯಾಗಿಲ್ಲವೆ?' ಎನ್ನುವ ಲೇಖನದಲ್ಲಿ ತಮ್ಮಣ್ಣ ಕುಬೇರಪ್ಪ ತುಕೋಲರು ಹಿಂದೂ ಸಂಸ್ಕೃತಿಯನ್ನು ವಿಜಯನಗರವು ಹೇಗೆ ಪೋಷಿಸಿತು, ಅದರ ಮಹತ್ವವನ್ನು ಎತ್ತಿ ಹಿಡಿತಲ್ಲದೆ, ಅದಕ್ಕೊಂದು ಅನನ್ಯತೆಯನ್ನು ರೂಪಿಸಿಕೊಟ್ಟಿತು ಎನ್ನುವುದನ್ನು ಕುರಿತು ವಿವರಿಸಿದ್ದಾರೆ.

ಕ್ರಿ.ಶ.1294ರಲ್ಲಿ ಮುಸ್ಲಿಮರು ದಕ್ಷಿಣ ಭಾರತದ ಮೇಲೆ ದಾಳಿ ಆರಂಭವಾಯಿತು. ಈಗಾಗಲೇ ಘಜ್ನಿ ಮಹಮ್ಮದನ ಕಾಲಕ್ಕಾಲೇ ಹಿಂದೂ ಸಾಮ್ರಾಜ್ಯಗಳ ಮೇಲೆ ದಾಳಿ ಮಾಡುವುದು ಆರಂಭವಾಗಿತ್ತು. ಮೂರ್ತಿ ಪೂಜಕರಾಗಿದ್ದ ಹಿಂದೂಗಳನ್ನು ಸದೆಬಡಿಯುವುದನ್ನು ಧರ್ಮಯುದ್ಧವೆಂದು ಅವನು ಭಾವಿಸಿದ್ದನಂತೆ. ಅವನ ನಂತರ ಬಂದ ಮುಸ್ಲಿಂ ಅರಸರೂ ಸಹ ಅದೇ ಹಾದಿಯನ್ನು ತುಳಿದರು. ಕ್ರಿ.ಶ.1325ರಲ್ಲಿ ಪಟ್ಟಕ್ಕೆ ಬಂದ ಮಹಮ್ಮದ್‌ಬೀನ್ ತುಘಲಕ್‌ನ ಕಾಲದಲ್ಲಿಯಂತೂ ದಕ್ಷಿಣ ಭಾರತದ ಹಿಂದೂ ಸಾಮ್ರಾಜ್ಯಗಳು ಅವನ ಅಮಾನವೀಯ ಕೃತ್ಯಗಳಿಂದ ಜರ್ಝರಿತವಾದವು. ಆ ಸಂದರ್ಭದಲ್ಲಿ ಹಿಂದೂ ಧರ್ಮದ ಸಾಮಾನ್ಯ ಜನರ ಸ್ಥಿತಿ ಒತ್ತಟ್ಟಿಗಿರಲಿ, ಚಿಕ್ಕಪುಟ್ಟ ಅರಸರುಗಳು ಮುಸಲ್ಮಾನ ವೇಷದಲ್ಲಿ ಹೋಗಬೇಕಾಗಿತ್ತು. ಇಷ್ಟಾದರೂ ಮುಸ್ಲಿಮರ ದೌರ್ಜನ್ಯಕ್ಕೆ ತಡೆ ಇರಲಿಲ್ಲ. ತಾವು ಗೆದ್ದ ಸಾಮ್ರಾಜ್ಯದ ರಾಜರುಗಳ ಚರ್ಮವನ್ನು ಸುಲಿಯುವುದು, ಅವರ ಮಾಂಸಗಳನ್ನು ಅವರ ಹೆಂಡತಿ, ಮಕ್ಕಳು ತಿನ್ನುವಂತೆ ಒತ್ತಾಯಿಸುವುದು, ಈ ಬಗೆಯ ದುಷ್ಕೃತ್ಯಗಳು ನಿರಂತರವಾಗಿ ನಡೆದಿದ್ದವು. ಹಿಂದೂ ಸಂಸ್ಕೃತಿಯಂತೂ ಹಿಂದೂಸ್ತಾನದಲ್ಲಿ ಉಳಿಯಲಾರದೇನೋ ಎನ್ನುವ ಸ್ಥಿತಿಗೆ ಬಂದಿತ್ತು. ಎಂದು ಹೇಳುವ ಮೂಲಕ ವಿಜಯನಗರದ ಅರಸರ ಮತ್ತು ವಿದ್ಯಾರಣ್ಯರ ಘನತೆಯನ್ನು ಹೇಳುವುದಕ್ಕೆ ವೇದಿಕೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಇಲ್ಲಿ ಮುಸ್ಲಿಮರಿಗೆ ಕೇವಲ ರಾಜರನ್ನು ಸೋಲಿಸುವುದು ಮುಖ್ಯವಾಗಿರಲಿಲ್ಲ. ಅವರಿಗೆ ಹಿಂದೂ ಸಂಸ್ಕೃತಿಯನ್ನು ನಾಶ ಪಡಿಸುವುದೇ ಮುಖ್ಯವಾಗಿತ್ತು. ಅದಕ್ಕಾಗಿಯೇ ಅವರು ತಾವು ಗೆದ್ದ ಪ್ರದೇಶಗಳಲ್ಲಿ ಹಿಂದೂ ದೇವಾಲಯಗಳನ್ನು ಕೆಡವಿ ಅದೇ ಸ್ಥಳದಲ್ಲಿ, ಅದೇ ಕಲ್ಲುಗಳಿಂದ ಮಸೀದಿಗಳನ್ನು ನಿರ್ಮಾಣ ಮಾಡಿದರು ಎಂದು

ಹೇಳುವುದು ಕೇವಲ ಹಿಂದೂ ಧರ್ಮದ, ಹಿಂದೂ ರಾಜರುಗಳ ನಾಶವಲ್ಲ. ಅವುಗಳೊಂದಿಗೆ ಕನ್ನಡಿಗರನ್ನೂ, ಕನ್ನಡ ಸಂಸ್ಕೃತಿಯನ್ನೂ ನಾಶ ಮಾಡಿದರು ಎಂದು ಹೇಳುವುದರೊಂದಿಗೆ ಸ್ವ-ದ ನಿರ್ಮಾಣಕ್ಕಾಗಿ ಮುಸ್ಲಿಮರನ್ನು ಅನ್ಯರಾಗಿ ನೋಡುತ್ತಾರೆ.

ಧರ್ಮ ಮತ್ತು ರಾಜಕಾರಣಕ್ಕೆ ಅನ್ಯೋನ್ಯ ಸಂಬಂಧವಿದೆ. ಆ ಸಂಬಂಧದಿಂದ ಆದರ್ಶ ಸಾಮ್ರಾಜ್ಯ ನಿರ್ಮಾಣ ಮಾಡಿಕೊಳ್ಳಲು ಸಾಧ್ಯ. ಎನ್ನವುದನ್ನು ಸಾಬೀತುಪಡಿಸಲು ಕೆಲವು ಚಾರಿತ್ರಿಕ ನಿದರ್ಶನಗಳನ್ನು ಬಳಸಿಕೊಂಡಿದ್ದಾರೆ. ಹಿಂದೂಸ್ತಾನದಲ್ಲಿ ರಾಜಕಾರಣ ಮತ್ತು ಧರ್ಮ ಸಂಯೋಜನೆಯಾದುದು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಅಶೋಕನು ಬೌದ್ಧ ಯತಿಗಳಿಂದ ಸಂಯೋಜನೆ ಪಡೆದುದು, ಗಂಗ ರಾಜ್ಯದ ಉದಯಕ್ಕೆ ಜೈನಯತಿ ಮಾಘನಂದಿಯ ಪ್ರಯತ್ನ, ಹನ್ನೊಂದನೆಯ ಶತಮಾನದಲ್ಲಿ ಹೊಯ್ಸಳರಿಗೆ ಜೈನ ಯತಿಯ ಸಹಾಯ ಇವುಗಳೆಲ್ಲ ಧರ್ಮ ಮತ್ತು ರಾಜಕಾರಣದ ಸಂಯೋಜನೆಯಿಂದಾದವುಗಳೇ. ಅಂತೆಯೇ ಪ್ರಸಿದ್ಧಿಯನ್ನೂ ಕೂಡ ಪಡೆದವು. ಅದರಂತೆ ವಿಜಯನಗರ ಸಾಮ್ರಾಜ್ಯವೂ ಕೂಡ ಈ ಎರಡರ ಸಂಯೋಜನೆಯಿಂದುಂಟಾದದ್ದು. ಆ ಸಂದರ್ಭದಲ್ಲಿ ಹಿಂದೂ ಧರ್ಮಕ್ಕೆ ರಾಜಕಾರಣದ(ಸಾಮ್ರಾಜ್ಯದ) ಅಗತ್ಯತೆಯಿತ್ತು. ಇದಕ್ಕಾಗಿ ಹುಟ್ಟುವ ರಾಜ್ಯಕ್ಕೆ ದೈವಿ ಶಕ್ತಿ(ಧರ್ಮ)ಯ ಅಗತ್ಯತೆಯೂ ಇತ್ತು. ಒಂದು ರಾಜ್ಯ ಹುಟ್ಟಬೇಕೆಂದರೆ ಒಬ್ಬರಿಂದ, ಒಮ್ಮಿಂದೊಮ್ಮೆಲೆ ಆಗುವ ಕೆಲಸವಲ್ಲ. ಅದಕ್ಕೆ ಸಾಂಘಿಕ ಶಕ್ತಿ ಮತ್ತು ಪ್ರಯತ್ನಗಳೆರಡೂ ಬೇಕು. ಈ ಎರಡೂ ದೊರೆಯಲಿಕ್ಕೆ ಬೇಕಾಗುವುದೇ ಧರ್ಮ ಮತ್ತು ರಾಜಕಾರಣ. ವಿಜಯನಗರಕ್ಕೆ ಧರ್ಮದಿಂದ ವಿದ್ಯಾರಣ್ಯರು ದೊರೆತರೆ, ರಾಜಕಾರಣದಿಂದ ಹರಿಹರ ದೊರೆತ. ಇವರಿಬ್ಬರ ಸಮ್ಮಿಳಿತದಿಂದ ಎರಡು ಬಗೆಯ ಅನುಕೂಲವನ್ನೊದಗಿಸುವ ರಾಜ್ಯವೊಂದು ಉದಯವಾಯಿತು. ಎಂದು ಹೇಳುವುದರಲ್ಲಿ ಮತ್ತೆ ವೈದಿಕ ಧರ್ಮಾಧಾರಿತ ರಾಜ್ಯವನ್ನು ರೂಪಿಸಿಕೊಳ್ಳುವುದಕ್ಕೆ ಪ್ರೇರೇಪಿಸುತ್ತಾರೆ.

> "ವಿದ್ಯಾರಣ್ಯರು ರಾಜ್ಯ ವೈಭವವನ್ನು ಅನುಭವಿಸಲು ಗುರುತ್ವವನ್ನು ಕೈಗೊಂಡವರಲ್ಲ; ಆದರೆ ಧರ್ಮಾಲಯದ ಹೊಂಗಳಸವು ಕಳಚುತ್ತಿದ್ದಾಗ, ಕನ್ನಡ ಧ್ವಜಗಳು ಅದಿರು ಹತ್ತಿದಾಗ, ಮೂಗು ಹಿಡಿದುಕೊಂಡು ಕೂಡ್ರುವುದು ಅವರಿಗೆ ಯೋಗ್ಯವೆನಿಸಲಿಲ್ಲ."(ತಮ್ಮಣ್ಣ ಕುಬೇರಪ್ಪ ತುಕೋಲ, 1936:46)

ನಾವು ಕಟ್ಟಿಕೊಳ್ಳಬೇಕಾದ ರಾಜ್ಯವು ಕೇವಲ ವೈಭವಕ್ಕಾಗಿ ಅಲ್ಲ. ಪ್ರಜೆಗಳ ಹಿತಕ್ಕಾಗಿ. ಅನ್ಯರಿಂದ ನಮ್ಮ ಮತ್ತು ನಮ್ಮ ಸಹೋದರರ ಮೇಲೆ ಆಗುತ್ತಿರುವ ಅನ್ಯಾಯಗಳನ್ನು ಕಂಡು ಸುಮ್ಮನೆ ಕೂಡುವುದಕ್ಕೆ ಇದು ಸಮಯವಲ್ಲ. ಹಿಂದೆ ಇಂತಹ ಸ್ಥಿತಿಯಲ್ಲಿಯೇ ವಿದ್ಯಾರಣ್ಯರು ರಾಜ್ಯ ಸ್ಥಾಪಿಸಿದಂತೆ, ಇಂದು ನಾವು ಅಂತಹದೇ ಸ್ಥಿತಿಯಲ್ಲಿದ್ದೇವೆ, ಅಂತಹ ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಕರೆ ನೀಡುತ್ತಾರೆ.

ಬುರ್ಲಿ ಬಿಂದುಮಾಧವಾಚಾರ್ಯರು ವಿಜಯನಗರ ಕುರಿತ ತಮ್ಮ ಲೇಖನದಲ್ಲಿ ಒಂದು ವೇಳೆ ವಿಜಯನಗರ ಸಾಮ್ರಾಜ್ಯವು ಉದಯಿಸದಿದ್ದರೆ ಎಂತಹ ಸ್ಥಿತಿ ನಿರ್ಮಾಣವಾಗುತ್ತಿತ್ತು ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಅದಕ್ಕೆ ಉತ್ತರಿಸುತ್ತಾ, ವೇದ ಧರ್ಮದ ಮೇಲೆ ಆಘಾತಗಳಾಗಿ ಧರ್ಮವು ಜರ್ಝರಿತವಾಗುತ್ತಿತ್ತು. ಆರ್ಯ ಸಂಸ್ಕೃತಿಯು ಜೀವಂತ ಉಳಿಯುವ ಲಕ್ಷಣಗಳಿದ್ದಿಲ್ಲ. ಆರ್ಯ ತತ್ವಜ್ಞಾನವು ಮಲೀನವಾಗಿ ವೇದಾಂತದ ದುರುಪಯೋಗವಾಗುತ್ತಿತ್ತು ಎನ್ನುತ್ತಾರೆ.

> "ವೇದದಲ್ಲಿ ವರ್ಣಿಸಿದ ಬ್ರಹ್ಮತೇಜಸ್ಸೂ ಕ್ಷತ್ರಿಯರ ಬಲವೂ ಕಟ್ಟುಕಥೆಗಳಾಗಿ ಪರಿಣಮಿಸತೊಡಗಿದ್ದವು. ಆರ್ಯ ತತ್ವಜ್ಞಾನವೆಲ್ಲವೂ, ಯಾರೋ ಹುಚ್ಚರು ಬಡಬಡಿಸಿದ ಮಾತುಗಳೇನೋ ಎಂಬ ಭ್ರಮೆಯು ಮೆಲ್ಲಮೆಲ್ಲನೆ ನೆಲೆಯೂರಹತ್ತಿತ್ತು." (ಬುರ್ಲಿ ಬಿಂದುಮಾಧವಾಚಾರ್ಯ, 1936:128)

ಇಂದು ನಮ್ಮ ಪ್ರತೀಕವಾಗಿರುವ ಗುಡಿ ಗೋಪುರಗಳು ಮಾಯವಾಗುತ್ತಿದ್ದವು. ಪುಣ್ಯಕ್ಷೇತ್ರಗಳು ಹಾಳಾಗುತ್ತಿದ್ದವು. ಕಲೆ, ಸಂಸ್ಕೃತಿ, ಸಾಹಿತ್ಯ ಹೇಳ ಹೆಸರಿಲ್ಲದೆ ಹೋಗುತ್ತಿದ್ದವು. ಆರ್ಯ ತತ್ವಜ್ಞಾನದ ಶಾಖೆಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಜೈನ ಮೊದಲಾದವುಗಳು ಮುಳುಗಿ ಹೋಗುತ್ತಿದ್ದವು. ಸಮ್ಮಿಶ್ರವಾದ ಮಾನವರ ಗುಂಪು ಕಾಣಿಸಿದೇ, ದೇಶವೇ ಇಸ್ಲಾಂ ಮಯವಾಗಿ ಹೋಗುತ್ತಿತ್ತು ಎನ್ನುತ್ತಾರೆ. ಆಗ ಉದಯಿಸಿದ ವಿಜಯಗರವು ಈ ಎಲ್ಲಾ ಆಪತ್ತುಗಳನ್ನು ದೂರಮಾಡಿತು. ಸಮಕಾಲೀನ ಸಂದರ್ಭದಲ್ಲಿ ಮತ್ತೆ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಇಂದು ಅಂತಹ ಹೋರಾಟವನ್ನು ಮಾಡಿ ಧರ್ಮವನ್ನು, ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಬ್ರಿಟಿಷರ ಆಡಳಿತದಿಂದ ಇಡೀ ಹಿಂದೂಸ್ತಾನವೇ ಕ್ರೈಸ್ತಮಯವಾಗುತ್ತದೆ. ಈಗಲಾದರೂ ಭಾರತೀಯರೆಲ್ಲರೂ ಎಚ್ಚೆತ್ತುಕೊಳ್ಳಬೇಕು. ಆದ್ದರಿಂದ ವಿಜಯನಗರವನ್ನು ಆದರ್ಶವಾಗಿಟ್ಟುಕೊಂಡು ಸಮಕಾಲೀನ ಸಮಸ್ಯೆಯನ್ನು ಎದುರಿಸುವ ಕಡೆ ಗಮನಹರಿಸಲು ಕರೆ ಕೊಟ್ಟಿದ್ದಾರೆ.

'ಭರತ ಖಂಡದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾನವು' ಎನ್ನುವ ಲೇಖನದಲ್ಲಿ ನಂದಗಡ ಭೀಮರಾಯರು, ವಿಜಯನಗರದ ಮಹತ್ವವನ್ನು ಕುರಿತು ಹೇಳುತ್ತಾರೆ. ಮುಸಲ್ಮಾನರ ದುರಾಡಳಿತದಿಂದ ಅವರ ವಿರುದ್ಧ ಹೋರಾಡಿ ಉತ್ತರ ಹಿಂದೂಸ್ತಾನದವರು ದಣಿದು ಹೋಗಿದ್ದರು. ಆದರೆ ದಕ್ಷಿಣದಲ್ಲಿ ಮುಸ್ಲಿಮರು ದಾಳಿ ನಡೆಸಿದ್ದರೂ ಸಹಿತ ಇಲ್ಲಿನ ಜನರ ಪ್ರೇರಕ ಶಕ್ತಿಯು ನಾಶವಾಗಿರಲಿಲ್ಲ. ಆ ಪ್ರೇರಕ ಶಕ್ತಿಯಿಂದಾಗಿಯೇ ವಿಜಯನಗರ ಸಾಮ್ರಾಜ್ಯ ಉದಯಿಸಿತು ಎಂದು ಹೇಳುತ್ತಾರೆ. ಮುಸ್ಲಿಮರಿಂದ ನೊಂದ ಜನತೆಯನ್ನು ಹೋರಾಟಕ್ಕೆ ಅಣಿಯಾಗಿಸಲು ನಾಯಕರು ಬೇಕಾಗಿದ್ದರು. ಆಗ ವಿದ್ಯಾರಣ್ಯ ಮತ್ತು ಹರಿಹರರು ಕನ್ನಡಿಗರನ್ನು ಒಗ್ಗೂಡಿಸಿ ವೈದಿಕ

ಸಾಮ್ರಾಜ್ಯ ಕಟ್ಟಿದರು. ಕನ್ನಡಿಗರು ತಮ್ಮ ಸಾಮ್ರಾಜ್ಯವನ್ನಷ್ಟೇ ಕಟ್ಟಿಕೊಳ್ಳಲಿಲ್ಲ. ಬದಲಾಗಿ ಒಂದು ಧರ್ಮದ ಮಹಾನ್ ಸಾಮ್ರಾಜ್ಯವನ್ನು ಕಟ್ಟಿದರು ಎಂದು ಹೇಳಲು ಹೊರಟಂತಿದೆ.

> "ಭರತ ಖಂಡದ ಮೇಲೆ ಅಪಘಾತಗಳಾಗಹತ್ತಿ ಆಗಲೇ 300–400 ವರುಷಗಳಾಗಿದ್ದವು. 13ನೆಯ ಶತಮಾನದ ಅಂತ್ಯದವರೆಗೂ ಉತ್ತರ ಹಿಂದೂಸ್ತಾನವು ಮುಸಲ್ಮಾನರ ಅಪಘಾತಗಳನ್ನು ಸಹಿಸಿತು. ಅದು ಹೋರಾಟ ದಣಿದು ಸ್ವಾತಂತ್ರ್ಯ ಪತಾಕೆಯನ್ನು ಕೆಳಗಿಟ್ಟೊಡನೆ ಕನ್ನಡ ಕಡುಗಲಿಗಳು ಅದನ್ನವಚಿ ಸಂಗ್ರಾಮವನ್ನು ಮುಂದೆ ಹಾಗೇ ಸಾಗಿಸದಿದ್ದರೆ, ಭರತ ಖಂಡದ ಆವಸ್ಥೆಯು ಈಗ್ಯೆ ಏನಾಗುತ್ತಿತ್ತು?" (ಭೀಮರಾಯ ನಂದಗಡ, 1936:165)

ಹಿಂದೂಸ್ತಾನಕ್ಕೆ ಬಂದದೊದಗಿದ ಆಪತ್ತನ್ನು ಪರಿಹರಿಸಲು ವಿಜಯನಗರದ ವೀರ ಕನ್ನಡಿಗರು ಹೋರಾಡಿದರು. ಆ ಹೋರಾಟವನ್ನು ಲೇಖಕರು ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯುತ್ತಾರೆ. ಆ ಸಂಗ್ರಾಮವನ್ನು ಅವರು ಈ ಮುಂದಿನಂತೆ ವಿವರಿಸುತ್ತಾರೆ.

> "ಒಳಜಗಳಗಳನ್ನು ಬದಿಗಿಟ್ಟು, ಜಾತಿ ಜಾತಿಗಳೊಳಗಿನ ದುರಭಿಮಾನಗಳನ್ನು ತ್ಯಜಿಸಿ, ಸ್ವಾರ್ಥವನ್ನು ಒದ್ದು, ಹಿಂದೂ ಸಮಾಜವೆಲ್ಲವೂ ರಾಷ್ಟ್ರ ರಕ್ಷಣೆಗಾಗಿ ಒಮ್ಮನಸ್ಸಿನಿಂದ ಒಂದಾಗಿ ಸುಸಂಘಟಿತ ಪ್ರತೀಕಾರವನ್ನು ಮಾಡಿದ್ದು ಇದೇ ಮೊದಲು." (ಭೀಮರಾಯ ನಂದಗಡ, 1936:166)

ಅದಕ್ಕೂ ಮೊದಲು ಹಿಂದೂ ರಾಜ್ಯಗಳೆಲ್ಲ ಒಂದಾಗಿದ್ದರೆ ಈ ದುಸ್ಥಿತಿ ಬರುತ್ತಿರಲಿಲ್ಲ. ತಮ್ಮ ತಮ್ಮಲ್ಲಿನ ಅಸೂಯೆಯೇ ಮುಸ್ಲಿಮರು ದಾಳಿ ಮಾಡಲಿಕ್ಕೆ ಸಹಾಯಕವಾಗಿತ್ತು. ವಿಜಯನಗರದವರು ಹೇಗೆ ಒಂದಾಗಿ ಮುಸ್ಲಿಮರನ್ನು ಎದುರಿಸಿದರೋ, ಅದರಂತೆ ಇಂದು ನಮ್ಮ ನಮ್ಮಲ್ಲಿನ ಆಂತರಿಕ ಸಮಸ್ಯೆಗಳನ್ನು ಬದಿಗಿಟ್ಟು ದೇಶವನ್ನು ಪರರ ದಾಸ್ಯದಿಂದ ಮುಕ್ತಗೊಳಿಸಬೇಕಾಗಿದೆ. ಇಲ್ಲಿ ವಿಜಯನಗರವನ್ನೇ ಸಂಕೇತವಾಗಿಟ್ಟುಕೊಳ್ಳುವುದು ಈ ಬಗೆಯ ಹೋರಾಟ ಮಾಡಿದ ಮೊದಲನೆ ಸಾಮ್ರಾಜ್ಯ ಎನ್ನುವ ಕಾರಣಕ್ಕಾಗಿ ಎನ್ನುವ ಧ್ವನಿಯು ಇಲ್ಲಿ ಕಾಣಸಿಗುತ್ತದೆ.

ವಿಜಯನಗರ ಸಾಮ್ರಾಜ್ಯದ ಉದಯದಿಂದಾದ ಪರಿಣಾವನ್ನು ಕುರಿತು ಈ ರೀತಿ ಹೇಳುತ್ತಾರೆ.

> "ಮೃತಪ್ರಾಯರಾದ ಭಾರತೀಯರಿಗೆ ನಿರಾಶಾಮಯವಾದ ಆಗಸದಲ್ಲಿ ಆಶೆಯ ಮೇಘಶಕಲವೊಂದು ಕಂಡು ಅವರನ್ನು ಬಲಪಡಿಸಿತು. ಜನರ ದೃಷ್ಟಿಗಳೆಲ್ಲ ಅದರೆಡೆಗೆ ನೆಟ್ಟವು. ಭಾರತೀಯರು ಇನ್ನು ಬದುಕುವ ಆಶೆಯುಂಟೆಂದು ಆನಂದಭರಿತರಾದರು. ಆ ಆಶೆಯ ಮೇಘಕಲಶವು ಕರಿ ಮಾಯವಾಗದೆ,

> ಜಲಪ್ರಪೂರ್ಣವಾಗಿ ದೊಡ್ಡದಾಗಿ ಬೆಳೆಯುತ್ತ ಬೆಳೆಯುತ್ತ ಇಡೀ ದಕ್ಷಿಣಾ ಪಥದಷ್ಟು ಬೆಳೆದು, ಮನದಣಿವಂತೆ ಅಮೃತವನ್ನು ವರ್ಷಿಸಿ, ಭಾರತೀಯರಲ್ಲಿ ಜೀವನ ಕಳೆಯನ್ನು ತುಂಬಿ, ಅವರಿಗೆ ಮತ್ತೆ ಭಾರತೀಯತ್ವವನ್ನು ದೊರಕಿಸಿ ಕೊಟ್ಟಿತು." (ಭೀಮರಾಯ ನಂದಗಡ, 1936:165)

ವಿಜಯನಗರ ಸಾಮ್ರಾಜ್ಯ ಕನ್ನಡಿಗರಷ್ಟೇ ಸೀಮಿತವಾಗಿರಲಿಲ್ಲ. ಅದು ಅನ್ಯರ ಅಕ್ರಮಣದಿಂದ ನಲುಗಿ ಹೋಗಿದ್ದ ದಕ್ಷಿಣ ಭಾರತೀಯರಿಗೆ 250 ವರ್ಷಗಳ ಕಾಲ ರಕ್ಷಾ ಕವಚವಾಗಿತ್ತು. ಇದರ ಆಶ್ರಯದಲ್ಲಿದ್ದ ವೈಧಿಕ ಧರ್ಮ ಮತ್ತು ಸಂಸ್ಕೃತಿಗಳಿಗೆ ಸುರಕ್ಷಿತವಾಗಿದ್ದವಾಗಿದ್ದು, ಅಭೇದ್ಯವಾದ ಗೋಡೆಯಂತಿತ್ತು.

> "ವಿಜಯನಗರ ಪೂರ್ವಕಾಲದ ಧಾರ್ಮಿಕ ಪರಿಸ್ಥಿತಿಗೂ ವಿಜಯನಗರ ಕಾಲದ ಧಾರ್ಮಿಕ ಪರಿಸ್ಥಿತಿಗೂ ಅಷ್ಟೊಂದು ವ್ಯತ್ಯಾಸವಿರಲಿಲ್ಲ. ಆದರೆ ವಿಜಯನಗರ ಕಾಲದಲ್ಲಿ ರಾಷ್ಟ್ರಹಿತಪೋಷಕ ಧರ್ಮಕ್ಕೆ ಒಂದು ಮೂರ್ತ ಸ್ವರೂಪ ಪ್ರಾಪ್ತವಾದುದು ಅತ್ಯಂತ ಮನನೀಯವಾದ ವಿಚಾರವಾಗಿದೆ." (ಚೆನ್ನಬಸವಸ್ವಾಮಿ ಹಿರೇಮಠ, 1936:165)

ವಿಜಯನಗರ ಸ್ಥಾಪನೆಗಿಂತ ಪೂರ್ವದಲ್ಲಿನ ಸಾಮ್ರಾಜ್ಯಗಳು ಹಿಂದೂ ಧರ್ಮವನ್ನು ಪೋಷಿಸಿದವು. ಆದರೆ ಧರ್ಮಕ್ಕೆ ಗಂಡಾಂತರ ಬಂದಾಗ ಅವುಗಳಿಂದ ಅದನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ವಿದ್ಯಾರಣ್ಯರ ಪ್ರೇರಣೆಯ ಮೇರೆಗೆ ಹರಿಹರ ಬುಕ್ಕರು ವೈದಿಕ ಧರ್ಮಕ್ಕೊದಗಿದ ಗಂಡಾಂತರವನ್ನು ದೂರಮಾಡಿದರು. ಅಷ್ಟೇ ಅಲ್ಲ ಅದನ್ನು ರಾಷ್ಟ್ರ ಧರ್ಮವನ್ನಾಗಿ ಮಾಡಿಕೊಂಡಿದ್ದರು. ಅಂದ ಮಾತ್ರಕ್ಕೆ ಅವರು ಉಳಿದ ಧರ್ಮಗಳನ್ನು ತಿರಸ್ಕರಿಸಲಿಲ್ಲ, ಬದಲಾಗಿ ಎಲ್ಲಾ ಧರ್ಮಗಳನ್ನು ಪುರಸ್ಕರಿಸಿದರು. ಅಲ್ಲಿ ಜಾತಿಯಿಂದ ಮೇಲು ಕೀಳು ಎಂದು ಅಳೆಯದೇ, ಅವರ ಕಾರ್ಯವೈಖರಿಯ ಮೂಲಕ ಜನರ ಸ್ಥಾನಮಾನವನ್ನು ಗುರುತಿಸುತ್ತಿದ್ದರು ಎಂದು ಹೇಳಲಾಗಿದೆ.

ಜೈನಧರ್ಮಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಅವಿನಾಭಾವ ಸಂಬಂಧವಿದೆ. 1368ರ ಶಾಸನದ ಉಲ್ಲೇಖದಂತೆ 1ನೆಯ ಬುಕ್ಕರಾಯನ ಕಾಲದಲ್ಲಿ ಜೈನರಿಗೂ ಮತ್ತು ವೈಷ್ಣವರಿಗೂ ಉಂಟಾದ ಕಲಹವನ್ನು ಸ್ವತಃ ರಾಜನೇ ಇಬ್ಬರಲ್ಲಿಯೂ ಯಾವ ಭೇದವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಟ್ಟನು. ಜೈನ ಧರ್ಮಕ್ಕೆ ಹಾನಿ ಅಥವಾ ಅಭ್ಯುದಯವಾದರೆ ವೈಷ್ಣವರು ಅದು ತಮ್ಮ ಧರ್ಮಕ್ಕಾಗಿ ಹಾನಿ ಅಥವಾ ಅಭ್ಯುದಯವೆಂದು ಭಾವಿಸುವಂತೆ ಹೇಳುತ್ತಾನೆ. ಹಾಗೆಯೇ ವಿಜಯನಗರದಲ್ಲಿ ಜೈನ ಬಸದಿಗಳನ್ನು ಕಟ್ಟಿಸಿದ್ದು, ಜೈನ ಬಸದಿಗಳಿಗೆ ದಾನ ಬಿಟ್ಟದ್ದು ಮೊದಲಾದ ಅಂಶಗಳು ಜೈನಧರ್ಮಕ್ಕೆ ನೀಡಿದ್ದ ಪ್ರೋತ್ಸಾಹವನ್ನು ತಿಳಿಸುತ್ತವೆ.

ವಿಜಯನಗರ ಕಾಲದಲ್ಲಿ ವೀರಶೈವ ಧರ್ಮಕ್ಕೆ ಪ್ರೋತ್ಸಾಹವಿತ್ತು ಎನ್ನವುದಕ್ಕೆ ಆ ಕಾಲಾವಧಿಯಲ್ಲಿ ವೀರಶೈವ ಸಾಹಿತ್ಯಕ್ಕಿದ್ದ ಮನ್ನಣೆಯನ್ನು ನೋಡಬಹುದು. ಅಲ್ಲದೆ ಸ್ವತಃ ಪ್ರೌಡದೇವರಾಯನೇ ಲಿಂಗವನ್ನು ಧರಿಸಿದ್ದನು. ನೂರೊಂದು ವಿರಕ್ತರೂ ಕೂಡ ಅವನ ಕಾಲದಲ್ಲಿಯೇ ಇದ್ದರು. ಲಕ್ಕಣದಂಡೇಶ, ಚಾಮರಸ, ಮಗ್ಗಿಯ ಮಾಯದೇವ, ಕರಸ್ಥಲದ ನಾಗೇಂದ್ರ ಮುಂತಾದ ವೀರಶೈವ ಕವಿಗಳಿಗೆ ಆಶ್ರಯವಿತ್ತು ಅವರ ಸಾಹಿತ್ಯಕ್ಕೆ ಪ್ರೋತ್ಸಾಹಿಸಿದ್ದಾರೆ.

ಕ್ರೈಸ್ತ ಧರ್ಮದ ಪ್ರಚರಾರ್ಥವಾಗಿ ಭಾರತಕ್ಕೆ ಬಂದಿದ್ದ ಥೋಮಸ್‌ನು ಕರ್ನಾಟಕ್ಕೆ ಬಂದಿದ್ದನು. ಥೋಮಸನ ಸಮಾಧಿಗೆ ಉಂಬಳಿ ನೀಡಿದ ಕ್ರಿ.ಶ.1396ರ ಶಾಸನದಲ್ಲಿ ವಿಜಯನಗರದ ಅರಸ ಬುಕ್ಕರಾಯನ ಹೆಸರಿರುವುದನ್ನು ನೋಡಿದರೆ ಕ್ರೈಸ್ತ ಧರ್ಮದವರನ್ನೂ ಕೂಡ ಅನ್ಯೋನ್ಯತೆಯಿಂದ ಕಂಡಿದ್ದರು ಎನ್ನುವ ಅಂಶ ತಿಳಿದು ಬರುತ್ತದೆ. ಅಷ್ಟೇ ಅಲ್ಲದೆ ಯಾವ ಧರ್ಮದವರ ಉಪಟಳದ ವಿರುದ್ಧ ಈ ಸಾಮ್ರಾಜ್ಯ ಉದಯಿಸಿತ್ತೋ, ಅಂತಹ ಧರ್ಮೀಯರನ್ನೂ ಕೂಡ ವಿಜಯನಗರದ ಅರಸರು ತಿರಸ್ಕರಿಸಲಿಲ್ಲ. ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟು, ಮಸೀದಿಗಳನ್ನು ನಿರ್ಮಿಸಿಕೊಡುವುದರ ಮೂಲಕ ಸರ್ವಧರ್ಮ ಸಹಿಷ್ಣುಗಳಾಗಿದ್ದರು.

ವಿಜಯನಗರ ಸಾಮ್ರಾಜ್ಯದಲ್ಲಿನ ಸೈನಿಕ ವ್ಯವಸ್ಥೆಯು ಸುಸಜ್ಜಿತವಾಗಿದ್ದು, ಬಲಾಢ್ಯವೂ ಆಗಿತ್ತು. 30 ರಿಂದ 40 ಸಾವಿರಗಳ ವರೆಗೆ ಅಶ್ವಾರುಢರೂ, 3 ಸಾವಿರದ ವರೆಗೆ ಆನೆಗಳೂ, 10 ರಿಂದ 20 ಲಕ್ಷದವರೆಗೆ ಕಾಲಾಳುಗಳಿದ್ದರು. ಇದೊಂದು ಹಿಂದೂ ಸಾಮ್ರಾಜ್ಯವಾಗಿದ್ದರೂ ಸೈನಿಕರು ಹಿಂದೂಗಳಷ್ಟೇ ಇರಲಿಲ್ಲ. ಅನ್ಯ ಧರ್ಮೀಯರು ಕೂಡ ಈ ಸೈನ್ಯದಲ್ಲಿದ್ದರು. ಪೋರ್ತುಗೀಸ ವ್ಯಾಪಾರಸ್ಥರು ಪ್ರತಿವರ್ಷ 13,000 ಕುದುರೆಗಳನ್ನು ಪೂರೈಸುತ್ತಿದ್ದರಂತೆ. ಇಷ್ಟೊಂದು ಬಲಾಢ್ಯವಾದ ಸೈನ್ಯ ಹೊಂದಿದ್ದ ವಿಜಯನಗರವು ವಿನಾಶವಾದದ್ದು ಹೇಗೆ? ಆರಂಭದಲ್ಲಿದ್ದಂತಹ ಸೈನ್ಯದಲ್ಲಿನ ಶಿಸ್ತು ನಂತರ ಕಾಲದಲ್ಲಿ ಶಿಥಿಲವಾಗಿತ್ತು. ಅಂತಹ ಶಿಸ್ತಿನಿಂದ ಹೋರಾಟ ಮಾಡಬೇಕಾದ ಸ್ಥಿತಿ ನಮ್ಮ ಮುಂದಿದೆ ಎನ್ನುವುದನ್ನು ನಾರಾಯಣ ಸುಬ್ರಾವ ಹರಡೀಕರ ಅಭಿಪ್ರಾಯಪಡುವುದು ಹೀಗೆ.

> "ವಿಜಯನಗರದ ಸಾಮ್ರಾಜ್ಯವು ನಮ್ಮ ಒಡಕಿನಿಂದ ಹಾಳಾಯಿತಷ್ಟೇ? ಅದರಿಂದ ನಾವು ಕಲಿಯಬೇಕಾದುದೇನು ಎಂಬುದನ್ನು ಇಂತಹ ಲೇಖನಗಳನ್ನು ಬರೆಯುವ ಮತ್ತು ಓದುವುದರ ಉದ್ದೇಶವು. ಇಂದಿನ ನಮ್ಮ ಸ್ಥಿತಿಯನ್ನು ನಾವು ಸುಧಾರಿಸುವುದಾದರೆ ಎರಡು ಮಾತುಗಳನ್ನು ನಾವು ಮರೆಯದಿರುವುದು ಅವಶ್ಯವಾಗಿದೆ. 1ನೆಯದೆಂದರೆ ಬೇಕಾದಂತಹ ಪ್ರಗತಿಯನ್ನು ನಾವು ಮಾಡಿಕೊಳ್ಳುವುದು ಸಾಧ್ಯವಿದೆಯೆಂಬುದು. 2ನೆಯದು ನಮ್ಮಲ್ಲಿಯ ಅನೈಕ್ಯತೆಯನ್ನು ಹೋಗಲಾಡಿಸಿಕೊಳ್ಳುವುದು. ಆದ್ದರಿಂದ ಈಗಲಾದರೂ

ಕನ್ನಡಿಗರು ಚೇತರಿಸಿಕೊಂಡೆದ್ದು ತಮ್ಮಲ್ಲಿ ಸೇರಿ, ಮನೆ ಮಾಡಿದ ದುರ್ಗುಣಗಳನ್ನು ಹೊಡೆದೋಡಿಸಬೇಕಲ್ಲವೆ? ನಮ್ಮಲ್ಲಿ ಶಿಸ್ತು ಸಂಘಟನೆಗಳ ಮುಖಾಂತರ ಪ್ರಚಂಡ ಶಕ್ತಿಯನ್ನು ಸಂಗ್ರಹಿಸಬೇಕಲ್ಲವೇ? ಇದಕ್ಕೆ ನಮ್ಮ ಪೂರ್ವಜರ ಶೌರ್ಯ ಧೈರ್ಯಾದಿಗಳು ಪ್ರೇರಕವಾಗಲಿ!" (ನಾರಾಯಣ ಸುಬ್ರಾವ ಹರಡೀಕರ, 1936:248)

ಈ ಮಾತುಗಳನ್ನು ಗಮನಿಸಿದಾಗ ರಾಷ್ಟ್ರೀಯ ಹೋರಾಟ ಮತ್ತು ಏಕೀಕರಣ ಹೋರಾಟಕ್ಕೆ ಪ್ರಚೋದನೆ ನೀಡುವುದು ಕಂಡುಬರುತ್ತದೆ. ನಮ್ಮ ರಾಜರಲ್ಲಿ ಒಗ್ಗಟ್ಟು ಇಲ್ಲದಿದ್ದರಿಂದಲೇ ಅಲ್ಲವೆ ಹಿಂದೂಸ್ತಾನ ಬ್ರಿಟಿಷರ ಕೈವಶವಾದುದು. ಆಗಲೇ ಐಕ್ಯಮತ್ಯದಿಂದ ಹೋರಾಡಿದ್ದರೆ ಬ್ರಿಟಿಷರನ್ನು ಹಿಮ್ಮೆಟ್ಟಿಸಬಹುದಿತ್ತು. ನಮ್ಮ ರಾಜರಲ್ಲಿನ ಒಳಜಗಳಗಳು, ವೈಷಮ್ಯಗಳ ಲಾಭವನ್ನು ಪಡೆದ ಬ್ರಿಟಿಷರು ಆ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡರು. ಆದರೆ ಅವರನ್ನು ಹೊಡೆದೋಡಿಸಿ ಸ್ವರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಎಲ್ಲರೂ ಒಗ್ಗಟ್ಟಾಗಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ವಿಜಯನಗರ ಕಾಲದಲ್ಲಿ ಕರಕುಶಲ ಕೈಗಾರಿಕೆಗಳು ಪ್ರಸಿದ್ಧವಾಗಿದ್ದವು. ಚಿನ್ನದ ಆಭರಣಗಳು, ಮೃದುವಾದ ರೇಷ್ಮೆಯ ವಸ್ತ್ರಗಳು, ಗೃಹೋಪಯೋಗಿ ವಸ್ತುಗಳ ತಯಾರಿಕೆ ಮುಂತಾದವು ಉತ್ತಮ ದರ್ಜೆಯವುಗಳಾಗಿದ್ದವು. ಶಿಲ್ಪಿಗಳು, ಅಕ್ಕಸಾಲಿಗರು, ನೇಕಾರರು, ಕಾರ್ಪೆಂಟರ್, ಮೇದಾರರು, ಕಂಬಾರರು, ಕುಂಬಾರರು, ಚಮ್ಮಾರರು ಮುಂತಾದವರು ಸಮೃದ್ಧವಾಗಿದ್ದರು. ಅವರು ತಲಾತಲಾಂತರದಿಂದ ತಮ್ಮ ವೃತ್ತಿಯಲ್ಲಿಯೇ ಬದುಕುತ್ತಾ ಬಂದಿದ್ದಾರೆ. ಬ್ರಿಟಿಷರ ವಸಾಹತು ನೀತಿಯಿಂದಾಗಿ ಗೃಹಕೈಗಾರಿಕೆಗಳು ನಶಿಸಿ ಹೋಗುತ್ತಿದ್ದಾಗ, ಗಾಂಧೀಜಿಯವರು ಸ್ವದೇಶಿ ಚಳುವಳಿಗೆ ಕರೆ ನೀಡಿದರು. ಇಂತಹ ಸಂದರ್ಭದಲ್ಲಿ ವಿಜಯನಗರದಲ್ಲಿದ್ದ ಕರಕುಶುಲಕರ್ಮಿಗಳನ್ನು ನೆನೆದು ಕೊಳ್ಳುತ್ತಾ, ಸಮಕಾಲೀನ ಸಂದರ್ಭದಲ್ಲಿ ಅವರ ವೃತ್ತಿಗೆ ಬಂದ ಆಪತ್ತನ್ನು ಎದುರಿಸಲು ಸಿದ್ಧರಾಗಬೇಕು. ಎನ್ನುವುದನ್ನು ಹುಯಿಲಗೋಳ ನಾರಾಯಣ ರಾಯರು ತಮ್ಮ 'ವಿಜಯನಗರದ ಕಾಲದ ಕಲಾಕೌಶಲ್ಯ ಕೈಗಾರಿಕೆಗಳು' ಲೇಖನದಲ್ಲಿ ವಿಜಯನಗರ ಕಾಲದ ಜನಜೀವನದ ಮೂಲಕ ತಿಳುಸುತ್ತಾರೆ.

1936ರಲ್ಲಿ ನಡೆ ವಿಜಯನಗರ ಸ್ಮಾರಕೋತ್ಸವ ಸಂದರ್ಭದಲ್ಲಿ ಲೋಕಾರ್ಪಣೆಯಾದ ಇನ್ನೊಂದು ಕೃತಿ *Vijayanagar Sexcentenary Commemoration Volume.* ಈ ಸ್ಮರಣ ಸಂಚಿಕೆಯಲ್ಲಿ 31 ಲೇಖನಗಳಿವೆ. ಈ ಲೇಖನಗಳು ಬಹುತೇಕ ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜರುಗಳ ಸಂಸ್ಥಾನಗಳೊಂದಿಗೆ ವಿಜಯನಗರ ಸಾಮ್ರಾಜ್ಯದ ಸಂಬಂಧವನ್ನು ಕುರಿತವುಗಳು. ಕೆಲವು ವಿಜಯನಗರವನ್ನಾಧರಿಸಿ ಬರೆದ ಲೇಖನಗಳಲ್ಲಿ ಈಗಾಗಲೇ ಚರ್ಚಿತವಾದ ವಿಷಯಗಳೇ ಅಭಿವ್ಯಕ್ತಗೊಂಡಿವೆ. ಹೀಗಾಗಿ ಅವುಗಳನ್ನು ಇಲ್ಲಿ

ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸಿಲ್ಲ. (ಅಧ್ಯಯನದ ವ್ಯಾಪ್ತಿಯು ವಿಜಯನಗರ ಸಾಮ್ರಾಜ್ಯಕ್ಕೆ ಸೀಮಿತಪಡಿಸಿಕೊಂಡಿದ್ದರಿಂದ)

ಈ ಮೇಲಿನ ಎಲ್ಲಾ ಲೇಖನಗಳನ್ನು ಅವಲೋಕಿಸಿದಾಗ ಏಕೀಕರಣ ಮತ್ತು ರಾಷ್ಟ್ರೀಯ ಹೋರಾಟ ಸಂದರ್ಭದಲ್ಲಿ ಚರಿತ್ರೆಯನ್ನು ಸಾಂಕೇತಿಕವಾಗಿ ಬಳಸಿಕೊಂಡದ್ದು ಕಂಡು ಬರುತ್ತದೆ. ಅವರ ಉದ್ದೇಶವು ವಿಜಯನಗರದ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳನ್ನಿಟ್ಟುಕೊಂಡು ವಿಜಯನಗರ ಸಾಮ್ರಾಜ್ಯದ ಒಳಿತು ಕೆಡುಕುಗಳನ್ನು ಹೇಳುವುದಲ್ಲ. ಏಕೀಕೃತ ಪ್ರಾಂತ್ಯವನ್ನು ನಿರ್ಮಾಣ ಮಾಡಿಕೊಳ್ಳುವುದು ಮತ್ತು ಭಾರತವನ್ನು ಸ್ವಾತಂತ್ರ್ಯಗೊಳಿಸಿಕೊಳ್ಳುವುದು ಅವರ ಮುಖ್ಯ ಉದ್ದೇಶವಾಗಿತ್ತು. ಹಾಗಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಆಯ್ದ ಪ್ರಮುಖ ಘಟನೆಗಳನ್ನು ವೈಭವೀಕರಣದ ನೆಲೆಯಲ್ಲಿ ವಿವರಿಸುತ್ತಾರೆ. ಆ ಮೂಲಕ ಭಾವನಾತ್ಮಕವಾಗಿ ನಾವೆಲ್ಲರೂ ಒಂದು ಎನ್ನುವ ಸಂಬಂಧವನ್ನು ಬೆಸೆಯಲು ಪ್ರಯತ್ನಿಸುತ್ತಾರೆ. ಇದು ಭಾಷಣ ಮತ್ತು ಲೇಖನಗಳನ್ನು ಅವಲೋಕಿಸಿದಾಗ ಮತ್ತಷ್ಟು ಸ್ಪಷ್ಟವಾಗುತ್ತದೆ.

**ಭುವನೇಶ್ವರಿ ಪರಿಕಲ್ಪನೆ ಮತ್ತು ವಿಜಯನಗರ :**

ಈ ನೆಲಕ್ಕಾಗಿ ನಡೆದ ಹೋರಾಟ (ರಾಷ್ಟ್ರೀಯ ಹೋರಾಟದ) ಫಲವಾಗಿ ಒಂದೊಂದು ನಾಡಿಗೆ ಒಬ್ಬೊಬ್ಬ ಅಧಿಷ್ಠಾತ್ರೀಯನ್ನು ನೇಮಿಸಿಕೊಂಡುದ್ದನ್ನು ಕಾಣಬಹುದು. ಬಂಗಾಲದ ಮುಖಾಂತರ ಈ ಪರಂಪರೆ ಆರಂಭವಾಯಿತೆನ್ನಬಹುದು. ಇವರು ಭಾರತೀಯ ಧರ್ಮ, ಪುರಾಣ, ತತ್ವ, ಚರಿತ್ರೆ, ಮಹಾಕಾವ್ಯ, ಐತಿಹ್ಯಗಳನ್ನು ಆಧರಿಸಿದರು. ಆ ಮೂಲಕ ತಮ್ಮ ಅಸ್ಮಿತೆಯನ್ನು ನಿರ್ಮಾಣ ಮಾಡಿಕೊಳ್ಳುವುದು ಮತ್ತು ಪರತಂತ್ರದ ದಾಸ್ಯದಲ್ಲಿದ್ದ ಈ ನೆಲವನ್ನು ಬಿಡುಗಡೆಗೊಳಿಸುವುದಾಗಿತ್ತು. ಬಂಕೀಮಚಂದ್ರ ಚಟರ್ಜಿಯವರ 'ಆನಂದಮಠ'ದಿಂದ ಈ ಪರಂಪರೆ ಹುಟ್ಟಿಕೊಂಡಿತೆನ್ನಬಹುದು. ಇದೇ ಮಾದರಿಯನ್ನು ಅನುಸರಿಸಿ ಬೇರೆ ಬೇರೆ ಭಾಷಿಕರೂ ಇದನ್ನನುಸರಿಸಿದರು. ಈ ಭೂಮಿಯನ್ನು ತಾಯಿಯೊಂದಿಗೆ ಸಮೀಕರಿಸಲಾಯಿತು. ಹಾಗೆಯೇ ಆ ಭೂಪ್ರದೇಶದಲ್ಲಿ ವಾಸಿಸುವವರು ತಮ್ಮ ಪ್ರಾದೇಶಿಕ ಭಾಷೆಗೆ ಅನುಗುಣವಾಗಿ ಪ್ರತ್ಯೇಕವಾದ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಭಾಷೆಗೂ ಸಹ ತಾಯಿಯ ಸ್ಥಾನವನ್ನು ಕಲ್ಪಿಸಿಕೊಳ್ಳುತ್ತಾರೆ. ಅಂದರೆ ಒಟ್ಟಾರೆ ಭರತಭೂಮಿ ತಾಯಿಯ ಸ್ಥಾನವನ್ನು ಅಲಂಕರಿಸಿದ್ದಾಗ್ಯೂ, ಸ್ಥಳೀಯ ಭಾಷೆ ಮತ್ತೆ ತಾಯಿಯ ಸ್ಥಾನವನ್ನು ಅಲಂಕರಿಸುವುದು ತಾಯಿ ಮತ್ತು ಮಗಳ ಸಂಬಂಧವಾಗಿ ಮಾರ್ಪಡುತ್ತದೆ. ಆಗ ಭಾರತ ಮಾತೆಯ ಮಕ್ಕಳಾಗಿ ಎಲ್ಲಾ ಭಾಷಿಕರು ಕಾಣಿಸಿಕೊಳ್ಳುತ್ತಾರೆ. ಆಗ ಪ್ರಾದೇಶಿಕ ಭಾಷೆಗಳೆಲ್ಲವೂ ಭಾರತ ಮಾತೆಯ ಮಕ್ಕಳಾಗಿ, ಪರಸ್ಪರ ಸಹೋದರತೆಯ ಸಂಕೇತವಾಗಿ ಬಳಕೆಗೊಳ್ಳುತ್ತವೆ. ಆಗ ತಾಯಿಯ ಸ್ಥಾನದಲ್ಲಿರುವ ಭಾರತಾಂಬೆ ನಮ್ಮೆಲ್ಲರನ್ನು ಲಾಲನೆ ಪಾಲನೆ ಮಾಡಿ ಪೋಷಿಸುವವಳು ಮತ್ತು ರಕ್ಷಕಿಯೂ ಆಗುತ್ತಾಳೆ. ಅವಳ ಮಕ್ಕಳಾದ ಎಲ್ಲಾ ಭಾಷಿಕರು ಆ

ಪಾಲಕಿಯ ರಕ್ಷಕರಾಗುತ್ತಾರೆ. ಆಗ ಎಲ್ಲಾ ಪ್ರಾದೇಶಿಕ ಭಾಷಿಕರಿಗೂ ಮತ್ತು ಎಲ್ಲಾ ಪ್ರಾದೇಶಿಕ ಭಾಷಿಕರನ್ನು ಒಳಗೊಂಡ ಸಮಗ್ರ ಭಾರತಾಂಬೆಗೂ ಒಂದು ಬಗೆಯ ಭಾವನಾತ್ಮಕ ಸಂಬಂಧ ಬೆಸೆಯುತ್ತದೆ. ಈ ಬಗೆಯ ಸಂಬಂಧವು ಒಂದು ತಾತ್ವಿಕ ಚೌಕಟ್ಟಿನ ನೆಲೆಯಲ್ಲಿ ರೂಪುಗೊಂಡಿರುವಂಥದ್ದು. ಇದು ಎಲ್ಲಾ ಸಂದರ್ಭದಲ್ಲಿಯೂ ಅನ್ವಯಿಸುವುದಿಲ್ಲ. ರಾಷ್ಟ್ರೀಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ತಾಯಿ ಮಕ್ಕಳ ಸಂಬಂಧದ ಮುಂದೆ ಉಳಿದವುಗಳು ನಗಣ್ಯ ಎನ್ನುವಂತೆ ಈ ಸಂಬಂಧವನ್ನು ಬೆಸೆಯಲಾಗಿದೆ.

ಅಂತೆಯೇ ಕನ್ನಡಿಗರೂ ಸಹ ತಮ್ಮ ಅಧಿದೇವತೆಯನ್ನಾಗಿ ಭುವನೇಶ್ವರಿಯನ್ನು ನೇಮಿಸಿಕೊಂಡಿದ್ದಾರೆ. ಆದರೆ ಈ ಭುನವೇಶ್ವರಿಯ ಆಲಯಗಳು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಬೇರೆ ಬೇರೆ ರಾಜ್ಯಗಳಲ್ಲಿ, ಬೇರೆ ದೇಶಗಳಲ್ಲಿಯೂ ಇವೆ. ಆದರೂ ಇವಳು ಹೇಗೆ ಕರ್ನಾಟಕದ ಕುಲದೇವತೆಯಾದಳು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ ಚರಿತ್ರೆಯಲ್ಲಾಗಲಿ, ಶಾಸನಗಳಲ್ಲಾಗಲಿ ಭುವನೇಶ್ವರಿಯ ಕುರಿತ ಉಲ್ಲೇಖ ದೊರೆಯುವುದಿಲ್ಲ. ಶಾಂತಕವಿಗಳು ತಮ್ಮ 'ವಿದ್ಯಾರಣ್ಯ ವಿಜಯ' ಕೀರ್ತನೆಯಲ್ಲಿ ಭುವನೇಶ್ವರಿ ಎಂದು ಬಳಸುತ್ತಾರೆ. ಭುವನೇಶ್ವರಿ ಕಲ್ಪನೆ ಕಂಡು ಬರುವುದು ಮೊಟ್ಟಮೊದಲಿಗೆ ಶಾಂತಕವಿಗಳಲ್ಲಿಯೇ.

"ಜಯ ಜಯ ಜಯ ಭುವನೇಶ್ವರಿ ॥
ಜಯ ಭುವನೇಶ್ವರಿ ।
ಜಯ ಮಾಹೇಶ್ವರಿ ।
ಜಯ ಕೃಪಕರೆ ।
ಶುಭಕರ ಶ್ರೀಕರೆ ।"

(ರಾ.ಯ.ಧಾರವಾಡಕರ, ಪು.1)

ನಂತರದಲ್ಲಿ ರಚಿತವಾದ ಸಾಹಿತ್ಯದಲ್ಲಿ ಭುವನೇಶ್ವರಿಯ ಉಲ್ಲೇಖ ಕಂಡು ಬರುತ್ತದೆ. ಇದನ್ನು ಗಮನಿಸಿದರೆ ಏಕೀಕರಣ ಚಳುವಳಿಯ ಭಾಗವಾಗಿಯೇ ಈ ಕಲ್ಪನೆ ರೂಪುಗೊಂಡದ್ದು ಸ್ಪಷ್ಟವಾಗುತ್ತದೆ. ಚರಿತ್ರೆಯ ಮುಖೇನ ನಾಡಿನ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದವರಿಗೆ ಆದರ್ಶವಾಗಿ ಕಂಡದ್ದು ವಿಜಯನಗರ. ವಿಜಯನಗರದಲ್ಲಿನ ಭುವನೇಶ್ವರಿ ದೇವಿಯನ್ನು ನೋಡಿ ಅವಳನ್ನೇ ಕನ್ನಡಿಗರ ಕುಲದೇವತೆ ಎಂದು ಕರೆದರು. ಆದರೆ ವಿಜಯನಗರದಲ್ಲಿ ಕೇವಲ ಭುವನೇಶ್ವರಿಯ ಮೂರ್ತಿಯಷ್ಟೇ ಅಲ್ಲ ಶಕ್ತಿ ದೇವತೆಗಳಾದ ಹಂಪಮ್ಮ, ಗಾಯತ್ರಿ, ಸರಸ್ವತಿ, ಲಕ್ಷ್ಮೀ, ದುರ್ಗೆ, ಪಟ್ಟಣದ ಯಲ್ಲಮ್ಮ, ಹತ್ತು ಕೈಯಮ್ಮ ಮುಂತಾದವುಗಳು ವಿಜಯನಗರ ಕಾಲದಿಂದಲೂ ಇವೇ ಎಂದು ಹೇಳಲಾಗುತ್ತದೆ. ಇಷ್ಟೆಲ್ಲಾ ದೇವತೆಗಳಿದ್ದಾಗ್ಯೂ ದೇವೀ ಭಾಗವತದ ಅನ್ವಯ ಮೂರು ಲೋಕಗಳ ಅಧಿದೇವತೆಯಾದ ಭುವನೇಶ್ವರಿಯೇ ಏಕೆ ಕನ್ನಡಿಗರ ಕುಲದೇವತೆಯಾದಳು? ಎನ್ನುವುದು ಯಕ್ಷ ಪ್ರಶ್ನೆ. ಹಾಗೆ ನೋಡಿದರೆ ಇತರೆ ಶಕ್ತಿ ದೇವತೆಗಳನ್ನು ಆರಾಧಿಸುವಷ್ಟು ಭುವನೇಶ್ವರಿಯನ್ನು

ಆರಾಧಿಸುವುದಿಲ್ಲ. ಏಕೀಕರಣ ಹೋರಾಟಗಾರರಿಗೂ ಈ ಭುವನೇಶ್ವರಿ ದೇವಿಗೂ ಒಂದು ಬಗೆಯ ಅವಿನಾಭಾವ ಸಂಬಂಧವಿದ್ದಂತೆ ತೋರುತ್ತದೆ. ಹೋರಾಟದ ಚಳುವಳಿಯಲ್ಲಿದ್ದವರು ಬಹುಸಂಖ್ಯಾತರು ಮೇಲ್ವರ್ಗ(ಬ್ರಾಹ್ಮಣ)ಕ್ಕೆ ಸೇರಿದ ಸಮುದಾಯದವರಾಗಿದ್ದರು. ಇತರ ಶಕ್ತಿ ದೇವತೆಗಳು ಶೂದ್ರರು ಪೂಜಿಸುವ ದೇವತೆಗಳಾಗಿದ್ದರಿಂದ ಅವುಗಳು ಇವರ ಕಣ್ಣಿಗೆ ಕಾಣಲಿಲ್ಲ. ತಾವು ಆರಾಧಿಸುತ್ತಿದ್ದ ತಮ್ಮ ಕುಲ(ಜಾತಿ) ದೇವತೆಯಾದ ಭುವನೇಶ್ವರಿಯೇ ಕನ್ನಡಿಗರ ಕುಲದೇವತೆಯನ್ನಾಗಿ ಪರಿಗ್ರಹಿಸಿದಂತಿದೆ. ಆ ಸಂದರ್ಭದಲ್ಲಿ ಹೋರಾಟಗಾರರು ಕುಲ ಎನ್ನುವುದನ್ನು ಜಾತಿ ಎನ್ನುವ ಅರ್ಥದಲ್ಲಿ ಬಳಸದೇ ಒಂದೇ ಭಾಷೆಯನ್ನಾಡುವವರೆಲ್ಲರೂ ಒಂದೇ ಕುಲದವರು ಎಂದು ಗ್ರಹಿಸಿದರು. ಹರಿದು ಹಂಚಿ ಹೋಗಿದ್ದ ಕನ್ನಡ ಭಾಷಿಕರೆಲ್ಲರೂ ಒಂದು ಕುಲದವರು ಎಂದು ಪರಿಭಾವಿಸಿದರು. ಆ ಮೂಲಕ ಕನ್ನಡ ಏಕೀಕರಣಕ್ಕೆ ಅಣಿಯಾದರು ಎಂದು ಹೇಳಬಹುದು.

ಕೆಲವು ಕಡೆ ಭುವನೇಶ್ವರಿಯನ್ನು ಲಕ್ಷ್ಮೀ ಎಂದು ಕರೆಯಲಾಗಿದೆ. ವಿಜಯನಗರ ಸ್ಥಾಪನೆಗೆ ಮುಖ್ಯವಾಗಿ ಬೇಕಾಗಿದ್ದುದು ಧನಬಲ. ವಿದ್ಯಾರಣ್ಯರು ದೇವಿಯನ್ನು ಸಾಕ್ಷಾತ್ಕರಿಸಿಕೊಂಡು ಅವಳ ಅನುಗ್ರಹದಂತೆ ಸುವರ್ಣವೃಷ್ಠಿಯನ್ನು ಸುರಿಸಿದ್ದಕ್ಕಾಗಿ ಆ ಹೆಸರಿನಿಂದ ಕರೆಯಲಾಗಿದೆ. ಇಂದು ಹಂಪೆಯಲ್ಲಿರುವ ಭುವನೇಶ್ವರಿಯನ್ನು ವಿದೇಶಿಯರಿಗೆ ಮಾರ್ಗದರ್ಶಕರು ಲಕ್ಷ್ಮೀ ಎಂದು ಪರಿಚಯಿಸುವುದು ಕಂಡು ಬರುತ್ತದೆ. ಆದರೆ ಯಾವ ಶಕ್ತಿ ದೇವತೆಯ ಪೂಜೆಯಿಂದ ಯಾವ ರೀತಿಯ ಲಾಭವಾಗುತ್ತದೆ ಎನ್ನುವುದು ಗಮನಾರ್ಹವಾದುದು. ಸರಸ್ವತಿಯ ಪೂಜೆಯಿಂದ ಬುದ್ಧಿ ಪ್ರಾಪ್ತವಾಗುತ್ತದೆ. ಪಾರ್ವತಿಯ ಪೂಜೆಯಿಂದ ದೇಹಶಕ್ತಿ ವರ್ಧಿಸುತ್ತದೆ. ಈ ರೀತಿಯ ನಂಬಿಕೆಗಳನ್ನು ನೋಡಿದರೆ ಭುವನೇಶ್ವರಿಯ ಪೂಜೆಯಿಂದಾಗುವ ಲಾಭದ ಪರಿಣಾಮವನ್ನು ಅವಲೋಕಿಸಬೇಕಾಗುತ್ತದೆ. ಏಕೆಂದರೆ ಏಕೀಕರಣ ಹೋರಾಟದ ಸಂದರ್ಭದಲ್ಲಿ ಶಕ್ತಿ ಮುಖ್ಯವೋ, ಬುದ್ಧಿ ಮುಖ್ಯವೋ ಎನ್ನುವುದಕ್ಕಿಂತ ಕನ್ನಡಿಗರನ್ನು ಏಕೀಕರಿಸುವುದು ಮುಖ್ಯವಾಗಿತ್ತು. ಅದಕ್ಕಾಗಿ ತಾಯಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

> "ಆಂತರಿಕ ಬಾಹ್ಯಿಕ ಜೀವನದ ಸಂಪೂರ್ಣ ಪರಿಪೂರ್ಣತೆಯನ್ನು ಸಂಪಾದಿಸಿ ಮೃತಪ್ರಾಯವಾಗಿದ್ದ ಆಗಿನ ಕನ್ನಡ ನಾಡಿಗೆ ಜೀವದಾನವನ್ನು ಮಾಡಿದ ಶ್ರೀ ವಿದ್ಯಾರಣ್ಯರ ಉಪಾಸ್ಯದೇವತೆಯು ಶ್ರೀಭುವನೇಶ್ವರೀ ಮಾತೆಯು. ಆ ಮಹಾ ತಾಯಿಯ ದಿವ್ಯಾಶೀರ್ವಾದದಿಂದಲೇ ಕನ್ನಡಿಗರ ವಂಶವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಪುನಃ ಇಂದು ನಾವು ಮೃತಪ್ರಾಯರಾಗಿದ್ದರೆ ಈಗಲೂ ಅದೇ ತಾಯಿಯ ಅಮೃತ ಹಸ್ತದಿಂದ ಚೇತರಿಸಿಕೊಂಡು ಏಳಬೇಕಲ್ಲವೆ? ಕನ್ನಡಿಗರ ಕುಲದೇವತೆಯು ಅವಳೇ." (ಮಧುರ ಚೆನ್ನ, ಸಿಂಪಿ ಲಿಂಗಣ್ಣ, : 44)

ಎನ್ನುವ ಮಾತು ಕನ್ನಡಿಗರು ಅಸ್ಥಿರರಾದಾಗ ಅವರ ಸ್ಥಿರತೆಗೆ ಆ ಭುವನೇಶ್ವರಿ ತಾಯಿಯ ಕೃಪೆ ದೊರೆಯಿತೋ, ಹಾಗೆಯೇ ಏಕೀಕರಣ ಸಂದರ್ಭದಲ್ಲಿ ಕನ್ನಡಿಗರು ಮತ್ತೆ ಅಸ್ಥಿತರರಾದಾಗ ಸ್ಥಿರಗೊಳ್ಳುವುದಕ್ಕೆ ಆ ತಾಯಿಯೇ ಪ್ರೇರಣೆಯಾಗಬಲ್ಲಳು. ಅದಕ್ಕಾಗಿಯೇ ಅವಳೇ ನಮ್ಮ ನಾಡಿಗೆ ಅಧಿದೇವತೆಯಾಗಬೇಕು ಎಂಬುದನ್ನು ಹೇಳುತ್ತಾರೆ.

ನೆಲವನ್ನು ಹೆಣ್ಣಿಗೆ ಹೋಲಿಸಿದ್ದು 'ಒಲಿದರೆ ಅಮ್ಮ; ಮುನಿದರೆ ಮಾರಮ್ಮ' ಎಂಬರ್ಥದಲ್ಲಿಯೇ. ಅಂದರೆ ಈ ನೆಲದಲ್ಲಿ ಹುಟ್ಟಿದವರಿಗೆ ಅದು ಜನ್ಮಭೂಮಿಯಾಗಿ ತಾಯಿಯ ಸ್ಥಾನದಲ್ಲಿ ನಿಲ್ಲುತ್ತದೆ. ಈ ನೆಲವನ್ನಾಕ್ರಮಿಸಿದವರಿಗೆ ಅದು ಮಾರಿಯಾಗುತ್ತದೆ. ಇದು ಹುಟ್ಟಿಕೊಂಡದ್ದು ಆಧ್ಯಾತ್ಮಿಕ ನೆಲೆಯಲ್ಲಿ. ಭಾರತೀಯ ಸಮಾಜದ ಮಾತೃ ರೂಪಿಯಾದ ಹೆಣ್ಣು ಒಲಿದರೆ ಮಮತೆಯ ಸಾಕಾರಮೂರ್ತಿ. ಮುನಿದರೆ ದುರ್ಗೆಯ ರೌದ್ರರೂಪವನ್ನು ತೋರಬಲ್ಲಳು. ಈ ಬಗೆಯ ಸಂಕೇತದ ಹಿನ್ನೆಲೆಯಲ್ಲಿಯೇ ಭೂಮಿಯನ್ನು ಹೆಣ್ಣಿಗೆ ಹೋಲಿಸಿ, ಆ ಹೆಣ್ಣನ್ನು ಶಕ್ತಿದೇವತೆ ಹಲವು ರೂಪಗಳಲ್ಲಿ ಒಂದಾದ ಭುವನೇಶ್ವರಿಯನ್ನೇ ಕನ್ನಡಿಗರು ಕುಲದೇವತೆಯನ್ನಾಗಿ ಮಾಡಿಕೊಂಡಿದ್ದಾರೆ. ಇನ್ನೊಂದು ಪ್ರಮುಖವಾದ ಅಂಶವೆಂದರೆ ವಿಜಯನಗರವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಕರೆದುಕೊಂಡಿದ್ದರಿಂದಾಗಿ, ಆ ಸಾಮ್ರಾಜ್ಯ ಸ್ಥಾಪನೆಗೆ ಭುವನೇಶ್ವರಿಯ ಒಲುಮೆ ಇದೆ ಎಂದು ಹೇಳಲಾಗುತ್ತಿರುವುದರಿಂದಾಗಿ, ನಮ್ಮ ಪೂರ್ವದ ಸಾಮ್ರಾಜ್ಯದ ಅಧಿದೇವತೆಯು ನಮ್ಮ ಇಂದಿನ(ಕನ್ನಡಿಗರ) ಕುಲದೇವತೆಯಾಗಿದ್ದಾಳೆ.

ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಪ್ರಮುಖ ಮಾಧ್ಯಮಗಳೆಂದರೆ ಭಾಷಣಗಳು ಮತ್ತು ಲೇಖನಗಳು. ಇವುಗಳಿಗೆ ರಾಷ್ಟ್ರೀಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಮತ್ತಷ್ಟು ಪ್ರಾಮುಖ್ಯತೆ ಲಭಿಸಿತು. ಆಗ ರಾಷ್ಟ್ರೀಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಈ ಮಾಧ್ಯಮಗಳ ಮುಖೇನ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸತೊಡಗಿದರು. ಆ ಮೂಲಕ ಜನರಲ್ಲಿ ನಾಡು, ನುಡಿ, ರಾಷ್ಟ್ರದ ಬಗ್ಗೆ ಅಭಿಮಾನ ಮೂಡಿಸುವುದು, ಮತ್ತು ಸೇವಾಮನೋಭಾವನೆಯನ್ನು ಬೆಳೆಸುವ ಉದ್ದೇಶವನ್ನಿಟ್ಟುಕೊಂಡು ಜನರನ್ನು ಜಾಗ್ರತಗೊಳಿಸಲು ಪ್ರಯತ್ನಿಸಿದ್ದಾರೆ. ಈ ಮೇಲಿನ ಭಾಷಣಗಳನ್ನು ಹಾಗೂ ಲೇಖನಗಳನ್ನು ಗಮನಿಸಿದಾಗ ಕಂಡು ಬರುವ ಮುಖ್ಯ ಸಂಗತಿಗಳೆಂದರೆ, ಮೊದಲು ಕನ್ನಡಿಗರ ಏಕೀಕರಣ ಆನಂತರ ಅನ್ಯರ ಆಡಳಿತದಿಂದ ರಾಷ್ಟ್ರವನ್ನು ವಿಮುಕ್ತಿಗೊಳಿಸುವ ಹಂಬಲ. ಈ ಉದ್ದೇಶವನ್ನಿಟ್ಟುಕೊಂಡು ಅದನ್ನು ಚಾರಿತ್ರಾತ್ಮಕ ಸಂಗತಿಗಳ ಮುಖೇನ ಅವುಗಳನ್ನು ಸಕಾರಗೊಳಿಸಿಕೊಳ್ಳುವ ಕಾರ್ಯ ಮಾಡಿದರು. ಅನ್ಯರ ವಿರುದ್ಧರ ಹೋರಾಟಕ್ಕೆ ಎಲ್ಲರೂ

ಒಗ್ಗಟ್ಟಾಗಬೇಕಾದಾಗ ಅಲ್ಲಿ ಧರ್ಮವನ್ನು ಬಳಸಿಕೊಂಡರು. ಧರ್ಮದಿಂದ ತಾವು ಪ್ರೇರಿತರಾಗಿ ಜನರನ್ನೂ ಪ್ರೇರೆಪಿಸುವ ಕೆಲಸ ಮಾಡಿದರು.

* * *

**ಉಲ್ಲೇಖಗಳು :**


ಕುಲಕರ್ಣಿ ಆರ್.ಬಿ., 1924,ಕನ್ನಡಿಗನ ಸರ್ವಸ್ವ, ಆರ್.ಬಿ.ಕುಲಕರ್ಣಿ ಕಾವ್ಯರತ್ನ, ಬೆಳಗಾಂವಿ.

ವಿಜಯನಗರ ಸ್ಮಾರಕೋತ್ಸವ, 1936, ವಿಜಯನಗರ ಸ್ಮಾರಕೋತ್ಸವ ಸಮಿತಿ, ಧಾರವಾಡ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ರಾಮರಾವ ನರಗುಂದಕರ, 1918, *ವಿಜಯನಗರ ಸಾಮ್ರಾಜ್ಯವೂ, ಕನ್ನಡಿಗರೂ*, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ–3.

ಪ್ರಹ್ಲದರಾಯ ಕುಲಕರ್ಣಿ, 1936, *ಕರ್ನಾಟಕತ್ವದ ಬೆಳವಣಿಗೆಯಲ್ಲಿ ವಿಜಯನಗರದವರ ಕಾರ್ಯ* (ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ಅದೇ.

ಮಧುರ ಚೆನ್ನ, ಸಿಂಪಿ ಲಿಂಗಣ್ಣ, 1936, *ಕನ್ನಡಿಗರ ಕುಲಗುರು.*

ತಮ್ಮಣ್ಣ ಕುಬೇರಪ್ಪ ತುಕೋಲ, 1936, *ಹಿಂದೂ ಸಂಸ್ಕೃತಿಯು ವಿಜಯನಗರಕ್ಕೆ ಋಣಿಯಾಗಿಲ್ಲವೆ?*(ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ಬುರ್ಲಿ ಬಿಂದುಮಾಧವಾಚಾರ್ಯ, 1936, *ವಿಜಯನಗರ ಸಾಮ್ರಾಜ್ಯವು ಉದಯಿಸದಿದ್ದರೆ?* (ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ಭೀಮರಾಯ ನಂದಗಡ, 1936, ಭರತ ಖಂಡದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾನವು(ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ಅದೇ.

ಅದೇ.

ಚೆನ್ನಬಸವಸ್ವಾಮಿ ಹಿರೇಮಠ, 1936, *ವಿಜಯನಗರ ಕಾಲದ ಧಾರ್ಮಿಕ ಪರಿಸ್ಥಿತಿ*, (ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ನಾರಾಯಣ ಸುಬ್ರಾವ ಹರಡೀಕರ: *ವಿಜಯನಗರದ ಸೈನ್ಯ*, (ಅರುಣೋದಯ–ವಿಜಯನಗರ ಸಾಮ್ರಾಜ್ಯ ಸಂಚಿಕೆ),

ರಾ.ಯ.ಧಾರವಾಡಕರ(ಸಂ), 1983, *ಶಾಂತಕವಿಗಳ ಮೂರು ಕೀರ್ತನೆಗಳು*, ಸ್ವರಸ್ವತಿಪುರಂ, ಧಾರವಾಡ.

ಮಧುರ ಚೆನ್ನ, ಸಿಂಪಿ ಲಿಂಗಣ್ಣ, 1936 : *ಕನ್ನಡಿಗರ ಕುಲಗುರು*, ಅರವಿಂದ ಗ್ರಂಥಮಾಲ, ಹಲಸಂಗಿ.

# ಅಧ್ಯಾಯ–4

## ನಾಟಕಗಳಲ್ಲಿ ವಿಜಯನಗರದ ಪ್ರತಿನಿಧೀಕರಣ

* ಹರಿಹರರಾಯ ಅಥವಾ ವಿಜಯನಗರ ಸಾಮ್ರಾಜ್ಯ
* ಸಂಗೀತ ಕರ್ನಾಟಕ ಸಿಂಹಾಸನ ನಾಟಕವು ಅಥವಾ ಅಮಾತ್ಯ ಮಾಧವ
* ಯಚ್ಚಮ ನಾಯಕ ಅಥವಾ ಕನ್ನಡದ ಕಡುಗಲಿ
* ತಾಳಿಕೋಟೆ
* ನಾಗರಿಕ
* ವರಪ್ರದಾನ
* ಶ್ರೀವಿದ್ಯಾರಣ್ಯ ವಿಜಯ
* ವಿಜಯ ಸಾಮ್ರಾಜ್ಯ

> ವೀರಕನ್ನಡ ಗಂಡುಗಲಿಗಳು ವಿಜಯನಗರದತಾಣಮಂ।
> ಭೂರಿಸುಂದರ ಶಿಲ್ಪ–ಕಲೆಯಿಂ ಮೆರೆವ ಗುಡಿಗೋಪುರಗಳಂ॥
> ಧಾರುಣಿಗೆಮಿಗಿಲಾದ ತುಂಗಾತೀರ ಪಂಪಾನಾಥನಂ।
> ಆರುನೋಡುವವರೆ ಧನ್ಯರು ಹುಟ್ಟಿ ಬಂದುದು ಸಾರ್ಥಕಂ॥
>
> –ಆನಂದಕವಿ ಕುರಗುಂದ

# ಅಧ್ಯಾಯ– 4
## ನಾಟಕದಲ್ಲಿ ವಿಜಯನಗರದ ಪ್ರತಿನಿಧೀಕರಣ

ನಾಟಕ ಎನ್ನುವುದು ಹಲವು ಕಲೆಗಳ ಸೇರುವಿಕೆಯಿಂದಾದ ವಿಶಿಷ್ಟ ಕಲೆ. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಅಭಿನಯ, ನೃತ್ಯ ಈ ಮುಂತಾದ ಕಲೆಗಳ ಒಟ್ಟು ಮೊತ್ತವೇ ನಾಟಕ. ಕಾಳಿದಾಸನು 'ಶಾಂತಂ ಕ್ರತುಂ ಚಾಕ್ಷುಸಂ' ಎಂದು ಹೇಳಿರುವುದು ಈ ಕಾರಣಕ್ಕಾಗಿಯೇ. ಪ್ರೇಕ್ಷಕರಿಗೆ ಒಂದೇ ಸಮಯದಲ್ಲಿ ವಿಭಿನ್ನವಾದ ರಸಾನುಭವ ನೀಡುವ ನಾಟಕವು ಸಹಜವಾಗಿಯೇ ಜನಾಕರ್ಷಣೆಯನ್ನು ಪಡೆದಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದಲ್ಲಿ ನಾಟಕಕ್ಕೆ ಪ್ರಮುಖ ಸ್ಥಾನ ಸಂದಿದೆ. ಹೀಗೆ ವಿಶಿಷ್ಟ ಪ್ರಕಾರದ ಸಾಹಿತ್ಯವಾದರೂ ನಾಟಕ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ನಾಟಕೀಯ ಅಂಶಗಳನ್ನೊಳಗೊಂಡ ಕೃತಿಗಳು ರಚಿತವಾದವಾದರೂ ನಾಟಕ ಎನ್ನುವಂತಹ ಹೆಸರಿನಿಂದ ನಾಟಕ ರಚನೆಗೊಂಡದ್ದು ಸಂಸ್ಕೃತದ ಸಿಂಗರಾರ್ಯ ಅನುವಾದಿಸಿದ 'ಮಿತ್ರಾವಿಂದ ಗೋವಿಂದ'ದಿಂದಲೇ. ಮೈಸೂರೊಡೆಯರ ಅರಮನೆಯ ರಂಗಭೂಮಿಗೆಂದೇ ಹುಟ್ಟಿದ್ದು ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ'. 'ರತ್ನಾವಲಿ' ಎನ್ನುವ ಸಂಸ್ಕೃತ ನಾಟಕದ ಕಥೆಯನ್ನೇ ಹಳೆಗನ್ನಡ ಭಾಷೆಯಲ್ಲಿ ಸಿಂಗರಾರ್ಯನು ನಾಟಕವಾಗಿ ರೂಪಿಸಿದ್ದಾನೆ. ಕನ್ನಡದಲ್ಲಿ ನಾಟಕವು ಹುಟ್ಟಿಕೊಳ್ಳಲಿಕ್ಕೆ ಮೈಸೂರು ಒಡೆಯರ ಆಸಕ್ತಿ ಪ್ರಮುಖವಾದುದು. ಒಡೆಯರು ತಮ್ಮ ಅರಮನೆಯೊಳಗೆ ನಾಟಕಗಳ ಪ್ರದರ್ಶನ ಏರ್ಪಡಿಸುತ್ತಿದ್ದರು. ಅರಮನೆಯ ಆಸ್ಥಾನದಲ್ಲಿ ಪಾರ್ಸಿ ತಂಡವೊಂದು ಆಗಮಿಸಿ ನಾಟಕವನ್ನು ಪ್ರದರ್ಶಿಸಿದಂತೆ, ಅದರ ಪ್ರಭಾವಕ್ಕೆ ಒಳಗಾದ ಮೈಸೂರು ಅರಸರು ಇಲ್ಲಿಯ ಕವಿಗಳನ್ನು ನಾಟಕ ರಚಿಸುವಂತೆ ಪ್ರೇರೇಪಿಸಿದರು. ನಂತರದಲ್ಲಿ ಮೈಸೂರು ಅರಮನೆಯ ವಿದ್ವಾಂಸರು ಇಂಗ್ಲಿಷ್ ಹಾಗೂ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸ ತೊಡಗಿದರು. ಈ ನಾಟಕಗಳಲ್ಲಿ

> "ಸಂಭಾಷಣೆಗಳಿಗೆ, ಪ್ರೌಢವಾದ ಗದ್ಯ ಹಾಗೂ ಪದ್ಯಗಳಿಗೆ ವೃತ್ತಗಳನ್ನು ಬಳಸಿಕೊಂಡರು. ಈ ಮಾದರಿಯ ನಾಟಕ ಅಕ್ಷರಶಃ ಚಂಪೂ ಕಾವ್ಯವಾಗಿತ್ತು. ಇವು ಕೇವಲ ಪ್ರಯೋಗಕ್ಕಾಗಿಯೇ ಬರೆದವುಗಳಾದ್ದರಿಂದ, ಹೊಸ ದೃಷ್ಟಿಯಾಗಲಿ, ದರ್ಶನವಾಗಲಿ ಇವುಗಳಲ್ಲಿ ಕಂಡುಬರುವುದಿಲ್ಲ. ಈ ಕೃತಿಗಳನ್ನು ಸಾಹಿತ್ಯದ ಪ್ರಯೋಗಗಳೆಂದೇ ನೋಡಬೇಕೇ ಹೊರತು, ಅವುಗಳಲ್ಲಿ ಜೀವನ ದೃಷ್ಟಿಯನ್ನು ಅರಸಲಾಗದು." (ಕುರ್ತುಕೋಟಿ ಕೀರ್ತಿನಾಥ, 2002 : 93)

ನಂತರದಲ್ಲಿ ಕನ್ನಡದಲ್ಲಿ ನಾಟಕಗಳ ಪರಂಪರೆಯೇ ಬೆಳೆಯಿತು. ಮೊದಮೊದಲು ಇತರ ಭಾಷೆಗಳಿಂದ ಅನುವಾದ ನಾಟಕಗಳು ಬಂದರೂ, ತರುವಾಯ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ವಸ್ತುಗಳನ್ನಾಧರಿಸಿ ಸ್ವತಂತ್ರ ನಾಟಕಗಳು ರಚಿತಗೊಂಡವು. ಇಡೀ ಕರ್ನಾಟಕವನ್ನು ಗಮನಿಸಿದರೆ ರಂಗಚಟುವಟಿಕೆಗೆ ಹೆಚ್ಚು ಆದ್ಯತೆ ನೀಡಿದುದು ಉತ್ತರ

ಕರ್ನಾಟಕವೆಂದೇ ಹೇಳಬಹುದು. ಶಾಂತಕವಿಗಳು ಜನಪದ ರಂಗಭೂಮಿಯ ತಂತ್ರವನ್ನು ಬಳಸಿ ಹೊಸಹೊಸ ನಾಟಕಗಳನ್ನು ರಚಿಸಿದರು. ಚೂರಮರಿ ಶೇಷಗಿರಾಯ, ಮುದವೀಡು ಕೃಷ್ಣರಾಯ, ಕೆರೂರು ವಾಸುದೇವಾಚಾರ್ಯ ಮುಂತಾದವರು ಆಧುನಿಕ ನಾಟಕಗಳನ್ನು ಬರೆದು ನಾಟಕ ಸಾಹಿತ್ಯ ಮುಂದುವರೆಯಲು ಕಾರಣೀಕರ್ತರಾದರು.

ಭಾರತದ ರಾಷ್ಟ್ರೀಯತೆ, ಕನ್ನಡದ ಪುನನಿರ್ಮಾಣದ ಉತ್ಸಾಹಿದಲ್ಲಿದ್ದ ಲೇಖಕರು ನಾಡಿನ ಇತಿಹಾಸವನ್ನು ನಾಟಕ, ಕಾದಂಬರಿಗಳ ಮೂಲಕ ಚಿತ್ರಿಸಿದರು. ಕಾದಂಬರಿ ಕೇವಲ ಓದಲು ಬರುವವನಿಗೆ ಮಾತ್ರ ಅರ್ಥವಾದರೆ ನಾಟಕ ಪ್ರಕಾರ ಓದಲು ಬಾರದ ಪ್ರೇಕ್ಷಕರನ್ನು ತಲುಪಬಲ್ಲದು ಹೀಗಾಗಿ ಇತಿಹಾಸಿಕ ನಾಟಕಗಳು, ಇತರ ಸಾಹಿತ್ಯ ಪ್ರಕಾರಗಳಗಿಂತ ಹೆಚ್ಚು ಜನಪ್ರಿಯವಾದವು.

> "ಚರಿತ್ರೆಯೆಂಬುದು ಒಂದು ಒದ್ದೆಮುದ್ದೆಯಾದ ಒರಟು ವಿಗ್ರಹವಾದರೆ, ಅದರ ಅಂಕು ಡೊಂಕುಗಳನ್ನು ಸವರಿ, ಕೈಕಾಲುಗಳನ್ನು ಬಿಡಿಸಿ, ಕೆತ್ತನೆಯ ಕುಸುರಿ ಕೆಲಸದಿಂದ ದಿವ್ಯಾಭರಣ ಭೂಷಿತೆಯಾಗಿರುವ ಒಂದು ಕಲಾಕೃತಿಯಂತಿರುವುದು ಐತಿಹಾಸಿಕ ನಾಟಕ" (ಶಾಮರಾಯ ತ.ಸು. 2007: 382)

ಕನ್ನಡ, ಕರ್ನಾಟಕದ ಪುನರ್‌ನಿರ್ಮಾಣದ ಉತ್ಸಾಹದಲ್ಲಿ ಐತಿಹಾಸಿಕ ನಾಟಕಗಳನ್ನು ಬರೆದ ಪ್ರಮುಖ ನಾಟಕಕಾರರಲ್ಲಿ 'ಸಂಸ'ರು ಮೊದಲಿಗರಾಗಿದ್ದಾರೆ. ಉತ್ತರ ಕರ್ನಾಟಕದಲ್ಲಿ ಐತಿಹಾಸಿಕ ನಾಟಕಗಳು ಹೆಚ್ಚಾಗಿ ಹುಟ್ಟಿಕೊಂಡಿರುವುದನ್ನು ಕಾಣಬಹುದು. ಕನ್ನಡ ನಾಡು-ನುಡಿ, ರಾಷ್ಟ್ರೀಯತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಹುಟ್ಟಿದ ನಾಟಕಗಳು ಬೇರೆ ಬೇರೆ ಲೇಖಕರಿಂದ, ಬೇರೆ ಬೇರೆ ಕಾಲದಲ್ಲಿ ಸೃಷ್ಟಿಗೊಂಡರೂ ಅವುಗಳೆಲ್ಲಾ ಒಂದೇ ಮಾದರಿಯವುಗಳೆನಿಸುತ್ತವೆ. ಪಾತ್ರಗಳು, ಸನ್ನಿವೇಶಗಳು ಬೇರೆಯಾದರೂ ಸಹ ವಸ್ತು ಒಂದೇ ಆದುದರಿಂದ ಈ ರೀತಿಯ ಸಮಸ್ಯೆ ತಲೆದೋರಲು ಕಾರಣವಾಗಿರಬಹುದು.

> "ಇತಿಹಾಸ ಗತಕಾಲಕ್ಕೆ ಸೇರಿರುವುದರಿಂದಲೋ ಏನೋ ಅದರಲ್ಲಿ ವೈವಿಧ್ಯ ಕಾಣುವುದಿಲ್ಲ. ಆದ್ದರಿಂದ ಸಾಮಾನ್ಯವಾಗಿ ಒಂದು ನಾಟಕದಂತೆ ಇನ್ನೊಂದು ನಾಟಕ ಕಾಣುವ ಸಂಭವ ಹೆಚ್ಚು. ಐತಿಹಾಸಿಕತೆಯ ಅಪಾಯವೇ ಅದಾಗಿದೆ..... ಕತೆ ಒಂದು ಕೃತಿಯಿಂದ ಇನ್ನೊಂದಕ್ಕೆ ಬೇರೆಯಾದರೂ, ಜೀವನದ ಹಿನ್ನೆಲೆ ಹಾಗೂ ವಿವರಗಳು ಪರಿಮಿತವಾಗಿರುವುದರಿಂದ ಈ ದೋಷ ಅನಿವಾರ್ಯವಾಗಿದೆ" (ಕುರ್ತುಕೋಟಿ ಕೀರ್ತಿನಾಥ, 2002:122).

ಪ್ರಾಯಶಃ ವಿಜಯನಗರಕ್ಕೆ ಸಂಬಂಧಿಸಿದಂತೆ ಬಂದ ನಾಟಕಗಳಿಗೂ ಈ ಮಾತು ಅನ್ವಯಿಸುತ್ತದೆ.

ನಾಡು-ನುಡಿ, ರಾಷ್ಟ್ರಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವುಗಳ ಕುರಿತು ಜನಸಾಮಾನ್ಯರಿಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಬೋಧನಾ ಪ್ರಧಾನವಾದ ನಾಟಕಗಳು ಕನ್ನಡದಲ್ಲಿ ಬಂದವು. ವಸ್ತು ವಿಜಯನಗರಕ್ಕೆ ಸಂಬಂಧಿಸಿದುದಾರೂ ಉದ್ದೇಶ

ಮಾತ್ರ ರಾಷ್ಟ್ರ-ನಾಡು-ನುಡಿಗಳ ಕುರಿತು ಅರಿವು ಮೂಡಿಸುವುದೇ ಆಗಿದೆ. ಈ ನಿಟ್ಟಿನಲ್ಲಿ ಮಹತ್ವದ ಕಾರ್ಯ ನಿರ್ವಹಿಸಿದವರು ಉತ್ತರ ಕರ್ನಾಟಕದ ಲೇಖಕರು ಈ ನಾಟಕಕಾರಿಗೆ ವೃತ್ತಿ ರಂಗಭೂಮಿಯ ಸಂಪರ್ಕ ಚೆನ್ನಾಗಿದ್ದಿತು ಎಂಬುದನ್ನು ಅವರ ಕೃತಿಗಳೇ ತಿಳಿಸುತ್ತವೆ. ವಿಜಯನಗರ ವಸ್ತುವಿರಿಸಿಕೊಂಡು ಹಳೇ ಮೈಸೂರು ಪ್ರಾಂತ್ಯದ ಲೇಖಕರು ನಾಟಕ ರಚಿಸಿದ್ದಾರೆ ಅದು ಮಾಸ್ತಿಯವರೊಬ್ಬರೆ. ತಾಳೀಕೋಟೆ ಯುದ್ಧದ ಹಿನ್ನೆಲೆಯಲ್ಲಿ ಮಾನವೀಯತೆಯನ್ನೇ ಪ್ರಧಾನವಾಗಿರಿಸಿಕೊಂಡು ಸೃಷ್ಟಿಗೊಂಡ ನಾಟಕ ತಾಳೀಕೋಟೆ.

1900 ರಿಂದ 1956ರ ಸುಮಾರಿನವರೆಗೂ ವಿಜಯನಗರವನ್ನು ವಸ್ತುವಾಗಿರಿಸಿಕೊಂಡು ಅದರಲ್ಲೂ ರಾಷ್ಟ್ರ ನಾಡು ನುಡಿಗಳನ್ನು ಪ್ರತಿನಿಧೀಕರಿಸುವ ಪ್ರಾತಿನಿಧಿಕ ನಾಟಕಗಳನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ಮುಖ್ಯವಾಗಿ ನಾಟಕವೊಂದು ಕೃತಿಯಾಗಿ ಎಷ್ಟು ಯಶಸ್ವಿಯಾಗಿದೆ ಎನ್ನುವುದಕ್ಕಿಂತ, ಅಲ್ಲಿ ರಾಷ್ಟ್ರ, ನಾಡು-ನುಡಿ, ಕನ್ನಡ ಮಾತೆಯಾಗಿ ಭುವನೇಶ್ವರಿಯನ್ನು ನೋಡಿದ ಕ್ರಮಗಳನ್ನು ಹಾಗೂ ಹಿಂದೂ ಗುರುತುಗಳನ್ನು ಅಲ್ಲಿನ ಪಾತ್ರಗಳ ಮೂಲಕ ಲೇಖಕರು ಹೊರಡಿಸಿದ ಸಂಭಾಷಣೆಯ ಸ್ವರೂಪಗಳನ್ನು ನೋಡುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

> "ಆಧುನಿಕ ಕನ್ನಡ ನಾಟಕದಲ್ಲೂ 'ಹಂಪಿ' ಮತ್ತು 'ವಿದ್ಯಾರಣ್ಯ'ರ ಥೀಮ್‌ಗಳು ಬಹಳ ಮಹತ್ವ ಪಡೆದಿವೆ. ಇದಕ್ಕೆ ಮುಖ್ಯ ಕಾರಣ ಕನ್ನಡಿಗರ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಚಿಂತನೆಗಳು. ಬೇರೆ ಪ್ರಾಂತೀಯ ಭಾಷೆಗಳಲ್ಲಿ ತಮ್ಮದೇ ಆದ ಪ್ರೇರಕಶಕ್ತಿ-ಸಂಕೇತಗಳು ಇರುವಂತೆ ಕನ್ನಡದಲ್ಲಿ ಹಂಪಿಯ ವಿಜಯನಗರ ಸಾಮ್ರಾಜ್ಯ, ವಿದ್ಯಾರಣ್ಯರ ವಿಚಾರಗಳು, ಭುವನೇಶ್ವರಿಯ ಕಲ್ಪನೆ ಹಾಗೂ ಕರ್ನಾಟಕ ಸಿಂಹಾಸನಗಳು ಪ್ರಚುರಗೊಂಡಿವೆ. ಇವು ಕನ್ನಡಿಗರ ಸಾಂಸ್ಕೃತಿಕ ಪ್ರೇರೇಪಣೆಯ ಹಾಗೂ ಏಕೀಕರಣ ಚಿಂತನೆಯಲ್ಲಿ ಜಾಗೃತಿ ಮೂಡಿಸುವ ವಿಚಾರಗಳು" (ಸಿ.ಆರ್. ಗೋವಿಂದರಾಜು., 1998:178).

ಎಂದು ಗೋವಿಂದರಾಜು ಅವರು ಅಭಿಪ್ರಾಯಪಟ್ಟರೆ, ಸುರೇಶ ಪಾಟೀಲರು ಈ ಮುಂದಿನಂತೆ ಅಭಿಪ್ರಾಯಪಡುತ್ತಾರೆ.

> "ರಾಷ್ಟ್ರೀಯತೆ ಮತ್ತು ಪ್ರಾಂತಾಭಿಮಾನ ಅರ್ಥಾತ್ ನಾಡು-ನುಡಿಯ ಚಿಂತನೆಗೆ ಅವಕಾಶ ಕಲ್ಪಿಸಿಕೊಳ್ಳಲು ಅಂದಿನ ಲೇಖಕರು ಆಯ್ದುಕೊಂಡ ಇನ್ನೊಂದು ವಸ್ತುವೆಂದರೆ ಐತಿಹಾಸಿಕ ಸಾಮಗ್ರಿ, ಇದು ಕಾವ್ಯ, ಕಾದಂಬರಿಗಳಲ್ಲೂ ಕಂಡು ಬರುತ್ತದೆ. ಸಾಹಿತ್ಯಿಕ ನಾಟಕಗಳಲ್ಲದೆ ವೃತ್ತಿರಂಗಭೂಮಿಯ ನಾಟಕಗಳೂ ಈ ಕೆಲಸವನ್ನು ಚೆನ್ನಾಗಿ ಮಾಡಿದವು. ಐತಿಹಾಸಿಕ ವಸ್ತುವಿನ ಮೂಲಕ ಸಮಕಾಲೀನವಾದ ತಮ್ಮ ಚಿಂತನೆಯನ್ನು ಪ್ರಕಟಿಸಲು ಮತ್ತು ಜನಭಾವನೆಯನ್ನು ಪ್ರಚೋದಿಸಲು ನಮ್ಮ ಲೇಖಕರು ಮತ್ತು ಕನ್ನಡಪರ ಚಿಂತಕರಿಗೆ ಪ್ರಿಯವಾದ

ವಸ್ತುವೆಂದರೆ ವಿಜಯನಗರ ಸಾಮ್ರಾಜ್ಯದ ಇತಿಹಾಸ." (ಸುರೇಶ ಪಾಟೀಲ, 1998:117)

ಹೀಗೆ ಕನ್ನಡ ನಾಟಕಗಳಲ್ಲಿ ಹಂಪಿ, ವಿಜಯನಗರ, ಹರಿಹರ, ವಿದ್ಯಾರಣ್ಯ ಮುಖ್ಯವಾಗಿ ಭುವನೇಶ್ವರಿ, ಇವುಗಳನ್ನೇ ವಸ್ತುವಾಗಿ ಆಯ್ಕೆ ಮಾಡಿಕೊಳ್ಳಲು ಕಾರಣಗಳೇನು ಎಂದು ಪ್ರಶ್ನಿಸಿದಾಗ ದೊರೆಯುವ ಉತ್ತರಗಳು ಇವು. ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಸಂಸ್ಥಾನಗಳನ್ನೆಲ್ಲಾ ಒಂದಾಗಿಸಿಕೊಂಡು ಅಂದರೆ ತನ್ನ ರಾಜ್ಯವ್ಯಾಪ್ತಿಯೊಳಗೆ ಸಂಸ್ಥಾನಗಳನ್ನು, ಕಿರಿ ರಾಜ್ಯಗಳನ್ನೆಲ್ಲಾ ಸೆಳೆದುಕೊಂಡು ಅಖಂಡ ಸಾಮ್ರಾಜ್ಯವಾಗಿ ರೂಪುಗೊಂಡದ್ದು ವಿಜಯನಗರ. ಹಾಗೇ ವಿದೇಶಿ ಮುಸ್ಲಿಂ ಅರಸರನ್ನು ಹತ್ತಿಕ್ಕುವ ಉದ್ದೇಶದಿಂದಲೇ ವಿಜಯನಗರ ಸಾಮ್ರಾಜ್ಯ ಜನ್ಮತಾಳಿತು.

ಇದಕ್ಕೆ ಮುಖ್ಯ ಪ್ರೇರಣೆಯಾದವರು ವಿದ್ಯಾರಣ್ಯರು.(ಎಂದು ಇತಿಹಾಸದಲ್ಲಿ ಹೇಳಲ್ಪಟ್ಟಿದೆ) ವಿದ್ಯಾರಣ್ಯರ ಮಾರ್ಗದರ್ಶನವನ್ನು ಪಡೆದು ಪ್ರಬಲವಾದ ವೈದಿಕ ರಾಜ್ಯವೊಂದನ್ನು ಕಟ್ಟುವ ಕಾರ್ಯಕ್ಕೆ ಕೈ ಹಾಕಿದವರು ಹರಿಹರ ಹಾಗೂ ಬುಕ್ಕರು. ಪ್ರಾಯಶಃ ಮುಸ್ಲಿಂ ರಾಜರುಗಳ ವಿರುದ್ಧ ನಿಲ್ಲಲು ಹಾಗೂ ವಿಜಯನಗರ ಅರಸರೊಂದಿಗೆ ಸಾಮಂತರು, ಕಿರಿ ರಾಜರುಗಳು ಕೈಜೋಡಿಸಲು ಕಾಣವಾದುದು (ವೈದಿಕ ಧರ್ಮ) ತಾವೆಲ್ಲಾ ಒಂದೇ ಧರ್ಮೀಯರು, ತಾವೆಲ್ಲಾ ಒಂದಾದರೆ ಮಾತ್ರ ವಿದೇಶಿಯರನ್ನೂ, ಅನ್ಯ ಧರ್ಮೀಯರನ್ನು ಹತ್ತಿಕ್ಕಲು ಸಾಧ್ಯ ಎನ್ನುವ ಭಾವನೆಯೇ ಕಾರಣವಾಗಿದೆ. ಹೀಗಾಗಿ ಹಿಂದೂ ಧರ್ಮವೂ ಇಲ್ಲಿ ಮುಖ್ಯ ಪ್ರೇರಣೆಯಾಗಿ ಕಾರ್ಯ ನಿರ್ವಹಿಸಿದೆ.

ಇನ್ನು ಭುವನೇಶ್ವರಿದೇವಿ ವಿರೂಪಾಕ್ಷ ದೇವಾಲಯದಲ್ಲಿರುವ ಚಿಕ್ಕದೇವಾಲಯದಲ್ಲಿ ನೆಲೆಗೊಂಡಿರುವ ಭುವನೇಶ್ವರಿಯೇ ಕನ್ನಡ ನಾಟಕಕಾರಿಗೆ, ಸಾಹಿತಿಗಳಿಗೆ ಮುಖ್ಯವಾದಳು ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಬಹುಶಃ ಭೂಮಿಯ ಒಡೆತನ, ಭೂತಾಯಿ ಎನ್ನುವ ಅರ್ಥದಲ್ಲಿ ಭುವನೇಶ್ವರಿಯನ್ನು ಪರಿಗಣಿಸಿ, ಅವಳನ್ನು ಕಥೆನಾಟಕಗಳಲ್ಲಿ ಮುಖ್ಯ (ವಸ್ತುವಾಗಿ) ಪಾತ್ರವಾಗಿ ಪರಿಗಣಿಸಿರಬಹುದೆನಿಸುತ್ತದೆ. ಹಾಗಾದರೆ ಕನ್ನಡಿಗರ ಜನಪದ ಮಾತೃದೇವತೆಗಳಾವುವೂ ನಮ್ಮ ಲೇಖಕರಿಗೆ ನೆನಪಾಗಲಿಲ್ಲವೆ? ಎಂದೂ ಅನ್ನಿಸುವುದು ಸಹಜ. ಆದರೆ ಲೇಖಕರ ಸಾಮಾಜಿಕ ಸ್ಥಾನಮಾನಗಳು, ಜಾತಿ ವ್ಯವಸ್ಥೆಯಲ್ಲಿ ಅವರು ಪಡೆದಿರುವ ಸ್ಥಾನಮಾನಗಳು, ಭುವನೇಶ್ವರಿ ವಸ್ತುವಾಗಿ ಬಳಕೆಗೊಂಡಿರುವುದಕ್ಕೆ ಕಾರಣಗಳಾಗಿರಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತೀಯ ವಿದ್ಯಾವಂತ ಸಮೂಹವು ಹೆಚ್ಚಾಗಿ ಮೇಲ್ವರ್ಗಕ್ಕೆ ಸೇರಿದುದೇ ಆಗಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದವರಲ್ಲಿ ಅನ್ಯ ಸಮುದಾಯಗಳಿಗಿಂತ ಮೇಲ್ವರ್ಗದವರೇ ಹೆಚ್ಚಾಗಿದ್ದರು. ಹಾಗೇ ಕನ್ನಡ ಸಾಹಿತಿಗಳು ಎಂದರೆ ಆ ಕಾಲದಲ್ಲಿ ಮೇಲ್ವರ್ಗದವರೇ ಹೆಚ್ಚಾಗಿದ್ದ ಕಾಲ. ಹೀಗಾಗಿ ಜನಪದ ದೈವಗಳಿಗಿಂತ

ಶಿಷ್ಟದೇವತೆಯಾದ ಭುವನೇಶ್ವರಿಯು ನಾಟಕಗಳಲ್ಲಿ ವಿಜೃಂಭಿಸುವ ಸಾಧ್ಯತೆಗಳೇ ಹೆಚ್ಚು ಎನಿಸುತ್ತದೆ.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಉಂಟಾದ ಹೋರಾಟದ ಸ್ವರೂಪದಲ್ಲಿನ ಜಿಜ್ಞಾಸೆಗಳು ಆಲೂರರ 'ಕರ್ನಾಟಕ ಗತವೈಭವ'ದ ನಂತರ ಹೊಸ ಮಾರ್ಗಗಳು ದೊರೆತವು. ಆಗ ಬೇರೆ ಬೇರೆ ಲೇಖಕರು ತಮ್ಮ ಪ್ರಾದೇಶಿಕ ಚರಿತ್ರೆಯನ್ನಿಟ್ಟುಕೊಂಡು ಸಾಹಿತ್ಯ ಕೃಷಿ ಮಾಡಿದರು. ಅದರಲ್ಲೂ ಅನೇಕ ಬರಹಗಾರರಿಗೆ ವಿಜಯನಗರ ಹಾಗೂ ಅದಕ್ಕೆ ಸಂಬಂಧಿಸಿದ ರಾಜರು, ದೈವಗಳು ಮುಖ್ಯವಾಗಿ ಕಂಡುಬಂದವು. ವಿಜಯನಗರದ ಹೊರತಾಗಿಯೂ ರಾಷ್ಟ್ರ ನಾಡು-ನುಡಿಗಳನ್ನು ಉದ್ದೇಶವಾಗಿರಿಸಿಕೊಂಡು ಐತಿಹಾಸಿಕ ನಾಟಕಗಳು ಹುಟ್ಟಿರುವ ಉದಾಹರಣೆಗೂ ಕನ್ನಡದಲ್ಲಿವೆ. ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಂಸರು ರೂಪಿಸಿದ ನಾಟಕಗಳು, ಇಂತಹ ಹಲವಾರು ಕನ್ನಡದ ಕೃತಿಗಳು ಇದಕ್ಕೆ ಉದಾಹರಣೆಯಾಗಿ ನಿಲ್ಲುತ್ತವೆ. ಆದರೆ ಆರಂಭದಲ್ಲಿ ಈ ಬಗೆಯ ಪ್ರಾದೇಶಿಕ ಚರಿತ್ರೆಗಳು ಸಾಹಿತ್ಯ ಪ್ರವೇಶ ಪಡೆದರೂ, 20ನೆಯ ಶತಮಾನದ ಮೂವತ್ತರ ದಶಕದ ವೇಳೆಗೆ ವಿಜಯನಗರವು ಸಾಂಸ್ಕೃತಿಕ ರಾಜಧಾನಿಯೆನ್ನುವ ಸಾಂಸ್ಥಿಕ ರೂಪ ಮೊಳಕೆಯೊಡೆಯಿತು. ಈ ಹಿನ್ನೆಲೆಯಲ್ಲಿ ವಿಜಯನಗರಕ್ಕೆ ಆ ಸಂದರ್ಭದಲ್ಲಿ ಹೆಚ್ಚಿನ ಪ್ರಾಮುಖ್ಯತೆ ದೊರಕಿತು. ಹೀಗಾಗಿ ವಿಜಯನಗರ ಮತ್ತು ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ವಸ್ತುವಾಗಿರಿಸಿಕೊಂಡು ಅನೇಕರು ನಾಟಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಲಭ್ಯವಾಗಿರುವ ಎಂಟು ನಾಟಕಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಿಸಲಾಗಿದೆ.

ಈ ಎಂಟು ನಾಟಕಗಳಲ್ಲಿ ಆರು ನಾಟಕಗಳು ಉತ್ತರ ಕರ್ನಾಟಕ ಭಾಗದ ಲೇಖಕರಿಂದ ರಚಿಸಲ್ಪಟ್ಟರೆ ಉಳಿದೆರಡು ದಕ್ಷಿಣ ಕರ್ನಾಟಕದ ಲೇಖಕರಿಂದ ರಚಿಸಲ್ಪಟ್ಟಿವೆ. ಇವುಗಳಲ್ಲಿ ನಾಗರಿಕ, ಶ್ರೀವಿದ್ಯಾರಣ್ಯ ವಿಜಯ, ತಾಳಿಕೋಟೆ ಈಗಾಗಲೇ ಗಂಭೀರ ನಾಟಕಗಳೆಂದು ಗುರುತಿಸಲ್ಪಟ್ಟ ಉತ್ತಮ ನಾಟಕಗಳ ಸಾಲಿಗೆ ಸೇರುತ್ತವೆ. ವಿಜಯನಗರ ಸಾಮ್ರಾಜ್ಯ, ಸಂಗೀತ ಕರ್ನಾಟಕ ಸಿಂಹಾಸನಾ ನಾಟಕವು, ವರಪ್ರದಾನ, ಯಚ್ಚಮ ನಾಯಕ ಮತ್ತು ವಿಜಯ ಸಾಮ್ರಾಜ್ಯ ನಾಟಕಗಳು ವೃತ್ತಿರಂಗಭೂಮಿಯಲ್ಲಿ ಪ್ರಸಿದ್ಧಿಯಾದ ಜನಪ್ರಿಯ ನಾಟಕಗಳು ಎಂಬ ಖ್ಯಾತಿಯನ್ನು ಪಡೆದುಕೊಂಡಿವೆ.

**ಹರಿಹರರಾಯ ಅಥವಾ ವಿಜಯನಗರ ಸಾಮ್ರಾಜ್ಯ : (1908)**

ವಿಜಯನಗರವನ್ನು ವಸ್ತುವಾಗಿರಿಸಿಕೊಂಡು ಹುಟ್ಟಿದ ಆಧುನಿಕ ನಾಟಕಗಳಲ್ಲಿ (1900ರ ನಂತರ ಬಂದದ್ದು) ಕರ್ನಾಟಕದ ವಿದ್ಯಾವರ್ಧಕ ಸಂಘದವರು ವಾಗ್ಭೂಷಣ ಪತ್ರಿಕೆಯ ಸರಣಿಯಲ್ಲಿ ಹೊರತಂದ "ವಿಜಯನಗರ ಸಾಮ್ರಾಜ್ಯವು" ಎನ್ನುವ ನಾಟಕವೇ ಮೊದಲಿನದು ಎನಿಸುತ್ತದೆ. ಇದನ್ನು ಬೆಳಗಾಂವದ ಆಕ್ಟಿಂಗ್ ಜಾಯಿಂಟ್ ಸಬಜಜ್ಜರಾದ

ವೀರಭದ್ರ ಬಸಪ್ಪಾ ಎನ್ನುವವರು ಸಂಗ್ರಹಿಸಿದರು (ಪ್ರಾಯಶಃ ಲೇಖಕರು ಇವರೇ ಇರಬಹುದು) ಎಂದು ತಿಳಿಸಲಾಗಿದೆ. ಈ ನಾಟಕವು 1908ಕ್ಕಿಂತ ಹಿಂದೆಯೇ ರಚಿತಗೊಂಡಿರಬೇಕು.

ಚರಿತ್ರೆಯಲ್ಲಿ ತಮಗೆ ಅವಶ್ಯವಾದ ಕಾಲಘಟ್ಟಗಳನ್ನು ಆಯ್ಕೆಮಾಡಿಕೊಂಡು ಐತಿಹಾಸಿಕ ನಾಟಕಗಳನ್ನು ಬರೆಯುವ ಸ್ವಾತಂತ್ರ್ಯ ನಾಟಕಕಾರರಿಗಿರುತ್ತದೆ. ಲೇಖಕನೊಬ್ಬ ವಸ್ತುವೊಂದನ್ನು ಆಯ್ಕೆಮಾಡಿಕೊಳ್ಳುವಾಗ ಪ್ರಜ್ಞಾಪೂರ್ವಕವಾಗಿಯೇ ಆಲೋಚಿಸಿರುತ್ತಾನೆ. ವಸ್ತು ಆಯ್ಕೆಯಲ್ಲಿ ಮುಖ್ಯ ಉದ್ದೇಶವೊಂದು ಅಡಗಿರುತ್ತದೆ. ಪ್ರಾಯಶಃ ಸ್ವಾತಂತ್ರ್ಯ ಚಳುವಳಿ, ಕರ್ನಾಟಕದ ಏಕೀಕರಣ, ನಾಡು-ನುಡಿ, (ಭಾಷೆ) ಮುಂತಾದ ಕಾರಣಗಳನ್ನು ಅಭಿವ್ಯಕ್ತಿಸಲು ವಿಜಯನಗರ ವಸ್ತುವೇ ಸೂಕ್ತ ಎನ್ನುವ ಭಾವನೆ ಲೇಖಕರದಾಗಿದೆ. 13-14ನೇ ಶತಮಾನದಲ್ಲಿ ಯವನರ ಭೀತಿಯಿಂದ ಕರ್ನಾಟಕ ಅನುಭವಿಸಿದ ಅತಂತ್ರ ಸ್ಥಿತಿಯನ್ನೇ, ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಕರ್ನಾಟಕವು ಅನುಭವಿಸಿರಬೇಕು. ಇಲ್ಲಿ ನಾಟಕದ ಗಂಭೀರತೆ, ಸಮಯ ಪ್ರಜ್ಞೆಗಳಿಗಿಂತ ಪ್ರಸ್ತುತ ಸಮಾಜದ ಸ್ಥಿತಿ-ಗತಿಗಳನ್ನು ತಿಳಿಸುವ ಉದ್ದೇಶವನ್ನು ನಾಟಕಕಾರರು ಹೊಂದಿದ್ದರಿಂದ ಅವರು ಯಾವುದೇ ಯೋಚನೆ ಮಾಡದೆ ನಾಟಕದಲ್ಲಿ ಪದೇ ಪದೇ ಸ್ವಾತಂತ್ರ್ಯದ ಬಗ್ಗೆ, ಏಕೀಕರಣದ ಬಗ್ಗೆ, ತಾಯಿ ಭುವನೇಶ್ವರಿಯ ಬಗ್ಗೆ ಉದ್ಗಾರಗಳನ್ನು ತೆಗೆಯುವುದನ್ನು ನೋಡಬಹುದು. ಪ್ರಾಯಶಃ ಇಂತಹ ಉದ್ಗಾರಗಳೇ ನಾಟಕದ ಪ್ರತಿಯೊಂದು ಅಂಕದಲ್ಲೂ ಕಂಡುಬರುವುದರಿಂದ ಕೃತಿಯೊಂದು ಉತ್ತಮ ನಾಟಕವಾಗದೇ ಸೋಲಲು ಕಾರಣವೂ ಆಗಿದೆಯೇನೋ ಎನಿಸುತ್ತದೆ.

'ವಿಜಯನಗರ ಸಾಮ್ರಾಜ್ಯವು' ನಾಟಕದಲ್ಲಿ ದುರ್ಬಲನೊಬ್ಬ ಅಧಿಕಾರಕ್ಕೆ ಬಂದರೆ ಏನು ಅನಾಹುತವಾಗಬಲ್ಲದು ಎಂಬುದನ್ನು ನಾಟಕಕಾರರು ಸಮರ್ಥವಾಗಿ ತೋರಿಸಿದ್ದಾರೆ. ದುರ್ಬಲನೂ, ಸ್ತ್ರೀ ಲೋಲುಪನೂ ಆದ ಮುದಿ ಅರಸು ಹರೆಯದ ರಾಣಿಯ ಮಾತಿಗೆ ಕಟ್ಟುಬಿದ್ದು ಸರ್ವನಾಶಕ್ಕೊಳಗಾಗುತ್ತಾನೆ. ಹಾಗೇ ಅವನನ್ನು ನಂಬಿದ ಸಾಮ್ರಾಜ್ಯದ ನಾಶಕ್ಕೂ ಕಾರಣನಾಗುತ್ತಾನೆ. ರಾಜನ ಅಸಹಾಯಕತೆಯ ಪೂರ್ಣ ಲಾಭ ಪಡೆಯುವನು ದೇವರಾಯ(ಮಂತ್ರಿ). ರಾಣಿಯ ಅಣ್ಣನಾದ ದೇವರಾಯ ಅರಸನ ಮಗಳ ಪದ್ಮಿನಿಯನ್ನು ವಿವಾಹವಾಗುವ ಮೂಲಕ ರಾಜ್ಯವನ್ನು ತನ್ನ ಕೈವಶಕ್ಕೆ ತೆಗೆದುಕೊಳ್ಳುವ ದುರಾಲೋಚನೆ ಮಾಡುತ್ತಾನೆ. ಪದ್ಮಿನಿ ತನಗೆ ದೊರೆಯಲಾರಳು ಎಂಬುದು ಖಾತ್ರಿಯಾದ ತಕ್ಷಣ ಇಸ್ಲಾಂ ಅರಸರೊಂದಿಗೆ ಸಂಚು ನಡೆಸಿ ಆನೆಗೊಂದಿ ಸಾಮ್ರಾಜ್ಯ ಪರರ ವಶವಾಗುವಂತೆ ಮಾಡುತ್ತಾನೆ. ಎಂದೂ ಪರರ ವಶವಾಗದ ಹಿಂದೂ ಸ್ತ್ರೀಯರು ಮಾನವಂತರು ಎಂಬುದನ್ನು ಪದ್ಮಿನಿ ಹಾಗೂ ಆಕೆಯ ಸಂಗಡಿಗರು ಅಗ್ನಿ ದೇವನಿಗೆ ಆಹುತಿಯಾಗಿ ಪ್ರಾಣತ್ಯಾಗ ಮಾಡುವ ಮೂಲಕ ಸಾಬೀತು ಪಡಿಸುತ್ತಾರೆ. ಆನೆಗೊಂದಿಯ ನಾಶದೊಂದಿಗೆ ಹರಿಹರ, ಬುಕ್ಕರು ವಿದ್ಯಾರಣ್ಯರ ಸಮಕ್ಷಮದಲ್ಲಿ ಪಂಪಾಪತಿ ನೆಲೆಯಲ್ಲಿ ಹೊಸ ಸಾಮ್ರಾಜ್ಯದ ಹುಟ್ಟಿಗೆ ಅಂಕುರಾರ್ಪಣೆ ಮಾಡುವ ಮೂಲಕ ನಾಟಕ ಮುಕ್ತಾಯಗೊಳ್ಳುತ್ತದೆ.

ಮರಾಠಿ ಪ್ರಭಾವ ವಲಯವಾಗಿದ್ದ ಬೆಳಗಾಂವ ಪ್ರದೇಶದಲ್ಲಿದ್ದ ವೀರಭದ್ರ ಬಸಪ್ಪನವರು ಕನ್ನಡಿಗರ ಅತಂತ್ರ ಸ್ಥಿತಿಯನ್ನು ಮುಂಬೈ ಕರ್ನಾಟಕದಲ್ಲಿ ಸ್ವತಃ ಅನುಭವಿಸಿದವರು. ಕನ್ನಡಿಗರ ಅಧೋಗತಿಗೆ ಕಾರಣೀಭೂತರಾದವರು ವಿದೇಶಿಯರಿಗಿಂತ ನಮ್ಮವರೇ ಆದ ಕುಯುಕ್ತಿಯ ಜನ ಎಂಬುದನ್ನು ಅವರು ಮನಗಂಡಿದ್ದರು. ಹೀಗಾಗಿ ನಾಟಕದಲ್ಲಿ ಕನ್ನಡಿಗರೇ ಆದ ದೇವರಾಯನಂಥವರು ಅನ್ಯರಾದ ಯವನರು ಪ್ರವೇಶಿಸುವಂತೆ ಮಾಡಿದರು. ತಮ್ಮ ಸ್ವಾರ್ಥ ಚಿಂತನೆಯಿಂದಾಗಿ ಕರ್ನಾಟಕ/ಭಾರತವು ಅನ್ಯರ ಪಲಾದುದನ್ನು ಕಂಡ ನಾಟಕಕಾರರು ವಿಜಯನಗರದ ಚಾರಿತ್ರಿಕ ಸಂದರ್ಭವನ್ನು ವಸ್ತುವಾಗಿರಿಸಿಕೊಂಡು ಪ್ರಸ್ತುತ ತಮ್ಮ ಕಾಲದ ನೈಜ ಚಿತ್ರಣವನ್ನೇ ನಾಟಕದ ಮೂಲಕ ರಂಗಭೂಮಿಯ ಮೇಲೆ ತರುವ, ಆ ಮೂಲಕ ಪ್ರೇಕ್ಷಕ(ಕನ್ನಡಿಗ)ರನ್ನು ಎಚ್ಚರಿಸುವ ಕೆಲಸ ಮಾಡಿರುವುದು ಕಂಡು ಬರುತ್ತದೆ.

ನಾಟಕದಲ್ಲಿ ಬಹುಭಾಗವು ವಿಜಯನಗರ ಸ್ಥಾಪನೆಯ ಪೂರ್ವದಲ್ಲಿದ್ದ ಆನೆಗೊಂದಿ ಸಂಸ್ಥಾನ ಹಾಗೂ ಅದರ ಅವನತಿಯ ಚಿತ್ರಣವನ್ನೇ ಕೊಡುತ್ತದೆ. ಸಂಸ್ಥಾನದ ಅರಸರ ಅಳಿಯಂದಿರಾದ ಹರಿಹರ-ಬುಕ್ಕರು ಆನೆಗುಂದಿ ಸಂಸ್ಥಾನದಲ್ಲಿ ಆಶ್ರಯ ಪಡೆದಿದ್ದನ್ನು ತಿಳಿಸುತ್ತದೆ. ಆನೆಗೊಂದಿಯು ಅವನತಿಯ ನಂತರ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹೊಸ ರಾಜ್ಯವನ್ನು ಹರಿಹರ-ಬುಕ್ಕರು ಕಟ್ಟುವರು ಎಂಬುದನ್ನು ನಾಟಕ ಸೂಚಿಸುತ್ತದೆ. ನಾಟಕದಲ್ಲಿ ಹರಿಹರನ ಬಾಯಿಂದ ಕರ್ನಾಟಕದ ಕುರಿತು ಅತೀ ಭಾವುಕ ಎನ್ನಿಸುವ ಮಾತುಗಳು ಹೊರ ಹೊಮ್ಮಿರುವುದನ್ನು ನೋಡಬಹುದು. ಒಂದು ಕಡೆ

> "ಬಾಪುರೆ! ಕರ್ನಾಟಕ ವೀರರೇ ಬಾಪುರೆ! ನಿಮ್ಮ ನಿಃಸೀಮ ಸ್ವಾಮಿ ಭಕ್ತಿಯೂ, ಅದ್ವಿತೀಯ ಬಾಹುಬಲ ಪ್ರತಾಪವೂ, ಅತುಲ ಸ್ವದೇಶ ಪ್ರೇಮವೂ, ಅಪ್ರತಿಮ ಧೈರ್ಯವೂ ಈ ದೇಶದ ಇತಿಹಾಸದಲ್ಲಿ ನಿಮ್ಮ ಹೆಸರುಗಳನ್ನು ಚಿರಸ್ಮರಣೀಯ ಮಾಡಿಬಿಟ್ಟವು." (ವೀರಭದ್ರ ಬಸಪ್ಪಾ, 1908:13).

ಹರಿಹರನು ಯವನರ ವಿರುದ್ಧ ಯುದ್ಧದಲ್ಲಿ ಜಯಗಳಿಸಿದ ಸೈನಿಕರಿಗೆ ಹೇಳುವ ಈ ಮಾತುಗಳು ಅಂದಿನ ಸಂದರ್ಭದ ಸೈನಿಕರ ವೀರತನವನ್ನು, ಆ ಜನರ ದೇಶಪ್ರೇಮವನ್ನು ಕನ್ನಡ ದೇಶಪ್ರೇಮ ಎಂದು ಕೊಂಡಾಡುವ ಮೂಲಕ ಪ್ರಸ್ತುತ ಕನ್ನಡಿಗರ ಸ್ವಾಭಿಮಾನವನ್ನು ಸಹ ಲೇಖಕರು ಬಡಿದೆಬ್ಬಿಸುವ ಪ್ರಯತ್ನ ಮಾಡಿರುವುದನ್ನು ಕಾಣಬಹುದು.

> "ಈ ನಮ್ಮ ಕರ್ನಾಟಕದ ರಾಜ್ಯವನ್ನು ಪೂರ್ಣ ವಿಧ್ವಂಸ ಮಾಡಿದರಲ್ಲ! ಶ್ರೀರಾಮಚಂದ್ರನು ಪ್ರತಿಷ್ಠಾಪಿಸಿದ ಶ್ರೀಶೇತೂರಾಮೇಶ್ವರನ ದೇವಾಲಯದ ಮುಂದೇನೇ ಮಸೀದಿಯನ್ನು ಕಟ್ಟಿದರಲ್ಲ! ಸುರಪುರದೋಪಾದಿಯಲ್ಲಿ ಕಂಗೊಳಿಸುವ ಹಳೇಬೀಡಿನಲ್ಲಿಯ ರಮಣೀಯ ದೇವಾಲಯಗಳನ್ನು ಭ್ರಷ್ಟಮಾಡಿ ಸುಂದರ ಮೂರ್ತಿಗಳನ್ನು ಭಿನ್ನಮಾಡಿದರಲ್ಲ!" (ವೀರಭದ್ರ ಬಸಪ್ಪಾ, 1908:13).

ಅಂದಿನ ದೇವಗಿರಿ, ದ್ವಾರಸಮುದ್ರ, ಹಳೇಬೀಡು ಪ್ರದೇಶಗಳ ಮೇಲೆ ದಾಳಿ ಮಾಡಿ, ಅಲ್ಲಿನ ಸಂಪತ್ತನ್ನು ಕೊಳ್ಳೆಹೊಡೆಯುವುದರ ಜೊತೆಗೆ ಹಿಂದೂ ದೇವಾಲಯಗಳನ್ನು ನಾಶಮಾಡಿ, ಮಸೀದಿಗಳನ್ನು ನಿರ್ಮಾಣ ಮಾಡಿದ್ದಾರೆ. ಎನ್ನುವ ಅಂಶಗಳನ್ನು ಗಮನಿಸಿದರೆ ಯನವರ ದಾಳಿಗೆ ಒಳಗಾದ ಪ್ರದೇಶಗಳೆನ್ನವನ್ನು ಒಟ್ಟಾರೆ ಕರ್ನಾಟಕ ಎಂದು ಗುರುತಿಸುವುದು, ಹಾಳಾದ ದೇವಾಲಯಗಳೆಲ್ಲವೂ ವೈದಿಕ ಧರ್ಮಕ್ಕೆ ಸಂಬಂಧಿಸಿದವು ಎನ್ನುವ ಮಾತುಗಳು, ಭಾಷೆ ಮತ್ತು ಧರ್ಮ(ವೈದಿಕ)ದ ಆಧಾರದ ಮೇಲೆ ಕನ್ನಡಿಗರನ್ನು ಹಾಗೂ ವೈದಿಕರನ್ನು ಒಂದಾಗಿಸಿರುವ ಪ್ರಯತ್ನಗಳು ಕಾಣಸಿಗುತ್ತವೆ.

ಇನ್ನೊಂದು ಕಡೆ ರಾಯಚೂರಿನ ಸುಲ್ತಾನರನ್ನು ಸೋಲಿಸಿದ ಪರಿಯನ್ನು ತಿಳಿಸುವ ಹರಿಹರನ ಮಾತುಗಳನ್ನು ನೋಡಿ.

> "ಯವನ ಸೇನೆಯೆಂದರೆ ಯಾವ ಗಿಡದ ತೊಪ್ಪಲ? ರಾಯಚೂರು ಮುತ್ತಿಗೆಯಲ್ಲಿ ನಮ್ಮ ವೀರರು ತೋರಿಸಿದ ಪರಾಕ್ರಮವನ್ನು ತಾವು ಕಣ್ಣಾರೆ ನೋಡಿದ್ದರೆ ಇಂತಹ ಮಾತುಗಳನ್ನು ಆಡುತ್ತಿದ್ದಿಲ್ಲ. ಆ ಕಾಲದಲ್ಲಿ ಕರ್ನಾಟಕ ವೀರರು ಯವನ ಸೇನೆಯನ್ನು ಹೊಟ್ಟನಂತೆ ಹಾರಿಸಿಬಿಟ್ಟರು" (ವೀರಭದ್ರ ಬಸಪ್ಪಾ, 1908:25).

ಕನ್ನಡ ವೀರರ ಶಕ್ತಿ ಸಾಮರ್ಥ್ಯಗಳನ್ನು ಹೊಗಳುವ, ಯವನರು ಕರ್ನಾಟಕದ ವೀರರಿಗೆ ಶೌರ್ಯದಲ್ಲಿ ಸಮಾನರಲ್ಲ ಎಂಬುದನ್ನು ತಿಳಿಸುವ ಮೂಲಕ ಕನ್ನಡಿಗರನ್ನು ಬಡಿದೆಚ್ಚರಿಸುವ ಕಾರ್ಯವನ್ನು ಹರಿಹರನ ಮಾತುಗಳ ಮೂಲಕ ಮಾಡಿದ್ದಾರೆ. ಇಲ್ಲಿ ಶತ್ರುವು ನಮಗಿಂತ ಅಸಮರ್ಥ ಎಂದು ಹೇಳಿರುವುದು ಮಾನಸಿಕ ಸ್ಥೈರ್ಯವನ್ನು ತುಂಬುವುದಕ್ಕಾಗಿ. ಯಾವಾಗ ಶತ್ರು ಪಕ್ಷವು ನಮಗಿಂತ ದುರ್ಬಲರೂ ಎನ್ನುವುದು ಗೊತ್ತಾದರೆ ಧೈರ್ಯದಿಂದ ಮುನ್ನುಗ್ಗಲು ಸಾಧ್ಯ ಎಂಬುದನ್ನು ಲೇಖಕರು ಸೂಚಿಸಿದ್ದಾರೆ.

1908ರ ಈಚೆಗೆ (ಹೈದರಾಬಾದ್ ನಿಜಾಮನನ್ನು ಹೊರತುಪಡಿಸಿ) ಯಾರೊಬ್ಬ ಮುಸ್ಲಿಂ ದೊರೆಯೂ ಕರ್ನಾಟಕವನ್ನು ಆಳುತ್ತಿದ್ದ ಉದಾಹರಣೆ ಇಲ್ಲವಾದರೂ, ನಾಟಕಕಾರರು ಯವನರನ್ನೇ ಏಕೆ ಒತ್ತಿ, ಒತ್ತಿ ಹೇಳಿದ್ದಾರೆ ಎನ್ನುವ ಪ್ರಶ್ನೆ ಕಾಡುವುದು ಸಹಜ. ಇಲ್ಲಿ ಯವನರು ಅನ್ಯ ದೇಶೀಯರ (ಆಂಗ್ಲರ) ಸಂಕೇತವಾಗಿ ಬಳಸಿಕೊಂಡಿರುವ ಸಾಧ್ಯತೆಯಿದೆ. ಆಂಗ್ಲರ ಆಡಳಿತವನ್ನು ಅನುಭವಿಸುತ್ತಿದ್ದ ಭಾರತದಲ್ಲಿ ಅವರನ್ನು ನೇರವಾಗಿ ದೂಷಣೆ ಮಾಡಿದರೆ, ಲೇಖಕನು ಹಲವು ಸಂಕಷ್ಟಗಳಿಗೆ ಸಿಲುಕಬೇಕಾಗಿತ್ತು. ಹೀಗಾಗಿ ಆಂಗ್ಲರ ಸಂಕೇತವಾಗಿ ಯವನರನ್ನು ಕಾಣಿಸಲಾಗಿದೆ. ನಾಟಕಾರರಿಗೆ ಆ ಕಾಲಕ್ಕೆ ಬೆಳಗಾವಿ ಪ್ರದೇಶದೊಳಗಿನ ಪರಭಾಷಾ ಒತ್ತಡ, ವಿದೇಶಿಯರ ಆಡಳಿತ ವೈಖರಿ, ಗಾಂಧೀಜಿಯವರ ಸ್ವದೇಶಿ ಚಳುವಳಿಗಳು ಪ್ರಭಾವ ಬೀರಿರಬೇಕು. ಸರ್ಕಾರಿ ಹುದ್ದೆಯಲ್ಲಿದ್ದ ನಾಟಕಕಾರರು ಆಂಗ್ಲರ ಆಡಳಿತದ ವಿರುದ್ಧ ಮಾತನಾಡುವುದು ಅಷ್ಟು ಸುಲಭವಾಗಿರಲಿಲ್ಲ. ಬಹುಶಃ ಆ ಕಾರಣಕ್ಕಾಗಿಯೇ ಏನೋ ನಾಟಕದಲ್ಲಿ ರಾಷ್ಟ್ರೀಯತೆಯ ಕುರಿತಾಗಿ ಎಲ್ಲಿಯೂ ನೇರವಾದ ಉದ್ಘೋಷಣಗಳಾಗಲೀ, ಸಂಭಾಷಣೆಗಳಾಗಲಿ ಕಂಡುಬರುವುದಿಲ್ಲ.

ಇತರೆ ನಾಟಕಗಳಲ್ಲಿ ಪದ್ಮಿನಿಯ ವಿವಾಹವು ಹರಿಹರನೊಂದಿಗೆ ಆಗುವ ಪ್ರಸಂಗ ಕಂಡುಬರುತ್ತದೆ. ಆದರೆ ಈ ನಾಟಕದಲ್ಲಿ ಪದ್ಮಿನಿಯು ಪರಕೀಯರ ಕೈಗೆ ಸಿಕ್ಕು ಅವಮಾನಿತಳಾಗುವುದಕ್ಕಿಂತ ಸಾಯುವುದೇ ಲೇಸೆಂದು ಸತಿಗೆ ಹೋಗುತ್ತಾಳೆ. ಅವಳೊಂದಿಗೆ ಅನೇಕ ತರುಣಿಯರು ಬೆಂಕಿಗೆ ಹಾರಿ ಪ್ರಾಣತ್ಯಾಗ ಮಾಡುವ (ಪ್ರಾಚೀನ ಕಾಲದಲ್ಲಿ ಶತ್ರು ದಾಳಿ ನಡೆದಾಗ ಶತ್ರುಗಳ ಕೈಗೆ ತಾವು ಸಿಗಬಾರದೆಂದು ಮಾನಿನಿಯರು ಸಾಮೂಹಿಕವಾಗಿ ಅಗ್ನಿಗೆ ಆಹುತಿಯಾಗುತ್ತಿದ್ದರು) ಮೂಲಕ ಕರ್ನಾಟಕದ ಮಹಿಳೆಯರು ಪ್ರಾಣವಾದರು ಕಳೆದುಕೊಳ್ಳಬಲ್ಲರು, ಮಾನವನ್ನು ಕಳೆದುಕೊಳ್ಳಬಾರದು ಎನ್ನುವಲ್ಲಿ ಯವನರ ಹಿಂಸೆಯ ಸ್ವರೂಪ ಸಜೀವ ದಹನಕ್ಕಿಂತಲೂ ಮಿಗಿಲಾದುದ್ದು ಎನ್ನುವ ಸಂದೇಶವನ್ನು ಪರೋಕ್ಷವಾಗಿ ನಾಟಕದಲ್ಲಿ ಪ್ರಚುರ ಪಡಿಸಲಾಗಿದೆ. ಆ ಮೂಲಕ ಕನ್ನಡಿಗರ ಶೋಚನೀಯ ಸ್ಥಿತಿಯನ್ನು ಹೇಳುತ್ತ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಇಂತಹ ದೃಶ್ಯಗಳು ಸಹಜವಾಗಿಯೇ ಪ್ರೇಕ್ಷಕರ ಮೇಲೆ ಭಾವನಾತ್ಮಕ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ.

ನಾಟಕವು ಕೆಲವು ಸ್ಥಳೀಯರ ಕುಟಿಲತೆ, ದುರಾಶೆಗಳೇ ಕನ್ನಡಿಗರನ್ನು ಪಾರತಂತ್ರಕ್ಕೆ ಒಳಗಾಗಲು ಕಾರಣವಾಗಿದೆ ಎಂಬುದನ್ನು ಸೂಚಿಸುತ್ತದೆ. ದೇವರಾಯನಂತಹ ದುರಾಸೆ ಕಪಟ ವ್ಯಕ್ತಿಯಿಂದಾಗಿ ಆನೆಗೊಂದಿ ಸಂಸ್ಥಾನ ಪರರ ಆಕ್ರಮಣಕ್ಕೆ ದಾರಿ ಮಾಡಿಕೊಡುತ್ತದೆ. ಹರಿಹರ ವಿದ್ಯಾರಣ್ಯರ ಕರ್ತೃತ್ವಶಕ್ತಿ ವಿದೇಶಿಯರನ್ನು ಹತ್ತಿಕ್ಕುವ ಹೊಸ ಸಾಮ್ರಾಜ್ಯವಾಗಿ ರೂಪುಗೊಳ್ಳಲು ಕಾರಣವಾಗುತ್ತದೆ.

ಪದ್ಮಿನಿಯು ಆರ್ಯಧರ್ಮವನ್ನು ಯವನರಿಂದ ಕಾಪಾಡಬೇಕು, ಎಂಬುದನ್ನು ಈಶಸ್ತವನ ಮಾಡುವಾಗ ವ್ಯಕ್ತಪಡಿಸುತ್ತಾಳೆ.

ರಕ್ಷಿಸ್ಯೆ ರಕ್ಷಿಸ್ಯೆ ಶ್ರೀ ವಿರೂಪಾಕ್ಷಾ ॥ ಪ ॥<br>
ರಕ್ಷಿಸ್ಯೆ ವಂದಿಪೆನುತನೆಂದುಪಕ್ಷಾ ॥ ಅ.ಪ ॥<br>
ಸರಸ ಕರ್ನಾಟಕದ ಮಧ್ಯದೊಳು ಮೆರೆಯುತಿಹ<br>
ಪರಮ ಪಂಪಾನಾಮ ಕ್ಷೇತ್ರದಲಿ ॥ ಎಂದು ಪ್ರಾರಂಭವಾಗುವ ಹಾಡು

ರಾವಣಾಧಿಗಳ ಧರ್ಮ ವ್ಯವಹಾರದಿಂದ ಧರಣಿಗೆ ಒದಗಿದ ವಿಪತ್ತನ್ನು ತಿಳಿಸುತ್ತಾ ಕೊನೆಯ ನುಡಿಯಲ್ಲಿ (5 ನುಡಿಗಳಿವೆ).

ಯವನರೀಗಾರ್ಯಧರ್ಮಚ್ಛಲವ ಗೈಯುವರು।<br>
ಯವನಶಾಪದಿನವನಿ ಬೇಯುತಿಹುದು.<br>
ಯವನನಾಶವನು ಗೈದಾರ್ಯಧರ್ಮ ಸ್ಥಾಪ;<br>
ನವಗೈಯ್ವ ಕಾರ್ಯಕ್ಕೆ ನೆರವಾಗು ದೇವಾ ॥ ಶ್ರೀ ॥ ಎಂದು ಹಾಡುತ್ತಾಳೆ.

(ವೀರಭದ್ರ ಬಸಪ್ಪಾ, 1908:11–12).

ಯವನರು ತಮ್ಮದಲ್ಲದ ಆರ್ಯಧರ್ಮ ಮೇಲೆ ಛಲವನ್ನು ಸಾಧಿಸುತ್ತಿರುವರು. ಆರ್ಯಧರ್ಮವೆಂಬುದು ಯವನರ ಶಾಪದಿಂದ ಬೆಂದು ಹೋಗುತ್ತಿದೆ. ಸ್ವಾಮಿ ಯವನ ನಾಶವನ್ನು ಮಾಡಿ ಆರ್ಯಧರ್ಮ ಮರಳಿ ಸ್ಥಾಪಿಸಲು ನೆರವಾಗು ದೇವಾ ಎಂದು ಬೇಡುತ್ತಾಳೆ.

ಹಾಗೆಯೇ ನಾಟಕದಲ್ಲಿ ಕೇವಲ ಆರ್ಯ ಮತ್ತು ಯವನ ಧರ್ಮಗಳ ಮಧ್ಯದ ತಿಕ್ಕಾಟವನ್ನು ಮಾತ್ರ ಚಿತ್ರಿಸದೆ, ಆರ್ಯಧರ್ಮ ಎಂದು ಯಾವುದ್ನು ಕರೆದಿದ್ದಾರೆಯೋ ಅದರ ಅಂತರಾಳದೊಳಗಿನ ದ್ವೈತ-ಅದ್ವೈತ ಮುಂತಾದವುಗಳ ಮಧ್ಯದ ವೈಶಮ್ಯ, ಸಣ್ಣತನಗಳನ್ನು ನಾಟಕದ ಪಾತ್ರಗಳ ಮೂಲಕ ನಾಟಕಕಾರರು ಪರಿಚಯ ಮಾಡಿಕೊಡುತ್ತಾರೆ. ಜೊತೆಗೆ ಬ್ರಾಹ್ಮಣರೊಳಗೆ ಇರುವ ಸ್ವಾರ್ಥ ಬುದ್ಧಿ, ಹಣದ ಕುರಿತಾಗಿ ಅವರಿಗಿರುವ ಅತಿಯಾದ ಆಸೆ, ಬ್ರಾಹ್ಮಣರ ಸಮಯ ಸಾಧಕ ಗುಣಗಳನ್ನು ನಾಟಕದಲ್ಲಿ ಪರಿಚಯ ಮಾಡಿಸಲಾಗಿದೆ.

ಪೂಜೆಯ ತಾಟನ್ನು ಹಿಡಿದು ಜಯಶಂಕರ ಎಂದು ಹೇಳುತ್ತಾ ಚಿದಂಬರ ದೀಕ್ಷಿತರು ಅಂದು ತಮಗಾದ ಸುವರ್ಣಲಾಭದ (ಹಣ) ಕುರಿತು ಲೆಕ್ಕಚಾರ ಹಾಕುತ್ತಾ ಮನೆಯ ಕಡೆ ಸಾಗುತ್ತಿರುತ್ತಾರೆ. ಚಿದಂಬರ ದೀಕ್ಷಿತನನ್ನು ನೋಡಿ ವೇಣುಗೋಪಾಲಾಚಾರಿ ನುಡಿಯುವ ಮಾತುಗಳನ್ನು ನೋಡಿ. "ವೆ.ಗೋ.: (ಸ್ವಗತಂ) ಇದೇನು ಈ ಭ್ರಷ್ಟಮುಂಡೇಮಗ ನಾನು ಸ್ನಾನ ಮಾಡಿ ಹೋಗುವ ಮುಂದೆ ಎದುರುಗೇನೇ ಬಂದನಲ್ಲ. ಇರಲಿ" (ವೀರಭದ್ರ ಬಸಪ್ಪಾ, 1908:11–17). ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುವ ವೇಣುಗೋಪಾಲಚಾರಿ ಮೇಲೆ ಮಾತ್ರ ಸ್ನೇಹದ ಸೋಗನ್ನು ತೋರಿಸುತ್ತಾನೆ. ತನ್ನ ಕಷ್ಟಗಳಿಗೆ ನೆರವಾಗುವಂತೆ ಚಿದಂಬರ ದೀಕ್ಷಿತರಲ್ಲಿ ಮನವಿ ಮಾಡುತ್ತಾನೆ. ರಾಜನ ಮಗಳ ಮದುವೆ ಸಂದರ್ಭದಲ್ಲಿ ಸಹಾಯ ಮಾಡುವುದಾಗಿ ಹೇಳುವ ದೀಕ್ಷಿತನು, ರಾಜ ಪುರೋಹಿತನು ಉಗ್ರ ಶೈವನಾದುದರಿಂದ ವೈಷ್ಣವ ಮತಾವಲಂಬಿ ವೇಣುಗೋಪಾಲಾಚಾರಿಯನ್ನು ವಿರೋದಿಸುವುದು ಸಹಜ. ಹೀಗಾಗಿ ವೈಷ್ಣವ ಲಾಂಛನಗಳನ್ನೆಲ್ಲಾ ಅಳಸಿಹಾಕಿ ಶೈವ ಲಾಂಛನಗಳನ್ನು ಧರಿಸಿದರೆ ಮಾತ್ರ ರಾಜ ಪುರೋಹಿತ ಮಾನ್ಯತೆ ಕೊಡಬಹುದು ಎಂದು ತಿಳಿಸುತ್ತಾನೆ.

"ಚಿದ: ಅವರು ಒಳ್ಳೆ ಉಗ್ರಶೈವರು, ಅದ್ವೈತಾಭಿಮಾನಿಗಳು, ದ್ವೈತರನ್ನು ಕಂಡರೆ ಬಹಳ ಬೆಂಕಿ, ಆಚಾರ್ಯರು ಢಾಂಬಿಕರೂ, ಆಚಾರ ಹೀನರೂ ಎಂದೂ ಅವರ ಅಭಿಪ್ರಾಯವುಂಟು. ಅವರಿಗೆ ಅರಮನೆಯಲ್ಲಿ ಕಾಲೂ ಸಹ ಇಡಗೊಡುವುದಿಲ್ಲ"

(ವೀರಭದ್ರ ಬಸಪ್ಪಾ, 1908:18–19).

ಎಂದು ತಿಳಿಸುತ್ತಾನೆ. ಜೊತೆಗೆ ಅರಮನೆಗೆ ಕಾಲಿಡಬೇಕಾದರೆ ದ್ವೈತ ಮತದ ಲಾಂಛನಗಳನ್ನೆಲ್ಲಾ ತೆಗೆದು ಹಾಕಲು ತಿಳಿಸುತ್ತಾನೆ.

"ಚಿದ: ಅಂದಮೇಲೆ ನಾನು ಹೇಳಿದಂತೆ ನೀವು ನಡೆಯಬೇಕು. ಈ ನಿಮ್ಮ ಗೆಣಸಿನಾಕಾರದ ಘೂಟನಾಮಗಳೂ, ಅಂಗೈಡ್ಡಗಲ ಮುದ್ರೆಗಳೂ, ನಾಲ್ಕು ಬಟ್ಟು

ದಪ್ಪ ಈ ಇದ್ದಲೀಗೆರಿಯೂ, ಈ ಭವ್ಯ ಅಕ್ಷತೆಯೂ, ಇವನ್ನೆಲ್ಲ ತೊಳೆದು ಬಿಡಬೇಕು. ಈ ತುಳಸಿಮಣಿ ಹರದು ಬಿಸಾಡಬೇಕು. ಅಂದರೆ ಏನಾದರೂ ಪುರೋಹಿತರ ಮುಂದೆ ನಿಂದರಲಿಕ್ಕೆ ನಿಮಗೆ ಅಪ್ಪಣೆ ಸಿಕ್ಕೀತು." (ವೀರಭದ್ರ ಬಸಪ್ಪಾ, 1908:19) ಎನ್ನುತ್ತಾನೆ. ದೀಕ್ಷಿತನ ಮಾತಿಗೆ ವೇಣುಗೋಪಾಲಾಚಾರ್ಯ "ಅಬ್ರಾಹ್ಮಣ್ಯಂ! ಅಬ್ರಹ್ಮಣ್ಯ ಇದೇನು...." (ವೀರಭದ್ರ ಬಸಪ್ಪಾ, 1908:19). ಎಂದು ಉದ್ಗಾರ ತೆಗೆಯುತ್ತಾನೆ.

ಇಲ್ಲಿ ಚಿದಂಬರ ದೀಕ್ಷಿತನೂ ಬ್ರಾಹ್ಮಣ, ವೇಣುಗೋಪಾಲಾಚಾರಿಯೂ ಬ್ರಾಹ್ಮಣನೆ. ಆದರೆ ಅವರಿಬ್ಬರ ಮಧ್ಯ ವೈರುಧ್ಯಗಳಿವೆ. ಒಬ್ಬ ಅಬ್ರಾಹ್ಮಣರಾಗಿಯೇ ಗೋಚರಿಸುತ್ತಾರೆ. ಬ್ರಾಹ್ಮಣರ ಮಧ್ಯದಲ್ಲಿರುವ ಅದರಲ್ಲಿಯೂ ಆರ್ಯಧರ್ಮ ಎಂದು ಕರೆಯುವ ಭಾರತೀಯ ಧರ್ಮದಲ್ಲಿರುವ ಲೋಪಗಳನ್ನು ಎತ್ತಿ ತೋರಿಸಿ ನಾಟಕಕಾರರು ಹಿಂದೂ ಧರ್ಮದಲ್ಲಿರುವ ಲೋಪಗಳನ್ನು, ಬ್ರಾಹ್ಮಣದಲ್ಲಿರುವ ಧಾರ್ಮಿಕ ಢಾಂಬಿಕತೆಯನ್ನು ವಿಡಂಬಿಸಿದ್ದಾರೆ. ನಾಟಕ ರಚನೆಕಾರರ ಉದ್ದೇಶವು ನಾಟಕವನ್ನು ರಂಗದ ಮೇಲೆ ಅಭಿನಯಿಸಲು ಯೋಗ್ಯವಾಗಿರಬೇಕೆನ್ನುವುದನ್ನು ನಿರೀಕ್ಷಿಸುತ್ತಾರೆ. ರಂಗದ ಮೇಲೆ ಅಭಿನಯಿಸಲ್ಪಡುವ ನಾಟಕವು ಯಾವುದೇ ಒಂದು ಧರ್ಮದವರಿಗೆ ನೋವನ್ನುಂಟು ಮಾಡಬಾರದು ಎನ್ನುವುದು ಸಾಂದರ್ಭಿಕವಾಗಿ ಹೆಣೆಯಲ್ಪಟ್ಟಿದೆ. ಹಾಗೆಯೇ ಎಲ್ಲಾ ಧರ್ಮದಲ್ಲಿಯೂ ಉತ್ತಮಾಂಶಗಳಿದ್ದರೂ ಅದನ್ನು ಅನುಸರಿಸುವ ಜನರಲ್ಲಿ ಅನೇಕ ಸಮಸ್ಯೆಗಳಿರುತ್ತವೆ. ಹೀಗಾಗಿ ಆ ಸಮಸ್ಯೆಗಳ ಮೂಲಕ ಆ ಧರ್ಮವನ್ನು ದೂಷಿಸುವುದು ಸರಿಯಲ್ಲ. ಎನ್ನುವ ಕಾರಣಕ್ಕಾಗಿಯೇ ನಾಟಕಕಾರರು ವೈದಿಕ ಮತಾನುಯಾಯಿಗಳಲ್ಲಿರುವ ಸಮಸ್ಯೆಗಳನ್ನೂ ಕೂಡ ಇಲ್ಲಿ ಚರ್ಚೆಗೆ ತಂದಿರಬಹುದು.

**ಸಂಗೀತ ಕರ್ನಾಟಕ ಸಿಂಹಾಸನ ನಾಟಕವು ಅಥವಾ ಅಮಾತ್ಯ ಮಾಧವ (1926)**

ಈ ನಾಟಕದ ಕರ್ತೃ ನರಸಿಂಗ ಲಕ್ಷ್ಮಣ ಹೆಗ್ಡೆ. 1926ರಲ್ಲಿ ಈ ನಾಟಕ ರಚನೆಗೊಂಡಿದೆ. ಈ ವೇಳೆಗಾಗಲೇ ರಾಷ್ಟ್ರೀಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳು ಪ್ರಾರಂಭವಾಗಿದ್ದವು. ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋದ ಕನ್ನಡ ಭಾಷಿಕರು ಎದುರಿಸುವ ಅನೇಕ ಸಮಸ್ಯೆಗಳು ಪಾರತಂತ್ರದ ಬದುಕಿನಿಂದ ನಿರ್ಮಾಣವಾದಂತವುಗಳು ಎನ್ನುವ ವಿಚಾರಧಾರೆಗಳು ಪ್ರಚಲಿತವಿದ್ದ ಕಾಲವದು. ಆ ಸಂದರ್ಭದಲ್ಲಿ ಕನ್ನಡಾಭಿಮಾನವನ್ನು ಬೆಳೆಸುವುದರ ಜೊತೆಗೆ ನಮ್ಮನ್ನಾಕ್ರಮಿಸಿದ್ದ ಅನ್ಯರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಅಣಿಗೊಳಿಸುವುದರ ಮೂಲಕ ನಮ್ಮ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಅಗತ್ಯತೆಯನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ನಾಟಕದ ಪ್ರಾರಂಭದಲ್ಲಿ ಸೂತ್ರಧಾರ ಹಾಗೂ ನಟಿಯರು ಬರುತ್ತಾರೆ. ಸೂತ್ರದಾರನು ತನ್ನ ಕಾಲದ ಕರ್ನಾಟಕದ ದುಸ್ಥಿತಿಯನ್ನು, ಪಾರತಂತ್ರ್ಯಕ್ಕೆ ಈಡಾದುದುದನ್ನು ಬಣ್ಣಿಸುತ್ತಾನೆ. ತಮ್ಮ ಸಮಕಾಲೀನ ಸ್ಥಿತಿಯನ್ನು ಪ್ರೇಕ್ಷಕ

ವರ್ಗಕ್ಕೆ ಮನನ ಮಾಡುವುದಕ್ಕಾಗಿಯೇ ಕರ್ನಾಟಕ ಸಿಂಹಾಸನ ನಾಟಕವು ಇಲ್ಲವೇ ಅಮಾತ್ಯ ಮಾಧವ ನಾಟಕವನ್ನು ಪ್ರದರ್ಶಿಸುವುದಾಗಿ ತಿಳಿಸುತ್ತಾನೆ. ನಾಟಕದ ಪ್ರಾರಂಭದಲ್ಲಿಯೇ ನಾಟಕದ ಮೂಲ ಉದ್ದೇಶವನ್ನು ಹಿಂದಿನಿಂದಲೂ ರಚಿತವಾದ ಸಾಹಿತ್ಯವು ಕೇವಲ ಪುರಾಣದ ಬದನೆಕಾಯಿಯಂತಹದ್ದು. ನಮ್ಮ ಚರಿತ್ರೆಯಲ್ಲಿ ಹಲವಾರು ವಿಷಯಗಳಿದ್ದರೂ ಸಹ ನಮ್ಮವರು ಅತ್ತ ಲಕ್ಷವಹಿಸದೆ ಕೇವಲ ಪೌರಾಣಿಕ ಸಂಗತಿಗಳನ್ನೆತ್ತಿಕೊಳ್ಳುತ್ತಾರೆ. ಹಾಗಾಗಿ ಇಲ್ಲಿ ಚಾರಿತ್ರಿಕವಾದ ವಿಷಯವನ್ನು ತೆಗೆದುಕೊಂಡು ಆ ಮೂಲಕ ವಾಸ್ತವದ ದುಸ್ಥಿತಿಯನ್ನು ಎದುರಿಸಲು ಯಾವ ಬಗೆಯಲ್ಲಿ ಸನ್ನದ್ಧರಾಗಬೇಕಾಗಿದೆ ಎನ್ನುವುದು ನಾಟಕಕಾರರು ಸೂತ್ರಧಾರನ ಮೂಲಕ ಹೇಳಿಸುತ್ತಾರೆ.

ನಾಟಕದ ಆರಂಭದಲ್ಲಿ ಸೂತ್ರದಾರನು ನಟಿಗೆ ಹೇಳುವ ಮಾತುಗಳು ಬಹುಮುಖ್ಯವಾಗಿವೆ.

> "ಕೇರೆ ಹಾವು ಓಡುತ್ತದೆಂದು ಎರೆಹುಳುವೂ ಓಡಿದರೆ ಏನು ಪ್ರಯೋಜನ? ಸ್ವತಂತ್ರ ಜನಾಂಗವು ಸುಖಸಂಭ್ರಮದಿಂದ ಮೆರೆಯವುದನ್ನು ನೋಡಿ ಪಾರತಂತ್ರ ಜನಾಂಗವೂ ಅದರ ಅನುಕರಣ ಮಾಡಬೇಕೇ? ಇವೇ ಮೊದಲಾದ ವಿಷಯಗಳನ್ನು ನಮ್ಮ ಗೃಹಿಣಿಗೆ ತಿಳಿಸಿ ಹೇಳಲು ಕೂತು ಇಷ್ಟು ಅವಕಾಶವಾಯಿತು. ಬಹಳ ಬೆಲೆಬಾಳುವ ವಸ್ತ್ರಾಭರಣಗಳಿಂದಲಂಕೃತಳಾಗಿ ನನ್ನ ಸಹಧರ್ಮಿಣಿಯು ಈ ವರೆಗೆ ರಂಗಭೂಮಿಯ ಮೇಲೆ ಬರುವುದಿತ್ತು. ನಮ್ಮೀ ಕರ್ಣಾಟ ನಾಡಿಗೆ ಮಹದಾಪತ್ತೊದಗಿದ ಈ ಕಾಲದಲ್ಲಿ ಸಮಸ್ತ ಕನ್ನಡಿಗರು ಸ್ವದೇಶ ಹಿತಚಿಂತನ ಪ್ರೇರಿತರಾಗಿ ಪೊಳ್ಳಾಡಂಬರಗಳನ್ನು ಚೆಲ್ಲಿಬಿಡಬೇಕೆಂದು ನಾನು ಅವಳಿಗೆ ಹೇಳಿ ಬಂದಿದ್ದೆನು. ಆದಕಾರಣ ಅವಳಿಗೆ ಇಷ್ಟು ತಡವಾಗಿರಬಹುದೇ? ಈ ವರೆಗೆ ಅವಳು ಹಾಕಿಕೊಳ್ಳುತ್ತಿದ್ದ ಬಹುಮೂಲ್ಯ ವಸ್ತ್ರಾಲಂಕಾರಗಳನ್ನು ತೆಗೆದಿಟ್ಟು ಸಾದಾ ಉಡಿಗೆ ತೊಡಿಗೆಗಳನ್ನು ಹಾಕಿಕೊಳ್ಳುತ್ತಿರಬಹುದು."(ನರಸಿಂಗ ಲಕ್ಷ್ಮಣ ಹೆಗಡೆ, 1926:1)

ನಮ್ಮಲ್ಲಿನ ಕಚ್ಚಾ ಸಾಮಗ್ರಿಗಳನ್ನು ಬ್ರಿಟಿಷರು ತಮ್ಮ ನಾಡಿಗೆ ಕೊಂಡೊಯ್ದು, ಸಿದ್ಧ ಮಾದರಿಯ ವಸ್ತುಗಳನ್ನು ತಯಾರಿಸಿ ಅವುಗಳನ್ನು ಭಾರತಕ್ಕೆ ತಂದು ಮಾರಾಟ ಮಾಡುತ್ತಿದ್ದರು. ಇದರಿಂದಾಗಿ ದೇಶೀಯ ವಸ್ತುಗಳ ಮೇಲೆ ಇದು ತುಂಬ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡಿತು. ಆಗ ಭಾರತದಲ್ಲಿ ಸ್ವದೇಶಿ ಚಳುವಳಿ ಆರಂಭವಾಗಿತ್ತು. ಆ ಚಳುವಳಿಯಲ್ಲಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಕರೆ ನೀಡಲಾಗಿತ್ತು. ಅದರ ಪ್ರಭಾವ ನಾಟಕಕಾರರ ಮೇಲಾಗಿ ಸ್ವದೇಶಿ ಚಳುವಳಿಯ ಅಂಶಗಳು ಇಲ್ಲಿ ಕಾಣಿಸಿಕೊಂಡಂತಿವೆ. ನಾವು ನಮ್ಮಲ್ಲಿನ ಮೂಲವನ್ನು ಅರಿಯದೆ ಬರಿ ಬಾಹ್ಯಾಡಂಬರಕ್ಕೆ ಮನಸೋತುದ್ದರ ಪರಿಣಾಮವೇ ಇಂದು ನಮ್ಮನ್ನು ಈ ಇಂತಹ ದುಸ್ಥಿತಿಗೆ ತಂದು ನಿಲ್ಲಿಸಿದೆ. ಅದಕ್ಕಾಗಿ ಈ ಬಾಹ್ಯಾಡಂಬರವನ್ನು ಬಿಸುಟು ಹಾಕಿ ನಮ್ಮ ಅಸ್ಮಿತೆಯನ್ನು ನಾವು

ಕಟ್ಟಿಕೊಳ್ಳಬೇಕಾಗಿದೆ ಎನ್ನುವ ಸಂದೇಶವನ್ನು ಈ ನಾಟಕದ ಮೂಲಕ ನೀಡಿದ್ದಾರೆ. ಹಾಗೆಯೇ ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ, ಅನ್ಯರ ಸಂಸ್ಕೃತಿಯನ್ನು ನಾವು ಅನುಕರಿಸುವುದರಿಂದ ನಮ್ಮ ಸಂಸ್ಕೃತಿಯನ್ನು ನಾವೇ ಅಧಃಪತನಕ್ಕೆ ಕೊಂಡೊಯ್ದುದಂತಾಗುತ್ತದೆ ಎನ್ನುವುದು.

ವಿಜಯನಗರ ಸ್ಥಾಪನೆಯ ಕನಸನ್ನು ಹೊತ್ತು ಮಾಧವನು ಕುರುಬರಾದ ಹಕ್ಕ (ಹರಿಹರ) ಬುಕ್ಕರ ಸಹಾಯದಿಂದ, ಭುವನೇಶ್ವರಿಯ ಅನುಗ್ರಹದಿಂದ 'ಕನ್ನಡಿಗರನ್ನು ಏಕೀಕರಿಸುವ' ಉದ್ದೇಶದಿಂದ ವಿಜಯನಗರ ಸಾಮ್ರಾಜ್ಯವನ್ನು ಹಂಪೆಯಲ್ಲಿ ಸ್ಥಾಪಿಸಿದುದೇ ನಾಟಕದ ವಸ್ತುವಾಗಿದೆ. ನಾಟಕದೊಳಗೆ ಕನ್ನಡಿಗರ ಮಹತ್ವವನ್ನು 2ನೇ ಶತಮಾನದಲ್ಲಿಯೇ ಕನ್ನಡ ಇದ್ದಿತೆಂಬುದನ್ನು ಗ್ರೀಕ್ ನಾಟಕಗಳಲ್ಲಿ ಕನ್ನಡ ಪದಗಳು ದೊರೆಯುತ್ತವೆ ಎಂಬುದನ್ನು ಮಾಧವನ ಮೂಲಕ ನಾಟಕಕಾರನು ತಿಳಿಸುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ನಾಟಕ ರಚನೆಗೊಂಡಿರುವುದರಿಂದ ಲೇಖಕರಿಗೆ ರಾಷ್ಟ್ರದ ಐಕ್ಯತೆ ಹಾಗೂ ರಾಷ್ಟ್ರೀಯತೆ ಮತ್ತು ಭಾಷೆಯ ರಾಷ್ಟ್ರೀಯತೆ ಈ ಎರಡು ಸಮಸ್ಯೆಗಳೂ ಕಾಡಿವೆ. ಅವೆರಡರ ಕುರಿತು ಪಾತ್ರಗಳ ಸಂಭಾಷಣೆಗಳ ಮೂಲಕ ನಾಟಕಕಾರರು ತಮ್ಮ ಅಭಿಪ್ರಾಯ, ಅಭಿಲಾಷೆಗಳನ್ನು ವ್ಯಕ್ತ ಮಾಡಿರುವುದನ್ನು ನೋಡಬಹುದು. ಕನ್ನಡಿಗರಿಗೆ ಸ್ವರಾಜ್ಯವನ್ನು ಸಂಪಾದಿಸಿಕೊಡುವ ಉದ್ದೇಶದಿಂದಲೂ, ಮರಣೋನ್ಮುಖವಾಗಿದ್ದ ಆರ್ಯ ಸಂಸ್ಕೃತಿಯನ್ನು ಪುನರ್ ಸ್ಥಾಪಿಸುವ ಹೇತುವಿನಿಂದಲೂ ವಿದ್ಯಾರಣ್ಯರು ಈ ಸಾಮ್ರಾಜ್ಯವನ್ನು ಕಟ್ಟಿದರು. ಅಂತಹ ಪವಿತ್ರವಾದ ಕಾರ್ಯ ಮಾಡಿದವರ ಮಾರ್ಗದಲ್ಲಿ ನಡೆದರೆ ಇಂದು ನಾಡಿಗೆ ಬೇಕಾಗಿರುವ ಸೇವೆಯನ್ನು ಸಲ್ಲಿಸಲು ನಾವು ಸಮರ್ಥರಾಗಬಲ್ಲೆವು ಎನ್ನುವುದನ್ನು ಇಲ್ಲಿ ಹೇಳಲಾಗಿದೆ.

ಹಿಂದೊಮ್ಮೆ ಕದಂಬ, ಚಾಲುಕ್ಯ, ರಾಷ್ಟ್ರಕೂಟರ ಅವಧಿಯಲ್ಲಿ ಸಂಪದ್ಭರಿತ ನಾಡಾಗಿದ್ದ ಕರ್ನಾಟಕದಲ್ಲಿ ಇಂದು ಪರಕೀಯ ಸಂಸ್ಕೃತಿಯ ಜ್ವಾಲೆಯು ಕಾಡ್ಗಿಚ್ಚಿನಂತೆ ಹಬ್ಬಿದೆ. ಕೊಡುಗೈ ಕನ್ನಡಿಗರು ಬೇಡುಗೈ ಬಡವರಾಗಿದ್ದಾರೆ. ಆತ್ಮ ಶೋಧನಕ್ಕಾಗಿ ಹೆಣಗಾಡುತ್ತಿದ್ದ ಭರತವರ್ಷಿಣಿಯರು ಅನ್ನ ಶೋಧನೆಗಾಗಿ ದಣಿಯಬೇಕಾಗಿದೆ. ಇಂತಹ ಪರಿಸ್ಥಿತಿ ನಿರ್ಮಾಣಗೊಳ್ಳಲು ಅನ್ಯರ ಆಡಳಿತ ವ್ಯವಸ್ಥೆಯೇ ಕಾರಣ ಎಂದರಿತ ನಾಟಕಕಾರರು ಮತ್ತೆ ವೈಭವಯುತವಾದ ನಾಡನ್ನು ಕಟ್ಟಿಕೊಳ್ಳಬೇಕಾದ ಹೊಣೆ ನಮ್ಮದಾಗಿದೆ ಎಂದಿದ್ದಾರೆ.

ಧರ್ಮ ಮತ್ತು ರಾಜ್ಯ ಎರಡೂ ಮುಖ್ಯ ಎಂಬ ವಾದ ಹೆಗಡೆಯವರದು. ಅದಕ್ಕಾಗಿ ವಿದ್ಯಾರಣ್ಯರ ಮೂಲಕ ಅವರು

> "ಕರ್ನಾಟದ ಏಕೀಕರಣ ಮಾಡಿ ಕರ್ನಾಟಕ ಸಿಂಹಾಸನವನ್ನು ಸ್ಥಾಪಿಸಲಿಕ್ಕೆ ಭುವನೇಶ್ವರಿಯು ನನ್ನನ್ನು ಆಜ್ಞಾಪಿಸಿದಳು. ಆದಕಾರಣ ಧರ್ಮ ಕ್ಷೇತ್ರದ ಒಂದು ಮಹದಂಶವಾಗಿರುವ ರಾಜಕಾರಣದ ಕ್ಷೇತ್ರವನ್ನು ನಾನೀಗ ಪ್ರವೇಶಿಸಬೇಕಾಗಿದೆ. ಸಾಯಣಾ, ಧರ್ಮ ಮತ್ತು ರಾಜಕಾರಣಗಳೆರಡೂ ಕೂಡಿ ನಮ್ಮ ಭರತಭೂಮಿಯ ಸಂಸ್ಕೃತಿಯನ್ನುಂಟು ಮಾಡಿದವು. ಧರ್ಮದ ಬೆಂಬಲವಿಲ್ಲದೆ

ರಾಜಕಾರಣದ ರಥವು ನಡೆಯಲಾರದು. ಇವೆರಡೂ ಅನ್ಯೋನ್ಯವಾಗಿಯೂ ಅಭೇದ್ಯವಾಗಿಯೂ ಕೂಡಿಕೊಂಡಿರುವುವು." (ನರಸಿಂಗ ಲಕ್ಷ್ಮಣ ಹೆಗಡೆ, 1926 :16)

ಹೇಳಿಸಿರುವ ಈ ಮಾತುಗಳು ಒಟ್ಟೊಟ್ಟಿಗೆ ಧರ್ಮವನ್ನು ರಕ್ಷಿಸುವುದು; ನಾಡನ್ನು ನಿರ್ಮಾಣ ಮಾಡಿಕೊಳ್ಳುವುದು; ಆ ಮೂಲಕ ದೇಶವನ್ನು ಕಟ್ಟಿಕೊಳ್ಳುವ ಕಾರ್ಯಗಳಾಗಬೇಕೆಂಬುದನ್ನು ಧ್ವನಿಸುತ್ತವೆ. ಮುಂದುವರೆದು ಈ ಹೋರಾಟ ತೀವ್ರಗೊಳ್ಳಲು ಹುದುಗಿ ಹೋದ ಕನ್ನಡಿಗರ ವೈಭವದ ದಿನಗಳನ್ನು ಮೆಲುಕು ಹಾಕುತ್ತಾ ಭವಿಷ್ಯವನ್ನು ನಿರ್ಮಿಸಿಕೊಳ್ಳುವುದರ ಕಡೆಗೆ ಗಮನಹರಿಸುತ್ತಾರೆ.

ಕನ್ನಡ ನಾಡು ಕಲಿಗಳ ಬೀಡು. ಇಲ್ಲಿ ಅಸಾಮಾನ್ಯ ಪರಾಕ್ರಮಿಗಳು, ದೇವದೂತರು ಆಗಿ ಹೋಗಿದ್ದಾರೆ. ಇಂತಹ ನಾಡಿನಲ್ಲಿ ಇಂದು ನಮ್ಮ ಜನ್ಮಧಾತೆ ಪರತಂತ್ರದ ಬದುಕಿನಲ್ಲಿ ನಲುಗಿ ಹೋಗಿದ್ದಾಳೆ. ಅವಳ ಮಕ್ಕಳಾಗಿ ಜನ್ಮವೆತ್ತಿರುವ ನಾವುಗಳು ಮಾಡಬೇಕಾದುದ್ದೇನು? ಎನ್ನುವುದನ್ನು ಮರೆತು ಕೇವಲ ನಮ್ಮ ಸ್ವಾರ್ಥತೆಯ ಮೋಹದಲ್ಲಿ ನಮ್ಮ ನಮ್ಮಲ್ಲಿ ಹಲವು ಭೇದಗಳು ಹುಟ್ಟು ಹಾಕಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ಅವೆಲ್ಲವನ್ನೂ ಮರೆತು ನಾವು ಸ್ವರಾಜ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಬೇಕಾಗಿದೆ.

"ಸ್ವರಾಜ್ಯ ಸ್ಥಾಪನೆಯ ಕಾರ್ಯಕ್ಕೆ ಹೆಗಲುಕೊಟ್ಟಿರುವ ನೀವಿಬ್ಬರು ಕನ್ನಡಿಗರಿಗೆ ಎಲ್ಲ ವಿಧದಿಂದಲೂ ಆದರ್ಶರಾಗಿರುವಲ್ಲಿ, ಈ ವರದಕ್ಷಿಣೆಯಂತಹ ಕ್ಷುದ್ರ ವಿಚಾರಕ್ಕೆ ಹುಕ್ಕನು ಎಡೆಗೊಡುವಂಥವನಲ್ಲ. ನಮ್ಮ ದೇಶಬಾಂಧವರು ಪಾರತಂತ್ರದಿಂದ ಬೆಂದು ಬೆಂಡಾಗಿರುವ ಕಾಲದಲ್ಲಿ, ಅವರ ಮುಂದಾಳುಗಳೇ ವರದಕ್ಷಿಣೆಯಂತಹ ಕುಲಕ್ಷಯಕಾರಕ ಪದ್ಧತಿಗಳನ್ನು ನಿಲ್ಲಿಸಿಬಿಡದಿದ್ದರೆ, ಆ ಜನರ ಮುಂದಿನ ಪಾಡೇನಾಗುವುದೆಂಬುದನ್ನು ನೀನು ವಿಚಾರ ಮಾಡಬೇಕಲ್ಲವೇ? ದೇವಪ್ರಭೋ, ವರದಕ್ಷಿಣೆ ಎಂಬುವ ಈ ರಾಕ್ಷಸೀ ಪದ್ಧತಿಯು ನಮ್ಮ ಬಡ ಹಿಂದೀ ಸಮಾಜವನ್ನು ನಾಮಶೇಷ ಮಾಡುತ್ತಿದೆ... ಆದಕಾರಣ ಕರ್ಣಾಟಸಿಂಹಾಸನದ ಅಧಿಪತಿಯು ವರದಕ್ಷಿಣೆಯನ್ನು ಸ್ವೀಕರಿಸದೆ ಆನೆಗುಂದಿಯ ಅಧಿಪತಿಯ ಕುಮಾರಿಕೆಯನ್ನು ಲಗ್ನಮಾಡಿಕೊಂಡನೆಂಬ ಮಹತ್ವದ ಸಂಗತಿಯು ಮುಂದೆ ಕನ್ನಡಿಗರಿಗೆ ಆದರ್ಶವಾಗಲಿ." (ನರಸಿಂಗ ಲಕ್ಷ್ಮಣ ಹೆಗಡೆ, 1926:94)

ದೇವರಾಯನು ಹರಿಹರನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವಾಗ, ವರನ ಯೋಗ್ಯತೆಗೆ ಅನುಸಾರವಾಗಿ ವರದಕ್ಷಿಣೆ ಕೊಡುವುದು ಸಾಮಾಜಿಕ ಪದ್ಧತಿಯಲ್ಲವೇ, ಎಂದಾಗ ವಿದ್ಯಾರಣ್ಯರು ಈ ಮಾತನ್ನು ಹೇಳುತ್ತಾರೆ.

"ಮುಟ್ಟಿದರೆ ದೋಷವಿಲ್ಲ. ಜಾತ್ಯಾ ನೀವು ಅತಿ ಬಡವರಾಗಿದ್ದ ಕಾರಣ, ಬ್ರಾಹ್ಮಣರಿಗಿರುವ ಅನೂಕೂಲತೆಗಳು ನಿಮಗಿರುವುದಿಲ್ಲ. ದರಿದ್ರಗ್ರಸ್ತರಾದ ನೀವು ಸಿಕ್ಕಿದ್ದನ್ನು ತಿಂದು ಮಲೀನಕಾಯರಾಗಿರುವಿರಿ. ಇದು ನಿಮ್ಮ ದೋಷವಲ್ಲ.

ಮನುವಿನ ಕಾಲದಲ್ಲಿರುತ್ತಿದ್ದ ಬರೆ ನಾಲ್ಕು ಜಾತಿಗಳ ಬದಲಾಗಿ ಈ ಹೊತ್ತು ನಾಲ್ಕು ಸಾವಿರ ಜಾತಿಗಳು ತಲೆದೋರಿವೆ. ಈಗಿನ ಕಾಲದ ಜಾತಿಭೇದವು ಹಿಂದೆ ಯಾವುದೊಂದು ವಿಶಿಷ್ಟ ವೃತ್ತಿಯನ್ನು ಮಾಡುತ್ತಿದ್ದ ಜನರಿಂದ ಪರಂಪರಾಗತವಾಗಿ ಹುಟ್ಟಿರುವುದು. ವೃತ್ತಿಭೇದದಿಂದಲೇ ಜಾತಿ ಭೇದದ ಜನ್ಮವು. ಇಂದಿನಿಂದ ನೀವೆಲ್ಲರೂ ಕರ್ನಾಟ ಭೂಮಾತೆಯ ಪುತ್ರರಾಗಿ ತಿಳಿಯಲ್ಪಟ್ಟು ಉಳಿದ ಉಚ್ಚವರ್ಗದವರಂತೆಯೇ ರಾಷ್ಟ್ರದೊಳಗಿನ ಎಲ್ಲಾ ಹಕ್ಕುಗಳಿಗೆ ಅರ್ಹರಾಗುವಿರಿ. ನಾವು ಸ್ಥಾಪಿಸಲಿಚ್ಛಿಸುವ ಸ್ವರಾಜ್ಯವು ಬಡವರದ್ದಾಗಿದೆ. ಅದರಲ್ಲಿ ದೊಡ್ಡವ, ಬಡವ, ಗಂಡಸು, ಹೆಂಗಸು, ಜಾಣ, ಹೆಡ್ಡ, ಸುಶಿಕ್ಷಿತ, ಅಶಿಕ್ಷಿತ ಎಂಬ ಯಾವುದೇ ಭೇದಭಾವ ಇರಲಿಕ್ಕಿಲ್ಲ." (ನರಸಿಂಗ ಲಕ್ಷ್ಮಣ ಹೆಗಡೆ, 1926:94)

19ನೆಯ ಶತಮಾನದಲ್ಲಿ ಹುಟ್ಟಿಕೊಂಡ ಸುಧಾರಣಾ ಚಳುವಳಿಯ ಬಳುವಾಳಿಯಾಗಿ ಬಂದ ಜಾತಿ ಪದ್ಧತಿಯ ನಿರ್ಮೂಲನೆ, ವರದಕ್ಷಿಣೆ, ಲಿಂಗ ಸಮಾನತೆ ಮುಂತಾದವುಗಳನ್ನು ಸಾಮಾಜಿಕ ಸಮಸ್ಯೆಗಳು ವೈದಿಕ ಧರ್ಮದಲ್ಲಿರುವ ನ್ಯೂನ್ಯತೆಗಳೆಂದು ಪರಿಗಣಿಸಿತ್ತು. ಹೀಗಾಗಿ ಜನಸಮುದಾಯಗಳಿಗೆ ವೈದಿಕ ಧರ್ಮದ ಮೇಲೆ ಅಭಿಮಾನ ಕ್ಷೀಣಿಸಬಹುದೆಂಬ ಅನುಮಾನವಿದ್ದಂತಿದೆ. ಅದಕ್ಕಾಗಿ ಲೇಖಕರು ವಿಜಯನಗರದ ಕಾಲಕ್ಕಾಗಲೇ ಇಂತಹ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನಗಳು ನಡೆದಿದ್ದವು ಎನ್ನುವಂತೆ ಚಿತ್ರಿಸಿದ್ದಾರೆ. ಆ ಮೂಲಕ ವೈದಿಕ ಪರಂಪರೆಯ ಮತ್ತು ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ಆದರ್ಶವಾದದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆಂಬುದಕ್ಕೆ ಈ ಮೇಲಿನ ಮಾತುಗಳೇ ನಿದರ್ಶನವಾಗಿ ನಿಲ್ಲುತ್ತವೆ.

ವಿದ್ಯಾರಣ್ಯರ ತಪಸ್ಸಿನ ಬಲದಿಂದ ಮತ್ತು ಭುವನೇಶ್ವರಿಯ ಅನುಗ್ರಹದ ಮೇರೆಗೆ ವಿಜಯನಗರ ಸ್ಥಾಪಿತವಾಯಿತು. ಇದೊಂದು ಆದರ್ಶ ಸಾಮ್ರಾಜ್ಯ ಎನಿಸಿಕೊಳ್ಳಬೇಕಾದರೆ ಅದರ ಕಾರ್ಯ ವೈಖರಿಗಳು ಹೇಗಿರಬೇಕೆಂಬುದನ್ನು ಕುರಿತು ವಿದ್ಯಾರಣ್ಯರು ಹರಿಹರನಿಗೆ ಬೋಧಿಸುವ ಮಾತುಗಳು ಬಹುಮುಖ್ಯವಾದವುಗಳು. ಆಡಳಿತ ಭಾಷೆಯು ಕನ್ನಡವಾಗಬೇಕು. ಈ ಹಿಂದೆ ಅರಸರ ಪ್ರೋತ್ಸಾಹದಿಂದ ಕನ್ನಡವು ಉನ್ನತ ಸ್ಥಾನವನ್ನು ಹೊಂದಿತ್ತು. ಅನ್ಯರ ದಾಳಿಯಿಂದಾಗಿ ಕನ್ನಡ ಸಾಮ್ರಾಜ್ಯಗಳು(ಕದಂಬ, ರಾಷ್ಟ್ರಕೂಟ, ಚಾಲುಕ್ಯ-ಇತ್ಯಾದಿ) ಅವನತಿ ಹೊಂದಿದಾಗ ರಾಜಾಶ್ರಯ ಕಳೆದುಕೊಂಡಿತು. ಅದರೊಂದಿಗೆ ಕನ್ನಡ ಮಾತನಾಡುವ ಜನರ ಸಂಸ್ಕೃತಿಯು ನಾಶವಾಯಿತು. ಆದುದರಿಂದ ಕಳೆದು ಹೋದ ಕನ್ನಡ ಭಾಷೆಯ ವೈಭವವನ್ನು ಮರುಕಳಿಸುವಂತೆ ಮಾಡುವುದಕ್ಕಾಗಿ ಕವಿ ಕಲಾವಿದರುಗಳಿಗೆ ಪ್ರೋತ್ಸಾಹ ಕೊಡಬೇಕು. ಅಲ್ಲದೆ ಕನ್ನಡ ಭಾಷೆಗಾಗಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪಿತವಾಗಬೇಕು. ಬೃಹತ್ತಾದ ಮಂದಿರಗಳನ್ನು, ಗುರುಮಠಗಳನ್ನು ಕಟ್ಟಿಸಬೇಕು. ಹಾಗೆಯೇ ಯವನರ ದಾಳಿಯಿಂದ ಭಗ್ನಗೊಂಡಿರುವ ಕೋಟೆ ಕೊತ್ತಲುಗಳನ್ನು, ಗುಡಿ ಗುಂಡಾರಗಳನ್ನು ಜೀರ್ಣೋದ್ಧಾರ

ಮಾಡಬೇಕು. ಆ ಮೂಲಕ ಈ ಸಾಮ್ರಾಜ್ಯವು ಕನ್ನಡಿಗರ ನೆಮ್ಮದಿಯ ನೆಲೆಯಾಗುವಂತೆ ಶ್ರಮಿಸಬೇಕು. ಹಾಗೆಯೆ

> "ಶ್ರೀಮಂತರಿಗೆ ಹಣವೂ, ವಿದ್ಯಾವಂತರಿಗೆ ವಿದ್ಯೆಯೂ ನೆರವಾಗುತ್ತದೆ. ಆದರೆ ದರಿದ್ರರೂ ಅಶಿಕ್ಷಿತರೂ ಆದ ಬಡಬಗ್ಗರಿಗೆ ಅರಸನಲ್ಲದೆ ಬೇರೆ ಯಾರು ಸಹಾಯ ಮಾಡುವರು? ಆದಕಾರಣ ಬಡಬಗ್ಗರ ಮಕ್ಕಳಿಗೆ ಆಸ್ಥಾನದ ಹಣದಿಂದ ಶಿಕ್ಷಣವು ದೊರೆಯಬೇಕು. ಸಾವಿರಾರು ರೋಗಗಳಿಂದ ನರಳುವ ಈ ಲಕ್ಷಾವಧಿ ಬಡಕುಟುಂಬಗಳಿಗೆ ಧರ್ಮಾರ್ಥ ಔಷಧೋಪಚಾರವು ದೊರೆಯಬೇಕು. ಮತ್ತು ಉದರನಿರ್ವಾಹದ ಸಾಧನಗಳಿಲ್ಲದಂಥವರಿಗೆ ಆ ಸಾಧನಗಳು ಒದಗಿಸಿಕೊಡಲ್ಪಡಬೇಕು. ಇಷ್ಟೆಲ್ಲ ನಾವು ಮಾಡಿದರೆ ನಮ್ಮೀ ಕರ್ಣಾಟ ರಾಜ್ಯವು ಸಮಸ್ತ ಭಾವೀ ರಾಜ್ಯಗಳಿಗೆ ಆದರ್ಶವಾಗುವುದು." (ನರಸಿಂಗ ಲಕ್ಷ್ಮಣ ಹೆಗಡೆ, 1926: 105)

ಈ ಮಾತುಗಳು ಗಮನಿಸಿದಾಗ ವಿಜಯನಗರ ಸಾಮ್ರಾಜ್ಯವು ಜನಸಮುದಾಯಕ್ಕೆ ಸಂಬಂಧಿಸಿದ ಅನೇಕ ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದ ಸಾಮ್ರಾಜ್ಯ ಎಂದು ಅದನ್ನು ಆದರ್ಶ ಸಾಮ್ರಾಜ್ಯ ಎಂದು ಪ್ರತಿನಿಧಿಸಲಾಗಿದೆ. ನಾಟಕಕಾರರು ಅನ್ಯರ ಆಡಳಿತದಿಂದಾಗಿ ನಮ್ಮ ಜನರ ಜೀವನ ಸ್ಥಿತಿ ಅಧೋಗತಿಗಿಳಿದಿದೆ. ಭಾಷಿಕ ಆಧಾರದ ಮೇಲೆ ನಾವೆಲ್ಲರೂ ಒಗ್ಗಟ್ಟಾಗಿ ನಮ್ಮದೇ ಆದ ಆದರ್ಶ ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳುವುದರಿಂದ ಮತ್ತೊಮ್ಮೆ ವಿಜಯನಗರದಂತಹ ವೈಭವವನ್ನು ಕಾಣಲು ಸಾಧ್ಯ ಎನ್ನುವುದನ್ನು ಈ ಮೇಲಿನ ಮಾತುಗಳು ಪರ್ಯಾಯವಾಗಿ ಧ್ವನಿಸುತ್ತವೆ.

ನಾಟಕದಲ್ಲಿ ಬ್ರಾಹ್ಮಣ ಮತ್ತು ಅಂತ್ಯಜರ ಪ್ರಶ್ನೆ ಒಂದು. ಪ್ರಾಯಶಃ ಅಂತ್ಯಜರು ಬ್ರಾಹ್ಮಣರನ್ನು ದ್ವೇಷಿಸುವ ಕಾರಣವಿಲ್ಲ. ಅವರ ಉದ್ಧಾರಕ್ಕಾಗಿಯೇ ಬ್ರಾಹ್ಮಣರು ಎಷ್ಟೆಲ್ಲಾ ಹೋರಾಟ ಮಾಡುತ್ತಿದ್ದಿದ್ದಾರೆ ಎಂಬುದನ್ನು ತಿಳಿಸುವುದೇ ನಾಟಕಕಾರನ ಉದ್ದೇಶವಾಗಿರಬೇಕು. ಸ್ವತಃ ಬ್ರಾಹ್ಮಣರಾದ ನಾಟಕಕಾರರು ತಮ್ಮ ಮನಸ್ಸಿನಲ್ಲಿರುವ ಎಲ್ಲಾ ಅಭಿಲಾಷೆ, ಗೊಂದಲಗಳನ್ನು ನಾಟಕದ ಮೂಲಕ ಅಭಿವ್ಯಕ್ತಿಸಲು ಪ್ರಯತ್ನಿಸಿರುವುದನ್ನು ನೋಡಬಹುದು. ನಾಟಕಕಾರರಿಗೆ ನಾಟಕದ ವಸ್ತು ಮತ್ತು ಅದು ನಡೆಯುವ ಕಾಲದ ಪ್ರಜ್ಞೆ (ಕಾಲ-ದೇಶಗಳ ಪ್ರಜ್ಞೆ) ಇರದೇ ಇರುವುದರಿಂದ ನಾಟಕದ ಗಂಭೀರತ್ವದ ಕಡೆಗೆ ಅವರು ಹೆಚ್ಚು ಲಕ್ಷ್ಯ ವಹಿಸಿಲ್ಲವೆನಿಸುತ್ತದೆ. ನಾಟಕವು ಕಲಾಕೃತಿಯಾಗಿ ಮಾಡುವುದಕ್ಕಿಂತ ಅವರ ಭಾವನೆಗಳನ್ನು ಹೊರಹಾಕುವ ಕ್ರಿಯೆಗೆ ಸೀಮಿತವಾಗಿರುವುದರಿಂದ ನಾಟಕವು ಕಲಾಕೃತಿಯಾಗುವಲ್ಲಿ ಅಷ್ಟೇನೂ ಯಶಸ್ಸು ಕಾಣದೇ ಹೋಗಿದೆ ಏನೋ ಎನಿಸುತ್ತದೆ. ಏಕೆಂದರೆ ದೇವಿಯ ಅನುಗ್ರಹದಂತೆ ಸುವರ್ಣ ವೃಷ್ಟಿಯಾದ ನಂತರ ಹೊನ್ನಿನ ಗಂಟನ್ನು ತೆಗೆದುಕೊಂಡು ಬಂದ ಮಾಚಯ್ಯನೊಂದಿಗೆ ನಡೆಯುವ ಸಂಭಾಷಣೆಯನ್ನು ಗಮನಿಸಬಹುದು.

ಚಿತ್ರಣವನ್ನೇ ಪ್ರಧಾನವಾಗಿ ಹೊಂದಿದ್ದು, ಓದುಗರ ಹಾಗೂ ಪ್ರೇಕ್ಷಕರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

"ಐತಿಹಾಸಿಕ ನಾಟಕಗಳಲ್ಲಿ ಅನಿವಾರ್ಯವಾಗಿ ಬರುವ ಹಿಂದೂ-ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರ ಕಲಹಗಳ ಬೆಳವಣಿಗೆಯಿಂದ ಕಥಾವಸ್ತುವಿನ ಸತ್ವವನ್ನು ಕೆಡಿಸದೆ ಮಹತ್ಫಲಗಳ ಸಾಧಕರಾದ ಮಹಾಪುರುಷರ ಜೀವನದ ಮಹದ್ವಿಚಾರಗಳನ್ನೇ ಇಲ್ಲಿ ಜನಮನದ ಮುಂದಿಟ್ಟದ್ದಾರೆ. ಕನ್ನಡಿಗರನ್ನು ಕಾರ್ಯೋನ್ಮುಖರನ್ನಾಗಿಯೂ-ಸ್ವದೇಶಿ-ಸ್ವಜನ ಪ್ರೇಮಿಗಳನ್ನಾಗಿಯೂ ಮಾಡಲು ನಾಡಿನ ಅಮೋಘವಾದ ಇತಿಹಾಸದೊಳಗಿನ ಇಂತಹ ಸ್ಫೂರ್ತಿದಾಹಕ ಅಂಶಗಳಿಗಿಂತ ಹೆಚ್ಚೇನು ಬೇಕು?" ಎಂದು ಅಭಿಪ್ರಾಯ ಪಡುತ್ತಾರೆ.

(ಉದ್ಧೃತ:ಸುರೇಶ ಪಾಟೀಲ: 1998:117-118)

ಹರಿಹರ ಬುಕ್ಕರ ಕ್ಷಾತ್ರ ತೇಜಸ್ಸಿನಿಂದ ವಿದ್ಯಾರಣ್ಯರ ತಪೋ ಬಲದಿಂದ ಉದಯವಾದ ವಿಜಯನಗರ ಸಾಮ್ರಾಜ್ಯದ ಸಿಂಹಾಸವನ್ನು ಕನ್ನಡಿಗರ ಸಿಂಹಾಸನವೆಂದು, ವಿದ್ಯಾರಣ್ಯರನ್ನು ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರೆಂದು ಪರಿಗ್ರಹಿಸಲಾಗಿದೆ. ಆ ಸಿಂಹಾಸನವನ್ನು ಕ್ಷತ್ರಿಯರ ಹೊರತು ಅನ್ಯ ಜಾತಿಯವನೊಬ್ಬನು ಅಲಂಕರಿಸುವುದು ಆ ಸಿಂಹಾಸನ ಪವಿತ್ರತೆಯನ್ನು ಹಾಳುಮಾಡಿದಂತೆ ಎನ್ನುವ ವಿಚಾರಗಳು ಈ ನಾಟಕದಲ್ಲಿ ವ್ಯಕ್ತವಾಗುತ್ತವೆ. ಕ್ಷತ್ರಿಯರಲ್ಲದೆ ಬೇರೊಬ್ಬನು ಆ ಸಿಂಹಾಸನವನ್ನು ಅಲಂಕರಿಸಿರುವುದರ ವಿರುದ್ಧ ಹೋರಾಡುವ ಯಚ್ಚಮ ನಾಯಕನು ಇಲ್ಲಿ ನಿಷ್ಠಾವಂತ ರಾಜಸೇವಕನಾಗಿ. ಉದಾತ್ತ ನಾಯಕನಾಗಿ ಕಂಡು ಬರುತ್ತಾನೆ. ಈ ಅಂಶಗಳನ್ನು ಗಮನಿಸಿದಾಗ ವೈದಿಕ ಪರಂಪರೆಯನ್ನು ಮತ್ತು ಆನುವಂಶೀಯ ವ್ಯವಸ್ಥೆಯನ್ನು ಮುಂದುವರೆಸುವಂತಹ ಊಳಿಗಮಾನ್ಯ ವ್ಯವಸ್ಥೆಯನ್ನೇ ಪ್ರೋತ್ಸಾಹಿಸಿದಂತಿದೆ. ಪ್ರಜಾಪ್ರಭುತ್ವದ ನೆಲೆಯಲ್ಲಿ ನಿಂತು ನೋಡಿದಾಗ ಇಂತಹ ವಿಚಾರಗಳು ವಿರುದ್ಧ ದಿಕ್ಕಿನಲ್ಲಿ ನಿಲ್ಲುತ್ತವೆ. ಆದರೆ ಈ ನಾಟಕದಲ್ಲಿನ ಎಚ್ಚಮನಾಯಕ ಪಾತ್ರವನ್ನು ಮಾತ್ರ ಹೋರಾಟಕ್ಕೆ ಪ್ರೇರಣೆಯನ್ನಾಗಿ ಅಷ್ಟೇ ಸ್ವೀಕರಿಸಲು ಯೋಗ್ಯವಾಗಿದೆ. ಉಳಿದಂತೆ ನಾಟಕದ ವಿಚಾರ ಹೋರಾಟಕ್ಕೆ ಅಷ್ಟೇನು ಪೂರಕವಾಗಿಲ್ಲವೆಂದೇ ಹೇಳಬಹುದು.

ಈ ನಾಟಕದಲ್ಲಿನ ಇನ್ನೊಂದು ಮುಖ್ಯ ಅಂಶವೆಂದರೆ ವೆಂಕಟಪತಿರಾಯರ ಮರಣದ ನಂತರ ಅವನಿಗೆ ಮಕ್ಕಳಿದ್ದರಿಂದ ತನ್ನ ಸಹೋದರನ ಮಗನಾದ ಶ್ರೀರಂಗರಾಯನು ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಬೇಕಿತ್ತು. ಆದರೆ ಅಧಿಕಾರದ ವ್ಯಾಮೋಹದಿಂದ ಜಗರಾಯನು ನಿರ್ಮಿಸಿದ ಕಾರಸ್ಥಾನಕ್ಕೆ ಬಲಿಯಾಗಿ ಶ್ರೀರಂಗರಾಯ ಮತ್ತು ಅವನ ಕುಟುಂಬವು ಜೀವಿತದ ಕೊನೆಯ ವರೆಗೂ ಸೆರೆಮನೆಯಲ್ಲಿಯೇ ಕಾಲ ನೂಕಬೇಕಾಗುತ್ತದೆ. ಅಷ್ಟೇ ಅಲ್ಲದೆ ಕೊನೆಗೊಂದು ದಿನ ಇವರನ್ನು ಮುಗಿಸದ ಹೊರತು ತನಗೆ ಉಳಿಗಾಲವಿಲ್ಲವೆಂದರಿತ ಜಗರಾಯನು ರಾಜ್ಯದ್ರೋಹದ ಆರೋಪದ ಮೇಲೆ ಶ್ರೀರಂಗರಾಯ ಮತ್ತು ಅವನ ಸಹಚರರನ್ನು ಶೂಲಕ್ಕೇರಿಸುತ್ತಾನೆ.

"ಲಕ್ಷ್ಮ- ಮಹಾಸ್ವಾಮಿ ಅದು ಸಾಲಾಗಿ ಶೂಲಕ್ಕೇರಿಸಲ್ಪಟ್ಟ ಮಾನವೀ ದೇಹಗಳು!
ಅಬ್ಬಾ!
ಒಂದೇ ಬಾರಿಗೆ ಎಷ್ಟು ಜನಗಳಿಗೆ ನೇಣು ಹಾಕಿದ್ದಾರೆ

ಗುರು- ನಯಾಕಾ, ಅವರಾರೆಂದು ತಿಳಿದುಕೊಂಡಿ?

ಲಕ್ಷ್ಮ- ಬುದ್ದೀ, ಅದು ನನಗೆ ಹೇಗೆ ಗೊತ್ತಾಗಬೇಕು, ಸಂಧ್ಯಾಸಮಯವಾಗಿದೆ
ಹೇಳಿ
ಬುದ್ದೀ? ಅವಾರ ಹೆಣಗಳು?

ಗುರು- ಹೇಳಬೇಕೆಂದರೆ ನಾಲಿಗೆಯು ಒಳನುಗ್ಗುತ್ತಿರುವುದು. ಅಯ್ಯೋ ಕಂಠವು
ಬಿಗಿಯಿತು ತಲೆಯು ಜಡವಾಯಿತು ಸಾಧ್ಯವಿಲ್ಲಾ ನೀನೇ ಹತ್ತಿರಕ್ಕೆ
ಹೋಗಿ ನೋಡಿಕೋ.(ಕುಳಿತು ಬಿಡುವನು)

ಲಕ್ಷ್ಮ- ಏನು ಗೊತ್ತಾಗದು. ಈ ದೇಹಗಳು ರಾಜುರುಷರವಾಗಿವೆ. ಸ್ವಾಮೀ,
ದಯಮಾಡಿ ಬೇಗನೇ ಹೇಳಿ ಇದೇನು?

ಗುರು- ನಾಯಕಾ, ಗಜದೇವ ಬಾಯಮ್ಮರಿಂದ ಕೊಲ್ಲಿಸಲ್ಪಟ್ಟ ಅವು ಬಳಗ
ಸಮೇತನಾದ ಶ್ರೀರಂಗರಾಯನ ದೇಹವು." (ಸದಾಶಿವರಾಯ ಗರುಡ, 1929:86–87) ಮೇಲಿನ ಅಂಶಗಳನ್ನು ಅವಲೋಕಿಸಿದಾಗ ರಾಜ್ಯಾಡಳಿತದ ಆಸೆಯಿಂದ ಸ್ವಧರ್ಮೀಯರೂ ಕೂಡ ಬಂಧು ಬಳಗವೆನ್ನದೆ ಕೊಲೆ ಸುಲಿಗೆಯಂಥ ವಿಕೃತ ಕಾರ್ಯಗಳನ್ನೆಸಗುವ ಸನ್ನಿವೇಶಗಳು ಮನಕರಗುವಂತೆ ಚಿತ್ರಿತವಾಗಿವೆ.

**ತಾಳಿಕೋಟೆ : (1929)**

1919ರ ಸುಮಾರಿಗೆ ಬರೆಯಲ್ಪಟ್ಟ ಮಾಸ್ತಿಯವರ ತಾಳಿಕೋಟೆ ನಾಟಕವು ಅಮೇಚೂರು ನಾಟಕ ಮಂಡಳಿಯ ಸ್ಪರ್ಧೆಗಾಗಿ ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ. ನಂತರ ಆರು ವರ್ಷಗಳ ತರುವಾಯ ದತ್ತಾತ್ರೇಯ ಕೃಷ್ಣ ಭಾರದ್ವಾಜರು ತಮ್ಮ 'ರಂಗಭೂಮಿ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಪ್ರಾಯಶಃ ಮಾಸ್ತಿಯವರು ಸಣ್ಣ ಕಥೆಗಳನ್ನು ಬರೆಯಲು ಪ್ರಾರಂಭಿಸಿದ ಕಾಲ ಇದಾಗಿತ್ತು. ಮಾಸ್ತಿಯವರ ಸಾಹಿತ್ಯ ಕೃಷಿಯ ಪ್ರಾರಂಭ ಕಾಲದಲ್ಲಿ ಬರೆದ ನಾಟಕವಾಗಿದೆ. ಈ ನಾಟಕದಲ್ಲಿಯೂ ಕಥೆಗಾರ ಮಾಸ್ತಿಯವರೇ ಕಂಡುಬರುತ್ತಾರೆ. ನಾಟಕದ ವಸ್ತು ವಿಜಯನಗರ ಸಾಮ್ರಾಜ್ಯದ ನಾಶವನ್ನು ತಿಳಿಸುವುದು. ಯೌವ್ವನದ ಭರದಲ್ಲಿ ಅಳಿಯ ರಾಮರಾಯ ಮಾಡಿದ ಒಂದು ತಪ್ಪು ಇಡೀ ಸಾಮ್ರಾಜ್ಯವನ್ನೇ ನಾಶದ ಅಂಚಿಗೆ ಒಯ್ಯುತ್ತದೆ. ನಾಟಕದಲ್ಲಿ ಹಿಂದೂ-ಮುಸ್ಲಿಂ ದ್ವೇಷಕ್ಕಿಂತ ಒಂದು ಹೆಣ್ಣಿಗಾಗಿ ನಡೆಸುವ ವೈಯಕ್ತಿಕ ದ್ವೇಷವೇ ಮುಖ್ಯವಾಗುತ್ತದೆ. ಮಾನವೀಯತೆ, ಮಾತೃ ಹೃದಯಗಳ ದರ್ಶನವನ್ನು ನಾಟಕದಲ್ಲಿ ಕಾಣುತ್ತೇವೆ. ನಾಟಕದಲ್ಲಿ ಎಲ್ಲಿಯೂ, ಸ್ವಾತಂತ್ರ್ಯ, ಕನ್ನಡನಾಡು, ನುಡಿ, ಭಾಷಾ

ಸಮಸ್ಯೆ, ಯಾವೊಂದರ ಪ್ರಸ್ತಾಪವೂ ಇಲ್ಲ. ಸನ್ನಿವೇಶಕ್ಕೆ ಎಷ್ಟು ಉಚಿತವೋ ಅಷ್ಟೇ ಸಂಭಾಷಣೆ ಮಾತ್ರ ಉಂಟು. ಮನುಷ್ಯನ ಅಸೂಯೆ, ದ್ವೇಷಗಳು ಒಂದು ನಾಡನ್ನೇ ಹೇಗೆ ನಾಶಕ್ಕೆ ಒಯ್ದು ಬಿಡಬಲ್ಲದು ಎಂಬುದನ್ನು ನಾಟಕ ತುಂಬಾ ಮಾರ್ಮಿಕವಾಗಿ ಪ್ರಕಟಿಸುತ್ತದೆ. ಇಲ್ಲಿಯ ಪ್ರತಿಯೊಂದು ಕ್ರಿಯೆಯೂ ದೈವ ನಿರ್ಣಯದಂತೆ ನಡೆಯುತ್ತದೆ. ಮಾನವ ಇಲ್ಲಿ ಅಸಾಹಾಯಕ ಪಾತ್ರ ಮಾತ್ರ ಎಂಬುದು ನಾಟಕಕಾರನ ನಂಬಿಕೆ, ಅದನ್ನೇ ತನ್ನ ಸೃಷ್ಟಿಯ ನಾಟಕದಲ್ಲಿಯೂ ಪ್ರಕಟಿಸಿದ್ದಾನೆ.

ಮಾಸ್ತಿಯವರ ತಾಳಿಕೋಟೆ ನಾಟಕದಲ್ಲಿ ಪಾತ್ರಗಳು ಎಲ್ಲಿಯೂ ಸನ್ನಿವೇಶ ಮೀರಿದ ಮಾತುಗಳನ್ನು ಆಡುವುದಿಲ್ಲ. ಅವಶ್ಯಕತೆಗೆ ತಕ್ಕಷ್ಟೇ ಮಾತು, ಧರ್ಮ, ಕುರಿತು ಮಾತು ಬರುವುದಾದರೂ ಎಲ್ಲಿಯೂ ಹಿಂದುತ್ವದ ಮಹತ್ವವನ್ನು, ಅದು ಮೇಲು ಇದು ಕೀಳು ಎನ್ನುವ ಭಾವನೆಯನ್ನು ವ್ಯಕ್ತಪಡಿಸುವುದಿಲ್ಲ. ಹಿಂದೂಗಳಿಗೆ ಹಿಂದೂ ಧರ್ಮ ಹೇಗೆ ಪವಿತ್ರವಾದುದೋ ಇಸ್ಲಾಮಿಯರಿಗೆ ಇಸ್ಲಾಂ ಧರ್ಮವು ಅಷ್ಟೇ ಪವಿತ್ರವಾದುದು. ಅವರವರಿಗೆ ಅವರವರ ಧರ್ಮ ಮುಖ್ಯ ಎಂಬ ನಿರ್ದಿಷ್ಟ ಭಾವನೆ ನಾಟಕದಲ್ಲಿ ವ್ಯಕ್ತವಾಗುತ್ತದೆ. ಪರಧರ್ಮ ಸಹಿಷ್ಣುಗಳು ಎಂದು ಹೆಸರಾದ ವಿಜಯನಗರ ಅರಸರಲ್ಲಿ ಒಬ್ಬನಾದ ರಾಮರಾಯನು ರುಸ್ತುಂನು ಮಸೀದಿಗೆ ಬರಲು ಒಮ್ಮೆ ಆಹ್ವಾನಿಸುತ್ತಾನೆ. ಆದರೆ ರಾಮರಾಯ ಮಸೀದಿಗೆ ಹೋಗಲು ನಿರಾಕರಿಸುತ್ತಾನೆ.

ನಾಟಕದ ಪ್ರಾರಂಭದಲ್ಲಿಯೂ ಅಯಷಾಳು ರಾಮರಾಯನಿಗೆ ಹೀಗೆ ಹೇಳುತ್ತಾಳೆ. "ಒಂದೊಂದು ಸಲ ನನಗೆ ಹೆದರಿಕೆಯಾಗುತ್ತದೆ. ನೀವು ನಮ್ಮವರಿಗೆ ಕಾಫರರು, ನಾನು ನಿಮ್ಮವರಿಗೆ ಮ್ಲೇಚ್ಛಳು, ನಿಮಗೆ ನನ್ನ ಮಲೆ ಪ್ರೀತಿ ಎಂಬುದು ನಿಜವಾದ ಮಾತೆ ಇದೆಲ್ಲಾ ನಿಜವೇ" (ಮಾಸ್ತಿ, 1929:27). ಅವಳ ಅನುಮಾನ ಮುಂದೆ ನಿಜವೇ ಆಗುತ್ತದೆ. ಯಾರೂ ಧರ್ಮವನ್ನು ಬಿಡಲು ಒಪ್ಪರು. ಆಮೇಷಳನ್ನು ರಾಮರಾಯನು ಮದುವೆಯಾಗಲು ಅವನ ಧರ್ಮ/ಧರ್ಮಾಧಿಕಾರಿ ಅಡ್ಡವಾಗುತ್ತಾನೆ. ರಾಮರಾಯ ರಾಜನೇ ಆಗಿರಬಹುದು. ಆದರೆ ಧರ್ಮಾಧಿಕಾರಿ ಅವನಿಗಿಂತಲೂ ದೊಡ್ಡವನು ಧರ್ಮಾಧಿಕಾರಿಯ ಮಾತನ್ನು ಮೀರಿ ನಡೆಯಲಾರದಷ್ಟು ಅಸಹಾಯಕ ರಾಜ ರಾಮರಾಯ, ಹಾಗೇ ಆಮೇಷಳನ್ನು ಮೊದಲಿಗೆ ಪ್ರೀತಿಸುತ್ತಿದ್ದ, ಅವಳ ಭಾವೀ ಪತಿಯೆಂದೇ ಗುರುತಿಸಲ್ಪಟ್ಟ ಉಸಮಾನ್ (ಏಸಮಾನ್)ನಿಗೆ ಧರ್ಮವೂ ಅಷ್ಟೇ ಮುಖ್ಯವಾಗಿದೆ. ಧರ್ಮಕ್ಕಿಂತ ಮುಖ್ಯವಾಗಿ ತನ್ನನ್ನು ವರಿಸಬೇಕಾದ ಹೆಣ್ಣೊಂದನ್ನು ಕಾಫಿರ ರಾಮರಾಯ ಕೆಡಿಸಿದ ತನ್ನ ಪ್ರೀತಿಗೆ ಕಂಟಕನಾದ ಎನ್ನುವ ಸಿಟ್ಟೂ ಇದೆ. ಸಿಟ್ಟು ದ್ವೇಷವಾಗಿ ಪರಿಣಮಿಸುತ್ತದೆ. ಆ ಎರಡು ಧರ್ಮಗಳ ಮಧ್ಯದ ದ್ವೇಷಕ್ಕೆ ದಾಳವಾಗಿ ನಿಲ್ಲುವವನು ಮಾತ್ರ ಎರಡೂ ಧರ್ಮೀಯರಿಂದ ಜನಿಸಿದ ರುಸ್ತುಂ. ರುಸ್ತುಮನು ಹಿಂದು ಮುಂದು ಯಾವುದನ್ನು ಅರಿಯದ ಮುಗ್ಧ, ಧರ್ಮವನ್ನೇ ದೊಡ್ಡದು ಮಾಡಿ ದ್ವೇಷವನ್ನು ಸಾಧಿಸಲಾಗುತ್ತದೆ. ಇಲ್ಲಿಯ ಪ್ರತಿಯೊಂದು ಕ್ರಿಯೆಗೂ ಯಾರೂ ಹೊಣೆಗಾರರಲ್ಲ.

ಎಲ್ಲಾ ದೈವ ನಿಶ್ಚಯದಂತೆ ನಡೆಯುತ್ತದೆ ಎನ್ನುವ ಭಾವನೆ ಮಾಸ್ತಿಯವರದು. ಅವರ ಸಣ್ಣ ಕಥೆಗಳಲ್ಲಿ ವ್ಯಕ್ತವಾದ ಭಾವನೆ ಕಥೆಯನ್ನು ಮುನ್ನಡೆಸುವ ಎಚ್ಚರಿಕೆಯೇ ಈ ನಾಟಕದಲ್ಲಿ ವ್ಯಕ್ತವಾಗುತ್ತದೆ. ಮಾಸ್ತಿಯವರ ಈ ನಾಟಕದಲ್ಲಿ ಎಲ್ಲಿಯೂ ನೇರವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಯಾವುದೇ ಧರ್ಮ ಹೆಚ್ಚು ಅಥವಾ ಕಡಿಮೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸಿಲ್ಲದಿರುವುದು ನಾಟಕದ ಹೆಗ್ಗಳಿಕೆಯಂದೇ ಹೇಳಬಹುದು. ಆದರೆ ಧರ್ಮವೊಂದು ಹಿಂದೂ–ಮುಸ್ಲಿಮರ ಮಧ್ಯದ ದ್ವೇಷ ರಾಜ್ಯವೊಂದರ ಅವನತಿಗೆ ಹೇಗೆ ಕಾರಣವಾಯಿತು ಎಂಬುದನ್ನು ನಾಟಕ ಮನೋಜ್ಞವಾಗಿ ತೋರ್ಪಡಿಸುತ್ತದೆ.

ಮಾಸ್ತಿಯವರ ನಾಟಕ ವಿಜಯನಗರದ ನಾಶದ ರೀತಿಯನ್ನು ಪರಿಚಯ ಮಾಡಿಕೊಡುವುದು. ಆ ನಾಟಕದಲ್ಲಿ ನಾಡುನುಡಿಗಳ ಅಥವಾ ರಾಷ್ಟ್ರದ ಕುರಿತಾಗಿ ಎಲ್ಲಿಯೂ ಭಾವೋದ್ರೇಕದ ಮಾತುಗಳಿಲ್ಲ (ಕನ್ನಡ-ಕರ್ನಾಟಕ-ಭಾರತಗಳ ಕುರಿತು ಉಲ್ಲೇಖಗಳು ಇಲ್ಲ). ಆದರೆ ಇಡೀ ನಾಟಕ ಒಂದು ರಾಜ್ಯದ ಅವನತಿ ಹೇಗಾಯಿತು ಎಂಬುದನ್ನು ತುಂಬಾ ಪರಿಣಾಮಕಾರಿಯಾಗಿ ತಿಳಿಸುತ್ತದೆ. ನಾಟಕಕ್ಕೆ ಬರೆದ ಮುನ್ನುಡಿಯಲ್ಲಿ ಮಾತ್ರ ತಮ್ಮ ನಾಟಕ ಕುರಿತು ಏನೂ ಹೇಳದೆ ಕನ್ನಡ ರಂಗಭೂಮಿಯ ಕುರಿತು ತಿಳಿಸುತ್ತಾ "ನಮ್ಮ ನಾಟಕ ರಂಗವು ಶೀಘ್ರದಲ್ಲಿ ನಮ್ಮ ದೇಶದ ಏಳ್ಗೆಗೆ ತಕ್ಕ ಸಾಧನವಾಗಲೆಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ" ಎಂದು ಮಾತ್ರ ತಿಳಿಸುತ್ತಾರೆ. ದೇಶದ ಏಳ್ಗೆಯನ್ನು ಮಾಡುವಷ್ಟು ರಂಗಭೂಮಿ ಪ್ರಖರವಾಗಿರಲು ಸಾಧ್ಯವೆ, ಸಾಹಿತ್ಯದಿಂದ ಸಾಮಾಜಿಕ ಬದಲಾವಣೆ ಎನ್ನುವ ಅನುಭವವೂ ತಲೆದೋರುತ್ತದೆ.

ನಾಟಕದಲ್ಲಿ ಮನುಷ್ಯನ ಸಣ್ಣತನ, ಮನುಷ್ಯ ತನಗೆ ಅರಿವಿಲ್ಲದಂತೆ ತಾನೇ ನಿರ್ಮಿಸಿಕೊಂಡ ಬಲೆಯಲ್ಲಿ ಸಿಕ್ಕಿ ಒದ್ದಾಡುವುದು. ಅವನ ಅಸಹಾಯಕತೆ, ಮೂಲಕ ಏನೆಲ್ಲಾ ಘಟನೆಯು ನಡೆಯುತ್ತವೆ ಎಂಬುದನ್ನು ತುಂಬಾ ಗಂಭೀರವಾಗಿವೇ ನಾಟಕಕಾರ ನಿರ್ಲಿಪ್ತವಾಗಿ ತಿಳಿಸುತ್ತಾ ಹೋಗುತ್ತಾನೆ. ನಾಟಕದಲ್ಲಿ ಎಲ್ಲಿಯೂ ನಾಟಕ ಕರ್ತೃ ಭಾವೋದ್ವೇಗಕ್ಕೆ ಗುರಿಯಾಗುವುದಿಲ್ಲ.

> "ನಾಟಕದುದ್ದಕ್ಕೂ ವಿಧಿ, ದೈವಗಳ ಕೈವಾಡದ ಮಾತು ಬರುತ್ತದೆ. ಆದರೆ ಇಲ್ಲಿನ ದುರಂತದಲ್ಲಿ ವಿಧಿಯ ಪಾತ್ರ ಎಷ್ಟು, ಮಾನವನ ಪಾತ್ರ ಎಷ್ಟು? ಮಾನವನ ಬೇಜವಾಬ್ದಾರಿತನ, ಹೀನತನ ಈ ದುರಂತಕ್ಕೆ ಎಷ್ಟು ಕಾರಣ ಎಂಬ ಶಂಕೆ ಏಳುತ್ತದೆ. ದುರಂತ ಪೂರ್ತಿಯಾಗಿ ದೈವನಿಶ್ಚಿತ ಎಂಬುದನ್ನು ಒಪ್ಪುವುದು ಕಷ್ಟವಾಗುತ್ತದೆ. ದೈವದ ಆಟದ ಜೊತೆ ರಾಮರಾಯನ ಹಿಂದೂ ಮುಸ್ಲಿಂ ಮೈತ್ರಿ ಕಡೆಗಾಣಿಸುವ ಉದ್ಧಟತನ, ಅವಿವೇಕಗಳು ಪರಿಸ್ಥಿತಿಯನ್ನು ಅನಿವಾರ್ಯವೆಂಬಂತೆ ಘರ್ಷಣೆಗೆ ತಳ್ಳಿವೆ ಎಂಬುದನ್ನು ಮರೆಯಲಾಗದು." (ಜಿ.ಎನ್.ರಂಗನಾಥರಾವ್ : 71) ಎಂದಿರುವುದು ನಿಜವೆನಿಸುತ್ತದೆ.

**ನಾಗರಿಕ : (1930)**

ಎಂ.ಆರ್.ಶ್ರೀಯವರ ನಾಟಕ 'ನಾಗರಿಕ'ವು ನಾಶಹೊಂದಿದ ವಿಜಯನಗರದ ಕುರಿತು ತಿಳಿಸುತ್ತದೆ. ಇಸ್ಲಾಂ ಅರಸರ ದಾಳಿಯಿಂದಾಗಿ ನಾಶಹೊಂದಿದ ಸ್ಮಾರಕಗಳ ಮುಂದೆ ನಿಂತು ನಾಗರಿಕನು ಅವುಗಳ ನಾಶದ ಕುರಿತು ಪ್ರಸ್ತಾಪಿಸುತ್ತಾನೆ. ಒಂದು ಸಾಮ್ರಾಜ್ಯದ ನಾಶವನ್ನು ನೋಡಿಯೂ ಸುಮ್ಮನಿರುವ ದೇವರನ್ನು ವಿರೋಧಿಸುತ್ತಾನೆ. ನಾಟಕದ ಕೊನೆಗೆ ವಿದ್ಯಾರಣ್ಯರ ದರ್ಶನ ಲಾಭ ನಾಗರಿಕನಿಗೆ ಆಗುತ್ತದೆ. ನಾಗರಿಕನು ವಿದ್ಯಾರಣ್ಯರಿಗೆ ನಮಿಸಿ ತನ್ನ ಅಳಲನ್ನು, ಮನಸಿನ ಕ್ಲೇಶವನ್ನು ನಿವೇದಿಸುತ್ತಾನೆ. ನಾಟಕದ ಕೊನೆಯ ಭಾಗದಲ್ಲಿ Fantasy ತಂತ್ರವನ್ನು ಬಳಸಿದ್ದಾರೆ. ಇದು ವಿಜಯನಗರದ ವಾಸ್ತುಶಿಲ್ಪ(ಪಳೆಯುಳಿಕೆ)ವನ್ನು, ಅದರ ವೈಭವವನ್ನು, ವಿಜಯನಗರ ಗತಿಸಿದ ರೀತಿಯನ್ನು ತಿಳಿಸುವ ಚಿಕ್ಕ ರೂಪಕ ಶೈಲಿಯ ನಾಟಕ.

ಎಂ.ಆರ್.ಶ್ರೀಯವರು ಹಂಪೆಯ ಯಾತ್ರೆಯನ್ನು ಕೈಗೊಂಡ ಅಲ್ಲಿನ ಭಗ್ನಾವಸ್ಥೆಯಲ್ಲಿನ ಸ್ಮಾರಕಗಳನ್ನು ನೋಡಿ ಬಂದ ನಂತರ ಆರುನೂರು ವರ್ಷಗಳ ಹಿಂದೆ ಹುಟ್ಟಿ, ವೈಭವಯುತವಾಗಿ ಮೆರೆದ ಸಾಮ್ರಾಜ್ಯವನ್ನು ವಾಸ್ತವಕ್ಕೆ ತಂದ ನಿರೂಪಣೆಯೇ ಈ ನಾಟಕದ ರೂಪ ತಾಳಿದೆ. ಇಲ್ಲಿನ ನಾಗರಿಕ ಪಾತ್ರವು ಹಂಪೆಯಲ್ಲಿನ ಕಲ್ಲು ಮೂರ್ತಿಗಳ ಮುಂದೆ ನಿಂತು ವ್ಯಕ್ತಪಡಿಸುವ ಅಭಿಪ್ರಾಯಗಳು ಒಂದು ಕಾಲದಲ್ಲಿ ವೀರಧೀರರಿಂದ ಬೆಳಗಿದ ಈ ನಾಡು, ಇಂದು ಕೇವಲ ಕಲ್ಲುಮೂರ್ತಿಗಳನ್ನು ಪೂಜಿಸುವ ಸ್ಥಿತಿಗೆ ಬಂದಿದೆ. ಕೇವಲ ಮೂರ್ತಿಗಳನ್ನು ಪೂಜಿಸಿದರೆ ನಮ್ಮ ಹಿಂದಿನ ವೈಭವವು ಮರುಕಳಿಸಲಾರದು. ಅದನ್ನು ಪಡೆಯಲಿಕ್ಕೆ ವಿಜಯನಗರವನ್ನು ಸ್ಥಾಪಿಸಿದ ವಿದ್ಯಾರಣ್ಯರಂತವರ ಮಾರ್ಗದರ್ಶನ ಮುಖ್ಯ. ಜೊತೆಗೆ ಇಲ್ಲಿ ನಾವೆಲ್ಲರೂ ನಮ್ಮ ಜೀವನದ ಧ್ಯೇಯವು ರಾಷ್ಟ್ರಕ್ಕಾಗಿ ಎಂದು ತಿಳಿದಾಗ ಮಾತ್ರ ನಾವಿಂದು ಇಟ್ಟುಕೊಂಡಿರುವ (ಲೇಖಕರು ಈ ನಾಟಕ ರಚಿಸಿದ ಕಾಲಘಟ್ಟದ ಸಂದರ್ಭದಲ್ಲಿದ್ದ ನಾಡಿನ ಏಕೀಕರಣ ಮತ್ತು ರಾಷ್ಟ್ರ ನಿರ್ಮಾಣದ ಉದ್ದೇಶ) ಧ್ಯೇಯವನ್ನು ಸಾಧಿಸಲು ಸಾಧ್ಯ ಎನ್ನುವುದನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಈ ನಾಟಕದಲ್ಲಿನ ನಾಗರಿಕ ಪಾತ್ರವು ಹಂಪೆಯ ಎಲ್ಲಾ ದೇವರುಗಳ ಮುಂದೆ ನಿಂತಾಗ ಅವನಿಗೆ ಹೊಳೆಯುವುದು ಒಂದೇ, ಈ ಕಲ್ಲು ಮೂರ್ತಿಗಳನ್ನು ಪೂಜಿಸುವುದರಿಂದ, ಅಥವಾ ಅಲ್ಲಿ ದೇವರು ಇದ್ದಾನೆ ಎಂದು ಭಾವಿಸುವುದರಿಂದ, ನಾವು ಭಾವನಾತ್ಮಕ ಜೀವಿಗಳಾಗಿ ಬಿಡುತ್ತೇವೆ. ಆಗ ನಮ್ಮ ಅಸ್ಮಿತೆಯನ್ನು ನಾವು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮನಗಾಣುತ್ತದೆ. ಕೇವಲ ಕಟ್ಟುಕತೆಗಳನ್ನು ಕಟ್ಟಿಕೊಂಡು ನಾವು ಇಲ್ಲಸಲ್ಲದ್ದನ್ನು ಕಲ್ಪಿಸಿಕೊಳ್ಳುತ್ತಿದ್ದೇವೆ ಎಂದು ಹೇಳಿದಾಗ ನಾಗರಿಕನು ನಾಸ್ತಿಕನಂತೆ ಕಾಣುತ್ತಾನೆ. ಆದರೆ ನಾಡಿನ ಮೇಲಿನ ಅಭಿಮಾನದಲ್ಲಿ ಮಾತ್ರ ಅವನಿಗಿರುವ ಅಪಾರ ಪ್ರೀತಿ ಮೆಚ್ಚುವಂತಹದ್ದು. "ಈ ನಮ್ಮ ನಾಡಂತೆ ಬೇರೊಂದು ನಾಡುಂಟೆ?

ವೇದಗಳ ತೌರೂರು ಯಾಗಗಳ ನೆಲೆವೀಡು

ದೇವಭಾಷೆಯ ಕೆಚ್ಚು ವೇದಾಂತ ಮಾರ್ಗಗಳು
ಅವತಾರ ಲೀಲೆಗಳು ಮತ ಶತದ ಜನ್ಮಗಳು.
ಸತ್ಯದಲಿ ಧರ್ಮದಲಿ ಭೋಗದಲಿ ಭಾಗ್ಯದಲಿ
ಈ ನಮ್ಮ ನಾಡಂತೆ ಬೇರೊಂದುನಾಡುಂಟೆ?" (ಎಂ.ಆರ್.ಶ್ರೀ, 1930:24–25) ಎನ್ನುವ ಮಾತುಗಳು ಇದಕ್ಕೆ ಸಾಕ್ಷಿ.

ದೇವರನ್ನು ನಿಂದಿಸಿದ ಕಾರಣಕ್ಕೆ ನಿನ್ನನ್ನು ನರಕಕ್ಕೆ ಹೊಯ್ಯಲು ನಾನು ಬಂದಿದ್ದೇನೆಂದು ಯಮನು ಹೇಳಿದಾಗ,

"ನರಕವೆಂಬುದು ನಮಗೆ ಹೊಸತಲ್ಲ; ನರಕವೆಂ
ದೇಕೆ ನೀ ಹೆದರಿಸುವೆ? ನಿತ್ಯದಲಿ ಬಾಳಿನಲಿ
ನರಕಯಾತನೆಯಿಹುದು. ಪರತಂತ್ರರಾದವರು
ಸುರಲೋಕ ಸೌಖ್ಯವಂ ಪಡೆದಿಹರೆ ಯಮರಾಜ?" (ಎಂ.ಆರ್.ಶ್ರೀ, 1930:30)

ಪ್ರಸ್ತುತ ಸಂದರ್ಭ(ನಾಟಕ ರಚನೆಯ ಕಾಲ)ದಲ್ಲಿ ಪರತಂತ್ರದ ಆಳ್ವಿಕೆಗೆ ಸಿಕ್ಕು ನಮ್ಮ ಬದುಕು ನರಕ ಯಾತನೆಯಾಗಿದೆ. ನಿನ್ನ ನರಕ ಇದಕ್ಕಿಂದ ಮಿಗಿಲಾದದೇನಲ್ಲ. ಅಂದರೆ ನರಕದಲ್ಲಿ ಅನುಭವಿಸಬೇಕಾದ ಎಲ್ಲ ಕಷ್ಟಗಳನ್ನೂ ನಾವು ನಿತ್ಯ ಜೀವನದಲ್ಲಿ ಅನುಭವಿಸುತ್ತಿದ್ದೇವೆ. ನೀನು ನರಕಕ್ಕೆ ಕರೆದೊಯ್ಯುವುದು ನಮ್ಮನ್ನು ಸ್ವರ್ಗಕ್ಕೆ ಕರೆದೊಯ್ದಂತೆ ಎಂದು ಹೇಳುತ್ತಾನೆ. ನಿತ್ಯ ಜೀವನದಲ್ಲಿ ಅನುಭವಿಸುವ ಭವಣೆಗಳೇ ನಮಗೆ ನರಕಸಾದೃಶ್ಯವಾಗಿವೆ ಮೊದಲು ನಾವು ಇವುಗಳಿಂದ ಮುಕ್ತರಾಗಬೇಕು. ಅಂದರೆ ಹಿಂದೆ ಇದ್ದ ವಿಜಯನಗರ ಸಾಮ್ರಾಜ್ಯದ ಮಾದರಿಯ ರಾಜ್ಯವನ್ನು ನಾವು ಕಟ್ಟಿಕೊಳ್ಳಬೇಕೆಂಬ ಆಸೆಯಿಂದ, ವಾಸ್ತವ ಸಂದರ್ಭದಲ್ಲಿ ವಿಜಯನಗರದ ಸ್ಥಿತಿಗತಿಗಳು ಎಷ್ಟು ಅವಶ್ಯಕವಾಗಿ ಕಾಣಿಸುತ್ತಿವೆ ಎನ್ನುವುದನ್ನು ಹೇಳುತ್ತಾರೆ. ಇಂದು ನಾವುಗಳು ಹೇಗಿದ್ದೇವೆಂದರೆ ನಾವು ಸತ್ವಶಾಲಿಗಳಾಗಿಲ್ಲ, ಪರರನ್ನು ಆಳುತ್ತಿಲ್ಲ, ನೆರೆಹೊರೆಯ ನಾಡನ್ನು ಜಯಿಸಿಲ್ಲ, ಇತರರಿಗೆ ಹಿಂಸೆ ನೀಡಿಲ್ಲ. ಆದರೆ ಇವೆಲ್ಲವೂಗಳನ್ನು ಮಾತ್ರ ನಾವು ಅನುಭವಿಸುತ್ತಿದ್ದೇವೆ.

ಈ ನಾಟಕದಲ್ಲಿ ಹಿಂದೂ ಧರ್ಮದ ಕುರಿತು ಎಲ್ಲಿಯೂ ಹೆಗ್ಗಳಿಕೆ ಇರದಿದ್ದರೂ, ಹಿಂದೂ ಧರ್ಮ ದೇವರನ್ನು ನಾಶಗೊಳಿಸಿದ ವೈರಿಗಳ ಕುರಿತು ಅಸಮಧಾನವಿದೆ. ಇನ್ನೊಂದು ಕಡೆಗೆ ಯಮನನ್ನೇ ನಾಗರಿಕ ಪ್ರಶ್ನೆ ಮಾಡುತ್ತಾನೆ. ಹಿಂದೂಗಳಿಗೆ ಪವಿತ್ರವಾದ ಗೋಹತ್ಯೆ ಮಾಡಿ ರಾಜ್ಯ ಕಟ್ಟಿದವರ ಕುರಿತು ಪ್ರಶ್ನೆ ಮಾಡುತ್ತಾನೆ.

"ಗೋಹತ್ಯೆ ಮಾಡಿದರು ರಾಜ್ಯವಂ ಕಟ್ಟಿದರು
ಗೋಪೂಜೆ ಮಾಡಿದರು ರಾಜ್ಯವಂ ನೀಗಿದರು (ನಾಗರಿಕ 33).
ಸಂತಾಪ ಪಡುವುದಕೆ ದೇವನೇ ಕಾರಣನು
ಸುಳ್ಳಾಡಿ ಮರೆಯಾದ, ಅಹಿತರಿಗೆ ನೆರವಾದ

ಆರ್ಯ ಧರ್ಮವ ಹಳಿದ, ಅನ್ಯಧರ್ಮವ ತಂದ" (ಅದೇ 33).

ದೇವರನ್ನು ನಂಬಿ ಪೂಜಿಸುತ್ತೇವೆ. ಗೋಪೂಜೆ ಮಾಡುತ್ತೇವೆ. ಧರ್ಮ ತತ್ವಕ್ಕೆ ನಿಷ್ಠೆಯಿಂದ ನಡೆಯುತ್ತೇವೆ. ಆದರೆ ಇಲ್ಲಿ ಆಗುವುದೇನು ಗೋಹತ್ಯೆ ಮಾಡಿದವರಿಗೆ, ಹಿಂದೂ ಧರ್ಮವನ್ನು ದೂರೀಕರಿಸುವವರಿಗೆ ರಾಜ್ಯ ಕಟ್ಟುವ ಸುಯೋಗ ದೊರೆಯಿತು. ಧರ್ಮನಿಷ್ಠೆಯಿಂದ ನಡೆದವರು ಗೋವಿನ ಪೂಜೆಯನ್ನು ಮಾಡಿದವರು ರಾಜ್ಯವನ್ನೇ ಕಳೆದುಕೊಳ್ಳಬೇಕಾಯಿತು. ಈ ಕುಕೃತ್ಯಕ್ಕೆಲ್ಲಾ ದೇವನೇ ಕಾರಣನು. ಅವನು ಅನಾರ್ಯರಿಗೆ, ಅಹಿತರಿಗೆ ಅವಕಾಶ ಕಲ್ಪಿಸಿದ. ಆರ್ಯ ಧರ್ಮವನ್ನೇ ಅಳಿಸಿಹಾಕಿದ ಅನ್ಯಧರ್ಮೀಯರಿಗೆ ಅವಕಾಶ ಕಲ್ಪಿಸಿದ. ಅಂಥವನನ್ನು ನಾವು ಏಕೆ ಪೂಜಿಸಬೇಕು ಎಂದು ಯಮನಿಗೆ ನಾಗರಿಕ ಪ್ರಶ್ನಿಸುತ್ತಾನೆ.

ಧರ್ಮದ ಹೆಸರಿನಲ್ಲಿ ಪೂಜೆ–ಪುನಸ್ಕಾರ, ಯಜ್ಞ–ಯಾಗ, ಜಪ–ತಪಾದಿಗಳನ್ನು ಮಾಡುತ್ತಿರುವುದಾದರೂ ಯಾತಕ್ಕಾಗಿ? ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆಯ ಉಪಸ್ಕರಿಸುವುದಕ್ಕಾಗಿಯೋ ಸರ್ವರಲಿ ದೇವನು ವಾಸಿಸುತ್ತಾನೆಂದು ಹೇಳುತ್ತಿರುವುದು. ಇವೆಲ್ಲವುಗಳಿಂದ ನಾಡು ಉಳಿಯುವುದಾದಲ್ಲಿ ಏಕೆ ಅನ್ಯರಿಂದ ನಮ್ಮ ಆರ್ಯ ಧರ್ಮಕ್ಕೆ ಹೊಡೆತ ಬಿತ್ತು? ಸತ್ಯದ ಅರಿವನ್ನು ತಿಳಿದು ಧರ್ಮದ ಮಾರ್ಗದಲ್ಲಿ ನಡೆದ ನಮ್ಮ ಸಾಮ್ರಾಜ್ಯಗಳೇಕೆ ನಾಶವಾದವು? ಸುಂದರ ದೇಗುಲಗಳನ್ನು ನಿರ್ಮಿಸಿ ನಿತ್ಯ ದೀಪೋತ್ಸವ ಮಾಡಿದ ಮೂರ್ತಿಗಳೇಕೆ ನಮ್ಮವರನ್ನು ಕಾಯಲಿಲ್ಲ? ಕೇವಲ ದೇವರು ನಮ್ಮಲ್ಲಿದ್ದಾನೆಂದು ಭಾವಿಸಿ ಅವನ ಜಪದಲ್ಲಿಯೇ ಕಾಲ ಕಳೆದರೆ ಏನುಪಯೋಗ? ಅದಕ್ಕಾಗಿ ನಾವು ಮಾಡಬೇಕದ್ದೇನು ಎನ್ನುವುದನ್ನು ನಮ್ಮ ಸ್ವಪ್ರಯತ್ನದಿಂದಲೇ ನೇರವೇರಿಸಿಕೊಳ್ಳಬೇಕು. ದೇವರ ಮೂರ್ತಿ ಇಲ್ಲಿ ಮುಖ್ಯವಲ್ಲ. ನಮಗೆ ಬೇಕಾದುದು ವಿದ್ಯಾರಣ್ಯರಂತ ಸಕಾರ ಮೂರ್ತಿ. ಹೇಗೆ ಒಂದು ಮಹಾಸಾಮ್ರಾಜ್ಯಕ್ಕೆ ಆ ಮಹಾಶಯ ಅಡಿಗಲ್ಲಾಕಿಸಿದನೋ ಅಂತವರು ನಮಗೆ ಬೇಕು. ನಾವು ಕೂಡ ಹರಿಹರ ಬುಕ್ಕರಂತಾಗಬೇಕು. ಅಂದಾಗ ಮಾತ್ರ ನಮ್ಮ ಸ್ವಾಭಿಮಾನದ, ಸ್ವಪ್ರತಿಷ್ಠೆಯ ನಾಡನ್ನು ಕಟ್ಟಿಕೊಳ್ಳಲು ಸಾಧ್ಯ ಎನ್ನುವ ಅಂಶಗಳು ಈ ನಾಟಕದಲ್ಲಿ ವ್ಯಕ್ತವಾಗಿವೆ.

ನಾಗರಿಕನಿಗೆ ವಿದ್ಯಾರಣ್ಯರ ದರ್ಶನವಾಗಿ ಅವರು ಐಂದ್ರಜಾಲಿಕವಾಗಿ ವಿಜಯನಗರದ ಹಿಂದಿನ ಘಟನೆಗಳನ್ನು ವಿಜಯನರದಲ್ಲಿನ ಮಹಾನವಮಿಯ ಸನ್ನಿವೇಶ, ಅರಸರಿಗೆ ಸಾಮಂತರು ಕಪ್ಪಕಾಣಿಕೆಗಳನ್ನು ಒಪ್ಪಿಸುತ್ತಿರುವ ದೃಶ್ಯ, ಅರಮನೆಯ ರಾಣಿಯರ ವೈಭವ, ರಾಮರಾಯನು ಯುದ್ಧಕ್ಕೆ ಹೋಗುವ ದೃಶ್ಯ, ತಿರುಮಲಾಂಬೆ ರಾಮರಾಯನ ವಿಜಯಕ್ಕಾಗಿ ಪೂಜೆ ಸಲ್ಲಿಸುತ್ತಿರುವುದು ತೋರಿಸುತ್ತಾರೆ. ಯುದ್ಧಕ್ಕೆ ಹೊರಟ ವಿಜಯನಗರ ಸೈನ್ಯದಲ್ಲಿ ನಾಗರಿಕನು ತಾನೂ ಸೈನ್ಯದೊಂದಿಗೆ ಹೋಗುತ್ತಿರುವಂತೆ ಪರಿಭಾವಿಸುವ ಅವನ ಮನಃಸ್ಥಿತಿ, ಹಿಂದಿನವರಂತೆ ನಾವು ಇಂದು ನಮ್ಮನ್ನಾವರಿಸಿರುವ ಪರಕೀಯತೆಯಿಂದ ಕಳಚಿಕೊಳ್ಳಲು ಹೋರಾಟಕ್ಕೆ ಸಿದ್ಧರಾಗಬೇಕು ಎನ್ನುವ ಕರೆ ನೀಡಿದ್ದಾರೆ ನಾಟಕಕಾರರು. ಹಾಗೆಯೇ

ವಿದ್ಯಾರಣ್ಯರು ಇಲ್ಲಿ ಯಾವುದೂ ಶಾಶ್ವತವಲ್ಲ. ಇಂದು ಇದ್ದುದು ನಾಳೆ ನಾಶವಾಗುವುದು. ಅದೆಲ್ಲಾ ಮಾಯೆಯಿಂದಾಗುವ ಕಾರ್ಯ. ಆದರೆ ಇರುವುದು ಮಾತ್ರ ಹಾಗೆಯೇ ಇರುತ್ತದೆ ಅದನ್ನು ನಾವು ಪಡೆದುಕೊಳ್ಳಬೇಕಷ್ಟೆ ಎಂದು ಹೇಳುತ್ತಾರೆ.

ಈ ನಾಟಕದಲ್ಲಿನ ನಾಗರಿಕನ ಹುಡುಕಾಟವು ತನ್ನ ಅಸ್ಮಿತೆಯ ಹುಡುಕಾಟವಾಗಿ ಮೂಡಿ ಬಂದಿದೆ. ವಿಜಯನಗರ ಸಾಮ್ರಾಜ್ಯವು ಹುಟ್ಟಿ ಬೆಳೆದು, ಅದು ಪಡೆದ ಮನ್ನಣೆಯನ್ನು ಸ್ಮರಿಸುತ್ತಾ, ವಾಸ್ತವ ಸಂದರ್ಭದಲ್ಲಿ ನಮ್ಮ ಮುಂದಿರುವ ಸಮಸ್ಯೆಗಳನ್ನು ಎದುರಿಸಿ ನಾವು ಕಟ್ಟಿಕೊಳ್ಳಬೇಕಾದ ನಾಡಿನ ಪೂರ್ವ ತಯಾರಿಗಾಗಿ ಸಿದ್ಧಪಡಿಸಿಕೊಳ್ಳಬೇಕಾದ ಅಂಶಗಳತ್ತ ನಾಟಕಕಾರರು ಗಮನಹರಿಸಿದ್ದಾರೆ.

ಎಂ.ಆರ್. ಶ್ರೀಯವರ ನಾಗರಿಕ ನಾಟಕವು ಇನ್ನಿತರ ನಾಟಕಗಳಿಗಿಂತ ಭಿನ್ನವಾದುದು. ಕಾವ್ಯರೂಪದಲ್ಲಿರುವ ಈ ನಾಟಕದಲ್ಲಿ ನಾಟಕದ ಮುಖ್ಯ ಪಾತ್ರವಾದ ನಾಗರಿಕನು ಹಂಪೆಯ ಪ್ರತಿಯೊಂದು ಸ್ಮಾರಕದ ಎದುರು ಪ್ರಲಾಪಿಸುತ್ತಾನೆ. ನಾಟಕದ ಮುಖ್ಯ ಹೇತುವು (ಕಾರಣ) ಕನ್ನಡ ನಾಡಿನ ಅವನತಿಯನ್ನು ಪ್ರೇಕ್ಷಕರಿಗೆ ಶ್ರುತಪಡಿಸುವುದೇ ಆಗಿದೆ. ಆದರೆ ನಾಟಕದುದ್ದಕ್ಕೂ ಕನ್ನಡ ನಾಡು-ನುಡಿ, ರಾಷ್ಟ್ರ ಮುಂತಾದ ಯಾವ ಪದಗಳ ಬಳಕೆಯೂ ನೇರವಾಗಿ ಬಳಕೆಗೊಂಡಿಲ್ಲ. ನಾಟಕದ ಒಂದು ಭಾಗದಲ್ಲಿ ಮಾತ್ರ ನಾಗರಿಕನು ಈ ನಮ್ಮ 'ನಾಡಂತೆ ಬೇರೊಂದು ನಾಡುಂಟೆ' (ಎಂ.ಆರ್.ಶ್ರೀ., 1930:24) ಎಂದು ಪ್ರಶ್ನಿಸುತ್ತಾನೆ. ಹಾಗೂ ನಾಡಿನ ಗತವೈಭವವನ್ನು ಕೊಂಡಾಡುತ್ತಾನೆ.

ನಾಟಕದ ಮುಂದಿನ ಭಾಗದಲ್ಲಿ ದೇವರು ಈ ಭೂಮಿಯ ಮೇಲೆ ನೆಲೆಸಿಲ್ಲ ಎಂದು ನಾಗರಿಕ ವಾದಿಸುತ್ತಾನೆ.

"ನಮ್ಮ ದೇಶದೊಳಿಲ್ಲ. ಪೋಗಿಹನು ಬೇರೆಡೆಗೆ
ಭರತ ಖಂಡದಿಂದೇ ಹೆದರಿ ಓಡಿದವನು" (ಎಂ.ಆರ್.ಶ್ರೀ., 1930:26).

..............................................

"ಯವನರಿಗೆ ಹೆದರಿದನು ಹೇಡಿಯಾಗೋಡಿದನು
ಇನ್ನು ನಂಬುವುದುಂಟೆ ಆ ಹೇಡಿ ದೈವವನು" (ಎಂ.ಆರ್.ಶ್ರೀ., 1930:27).

ಎನ್ನುತ್ತಾನೆ.

ಹಾಳಾದ ಹಂಪೆಯಲ್ಲಿ ನಿಂತ ನಾಟಕಾರರು ಅದರ ಗತವೈಭವವನ್ನು ಸ್ಮರಿಸುತ್ತಾ, ಅಳಿದು ಹೋದ ವೈಭವವನ್ನು ಮರುಕಳಿಸಲಿಕ್ಕೆ ಮಾಡಬೇಕಾದ್ದೇನು? ಅದಕ್ಕೆ ಬೇಕಾದ ಶಕ್ತಿ ಯಾವುದು?

"...ಗುರು ಕರುಣವೊಂದಿರಲಿ ದೇವನಂ
ಸಾಧಿಪೆವು- ಕಳೆದುಳಿದ ರಾಜ್ಯಗಳ ಲೆಕ್ಕಿಪೆವೆ?

..............................................................

ದೈವಬಲವಿರಬೇಕು ಪುರುಷಬಲವಿರಬೇಕು

ಅಲ್ಲದೊಡೆ ಕಾರ್ಯಸಾಧನೆಯಹುದೆ?(ಎಂ.ಆರ್.ಶ್ರೀ., 1930:65) ಎಂದು ಹೇಳುವ ಮಾತುಗಳು ವೈದಿಕ ಪರಂಪರೆಯನ್ನು ಮುಂದುವರೆಸಲು ಪ್ರಚೋದಿಸುತ್ತಾ, ನಾಸ್ತಿಕನಾದ ನಾಗರಿಕನು ಆಸ್ತಿಕನಾಗುವಂತೆ ಮಾಡುತ್ತವೆ.

**ವರಪ್ರದಾನ : (1936)**

ವಿಜಯನಗರ ಸ್ಥಾಪನೆಯ ವಸ್ತುವನ್ನೇ ಇಟ್ಟುಕೊಂಡು ಕಂದಗಲ್ ಹನುಮಂತರಾಯರು 1936ರಲ್ಲಿ 'ವರಪ್ರಧಾನ' ಅರ್ಥಾತ್ 'ವಿಜಯನಗರ ಸಾಮ್ರಾಜ್ಯ' ಎನ್ನುವ ನಾಟಕವನ್ನು ರಚಿಸಿದ್ದಾರೆ. ಮಾಧವಾಚಾರ್ಯರ ಪ್ರೇರಣೆಯಿಂದ ಹರಿಹರನು ವಿಜಯನಗರ ಸ್ಥಾಪನೆ ಮಾಡಿದುದು ನಾಟಕದ ವಸ್ತು. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ನಡೆಯುವ ಸಂಗತಿಗಳು ನಾಟಕದಲ್ಲಿ ಪ್ರಾಸಂಗಿಕವಾಗಿ ಬರುತ್ತವೆ. ಈ ನಾಟಕ ಮುಖ್ಯವಾಗಿ ವೃತ್ತಿರಂಗಭೂಮಿಯನ್ನೇ ಉದ್ದೇಶವಾಗಿರಿಸಿಕೊಂಡು ಬರೆದ ನಾಟಕ. ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ನಾಟಕಕಾರರೆಂದು ತುಂಬಾ ಪ್ರಸಿದ್ಧರಾಗಿದ್ದ ಕಂದಗಲ್‌ರಿಗೆ ಪ್ರಾಯಶಃ ಆ ಕಾಲದಲ್ಲಿ ಮುಖ್ಯವಾಗಿದ್ದ ನಾಡು-ನುಡಿ, ರಾಷ್ಟ್ರೀಯತೆಗಳನ್ನು ಕುರಿತಾಗಿ ನಾಟಕ ಬರೆದರೆ ಪ್ರೇಕ್ಷಕ ವರ್ಗ ಸ್ವೀಕರಿಸಬಲ್ಲರು ಎಂಬ ಕಾರಣಕ್ಕಾಗಿಯೇ ಈ ನಾಟಕ ಬರೆದಿರಬೇಕು. ಈ ನಾಟಕ ಬರೆಯುವುದಕ್ಕೆ ಪೂರ್ವದಲ್ಲಿ ಆ ಕಾಲಕ್ಕಾಗಲೇ ಪ್ರಕಟವಾಗಿದ್ದ ಇದೇ ವಸ್ತುವಾಗುಳ್ಳ ನಾಟಕಗಳನ್ನು ಕಂದಗಲ್ಲರು ಅಭ್ಯಾಸ ಮಾಡಿರುವ ಸಾಧ್ಯತೆಗಳೂ ಇದೆ. ಏಕೆಂದರೆ ನಾಟಕದಲ್ಲಿ ಅವುಗಳ ಛಾಯೆ ಕಂಡುಬರುತ್ತದೆ. ಹಾಗೆಂದೂ ಇದೊಂದು ಉತ್ತಮ ಸ್ವತಂತ್ರ ನಾಟಕವಾಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ನಾಟಕದಲ್ಲಿ ಕಂಡುಬರುವ ಪ್ರಮುಖ ಅಂಶವೆಂದರೆ ಧಾರ್ಮಿಕ ಸಾಮರಸ್ಯ. ಆ ಕಾಲಕ್ಕೆ ಹಿಂದೂ-ಮುಸ್ಲಿಮರ ನಡುವೆ ಹಲವು ಬಗೆಯ ತಿಕ್ಕಾಟಗಳಿದ್ದರೂ ಇಲ್ಲಿ ನಾಟಕಕಾರರು ಅವುಗಳನ್ನೆಲ್ಲಾ ಮುಚ್ಚಿ ಹಾಕಿ ಸಮನ್ವಯತೆಯನ್ನು ತರುವ ಪ್ರಯತ್ನ ಮಾಡುತ್ತಾರೆ. ನಾಟಕ ರಚನೆಯ ಸಂದರ್ಭಕ್ಕಾಗಲೇ ಕರ್ನಾಟಕ ಏಕೀಕರಣ, ಭಾರತದ ಸ್ವಾತಂತ್ರ್ಯ ಹೋರಾಟದ ಚಳುವಳಿಗಳು ತೀವ್ರಗೊಂಡಿದ್ದವು. ಆ ವೇಳೆಯಲ್ಲಿ ಹಿಂದೂ-ಮುಸ್ಲಿಮರಲ್ಲಿರುವ ಒಡಕು ಬ್ರಿಟಿಷರಿಗೆ ಅನುಕೂಲಕರವಾಗಬಹುದೆಂಬ ಅನುಮಾನಗಳು ಲೇಖಕರಿಗೆ ಕಾಡಿದಂತಿವೆ. ಆದುದರಿಂದ ಹಿಂದೂ-ಮುಸ್ಲಿಮರ ಮಧ್ಯೆ ಏನೇ ಸಂಘರ್ಷಗಳಿದ್ದರೂ ಅವನ್ನೆಲ್ಲ ಬಿಟ್ಟು ನಾಡಿನ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಐಕ್ಯತೆಯನ್ನು ಸಾಧಿಸಬೇಕೆಂಬ ಆಶಯವನ್ನು ಇಲ್ಲಿ ನಾಟಕಕಾರರು ವ್ಯಕ್ತಪಡಿಸಿದ್ದಾರೆ.

ವಾಸ್ತವದ ಈ ಸಂಗತಿಯನ್ನು ತೂಗಿಸಿಕೊಂಡು ಹೋಗಲು ಕಂದಗಲ್ಲರು ವಿಜಯನಗರ ಸ್ಥಾಪನೆಯ ಹಿಂದಿನ ಸ್ಥಿತಿ ಗತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆ

ಕಾಲಕ್ಕಾಗಲೇ ಹಿಂದೂ ಮತ್ತು ಮುಸ್ಲಿಮರ ಸಂಬಂಧಗಳು ತೀರಾ ವಿರುದ್ಧ ದಿಕ್ಕಿನಲ್ಲಿದ್ದವು. ವಸ್ತುಸ್ಥಿತಿ ಹೀಗಿದ್ದರೂ ನಾಟಕಕಾರರು ಸಂಕಟ ಸ್ಥಿತಿಯಲ್ಲಿರುವವನ್ನು ಕಾಪಾಡುವ ಸಂದರ್ಭದಲ್ಲಿ ಲೌಕಿಕ ಕಾದಟಗಳನ್ನು ಬದಿಗಿಟ್ಟು ಪ್ರತಿಯೊಂದು ಧರ್ಮದ ಮೂಲಮಂತ್ರ ಒಂದೇ ಆಗಿದ್ದು, ಅದು ಮಾನವೀಯತೆ ಮೂಲ ಸೆಲೆ ಎನ್ನುವುದನ್ನು ಹೇಳುತ್ತಾರೆ. ಬಾವುದ್ದೀನನ ಮೂಲಕ ಈ ರೀತಿ ಹೇಳಿಸುತ್ತಾರೆ.

> "ಎಲೋ ಸ್ವಾರ್ಥದ ಸೈತಾನ! ಬಾಯಿಗೆ ಬಂದಂತೆ ಬಡಬಡಿಸಬೇಡ ಆನೆಗುಂದಿಯ ಹಿಂದೂ ಸಿಂಹಾಸವನ್ನು ಹಿಂದೂವಾದ ನೀನು ರಸಾತಲಕ್ಕೆ ಮೆಟ್ಟಿ ನಿನ್ನ ಸ್ವಾರ್ಥದ ಚಿತ್ರವನ್ನು ಜಗತ್ತಿನ ಮುಂದಿಟ್ಟಿರುವಿ. ದುರಾತ್ಮ! ನೀನು ಹಿಂದೂ ಸಿಂಹಾಸನದ ಅಭಿಮಾನ ಹಿಡಿಯದ ನೀಚ. ಸ್ವಾರ್ಥಕ್ಕಾಗಿ ಆನೆಗುಂದಿಯ ಸತ್ವವನ್ನು ಆಳು ಮಾಡಿದಿ, ರಾಜದ್ರೋಹಿಯೇ, ದೇಶದ್ರೋಹಿಯೇ ಸುಲ್ತಾನರ ಸಿಂಹಾಸನಕ್ಕೆ ಸ್ವಾಮಿ ನಿಷ್ಠೆಯನ್ನು ತೋರಿಸುವ ನೀನು ನಿನ್ನ ರಾಕ್ಷಸಿ ಮಹತ್ವಾಕಾಂಕ್ಷೆಗೆ ನಾಳೆ ಸುಲ್ತಾನರ ಮೇಲೆ ಕೈ ಮಾಡಲು ಹೇಸಲಾರೆ."(ಕಂದಗಲ್ಲ ಹಣಮಂತರಾಯ, 1994:98)

ಈ ಮಾತುಗಳನ್ನು ಗಮನಿಸಿದಾಗ ಬಾಹುದ್ದೀನನು ಮುಸ್ಲಿಮರಾದರೂ ಅವನ ರಾಜಭಕ್ತಿ ಮಾತ್ರ ಧರ್ಮಾತೀತವಾದುದು ಎನ್ನುವುದನ್ನು ಧ್ವನಿಸುತ್ತವೆ. ಹಾಗೆಯೇ ರೌದ್ರದಾಮನು ಶಿವಾಂಗಿಯನ್ನು ಅತ್ಯಾಚಾರ ಮಾಡಲೆತ್ನಿಸುವ ಸಂದರ್ಭದಲ್ಲಿ ಬಂದ ಮಲ್ಲಿಕನು ಶಿವಾಂಗಿಯನ್ನು ಕಾಪಾಡುತ್ತಾನೆ. ಐತಿಹಾಸಿಕವಾಗಿ ಮಲ್ಲಿಕನು ಹಿಂದೂ ಸಾಮ್ರಾಜ್ಯವಗಳೆಂದರೆ ಮೈ ಉರಿದುಕೊಳ್ಳುತ್ತಿದ್ದ ವ್ಯಕ್ತಿ. ಅಂಥವನ ಕೈಯಿಂದ ನಾಟಕಕಾರರು ಇಂತಹ ಘನ ಕಾರ್ಯ ಮಾಡಿಸುವುದರ ಉದ್ದೇಶವೂ ಸಹ ಮೇಲಿನ ಅಂಶವನ್ನೇ ಪ್ರತಿಪಾದಿಸುತ್ತದೆ.

> "ದೇಶಾಭಿಮಾನ, ನಾಡ ಅಭಿಮಾನಗಳನ್ನು ಉದ್ದೀಪಿಸುವ ಈ ನಾಟಕ ಭಾರತದ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿಗೆ ಪರೋಕ್ಷವಾಗಿ ನೀಡಿದ ಒತ್ತಾಸೆ ಸ್ಮರಣೀಯವಾದುದು." (ಗಿರಡ್ಡಿ ಗೋವಿಂದರಾಜು, ಬೆನ್ನುಡಿ.) ಎಂದು ಅಭಿಪ್ರಾಯ ಪಟ್ಟಿರುವುದು ನಾಟಕದಿಂದಾಗುವ ಪರಿಣಾಮವನ್ನು ತಿಳಿಸಿದಂತಿದೆ.

ನಾಟಕಕಾರರು ಭಾರತದ ಭೌಗೋಳಿಕ ಪ್ರದೇಶವನ್ನು ಕುರಿತು ಉತ್ತರದಲ್ಲಿ ಹಿಮಾಲಯದಿಂದ ದಕ್ಷಿಣದ ಕನ್ಯಾಕುಮಾರಿ, ಉಳಿದ ದಿಕ್ಕಿನಲ್ಲಿ ಸಮುದ್ರದ ತೀರದವರೆಗೂ ಒಳಗೊಂಡಿದೆ ಎಂದು ಗುರುತಿಸುತ್ತಾರೆ. ಇಲ್ಲಿನ ಜನ ಸಮುದಾಯವನ್ನು ಆರ್ಯ ಧರ್ಮೀಯರೆಂದು ಗುರುತಿಸಿ, ಇಲ್ಲಿನ ಪ್ರದೇಶದಲ್ಲಿನ ಆಡಳಿತವು ಆರ್ಯ

ಧರ್ಮವನ್ನನುಸರಿಸುವವರು ರಾಜ್ಯಭಾರ ವಹಿಸಿಕೊಳ್ಳಬೇಕೆನ್ನುತ್ತಾರೆ. ಹೀಗಾಗಿ ನಾಟಕದಲ್ಲಿ ಧರ್ಮವನ್ನು ಪರಿಗಣಿಸದೆ ಸ್ವಾರ್ಥ ಸಾಧನೆಗಾಗಿ, ಸಮಾಜ ಘಾತಕ ಕೃತ್ಯಗಳನ್ನು ಮಾಡುವ ರೌದ್ರದಾಮ, ಭುಜಂಗರಾಯ ಮತ್ತು ಕರಾಳ ದೇಶ ದ್ರೋಹಿಗಳಾಗಿ ಕಾಣುತ್ತಾರೆ. ಆದರೆ ಸ್ವಧರ್ಮದ, ನಾಡಿನ ಏಳ್ಗೆಗಾಗಿ ದುಡಿಯುವ ಹಕ್ಕ ಬುಕ್ಕರು, ಮರಾಳ ಮುಂತಾದ ಆರ್ಯ ನಾರಿಯರು ದೇಶ ಸೇವಕರು ಎನ್ನುವ ಅಂಶವು ಗಮನ ಸೆಳೆಯುತ್ತವೆ.

ನಾಟಕದ ಪ್ರಮುಖ ಅಂಶವೆಂದರೆ ಕನ್ನಡ ನಾಡನ್ನು ಕಟ್ಟಿಕೊಳ್ಳಬೇಕಾದುದು. ರೌದ್ರದಾಮ ಮತ್ತು ಹುಕ್ಕರ ಸಂಭಾಷಣೆಯಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ನಿನ್ನ ರಾಕ್ಷಸಿ ಮಹತ್ವಾಕಾಂಕ್ಷೆಯಿಂದ ಅನೆಗುಂದಿ ರಾಜ್ಯದ ಮುಕುಟಕ್ಕೆ ಕೈಹಾಕುತ್ತಿರುವಿ ಎಂದು ರೌದ್ರದಾಮನು ಹೇಳಿದಾಗ ಹುಕ್ಕನು–

> "ದುರಾಶೆಗಾಗಿ ಶೀಲವನ್ನು ತ್ಯಜಿಸುವಷ್ಟು ಘಾತುಕನು ನಾನಲ್ಲ. ರೌದ್ರದಾಮ ನನ್ನ ಮಸ್ತಕವು ರಾಜ ಮುಕುಟದಿಂದ ಭುಷಿಸಬೇಕೆಂಬ ಇಚ್ಛೆ ನನಗಾದರೆ ಆನೆಗುಂದಿಯಂಥ ಚಿಕ್ಕ ರಾಷ್ಟ್ರದ ಮುಕುಟವೇಕೆ? ಯಾವತ್ತು ಭಾರತ ದೇಶದ ಸಾರ್ವಭೌಮತ್ವದ ರತ್ನ ಖಚಿತವಾದ ಮುಕುಟದಿಂದ ಸಿರವನ್ನೂ ಭೂಷಿಸುವಷ್ಟು ಶಕ್ತಿಯು ಗುರುವನುಗ್ರಹದಿಂದ ಪ್ರಾಪ್ತವಾಗಿರುವುದು. ಆದರೆ ರೌದ್ರದಾಮಾ ಖಿಲಜಿ ಮಲೀಕ ಕಾಫರರು ಭಾರತೆಯ ರಾಜಾಂಗಣದಲ್ಲಿ ಗೈದ ದಾನವ ವರ್ತನೆಯ ಕರ್ಕಶ ನಿನಾದವು ಇನ್ನು ಮಂದವಾಗಿಲ್ಲ. ವರಂಗೊಳದ ವಿನಾಶದ ಚಿತ್ರವು ಹೃತ್ಪಟಲದ ಮೇಲೆ ಮೂಡಿ ಹೋಗಿದೆ. ರೌದ್ರದಾಮಾ ಜಾಗೃತಾವಸ್ಥೆಯಲ್ಲಿಯೂ ನಿದ್ರಾವಸ್ಥೆಯಲ್ಲಿಯೂ ಈ ಹುಕ್ಕನಿಗೆ ಒಂದೇ ಒಂದು ಧ್ಯೇಯ ಚಿತ್ರವು ಕಾಣುವುದು. ಆ ಚಿತ್ರವೆಂದರೆ ಭಾರತೀಯರ ಕಲ್ಯಾಣ ಚಿಂತನೆಯ ಚಿತ್ರ ಕನ್ನಡ ಮಾತೆಯ ಸೌಭಾಗ್ಯ ಚಿತ್ರ." (ಕಂದಗಲ್ಲ ಹಣಮಂತರಾಯ, 1994 :23)

ಎಂದು ಹೇಳುವುದು, ಆಗಿನ ಸಂದರ್ಭದಲ್ಲಿ ಮೊದಲು ತನ್ನ ನಾಡಾದ ಕರ್ನಾಟಕವನ್ನು ಏಕೀಕರಿಸುವುದು ಆ ಮೂಲಕ ರಾಷ್ಟ್ರವನ್ನು ನಿರ್ಮಾಣ ಮಾಡಿಕೊಳ್ಳುವತ್ತ ಗಮನ ಹರಿಸಲಾಗಿದೆ.

ಈ ನಾಟಕಕಾರರು ಇನ್ನೊಂದು ಮುಖ್ಯ ಸಂಗತಿಯೆಂದರೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದಲ್ಲಿ ಮಲ್ಲಿಕನು ಅಲ್ಲಿಯೇ ಇದ್ದು, ರಾಜನನ್ನು ಹಾರೈಸುವುದು ಮತ್ತು ಅದಕ್ಕೆ ತಮ್ಮ ಪ್ರೋತ್ಸಾಹವಿದೆಯೆಂದು ಎನ್ನುವಂತೆ ಚಿತ್ರಿಸುವ ಹೊಸ ಪ್ರಯೋಗಕ್ಕೆ ಕೈ ಹಾಕಿದ್ದಾರೆ.

ನಾಟಕದಲ್ಲಿ ನಾಡೊಂದನ್ನು ರೂಪಿಸುವ ಕಾರ್ಯ ಕೇವಲ ಪುರುಷರಿಗೆ ಮಾತ್ರ ಸೀಮಿತವಾದದ್ದಲ್ಲ. ಅದರಲ್ಲಿ ಸ್ತ್ರೀಯರ ಪಾತ್ರವೂ ಬಹುಮುಖ್ಯವಾದುದು ಎಂಬುದನ್ನು ನಾಟಕದ ಹಲವು ಸನ್ನಿವೇಶಗಳಲ್ಲಿ ಕಾಣಬಹುದಾಗಿದೆ. ಇಲ್ಲಿ

> "ಈ ಲಲಿತೆಯು ದುಹಿತಾಧರ್ಮವನ್ನು ತಿಳಿದಿರುವಳು. ಹಾಗೇಯೇ ಈ ಲಲಿತೆಗೆ ಪ್ರಜಾಧರ್ಮವೂ ಗೊತ್ತುಂಟು. ಸತೀ ಧರ್ಮವೂ ಗೊತ್ತುಂಟು ಪಿತಾಜೀ! ಈ ತ್ರಿವಿಧ ಧರ್ಮಗಳನ್ನು ನನಗೆ ಪಾಲಿಸಬೇಕಾಗಿದೆ..... ವೀರಕುಮಾರಿಗೆ ಒಪ್ಪುವಂತಹ ಮರಣವನ್ನು ನನಗೆ ಕೊಡಿ. ಆನೆಗುಂದಿಯ ರಾಜಪುತ್ರಿಗೆ ಒಪ್ಪುವಂತಹ ಮರಣವನ್ನು ಕೊಡಿ. ಸಮರದಲ್ಲಿ ಕಾದಿ ಕಾದಿ ಕೊನೆಗೆ ಕಾಳಗದಲ್ಲಿ ಮಡಿಯಲಿಕ್ಕೆ ನನಗೆ ಆಸ್ಪದವನ್ನು ಕೊಡಿ." (ಕಂದಗಲ್ಲ ಹಣಮಂತರಾಯ, 1994:77–78) ಎಂದು ಲಲಿತೆಯು ನುಡಿಯುವ ವೀರತ್ವದ ಮಾತುಗಳು ನಿದರ್ಶನವಾಗಿವೆ.

ಇಡೀ ನಾಟಕದಲ್ಲಿ ವಿದ್ಯಾರಣ್ಯರಿಗೆ ಹೆಚ್ಚಿನ ಪ್ರಾಸಶ್ತ್ಯವನ್ನು ನೀಡಲಾಗಿದೆ. ವಿಜಯನಗರ ಸಾಮ್ರಾಜ್ಯವು ವಿದ್ಯಾರಣ್ಯರ ಕೃಪೆಯಿಂದ ಹುಟ್ಟಿಕೊಂಡಿದೆ ಎನ್ನುವ ಕಾರಣಕ್ಕಾಗಿಯೋ ಏನೋ ನಾಟಕದ ಪ್ರಾರಂಭದಿಂದ ಅಂತ್ಯದವರೆಗೆ ಎಲ್ಲಾ ಅವರ ಅನುಗ್ರಹದಂತೆಯೇ ನಡೆಯುವಂತೆ ನಾಟಕಕಾರು ನೋಡಿಕೊಂಡಿದ್ದಾರೆ. ವಿದ್ಯಾರಣ್ಯರು ಪ್ರತಿಯೊಂದು ಸಂಕಟ ಸಮಯದಲ್ಲಿ ಪವಾಡ ಪುರುಷರಂತೆ ಕಂಡುಬರುತ್ತಾರೆ. ಅವರು ಒಂದು ಸಾಮ್ರಾಜ್ಯಕ್ಕೆ ಆಪದ್ಬಾಂಧವರು ನಿಜ ಆದರೆ ಇಂತಹ ಪವಾಡಗಳನ್ನು ಅವರಿಗಂಟಿಸಿದ್ದು ಎಷ್ಟರ ಮಟ್ಟಿಗೆ ಉಚಿತ ಎನ್ನುವುದನ್ನು ಯೋಚಿಸಬೇಕಾಗಿದೆ.

ಈ ನಾಟಕದಲ್ಲಿ ಆನೆಗುಂದಿ ಕೇವಲ ಸಾಂಕೇತಿಕವಾಗಿರುವಂತೆ ತೋರುತ್ತದೆ. ಉತ್ತರ ಕರ್ನಾಟಕದವರು ಸ್ವಾತಂತ್ರ್ಯದ ಹೋರಾಟ ನಡೆಸಲು, ಕರ್ನಾಟಕದ ಏಕೀಕರಣ ನಡೆಸಲು ವೇದಿಕೆ ಮಾಡಿಕೊಂಡದ್ದು ಹಂಪೆಯನ್ನು 1936ರಲ್ಲಿ (ನಾಟಕವೂ ಅದೇ ವರ್ಷ ರಚಿತಗೊಂಡಿದುದು). ಆಲೂರರ ನೇತೃತ್ವದಲ್ಲಿ ಹಂಪೆಯಲ್ಲಿ ವಿಜಯನಗರ ಮಹೋತ್ಸವ ನಡೆಸಲ್ಪಡುತ್ತದೆ. ಈ ಮಹೋತ್ಸವವು ಒಂದರ್ಥದಲ್ಲಿ ಕನ್ನಡದ ಏಕೀಕರಣಕ್ಕೆ ಪ್ರೇರಣಾರೂಪದಲ್ಲಿ ಕಾರ್ಯ ಮಾಡುತ್ತದೆ ಹಾಗೂ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಈ ಭಾಗದ ಜನಕ್ಕೆ ಪ್ರಚೋದನಾಕಾರಿಯಾದ ರೀತಿಯಲ್ಲಿ ಸೇರಿದ ಹಲವಾರು ವಿದ್ವಾಂಸರು ಭಾಷಣಗಳನ್ನು ಮಾಡುತ್ತಾರೆ. ವಸ್ತುವಾಗಿರಿಸಿಕೊಂಡು ಭಾಷೆ, ನಾಡು, ರಾಷ್ಟ್ರಗಳ ಕುರಿತು ಹೊಸ ಚಿಂತನೆಗಳು ಪ್ರಾರಂಭವಾಗಿದ್ದು ಆ ಕಾಲದಿಂದಲೇ. ನಾಟಕಕಾರ ಕಂದಗಲ್ಲರ ಮೇಲೆ ವಿಜಯನಗರ ಮಹೋತ್ಸವದ (1936) ಪ್ರಭಾವವಾಗಿರುವ ಸಾಧ್ಯತೆಗಳೂ ಹೆಚ್ಚಿವೆ.

**ಶ್ರೀವಿದ್ಯಾರಣ್ಯ ವಿಜಯ :(1941)**

ಡಿ.ವಿ.ಜಿ.ಯವರ ಈ ನಾಟಕ ರೂಪಕ ಛಾಯೆಯನ್ನು ಒಳಗೊಂಡಿದೆ. ನಾಟಕದ ತುಂಬೆಲ್ಲಾ ಸಂಸ್ಕೃತದ ಸು.120ಕ್ಕೂ ಹೆಚ್ಚು ಪದ್ಯಗಳೇ ವಿಜೃಂಭಿಸಿವೆ. ನಾಟಕದ ಕೊನೆಯ ಭಾಗದ ಅನುಬಂಧದಲ್ಲಿ ಸಂಸ್ಕೃತ ಪದ್ಯಗಳಿಗೆ ಅರ್ಥಗಳನ್ನು ಕೊಡಲಾಗಿದೆ. ನಾಟಕದೊಳಗಿನ ಪಾತ್ರಗಳು ಹೆಚ್ಚಾಗಿ ವೈಷ್ಣವ ಮತಾವಲಂಬನೆಗೆ ಒಳಗಾದವುಗಳೇ ಆಗಿವೆ. ಹರಿಹರ, ಬುಕ್ಕರಂತಹ ಪಾತ್ರಗಳು ಕೆಳದರ್ಜೆಗೆ ಸೇರಿದ ಪಾತ್ರಗಳಂತಿವೆ. ಅವುಗಳು ಬ್ರಾಹ್ಮಣ ಪಾತ್ರಗಳು ನಡೆಸಿದಂತೆ ನಡೆಯುವ ಸೂತ್ರದ ಗೊಂಬೆಗಳು.

ನಾಟಕದ ಬಹುಭಾಗ ನಡೆಯುವುದು ವಿದ್ಯಾರಣ್ಯರ (ಮಾರುಣ ಮಾಧವ) ಮಾರ್ಗದರ್ಶನದಲ್ಲಿ. ವಿಜಯನಗರ (ವಿದ್ಯಾನಗರ) ಸ್ಥಾಪನೆಯಾದ ವಿಚಾರವನ್ನು ನಾಟಕ ತಿಳಿಸುತ್ತದೆ. ಹಾಗೇ ಅದಕ್ಕೆ ಪೂರ್ವದಲ್ಲಿ ಹಕ್ಕಬುಕ್ಕರು ಆಶ್ರಯ ಪಡೆದ ಆನೆಗೊಂದಿ ಸಂಸ್ಥಾನದ ಸ್ಥಿತಿಗತಿಗಳು, ಆ ಸಂಸ್ಥಾನದಲ್ಲಿ ಸಹೋದರರೀರ್ವರು ನಡೆಸಿದ ಕಾರ್ಯದ ವಿವರಗಳು ಬರುತ್ತವೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಯಾವ ರೀತಿಯ ಭೂಮಿಕೆಯಂತಾಯಿತೆಂಬುದನ್ನು ತಿಳಿಸುವುದೇ ನಾಟಕದ ಉದ್ದೇಶ. ಹಿಂದೂ ವೈರಿಗಳಾದ ಮುಸ್ಲಿಂ ಅರಸರು (ತುರಷ್ಕರು). ಚೀನ ಹಾಗೂ ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗುತ್ತಿರುವುದೂ ದಕ್ಷಿಣ ಭಾರತದತ್ತ ಅವರ ಗಮನ ಕಡಿಮೆಯಾಗಿರುವುದಾಗಿಯೂ, ಅದೇ ಸಂದರ್ಭವೇ ಸೂಕ್ತವೆಂದು ವಿಜಯನಗರ ಸ್ಥಾಪನೆಗೆ ಕಾರಣೀಕರ್ತರಾಗುತ್ತಾರೆ. ನಾಟಕದಲ್ಲಿ ಬ್ರಾಹ್ಮಣ, ಹಿಂದೂ ಎಂಬ ಪದಗಳು ಮತ್ತೆ ಮತ್ತೆ ಬರುತ್ತವೆ. ಬ್ರಾಹ್ಮಣ್ಯರ ರಾಷ್ಟ್ರೀಕರಣವು, ಅಂದರೆ ಧರ್ಮದ ರಾಷ್ಟ್ರೀಕರಣವಾಗಬೇಕಾದರೆ ವಿಜಯನಗರ ಸ್ಥಾಪನೆ ಅವಶ್ಯಕ ಎನ್ನುವ ಮಾತುಗಳು ನಾಟಕದಲ್ಲಿ ಕಾಣಿಸುತ್ತವೆ. ನಾಟಕದಲ್ಲಿ ತುಂಬಾ ಶೌರ್ಯದಿಂದ ಮೆರೆದಾಡಿದ ಹರಿಹರರಾಯನಿಗೂ ದುಃಖವೆಂಬುದು ತಪ್ಪಿದ್ದಲ್ಲ ಎನ್ನುವುದನ್ನು ಅವನ ಮಗ ಸೋಮಪ್ಪನ ಸಾವಿನ ಮೂಲಕ ಲೇಖಕರು ತಿಳಿಸಿದ್ದಾರೆ. ಅಷ್ಟೇ ಅಲ್ಲ. ಯಾರು ಎಷ್ಟೇ ಹೋರಾಟ ಮಾಡಲಿ, ಅವರೂ ಒಂದು ದಿನ ಕೊನೆಯಾಗಲೇ ಬೇಕು ಎಂಬ ಸಂದೇಶವನ್ನು ಹರಿಹರನ ಸಾವಿನ ಮೂಲಕ ತಿಳಿಸಿದ್ದಾರೆ. ಹರಿಹರನ ಸಾವಿನ ನಂತರ ವಿದ್ಯಾರಣ್ಯರ ಅಣತಿಯಂತೆ ಬುಕ್ಕರಾಯನು ಅಧಿಕಾರ ವಹಿಸಿಕೊಳ್ಳುತ್ತಾನೆ.

ಇಲ್ಲಿ ಹರಿಹರನಾಗಲಿ, ಬುಕ್ಕನಾಗಲಿ, ಗುರು ದೈವ ಪ್ರೇರಣೆಯಿಂದ ಮಾತ್ರ ನಡೆಯುವವರು ಇದಕ್ಕೆ ವಿದ್ವಾಂಸರೂ ಹೊರತಲ್ಲ. ಭುವನೇಶ್ವರಿ ತಾಯಿಯ ಅನಾದಿಯಂತೆ ಅವರು ಮುಂದುವರೆಯುವವರು. ದೈವ ಶಕ್ತಿಯಿಂದಲೇ ಪ್ರತಿಯೊಂದು ಕಾರ್ಯವೂ, ಸೋಲು-ಗೆಲವು, ಸಂತೋಷ-ದುಃಖ, ಸಾವು-ನೋವು ನಡೆಯುತ್ತದೆ ಎಂಬುದನ್ನು ಲೇಖಕರು ನಾಟಕದಲ್ಲಿ ವ್ಯಕ್ತಪಡಿಸಿದ್ದಾರೆ.

ನಾಟಕ ವಿಜಯನಗರದ ಸ್ಥಾಪನೆಯೊಂದನ್ನೇ ತಿಳಿಸುವುದಿಲ್ಲ. ಅದರೊಳಗೆ ಆಧ್ಯಾತ್ಮಿಕವಾದ ವಿಚಾರಗಳೂ ಬರುತ್ತವೆ. ಅದರ ಉದ್ದೇಶ, ರಾಷ್ಟ್ರದ ರಾಷ್ಟ್ರೀಕರಣ

ವಿಚಾರವನ್ನು ಪ್ರೇಕ್ಷಕ ಓದುಗರಿಗೆ ತಿಳಿಸಿ ಅವರನ್ನು ಬಡಿದೆಚ್ಚರಿಸುವುದೇ ಆಗಿದೆ. ಲೇಖಕ ಎಷ್ಟೋ ಪ್ರಜ್ಞಾಪೂರ್ವಕವಾಗಿ ನಾಟಕದ ಪಾತ್ರ ಸನ್ನಿವೇಶಗಳನ್ನು ಸೃಷ್ಟಿಸಿದರೂ ಆತನ ಪರಿಸರ ಮಾತ್ರ ಆತನನ್ನು ಬೆನ್ನು ಬಿಡುವುದಿಲ್ಲ. ಅವನಿಗೆ ತಿಳಿಯದಂತೆಯೇ ಆತನು ಜೀವಿಸಿದ ಪರಿಸರ ನಾಟಕದೊಳಗೆ ನುಸುಳಿ ಬಿಡುತ್ತದೆ. ಈ ನಾಟಕಗಳಲ್ಲಿಯೂ ಅದೇ ಬಗೆಯ ಅಂಶಗಳು ಕಾಣಿಸಿಕೊಳ್ಳುತ್ತವೆ.

ಡಿ.ವಿ.ಜಿ.ಯವರು ಈ ನಾಟಕದಲ್ಲಿ ಹಿಂದೂ ಧರ್ಮದ ಅಭ್ಯುದಯವೇ ಮುಖ್ಯವಾದುದು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಆಂದೋಲನ ಹಾಗೂ ಭಾರತದ ಪುನರುಜ್ಜೀವನ ಸಂದರ್ಭದಲ್ಲಿ 'ಶ್ರೀವಿದ್ಯಾರಣ್ಯ ವಿಜಯ' ನಾಟಕ ರೂಪುಗೊಂಡಿದೆ. ಆ ಸಮಯದಲ್ಲಿ ಡಿ.ವಿ.ಜಿಯವರಿಗೆ ರಾಷ್ಟ್ರೀಯ ವಿಚಾರಧಾರೆಗಳು ಮುಖ್ಯವಾದರೂ, ಕನ್ನಡತ್ವದ ಕಲ್ಪನೆಗಿಂತ ಮುಖ್ಯವಾಗಿ ಕಾಡಿದ್ದು ಹಿಂದೂತ್ವದ ಹುಡುಕಾಟ. ಅವರು ಏಕೀಕರಣವನ್ನು ಕುರಿತು ನೇರವಾಗಿ ಹೇಳುವುದಿಲ್ಲ. ಆದರೆ ಪರೋಕ್ಷವಾಗಿ ಆ ವಿಚಾರಗಳು ಇಲ್ಲಿ ವ್ಯಕ್ತಗೊಂಡಿವೆ. ದೇವಿ ಪ್ರತ್ಯಕ್ಷಳಾಗಿ ತಾಯಿಯ ರೂಪದಲ್ಲಿ ಮಾದವ(ವಿದ್ಯಾರಣ್ಯ)ರಿಗೆ ಹೇಳಿಸುವ ಮಾತುಗಳು ಪರಕೀಯರ ಅಧೀನದಲ್ಲಿದ್ದ ತಾಯಿಯನ್ನು(ನಾಡನ್ನು) ಸ್ವತಂತ್ರಗೊಳಿಸಿಕೊಳ್ಳಬೇಕಾಗಿದೆ. ಆ ಮೂಲಕ ಈ ಮಾತೃ ನೆಲದ ರಕ್ಷಣೆ ಸಾಧ್ಯ. ಇಲ್ಲದಿದ್ದರೆ ಹೆತ್ತ ತಾಯಿ ಅರೆ ಬೆತ್ತಲೆಯಾಗಿದ್ದಂತೆ ನಮ್ಮ ಮಾತೃ ದೇವಿಯ ಸ್ಥಿತಿ ಎನ್ನುವಂತಹ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ತಾಯಿ ಮಗುವಿಗೆ ಜನ್ಮ ನೀಡುವುದರಲ್ಲಿ ವಂಶವಾಹಿನಿಯ ಮುಂದುವರಿಕೆನ್ನಷ್ಟೆ ಅಲ್ಲ. ಅಲ್ಲಿ ಹೆತ್ತವಳ(ಮಾತೃ ನೆಲದ) ರಕ್ಷಣೆ ಅನ್ನುವುದು ಕೂಡ ಅಲ್ಲಿ ಮುಖ್ಯ. ಅದು ಜನ್ಮಪಡೆದ ಮಕ್ಕಳ ಕರ್ತವ್ಯವೂ ಹೌದು. ನಮ್ಮ ಮೇಲಿನ ಈ ಕರ್ತವ್ಯವನ್ನು ನಾವು ನಿರ್ವಹಿಸಿದಾಗ ಮಾತ್ರ ನಾವು ನಮ್ಮ ಹಕ್ಕನ್ನು ಪಡೆದುಕೊಳ್ಳಬಲ್ಲೆವು ಎನ್ನುವ ಅಂಶ ಇಲ್ಲಿ ಅಭಿವ್ಯಕ್ತಗೊಂಡಿದೆ.

ಕರ್ತವ್ಯ ಮುಖ್ಯ ಎಂಬ ಮಾತಿಗನುಗುಣವಾಗಿ "ಇಂದಿನಿಂದ ನನ್ನ ಮನೋವಾಕ್ಕಾಯಗಳು ನಿನಗೆ ಮೀಸಲಾದವು. ನಾನು ಓದಿದ ಓದು ನಿನಗೆ ಮೀಸಲಾದುದು. ನನ್ನ ಸಕಲ ಸಂಪತ್ತೂ ಅದೇನಿದ್ದರೂ ನಿನ್ನಪಾದಕ್ಕೆ ಕಾಣಿಕೆಯಾದುದು...." (ಸಂ:ಹಾ.ಮಾ.ನಾಯಕ, 1992:243) ನಾಡು, ದೇಶಕ್ಕಾಗಿ ನನ್ನ ಜೀವನ ಮೀಸಲು ಎಂದಿರುವುದು, ವಾಸ್ತವದ ಕನ್ನಡ ನಾಡನ್ನು ಮತ್ತು ಭಾರತಾಂಬೆಯನ್ನು ನಾವು ಕಾಪಾಡಲು ಪಣತೊಟ್ಟು ನಿಲ್ಲಬೇಕೆಂಬುದಕ್ಕೆ ಪ್ರೋತ್ಸಾಹದಾಯಕವಾಗಿವೆ.

ಹಾಗೆಯೇ ಕೇವಲ ದೇಶವನ್ನು ಕಾಪಾಡುವುದು ಮುಖ್ಯವಲ್ಲ. ಅಲ್ಲಿ ಧರ್ಮದ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂಬುದು ಡಿ.ವಿ.ಜಿ.ಯವರ ಹಂಬಲ. ಮುಸ್ಲಿಮರ ದಾಳಿಯಿಂದ ಆಗಬಹುದಾದ ಧಾರ್ಮಿಕ ಪರಿಣಾಮಗಳನ್ನು ಅವರು

"ತುರುಷ್ಕರ ಸುದ್ದಿ ನಿಮಗೆ ತಿಳಿಯದು. ಅಯ್ಯೋ ಮೂರ್ಖರೇ, ಅವರು ಧನಲೋಭ, ರಾಜ್ಯಲೋಭಗಳಿಂದ ಮಾತ್ರವೇ ಬರತಕ್ಕವರಲ್ಲ. ವೇದ ಶಾಸ್ತ್ರಗಳನ್ನು

ನಿರ್ನಾಮ ಮಾಡಬೇಕೆಂಬುದೇ ಅವರ ಪ್ರತಿಜ್ಞೆ, ಇದಕ್ಕಾಗಿ ಅವರು ಎಷ್ಟೋ ಹಳ್ಳಿ, ಪಟ್ಟಣಗಳನ್ನು ಕೊಳ್ಳೆ ಹೊಡೆದು, ಮಠ ಮಂದಿರಗಳನ್ನು ಧ್ವಂಸ ಮಾಡಿ, ಸ್ತ್ರೀ ಶಿಶುಗಳನ್ನು ಕೊಂದು, ಜಾತಿ ನೀತಿಗಳನ್ನು ಹಾಳು ಮಾಡಿದವರೆಂದು ನೀವು ಕೇಳಿಲ್ಲವೆ? ಅವರು ಋಷಿ ಮತಕ್ಕೆ ರಾಕ್ಷಸ ಸ್ವರೂಪರು; ಶ್ರುತಿ ಸ್ಮೃತಿಗಳಿಗೆ ಮೃತ್ಯು ಪ್ರಾಯರು ನಾವು ಅವರನ್ನಿದುರಿಸಿ ನಿಂತು, ಧೈರ್ಯದಿಂದ ಕಾದಿ, ದಿವ್ಯದೇಶವನ್ನು ಕಾಪಾಡಿದರೆ ಆಗ ನಮ್ಮ ಭಕ್ತಿ ನಿಜವೆನಿಸುವುದು." (ಸಂ:ಹಾ.ಮಾ.ನಾಯಕ, 1992:240)

ಅಂದಿನ ಸಂದರ್ಭದಲ್ಲಿ ಮುಸ್ಲಿಮರೆಂದರೆ ಇಂತಹದೇ ಕೆಲಸಗಳನ್ನು ಮಾಡುತ್ತಿದ್ದರು, ಅವರು ದುಷ್ಕೃತ್ಯಕ್ಕೆ ಮುಂದಿರುವಂತವರು, ಅದಕ್ಕಾಗಿ ನಾವು ಮುಖ್ಯವಾಗಿ ಕಾಪಾಡಿಕೊಳ್ಳಬೇಕಾದದ್ದು ಧರ್ಮ. ಏಕೆಂದರೆ "ಧರ್ಮೋ ರಕ್ಷತಿ ರಕ್ಷಿತಾ" ಎನ್ನುವಂತೆ ನಾವು ಧರ್ಮವನ್ನು ಕಾಪಾಡಿದರೆ, ಅದು ನಮ್ಮನ್ನು ಕಾಯಬಲ್ಲದು ಎನ್ನುವ ಅಂಶ ಇಲ್ಲಿ ಗೋಚರವಾಗುತ್ತದೆ. ಮೊದಲು ಧರ್ಮ ಆನಂತರ ರಾಜ್ಯ ಅಥವಾ ದೇಶ. ಅದಕ್ಕಾಗಿ ಧರ್ಮದ ರಕ್ಷಣೆಯೇ ನಮ್ಮ ಮುಖ್ಯ ಧ್ಯೇಯ. ಆ ಧ್ಯೇಯದೊಂದಿಗೆ ನಾವು ಮುನ್ನುಗ್ಗಬೇಕು. ಅಂದರೆ ಧರ್ಮಕ್ಕೆ ಯಾರಿಂದ ಆಪತ್ತು ಬರಲಿದೆಯೋ ಅವರನ್ನು ಎದುರಿಸಿ ನಿಲ್ಲಬೇಕು. ಆಗ ಮಾತ್ರ ನಾವು ಧರ್ಮವನ್ನು ಕಾಪಾಡಿಕೊಳ್ಳುವುದರ ಜೊತೆಗೆ ನಮ್ಮತನವನ್ನು ಉಳಿಸಿಕೊಳ್ಳಬಹುದು. ಹಾಗೂ ಪಾರಂಪರಿಕವಾಗಿ ಬಂದ ಸನಾತನದ ಹೆಗ್ಗುರುತನ್ನು ಮುಂದುವರಿಸಬಹುದು. ಎನ್ನುವ ಅಂಶಗಳ ಕಡೆಗೆ ಗಮನ ಹರಿಸಿದ್ದಾರೆ.

ಹಾಗೆಯೇ ಮುಂದುವರಿದು ವೈದಿಕ ಧರ್ಮದ ಒಳಗಡೆ ಇರುವ ಭಿನ್ನಾಭಿಪ್ರಾಯಗಳು ಹಾಗೂ ಪ್ರಾದೇಶಿಕವಾಗಿರುವ ತರತಮಭಾವನೆಗಳನ್ನು ಅನ್ಯರ ಆಕ್ರಮಣದ ಸಂದರ್ಭಲ್ಲಿ ಬದಿಗೊತ್ತಿ ಒಗ್ಗೂಡುವುದು ಅತ್ಯಗತ್ಯ.

"ನಿಮ್ಮ ನಿಮ್ಮ ಮಿತ್ರವರ್ಗಗಳನ್ನೂ ಬಂಧುವರ್ಗಗಳನ್ನೂ ಹುರಿದುಂಬಿಸಿ ಕ್ಷೇತ್ರ ರಕ್ಷಣೆಗೆ ನಿಲ್ಲಿಸಿರಿ. ತೆಂಕಲೆ ವಡಗಲೆ ವಿವಾದಗಳನ್ನೂ ಶೈವ ವೈಷ್ಣವ ವಿವಾದಗಳನ್ನು ಮರೆತು ವೇದ ಧರ್ಮ ಒಂದರ ಮೇಲೆಯೇ ದೃಷ್ಟಿಯನ್ನಿಡಬೇಕಾದ ಕಾಲವಿದು. ಕಾದಿ ಬದುಕಿದರೆ ರಂಗಧಾಮ ಸುಖವು ಪುನಃ ಇಹದಲ್ಲಿಯೇ ಸಿದ್ಧವಾಗಿರುವುದು; ಮಡಿದರಂತೂ ಆ ಸುಖವು ಅಪರಿಮಿತವಾಗಿ ಶಾಶ್ವತವಾಗಿ ದೊರೆಯುವುದು. ಇವೆರಡೂ ಬೇಡವೆಂದು ದೂರ ನಿಂತವರು ಧರ್ಮಭ್ರಷ್ಟರಾಗಿ, ದುಷ್ಟಹತರಾಗಿ, ಅಧೋಲೋಕಗಳಿಗೆ ಬೀಳುವುದು ಖಂಡಿತ" (ಸಂ:ಹಾ.ಮಾ.ನಾಯಕ, 1992:240)

ಅಂದಿನ ಸಂದರ್ಭದಲ್ಲಿ ಶೈವರು, ವೈಷ್ಣರು ಎನ್ನುವ ಭೇದಗಳು ತೀವ್ರವಾಗಿದ್ದಿತೆಂಬ ಅಂಶ ಸ್ಪಷ್ಟವಾಗುತ್ತದೆ.

"ದಿವ್ಯ ಕ್ಷೇತ್ರ ರಕ್ಷಣೆಗಾಗಿ ದೇಹವನ್ನರ್ಪಿಸಬಲ್ಲವರು ಹನ್ನೆರಡು ಸಹಸ್ರ ಮಂದಿ ಇರುವರು. ವೇದಾಂತ ಗುರುವೆಂಬ ಹೆಸರನ್ನು ಸಾರ್ಥಕಗೊಳಿಸಬಲ್ಲವರು ಮಾತ್ರ ಅಷ್ಟು ಮಂದಿಯೊಳಗೆ ತಮ್ಮ ವಿನಾ ಬೇರೊಬ್ಬರಿಲ್ಲ. ವ್ಯಾಕರಣಾದಿ ಶಾಸ್ತ್ರಗಳ ಪಾರವನ್ನು ಕಂಡ ಪಂಡಿತರು ಲೋಕದಲ್ಲಿ ಎಷ್ಟೋ ಮಂದಿ ಇರಬಹುದು; ಗುರುಪರಂಪರಾಗತಗಳಾದ ಗೂಢಾರ್ಥಗಳನ್ನು ತಿಳಿದು ಅನುಸಂಧಾನ ಮಾಡಿರತಕ್ಕವರು ಮಾತ್ರ ಅತಿ ವಿರಳರೆಂಬುದು ತಮಗೆ ತಿಳಿಯದ ವಿಷಯವಲ್ಲ."

(ಸಂ:ಹಾ.ಮಾ.ನಾಯಕ, 1992:255)

ಒಂದು ನಾಡಿನ ಸಂಸ್ಕೃತಿಯ ಮುಂದುವರಿಕೆಗೆ ಆ ನಾಡಿನಲ್ಲಿ ರಚಿತವಾದ ಧರ್ಮ ಗ್ರಂಥಗಳು, ವ್ಯಾಕರಣ ಶಾಸ್ತ್ರಗಳು ಬಹುಮುಖ್ಯವಾದವು. ಅವುಗಳನ್ನು ಉಳಿಸುವುದಷ್ಟೇ ಅಲ್ಲಿ ಮುಖ್ಯ ಅಲ್ಲ, ಅದನ್ನು ಮುಂದಿನ ತಲೆಮಾರಿಗೆ ಸಾಗಿಸುವವರನ್ನೂ ರಕ್ಷಿಸಬೇಕು. ವೈದಿಕರನ್ನು ಕಾಪಾಡುವ ಮೂಲಕ ಧರ್ಮವನ್ನು ಕಾಪಾಡುವ ಹಾಗೂ ಅನ್ಯರಿಂದ ಆಪತ್ತಿಗೀಡಾಗುವ ಧರ್ಮದ ಅನನ್ಯತೆಯನ್ನು ಕಾಯುವ ಕೆಲಸ ಮಾಡಬೇಕಾಗಿದೆ. ಅಂತಹ ಕೆಲಸವನ್ನು ವಿದ್ಯಾರಣ್ಯರು ಮಾಡಿದ್ದಾರೆ. ಅಂದರೆ ವಿಜಯನಗರ ಸ್ಥಾಪನೆಯು ನಾಟಕಕಾರರ ದೃಷ್ಟಿಯಲ್ಲಿ ಮುಖ್ಯವಾಗಿ ವೈದಿಕ ಧರ್ಮದ ರಕ್ಷಣೆಯ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತು ಹುಟ್ಟಿಕೊಂಡದ್ದು ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ.

ವಿಜಯನಗರವನ್ನು ಸ್ಥಾಪಿಸಿದ ಹರಿಹರ ಬುಕ್ಕರು ಕೇವಲ ನೇಪ ಮಾತ್ರರು. ಅಲ್ಲಿ ವಿದ್ಯಾರಣ್ಯರೇ ಅಂದರೆ ದೈವಿ ಶಕ್ತಿಯೇ ಅಗಾಧವಾದ ಕೆಲಸ ಮಾಡಿದೆ ಎನ್ನುವುದು ನಾಟಕಕಾರರ ಅನಿಸಿಕೆ. ಏಕೆಂದರೆ ವಿದ್ಯಾರಣ್ಯರ ಮೂಲಕ ಹರಿಹರನಿಗೆ ಹೇಳಿಸುವ ಪ್ರತಿಯೊಂದು ಮಾತುಗಳೂ ಇದನ್ನೇ ಧ್ವನಿಸುತ್ತವೆ. ಹಾಗೆಯೇ ಹರಿಹರನು ವಿದ್ಯಾರಣ್ಯರು ಹೇಳುವ ಪ್ರತಿಯೊಂದು ಮಾತನ್ನೂ ಮೀರದೆ "ಗುರುವೇ ನಾನು ತಮ್ಮ ಕೈಯಲ್ಲಿರುವ ಕೋಲು, ಅದನ್ನುಪಯೋಗಿಸಿ ಕಾರ್ಯಸಾಧನೆ ಮಾಡುವ ಭಾರವು ನಮ್ಮನೇ ಸೇರಿದೆ."( ಸಂ:ಹಾ.ಮಾ.ನಾಯಕ, ಪು.284) ಎನ್ನುವ ಮಾತುಗಳು ಇದಕ್ಕೆ ನಿದರ್ಶನವಾಗಿವೆ.

ಮೇಲಿಂದ ಮೇಲೆ ಹರಿಹರನಿಗೆ ವಿದ್ಯಾರಣ್ಯರು ನೀಡುವ ಸೂಚನೆ ಮತ್ತು ಮುಂದೆ ಮಾಡಬೇಕಾದ ಕಾರ್ಯಗಳು ಯಾವುವು ಎನ್ನುವುದನ್ನು ಅವರು ಧರ್ಮೋಪದೇಶದ ಮೂಲಕ ಪ್ರೇರೇಪಿಸುತ್ತಾರೆ. ಧರ್ಮ ಸಂರಕ್ಷಣೆಯೇ ನಿನ್ನ ಮುಖ್ಯ ಉದ್ದೇಶವೆಂದು ತಿಳಿದು ನೀನು ನಡೆದರೆ, ಮುಂದೆ ಧರ್ಮ ನಿನ್ನನ್ನು ರಕ್ಷಿಸಬಲ್ಲದು ಎನ್ನುತ್ತಾರೆ. ಶತ್ರುಗಳು ಮದಿಸಿ ಮೈಮರೆತು ಹೊರಟಿರುವಾಗಲೇ ನಾವು ನಮ್ಮದನ್ನು ಕಾಪಾಡಿಕೊಳ್ಳಬೇಕು. ಅಂದರೆ ಬಹುಶಃ ಈ ನಾಟಕ ರಚನೆಯ ಸಂದರ್ಭಕ್ಕಾಗಲೇ ಬ್ರಿಟಿಷರ ಅಟ್ಟಹಾಸ ದೇಶದಲ್ಲಿ ಮಿತಿ ಮೀತಿ ಹೋಗಿತ್ತು. ಅದನ್ನು ತಡೆಯಲು ಅಂದಿನ ಯುವ ಜನತೆಯನ್ನು ಪ್ರೇರೇಪಿಸುವ ಕೆಲಸವನ್ನು ಇಂತಹ ಸಾಹಿತ್ಯ ಕೃತಿಗಳು ಮಾಡುತ್ತಿದ್ದವು. ಅದಕ್ಕಾಗಿಯೇ ವಿದ್ಯಾರಣ್ಯರ ಮೂಲಕ ಹರಿಹರನಿಗೆ ಹೇಳಿದ ಮಾತು ಅಂದರೆ ದೇಶವನ್ನು ರಕ್ಷಿಸಲು ನೀನಗೆ ಧೈರ್ಯವಿದೆಯೋ?

ಧರ್ಮಾಭಿಮಾನವಿದೆಯೆ? ಕುಲಗೌರವ ಸ್ಮರಣೆಯಿದೆಯೆ? ಎನ್ನುವ ಮಾತುಗಳು ಯಾವ ನಿಟ್ಟಿನಲ್ಲಾದರೂ ನೀನು ದೇಶ ರಕ್ಷಣೆಗೆ ಸಿದ್ಧನಾಗು ಎನ್ನುವುದನ್ನು ಸೂಚಿಸಿದಂತಿವೆ.

ವಿಜಯನಗರ ಸಾಮ್ರಾಜ್ಯವನ್ನು ವಿದ್ಯಾರಣ್ಯರು ಹಿಂದೂ ಧರ್ಮದ ರಕ್ಷಣೆಗಾಗಿ ಸ್ಥಾಪಿಸಿದರು. ಅದನ್ನು ಕಾಪಾಡಿಕೊಳ್ಳಬೇಕಾದುದು ನಮ್ಮ ಜವಾಬ್ದಾರಿ ಎನ್ನುವ ನಾಟಕಕಾರರು. ಹಿಂದೂಗಳ ಧಾರ್ಮಿಕ ವಿಚಾರಗಳಿಗೆ ಧಕ್ಕೆಯಾಗದಂತೆ ಬೇರಾವ ಧರ್ಮ ನಡೆದುಕೊಂಡರೂ ಸರಿ. ಅದನ್ನು ನಾವು ಸಹಿಸಿಕೊಳ್ಳೋಣ. ಆದರೆ ನಮ್ಮ ಧರ್ಮದ ಮೇಲೆ ಅಂದರೆ ನಮ್ಮ ಧಾರ್ಮಿಕ ಅನನ್ಯತೆಗೆ ಯಾವ ಧರ್ಮದಿಂದ ಪೆಟ್ಟು ಬೀಳುತ್ತದೆಯೋ ಅದನ್ನು ಮಾತ್ರ ನಾವು ಆಲಂಗಿಸಿಕೊಳ್ಳಬಾರದು ಎನ್ನುವ ವಿಚಾರಗಳನ್ನು ಇಲ್ಲಿ ಹರಿಯ ಬಿಟ್ಟಿದ್ದಾರೆ. ಯಾವ ನಾಡು ಮುಸಲ್ಮಾನರ ಆಕ್ರಮಣದಿಂದ ನಾಶ ಹೊಂದಿತೋ ಅಲ್ಲಿಯೇ ಆ ಧರ್ಮದ ವಿರುದ್ಧದ ನಾಡೊಂದನ್ನು ಕಟ್ಟಿಕೊಳ್ಳಬೇಕಾದ ಸ್ಥಿತಿಯಲ್ಲಿರುವುದರಿಂದ ಎಲ್ಲರ ಸಹಕಾರ ಅಗತ್ಯ ಎನ್ನುವುದನ್ನು ನಾಟಕಕಾರರು ಮನಗಂಡಿದ್ದಾರೆ. ಅದಕ್ಕಾಗಿ ಅವರು ವಾಸ್ತವದ ಸಂದರ್ಭಲ್ಲಿ ಹಿಂದೂ ಮುಸ್ಲಿಮರಲ್ಲಿ ಒಡಕುಂಟಾಗಿ ಮತ್ತೊಂದು ಬಗೆಯಲ್ಲಿ ಬ್ರಿಟಿಷರಿಗೆ ಅನುಕೂಲಕರ ವಾತಾವರಣವು ಉಂಟಾಗಬಹುದಾದ ಸಾಧ್ಯತೆಗಳಿವೆ ಎನ್ನುವ ಆತಂಕ ಅವರನ್ನು ಕಾಡಿದೆ. ಆದುದರಿಂದ ಅವರು–

> "ಆಗಿನ ಮುಸಲ್ಮಾನರು ಈ ದೇಶವನ್ನು ಹಾಳು ಮಾಡಿ ಇಲ್ಲಿ ಸೂರೆ ಮಾಡಿದ ಸಂಪತ್ತನ್ನು ದೇಶಾಂತರಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದರು. ಈಗಿನವರು ಇಲ್ಲಿಯೇ ನಮ್ಮವರಾಗಿ ನೆಲೆಸಿ ನಮ್ಮ ಸುಖ ದುಃಖಗಳಲ್ಲಿ ಭಾಗಿಗಳಾಗಿರುವರು. ಹಿಂದಿನವರು ಹಿಂದೂ ಧರ್ಮಕ್ಕೆ ಶತ್ರುಗಳಾಗಿದ್ದರು; ಈಗಿನವರು ಮರ್ಯಾದೆ ಮೀರದೆ ನಡೆದುಕೊಳ್ಳುತ್ತಿರುವರು....... ನಮ್ಮ ಪರಮೋದ್ದೇಶವೇನು? ಹಿಂದೂ ಧರ್ಮದ ಕ್ಷೇಮ, ಹಿಂದೂ ಜನರ ಅಭ್ಯುದಯ– ಅಷ್ಟೇ ಅಲ್ಲವೆ? ನಮ್ಮ ಆಶಯವು ಧರ್ಮನಾಶವಲ್ಲ, ಪರಜನ ಪೀಡೆಯಲ್ಲ. ನಮ್ಮವರಿಗೆ ಯಾವ ಬಾಧೆಯೂ ಆಗದಂತೆ ಮುಸಲ್ಮಾನರು ಬಾಳುವುದಾದರೆ ನಾವು ಏಕೆ ಅವರೊಡನೆ ಕದನವನ್ನು ಹೂಡಿ, ಲೋಕಸಂಕ್ಷೋಭೆಯನ್ನು ಮಾಡಿ, ಬಹುಜನ ವಿನಾಶಕ್ಕೂ ಜನಪದ ದ್ವೇಷಕ್ಕೂ ಕಾರಣರಾಗಬೇಕು? ನಮ್ಮ ರಾಜ್ಯ ವಿಸ್ತರಣೆಯು ಧರ್ಮಕ್ಕೆ ವಿರುದ್ಧವಾಗದೆ ಇರಬೇಕು." (ಸಂ:ಹಾ.ಮಾ.ನಾಯಕ, 1992:315)

1686ರ ವೇಳೆಗೆ ಮೈಸೂರು ಮಿಷನ್ನಿನ ಎಂಟು ಕೇಂದ್ರಗಳು ಸ್ಥಾಪನೆಯಾಗಿ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯ ಭರದಿಂದ ಸಾಗಿತ್ತು. ಆ ಕಾಲಕ್ಕಾಗಲೇ ಈ ಎಂಟು ಕೇಂದ್ರಗಳ ವ್ಯಾಪ್ತಿಯಲ್ಲಿ 30,000 ಜನ ಕ್ರೈಸ್ತರಿದ್ದಂತೆ ಬಿ.ಎಸ್. ತಲ್ವಾಡಿಯವರು ತಮ್ಮ 'ಕರ್ನಾಟಕ ಕ್ರೈಸ್ತರ ಇತಿಹಾಸ' ಎನ್ನುವ ಕೃತಿಯಲ್ಲಿ ದಾಖಲಿಸುತ್ತಾರೆ. ಆ ಸಂದರ್ಭದಲ್ಲಿ ಇಷ್ಟು ಜನ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರಬೇಕಾದರೆ 20ನೆಯ ಶತಮಾನದ ಆರಂಭದಲ್ಲಿ ಬಹುಶಃ ಮೈಸೂರು ಭಾಗದಲ್ಲಿ ಈ ಸಂಖ್ಯೆ ದ್ವಿಗುಣಗೊಂಡಿರಬೇಕು. ಅಲ್ಲದೆ ಮೈಸೂರು ಮಹಾರಾಜರು

ಸಹ ಸ್ವಾಮಿ ಚಿನ್ನಾಮಿಯಂತಹ ಕ್ರೈಸ್ತ ಮತ ಪ್ರಚಾರಕನಿಗೆ ಅನುಮತಿ ಪತ್ರವನ್ನು ಸಹ ಕೊಟ್ಟಿದ್ದರು. ಮೈಸೂರು ಸಂಸ್ಥಾನದ ಅಭಿವೃದ್ಧಿ ಹಾಗೂ ಹಿಂದೂ ಧರ್ಮದ ರಕ್ಷಣೆಯ ವಿಷಯದಲ್ಲಿ ತುಂಬಾ ಕಾಳಜಿಯನ್ನು ಹೊತ್ತಿದ್ದ ಡಿ.ವಿ.ಜಿ.ಯವರಿಗೆ ಈ ಬಗೆಯ ಅನ್ಯ ಧರ್ಮೀಯರ ಹಾವಳಿಯನ್ನು ತಡೆಯುವುದಕ್ಕಾಗಿ ಮತ್ತು ಅವರು ಪತ್ರಕರ್ತರಾಗಿದ್ದರಿಂದ ಆ ಭಾಗದಲ್ಲಿನ ಬಹುತೇಕ ಪ್ರದೇಶಗಳ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರಿಂದ ವಾಸ್ತವದಲ್ಲಿನ ಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವಿರತವಾಗಿ ಚಿಂತಿಸಿದ್ದಾರೆ. ಆ ಚಿಂತನೆಯ ಫಲವಾಗಿ ಅವರು ವಿದ್ಯಾರಣ್ಯರು ಹಿಂದೂ ಧರ್ಮವನ್ನು ರಕ್ಷಿಸಿದ ಚಾರಿತ್ರಿಕ ವಿಷಯವನ್ನು ಇಲ್ಲಿ ಸಮಕಾಲೀನ ಸಂದರ್ಭದೊಂದಿಗೆ ಸಮೀಕರಿಸಲು ಪ್ರಯತ್ನಿಸಿದ್ದಾರೆ.

ಡಿ.ವಿ.ಜಿ.ಯವರು ವಿಜಯನಗರ ಸಾಮ್ರಾಜ್ಯದ ಲಾಂಛನವನ್ನು ವರಾಹವನ್ನಾಗಿ ಏಕೆ ಮಾಡಿಕೊಂಡಿದ್ದಾರೆ ಎನ್ನುವ ವಿಚಾರವನ್ನು ಸೂಕ್ಷ್ಮವಾಗಿ ಕೈಗೆತ್ತಿಕೊಂಡಿದ್ದಾರೆ. ವರಾಹವು ಮುಸಲ್ಮಾನರಿಗೆ ವಿರುದ್ಧವಾದುದು ಎನ್ನುವ ಕಾರಣಕ್ಕಾಗಿಯೇ ಇರಬಹುದೇನೋ ಎನ್ನುವ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಹಿರಣ್ಯಾಕ್ಷನು ಭೂಮಂಡಲವನ್ನು ಪಾತಾಳಕ್ಕೆ ತುಳಿದು ಹಾಕಿದ್ದಾಗ ಈ ಲೋಕವನ್ನು ಉದ್ಧಾರ ಮಾಡಿದ್ದು ವರಾಹದೇವರಲ್ಲವೆ ಎಂಬ ಹೇಳಿಕೆಯನ್ನು ನೀಡುವ ಮೂಲಕ ವೈಷ್ಣವ ಪರಂಪರೆಯ ಪ್ರಾಮುಖ್ಯತೆಯನ್ನು ವೈಭವೀಕರಿಸುವುರ ಕಡೆಗೆ ಹೆಚ್ಚು ಗಮನ ಹರಿಸಿದಂತೆ ತೋರುತ್ತದೆ.

ಸಕಲ ಧರ್ಮೀಯರನ್ನು ಸಮಾನರೆಂದು ಕಾಣುವ ಮೂಲಕ ಆಯಾ ಧರ್ಮೀಯರಿಗೆ ತಮ್ಮ ತಮ್ಮ ಧಾರ್ಮಿಕ ನಿಯಮಗಳನ್ವಯ ಬಾಳುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು, ನಾಡಿನಲ್ಲಿರುವ ಮಠಮಂದಿಗಳನ್ನು ಪುನರುತ್ಥಾನ ಮಾಡುವುದು, ಕವಿ ಲೇಖಕರಿಗೆ ಪ್ರೋತ್ಸಾಹ ನೀಡುವುದರ ಮೂಲಕ ಆ ನಾಡಿನ ಜ್ಞಾನ ಭಂಡಾರವನ್ನು ವೃದ್ಧಿಸಿ, ನಿಮ್ಮ ಹಿರಿಯರು ಹಾಕಿಕೊಟ್ಟ ಸದ್ಧರ್ಮ ಮಾರ್ಗದಲ್ಲಿ ನಡೆದು ಧರ್ಮ ಸಾಮ್ರಾಜ್ಯವನ್ನಾಗಿ ಮುನ್ನೆಡೆಸು ಎಂದು ಹಾರೈಸುವುದರ ಮೂಲಕ ನಾಟಕಕಾರರು ಧರ್ಮಾತೀತ ನಾಡು ನಿರ್ಮಾಣಕ್ಕೆ ಕರೆ ಕೊಟ್ಟಿದ್ದಾರೆ.

ಹಾಗೆಯೇ ವೆಂಕಟಸುಬ್ಬಯ್ಯನವರು ಈ ನಾಟಕದ ಕುರಿತು ಹೇಳಿರುವುದು ಹೀಗೆ–

> "ಅದೊಂದು ಗಂಭೀರವಾದ ಗದ್ಯ ನಾಟಕ. ಹಂಪಿಯ ರಾಜಧಾನಿಯಾಗಿ ವಿಜಯನಗರವು ಸ್ಥಾಪಿತವಾಗಿ ಕನ್ನಡ ಭುವನೇಶ್ವರಿ ವೈಭವದಿಂದ ಬಾಳುವ ಕಾಲದ ಚಿತ್ರ. ಆದರೆ ಇದೂ ಕೂಡ ರಂಗದ ಮೇಲೆ ಪ್ರಕಾಶಿಸಲು ಸಮರ್ಥವಾಗಿಲ್ಲ. ಓದಲು ಮಾತ್ರ ಬಹಳ ಪ್ರಭಾಯುತವಾಗಿ ಕಾಣುತ್ತದೆ. ಈ ನಾಟಕದಲ್ಲಿ ಕನ್ನಡ ಸಂಸ್ಕೃತಿಯ ಉದ್ಧಾರಕ್ಕೆ ಬೇಕಾದ ಎಲ್ಲಾ ತಿಳಿವಳಿಕೆಯೂ ನಿರ್ದೇಶಿತವಾಗಿದೆ." (ಜಿ.ವೆಂಕಟಸುಬ್ಬಯ್ಯ :229)

ಈ ಮಾತುಗಳು ನಾಟಕದ ಒಟ್ಟಂದವನ್ನು ಸ್ಪಷ್ಟಪಡಿಸುತ್ತವೆ. ಆದರೆ ಇಲ್ಲಿ ನಾಟಕ ಎಂದರೆ ಹೀಗಿರಬೇಕು ಎನ್ನುವ ಒಂದು ಚೌಕಟ್ಟು ವಿದ್ವತ್ ವಲಯದಲ್ಲಿ ಕಂಡು ಬರುತ್ತದೆ.

ಆದರೆ ಸಾಮಾನ್ಯ ಜನರನ್ನು ಪ್ರೇರೇಪಿಸಲು ಅದು ಮುಖ್ಯವಲ್ಲ. ಅಲ್ಲಿ ನಾಟಕದ ವಸ್ತುವಿನ ಆಧಾರದ ಮೇಲೆ ಅದು ಜನಪ್ರಿಯತೆಯನ್ನು ಪಡೆಯುತ್ತದೆ.

**ವಿಜಯ ಸಾಮ್ರಾಜ್ಯ** :(1936, 1948)

ಈ ನಾಟಕವು 1936ರ ಸುಮಾರಿಗೆ 'ಅರುಣೋದಯ' ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಒಂದಂಕಿನ ನಾಟಕ ರೂಪದಲ್ಲಿ ಪ್ರಕಟವಾಯಿತು. ಅದಕ್ಕೂ ಪೂರ್ವದಲ್ಲಿ 'ವಿಜಯನಗರ ಸ್ಮರಣೋತ್ಸವ ಸಂಚಿಕೆ'ಯಲ್ಲಿ ಪ್ರಕಟಗೊಂಡಿತ್ತು. ನಂತರ 1948ರಲ್ಲಿ ಮೂರಂಕಿನ ನಾಟಕವಾಗಿ ಬೆಳಗಾವಿಯ ವಿಜಯ ಗ್ರಂಥಮಾಲೆಯಲ್ಲಿ ಪ್ರಕಟಗೊಂಡಿದೆ. ರಂ.ಶ್ರೀ.ಮುಗಳಿಯವರು ಚರಿತ್ರೆಯಲ್ಲಿ ಗೋಚರವಾಗುವ ಅಂಶಗಳನ್ನಿಟ್ಟುಕೊಂಡೇ ಈ ನಾಟಕ ರಚಿಸಿರುವುದಾಗಿ ಹೇಳಿಕೊಂಡಿದ್ದಾರೆ.

> "ವಿಜಯನಗರದ ಇತಿಹಾಸ ಗ್ರಂಥಗಳನ್ನು ಓದುತ್ತಿರುವಾಗ ಈ ನಾಟಕದ ಕಥೆ ತರತರದ ಚಿತ್ರವಾಗಿ ಆವೇಶವಾಗಿ ನನ್ನ ಬೆನ್ನು ಹತ್ತಿತು. ಆಮೇಲೆ ನಾನು ಅದರ ಬೆನ್ನು ಹತ್ತಿದೆ. ಅಂದಿನವರೆಗೆ ದೊರೆತ ಎಲ್ಲ ಚಾರಿತ್ರಿಕ ಸಾಮಗ್ರಿಗಳನ್ನು ಕೂಡಿಹಾಕಲು ಹವಣಿಸಿದೆ. ವಿಜಯನಗರದ ಪ್ರಾರಂಭೇತಿಹಾಸದಲ್ಲಿಯ ಸತ್ಯಾಂಶಗಳು ಏನಿರಬಹುದೆಂಬುದನ್ನು ಅರಿಯಲು ಅನೇಕ ಗ್ರಂಥಗಳನ್ನೂ ಲೇಖನಗಳನ್ನೂ ಕಣ್ಣಿಟ್ಟು ನೋಡಿದೆ...... ಸ್ಥೂಲವಾದ ಐತಿಹಾಸಿಕ ಸತ್ಯಕ್ಕೆ ಹೊಂದಿಕೊಂಡು ಇಲ್ಲಿ ಕಲ್ಪನೆ ಕುಡಿವರಿದಿದೆ ಎಂಬುದನ್ನು ನೆನೆಯಬೇಕು."(ರಂ.ಶ್ರೀ.ಮುಗಳಿ, ಮೊದಲ ಮಾತು.) ಎಂದಿದ್ದಾರೆ. ಕ್ರಿ.ಶ.1336ರಲ್ಲಿ ವಿಜಯನಗರ ಸ್ಥಾಪನೆಯಾದ ನಂತರ 1346ರವರೆಗೆ ಈ ಸಾಮ್ರಾಜ್ಯದಲ್ಲಿ ನಡೆದ ಮುಖ್ಯ ಸಂಗತಿಗಳನ್ನು ನಾಟಕ ರೂಪಕ್ಕಿಳಿಸಿದ್ದಾರೆ.

ವಿಜಯನಗರ ಸ್ಥಾಪನೆಗೆ ಸಂಬಂಧಿಸಿದಂತೆ ಚರಿತ್ರೆಯಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮುಗಳಿಯವರು ತಮ್ಮ ವಿಮರ್ಶಾ ದೃಷ್ಟಿಕೋನದಿಂದ ಸೂಕ್ಷ್ಮವಾಗಿ ಅವಲೋಕಿಸಿ ತಾವು ಕಂಡಕೊಂಡ ನೈಜ ಆಕರಗಳನ್ನಾಧರಿಸಿ ಈ ನಾಟಕವನ್ನು ರಚಿಸಿದ್ದಾರೆ. ನಾಟಕ ರಚನೆಯ ಮುಖ್ಯ ಉದ್ದೇಶವನ್ನು ಕುರಿತು ಈ ರೀತಿ ಹೇಳುತ್ತಾರೆ.

> "ಕನ್ನಡ ನಾಡಿನ ಇತಿಹಾಸದಲ್ಲಿ ಅತ್ಯಂತ ಉಜ್ವಲವಾದ ಒಂದು ಕಾಲಖಂಡವನ್ನು ಕಣ್ಣಮುಂದೆ ನಿಲ್ಲಿಸುವುದೇ ಅಂಥದೇ ಒಂದು ಪರಿಸ್ಥಿತಿಯಲ್ಲಿ ಇಂದು ತೊಳಲಾಡುವ ಕನ್ನಡ ಜನತೆಗೆ ಇದು ಸ್ಫೂರ್ತಿದಾಯಕವಾಗಬಹುದೆಂದು ನನ್ನ ನಂಬಿಗೆಯಿದೆ." (ರಂ.ಶ್ರೀ.ಮುಗಳಿ, ಮೊದಲ ಮಾತು.)

ಕರ್ನಾಟಕ ಏಕೀಕರಣ ಚಳುವಳಿ ಬಿರುಸಿನಿಂದ ನಡೆದಿದ್ದ ಕಾಲದಲ್ಲಿ ರಚಿತವಾದ ಈ ನಾಟಕ ನಾಡಿನ ಪರಂಪರೆಯ ಬಗ್ಗೆ ತಿಳಿಸುತ್ತಾ, ಜನರನ್ನು ಆ ಹೋರಾಟಕ್ಕೆ ಧುಮುಕಲು ಮತ್ತಷ್ಟು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ರಚಿತವಾಗಿದೆ. ನಾಡಿನ ಬಗ್ಗೆ ಜಾಗೃತಿ ಮೂಡಿಸುವ

ಸಂದರ್ಭದಲ್ಲಿ ಆ ಕಾಲದ ಎಲ್ಲಾ ಇತರ ಲೇಖಕರು ಅನುಸರಿಸಿದ ಪರಂಪರೆಯೊಳಗಿನ ನಮ್ಮತನದ ಹುಡುಕಾಟದಲ್ಲಿ ಮುಗಳಿಯವರೂ ತೊಡಗಿದ್ದಾರೆ. ಹಿಂದಿನ ಚರಿತ್ರೆಯನ್ನು ಹೇಳುತ್ತಾ ವರ್ತಮಾನವನ್ನು ಎದುರಿಸುವ ಬಗೆಯನ್ನು ಸೂಚ್ಯವಾಗಿ ತಿಳಿಸುತ್ತಾರೆ.

ಈಗಾಗಲೇ ಉಲ್ಲೇಖಿಸಿರುವಂತೆ ನಾಟಕ ಪ್ರಾರಂಭವಾಗುವುದು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ. ಈ ಸಂದರ್ಭಕ್ಕಾಗಲೇ ಯವನರ ದಾಳಿಯಿಂದ ದಕ್ಷಿಣ ಭಾರತ ಬಹುತೇಕ ಸಂಸ್ಥಾನಗಳು ಅವರ ಅಧೀನಕ್ಕೊಳಪಟ್ಟಿದ್ದವು. ಅಂತಹ ಸಾಮ್ರಾಜ್ಯಗಳಲ್ಲಿ ಪ್ರಮುಖವಾದುದು ಹೊಯ್ಸಳ ಸಾಮ್ರಾಜ್ಯ. ಹೊಯ್ಸಳ ಅರಸ 3ನೆಯ ಬಲ್ಲಾಳನು ತಾನು ಯವನದ ದಾಸ್ಯದಲ್ಲಿ ಆಳ್ವಿಕೆಯನ್ನು ನಡೆಸುವ ಹೀನ ಸ್ಥಿತಿಯನ್ನು ತಲುಪಿ ಕುಗ್ಗಿಹೋಗಿದ್ದಾನೆ. ಅವರನ್ನು ಎದುರಿಸುವ ಸಾಮರ್ಥ್ಯವೂ ಇಲ್ಲವಾಗಿದೆ.

> "ದಕ್ಷಿಣ ಭಾರತಕ್ಕೆ ವಿಷಯವಾಗಿ ಬೀಸಿ ಆ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಪತಿಯಾದ ಮಲ್ಲಿಕಾಫ಼ರನು ನಮ್ಮ ರಾಜಧಾನಿಯಾದ ದೋರಸಮುದ್ರವನ್ನು ಕೊಳ್ಳೆಹೊಡೆದಂದಿನಿಂದ ನನ್ನ ಪ್ರಭುತ್ವವು ಉಸಿರಾಡದ ಕಪ್ಪಡದ ಬೊಂಬೆಯಾಯ್ತು. ಅವನಿಗೆ ನನ್ನ ಭಂಡಾರದ ರತ್ನರಾಶಿಯನ್ನು ದಾಸನಂತೆ ಭಾಗಿ ನೀಡಿದಾಗ ನನ್ನ ಜೀವ ರತ್ನವು ಕಳಚಿಹೋಯಿತು. ಅವನ ಕೈಯಾಸರೆಯಾಗಿ ಕೆಳಮೋರೆಯಿಂದ ಅವನ ಬಿಡಾರದಲ್ಲಿ ತೊಳಲುತ್ತ ಬಿದ್ದಾಗ, ಹರಿಹರ, ಸಂಕೋಲೆಗಳ ಕಚ್ಚಿ, ತೋಳನರ ಉಬ್ಬಿಸಿ, ನಾನು ಹರಿಯಿಸಿದ ಕಣ್ಣೀರ ಕಾಲುವೆಗಳನ್ನು ಕಂಡವರಾರು? ನಾನಾಗ ಸಾವಿನ ಮನೆಯ ತೊತ್ತಾಗಲು ಬರುತ್ತಿರಲಿಲ್ಲವೆ? ಹೊಟ್ಟೆಯುರಿತ್ತಿದ್ದರೂ ಬದುಕಿ ತಿರುಗಿದೆನೇಕೆ? ತುರುಕ ದೊರೆಯ ದಾಸನೆಂದು ತೋರಿಸಲು ಬಿಸಿನೆತ್ತರದ ಬೀರಮಗ ಬಲ್ಲಾಳನನ್ನು ರಾಜಬಂಧಿಯಾಗಿ ದಿಳ್ಳಿಯವರೆಗೆ ಕಳುಪಿದೆನೇಕೆ?" (ರಂ.ಶ್ರೀ.ಮುಗಳಿ, 1948:5)

ಎನ್ನುವ ಬಲ್ಲಾಳನ ಮಾತುಗಳು ತಾನು ಮುಸ್ಲಿಮರಿಗೆ ಸೋತು ಶರಣಾದ. ಒಂದು ಸಾಮ್ರಾಜ್ಯದ ಮಹಾರಾಜನಾಗಿ ಮೆರೆದ ಬಲ್ಲಾಳನು ಮುಸಲರ ಮುಂದೆ ತಲೆಬಾಗಿ ನಿಂತು ತಾನು, ಮನಸ್ಸಿನಲ್ಲಿ ಕ್ರೋದಾಗ್ನಿ ಉರಿಯುತ್ತಿದ್ದರೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿ ತಾನು ಅನುಭವಿಸುತ್ತಿದ್ದ ನೋವುಗಳನ್ನು ತಡೆದುಕೊಂಡದ್ದು ಮರಣದ ಭಯದಿಂದಲ್ಲ. ತನ್ನ ಸಾಮ್ರಾಜ್ಯದ ದುಃಸ್ಥಿತಿಗೆ ಕಾರಣರಾದ ಯವನರ ವಿರುದ್ಧ ಪ್ರಬಲವಾದ ಒಂದು ಸಾಮ್ರಾಜ್ಯವನ್ನು ಕಟ್ಟಬೇಕಾಗಿದೆ. ಆ ದೃಷ್ಟಿಯಿಂದ ಆತ ಹರಿಹರ ಬುಕ್ಕರಿಗೆ ಪ್ರೋತ್ಸಾಹ ನೀಡಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಗೆ ಸಹಾಯಕನಾಗಿ ನಿಲ್ಲುತ್ತಾನೆ.

ವಿಜಯನಗರ ಸಾಮ್ರಾಜ್ಯವನ್ನು ವಸ್ತುವನ್ನಾಧರಿಸಿ ರೂಪುಗೊಂಡ ಕೆಲವು ನಾಟಕಗಳಲ್ಲಿ ವಿದ್ಯಾರಣ್ಯರು ತಪೋಶಕ್ತಿಯಿಂದ ದೇವಿಯನ್ನು ಒಲಿಸಿಕೊಂಡು, ಅವಳ ಅನುಗ್ರಹದ ಮೇರೆಗೆ ಹರಿಹರ ಬುಕ್ಕರ ಮೂಲಕ ವಿಜಯನಗರ ಸ್ಥಾಪಿಸುತ್ತಾರೆ. ಅವರೇ ಈ ಸಾಮ್ರಾಜ್ಯಕ್ಕೆ ಪ್ರೇರಕರೂ, ಮಾರ್ಗದರ್ಶಕರೂ ಆಗುತ್ತಾರೆ. ಆದರೆ ಮುಗಳಿಯವರ ಈ

ನಾಟಕದಲ್ಲಿ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ದೈವಿ ರೂಪ ತಾಳಿದ ನಿದರ್ಶನಗಳಿಲ್ಲ. ಇಲ್ಲಿ ವಿದ್ಯಾರಣ್ಯರ ಪಾತ್ರ ರಾಜಗುರುಗಳು ಮಾತ್ರ, ಬಲ್ಲಾಳನು ಹರಿಹರನಿಗೆ ಪ್ರೋತ್ಸಾಹ ನೀಡುವುದರ ಮೂಲಕ ವಿಜಯನಗರದ ಸ್ಥಾಪನೆ ಮತ್ತು ಏಳ್ಗೆಯುಗ ಆರಂಭವಾಗುತ್ತದೆ.

> "ಹರಿಹರ, ನಿನ್ನಂಥ ಕಡುಗಲಿಯನ್ನು ಕಂಡು ಕನ್ನಡ ಸಾಮ್ರಾಜ್ಯದ ಸೊತ್ತನ್ನು ಒಪ್ಪಿಸಲು ನಾನು ಬದುಕಿದೆ. ಕೆಲಕಾಲದ ಹಿಂದೆ ರಹಸ್ಯವಾಗಿ ಕರೆದ ವೀರಬಾಂಧವರ ಸಭೆಯಲ್ಲಿ ನಿನ್ನನ್ನು ಮಹಾಮಂಡಲೇಶ್ವರನೆಂದು ಮಾಡಿ ಮನ್ನಿಸಿದ್ದು ಅದಕ್ಕಾಗಿಯೇ. ಇನ್ನು ಮುಂದಿನ ಸಾಹಸವೆಲ್ಲಾ ನಿನ್ನದು." (ರಂ.ಶ್ರೀ.ಮುಗಳಿ, 1948:5) ಎಂದಿರುವುದೇ ಮೇಲಿನ ಮಾತಿಗೆ ಸಾಕ್ಷಿ.

> ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯಾದ ಮಾತುಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ. "...ಮೊದಲು ಕನ್ನಡ ನಾಡನ್ನೂ ಕ್ರಮೇಣ ದಕ್ಷಿಣವನ್ನೂ ಯೋಜನೆಯನ್ನೂ ಗೊತ್ತುಮಾಡಿದ್ದೇವೆ...... ಎಲ್ಲ ನಾಡುಗಳ ಎಲ್ಲ ಜನಗಳ ಒಕ್ಕಟ್ಟೇ ಈ ಹೊಸ ಸಾಮ್ರಾಜ್ಯದ ಗುಟ್ಟು. ನಿಮ್ಮ ನಿಮ್ಮ ನಾಡುಗಳನ್ನು ಬಲಪಡಿಸಿ ಈ ರತ್ನ ಸಿಂಹಾಸನದ ಆಧಿಪತ್ಯದಲ್ಲಿ ದೊರೆಗಳ ಪ್ರತಿನಿಧಿಗಳಾಗಿ ನೀವು ಆಳುತ್ತಲಿರಬೇಕು."( ರಂ.ಶ್ರೀ.ಮುಗಳಿ, 1948:43)

ಈ ಮಾತುಗಳು ಬ್ರಿಟಿಷರ ಆಡಳಿತದ ಅವಧಿಯಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶವನ್ನು ಏಕೀಕರಿಸುವುದು ಆ ಮೂಲಕ ರಾಷ್ಟ್ರೀಯ ಹೋರಾಟಕ್ಕೆ ಪ್ರೋತ್ಸಾಹ ನೀಡುವುದಾಗಿದೆ. ಇಲ್ಲಿ ಮುಖ್ಯವಾಗಿ ನಮ್ಮಲ್ಲಿರುವ ಪ್ರಾಂತ್ಯಗಳನ್ನು ಕಟ್ಟಿಕೊಳ್ಳುವುದರ ಮೂಲಕ ಭಾರತ ಒಕ್ಕೂಟವನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿದೆ ಎನ್ನುವುದನ್ನು ನಾಟಕಕಾರರು ಹೇಳಿದ್ದಾರೆ. ರಾಷ್ಟ್ರವೊಂದು ಸ್ವತಂತ್ರವಾಗಿ ನಿಲ್ಲಬೇಕಾದರೆ ವೈಯಕ್ತಿಕ ಅಸೂಯೆ, ಮತಗಳ ಕಲಹ ತೊಲಗಬೇಕು ಎಂಬುದು ಬುಕ್ಕರಾಯನ ಅಭಿಪ್ರಾಯ, ಇದೇ ಅಭಿಪ್ರಾಯ ಪ್ರಾಯಶಃ ಲೇಖಕರದೂ ಆಗಿದೆ. ಬುಕ್ಕನ ಸಂಭಾಷಣೆಯಲ್ಲಿ–

> "..... ನಮ್ಮ ದೇಶದ ಒಕ್ಕಟ್ಟಿಗೆ ವೈಯಕ್ತಿಕ ಅಸೂಯೆಯೂ, ಮತಗಳ ಕಲಹವೂ ಬಹು ದೊಡ್ಡ ಆತಂಕವೆಂಬುದನ್ನು ಅರಿತು ನೀವೆಲ್ಲರೂ ದಕ್ಷತೆಯಿಂದಲೂ, ವಿವೇಕದಿಂದಲೂ ನಾಡುಗಳನ್ನು ಆಳಬೇಕು. ಎಲ್ಲಾ ಮತಗಳಿಗೆ ಯೋಗ್ಯವಾದ ಪುರಷ್ಕಾರವನ್ನು ಕೊಟ್ಟು ಆಯಾ ಮತೀಯರಲ್ಲಿ ಅನ್ಯೋನ್ಯ ಭಾವನೆ ಬೆಳೆಯುವಂತೆ ನಾವು ಒಂದು ಕೆಲಸವನ್ನು ಮಾಡಿದರೆ ಅದು ಈ ಸಾಮ್ರಾಜ್ಯಕ್ಕೆ ನೂರು ವರ್ಷದ ಆಯುಷ್ಯವನ್ನು ದಯಪಾಲಿಸುತ್ತದೆ....." (ರಂ.ಶ್ರೀ.ಮುಗಳಿ, 1918:44)

ಮುಗುಳಿಯವರು ಬುಕ್ಕನ ಮೂಲಕ ಹೇಳಿಸಿದ ಈ ಮಾತು ಇಂದಿಗೂ ಪ್ರಸ್ತುತ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಸ್ಥಾನ-ಸಂಸ್ಥಾನಗಳ ಮಧ್ಯೆ ಬೆಳೆದ ವೈಯಕ್ತಿಕ ದ್ವೇಷ, ಪರಮತೀಯರು ಪರತಾಂತ್ರ್ಯಕ್ಕೆ ಒಳಗಾಗಲು ಕಾರಣವಾಯಿತು. ಅವೆಲ್ಲವುಗಳನ್ನು ಮೆಟ್ಟಿ ನಿಂತಾಗ ಮಾತ್ರ, ಜಾತಿ, ಮತಗಳನ್ನು ದೂರವಿರಿಸಿ ಕೇವಲ ಮನುಷ್ಯರಾಗಿ, ನಾವೆಲ್ಲಾ ಒಂದೇ ಎಂಬ ಭಾವನೆ ತಾಳಿದಾಗ ಮಾತ್ರ ಭಾರತ ಸ್ವಾತಂತ್ರ ರಾಷ್ಟ್ರವಾಗಲು ಸಹಾಯಕವಾಗುತ್ತದೆ ಎಂಬ ಸತ್ಯವನ್ನು ಪಾತ್ರವೊಂದರ ಸಂಭಾಷಣೆಯ ಮೂಲಕ ಲೇಖಕರು ವ್ಯಕ್ತಪಡಿಸಿದ್ದಾರೆ.

ಹಾಗೆಯೇ ದೇಶ ಕಟ್ಟುವಲ್ಲಿ ಮತ ಧರ್ಮಗಳಿಂದಾಗಿ ಬಿರುಕುಂಟಾಗಬಾರದೆನ್ನುವ ಆಶಯದಿಂದ ಲೇಖಕರು ಧರ್ಮ ಸಮನ್ವಯತೆಗೆ ಸಂಬಂಧಿಸಿ ಕೆಲವು ವಿಚಾರಗಳು ಹೇಳಿದ್ದಾರೆ. ಹಿಂದೂ ರಾಜರುಗಳ ಆಶ್ರಯದಲ್ಲಿದ್ದ ಬಾಹುದ್ದೀನನು ಅನಿವಾರ್ಯವಾಗಿ ದೆಹಲಿ ಸುಲ್ತಾನನಲ್ಲಿಗೇ ಕಳಿಸಿಕೊಡಬೇಕಾಗುತ್ತದೆ. ಇಲ್ಲದಿದ್ದರೆ ದೆಹಲಿ ಸುಲ್ತಾನನು ಹಿಂದೂ ರಾಜ್ಯಗಳ ಮೇಲೆ ಮತ್ತೆ ದಂಡೆತ್ತಿಬಂದು ಎಲ್ಲಿ ಈ ರಾಜ್ಯಗಳನ್ನು ನಾಶ ಮಾಡುವನೋ ಎಂಬ ಭಯದಿಂದ ಬಲ್ಲಾಳ ದೊರೆಯು ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಲಾಗದೆ ಧರ್ಮಸಂಕಟಕ್ಕೆ ನಿಲುಕಿದಾಗ, ಬಾಹುದ್ದೀನನು ತಾನೇ ಹೋಗುವುದಾಗಿ ಹೇಳುತ್ತಾನೆ. ತಾನು ಒಂದು ವೇಳೆ ಇಲ್ಲಿದ್ದರೆ ನಿಮಗೆ ಅಳಿಗಾಲ ತಪ್ಪಿದ್ದಲ್ಲ. ನೀಚ ಸುಲ್ತಾನನು ಮತ್ತೆ ನಿಮ್ಮ ಮೇಲೆ ದಾಳಿ ಮಾಡುತ್ತಾನೆ ಎಂದು ಹೇಳುತ್ತಾನೆ. ಆದರೆ ಬಲ್ಲಾಳನು ನಾವು ವಚನ ಭ್ರಷ್ಟನಾಗುತ್ತೇನಲ್ಲವೆ? ಎಂದಾಗ. ನೀವು ವಚನವನ್ನು ಪಾಲಿಸಿದ್ದೀರಿ. ವಿಜಯನಗರ ಸಾಮ್ರಾಜ್ಯದ ಮುಂದೆ ನನ್ನ ಬದುಕು ಎಷ್ಟರದು? ನೀವು ಇಲ್ಲಿಯವರೆಗೆ ನನ್ನನ್ನು ಕಾಪಾಡಿದ್ದೀರಿ. ನೀವು ನಿಮ್ಮ ಧರ್ಮವನ್ನು ಪಾಲಿಸಿದ್ದೀರಿ. ಈಗ ನೀವು ನಿಮ್ಮ ರಾಜ್ಯವನ್ನು ಉಳಿಸಿಕೊಳ್ಳಬೇಕಾಗಿದೆ. ಅದು ಇನ್ನೂ ಬೆಳೆಯಬೇಕಾಗಿದೆ. ಆದುದರಿಂದ ನಾನು ಸಂತೋಷದಿಂದ ಹೋಗುತ್ತೇನೆಂದು ಹೇಳುತ್ತಾನೆ. ತಾನೂ ದೆಹಲಿಗೆ ಹೋಗುವಾಗಲೂ ಸಹ ಆತ ತನ್ನ ಚಾರರಿಗೆ ವಿಜಯನಗರದಲ್ಲಿ ಕೊನೆಯವರೆಗೂ ಸೇವೆ ಮಾಡಿರೆಂದು ಹೇಳಿ ಹೋಗುತ್ತಾನೆ. ಅವನ ವ್ಯಕ್ತಿತ್ವ ಕುರಿತು ವಿದ್ಯಾರಣ್ಯರು ಹೇಳುವ "...ಅವನಕೀರ್ತಿಯೂ ಅಮರವಾಯಿತು. ಮನುಷ್ಯನು ಯಾವ ಮತದವನಾದರೇನು, ಅವನಲ್ಲಿದ್ದ ತಿಳಿವಳಿಕೆ, ತ್ಯಾಗ-ಪ್ರೇಮ ಮೊದಲಾದ ಗುಣಗಲೇ ಅವನ ಸನ್ಮತಕ್ಕೆ ಗುರುತು." (ರಂ.ಶ್ರೀ.ಮುಗಳಿ, 1948:73) ಮಾತುಗಳು, ಧರ್ಮಾತೀತ ಮನೋಭಾವದಿಂದ ಮಾತ್ರ ಒಂದು ಸಮಗ್ರ ರಾಷ್ಟ್ರ ಕಟ್ಟ ು ಸಾಧ್ಯ ಎನ್ನುವುದನ್ನು ಸ್ಪಷ್ಟಪಡಿಸುತ್ತವೆ.

ವಿಜಯನಗರಕ್ಕೆ ಆರಂಭದಲ್ಲಿ ಆರ್ಥಿಕ ಸಂಕಷ್ಟ ಒದಗಿದಾಗ ಇತರ ನಾಟಕಗಳಂತೆ ಇಲ್ಲಿ ಯಾವ ಹೊನ್ನಿನ ಮಳೆಯೂ ಸುರಿಯುವುದಿಲ್ಲ. ಬದಲಾಗಿ ವಿದ್ಯಾರಣ್ಯರು ಶೃಂಗೇರಿ ಮಠದಲ್ಲಿನ ಹಣ ಮತ್ತು ದವಸ ಧಾನ್ಯಗಳನ್ನು ತರಿಸುತ್ತಾರೆ. ಇಲ್ಲಿ ಧರ್ಮ ಮತ್ತು ಕ್ಷಾತ್ರ ಧರ್ಮ ಒಗ್ಗೂಡಿ ಸಾಮ್ರಾಜ್ಯ ಕಟ್ಟಲು ಶ್ರಮಿಸಿದ್ದು ತಿಳಿದು ಬರುತ್ತದೆ. ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿಯೂ ನಮ್ಮ ನಾಡಿನಲ್ಲಿ ಅದೆಷ್ಟೋ ಮಠಗಳು ಈ ರೀತಿಯ ಸಹಾಯವನ್ನು

ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಬಹುಶಃ ನಾಟಕ ರಚನೆಯ ಸಂದರ್ಭದಲ್ಲಿನ ಕಾಲದ ಒತ್ತಡಕ್ಕೆ ಸಿಲುಕಿದ ನಾಟಕಕಾರರು ಈ ರೀತಿಯ ಅಂಶಗಳನ್ನು ನಾಟಕದಲ್ಲಿ ವ್ಯಕ್ತಪಡಿಸಿದಂತಿದೆ. ಹಾಗೆಯೇ ಬಲ್ಲಾಳ ಮಡಿದಾಗ ಮುಂದೇನು ಮಾಡುವುದೆಂದು ಹರಿಹರನು ಚಿಂತಿಸುತ್ತಿದ್ದಾಗ ವಿದ್ಯಾರಣ್ಯರು, ಒಂದು ದೇಶ ನಿರ್ಮಾಣದಲ್ಲಿ ಏನೆಲ್ಲಾ ಗಂಡಾಂತರಗಳು ಬರುತ್ತವೆ. ಅವುಗಳಿಗೆಲ್ಲಾ ಕುಗ್ಗಿಹೋದರೆ ಹೇಗೆ? ದೇಶಕ್ಕಾಗಿ, ಧರ್ಮಕ್ಕಾಗಿ ಎಲ್ಲ ತ್ಯಾಗಕ್ಕೂ ಸಿದ್ಧರಾಗಬೇಕು. ಹಿಂದಿನವರ ಜೀವಜ್ಯೋತಿಯು ಮುಂದಿನವರಿಗೆ ದಾರಿದೀಪವಾಗಬೇಕು. ಅಂದಾಗ ಮಾತ್ರ ಅವರ ಕನಸು, ನಮ್ಮ ಗುರಿಯೂ ಎರಡೂ ಈಡೇರುತ್ತವೆ ಎನ್ನುವ ಪ್ರೋತ್ಸಾಹದ ನುಡಿಗಳನ್ನಾಡುತ್ತಾರೆ. ಹೋರಾಟದ ಸಂದರ್ಭದಲ್ಲಿ ಸಾವು ನೋವುಗಳು ಸಹಜ. ಅವುಗಳನ್ನು ಮೆಟ್ಟಿನಿಂತಾಗಲೇ ನಾವಿಟ್ಟ ಗುರಿ ತಲುಪಲು ಸಾಧ್ಯ. ಈ ಮಾತುಗಳು ಏಕೀಕರಣಕ್ಕಾಗಿ ಮತ್ತು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವವರಿಗೂ ಅನ್ವಯಿಸುತ್ತವೆ.

ಹೀಗೆ ವಿಜಯನಗರದ ವಸ್ತುವನ್ನಿಟ್ಟಿಕೊಂಡ ನಾಟಕಗಳು 20ನೆಯ ಶತಮಾನದ ಸಮಕಾಲೀನ ಸಂದರ್ಭದ ಒತ್ತಡದ ಹಿನ್ನೆಲೆಯಲ್ಲಿ ರೂಪುಗೊಂಡಿವೆ. ಈ ನಾಟಕಗಳಲ್ಲಿ ವಿಜಯನಗರ ಸ್ಥಾಪನೆ, ಸ್ಥಾಪನೆಯ ಪೂರ್ವದಲ್ಲಿ ಆಯ್ದ ಘಟನೆಗಳನ್ನಿಟ್ಟಿಕೊಂಡು, ವಿಜಯನಗರದ ಅವನತಿ ಹಾಗೂ ವಿಜಯನಗರ ಅವನತಿಯ ನಂತರ ಇದೇ ರಾಜವಂಶಿಯರು ಮುಂದೆ ವಿಜಯನಗರ ಸಿಂಹಾಸನದ ಹೆಸರಿನಲ್ಲಿ ಆಡಳಿತ ನಡೆಸಿದ್ದು ಮತ್ತು ವಿಜಯ ನಗರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ವಿದ್ಯಾರಣ್ಯರ ಕುರಿತ ವಿಷಯಗಳನ್ನು ಈ ಎಲ್ಲಾ ನಾಟಕಗಳು ಸಾದರಪಡಿಸುತ್ತವೆ. ಈ ಎಲ್ಲಾ ನಾಟಕಗಳು ವೈದಿಕ ಪರಂಪರೆಯನ್ನು ಎತ್ತಿಹಿಡಿಯುವುದು, ಆ ಮೂಲಕ ನಾವೆಲ್ಲರೂ ಒಂದೇ ಎನ್ನುವ ಭಾವನಾತ್ಮಕ ಬೆಸುಗೆಯನ್ನು ಬೆಸೆದು ನಾಡಿನ ನಿರ್ಮಾಣದೊಂದಿಗೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೇರೇಪಿಸುತ್ತವೆ.

* * *

**ಉಲ್ಲೇಖಗಳು :**

ಕುರ್ತುಕೋಟಿ ಕೀರ್ತಿನಾಥ, 2002, *ಯುಗಧರ್ಮ ಮತ್ತು ಸಾಹಿತ್ಯ ದರ್ಶನ*, ಮನೋಹರ ಗ್ರಂಥಮಾಲೆ ಧಾರವಾಡ.

ಶಾಮರಾಯ ತ.ಸು. 2007, *ಕನ್ನಡ ನಾಟಕ*, ಪ್ರತಿಭಾ ಪ್ರಕಾಶನ, ಮೈಸೂರು

ಕುರ್ತುಕೋಟಿ ಕೀರ್ತಿನಾಥ, 2002, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ ಧಾರವಾಡ.

ಸುರೇಶ ಪಾಟೀಲ, 1998, *ನಾಟಕಗಳು* (ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ : ಸಂ: ಕಾ.ವೆಂ.ಶ್ರೀನಿವಾಸಮೂರ್ತಿ). ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕುರ್ತುಕೋಟಿ ಕೀರ್ತಿನಾಥ, 2002, *ಯುಗಧರ್ಮ ಮತ್ತು ಸಾಹಿತ್ಯ ದರ್ಶನ*, ಮನೋಹರ ಗ್ರಂಥಮಾಲೆ ಧಾರವಾಡ.

ಶಾಮರಾಯ ತ.ಸು. 2007, *ಕನ್ನಡ ನಾಟಕ*, ಪ್ರತಿಭಾ ಪ್ರಕಾಶನ, ಮೈಸೂರು.

ಕುರ್ತುಕೋಟಿ ಕೀರ್ತಿನಾಥ, 2002, *ಯುಗಧರ್ಮ ಮತ್ತು ಸಾಹಿತ್ಯ ದರ್ಶನ*, ಮನೋಹರ ಗ್ರಂಥಮಾಲೆ ಧಾರವಾಡ

ಸಿ.ಆರ್. ಗೋವಿಂದರಾಜು. 1998, ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳುರು.

ಸುರೇಶ ಪಾಟೀಲ, 1998, *ನಾಟಕಗಳು* (ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ : ಸಂ: ಕಾ.ವೆಂ.ಶ್ರೀನಿವಾಸಮೂರ್ತಿ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವೀರಭದ್ರ ಬಸಪ್ಪಾ, 1908 : *ವಿಜಯನಗರ ಸಾಮ್ರಾಜ್ಯವು,*

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ನರಸಿಂಗ ಲಕ್ಷ್ಮಣ ಹೆಗಡೆ, 1926:*ಸಂಗೀತ ಕರ್ನಾಟಕ ಸಿಂಹಾಸನ ನಾಟಕವು,*

ಅದೇ.

ಅದೇ.

ಅದೇ.

ಅದೇ.

ಅದೇ.

ಉದ್ಧೃತ:ಸುರೇಶ ಪಾಟೀಲ: *ನಾಟಕಗಳು, 1998* (ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ; ಸಂ:ಕಾ.ವೆಂ.ಶ್ರೀನಿವಾಸಮೂರ್ತಿ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸದಾಶಿವರಾಯ ಗರುಡ, 1929, *ಯಚ್ಚಮ ನಾಯಕ*, ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ, ಗದಗ

ಮಾಸ್ತಿ, 1921.

ಜಿ.ಎನ್.ರಂಗನಾಥರಾವ್, 1999, *ಮಾಸ್ತಿಯವರ ನಾಟಗಳು*, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶ್ರೀನಿವಾಸ ಮೂರ್ತಿ ಎಂ.ಆರ್. 1947, *ನಾಗರಿಕ*, ಸತ್ಯಶೋಧನಾ ಪ್ರಕಟಣಾ ಮಂದಿರ, ಬೆಂಗಳೂರು.

ಅದೇ.

ಅದೇ.
ಅದೇ.
ಅದೇ.
ಅದೇ.
ಹಣಮಂತರಾಯ ಕಂದಗಲ್ಲ, 1994: *ವರಪ್ರದಾನ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
ಅದೇ.
ಅದೇ.
ಅದೇ.
ಅದೇ.
ಡಿ.ವಿ.ಜಿ. 1992, ವಿದ್ಯಾರಣ್ಯ ವಿಜಯ, (ಕೃತಿ ಶ್ರೇಣಿ : ಸಂ:ಹಾ.ಮಾ.ನಾಯಕ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
ಅದೇ.
ಅದೇ.
ಅದೇ.
ಅದೇ.
ಅದೇ.
ಜಿ.ವೆಂಕಟಸುಬ್ಬಯ್ಯ, 2007 ಗತಿಪ್ರಜ್ಞೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮುಗಳಿ ರಂ.ಶ್ರೀ: 1948, *ವಿಜಯ ಸಾಮ್ರಾಜ್ಯ*, ವಿಜಯ ಗ್ರಂಥಮಾಲೆ, ಬೆಳಗಾಂವಿ.
ಅದೇ.
ಅದೇ.
ಅದೇ.
ಅದೇ.
ಅದೇ.
ಅದೇ.

# ಅಧ್ಯಾಯ-5

# ಗೀತ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

* ಕವನಗಳು

* ಕೀರ್ತನೆ

> ಬೀಜನಗರ ಎಂಬ ಪಟ್ಟಣವು ಹೇಗಿದೆಯೆಂದರೆ,
> ಇದಕ್ಕೆ ಸಾಟಿಯಾಗುವ ಪಟ್ಟಣವನ್ನು ಈ ಪ್ರಪಂಚದಲ್ಲಿ
> ಯಾರು ಕಂಡಿರಲಾರರು, ಕೇಳಿರಲಾರರು
>
> –ಅಬ್ದುಲ್ ರಜಾಕ್

# ಅಧ್ಯಾಯ–5

# ಗೀತ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

–1–

ಕನ್ನಡದ ಕವಿಗಳು ದೇಶ, ನಾಡುನುಡಿ, ರಾಜ ನಿಷ್ಠೆ, ಪ್ರಾಂತೀಯ ನಿಷ್ಠೆ, ದೈವ ನಿಷ್ಠೆಗಳಲ್ಲಿ ನಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳುವ ವಿವಿಧ ಮುಖಗಳನ್ನು ಕಾಣಲು ಯತ್ನಿಸಿದ್ದಾರೆ. 20ನೆಯ ಶತಮಾನದ ಆರಂಭ ಕಾಲದಲ್ಲಿ ಕವಿತೆಗಳನ್ನು ಬರೆದ ಕವಿಗಳು, ಅಂದಿನ ಪ್ರಸ್ತುತ ಸಂದರ್ಭದಲ್ಲಿ ನಾಡು ಎದುರಿಸುತ್ತಿದ್ದ ಸವಾಲುಗಳನ್ನು ಸ್ವೀಕರಿಸಿ ಮುನ್ನಡೆದು ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. **'ನ ಭೂತೋ ನ ಭವಿಷ್ಯತಿಃ'** ಎನ್ನುವಂತೆ ನಮ್ಮ ಪೂರ್ವದ ಪರಂಪರೆಯನ್ನು ಸ್ಮರಿಸಿಕೊಳ್ಳುತ್ತಾ, ಅದನ್ನೇ ತಮ್ಮ ಮುಂದಿನ ದಾರಿಗೆ ಪ್ರೇರಕ ಶಕ್ತಿಯನ್ನಾಗಿ ಮಾಡಿಕೊಂಡು ಆ ಮೂಲಕ ನವ ನಾಡಿನ ನಿರ್ಮಾಣಕ್ಕೆ ಮುಂದಾಗಿದ್ದಾರೆ. ತಮ್ಮ ಅನುಭವಕ್ಕೆ ಬಂದ ವಿಚಾರಗಳಿಗೆ ಕಾವ್ಯದ ಮೂರ್ತರೂಪ ನೀಡಿದ್ದಾರೆ. ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳು ಮುಖಾಮುಖಿಯಾಗಿದ್ದ ಸಂದರ್ಭದಲ್ಲಿ ಸ್ವಾಭಿಮಾನದ ಬದುಕಿಗೆ ಮಹತ್ವ ನೀಡಿ ಸ್ವತಂತ್ರವಾದ ನಾಡನ್ನು ಕಟ್ಟಿಕೊಳ್ಳುವ ಹಂಬಲ ವ್ಯಕ್ತಪಡಿಸಿದ್ದಾರೆ. ದೇಶೀಯ ಸೊಗಡಿನ ಹಿರಿಮೆ ಗರಿಮೆಗಳನ್ನು ಹಾಡುಕಟ್ಟಿ ಹಾಡಿದ್ದಾರೆ.

> "ಪ್ರಸಿದ್ಧ ಪಾಶ್ಚಾತ್ಯ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ 'ದಿ ಕಕೇಷಿಯನ್ ಚೌಕ್ ಸರ್ಕಲ್'ನ ನಾಟಕದಲ್ಲಿ ಒಂದು ಪಾತ್ರ ಈ ಮಾತುಗಳನ್ನಾಡುತ್ತದೆ : 'ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ? ಏಕೆಂದರೆ ಅಲ್ಲಿ ರೊಟ್ಟಿ ಹೆಚ್ಚು ರುಚಿಯಾಗಿರುತ್ತದೆ. ಗಾಳಿ ಇನ್ನೂ ಸುಗಂಧವಾಗಿರುತ್ತದೆ. ದನಿಗಳು ಹೆಚ್ಚು ಶಕ್ತವಾಗಿ ಕೇಳುತ್ತವೆ. ಆಕಾಶ ಬೇರೆಡೆಗಿಂತ ಎತ್ತರವಾಗಿರುತ್ತದೆ. ನೆಲದಮೇಲೆ ನಡೆಯುವುದು ಇನ್ನೂ ಸುಲಭವಾಗಿರುತ್ತದೆ'. ಇವನ ಈ ಮಾತುಗಳು ಸಂಪೂರ್ಣ ತರ್ಕಬದ್ಧವಾಗಿಲ್ಲ, ನಿಜ. ಆದರೆ ಮನೋವೈಜ್ಞಾನಿಕ ನೆಲೆಯಲ್ಲಿ ಇದು ಪೂರ್ಣ ಸತ್ಯ. ಈ ಮಾತುಗಳನ್ನು ಆಡುತ್ತಿರುವವನು ಮೂಲತಃ ನಾಟಕಕಾರ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ." (ಕಾ.ವೆಂ.ಶ್ರೀನಿವಾಸ ಮೂರ್ತಿ, 1998:7 ಪ್ರಸ್ತಾವನೆ.)

ತಾನು ಹುಟ್ಟಿದ ನೆಲವನ್ನು, ನುಡಿಯನ್ನು, ಪರಿಸರವನ್ನು, ಬದುಕನ್ನು, ಸಂಸ್ಕೃತಿಯನ್ನು, ಕಲೆಯನ್ನು, ಸಾಹಿತ್ಯವನ್ನು, ಚರಿತ್ರೆಯನ್ನು ಪ್ರೀತಿಸುವುದು ಮನುಷ್ಯನ ಸಹಜ ಗುಣ. ಆದುದರಿಂದ ಪರಾಧೀನರಾಗಿ ದಾಸ್ಯದ ಬದುಕನ್ನು ಸಾಗಿಸುತ್ತಿದ್ದ ಅಂದಿನವರಲ್ಲಿ ಸ್ವಾತಂತ್ರ್ಯದ

ಕನಸು ಹುಟ್ಟಿದಾಗ ನಮ್ಮ ಪರಂಪರೆಯ ಪ್ರಜ್ಞೆಯನ್ನು ಗುರುತಿಸಿಕೊಳ್ಳುತ್ತಾ ವಾಸ್ತವ ಬದುಕಿಗೆ ತಮ್ಮನ್ನು ತಾವು ತಯಾರಿಮಾಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

"ತಾಯ್ನಾಡಿನ ಮೇಲೆ ಪ್ರೀತಿ ಅಭಿಮಾನಗಳನ್ನುಳ್ಳವರ ಪಾಲಿಗೆ ಅದು ಕೇವಲ ಒಂದು ಭೌತಿಕ, ಭೌಗೋಳಿಕ ಪ್ರದೇಶವಾಗಿ ಉಳಿಯುವುದಿಲ್ಲ; ಚಿನ್ಮಯ ಧಾಮವಾಗಿ, ಸಾಕ್ಷಾತ್ ಸ್ವರ್ಗವೇ ಆಗುತ್ತದೆ. ಅಭಿಮಾನ ಶೀಲರಾದ ಕನ್ನಡಿಗರ ಕಣ್ಣಿಗೆ ಕನ್ನಡ ನಾಡು ಬರಿಯ ಮಣ್ಣಲ್ಲ; ಅದೊಂದು ವಿರಾಟ್ ಜೀವಂತ ಶಕ್ತಿ, ಮಾತೃಸತ್ವ, ಭೂನಂದನ – ಎಲ್ಲರ ಹೆಮ್ಮೆಗೆ ಭಕ್ತಿ ಗೌರವ ಕೃತಜ್ಞತೆಗಳಿಗೆ, ಪೂಜೆ ಸ್ತೋತ್ರಗಳಿಗೆ ಪಾತ್ರವಾಗುವಂಥದು". (ಸಿ.ಪಿ.ಕೆ.: 5)ಎನ್ನುವ ಮಾತುಗಳು ಬರೀ ತೋರಿಕೆಯವುಗಳಲ್ಲ. ನಾಡಿನ ಪರಂಪರೆಯ ಅಭಿಮಾನಕ್ಕೆ ಹಿಡಿದ ಕನ್ನಡಿಗಳು. ಇಲ್ಲಿನ ಮಣ್ಣಿನ ವಾಸನೆ ಬಡಿದವನ ಮನಸ್ಸಿನ ಆಂತರ್ಯಗಳು.

ಸ್ವಾತಂತ್ರ್ಯ ಪೂರ್ವದ ಸಂದರ್ಭದಲ್ಲಿ ನಮ್ಮ ಸಾಹಿತ್ಯದ, ಸಾಹಿತಿಗಳ ಹುಡುಕಾಟವೇನು ಎನ್ನುವುದನ್ನು ಕುವೆಂಪು ಅವರು ಹೀಗೆ ಹೇಳುತ್ತಾರೆ.

"ಆಧುನಿಕ ಜನಜೀವನ ರಾಜಕೀಯಾಗ್ನಿಯಿಂದ ಕುದಿಯುತ್ತಿರುವಂತೆ ಮತ್ತಾವುದರಿಂದಲೂ ಕುದಿಯುತ್ತಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ತಾವೂ ಸ್ವತಂತ್ರ್ಯವಾಗಿದ್ದುಕೊಂಡು, ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿಕೊಂಡು ಹೊಟ್ಟೆ ತುಂಬಿರುವ ದೇಶಗಳು ಕಟ್ಟಿದ ಬುತ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಕಾತರತೆಯಿಂದ ಕತ್ತಿ ಮಸೆಯುತ್ತಿವೆ. ಸ್ವತಂತ್ರವಾಗಿದ್ದರೂ ಹಿಂದಿದ್ದ ಸಾಮ್ರಾಜ್ಯವನ್ನು ಕಳೆದುಕೊಂಡಿರುವ ದೇಶಗಳು ಮಾತ್ಸರ್ಯ, ಸ್ಪರ್ಧೆ ಮತ್ತು ಲಾಭದೃಷ್ಟಿ ಇವುಗಳಿಂದ ಪ್ರೇರಿತವಾಗಿ ಪುನಃ ಸಾಮ್ರಾಜ್ಯ ನಿರ್ಮಾಣ ಮಾಡಲೆಂದು ತೋಳುಕಟ್ಟಿ ಕಾಲು ಕೆರೆಯುತ್ತಿವೆ...... ಸ್ವಾತಂತ್ರ್ಯವನ್ನು ಕಳೆದುಕೊಂಡು, ಪ್ರಬಲವಾದ ಪರಕೀಯರ ಪದಾಘಾತಕ್ಕೆ ಸಿಕ್ಕಿ, ನರಳುತ್ತಿರುವ ದೇಶಗಳು ಸ್ವಾತಂತ್ರ್ಯ ಸಂಪಾದನೆಗಾಗಿ ಹಗಲಿರುಳೂ ಹಾರೈಸಿ ದುಡಿಯುತ್ತಿವೆ.

ರಾಷ್ಟ್ರೀಯತೆಯಂತೆ ಅಂತರರಾಷ್ಟ್ರೀಯತೆಯಂತೆ; ಸಾಮ್ರಾಜ್ಯವಾದವಂತೆ ಸಮತಾವಾದವಂತೆ; ಪ್ಯಾಸಿಸಂ ಅಂತೆ, ನಾಜಿಸಂ ಅಂತೆ; ಬಂಡವಾಳಗಾರರಂತೆ ಕೆಲಸಗಾರರಂತೆ! ನೂರಾರು ಪಕ್ಷ ಪ್ರತಿಪಕ್ಷಗಳಿಗೆ ಹಣಾಹಣಿಯಾಗುತ್ತಿದೆ. ಹೊಸ ಸಾಹಿತ್ಯಕ್ಕೆ ಪ್ರಕೃತವಾದುದು ಭರತ ಖಂಡದ ರಾಜಕೀಯ ಪರಿಸ್ಥಿತಿ. ಇಲ್ಲಿ ಬಹುಮುಖ್ಯವಾದುದೆಂದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ತಪಸ್ಸು."
(ಕುವೆಂಪು :53)

ಬ್ರಿಟಿಷರ ಭಾರತವನ್ನು ತಮ್ಮ ವಸಾಹತುವನ್ನಾಗಿ ಮಾಡಿಕೊಂಡುದರ ಪರಿಣಾಮವಾಗಿ ಇಲ್ಲಿ ಉಂಟಾಗಿರುವ ದಾಸ್ಯತೆ ಮತ್ತು ಅದರಿಂದ ಬಿಡುಗಡೆಗೊಳ್ಳಲು ಇಲ್ಲಿ ನಡೆಯುತ್ತಿರುವ ಸಾಹಸಗಳು ಯಾವ ಬಗೆಯವು ಎಂದು ಹೇಳುತ್ತಾ ಕುವೆಂಪುರವರು ಸಮಕಾಲೀನ ಸಾಹಿತ್ಯ ನಿರ್ಮಾಣಕ್ಕೆ ವಸ್ತುವಾಗಿರುವುದು ಅಂದಿನ ರಾಜಕೀಯ ಸ್ಥಿತಿ ಎನ್ನುತ್ತಾರೆ. ದೇಶದಲ್ಲಿ ಆ ಸಂದರ್ಭದಲ್ಲಿ ನಡೆದ ಬಂಧಮುಕ್ತಿಯ ಹೋರಾಟವನ್ನೇ ಸಾಹಿತ್ಯ ಪ್ರತಿಬಿಂಬಿಸಿದೆ ಎಂದು ಹೇಳುತ್ತಾರೆ.

ಕಳೆದ ಶತಮಾನದ ಆರಂಭಕಾಲ ಭಾರತೀಯರ ಪುನರುಜ್ಜೀವನದ ಪರ್ವ ಕಾಲ. ಭಾರತದೊಂದಿಗೆ ಪ್ರಾಂತೀಯ ರಚನೆಯ ಕೂಗು ಹುಟ್ಟಿಕೊಂಡ ಸಂದರ್ಭವೂ ಹೌದು. ಆಗ ಶಿಕ್ಷಿತ ಸಮುದಾಯವು ನಾಡಿನ ಜನರಲ್ಲಿ ನಾಡಿನ ಬಗ್ಗೆ, ನುಡಿಯ ಬಗ್ಗೆ ಇದ್ದ ಅಭಿಮಾನ ಮೂಡಿಸುವ ಕೆಲಸಕ್ಕೆ ಕೈ ಹಾಕಿತು. ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕು, ನಮ್ಮ ನಾಡನ್ನು ನಾವು ಕಟ್ಟಿಕೊಳ್ಳಬೇಕು ಆಗ ಮಾತ್ರ ನಾವು ಸ್ವಾತಂತ್ರ್ಯದಿಂದ, ಸ್ವಾಭಿಮಾನದಿಂದ ಬದುಕಲು ಸಾಧ್ಯ ಎನ್ನುವುದನ್ನು ಅಂದು ಸಾರಿ ಹೇಳಬೇಕಾಗಿತ್ತು. ಅದನ್ನು ಹೇಳುವುದಕ್ಕಾಗಿ ನಮ್ಮನ್ನು ಪ್ರತಿನಿಧಿಸುವ ಪರಂಪರೆಯನ್ನು ನಾವು ಸ್ಮರಿಸುವುದು ಅನಿವಾರ್ಯ. ಗತಕಾಲದಲ್ಲಿನ ಪರಂಪರೆಯನ್ನು ಹುಡುಕುತಾ ಹೋದಾಗ ನಮ್ಮವರಿಗೆ ಕಣ್ಮನ ಸೆಳೆದದ್ದು ವಿಜಯನಗರ. ಸ್ವಧರ್ಮ ಪ್ರತಿಷ್ಠೆಗಾಗಿ, ಸ್ವಾಭಿಮಾನದ ನಾಡಾಗಿ ಬಾಳಿದ ಈ ಮಹಾಸಾಮ್ರಾಜ್ಯ ಮಾದರಿಯೂ ಆಯಿತು. ಆದರ್ಶವೂ ಆಯಿತು. ಈ ನಾಡಿನ ಗತ ವೈಭವವನ್ನು ಕುರಿತು ಹೇಳುತ್ತಾ ವಾಸ್ತವ ಬದುಕಿನಲ್ಲಿ ಎದುರಾಗಿರುವ ಆಪತ್ತನ್ನು ಪರಿಹರಿಸಿಕೊಳ್ಳುವ ಪ್ರಯತ್ನ ನಡೆಯಿತು. ಹೀಗೆ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಪ್ರೇರಕ ಶಕ್ತಿಯಾದ ವಿಜಯನಗರವು ನಮ್ಮ ಕವಿಗಳ ಕಾವ್ಯಗಳಲ್ಲಿ ಪ್ರತಿನಿಧೀಕರಣಗೊಂಡಿದೆ ಎನ್ನುವುದನ್ನು ಗುರ್ತಿಸುವುದೇ ಈ ಅಧ್ಯಯನ ಉದ್ದೇಶವಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ಕುರಿತು ಪ್ರತ್ಯೇಕವಾದ ಕವನ ಸಂಕಲನಗಳು ಹೊರಬಂದಿಲ್ಲ. ಕೇವಲ ಬಿಡಿಗವನಗಳು ಮಾತ್ರ ಬರೆಯಲ್ಪಟ್ಟಿವೆ. ಅವು ಪತ್ರಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಬಿಡಿಬಿಡಿಯಾಗಿ ಪ್ರಕಟವಾಗಿರುವ ಕವನಗಳನ್ನಿಟ್ಟುಕೊಂಡೇ ಅವುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ವಿಜಯನಗರವನ್ನು ಕುರಿತು ಬರೆದಿರುವ ಕವನಗಳು ಅಂದಿನ ವೈಭವವನ್ನು ಸಾರುವುದರ ಜೊತೆಗೆ, ಮತ್ತೆ ಅಂತಹ ನಾಡನ್ನು ನಾವು ಕಾಣಬೇಕಾಗಿದೆ ಎನ್ನುವ ಆಶಯ ಬಹುತೇಕ ಕವನಗಳಲ್ಲಿ ವ್ಯಕ್ತಗೊಂಡಿದೆ.

"ವಿಜಯನಗರವಳಿದರೇನು!
ಮರಳಿ ಬರದೆ ಕಳೆದ ವೈಭವ?

ಹಸಿಯ ಮಸಣವಾದರೇನು!
ಮತ್ತೆ ಬೆಳಗದಿಹುದೆ ಆ ಬುವಿ
......................................
ಭವ್ಯ ಭಾವ ಭವನದೊಳಗೆ
ಬೆಳಗುತಿಹುದು ಸಾವನರಿಯದೆ.
ಕವಿಯ ಮನದಿ ನೆಲೆ ತಳೆದು
ಮರಳಿ ಬರುವುದಂದಿನಾ ಸಿರಿ." (ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ, 1936:5)

ಎಂದೋ ಗತದಲ್ಲಿ ಹುದುಗಿ ಹೋದ ಒಂದು ಸಾಮ್ರಾಜ್ಯವು ನಮ್ಮೊಂದಿಗೆ ಇನ್ನೂ ಇದೇ ಎನ್ನುವಂತೆ ಚಿತ್ರಿಸುವುದು, ನಮ್ಮ ಮುಂದುವರೆದ ತಲೆಮಾರಿನೊಂದಿಗೆ ನಮ್ಮ ಹಿಂದಿನ ಪರಂಪರೆಯು ಇರುತ್ತದೆ. ಆಗಿನ ವೈಭವ ಮತ್ತೆ ಬಂದೇ ಬರುತ್ತದೆ. ಆದರೆ ಅದು ರೂಪದಲ್ಲಿ ಮಾತ್ರ ವ್ಯತ್ಯಾಸವನ್ನು ಪಡೆಯುತ್ತದೆ.

ಹಂಪೆಯನ್ನು ನೋಡಿದ ವರಕವಿ ಬೇಂದ್ರೆಯವರು ಒಂದು ಸಂದರ್ಭದಲ್ಲಿ ಮೆರೆದು ಮಾಯವಾದ ಸಾಮ್ರಾಜ್ಯವನ್ನು ಕುರಿತು :

ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು
ಕಾಳ ರಕ್ಕಸನ ಕಡೆಕೂಳು– ಬಾಳಕವಾದ
ನಾಡ ನಡುಮನೆಯ ಕಂಡೆ. (53)

ವಿಜಯನಗರವು ಕರ್ನಾಟಕದ ಕೇಂದ್ರ ಸ್ಥಳ. ಹಂಪೆಯು ಹಾಳಾಗಿ ಹೋಗಿದ್ದರೂ ಅದು ನಾಡಿನ ನಡುಮನೆಯಂತೆ ಎಂದು ಹೇಳಿದ್ದಾರೆ. ನಡುಮನೆಯು ಎಷ್ಟೇ ಹಾಳಾಗಿದ್ದರೂ ಅದಕ್ಕೆ ತನ್ನದೇ ಆದ ಮಹತ್ವವಿರುವಂತೆ, ವಿಜಯನಗರಕ್ಕೂ ತನ್ನದೇ ಆದ ಮಹತ್ವವಿದೆ. ಸಾಂಸ್ಕೃತಿಕ ಕರ್ನಾಟಕ ಎಂದು ಗುರುತಿಸಿದ ಪ್ರದೇಶದ ಕೇಂದ್ರಸ್ಥಳವದು. ಆ ಸಂದರ್ಭದಲ್ಲಿ ಅಖಂಡ ಕರ್ನಾಟಕದ ಕಲ್ಪನೆಯನ್ನು ಹೊತ್ತು ಹೊರಟಿದ್ದವರಿಗೆ ಹಂಪೆಯು ಪ್ರೇರಕವಾಯಿತು. ಆ ಸ್ಥಳದಿಂದಲೇ ಕರ್ನಾಟಕ ಏಕೀಕರಣದ ಹೋರಾಟ ತೀವ್ರಗೊಳ್ಳತೊಡಗಿತು.

ಬಿದ್ದ ರಾಜ್ಯವಿದಲ್ಲ ಉದ್ಬುದ್ಧವಾಗಿದ್ದು
ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ
ಇದ್ದ ಸಂಜೀವನವ ಜಪಿಸುವಂತಹ ಯೋಗಿ
ಕೊಂಪೆ ಹಂಪಿಯು ಇದಲ್ಲ (ದ.ರಾ.ಬೇಂದ್ರೆ 1936::.54)

ಈ ಸಾಮ್ರಾಜ್ಯವು ಅನ್ಯರ ದಾಳಿಯಿಂದ ಅವನತಿ ಹೊಂದಿದ್ದರೂ, ಕವಿಯ ಆ ನೆಲದ ಮೇಲಿನ ಪ್ರೇಮ ಅದನ್ನು ಒಪ್ಪುತ್ತಿಲ್ಲ. ಇಲ್ಲ ಈ ಸಾಮ್ರಾಜ್ಯ ಇಲ್ಲಿಯೇ ಇದೆ. ಇದು ನಾಶವಾಗಿಲ್ಲ; ಮತ್ತೆ ಹುಟ್ಟುವ ಶಕ್ತಿಯನ್ನು ಹೊಂದಿದೆ. ಇದು ಒಂದು ರೀತಿಯಲ್ಲಿ ಸಂಜೀವಿನಿಯಂತಹದ್ದು, ಅಂದರೆ ನಶಿಸಿದ್ದನ್ನು ಮತ್ತೆ ಚೇತನಗೊಳಿಸುವ ಶಕ್ತಿಯನ್ನು ಈ ಸಾಮ್ರಾಜ್ಯ ಹೊಂದಿದೆ ಎನ್ನುವ ಕವಿ ಭಾವನೆಯು ನಿಜಕ್ಕೂ ಮಾರ್ಮಿಕವಾದ ಮಾತು. ಸಾಮಾನ್ಯನ ಕಣ್ಣಿಗೆ ಕಾಣದೇ ಇರುವ ನಿಜವಾದ ಸತ್ಯದ ಸೌಂದರ್ಯ ಕವಿಗೆ ಭಾಸವಾಗಿದೆ. ಎಲ್ಲಿ ಸತ್ಯವಿದೆಯೋ ಅಲ್ಲಿ ಸೌಂದರ್ಯ ಎನ್ನುವ ತತ್ವವನ್ನು ಒಪ್ಪಿಕೊಂಡಂತ ಬೇಂದ್ರೆಯಂತಹ ಕವಿಗಳಿಗೆ ವಿಜಯನಗರವು ಬರುಡಲ್ಲ; ಅದು ತುಂಗೆಯಂತೆ ಸದಾ ಹೊಸದರೊಂದಿಗೆ ಉದಯಿಸುವ ನಾಡಾಗಿ ಕಾಣುತ್ತದೆ. ಅಂದರೆ ಅಂತಹ ಸಾಮ್ರಾಜ್ಯದ ಸ್ಫೂರ್ತಿ ಇಂದು ನಮಗಾಗಿ ಆ ಮೂಲಕ ನಾವು ಅಂತಹ ನಾಡೊಂದನ್ನು ಕಟ್ಟಿಕೊಳ್ಳಬೇಕಾಗಿದೆ ಎನ್ನುವುದು ಕವಿಯ ಅಂತರಾಳದ ತುಡಿತ, ಮಿಡಿತಗಳು ಇಲ್ಲಿ ಮೂಡಿಬಂದಿವೆ. ಮುಂದುವರೆದು ಅವರು ಹೇಳುತ್ತಾರೆ:

ಧರ್ಮ ಕರ್ಮದ ಪುರಾತನ ಪುರಗಳಿವು ಪೂರ್ವ<br>
ಧರ್ಮ ಬಲದಿಂದೇರಿ ಕರ್ಮ ಬಲದಿಂದಿಳಿದು<br>
ಮರ್ಮದೊಳು ನೆಡುವಂತೆ ಸಪ್ರಯೋಗಿಕವಾಗಿ<br>
ಕಲಿಸುವುವು ತತ್ವವೆಂದು. (ದ.ರಾ.ಬೇಂದ್ರೆ, 1936:54).

ಬೇಂದ್ರೆಯವರು ತಮ್ಮ 'ದೊಡ್ಡವರು' ಕವನದಲ್ಲಿ ಕನ್ನಡ ನಾಡಿನ ಶಿಲ್ಪಕಲೆಯ ಸೌಂದರ್ಯವನ್ನು ವರ್ಣಿಸಿದ್ದಾರೆ. ಶ್ರವಣಬೆಳ್ಗೊಳದ ಗೊಮ್ಮಟ, ವಿಜಯನಗರದ ಸಾಸಿವೆ ಗಣಪ, ಬಿಜಾಪುರ ಗೋಳಗೊಮ್ಮಟ, ಬೇಲೂರಿನ ಚೆನ್ನಕೇಶವ ದೇವಸ್ಥಾನದ ನಲ್ಲರೂಹಿನ ಕಲ್ಲು, ಹಂಪೆಯ ವಿಠ್ಠಲನ ದೇವಸ್ಥಾನದ ಸಪ್ತಸ್ವರ ನುಡಿಯುವ ಕಂಬಗಳು ಮತ್ತು ಶಾಸನ ಇವೆಲ್ಲವುಗಳು ಕನ್ನಡಿಗರ ನಾಡಿನ ಭವ್ಯ ಪರಂಪರೆಯ ಸಂದೇಶವನ್ನು ಹೊತ್ತು ನಿಂತಂತವು. ಹಾಗೆಯೇ ಈ ನಾಡಿನ ಸಂಸ್ಕೃತಿಯ ಪ್ರತೀಕಗಳೂ ಹೌದು. ಅವು ಹೊಸ ತಲೆಮಾರಿಗೆ ಆ ಪರಂಪರೆಯ ಸಂದೇಶವನ್ನು ಹರುಹುವ ಕೆಲಸವನ್ನು ಮಾಡುತ್ತಿವೆ. ಅವುಗಳಿಂದು ಶಿಲಾಧ್ಯಾನದಲ್ಲಿರುವ ಸಮಾಧಿಯಾದಂತಿವೆ. ಹಿಂದೆ ಹೇಗೆ ಕಲ್ಲಿಗೆ ಜೀವ ತುಂಬಿದ ಕನ್ನಡಿಗರ ಕೈವಾಡದಿಂದ್ರಜಾಲವು ಅನ್ಯರ ದಾಳಿಗೆ ಸಿಲುಕಿ ಈ ಸ್ಥಿತಿಗೆ ಬಂದಿವೆ. ಈಗ ಸಮಾಧಿಯಂತಿರುವ ಈ ಶಿಲೆಗಳಿಗೆ ಜೀವ ತುಂಬಬೇಕಾಗಿದೆ ಎನ್ನುತ್ತದೆ ಕವಿಮನ. ನಾವು ಕಟ್ಟಿಕೊಂಡದ್ದನ್ನು ಎಲ್ಲಿ ಕಳೆದುಕೊಂಡಿದ್ದೇವೆಯೋ, ಅಲ್ಲಿಯೇ ಮತ್ತೆ ಅದನ್ನು ಹುಡುಕಬೇಕಾಗಿದೆ ಎಂಬ ಸಂದೇಶ ಇಲ್ಲಿದೆ.

ಯವನರ ದಾಳಿಯಿಂದ ಈ ನೆಲ ಕಂಡ ಸುಂದರ, ಸರ್ವಧರ್ಮ ಸಮಾನತೆಯ, ಕನ್ನಡಿಗರ ಅಭಿಮಾನದ ಪ್ರತೀಕವಾದ ನಾಡೊಂದು ನಾಶವಾಗಿ ಹೋಯಿತು. ಅವರ

ಆಕ್ರಮಣದಿಂದ ಮಾರಿಗೆ ಔತಣವಾಗಿ ರಕ್ತ ಕೋಡಿ ಹೊಳೆಯಾಗಿ ಹರಿಯಿತು. ಅಂದು ನಯನಮನೋಹರವಾಗಿದ್ದ ನಗರ ಇಂದು ಹಾಳು ಕೊಂಪೆಯಾಯಿತು. ರಾಜ್ಯಲಕ್ಷ್ಮಿಯು ಮೆರೆದ ನಾಡು ಮಸಣದೊಡತಿಯ ಮಹಾಮನೆಯಾಯಿತು. ಗಗನವನ್ನು ಮುಟ್ಟುವಂತಿದ್ದ ಕಾಂತಿಯ ಗೋಪುರಗಳು ಮುರಿದು ಬಿದ್ದಿವೆ. ರತ್ನಖಚಿತವಾದ ಉಡುಗೆಯನ್ನು ತೊಟ್ಟಂತ ವೀರರು ಇಂದು ನೆಲಕಚ್ಚಿ ಬಿದ್ದಿದ್ದಾರೆ. ಇದೆಲ್ಲಾ ಆಗಲಿಕ್ಕೆ ಕಾಲನ ಬಲೆಯೇ ಕಾರಣ ಎನ್ನುವುದನ್ನು ಕವಿಗಳು ಹೇಳುತ್ತಾರೆ.

"ಇಂತಲ್ಲ! ಹೊಸತೊಂದು ಸ್ಫೂರ್ತಿಯದು ಜನಿಸುವುದು
ನಾಡಿನೊಳು ಹೊಸತೊಂದು ಸಾಮ್ರಾಜ್ಯವೇಳುವುದು
ಕನ್ನಡಕೆ ಹೃದಯವಿರುವನಕ ನೆರೆ ಬಾಳುವುದು;
ನಾಡ ಹಸುಮಕ್ಕಳಿಗೆ ಇದು ಕಾರ್ಯವೆನಿಸುವುದು."

(ವಿ.ಕೆ.ಗೋಕಾಕ, 1936: 40)

ಎಲ್ಲಿಯವರೆಗೆ ಕನ್ನಡಿಗನ ಹೃದಯ ಈ ನಾಡಿಗಾಗಿ ಮಿಡಿಯುತ್ತದೆಯೋ ಅಲ್ಲಿಯತನಕ ಈ ನಾಡು ನಾಶವಾಗುವುದಿಲ್ಲ. ಹಾಳಾಗಿರುವ ವಿಜಯನಗರವು ಸೃಷ್ಟಿಯಲ್ಲಿ ನಡೆಯುವ ಸಹಜ ಕ್ರಿಯೆ ಅಷ್ಟೇ. ಆದರೆ ಅಂತಹದನ್ನು ಕಟ್ಟಲಿಕ್ಕೆ ನಾವುಗಳು(ಕನ್ನಡಿಗರು) ಎಲ್ಲಿಯ ತನಕ ಸಿದ್ಧರಿರುತ್ತೇವೆಯೋ ಅಲ್ಲಿಯವರೆಗೆ ಅಂತಹ ವಿಜಯನಗರವನ್ನು ಮತ್ತೆ ಮತ್ತೆ ಕಟ್ಟಿಕೊಳ್ಳಬಹುದು; ಕಟ್ಟಿಕೊಳ್ಳಬೇಕು ಎನ್ನುತ್ತಾರೆ. ಅದಕ್ಕಾಗಿ ಕರುನಾಡಿನಾದ್ಯಂತ ನಾನು ಸಂಚರಿಸುತ್ತೇನೆ. ಎನ್ನುವ ಕವಿಗಳು:

"ಅದಕಂತೆ ಕರುನಾಡ ತುಂಬ ಸಂಚರಿಸುವೆನು
ಹಿಂದಿನವರೆನಕ ತಣಿಸದಿಹ ಬೆಂತರರಂತೆ;
ಇಂದಿನವರನು ಕನಸಿನಲಿ ಹೋಗಿ ಹರಸುವೆನು;
ಅವರೆದೆಯು ಪುಟಿಯುವದ ನೋಡಿ ತುಂತುರದಂತೆ
ಹಿಂದಿನವರನು ನೆನೆದು ಮುಂದಿಹುದ ಸ್ಮರಿಸುವೆನು;
ಕಂಡುಬರುತಿಹದೊಂದುಯುಗ-ಯುಗಾಂತರದಂತೆ!"

(ವಿ.ಕೆ.ಗೋಕಾಕ, 1936:40)

ಹಿಂದಿನವರರು ಕಟ್ಟಿದ್ದ ಸುಂದರ ನಾಡು ಹಾಳಾಗಿದ್ದಕ್ಕಲ್ಲ; ಅವರು ಅಂತಹ ನಾಡನ್ನು ಕಟ್ಟಿದ್ದಕ್ಕೆ ಅವರಿಗೆ ಋಣಿಯಾಗಬೇಕು. ಅವರು ಮುಂದಿನವರಿಗೆ ಗಣಿಯಾಗಬಲ್ಲ ನಾಡನ್ನು ಕಟ್ಟಿದ್ದಾರೆ. ಆ ಗಣಿಯಲ್ಲಿಯೇ ಅಗೆದು ಮುಂದಿನ ನಾಡೊಂದನ್ನು ಕಟ್ಟಬೇಕು. ಅದು ಹೇಗಾಗಬೇಕೆಂದರೆ ಸದಾ ಬಯಸಿದ್ದನ್ನು ನೀಡುವ ಕಲ್ಪವೃಕ್ಷದಂತಿರಬೇಕು. ನೀರಿದ್ದಡೆ ಮಾತ್ರ ಹೊರಹೊಮ್ಮುವ ವರತಿಯಂತಾಗದೆ. ಮರುಭೂಮಿಯಲ್ಲೂ ಚಿಮ್ಮುವ ಓಯಾಸಿಸ್ಸಿನಂತಾಗಬೇಕು.

ನಿಜವಲ್ಲ ನಿನ್ನಳಿವು ಮರೆಯಾದೆಯಷ್ಟೆ।
ಏಳು ಬೀಳಿನ ಧರ್ಮ ತೋರಿದೆಯಷ್ಟೆ।
ನಿನ್ನದವನತಿಯದತ್ಯುನ್ನತಿಯದಷ್ಟೆ।
ನಿನಗಳಿವೆ ಚಿರಂಜೀವಿ ಹೇ ವಿಜಯನಗರ ॥"(ಅಶ್ವತ್ಥ, 1936:: 107) ಈ ಸಾಮ್ರಾಜ್ಯ ಎಂದೋ ಮರೆಯಾಗಿ ಹೋಗಿದ್ದರೂ ಅದರ ನಿರಂತತೆಯನ್ನು ಕವಿ ಮನ ಕಾಣುತ್ತದೆ. ಅದಕ್ಕೆ ಕೊನೆಯಿಲ್ಲ. ಅದು ನಿತ್ಯನೂತನವಾದುದು. ಸ್ಫೂರ್ತಿಯ ಸೆಲೆಯಾದುದು ಎಂದು ಕವಿ ಮನತುಂಬಿ ಹಾಡುತ್ತಾನೆ.

ಸಾಲಿರಾಮಚಂದ್ರರಾಯರ 'ವಿಜಯ ದುಂದುಬಿ' ಕವನವು ಅನ್ಯರ ಅಕ್ರಮಣದಿಂದ ನಲುಗಿ ಹೋದ ನಾಡನ್ನು ಕಟ್ಟಿಕೊಳ್ಳುವುದಕ್ಕಾಗಿ ಜನರನ್ನು ಪ್ರೇರೇಪಿಸುತ್ತದೆ. ನಾಡೆಲ್ಲಾ ಮಸಣವಾಗಿ, ಬೇಗೆ ಬಲಿತು ಹರಿದಂತಹ ಕಪ್ಪು ಹೊಗೆಯನ್ನು ಎತ್ತಲು, ತೂರಲು, ಮುದುಡಿ ಹೋದಂತಹ ಉತ್ಸಾಹವನ್ನು, ಕಂದಿದ ಸಂಪತ್ತನ್ನು, ಬರುಡಾಗಿರುವ ಜೀವಲತೆಯನ್ನು ಹೊಂದಿದ ನಾಡು ಭಾಗ್ಯವನ್ನು ಕಳೆದುಕೊಂಡಿದೆ. ಉರಿಯುವ ಜ್ವಾಲೆಗೆ ಸಿಲುಕಿದ ಜನ ದಾರಿ ಕಾಣದೆ ವಿಚಲಿತರಾಗಿದ್ದಾರೆ. ಅಭಿಮಾನ ಕುಂದಿ ಹೋಗಿದೆ. ಇದಕ್ಕಿಂತ ಮಿಗಿಲಾದ ದೌರ್ಭಾಗ್ಯವಿದೆಯೇ, ಮರಣಕ್ಕಂಜಿ ಹಣೆಗೆ ಮಣ್ಣು ಹಚ್ಚಿಕೊಂಡು ಹೋರಾಡಲಿಕ್ಕೆ ಹಿಂಜರಿಕೆಯೇ? ವೈರಿಗೆ ಅಂಜಿ ನಿನ್ನ ಸಂಸ್ಕೃತಿ, ಧರ್ಮವನ್ನು ಅವರಿಗೆ ಮಾರಿ ಬದುಕುವುದು ಜೀವನವೇ. ಶರಣೆಂದು ಬಂದವರಿಗೆ ಆಶ್ರಯ ನೀಡುವುದು ನಿನ್ನ ಧರ್ಮ. ಆದರೆ ಅವರಿಗೆ ನೀನೇ ಶರಣೆಂದು ಬದುಕುವುದು ಉಚಿತವೇ? ದೇಶವು ಅವನತಿ ಹಂಚಿಗೆ ಬಂದು ನರಳುತ್ತಿರುವಾಗ, ಶತ್ರುಗಳಿಗಂಜಿ ಬದುಕುವುದು ಇದ್ದೂ ಸತ್ತಂತಲ್ಲವೇ? ಎಂದು ಜನರನ್ನು ಬಡಿದೆಚ್ಚರಿಸುತ್ತಾರೆ.

"ಜನನಿ ಭೂಜನನಿ ಭಾರತಜನನಿ ಘೋರವೇ
ದನೆಯಿಂದೆ ಬಳಲುತಿರೆ, ರಿಪುವತ್ತಲವಳ ಜೀ
ವನವನೇ ಪಿಳಿದು ಪೀರಲ್ ಬಗೆದು ಬಂದನುದ್ದಂಡನತಿದರ್ಪದಿಂದೆ
ತನಗಾವ ಗಂಡುಸಿದಿರೆನುತೆ! ಕರುನಾಡಿಗೀ-
ತನ ಸೊರ್ಕಿನುರಿ ಸೋಂಕೆ, ದಾಹಾತ್ಮಕಂ ತೇಜ-
ಮನುಪಮಂ ಪ್ರಕಟಮಾದತ್ತು ದುರ್ಮದಮದಪ್ರಧ್ವಂಸಿ ದಿವ್ಯಶಕ್ತಿ!"
(ಸಾಲಿರಾಮಚಂದ್ರರಾಯರ ಸಮಗ್ರಕಾವ್ಯಸಂ:ಶಿದ್ಧಲಿಂಗಣಶೆಟ್ಟಿ, 1996:5)

ದೇಶವು ಪರಕೀಯರ ಕೈಯಲ್ಲಿದ್ದಾಗ ಸಂರಕ್ಷಕನಂತೆ ಬಂದವರು ವಿದ್ಯಾರಣ್ಯರು. ತಮ್ಮ ಚೈತನ್ಯಸ್ಫೂರ್ತಿಯಿಂದ ಹೊಸ ನಾಡು ಉದಯಿಸಲಿಕ್ಕೆ ಕಾರಣರಾದರು. ಆಗ ನಾಡಿನ ಜನರು ಸಾವಿಗಂಜದೆ ಅಭಿಮಾನದಿಂದ, ವೀರತ್ವದಿಂದ ಹೋರಾಡಿದರು. ವಜ್ರದೇಹಿಗಳಾದ ಅವರಿಗೆ ಎದುರು ನಿಲ್ಲುವರಾರು, ತಮ್ಮ ಪ್ರತಾಪದಿಂದ ನಾಡಿನ ಉಜ್ವಲ ತೇಜವನ್ನು ಬೆಳಗಿಸಿದರು. ಆ ಮೂಲಕ ಹೊಸನಾಡನ್ನು ಕಟ್ಟಿಕೊಂಡರು. ಅವರು ಕಟ್ಟಿದ ಆ ನಾಡು(ವಿಜಯನಗರ)

ದಶದಿಕ್ಕುಗಳಿಗೂ ತನ್ನ ಜಯಧ್ವಜವನ್ನು ಹಾರಿಸಿತು. ಎನ್ನುವ ಸಂಗತಿಗಳು ಹಿಂದೂ ರಾಷ್ಟ್ರೀಯತೆಯನ್ನು ಬಲಪಡಿಸಲು ಪ್ರೋತ್ಸಾಹಿಸುವಂತಿವೆ.

ವಿಜಯನಗರವು ಸಕಲೈಶ್ವರ್ಯದಿಂದ ಬೆಳಗಿದ ನಾಡು. ಅದರ ನಿಸರ್ಗದ ಮಡಿಲೇ ಅಂತಹದ್ದು. ತುಂಗೆಯ ತಟದ ಆ ಮಂಗಳದ ಅಂಗಳದಲ್ಲಿ, ಗಿರಿಗಂವ್ವರಗಳ ತಾಣದಲ್ಲಿ, ಶ್ರೀರಾಮಚಂದ್ರನು ಪಾದಸ್ಪರ್ಷ ಮಾಡಿದ ಪುಣ್ಯ ಭೂಮಿಯಲ್ಲಿ, ಹಿಂದೂ ಧರ್ಮದ ನೆಲೆವೀಡಾಗಿದ್ದ ಪ್ರದೇಶದಲ್ಲಿ ಈ ಸಾಮ್ರಾಜ್ಯ ಉದಯವಾಯಿತು. ಆದರೆ ಆಗಿನ ಸ್ಥಿತಿ ಮಾತ್ರ ಚಿಂತಾಜನಕ ನಮ್ಮದನ್ನು ನಮ್ಮದೆಂದು ಹೇಳಲು ಬಾರದ ಸಂಕಟಮಯ ಪರಿಸ್ಥಿತಿ. ನಮ್ಮತನವನ್ನು ನಾವು ಕಳೆದುಕೊಂಡಿದ್ದ ಅತಂತ್ರ ಸ್ಥಿತಿ. ಕಗ್ಗತ್ತಲೆಯಲ್ಲಿ ಮುಳುಗಿಹೋಗಿದ್ದ ನಮ್ಮತನದ, ನಮ್ಮ ಸ್ವಾಭಿಮಾನದ ಸಂಕೇತವಾಗಿ ಈ ಸಾಮ್ರಾಜ್ಯ ಹುಟ್ಟಿಕೊಂಡಿತು.

"ಎತ್ತೋ ಹೋಗಿತ್ತು ಹಿಂದೂ ಜನರೆದೆಯೊಳಗಿಂದಾಗಲೇ ತಾನೆಯಾ ಸ್ವಾ
ಯತ್ತಪ್ರಾಜ್ಯಾರ್ಯ ಸಾಮ್ರಾಜ್ಯದ ರಚಯ ಸಂಕಲ್ಪವಾಪತ್ತು ಮುತ್ತಿ॥
ಟ್ಟಿತ್ತಾ ಕಗ್ಗತ್ತಲಲ್ಲೇ ವಿಜಯನಗರದಲ್ಲೆದ್ದು ಮೂಡಿತ್ತು ಕರ್ಣಾ।
ಟೋತ್ತುಂಗ ಸ್ವರ್ಣಸಿಹ್ಮಾಸನ ದಿನಮಣಿಯಾ ಮಾಧವಾಚಾರ್ಯರಿಂದ" ॥

**(ಪಂ. ಶಂಭುಶರ್ಮರು, 1936:93)**

ಅಂಧಕಾರದಲ್ಲಿ ಮುಳುಗಿ ದಾರಿ ಕಾಣದೆ ಪರಿತಪಿಸುತ್ತಿದ್ದ ಈ ನಾಡಿಗರಿಗೆ ದಾರಿ ತೋರಿಸಿ ಅವರ ಬಾಳನ್ನು ಬೆಳಗಿದ ಕೀರ್ತಿ ವಿದ್ಯಾರಣ್ಯರಿಗೆ ಸಲ್ಲುತ್ತದೆ. ಬಹುಶಃ ಹಿಂದೂಸ್ತಾನದ ಬಹುಭಾಗವನ್ನು ಆಕ್ರಮಿಸಿಕೊಂಡು ತಮ್ಮ ದರ್ಪದ ಆಡಳಿತದಿಂದ ಜನರ ಬದುಕನ್ನು ಅಲ್ಲಕಲ್ಲೋಲ ಮಾಡಿದ್ದ ಯವನರ ವಿರುದ್ಧ ಒಂದು ಸಬಲ ಸಾಮ್ರಾಜ್ಯವನ್ನು ಕಟ್ಟುವ, ಆ ಮೂಲಕ ಧರ್ಮವನ್ನು ರಕ್ಷಿಸಿಕೊಳ್ಳಬೇಕೆಂಬ ಉತ್ಕಟೇಚ್ಛೆಯಿಂದ ಶ್ರೀ ವಿದ್ಯಾರಣ್ಯರು ಹರಿಹರ ಬುಕ್ಕರ ಮೂಲಕ ಈ ಸಾಮ್ರಾಜ್ಯ ಸ್ಥಾಪಿಸಿದರು. ನಾಡನ್ನು ಅಥವಾ ದೇಶವನ್ನು ರಕ್ಷಿಸಿಕೊಳ್ಳಬೇಕೆಂದರೆ ಮೊದಲು ಧರ್ಮವನ್ನು ರಕ್ಷಿಸಿಕೊಳ್ಳಬೇಕು ಎಂಬ ಸಂಕಲ್ಪದ ಫಲವಾಗಿಯೇ ಈ ಮಹಾಸಾಮ್ರಾಜ್ಯದ ಸ್ಥಾಪನೆಯಾಯಿತು. 20ನೆಯ ಶತಮಾನದ ಆರಂಭ ಕಾಲಘಟ್ಟದಲ್ಲಿ ಇಂಡಿಯಾದಲ್ಲಿ ಆರಂಭಗೊಂಡ ರಾಷ್ಟ್ರೀಯ ಪ್ರಜ್ಞೆಗೆ ಇಂತಹ ಸ್ವಧರ್ಮದ, ಸ್ವಾಭಿಮಾನದ ಸಾಮ್ರಾಜ್ಯಗಳು ಮಾದರಿಯಾದವು. 'ಹಿಂದಣ ಹೆಜ್ಜೆಯನರಿದಲ್ಲದೆ ಮುಂದಣ ಹೆಜ್ಜೆಯನರಿಯಬಾರದು' ಎನ್ನುವಂತೆ ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಆಗಿಹೋದ ಸ್ಮರಣೀಯ ಸಾಮ್ರಾಜ್ಯವೇ ಇಂದು ನಮಗೆ ಸ್ಫೂರ್ತಿಯಾಗಿದೆ ಎಂದು ಕವಿಗಳು ಹಾಡಿ ಹೊಗಳಿದ್ದಾರೆ.

"ಎಂದಿಗೂ ನೀನಾಳು ನಮ್ಮ ಹೃದಯದಲಿ ।
ನಿನ್ನ ಕೀರ್ತಿ ಜ್ಯೋತಿ ಬೆಳಗುತಿರಲಲ್ಲಿ ।
ನಿನ್ನಾತ್ಮ ಬಲದೆಮ್ಮ ನೆಚ್ಚರಿಸುತಿರಲಿ ।

ನಿನ್ನ ಸಿರಿ ಮರಳಿತರೆ ಜಯ ವಿಜಯನಗರ ॥ (ಅಶ್ವತ್ಥ, 1936:107)

ಯವನರ ದುಷ್ಕೃತ್ಯಗಳಿಂದಾಗಿ ನಮ್ಮ ಪೂರ್ವಿಕರು ಅನುಭವಿಸುತ್ತಿದ್ದ ಯಾತನೆಯ ಬದುಕನ್ನು ಅಳಿಸಿ ಹಾಕಿ, ಜತನದ ಬಾಳನ್ನು ಬಾಳಲಿಕ್ಕೆ ರಕ್ಷಾ ಕೋಟೆಯಂತೆ ನಿಂತದ್ದು ವಿಜಯನಗರ; ಯಾರ ಅಮಾನವೀಯ ಕೃತ್ಯಗಳಿಗೆ ನಮ್ಮ ಮಣ್ಣಿನ ಜನರ ಮಾನವೀಯತೆ ಮಣ್ಣುಗೂಡಿ ಹೋಗುತ್ತಿತ್ತೋ ಅಂತವರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಿದ್ದು ವಿಜಯನಗರ; ಅನ್ಯರ ದಾಸ್ಯಕ್ಕೆ ಸಿಲುಕಿ ನಮ್ಮ ಸ್ವಾಭಿಮಾನ ಸತ್ತು ಹೋಗುತ್ತಿದ್ದಾಗ ಅದಕ್ಕೆ ಮತ್ತೆ ಜೀವ ನೀಡಿದ್ದು ವಿಜಯನಗರ; ಧೀರರ ನಾಡಿನಲ್ಲಿ ಹುಟ್ಟಿದ ಹುಟ್ಟುಗುಣಕ್ಕೆ ಪೆಟ್ಟು ಬಿದ್ದಾಗ ಅದಕ್ಕೆ ಪಟ್ಟ ಕಟ್ಟಿದ್ದು ವಿಜಯನಗರ; ಮಾನವಂತ ಮಾನಿನಿಯರ ಬದುಕು ಮಾಯವಾಗುತ್ತಿದ್ದಾಗ ಮಾನ ಉಳಿಸಿದ್ದು ವಿಜಯನಗರ; ಕಲಿಗಳ ಕೈಗಳು ಕೈಸೋತು ಕೂತಾಗ ಚೇತನ ನೀಡಿದ್ದು ವಿಜಯನಗರ; ಕವಿಗಳು ಲೆಖ್ಖಣಿಕೆ ಕದಲದೆ ನಿಂತಾಗ ಅದ ಕದಲಿಸಿದ್ದು ವಿಜಯನಗರ;

"ತುರುಕರು ಭಾರತೀಯರಸುವಾದ ಸುಧರ್ಮಗಳನ್ನು ಮಾನವ ।
ನ್ನರಸುಗಳನ್ನು ದೇಗುಲಗಳನ್ನಳಿಸುತ್ತದೊ ಕನ್ನಡಕ್ಕೆ ಬಂ ॥
ದೆರಗಿದರೆಂದು ನೊಂದು ಹೊಸಗನ್ನಡಗದ್ದುಗೆಗೇರಿ ಹೂರಣ ।
ನ್ನಿರಿದನು ಕನ್ನಡಕ್ಕೆ ಗೆಲವಿತ್ತನು ಕೆಚ್ಚೆದೆ ಗಂಡು ಬುಕ್ಕನು" ॥

(ಪಂ.ಶಂಭುಶರ್ಮ 1936:93)

ಎಂತಹ ಆಪತ್ಕಾಲದಲ್ಲಿ ಈ ವಿಜಯನಗರ ಉದಯಿಸಿತಲ್ಲ! ಆಧ್ಯಾತ್ಮಿಕ ಜೀವಿಗಳಾದ ಹಿಂದೂಗಳಿಗೆ ಒಂದೆಡೆ ತನ್ನಾತ್ಮದ ಕುರಿತಾದ ಹುಡುಕಾಟವಾದರೆ, ಮತ್ತೊಂದೆಡೆ ತನ್ನ ಬದುಕಿನ ಅಸ್ಥಿರತೆಯಿಂದಾಗಿ ಬದುಕು ಬಸವಳಿದು ಹೋಗಿತ್ತು. ಮೊದಲು ಬದುಕಿಗೆ ಆಶ್ರಯ ಸಿಕ್ಕರಲ್ಲವೆ ನಂತರ ಭವ ಬಂಧನದ ಚಿಂತೆ. ಅಂತಹ ಬದುಕನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟದ್ದಲ್ಲವೇ ಈ ಮಹಾಸಾಮ್ರಾಜ್ಯ. ಅಂತಹ ಸಾಮ್ರಾಜ್ಯದ ಧ್ಯೇಯವನ್ನು ನಾವಿಂದು ಮುಂದುವರೆಸಿಕೊಂಡು ಹೋಗಬೇಕಾಗಿದೆ ಎನ್ನುತ್ತದೆ ಇನ್ನೊಂದು ಕವಿಮನ.

"ಆರ್ಯ ವೀರರೆ ಕಾರ್ಯ ವೀರರೆ
ಆರ್ಯ ಮಾತೆಯ ತೇಜವ
ತೂರ್ಯತಾನದಿ ಕಾರ್ಯರೂಪದಿ
ಆರ್ಯ ರೂಪದಿ ತೋರಿರಿ.
ಆರ್ಯವಿಶ್ವವೊ ವಿಶ್ವವಾರ್ಯವೊ
ಆರ್ಯವಿಶ್ವವಗೈಯಿರಿ" (ಸ.ಪ.ಗಾಂವಕರ, 1936:59)

ಪರಧರ್ಮೀಯರ ಆಡಳಿತದ ಮುಷ್ಠಿಗೆ ಸಿಕ್ಕು ನಲುಗುತ್ತಿರುವ ಆರ್ಯರೇ, ನೀವು ನಿಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕು; ಬೆಳೆಸಿಕೊಳ್ಳಬೇಕು. ಅದಕ್ಕಾಗಿ ಕಂಕಣಬದ್ಧರಾಗಿ ನಿಲ್ಲಬೇಕು. ಆರ್ಯವನ್ನು ಕೇವಲ ನಮ್ಮನಮ್ಮಲ್ಲಿಯೇ ಉಳಿಸಿಕೊಳ್ಳದೆ ಅದನ್ನು ಜಗತ್ತಿನಾದ್ಯಂತ

ಪಸರಿಸುವಂತೆ ಮಾಡಬೇಕಾಗಿದೆ. ಎಲ್ಲರನ್ನೂ ಒಂದೇ ಭಾವದಿಂದ ಕಾಣುವಂತಹ ಇಂತಹ ಧರ್ಮವನ್ನು ಅವನತಿಯ ಹಂಚಿಗೆ ಹೋಗಲು ಬಿಡಬಾರದೆಂಬ ಕಳಕಳಿ ಮೇಲಿನ ಕವನದಲ್ಲಿ ಮೂಡಿಬಂದಿದೆ.

ಗೋಪಾಲ ಕೃಷ್ಣ ಅಡಿಗರ 'ವಿಜಯನಗರದ ನೆನಪು' ಕವಿತೆಯು ಚರಿತ್ರೆಯಲ್ಲಾದ ವಿಜಯನಗರದ ಉನ್ನತಿ ಮತ್ತು ಅವನತಿಯ ಚಿತ್ರಣವನ್ನು ನೀಡುವುದರೊಂದಿಗೆ, ವಾಸ್ತವದ ಸಂದರ್ಭದಲ್ಲಿ ಅಗತ್ಯವಾಗಿರುವ ಸಂಘಟನಾ ಶಕ್ತಿಯಿಂದ ದೇಶಕ್ಕಾಗಿ, ಭಾಷೆಗಾಗಿ ಹೋರಾಡುವವಂತೆ ಪ್ರೇರಣೆ ನೀಡುತ್ತದೆ.

"ಆರ್ನೂರು ವರ್ಷಗಳ ಜವನಿಕೆಯ ತೆರೆದುನ
ಮ್ಮಾ ರಾಜ್ಯದಾ ವಿಭವದುನ್ನತಿಯ ನೋಡು;
ಧೀರಗಂಭೀರತೆಯ, ತತ್ವಸತ್ವೋನ್ನತಿಯ
ವಾರಿನಿಧಿಯಲಿ ಮಿಂದು ಬಳಿಕ ಮುಂದೋಡು ।
..............................................................
ನಮ್ಮ ಹೆಮ್ಮೆಯ ಮಕುಟ ಗಂಡುತನದೇರಾಟ
ನಮ್ಮ ಸಂಸ್ಕೃತಿಕಲೆಗಳೊಂದು ಸವಿಯೂಟ;
ನಮ್ಮ ಬೆಳ್ಜಸದ ಗುಡಿ, ಸಾಹಸದ ತುತ್ತತುದಿ
ನಮ್ಮ ಸ್ವತ್ವದ ಸತ್ವದುರಿ ವಿಜಯನಗರಿ" ।(ಗೋಪಾಲಕೃಷ್ಣ ಅಡಿಗ,2000: 82)

ಇಲ್ಲಿ ವ್ಯಕ್ತವಾಗಿರುವ ನಮ್ಮದೆನ್ನುವ ಅವಧಾರಣೆ ಸ್ವಾರ್ಥದಿಂದ ಹುಟ್ಟಿದ್ದಲ್ಲ. ಅದು ಸ್ವಾಭಿಮಾನದ ಸಂಕೇತವಾಗಿ, ಸಮೂಹದ ಧ್ವನಿಯಾಗಿ ಮೂಡಿ ಬಂದದ್ದು. ಯಾವಾಗ ನಮ್ಮದು ಎನ್ನುವ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುತ್ತದೆಯೋ ಆಗ ಸ್ವಾಭಿಮಾನವುಳ್ಳ ಪ್ರತಿಯೊಬ್ಬನಲ್ಲಿ ಇದು ಕಾಣಿಸಿಕೊಳ್ಳುತ್ತದೆ. ಆಗ ಅದನ್ನು ನನ್ನದು ಎನ್ನುವ ಹಕ್ಕೊತ್ತಾಯದ ಮೂಲಕ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ತನ್ನದೆನ್ನುವ ದೇಶ ಅನ್ಯರ ಕೈವಶವಾದಾಗ ಅವನಲ್ಲುಂಟಾಗುವ ತಳಮಳ ಮತ್ತು ಅದನ್ನು ತನ್ನದೆಂದು ಪ್ರತಿಪಾದಿಸಿ ದೃಢಪಡಿಸಿದ ಪ್ರಯತ್ನ ಇಲ್ಲಿ ಕಾಣುತ್ತದೆ.

"ಇಂದು ಜಡತೆಯ ಹುದುಲೊಳಾಳ್ದ ಕನ್ನಡದ ಹೃದಯ
ಯಾಂಧಕಾರದಿ ವಿಜಯನಗರದಾ ನೆನಪು
ಬಂದೆಮ್ಮ ಧಮನುಧಮನಿಯಲಿ ಧುಮುಧುಮಿಸಿದರೆ
ಬಂದೇ ಬರುವುದೆಮ್ಮ ಮುಂಬಾಳ್ಗೆ ಬೆಳಕು"

(ಗೋಪಾಲಕೃಷ್ಣ ಅಡಿಗ. 2000: 82)

ಅನ್ಯರ ಆಕ್ರಮಣದಿಂದ ನಮ್ಮ ನಾಡಿನ ಸಂಸ್ಕೃತಿ ಅವನತಿಗೊಳಗಾಗುತ್ತಿದ್ದಾಗ ಅಂತಹ ಸಂಸ್ಕೃತಿಯನ್ನು ಕಾಪಾಡುವುದಕ್ಕಾಗಿ ಹುಟ್ಟಿದ್ದು ವಿಜಯನಗರ. ಬ್ರಿಟಿಷರ ಆಕ್ರಮಣದಿಂದ

ನಮ್ಮ ಸಾಂಸ್ಕೃತಿಕ ಜೀವನ ದಿಕ್ಕೆಟ್ಟ ಸಮಯದಲ್ಲಿ ಈ ಹಿಂದೆ ವಿಜಯನಗರವು ಅನ್ಯರ ಆಕ್ರಮಣಗಳಿಗೆ ಒಡ್ಡಿದ ಪ್ರತಿರೋಧವನ್ನು ಸಮಕಾಲೀನ ಸಂದರ್ಭದ ವಾಸ್ತವ ಚಿತ್ರಣದೊಂದಿಗೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಾರೆ. "ನಿಮ್ಮ, ನನ್ನ ಜೀವನದ ತೀರ್ಪು ನಮ್ಮ ಕನ್ನಡತಾಯ ಸೇವೆ. ಓ ಕನ್ನಡಿಗರಿರಾ, ನಿಮ್ಮ ಹಿರಿಯರ ಹೂದೋಟವನ್ನು ಹೊಕ್ಕು, ಹೊಸ ನೇಗಿಲಿನಿಂದ ಆಳವಾಗಿ ಉತ್ತು, ಹೊಸ ಹೊಸ ಹೊಂಬೆಳೆಗಳನ್ನು ಮಾಡಿ! ಕನ್ನಡ ನಾಡಿನ ಮಕ್ಕಳು ಕನ್ನಡದಿಂದ ಬೆಳೆಯಲಿ! ಕನ್ನಡ ನಾಡು ಕನ್ನಡದಿಂದ ಕೂಡಲಿ! ಕನ್ನಡ ಬಾಳಲಿ, ಗೆಲ್ಲಲಿ!" ಎನ್ನುವ ಬಿ.ಎಂ.ಶ್ರೀಯವರ ಮಾತನ್ನು ಈ ಕವನ ಧ್ವನಿಸುತ್ತದೆ.

ಕಳೆದ ಶತಮಾನದ ಆರಂಭದ ದಶಕದಲ್ಲಿ ನಮ್ಮವರಲ್ಲಿ ರಾಷ್ಟ್ರೀಯ ಪ್ರಜ್ಞೆಯು ಕುಡಿಯೊಡೆಯಿತು.

> "ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಇವು ಆಗಿನ ರಾಷ್ಟ್ರೀಯತೆಯಲ್ಲಿ ಒಡೆದು ಕಾಣುವ ಆಯಾಮಗಳು. ಭಾವಾತಿರೇಕ, ಕನಸುಗಾರಿಕೆ ಮತ್ತು ವಸ್ತುಸ್ಥಿತಿಯನ್ನು ಮರೆತ ಆದರ್ಶಪ್ರಿಯತೆ ಈಗ ನಮಗೆ ಸೌಲಭ್ಯಗಳಾಗಿ ಕಂಡರೆ ಆಗ ಇವೇ ಶಕ್ತಿಗಳಾಗಿದ್ದವು."
>
> (ಸುಮತೀಂದ್ರ ನಾಡಿಗ, 1993:22.)

ಇಂತಹ ಶಕ್ತಿಯೇ ಆಗಿನವರ ದೇಶಪ್ರೇಮದ ಜೀವಾಳವಾಯಿತು. ಯಾವುದೇ ಪ್ರದೇಶದ ಮಣ್ಣಿನಲ್ಲಿ ಹುಟ್ಟಿ, ಅಲ್ಲಿನ ಮಣ್ಣಿನ ಸೊಗಡನ್ನು ಮೈಗೂಡಿಸಿಕೊಂಡು ಬೆಳೆದ ಪ್ರತಿಯೊಬ್ಬ ವ್ಯಕ್ತಿಗೂ ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಯಷ್ಟೇ ಬದುಕು ರೂಪಿಸುವ ನೆಲದಾಯಿ(ಜನ್ಮಭೂಮಿ)ಯೂ ಮುಖ್ಯಳಾಗುತ್ತಾಳೆ. ಹೆತ್ತ ತಾಯಿ ಶಾರೀರಿಕವಾದ ಬಾಹ್ಯ ರೂಪಕ್ಕೆ ಕಾರಣಳಾದರೆ, ಜನ್ಮಭೂಮಿಯು ಅಂತರಂಗದ ರೂಪಕ್ಕೆ ಕಾರಣಳಾಗುತ್ತಾಳೆ. ಜನ್ಮಕೊಟ್ಟವಳಿಗೆ ಮಾತ್ರ ಪ್ರಾಧಾನ್ಯತೆಯನ್ನು ನೀಡಿ ಪೊರೆವ ತಾಯಿಯ ಬಗ್ಗೆ ನಿರ್ಲಕ್ಷ್ಯ ತೋರುವುದು ಯಾವ ನ್ಯಾಯ. ಅದಕ್ಕಾಗಿ ಹೆತ್ತವಳು ಅಷ್ಟೆ; ಹೊತ್ತವಳೂ ಅಷ್ಟೆ ಇಬ್ಬರನ್ನೂ ಒಂದೇ ಸ್ಥಾನದಲ್ಲಿ ನಿಲ್ಲಿಸಿ ನೋಡಬೇಕಾಗಿದೆ.

"ಬೆಳಗಿ ಪಡೆಯಿರಿ ಯಶವ ।
ಬೆಳಗಿ ಮಾತೆಯ ಪೆಸರ ।
ತೊಳೆದು ಸೇಡಿನ ಬೀಜ ।
ಉಳಿದು ಸೋದರರೊಡನೆ ॥
ಅಳಿದು ಕೀರ್ತಿಯ ಪಡೆದು
ಸಾರಿ ಹಂಪೆಯ ಪೆಂಪು॥" (ಬಿ.ವಿ.ರಮಣನ್, 1936:218) ಎನ್ನುವಲ್ಲಿ ಮೇಲೆ

ಸೂಚಿಸಿದ ಭಾವ ವ್ಯಕ್ತವಾಗಿದೆ. ಮುಂದುವರೆದು:

"ಶಿಲ್ಪರಾಜನ ಸಿಂಗ ।
ನೃತ್ಯಗೀತದ ರಂಗ ॥
ಮುತ್ತು ಮಾಣಿಕದಂಗ ।
ವಂದು ಕಲೆಗಳ ಗಂಗ ॥
..................................
ಕನ್ನಡಿಗ ನೀನೋಡು ।
ಮುನ್ನ ಉನ್ನತ ನಾಡು ।
ಕನ್ನಡೆಯ ಸಿರಿ ಬೀಡು ।
ನಿನ್ನ ವೀರ್ಯದ ಕೋಡು॥"(ಬಿ.ವಿ.ರಮಣನ್, 1936:218)

ಒಂದು ನಾಡಿನ ಆಂತರಿಕ ಮತ್ತು ನಿಜವಾದ ಸಂಪತ್ತೆಂದರೆ ಅಲ್ಲಿನ ಕಲೆ, ಸಾಹಿತ್ಯ ಸಂಸ್ಕೃತಿ. ಅದು ಪ್ರತಿಯೊಂದು ನಾಡಿನಲ್ಲಿ ತನ್ನ ಪ್ರತ್ಯೇಕ ವಿಶಿಷ್ಟತೆಯಿಂದ ಕೂಡಿ ಜನಮನಸೂರೆಗೊಳ್ಳುತ್ತದೆ. ಅಂತಹ ಸಮೃದ್ಧವಾದ ಕಲೆ, ಸಾಹಿತ್ಯ ಮತ್ತು ಸುಸಂಸ್ಕೃತಿಯನ್ನು ಹೊಂದಿದ ನಾಡು ವಿಜಯನಗರ. ವಿಜಯನಗರದ ವರ್ಣನೆಯನ್ನು ಮಾಡದ ಕವಿಯಿಲ್ಲ. ಅದನ್ನು ಕಾಣದ ಪ್ರವಾಸಿಯಿಲ್ಲ. ಬಹುಶಃ ದೇಶಿಯರನ್ನಷ್ಟೇ ಅಲ್ಲ ವಿದೇಶಿಯರಿಂದಲೂ ಕೊಂಡಾಡಿಸಿಕೊಂಡ ಕೀರ್ತಿ ಇಲ್ಲಿನ ಕಲೆ ಮತ್ತು ಸಂಸ್ಕೃತಿಗಿದೆ. ಇವುಗಳ ಹಿರಿಮೆಯಿಂದಲೇ ಈ ಸಾಮ್ರಾಜ್ಯ ತನ್ನಡೆ ಜಗತ್ತಿನ ಗಮನ ಸೆಳೆದಿತ್ತು; ಸೆಳೆಯುತ್ತಿದೆ; ಸೆಳೆಯುತ್ತದೆ. ಇಲ್ಲಿನ ಕಲಾಕೃತಿಗಳು ಅಂದಿನ ಜನರ ಜೀವನ ವಿಧಾನವನ್ನು ಅರಿಯುವಲ್ಲಿ ಪ್ರಮುಖವಾಗುತ್ತವೆ. ಜೊತೆಗೆ ಮುಂದೆ ಬರುವ ಅಲ್ಲಿನ ಜನರ ಜೀವನದೊಂದಿಗೆ ಭಾವನಾತ್ಮಕವಾಗಿ ಬೆರೆತುಹೋಗುತ್ತವೆ. ಹೀಗೆ ಭಾವನಾತ್ಮಕವಾಗಿ ಬೆರೆತುಹೋದ ನಮ್ಮ ಪೂರ್ವದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಪೇಕ್ಷಿಸಲಾರ. ತನ್ನ ಭಾವನಾತ್ಮಕತೆ ಆತಂಕ ಉಂಟಾದಾಗ ಅದನ್ನು ಕಾಪಾಡಿಕೊಳ್ಳುವ ಸಲುವಾಗಿ ಭಾವನಾತ್ಮಕತೆಗೆ ಸಂಬಂಧಿಸಿದ ಅಂಶಗಳ ಹಿಂದಿರುವವುಗಳ ರಕ್ಷಣೆಗೆ ಮುಂದಾಗುತ್ತಾನೆ. ಅವುಗಳ ಮಹತ್ವವನ್ನು, ಹಿರಿಮೆಯನ್ನು ತಿಳಿಸುತ್ತಾ ಪುನರ್ ಸೃಷ್ಠಿಯ ಕಾರ್ಯಕ್ಕೆ ಕೈ ಹಾಕುತ್ತಾನೆ. ಆ ಮೂಲಕ ತನ್ನತನವನ್ನು ಗುರುತಿಸಿಕೊಳ್ಳುತ್ತಾನೆ ಎನ್ನುವುದನ್ನು ಮೇಲಿನ ಕವನದಲ್ಲಿ ಹೇಳಲಾಗಿದೆ.

ನಾಡು-ನುಡಿಯ ಮೇಲೆ ಮಮತೆಯಿದ್ದವನಿಗೆ ಪ್ರೇಮಭಾವ ಉಕ್ಕಿ ಹರಿಯುತ್ತದೆ. ಆ ಪ್ರೇಮಭಾವಕ್ಕೆ ಧಕ್ಕೆಯಾದಾಗ, ಅವನನುಭವಿಸುವ ಆ ರಸಾನಾಂದಕ್ಕೆ ರಸಾಭಾಸವಾದಾಗ ಆತ ಕ್ರೋಧನಾಗುತ್ತಾನೆ, ವೀರನಾಗುತ್ತಾನೆ. ವೀರಾವೇಶದಲಿ ತನ್ನದನ್ನು ಉಳಿಸಿಕೊಳ್ಳುವುದಕ್ಕಾಗಿ ಪಣತೊಡುತ್ತಾನೆ.

"ಕನ್ನಡ ನಾಡಿನ ಮನ್ನಣೆಕೆಣಕಲು
ಯವನರು ಬಂದಿಹರ ।
ಕನ್ನಡಬಂಟರ ಕಬ್ಬಿಣದೆದೆಗಳ

ನವರೇ ಕೆಣಕಿಹರ ।
ಅಲ್ಲಿಂದಲ್ಲಿಗೆ ಓಡಿಸದಿರುವೆನೆ?
ಮುಕ್ಕಿಪೆ ಹುಡಿಯನ್ನು ।
ನೋಡಬಾರಲೆ! ಕುರುಬರ ಕುವರಿ
ಕನ್ನಡ ಪಡೆಯನ್ನು ।
ಕೇಳಲಾರೆಯ? ಮೋಹರದಬ್ಬರ
ಮುತ್ತಿದೆ ಮುಗಿಲನ್ನು" ॥
(ಕೃಷ್ಣಮೂರ್ತಿ ಪುರಾಣಿಕ 1936 202–204)

ಎಂದು ವೀರಾವೇಶದಿಂದ ನಾಡನ್ನು ರಕ್ಷಿಸಲಿಕ್ಕಾಗಿ ಗಂಡ ಹೋಗುತ್ತಾನೆ. ಅವನನ್ನು ಕಳಿಸುವುದು ಹೆಂಡತಿಯ ಧರ್ಮ. ಒಂದು ವೇಳೆ ಗಂಡನನ್ನು ಯುದ್ಧಕ್ಕೆ ಬೇಡವೆಂದರೆ? ಛೇ! ಅಂತಹ ಕೆಲಸವನ್ನು ಕನ್ನಡದ ನಾರಿಮಣಿ ಮಾಡುವಳೆ? ವೈರಿಗಳನ್ನು ಹೊಡೆದೋಡಿಸಲು ನಾಡಿಗೆ ನಾಡೇ ಸಿಡಿದೆದ್ದಿರುವಾಗ; ಮಡದಿಯ ಮಾತಿಗೆ ಕಟ್ಟುಬಿದ್ದು ದೇಶದ್ರೋಹಿಯನ್ನಾಗಿ ಮಾಡಲೆ? ನಾಡಿಗೆ ಆಪತ್ತು ಬಂದಾಗ ಅದನ್ನು ತಡೆಯದಿದ್ದರೆ ಅದೇ ನಮಗೆ ನರಕವಲ್ಲವೆ? ಪತಿಯನ್ನು ಯುದ್ಧಕ್ಕೆ ಕಳುಹಿಸುವುದು ಯಾವ ಗರತಿಗಾದರೂ ಕಷ್ಟ. ಆದರೆ ಪ್ರೇಮಕ್ಕಾಗಿ ಮನೆಯಲ್ಲಿಟ್ಟುಕೊಂಡರೆ ಆತನನ್ನು ಷಂಡನನ್ನಾಗಿಸಿದಂತೆ. ಒಂದೆಡೆ ತಾನು ಗರತಿಯ ಬಾಳನ್ನು ಬಾಳಬೇಕಾದರೆ ತನ್ನ ಗಂಡನನ್ನು ಉಳಿಸಿಕೊಳ್ಳಬೇಕು. ಆದರೆ ಈ ಹೆಣ್ಣು ಯಾರು? ಕನ್ನಡದವಳು! ಕನ್ನಡದೆಣ್ಣು ಯಾವತ್ತು ಷಂಡರಿಗೆ ಹಾರ ಹಾಕಿದವಳಲ್ಲ. ಅಂತವಳು ಯುದ್ಧಕ್ಕೆ ಬೇಡ ಎನ್ನುವುದುಂಟೆ. ಯುದ್ಧದಲ್ಲಿ ಜಯಶಾಲಿಯಾಗಿ ಬಾ ಎಂದು ಗಂಡನನ್ನು ಕಳುಹಿಸುವುದಕ್ಕಿಂತ ಸಂತೋಷ ಬೇರೇನಿದೆ. ನಾಡು ಸೌಖ್ಯವಾಗಿದ್ದರೆ ತಾನೇ ತಾವು ಸಂತೋಷದಿಂದಿರುವುದು. ನಾಡೇ ನರಕವಾದಾಗ ಬಾಳು ಬರಡಾಗಲಾರದೆ? ಎನ್ನುವ ಧ್ವನಿ ಈ ಕವನದಲ್ಲಿ ಮನೋಜ್ಞವಾಗಿ ಮೂಡಿ ಬಂದಿದೆ.

ಹಾಗೆಯೇ ಆ ಕಾಲದ ಜೀವನಮೌಲ್ಯಗಳು ಮತ್ತು ಜನರು ಅವುಗಳನ್ನು ಅನುಸರಿಸುತ್ತಿದ್ದ ಚಿತ್ರಣ ವ್ಯಕ್ತಗೊಂಡಿದೆ. ಅಂದಿನ ಸಂದರ್ಭದಲ್ಲಿ ನಾಡಿಗಾಗಿ ದುಡಿದದ್ದು ಗಂಡಾದರೆ; ನಾಡಿಗಾಗಿ ಮನ ಮಿಡಿದದ್ದು ಮಹಿಳೆ. ಅತ್ತ ಗಂಡನಾದವನು ರಣರಂಗದಲ್ಲಿ ಭೀಕರವಾಗಿ ಹೋರಾಡುತ್ತಿದ್ದಾನೆ. ಇತ್ತ ಮನೆಯಲ್ಲಿ ಮಡದಿಯಾದವಳು ಅವನಿಗಾಗಿ ಪರಿತಪಿಸುತ್ತಾಳೆ. ಕಾಳಗಕ್ಕೆಂದು ಹೋದ ಗಂಡ ಮೂರು ತಿಂಗಳಾದರೂ ಮನೆ ಸೇರಲಿಲ್ಲ! ರಣರಂಗದಲಿ ಆದುದೇನೆಂಬ ವಾರ್ತೆಯೂ ಇಲ್ಲ. ನಲ್ಲನ ತೋಳಾಸರೆಯಲ್ಲಿ ನಲ್ಮೆಯ ಬದುಕನ್ನು ಬಾಳಬೇಕೆಂದು ಕನಸು ಕಂಡಿದ್ದ ಆ ಕನ್ಯೆಗೆ ಅದೆಷ್ಟು ವೇದನೆಯಾಗಿರಬಹುದು! ಮತ್ತೊಂದು ಕ್ಷಣ ಆ ಮಹಿಳೆ ಏನಿದು ಬಾಳು? ಬರೀ ಪ್ರೇಮದ, ಕಾಮದಾಸೆಗಷ್ಟೇ ಅಲ್ಲವೆ? ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಾ, ಗಂಡ ಹೋದರೇನು, ಈ ದೇಹ ಶಾಶ್ವತವೇ? ಎಂದಾದರೊಂದು ದಿನ ಮಣ್ಣಿನಲಿ ಮಣ್ಣಾಗಬೇಕಲ್ಲ. ಸುಮ್ಮನೇ ಸಾಯುವುದಕ್ಕಿಂತ ವೀರನಾಗಿ

ಹೋರಾಡಿ ವೀರ ಮರಣಹೊಂದಿದರೆ ಅದಕ್ಕಿಂತ ಬೇರೆ ಸ್ವರ್ಗವಿದೆಯೇ ಎಂದು ಸಮಾಧಾನ ಪಟ್ಟುಕೊಳ್ಳುತ್ತಾಳೆ. ಕೊನೆಗೆ ಪತಿರಾಯನು ಯುದ್ಧದಲಿ ಹೋರಾಡುತ್ತಲೇ ವೀರಮರಣ ಹೊಂದಿದ. ಉಳಿದದ್ದೇನು! ಅನ್ಯರ ಕೈಗೆ ಸಿಕ್ಕು ಅವಮಾನಿತಳಾಗಿ ಬಾಳಬೇಕೆ? ಅದಾಗದು! ಅದೂ ಕನ್ನಡ ವೀರನಾರಿ ಮಾನಿನಿಯಿಂದ. ಬದುಕುವ ಆಸೆಗಾಗಿ ಗರತಿ ಎಂಬ ಹೆಸರಿಗೆ ಕಳಂಕ ತರುವುದೇ. ಅದು ಹೇಗೆ ಸಾಧ್ಯ. ತಾನು ಕೂಡ ವೀರ ಮರಣದ ಹಾದಿಯನ್ನೇ ತುಳಿಯುತ್ತಾಳೆ. ಎಂದು ಚಿತ್ರಿಸುವ ಈ ಕವನ ದೇಶಕ್ಕಾಗಿ ತಮ್ಮ ಬಾಳನ್ನೇ ಸಮರ್ಪಿಸುವ ವೀರರ ಜೊತೆಗೆ, ಅಂತಹ ವೀರರ ಹೆಗಲಿಗೆ ಪ್ರೇರಕರಾಗಿ ನಾರಿಯರೂ ಇದ್ದರೂ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸುತ್ತದೆ. ಜೊತೆಗೆ ಅಂದಿನ ಕ್ಷಾತ್ರಯುಗದ ಜೀವನ ವಿಧಾನವನ್ನು ನಮ್ಮ ಕಣ್ಣಮುಂದಿಡುತ್ತದೆ.

ವಿಜಯನಗರ ಸಾಮ್ರಾಜ್ಯವು ಕೇವಲ ಸ್ವಾರ್ಥತೆಗಾಗಿ ಹುಟ್ಟಿದ್ದಲ್ಲ. ಆ ಸಾಮ್ರಾಜ್ಯಕ್ಕೆ ಅದರದೇ ಆದ ಪ್ರಮುಖ ಕರ್ತವ್ಯಗಳಿದ್ದವು. ಮುಖ್ಯವಾಗಿ ಮುಸ್ಲಿಮರ ದಾಳಿಯಿಂದ ಬೆಂದು ಬಸವಳಿದಿದ್ದ ಹಿಂದೂ ಧರ್ಮಕ್ಕೆ ಪುನಃಶ್ಚೇತನ ನೀಡುವುದು. ಕನ್ನಡ ಮಣ್ಣಿನ ಮಕ್ಕಳ ಬಾಳನ್ನು ಹಸನುಗೊಳಿಸುವುದು. ಕಲೆ, ಸಾಹಿತ್ಯ, ಸಂಸ್ಕೃತಿಯ ಸಮೃದ್ಧಿಗೆ ಪ್ರೋತ್ಸಾಹ ನೀಡುವುದು. ಇಂತಹ ಆಸೆಗಳನ್ನೆಲ್ಲಾ ಆ ಸಾಮ್ರಾಜ್ಯ ಲಾಲಿಸಿದೆ, ಪೋಷಿಸಿದೆ, ಬೆಳೆಸಿದೆ. ಅದಕ್ಕಾಗಿ ಕವಿ ಮನ ಈ ಸಾಮ್ರಾಜ್ಯವನ್ನು ಕೊಂಡಾಡುತ್ತದೆ.

> "ವಿದ್ಯಾರಣ್ಯರು ಕಟ್ಟಿದ ನಾಡು।
> ಐಸಿರಿಯಿಂದಲಿ ಬಲವನು ಹೊಂದಿ,
> ಧರ್ಮದ ಪಥದಲಿ ನಡೆಯುತ ಬಂದು,
> ಆಶ್ರಯಹೊಕ್ಕರಿಗಾಶ್ರಯವಿತ್ತು,
> ಆರ್ಯಧರ್ಮಕೆ ಮೇಲ್ಮೆಯನಿತ್ತು,
> ಬೆಳೆದುದು ಸತ್ಯಕೆ ಮೈತೆತ್ತು।

(ಟಿ.ಎನ್.ಶ್ರೀನಿವಾಸಮೂರ್ತಿ, 1936:194)

ನ್ಯಾಯ, ನೀತಿ, ಧರ್ಮಕ್ಕೆ ಬಾಗಿ ನಡೆದದ್ದು ವಿಜಯನಗರ. ಆದುದರಿಂದಲೇ ಅದು ಅಷ್ಟೊಂದು ಸಮೃದ್ಧಿಯ ನಾಡಾಗಿತ್ತು. ಈ ಸಾಮ್ರಾಜ್ಯ ಹುಟ್ಟಿದ್ದಾದರೂ ಎಲ್ಲಿ? ಮೊಲವು ನಾಯಿಯನ್ನು ಬೆನ್ನು ಹತ್ತಿದ್ದ ಸ್ಥಳದಲ್ಲಿಯಲ್ಲವೇ! ವಿದ್ಯಾರಣ್ಯರಂತಹ ಮಹಾಮುನಿಗಳ ಮಾರ್ಗದರ್ಶನದಿಂದಲ್ಲವೇ ಇದು ಬೆಳೆದದ್ದು. ಹರಿಹರ ಬುಕ್ಕರಂತಹ ಮಹಾನ್ ವೀರರಿಂದಲ್ಲವೆ ಸ್ಪಷ್ಟ ರೂಪ ಪಡೆದುಕೊಂಡದ್ದು. ಇವೆಲ್ಲವಕ್ಕೆ ವಿರುದ್ಧವಾಗಿ ಬಾಳಲು ಹೇಗೆ ಸಾಧ್ಯ. ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡೇ ಆ ಸಾಮ್ರಾಜ್ಯ ಬಾಳಿ ಬದುಕಿದ್ದು. ಆದರೆ ಈ ಧರ್ಮದ ನಾಡಿಗೆ ಒದಗಿದ ಸ್ಥಿತಿ ಎಂತಹದ್ದು. ದುರ್ಭರ! ಭೀಕರವಲ್ಲವೆ. ಅಂದಿನ

ಆ ವೈಭವ ಈಗ ಕೇವಲ ಕನಸು ಮಾತ್ರ, ಅದನ್ನು ನೆನೆಯುವುದರ ಮೂಲಕ ಇಂದು ನಾವು ಮಾಡಬೇಕಾದುದೇನು? ಎನ್ನುವುದಕ್ಕೆ ಕವಿ ಮುಂದುವರೆದು:

"ಧರ್ಮಕೆ ಮೈಗೊಡು। ಮೈತ್ರಿಯ ಗಳಿಸು
ನಾಡಿನ ನಲ್ಮೆಯ ಕಳೆಯದೆ ಉಳುಹು।
ಸ್ವಾತಂತ್ರ್ಯಕೆ ದುಡಿ। ಸಂತೃಪ್ತಿಯಲಿ।
ಬಾಳೆಲೆ ಜೀವವೆ, ಧರ್ಮದ ನೆಲೆಯಲಿ।
ಕಾಣುವೆ ನಾಕವ ಲೋಕದೊಳೆ
ಅಮೃತತೆ ಸೌಖ್ಯವ ಬಾಳಿನೊಳೆ।
ಮೆರೆಯಲಿ ವಿದ್ಯಾನಗರವು ಸಿರಿಮರಳಿ।
ಸುಗತಿಯನೈದಲಿ ಕಾಲವು ಹೊರಳಿ।"

(ಟಿ.ಎನ್.ಶ್ರೀನಿವಾಸಮೂರ್ತಿ, 1936:195)

ತನ್ನ ಸಮಕಾಲೀನ ಸಂದರ್ಭದಲ್ಲಿನ ಸ್ವಾತಂತ್ರ್ಯ ಹೋರಾಟವನ್ನು ಎದುರಿಸಿ, ಆ ಮೂಲಕ ಹಿಂದಿನ ನಾಡಿನ ಸಿರಿಯನ್ನು ನಾವು ಮತ್ತೆ ಪಡೆದುಕೊಳ್ಳಬೇಕಾಗಿದೆ ಎಂದು ಕವಿ ಇಲ್ಲಿ ಕರೆಕೊಟ್ಟಿದ್ದಾರೆ.

ಆಂಗ್ಲರ ಆಡಳಿತದಲ್ಲಿ ಸಿಕ್ಕು ದಾಸ್ಯದ ಬಾಳನ್ನು ಬಾಳುತ್ತಿದ್ದ ಸಂದರ್ಭದಲ್ಲಿ, ಅವರ ಆಡಳಿತದಿಂದ ಬಿಡುಗಡೆಗೊಂಡು ಸ್ವಾತಂತ್ರ್ಯದ ಬಾಳನ್ನು ಬಾಳಬೇಕು ಎಂಬ ಆಶಯ ಎಲ್ಲರದಾಗಿತ್ತು. ಬ್ರಿಟಿಷರ ಒಡೆದು ಆಳುವ ನೀತಿಯ ಹುನ್ನಾರದಿಂದಾಗಿ ಭಾರತೀಯರ ರಾಷ್ಟ್ರೀಯತೆಗೆ ಭಂಗವುಂಟಾಗಿತ್ತು. ರಾಷ್ಟ್ರೀಯತೆಯನ್ನು ನಿರ್ಮಾಣ ಮಾಡಿಕೊಳ್ಳುವುದು ಅಂದರೆ ಭಾರತ ವಾಸಿಗಳೆಲ್ಲರೂ ಒಂದೇ ರೀತಿಯ ಮನೋಭಾವ, ದೃಢವಾದ ಸಂಕಲ್ಪ ಹೊಂದಿ ನಾವೆಲ್ಲರೂ ಒಂದೇ ನಾಡಿನವರು, ಈ ನಾಡಿನ ಔನ್ನತ್ಯಕ್ಕಾಗಿಯೇ ಇರುವವರು ಎನ್ನುವಂತಹ ಭಾವನೆಯನ್ನು ಮೂಡಿಸುವುದು ಆಗಿನ ಸಂದರ್ಭದಲ್ಲಿ ಮುಖ್ಯವಾಗಿತ್ತು. ಅದಕ್ಕಾಗಿ ನಿಸ್ತೇಜರಾಗಿದ್ದ ಜನತೆಯಲ್ಲಿ ಚೇತನವನ್ನು ತುಂಬುವ ಕೆಲಸವನ್ನು ನೇತ್ಯಾತ್ಮಕ ವಿಧಾನದಲ್ಲಿ ಆಗಿನ ಕವಿಗಳು ಮಾಡಿದ್ದಾರೆ. ಏನೇ ಆದರೂ ಕವಿಯು ಎಷ್ಟೇ ಆಗಲಿ ಕವಿ ಜನಮನದ ಪ್ರತಿನಿಧಿ ಎನ್ನುವುದನ್ನು ಆ ಮೂಲಕ ತೋರಿಸಿಕೊಟ್ಟಿದ್ದಾರೆ. 'ರಾಮರಾಜನ ರಣಸಂದೇಶ' ಎನ್ನುವ ಕವನದಲ್ಲಿ ಇದೇ ಕೂಗಿದೆ.

"ಶತ್ರುಸೈನ್ಯವನು ಸದೆಬಡೆದೋಡಿಸಿ ।
ಸಿಂಹಗಳಂದದೆ ಗರ್ಜಿಸಿರಿ ॥
ರಣೋತ್ಸಾಹವನು ತೋರಿಸಿರಿ ।
ಖಡ್ಗಗಳನು ಖಣಗುಟ್ಟಿಸಿರಿ।
ಭುವನೇಶ್ವರಿಯನು ವಂದಿಸಿರಿ ।

ಭುವನದಿಕೀರ್ತಿಯಗಳಿಸಿಡಿರಿ ॥" (ವೇದವ್ಯಾಸ, 1936: 190)

ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸೈನ್ಯವು ಸೋತ ಮೇಲೆ, ಯಾರನ್ನು ಯಾರಿಂದ ರಕ್ಷಿಸಲೋಸುಗ ಈ ಸಾಮ್ರಾಜ್ಯ ಹುಟ್ಟಿತ್ತೋ ಅವರಿಂದಲೇ ಮತ್ತೆ ದಾಳಿಗೀಡಾಯಿತು. ಈ ಕಾಲಗರ್ಭದಲ್ಲಿ ಯಾವೂದು ಸ್ಥಿರವಲ್ಲ. ಒಮ್ಮೆ ವೈಭವದಿಂದಿದ್ದದ್ದು ಮತ್ತೊಮ್ಮ ವಿನಾಶವಾಗಬಹುದು. ವಿನಾಶವಾದಲ್ಲಿ ಹೊಸದೊಂದು ಉದಯಿಸಬಹುದು. ಇದು ಕಾಲನ ಸಹಜ ಕ್ರಿಯೆ. ಅದನ್ನು ತಪ್ಪಿಸಲಾಗದು ಎನ್ನುವುದು ಕನ್ನಡಿಗರ ಮನಃಸ್ಥಿತಿ. ಆದರೆ ಇದ್ದುದನಾದರೂ ಉಳಿಸಿಕೊಳ್ಳಬೇಕಲ್ಲ. ಅದಕ್ಕೆ ಯಾವ ದೈವ ಲೀಲೆಯೂ ಬೇಕಿಲ್ಲ. ನಮ್ಮ ಪ್ರಯತ್ನವೇ ಅದಕ್ಕೆ ಮುಖ್ಯ. ಮಹಾಸಾಮ್ರಾಜ್ಯವೊಂದು ಮರೆಯಾಗಿಹೋಗಿದೆ. ಆದರೆ ಅದೇ ನೆಲದಲ್ಲಿಯೇ ನಾವು ನಾಡೊಂದನ್ನು ಕಟ್ಟಬೇಕಾಗಿದೆ. ಹೋದುದು ಹೋಗಲಿ ಮುಂದಿನದಕ್ಕೆ ಲೆಕ್ಕ ಹಾಕಬೇಕಿದೆ.

"ಕನ್ನಡದ ಕೀರ್ತಿಕಳೆಯಾದಿವರ ಶೌರ್ಯದಲಿ
ಹೆಮ್ಮೆಯಿಲ್ಲವೆ ನಿನಗೆ? ಜಡನೆ ನೀನು?
ಅವರೆತ್ತಿದೊಂದೊಂದು ಅಸಿಯಲಗಿನೊಸಗೆಯಲಿ
ಝುರ್ಝುರಿತವಾಯ್ತೆನ್ನ ನಾಳನಾಳಂ
ಅವರ ಬಿಲ್ಲಿಂದೊಗೆದ ಕಣೆಗಳೊಂದೊಂದರಲಿ
ಕುದಿದು ಚಿಮ್ಮದೆ ನಿನ್ನ ಹೃದಯ ರಕ್ತಂ?
ಇದುವೆ ಮಡಿದರ ಗೆಲವು, ಬದುಕಿದರ ಸೋಲು
ವೀರದಿವಿಗೇರ್ವುದಕೆ ಮೆಟ್ಟಲಿನ ಸಾಲು."

(ಜಿ.ವಾಸುದೇವರಾವ್, 1936:113)

ಎಂದು ಹಿಂದೆ ನಾಡಿಗಾಗಿ ಹೋರಾಡಿ ಮಡಿದ ವೀರರು ಮುಂದೆ ಕಟ್ಟಿಕೊಳ್ಳಬೇಕಾದ ನಾಡಿಗೆ ಸ್ಫೂರ್ತಿಯಾಗಿದ್ದಾರೆ. ಆ ವೀರರೆಲ್ಲರೂ ಉಸಿರಿರುವವರೆಗೆ ನಾಡಿನ ಪತಾಕೆಯನಿಡಿದು ಹೋರಾಡಿದರು. ಮಹಾಭಾರತ ಯುದ್ಧದಲ್ಲಿ ನಿರ್ವೀರ್ಯನಾದ ಅರ್ಜುನನಿಗೆ ಕೃಷ್ಣ ಬೋಧಿಸಿದ ಗೀತೆ ಅವನೊಳಗಿನ ವಿವೇಕವನ್ನು ಎಚ್ಚರಿಸುವುದರ ಮೂಲಕ ಚೈತನ್ಯ ನೀಡಿತೋ, ಹಾಗೆಯೇ ಏಕೀಕರಣ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂದ ಇಂತಹ ಗೀತೆಗಳು ಸಮಕಾಲೀನ ಸಂದರ್ಭದಲ್ಲಿದ್ದ ಜನರನ್ನು ಎಚ್ಚರಿಸುವ ಪ್ರಯತ್ನ ಮಾಡಿವೆ. ಪ್ರಳಯದಲಿ ಸೃಷ್ಟಿಯಿದೆ ಅದಕಾಗಿ ನೀ ಸಾಗು ಮುಂದೆ ಎಂದು ಕವಿ ಹೇಳುತ್ತಾನೆ.

ವಿದ್ಯಾರಣ್ಯ ಮುನಿಗಳು ಈ ನೆಲದಲ್ಲಿ ಕಟ್ಟಿದ ವಿಜಯನಗರವು ಇಡೀ ಜಗತ್ತೇ ತಿರುಗಿ ನೋಡುವಂತೆ ಬೆಳೆದಿತ್ತು. ಇಂದು ಅದು ಹಾಳಾಗಿ ಹೋಗಿದೆ. ಮತ್ತೆ ನೀನು ಅವತರಿಸಿ ಈ ನಾಡಿನ ಅಭ್ಯುದಯಕ್ಕೆ ಕಾರಣನಾಗಲಾರೆಯಾ ಎಂದು ಕವಿ ಪ್ರಶ್ನಿಸುತ್ತಾನೆ.

"ಅಯ್ಯೋ, ಆ ಧವಲ ಕೀರ್ತಿಯುತ ಧರ್ಮಧ್ವಜಮಿಂದು

> ಕೊಂಕಿಹುದು! ಇದುವೆ ಕರ್ನಾಟಕ ಕೀರ್ತಿಲತೆಯೇ!
> ಮುನಿದೇವ! ಗಂಭೀರ ಮೌನತೆಯನೆ ತಳೆದು,
> ನೀನಾವ ತಪಮಾಚರಿಪೆ? ಇದು ಯೋಗಸಾಧನೆ-
> ಯೇ? ಮೇಣ್, ಮಾತೆಯನುದ್ಧರಿಪ ನಿವೃತಿಯ ಸಿದ್ಧಿಯೆ?
> ಆವುದದು? ಮುನಿವರ್ಯ ಸಾಧನೆಯೋ? ಮೋಚನೆಯೋ?"
>
> (ಯಶೋಧಾಕುಮಾರ, 1936: 175)

ಯಾರ ಉಪಟಳದಿಂದ ನೊಂದು ಕರ್ನಾಟಕವನ್ನು ಕಟ್ಟಿದೆಯೋ, ಈ ನಾಡಿನಲ್ಲಿ ಮತ್ತೆ ಅಂತವರ ಉಪಟಳಗಳು ಹೆಚ್ಚಾಗಿದೆ. ಕಂಗೊಳಿಸುತಿದ್ದ ಸೊಬಗು ಕಾಣದಾಗಿದೆ. ನೀನೊಮ್ಮೆ ಬಾ ಮತ್ತೆ ನಾಡು ಕಟ್ಟಲಿಕೆ ಸ್ಫೂರ್ತಿಯನ್ನು ನೀಡು ಎನ್ನುತ್ತಾ ಕವಿಯು ಸ್ವಸ್ಫೂರ್ತಿಯನ್ನು ತುಂಬಿಕೊಳ್ಳುತ್ತಿದ್ದಾನೆ.

ಲಕ್ಷ್ಮಣರಾವ್ ಅವರ 'ಹಂಪೆಗೆ' ಕವನವು 'ನಿದ್ದೆ ಬಾರದು ಇನ್ನು ಈ ಜನ್ಮಕೆ। ಬಿದ್ದ ಹಂಪೆಯ ಕಂಡು ಕಂಗೆಟ್ಟೆನು' ಎನ್ನುವ ಮೂಲಕ ಬಿದ್ದದನ್ನು ಕಟ್ಟುವವರೆಗೆ ನಮ್ಮ ಹೋರಾಟ ನಿರಂತರವಾಗಿ ನಡೆಯಬೇಕು ಎನ್ನುತ್ತಾರೆ.

> "ಕನ್ನಡ ತಾಯ್ ಬೇರು ನೀರಡಿಸಿದೆ
> ಹೊನ್ನು ಹೊಳೆ ಅದರ ಬಳಿ ತಾಳೊಣಗಿದೆ
> ಚೆನ್ನು ಚೆಲುವಿನ ಹಂಪೆ ಹೆಳವಾಗಿದೆ
> ಎನ್ನ ತಾಯ್‌ಮನೆ ಧೇನು ಬರಡಾಗಿದೆ."
>
> (ಎ.ಲಕ್ಷ್ಮಣರಾವ್, 1936: 129)

ಅಂದಿನ ದೀನ ಸ್ಥಿತಿಯನ್ನು ಕಂಡು ಕವಿ ಕುಪಿತನಾಗುತ್ತಾನೆ. ಛಲದಂಕನಾಗುತ್ತಾನೆ. ತುಂಗಾ ತೀರದ ಆ ಮಂಗಲೆಯು ಹದಗೆಟ್ಟಿದೆ.

> "ಶತಮಾನ ನಾಲ್ಕಾಯ್ತು ವಿಜಯನಗರಿ
> ಅತಿನಿದ್ದೆ ಗತಿಹೊಂದಿ ಅಮರ ನಗರಿ
> ಮತಿಯಿತ್ತು ಧೃತಿಯಿತ್ತು ಕನ್ನಡಿಗರೆ
> ಗತಿಸಿರುವ ಕೀರ್ತಿಪದ ಗಳಿಸಿಕೊಳಿರಿ"(ಎ.ಲಕ್ಷ್ಮಣರಾವ್, 1936: 129)

ಎಂದು ಕನ್ನಡಿಗರನ್ನು ಎಚ್ಚರಿಸುತ್ತಾ, ವೀರನಾದ ಕನ್ನಡಿಗರನು ನಿನಗೆ ಮುಂಚಿನ ಸ್ಥಿತಿಯನ್ನು ತಂದುಕೊಡುತ್ತಾನೆ ತಾಯಿ ಎಂದು ಹೇಳುತ್ತಾರೆ.

'ನವೋದಯದ ಸಂದರ್ಭದ ಕವಿಗಳಲ್ಲಿ ಪ್ರಮುಖರಾದ ಕುವೆಂಪು' ಅವರ ಕವಿತೆಯ ಮೇಲೆ ಪಶ್ಚಿಮದ ರೊಮ್ಯಾಂಟಿಕ್‌ನ ಪ್ರಭಾವವಿದೆ. ಆದರೂ ನಾಡು ನುಡಿಯನ್ನು ಕುರಿತು ಹೇಳುವ ಸಂದರ್ಭದಲ್ಲಿ ದೇಶೀಯ ಪರಂಪರೆಯು ಅವರನ್ನು ಆವರಿಸಿಕೊಳ್ಳುತ್ತದೆ. ಹಂಪೆಯ ದ್ವಾರಬಾಗಿಲಿನಲ್ಲಿ ಕಾಯುತ್ತಿರುವವನು ಭೀಮನಂತೆ ಭಾಸವಾಗುತ್ತಾನೆ. ಮುಸ್ಲಿಮರ

ದಾಳಿಯಿಂದ ಸಂಪದ್ಭರಿತವಾದ, ವೈವಿಧ್ಯಮಯವಾದ ಹಂಪೆಯಲ್ಲ ಹಾಳಾಗಿ ಹೋಗಿದೆ ಇಲ್ಲೇಕೆ ನಿಂತು ಕಾಯುತ್ತಿರುವೆ ಎಂದು ಕವಿ ಪ್ರಶ್ನಿಸುವಲ್ಲಿ, ಹಾಳಾದ ಹಂಪೆಯನ್ನು ಉದ್ಧರಿಸುವುದು ಬಿಟ್ಟು ಅದನ್ನು ಕಾಯ್ದರೆ ಏನು ಪ್ರಯೋಜನೆ ಎನ್ನುವ ಮಾತುಗಳು ನಿಸ್ತೇಜವಾದ ಕನ್ನಡಿಗರ ಸಂಸ್ಕೃತಿಯನ್ನು ಪುನರ್ ಸ್ಥಾಪಿಸುವುದಕ್ಕೆ ಮುನ್ನುಗ್ಗುವಂತೆ 'ಹಂಪೆಯ ಭೀಮ' ಎನ್ನುವ ಕವನದಲ್ಲಿ ಕರೆಕೊಡುತ್ತಾರೆ.

"ರನ್ನಪಂಪರ ಮಹಾಕಾವ್ಯರಸರಂಗದಲಿ
ಭಾರತದ ಕೊಳುಗುಳದಿ ನಿನ್ನ ನೋಡಿಹೆನು.
ಕಂಬನಿಯ ಕರೆವ ಭೀಮನನಲ್ಲಿ ಕಂಡಿಲ್ಲ;
ಜಯಮತ್ತ ರುದ್ರ ಮಾರುತಿಯ ಕಂಡೆ।
ನಮಿಸುವ ಹಿಮಾಲಯವ ಕಂಡು ವಿಸ್ಮಿತನಾದೆ,
ಹಂಪೆಯಲಿ, ಭೀಮ, ನೀನಳುವುದನು ಕಂಡೆ!"

(ಕುವೆಂಪು, 2000: 383)

ರನ್ನ ಪಂಪಾದಿ ಕವಿಗಳ ಕಾವ್ಯದಲ್ಲಿ ನಾನು ಶೂರನಾದ, ಧೀರನಾದ ಭೀಮನನ್ನು ಕಂಡಿದ್ದೆ, ವೀರೋತ್ಸಾಹದ ಕಲಿ ಭೀಮನನ್ನು ಅಲ್ಲಿ ಕಂಡೆ, ಆದರೆ! ಇಂದು ಹಾಳಾದ ಹಂಪೆಯ ಬಾಗಿಲಲಿ ನೀ ನಿಂತು ರೋಧಿಸುತ್ತಿರುವುದು ಕಂಡು ನಾನು ಆಶ್ಚರ್ಯಗೊಂಡಿದ್ದೇನೆ. ಎಂದು ಹೇಳುವಲ್ಲಿ, ಕವಿಯು ಕನ್ನಡ ನಾಡಿನ ವೀರತ್ವದ ಸಂಕೇತವಾಗಿ ಹುಟ್ಟಿಕೊಂಡಿದ್ದ ಮಹಾಸಾಮ್ರಾಜ್ಯ ಮುಸ್ಲಿಮರ ದಾಳಿಯಿಂದ ಅವನತಿಗೀಡಾಯಿತು. ಅವನತಿ ಹೊಂದಿರುವ ಸ್ಥಳದಲ್ಲಿರುವ ವೀರ ಕನ್ನಡಿಗರೇ ಹಿಂದಿನ ಸಾಹಿತ್ಯದಲ್ಲಿ ನಾನು ಕನ್ನಡಿಗರ ಶೌರ್ಯವನ್ನು, ಸಾಹಸವನ್ನು ಕಂಡಿದ್ದೇನೆ. ಈ ರೀತಿ ಕೈಕಟ್ಟಿ ಕೂತು ಚಿಂತಾಕ್ರಾಂತರಾಗಿರುವವನ್ನು ನೋಡಿರಲಿಲ್ಲ. ಅದೂ ವೀರ ಕನ್ನಡಿಗರ ಲಕ್ಷಣವೂ ಅಲ್ಲ ಎಂದು ಹೇಳುತ್ತಾ ಕನ್ನಡ ನಾಡನ್ನು ಕಟ್ಟಿಕೊಳ್ಳಬೇಕಾದ ಸಮಕಾಲೀನ ಸಂದರ್ಭದಲ್ಲಿನ ಹೋರಾಟಕ್ಕೆ ಜನರನ್ನು ಸನ್ನದ್ಧರಾಗುವಂತೆ ಹೇಳುತ್ತಾರೆ.

"ತಿರುಗುವೀ ಗದೆಯೇಕೆ ನಿಷ್ಪಂದವಾಗಿಹುದು?
ಮೈಮರೆತು ಗೋಳಿಡುತ ನೀನಾರ ನೆನೆವೆ?
ಇಲ್ಲಿಗೈತಹ ಯಾತ್ರಿಕರ ಎದೆಯ ಮೂಷೆಯಲಿ
ಹಾಳಾದ ಐಸಿರಿಯ ಕಿಚ್ಚ ಮರುಕೊಳಿಸು।
ಅನಿಕಿಸೆಮ್ಮನು, ವೀರ; ಹೆಂಬೇಡಿಗಳು ನಾವು!
ನಿನ್ನ ಗದೆಯಾಘಾತದಿಂದೆಚ್ಚರುವೆವು !
ಹೇ ವೀರಮೂರ್ತಿಯೇ, ಹಂಪೆಯಿಾ ಮಸಣದಲಿ
ಭೈರವಾಶ್ರುವ ಚೆಲ್ಲಿ ಮೌನದಲಿ ನಿಲ್ಲು!

ಯಾತ್ರಿಕರ ಹೃದಯದಲಿ ಕೆಚ್ಚೂರಿ, ನೆಚ್ಚೂರಿ,
ಹೆಂಬೇಡಿಗಳನೆಲ್ಲ ನಿನ್ನೆಡೆಗೆ ಗೆಲ್ಲು!"

(ಕುವೆಂಪು, 2000: 384) ಎನ್ನುವುದು ಒಂದು ಕಾಲದಲಿ ಆ ನಿನ್ನೆ ಗದೆಯಿಂದ ಯಾವ ರೀತಿ ದುಷ್ಟ ಶಕ್ತಿಯನ್ನು ಶಿಕ್ಷಿಸಿದೆಯೋ, ಹಾಗೆಯೇ ಇಂದು ಅಂದಿನಂತೆ ದುಷ್ಟ ಶಕ್ತಿಯನ್ನು ಸದೆಬಡಿಯಬೇಕಾಗಿದೆ. ಇಲ್ಲಿಗೆ ಬಂದು ಮಸಣದಂತಿರುವ ಹಂಪೆಯನ್ನು ಕಂಡ ಯಾತ್ರಿಕರಿಗೆ ಆ ನಿನ್ನ ಗದೆಯು ಸ್ಫೂರ್ತಿಯನ್ನು ನೀಡಲಿ. ಆ ಮೂಲಕ ಅವರು ಕಳೆದು ಹೋದ ಈ ನಾಡಿನ ವೈಭವವನ್ನು, ಮಂಕು ಹಿಡಿದ ಸಂಸ್ಕೃತಿಯಲ್ಲಿ ಚೈತನ್ಯವನ್ನು ತುಂಬಿಕೊಳ್ಳುವ ಶಕ್ತಿಯನ್ನು ತುಂಬು, ಎನ್ನುತ್ತಾ ದೇಶ ಮತ್ತು ನಾಡನ್ನು ಕಟ್ಟಿಕೊಳ್ಳಲು ಬೇಕಾದ ಸಾಮರ್ಥ್ಯವನ್ನು ಕನ್ನಡಿಗರಲ್ಲಿ ಬರಲಿ ಎಂದು ಬಯಸುತ್ತಾರೆ.

ಜೋಳದರಾಶಿ ದೊಡ್ಡನಗೌಡರು ತಮ್ಮ 'ವಿದ್ಯಾರಣ್ಯ' ಎನ್ನುವ ಕವನದಲ್ಲಿ ವಿಜಯನಗರ ಸ್ಥಾಪನೆಯ ಕಾಲಕ್ಕೆ ಎದೆಗುಂದಿದ ಹಕ್ಕ ಬುಕ್ಕರಿಗೆ ಚೇತನವಿತ್ತು, ಉತ್ಸಾಹ ತುಂಬಿ ಹೊಸ ಸಾಮ್ರಾಜ್ಯದ ಉದಯಕ್ಕೆ ಹೇಗೆ ಕಾರಣನಾಗಿದ್ದೆಯೋ, ಹಾಗೆಯೇ ಇಂದು ಅಂತಹ ಚೇತನ ಶಕ್ತಿಯಾಗಿ ಮತ್ತೆ ಈ ನೆಲದಲ್ಲಿ ಹುಟ್ಟಿ ಬಾ ಎನ್ನುತ್ತಾರೆ. ನಿನ್ನ ತಪಶಕ್ತಿಯಿಂದ, ಕಲಿಗಳ ಶೌರ್ಯದ ಸಹಾಯದಿಂದ, ದೈವದ ಒಲಿಮೆ ಈ ಮೂರರ ಮುಪ್ಪುರಿಗೆಯಿಂದ ಚೆಲುವಾದ ನಾಡನ್ನು ಕಟ್ಟಿರುವೆ. ಚೆಂದದ ಅಂದಿನ ಹಂಪೆ ಇಂದು ಹಾಳು ಕೊಂಪೆಯಾಗಿದೆ. ಅದಕ್ಕಾಗಿ ನಿನ್ನ ಮಾರ್ಗದರ್ಶನ ನಮಗೆ ಬೇಕು ಎನ್ನುತ್ತಾ;

"ಈ ತೆರದ ಸಾಮ್ರಾಜ್ಯ ಸಿರಿಯಂ
ಪ್ರೀತಿಯಿಂದೆಮಗಿತ್ತು ನೀಂ ಮರೆ-
ಯಾದೆ ನಿಸ್ವಾರ್ಥದಲಿಯಮ್ಮಂತೊರೆದು ಅಂದಿನದಿ
ಆದರೇನದ ಕಳೆದುಕೊಂಡೆವು
ದಾತ ನಿನ್ನಂ ಶರಣು ಪೊಕ್ಕೆವು
ಬಾ ತಿರುಗಿ ಮತ್ತೊಮ್ಮೆ ವಿದ್ಯಾರಣ್ಯ ಗುರುಮೂರ್ತಿ॥"

(ಜೋಳದರಾಶಿ ದೊಡ್ಡನಗೌಡ, 1998: 72)

ಬಹುಶಃ ಈ ಕಾವ್ಯ ರಚನೆಯ ಸಂದರ್ಭದಲ್ಲಿ ಕವಿಗಳಿಗೆ ನಾಯಕತ್ವದ ಕೊರತೆ ಕಾಡಿದಂತಿದೆ. ಅಂತಹ ನಾಯಕತ್ವದ ಕೊರತೆಯನ್ನು ತುಂಬಬಲ್ಲ ವ್ಯಕ್ತಿ ಬೇಕಾಗಿದ್ದಾನೆ. ನಾಡು-ನುಡಿಯ ಕುರಿತಾದ ಆ ಹೋರಾಟದಲ್ಲಿ ಒಬ್ಬ ಸಮರ್ಥ ನಾಯಕನ ಅಗತ್ಯತೆ ಇತ್ತು. ಅಂದಿನ ಯುವ ಜನತೆಯೆಲ್ಲಾ ನಾಡಿಗಾಗಿ ಹೋರಾಡಲು ಸಿದ್ಧರಾದಾಗ ವಿದ್ಯಾರಣ್ಯರಂತಹ ಚೈತನ್ಯಮೂರ್ತಿಗಳ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಅಗತ್ಯ ಎನ್ನುವುದನ್ನು ಕವಿ ಹೇಳುತ್ತಾರೆ. ಹಾಗೆಯೇ ಸಮಕಾಲೀನ ಸಂದರ್ಭದ ಹೋರಾಟಕ್ಕೆ ಕೇವಲ ತ್ಯಾಗಿಗಳು

ಮಾತ್ರವಲ್ಲ; ಯೋಗಿಗಳೂ ಕೂಡ ಬೇಕು ಮತ್ತು ಮಾನವ ಸಹಜ ಪ್ರಯತ್ನದ ಜೊತೆಗೆ ದೈವೀ ಬಲ(ಶಕ್ತಿ)ವು ಇರಬೇಕು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ.

ವಿಜಯನಗರ ಸೈನ್ಯವು ತಾಳಿಕೋಟೆಯಲ್ಲಿ ಮುಸ್ಲಿಂ ಸೈನ್ಯದ ವಿರುದ್ಧ ಹೋರಾಡುತ್ತಿರಬೇಕಾದರೆ, ಆಗಿನ ಜನರನ್ನು ಉತ್ತೇಜಿಸಿದ ರೀತಿಯನ್ನು 'ತಾಳಿಕೋಟೆಯ ಕಾಳಗದಬ್ಬರ' ಕವಿತೆಯಲ್ಲಿ ಕಾಣಬಹುದು. ತಾಳಿಕೋಟೆ ಯುದ್ಧ ಕೇವಲ ಎರಡು ರಾಜ್ಯಗಳ ನಡುವೆ ನಡೆಯುವ ಸಾಮ್ರಾಜ್ಯ ವಿಸ್ತಾರಣಾಕಾಂಕ್ಷೆಯ ಯುದ್ಧವಲ್ಲ. ಅದು ನಮ್ಮತನದ ಉಳಿವಿನ ಪ್ರಶ್ನೆ ಎನ್ನುತ್ತಾರೆ ಕವಿಗಳು.

"ತಾಳೀಕೋಟೆಯ ಸಮರವು-ಕನ್ನಡ ಕಲಿಗಳ ಕಲಿತನ ದೊರೆಯಿಹುದು॥
ತಾಳೀಕೋಟೆಯು ಕನ್ನಡ ರಾಜ್ಯದ ಮೇಲಾಧಾರವು ಆಗಿಹುದು॥
ತಾಳೀಕೋಟೆಯ ಕನ್ನಡ ದೇವಿಯ ಮಾಂಗಲ್ಯದ ಮಣಿಬಂಧನವು॥"

(ಅಜ್ಞಾತಕವಿ,1936 : 162)

ಕನ್ನಡದ ಕಲಿಗಳೇ ಏಳಿ! ನಮ್ಮ ನಾಡಿನ ಮೇಲೆ ಆಕ್ರಮಣ ಮಾಡುತ್ತಿರುವ ಯವನರ ಶಿರಗಳನ್ನು ತುಂಡಾಗಿಸಿರಿ. ಅದಕ್ಕಾಗಿ ಜೀವನವನ್ನೇ ಪಣವಾಗಿಡಿರಿ ಎನ್ನುತ್ತಾ, ನಾಡಿನ ಸಂತೋಷಕ್ಕಾಗಿ ಹೆಂಡತಿ ಚಿಕ್ಕವಳಿರುವಳೆಂಬ, ಒಬ್ಬನೇ ಮಗನೆಂಬ, ಮುಪ್ಪಿನ ಮುದುಕನು ಎನ್ನುವಂತಹ ಸಲ್ಲದ ಕಾರಣಗಳನ್ನೇಳಬೇಡಿ. ಇಂದು ನಾಡಿಗೆ ಬಂದಿರುವ ಆಪತ್ತನ್ನು ಎದುರಿಸದಿದ್ದರೆ ನಾವಿದ್ದೂ ಸತ್ತಂತೆ. ಸಂಪತ್ತಿನ ಮೋಹದಲಿ ಬಿದ್ದು ಪೊರೆವ ತಾಯಿಯನ್ನು ಅಲಕ್ಷಿಸದಿರಿ. ಪೊರೆಯುವವಳೇ ಶಾಂತಿಯಿಲ್ಲದಾಗ ಏನಿದ್ದರೇನು? ಸುಖವಿರಲು ಸಾಧ್ಯವಿಲ್ಲ.

"ದೇಶ ಸೇವೆಯೆ ದೇವರ ಸೇವೆಯು ಅದರೊಳೆ ಪರಮಾನಂದಗತಿ॥
ದೇಶದ ಬಾಳ್ವೆಯೇ ನಿಮ್ಮಯ ಬಾಳ್ವೆಯು ದೇಶವು ಅಳಿದರೆ ಏನುಗತಿ?॥
ದೇಶದ ಹಿತಕೆಂದಾತ್ಮ ಸಮರ್ಪಿಸಿ ತೋರಿರಿ ದೇಶದ ಕುದಾರಗತಿ॥"

(ಅಜ್ಞಾತಕವಿ,1936 : 162)

'ದೇಶ ಸೇವೆಯೇ ಈಶ ಸೇವೆ' ತಿಳಿದು ದೇಶಕ್ಕಾಗಿ ಹೋರಾಟ ಮಾಡಬೇಕು. ದೇಶದ ಬದುಕೇ ನಮ್ಮ ಬದುಕು. ದೇಶ ಅಳಿದರೆ ನಮಗೆ ಉಳಿವು ಉಂಟೆ. ದೇಶದ ಹಿತಕ್ಕಾಗಿ ನಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಬೇಕು. ಕನ್ನಡ ತಾಯಿಯ ಕೃಪೆಯಿಂದಲ್ಲವೇ ನಾವು ಇಲ್ಲಿ ಜನಿಸಿದ್ದು, ಅವಳ ಎದೆ ಹಾಲನ್ನು ಕುಡಿದಲ್ಲವೇ ನಾವು ಬೆಳೆದದ್ದು, ಅವಳ ಬಲದಿಂದಲೇ ಅಲ್ಲವೇ ನಾವೆಲ್ಲರೂ ಶೌರ್ಯವಂತರಾದದ್ದು, ಇಷ್ಟೆಲ್ಲಾ ರೀತಿಯಿಂದ ಈ ತಾಯಿಗೆ ಋಣಿಗಳಾದ ನಾವುಗಳು, ಋಣಮುಕ್ತರಾಗುವುದು ಹೇಗೆ? ಅವಳ ಹಿತ ಕಾಯುವುದೇ ನಮ್ಮ ಕರ್ತವ್ಯ, ನಮ್ಮ ಕರ್ತವ್ಯಕ್ಕೆ ನಾವು ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು. ಆಗ ಸಾಕಿದ ಆ ತಾಯಿಗೂ ನಲಿವು, ಬದುಕುವ ನಮಗೂ ನಲಿವು ಎಂದು ನುಡಿಯುತ್ತದೆ ಕವಿ ಹೃದಯ.

ಅಂದರೆ ಪರಕೀಯರ ದಾಸ್ಯದ ಬದುಕಿನಿಂದ ಬಿಡುಗಡೆಗೊಂಡು ಸ್ವಾತಂತ್ರ್ಯದ, ಸಹಬಾಳ್ವೆಯ ಬದುಕನ್ನು ಬಾಳಬೇಕು, ಅದನ್ನು ಪಡೆದುಕೊಳ್ಳುವುದಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧರಾಗಬೇಕು ಎನ್ನುವುದನ್ನು ಈ ಕವನದಲ್ಲಿ ಹೇಳಲಾಗಿದೆ.

ಹರಿಹರ ಬುಕ್ಕರಿಂದ ಸ್ಥಾಪಿತವಾದ ಹಂಪೆಯು ಕನ್ನಡ ನುಡಿಯ ಸೊಬಗಿನಲ್ಲಿ ಮೈದಾಳಿ ನಿಂತಿತು. ಬಲಿಷ್ಠರಾಗಿದ್ದ ಸುಲ್ತಾನರನ್ನು ವಿರುದ್ಧ ಕಟ್ಟಿಕೊಂಡು ಸಮರ್ಥವಾಗಿ ಬೆಳೆದು ನಿಂತಿತು. ಆದರೆ ಒಬ್ಬೊಬ್ಬ ರಾಜನಿಗೆ ಒಂದೊಂದು ರೀತಿ ಕರುಣೆ ತೋರಿದೆಯಲ್ಲ ಎಂದು ಕವಿ ಪ್ರಶ್ನಿಸುತ್ತಾನೆ 'ಹಾಳು ಹಂಪೆ' ಕವನದಲ್ಲಿ.

"ಹುಕ್ಕ ಬುಕ್ಕರ ಜಲವಿಸಿಂಚನ
ಆಯ್ತು ನಿನಗಸು ಬರಲು ಕಾರಣ
.............................................
ಕೃಷ್ಣದೇವರ ಹಿಗ್ಗು ಸಾರಿದೆ,
ರಾಮರಾಜನ ತಗ್ಗು ತೋಡಿದೆ,
ಜನತೆಯುಸುರಿತು 'ಖ್ಯಾತ ಹಂಪೆ'
ಈಗ ನಿನಗೇನಿಹುದು–ಜಂಪೆ?
ಓ ಹಾಳು ಹಂಪೆ!" (ಭಾರತೀಸುತ,1936 : 179)

ಹಂಪೆಯು ಒಬ್ಬೊಬ್ಬ ಅರಸರ ಕಾಲದಲ್ಲಿ ಒಂದೊಂದು ರೂಪತಾಳಿನಿಂತಿತಲ್ಲ. ಕೆಲ ಅರಸರ ಕಾಲದಲ್ಲಿ ವೈಭವದಿಂದ ಮೆರೆದು ಕೊನೆಗೆ ರಾಮರಾಯನ ಕಾಲದಲ್ಲಿ ನಾಶವಾಗಿ ಹೋಯಿತು. ವಿಜಯಗುಡಿ ತೋರಣ ಕಾಣುತ್ತಿಲ್ಲ. ದ್ವಿಜರ ಮಂತ್ರೋಚ್ಚಾರಣೆಯಿಲ್ಲ. ಮರೆಯಲಾಗದ ಹಂಪೆ ಮರೆತು ಹೋಯಿತಲ್ಲ! ಎಂದು ಕವಿ ಮನ ಮಮ್ಮಲ ಮರುಗಿದೆ.

ಪರಮೇಶ್ವರರ 'ಪಂಪಾಸರೋವರ' ಕವನವು ಹಂಪೆಯ ಪರಿಸರದ ಮಹತಿಯನ್ನು ಸಾರುತ್ತದೆ. ಇಲ್ಲಿನ ಪರಿಸರಕ್ಕೆ ಪ್ರಾಚೀನ ಕಾಲದಿಂದಲೂ ಚರಿತ್ರೆಯಿದೆ. ರಾಮನು ಸೀತಾನ್ವೇಷಣೆಯ ಸಮಯದಲ್ಲಿ ಇಲ್ಲಿಗೆ ಬಂದದ್ದು, ಪಾಂಡವರು ಕಿಷ್ಕಿಂದೆಗೆ ಬಂದದ್ದು, ಮಹರ್ಷಿ ವಾಲ್ಮಿಕಿಯು ಸಂದರ್ಶಿಸಿದ್ದು ಈ ಸ್ಥಳದ ಪುರಾತನತೆಯನ್ನು ತಿಳಿಸುತ್ತದೆ. ಮಹಾಮಹೀಮರ ಪಾದ ಸ್ಪರ್ಷದ ಈ ಭೂಮಿ ಋಷಿವರ್ಯರಿಗೆ ತಪೋಭೂಮಿಯೂ ಹೌದು. ಸಿದ್ಧಿ ಸಾಧನೆಯ ಮುಕುಟ ಮಣಿಯೂ ಹೌದು.

"ಯುಗಯುಗಾಂತರಗಳ ಅನಂತ ಚಿರನಿದ್ರೆಯಲಿ
ನಿಷ್ಪಂದ ಮೂಕತೆಯ ಜಲಸಮಾಧಿಯೊಳಿಲ್ಲಿ
ಸ್ತಬ್ಧವಾಗಿದೆ ಸರೋವರ ದೇಹಿ–ದಡದಲ್ಲಿ
ರಾಮಾಯಣದ ಮಹಾಸ್ವಪ್ನ ಚಿನ್ಮುದ್ರೆಯಲಿ"
(ಶ್ರೀಪರಮೇಶ್ವರ, 1936: 127)

ತಪಸ್ವಿಗಳು ಅಮರವಾಣಿ ನುಡಿದ ಸ್ಥಳವಿದು. ರಾಮಾಯಣ ಕಾವ್ಯವನ್ನು ಬರೆಯುವುದರ ಮೂಲಕ ಭಾರತೀಯ ಮಹಾಕಾವ್ಯ ಪರಂಪರೆಗೆ ನಾಂದಿ ಹಾಡಿದ ಮಹಾಕವಿ ವಾಲ್ಮಿಕಿಯು ಇಲ್ಲಿ ಕಾವ್ಯಾಂದ ಮೋಹದಲಿ ಮಲಗಿಹನು. ಅವನ ನಲ್ಮೆಯ ನುಡಿಯನ್ನು ಕೇಳಲೋಸುಗ ಮನಸ್ಸು ಕಾತರತೆಯಿಂದ ತಹತಹಿಸುತಿದೆ. ಎಂತಹ ಅದ್ಭುತ ತಾಣವಿದು. ಈ ನೆಲದಲ್ಲಿ ಹುಟ್ಟಿದ್ದೇ ಪುಣ್ಯದ ಫಲ ಎನ್ನುವಂತೆ ಕವಿ ಚಿತ್ರಿಸುತ್ತಾರೆ. ಹಂಪೆಯ ಪಾರಂಪರಿಕ ಹಿರಿಮೆ ಗರಿಮೆಗಳನ್ನು ನೆನೆದ ಕವಿ ಅಭಿಮಾನಗೊಂಡು ಉಲ್ಲಾಸಿತನಾಗುತ್ತಾನೆ. ಶ್ರೀಮಂತ ಪರಂಪರೆ ಹೊಂದಿರುವ ಹಂಪೆಯನ್ನು ಹಾಡಿ ಹೊಗಳುವುದರೊಂದಿಗೆ ಕವಿ ಧನ್ಯತೆಯನ್ನು ಕಾಣುತ್ತಾನೆ. ಇಂತಹ ಪ್ರಕೃತಿರಮ್ಯವಾದ ತಾಣ ಒಂದು ಧರ್ಮಕ್ಕೆ, ಒಂದು ನಾಡಿನ ಜನತೆಗೆ ಅದೆಷ್ಟು ಕಾಲ ಆಶ್ರಯವನ್ನಿತ್ತು ಸಲುಹಿತು. ಮತ್ತೆ ಅಲ್ಲಿ ಅಂತಹದೇ ನಾಡನ್ನು ಕಟ್ಟಿಕೊಳ್ಳಬೇಕಾಗಿದೆ ಎನ್ನುವ ಬಯಕೆ ಕವಿಯದು.

ಬಿ.ಎಂ.ಶ್ರೀಯವರ 'ಕನ್ನಡತಾಯಿ ನೋಟ' ಕವನವು ವಿಜಯನಗರ 600ನೆಯ ವರ್ಷದ ಆಚರಣೆಯ ಸಂದರ್ಭದಲ್ಲಿ ಬರೆದ ಕವಿತೆಯಿದು. ಶ್ರೀಯವರು ಕನ್ನಡ ನಾಡನ್ನೆಲ್ಲಾ ಸುತ್ತುತ್ತಾ ಕನ್ನಡ ನಾಡಿನ ಸೀಮೆಯನ್ನು, ಸೊಬಗನ್ನು, ಹಿರಿಮೆಯನ್ನು ಸಾರುತ್ತಾ ಹಂಪೆಗೆ ಬರುತ್ತಾರೆ. ಅಲ್ಲಿಗೆ ಬಂದ ಕೂಡಲೇ ಕನ್ನಡತಾಯಿಯನ್ನು ಆ ಐತಿಹಾಸಿಕ ಸ್ಥಳದಲ್ಲಿ ಕಾಣುತ್ತಾರೆ. ಅದು ಹೇಗೆಂದರೆ 'ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ ಬೇಗುದಿಯ ಬಿರುಕಿನಲಿ ಮುಳ್ಳೆಡೆಯ ಕಲ್ಲುಹೂವಿದಿಡಿದರೆಯ ಮೇಲೆ ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಿನಾಳದಲಿ'.

ಹೀಗೆ ಕುಳಿತಿದ್ದವಳನ್ನು ಕವಿ ಯಾರವ್ವ ನೀನು? ಇಂತಹ ಕಾಡಿನಲ್ಲಿ ಒಬ್ಬಳೇ ಕುಂತಿರುವ ತಾತ್ಪರ್ಯವಾದರೂ ಏನು? ಬಾಡಿದ ಮೊಗದಿಂದ, ಕಳೆಗುಂದಿದ ದೇಹದಿಂದ, ನೊಂದ ಮನಸ್ಸಿನಿಂದ, ಕಾಂತಿಯಿಲ್ಲದ ಕಣ್ಣುಗಳಿಂದ ನೀನು ಇಲ್ಲಿ ಕುಳಿತಿರುವುದಾದರೂ ಯಾತಕ್ಕೆ? ಎನ್ನುವಂತೆ ಪ್ರಶ್ನಿಸುತ್ತಾರೆ. ಆಗ;

> 'ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ–ಹಿರಿದಾಗಿ ಬಾಳಿದವಳೊಮ್ಮೆ;
> ಈಗ ಬಡತನ, ಬಡವೆ, ಬಡವಾದೆ: ಬಡವಾದ ಮಕ್ಕಳನು ನೋಡಿ,
> ಬತ್ತಿ, ಮತ್ತಿಯಮ್ಮಡಿಯ ಸೊರಗಿನಲಿ ಬಡವಾದೆ–ಸಾವಿಲ್ಲ ನನಗೆ।"
>
> (ಬಿ.ಎಂ.ಶ್ರೀ, 1993: 43)

ಎನ್ನುತ್ತಾಳೆ. ಕನ್ನಡ ನಾಡನ್ನೆಲ್ಲಾ ಸುತ್ತಾಡಿ ಬಂದು ಹಂಪೆಯಲ್ಲಿ ಕನ್ನಡ ತಾಯಿಯನ್ನು ಕಂಡುದು ಆಕೆಯ ಕೊರಗಿನ ಕಾರಣಗಳು ಕವಿಯಲ್ಲಿ ಚಿಂತನೆಯ ರೂಪವನ್ನು ತಾಳಿವೆ. ಈ ಚಿಂತನೆಯ ರೂಪ ಕರ್ನಾಟಕದ ಏಕೀಕರಣದ ಒಳಸುಳಿಯಾಗಿದೆ. ಕವಿಗೆ ಕನ್ನಡ ನಾಡಿನ ಮೇಲಿದ್ದ ಅಭಿಮಾನಾದರಗಳು ಈ ಕವನಕ್ಕೆ ಪ್ರೇರಕವಾಗಿವೆ.

ಹಿಂದೆ ಸಿರಿ ಸಮೃದ್ಧಿಯಿಂದ ಬೆಳಗಿದ ಈ ನಾಡು ಇಂದು ಬಡವಾಗಿ ಹೋಗಿದೆ. ಆದರೆ ಪಕ್ಕದ ರಾಷ್ಟ್ರಗಳು ಮಾತ್ರ ಈಗಲೂ ಹಬ್ಬದ ಸವಿಯನ್ನು ಸವಿಯುತ್ತಾ ಸೊಗಸಿನಿಂದಿವೆ. ಆದರೆ ಈ ನಾಡ ತಾಯಿಗೆ, ಅವಳ ಮಕ್ಕಳಾದ ಕನ್ನಡಿಗರಿಗೆ/ಭಾರತೀಯರಿಗೆ ಮಾತ್ರ ಹಬ್ಬವಿಲ್ಲ.

"ನಮಗಿಲ್ಲ ಬಾಳು
ಎಲ್ಲರೂ ಬಾಳುವೆಡೆ ನಮಗೆ ಸಾವೆ?
ಎಲ್ಲರೂ ನಲಿವ ಕಡೆ ನಮಗೆ ನೋವೆ?
ಏನು ಕವಿಯಿತೊ ಮಂಕು, ಮಕ್ಕಳಿಗೆ! ಯಾರೆರಚಿದರೊ ಬೂದಿ, ಕಾಣೆ
ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.
ಹೆರರ ನುಡಿ, ಹೆರರ ನಡೆ,– ಹೆರರ ಕೂಗೇ, ಕೂಗು; ಹೆರರದೇ, ಹೆಮ್ಮೇ!"

(ಬಿ.ಎಂ.ಶ್ರೀ, 1993: 43–44)

ಹಿಂದೇ ಸಮೃದ್ಧಿಯ ಬಾಳನ್ನು ಬಾಳಿದ ನಾನು ಈಗ ಅನಾಥೆಯಾಗಿದ್ದರೂ ನನ್ನ ಮಕ್ಕಳು ಎನಿಸಿಕೊಂಡವರು ಸುಮ್ಮನಿದ್ದಾರಲ್ಲ. ಒಂದು ಕಾಲಕ್ಕೆ ವೀರತ್ವದಿಂದ ಮೆರೆದ ಇವರು ಇಂದೇಕೆ ಮಂಕಾಗಿದ್ದಾರೆ. ಇವರ ಮಂಕುತನದಿಂದಾಗಿಯೇ ಇಂದು ನಾಡಿನಲ್ಲಿ ಪರರ ದಬ್ಬಾಳಿಕೆ ಮುಂದುವರೆದಿದೆಯಲ್ಲ. ಎನ್ನುವಂತಹ ಮಾತಿನ ಮೂಲಕ ಸಲುಹಿದ ತಾಯಿಯನ್ನು ಉಳಿಸಿಕೊಳ್ಳಲು ಪ್ರೇರಣೆ ನೀಡುತ್ತಾರೆ.

ಮಕ್ಕಳ ಮೇಲೆ ಮುನಿಸಿಕೊಂಡ ತಾಯಿಗೆ ಕವಿ ಹೇಳುವ ಸಾಂತ್ವನವು ಮತ್ತೆ ನಾವು ಹೊಸ ನಾಡನ್ನು ಕಟ್ಟಿಕೊಳ್ಳುತ್ತೇವೆ ಎಂಬ ಅಭಿದಾನದಂತಿದೆ.

"........... ಏಕಮ್ಮ ಇನಿಸೊಂದು ಕೊರಗು?
ಬೇಡಮ್ಮ ಮಕ್ಕಳಲಿ ಇನಿಸೊಂದು ಕಡುಮುನಿಸು– ಬಾರಮ್ಮ, ಹರಸು.
ನಿನ್ನ ನಾಡಿನೊಳದೇಕೊ ಬೆಳಕು ಮೂಡಿಹುದು– ಜೀವ ಕೂಡಿಹುದು.
ನಿನ್ನ ಮಕ್ಕಳು ನಿದ್ದೆಗಳೆದೆದ್ದ ಸಿಂಗದಂತೇಳುತ್ತ, ಮೊಳಗಿ,
ಕಣಕಿಳಿದು ಪಂಪ ನೃಪತುಂಗರಾ ಮಾತುಗಳು ದಿಟವೆನಿಸುತಿಹವು."

(ಬಿ.ಎಂ.ಶ್ರೀ, 1993: 44)

ನಮ್ಮ ಪ್ರಾಚೀನ ಕವಿಗಳು ಕಂಡು ಹೊಗಳಿದ ಕನ್ನಡಿಗರ ಆ ಶಕ್ತಿ ಮತ್ತೆ ಚೇತನಗೊಂಡಿದೆ. ನಿನ್ನನ್ನು (ರಾಷ್ಟ್ರವನ್ನು) ಉಳಿಸಿಕೊಳ್ಳಲು ನಿನ್ನ ಮಕ್ಕಳು ಎಚ್ಚೆತ್ತುಕೊಳ್ಳುತ್ತಿದ್ದಾರೆ. ಹಳೆಯದನ್ನು ಮತ್ತೆ ಮತ್ತೆ ನೆನೆದುಕೊಳ್ಳುತ್ತ ಅಂದರೆ ಮುಂದಿನ ಪಥಕ್ಕೆ ಹಿಂದಿನ ಸ್ಮರಣೆಯನ್ನು ಮಾಡಿಕೊಳ್ಳುತ್ತ, ಮತ್ತೆ ಅಂತಹ ವೈಭವವನ್ನು ಕಾಣಬೇಕೆಂಬ

ತವಕದಿಂದ ಹೊಸ ನಾಡನ್ನು ಕಟ್ಟಲು ಸಿದ್ಧರಾಗಿದ್ದಾರೆ ಎನ್ನುವ ಮೂಲಕ ಸಮಕಾಲೀನ ಸಂದರ್ಭದಲ್ಲಿನ ಹೋರಾಟದ ಸ್ವರೂಪವನ್ನು ತಿಳಿಸುತ್ತಾರೆ.

ಇಲ್ಲಿ ಶ್ರೀಯವರು ಹೊಸದಾಗಿ ಕಟ್ಟಬೇಕಾದ ನಾಡಿನ ರೂಪುರೇಷೆಯನ್ನು ಹೇಳುತ್ತಾರೆ. ನಾವು ಕಟ್ಟುವ ನಾಡು ಸಾಮಾನ್ಯದ್ದಲ್ಲ. ಅದು ಸಮೃದ್ಧವಾದುದು. ಇಲ್ಲಿ ಕವಿಗಳು, ಕಲಿಗಳು, ಋಷಿಗಳು ಎಲ್ಲರೂ ಇರುವರು. ಸತ್ಯ, ಧರ್ಮ, ನ್ಯಾಯ, ನೀತಿ, ಶಾಂತಿ, ಪ್ರೇಮ, ಸ್ವಾತಂತ್ರ್ಯದ ಬಾಳು ಇಲ್ಲಿ ಸೃಷ್ಠಿಯಾಗಿದೆ. ತಾಯಿಯೇ ನಮ್ಮನ್ನು ಹರಸು ನಿನ್ನ ಹರಕೆಯೇ ನಮ್ಮ ಬದುಕಿಗೆ ಬೆಳಕನ್ನು ನೀಡುವುದು ಎನ್ನುತ್ತಾರೆ ಕವಿಗಳು. ಇಂತಹ ನಾಡನ್ನು ಕಟ್ಟಿದಾಗ ಮಾತ್ರ ಆ ತಾ ುಗೆ ಸಂತೋಷ ಅಷ್ಟಿಷ್ಟಲ್ಲ;

> "ನಕ್ಕಳಾ ತಾಯಿ.
> ಮುದುಕಿ ಎಳೆಯವಳಾಗಿ, ಮಾಸು–ಮಿಂಚೆಳೆಯಾಗಿ, ಸವೆದ ಮೈ ತುಂಬಿ,
> ಕಡಲ ತೆರೆಗಳನುಟ್ಟು, ಬೆಟ್ಟ ಬಯಲನು ತೊಟ್ಟು, ಅರಿಲ ಮುಡಿಗಿಟ್ಟು,
> ಮುಗುಳ್–ನಗೆಯ ನಸುನಕ್ಕಳಾ ತಾಯಿ, ನನ್ನ ತಲೆಯಲಿ ಕಯ್ಯ
> ತಾವರೆಯನಿಟ್ಟು" (ಬಿ.ಎಂ.ಶ್ರೀ, 1993: 45)

ನಾಡ ತಾಯಿಯ ಈ ಸಂತೋಷಕ್ಕಿಂತ ಹೆಚ್ಚಿನದೇನು ಬೇಕು. ಅವಳು ಸಂತಸದಿಂದಿದ್ದರಲ್ಲವೆ ನಮ್ಮ ಬದುಕು ನಲಿವಿನಿಂದ ಕೂಡಿರುವುದು. ಇಂತಹ ನಾಡನ್ನು ಕಟ್ಟಿ ಭಾರತಮಾತೆಯ ಮಕ್ಕಳಾಗಿ ಬಾಳಬೇಕಾಗಿದೆ ಎನ್ನುವುದನ್ನು ಕವಿ ಇಲ್ಲಿ ಹೇಳುತ್ತಾರೆ. ಒಕ್ಕೊರಲಿನ ಧ್ವನಿಯಾಗಿ "**ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ**" ಎನ್ನುವ ಮೂಲಕ, ಅಂದಿನ ಸಂದರ್ಭದಲ್ಲಿನ ನಮ್ಮ ನಾಡಿನ ಮೇಲಾದ ಎಲ್ಲಾ ಬಗೆಯ ಸಮಸ್ಯೆ–ಸವಾಲುಗಳನ್ನು ಎದುರಿಸಿ ಅವುಗಳಿಂದ ಮುಕ್ತರಾಗಿ, ಸುಖ ಸಮೃದ್ಧಿಯ ನಾಡನ್ನು ಕಟ್ಟಿಕೊಂಡು, ಹೊಸ ಬಾಳನ್ನು ಬದುಕೋಣ ಎನ್ನುವ ಆಶಯ ಶ್ರೀಯವರದಾಗಿತ್ತು. ಅದಕ್ಕಾಗಿ ಅವರು ಅಖಂಡತೆಯ ಸಂಕೇತವಾದ ಹಂಪೆಯಲ್ಲಿಯೇ ನಾಡದೇವಿಯನ್ನು ಕಂಡು, ಈ ಪ್ರದೇಶವನ್ನು ಪ್ರತಿನಿಧಿಸುತ್ತಾ ರಾಷ್ಟ್ರ ನಿರ್ಮಾಣಕ್ಕೆ ಕರೆ ನೀಡಿದ್ದಾರೆ.

ಈಶ್ವರ ಸಣಕಲ್ಲ ಅವರ 'ಶಾಪಗ್ರಸ್ತ ವಿಜಯನಗರ' ಕವನದಲ್ಲಿ :

> "ಲಕ್ಷಾನುಲಕ್ಷ ಮುಖದಲಿ ಕಲ್ಪನೆಯ ಕನಸು
> ಬಾಷ್ಪದಲಿ ತೇಲುತಿದೆ! ಯಾವ ಕಾಲನ ಶಾಪ–
> ವೋ ಕಾಣೆ, ನಲಿನಲಿದು ಚಲುವು ಹಾ! ......
> .............................................................
> ಅದೊ ಹಗೆ ಮಿಸುಕುತಿದೆ! ಇಲ್ಲ. ಸತ್ತಿಲ್ಲ ಇದು!

ಶಾಪದಾ ಭಾರದಲಿ ವೈಭವದ ತೀರದಲಿ
ನಿದ್ರೆಯುತಲಿಹುದು! ಶಾಪಮೋಕ್ಷದಿ ಮತ್ತೆ
ನಿದ್ರೆ ತೊರೆದೇಳಲಹ ಏಂ. ಚಂದವಾನಂದ!"

(ಈಶ್ವರ ಸಣಕಲ್ಲ, 1936: 123)

ಕಾಲನ ಬಲೆಯ ಯಾವುದೋ ಶಾಪಕ್ಕೆ ವಿಜಯನಗರವು ಬಲಿಯಾಗಿದೆ. ಅದು ಹಾಳಾಗಿದ್ದರೂ ಅದರ ಸೌಂದರ್ಯ ಮಾತ್ರ ಮೌನದಲ್ಲಿ ನರಳುತಿದೆ, ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲದಲ್ಲಿನ ಎಲ್ಲಾ ಚರಿತ್ರೆಯು ಶಿಲೆ ರೂಪದಲ್ಲಿ ನಮ್ಮ ಮುಂದೆ ನಿಂತಿದೆ. ಅವರ ಆಳ್ವಿಕೆಗೆ ಸಂಬಂಧಿಸಿದಂತಹ ಮಾಹಿತಿ, ಅವರ ಯಶಸ್ಸು, ದಾನ ಧರ್ಮ, ಶಿಲಾ ಶಾಸನಗಳಲ್ಲಿ ಸಿಗುತ್ತದೆ. ಅವರ ಕಲೆಯ ಸಿರಿವಂತಿಕೆ ಕಲಾಕೃತಿಗಳಲ್ಲಿ ರಾರಾಜಿಸುತ್ತಿದೆ. ಹಳೆಯ ಹೆಮ್ಮರಗಳು ಯಾವುದೋ ಸ್ಮೃತಿಯಿಂದ ತೂಗುತಿವೆ. ಹೀಗಿದ್ದೂ ಆ ಸಾಮ್ರಾಜ್ಯ ಹಾಳಾಗಿದೆ ಎಂದು ಹೇಳಲು ಕವಿಯ ಮನಸ್ಸು ಒಪ್ಪದಾಗಿದೆ. ಅದಕ್ಕಾಗಿಯೇ ಕವಿ ಯಾವುದೋ ಶಾಪದಿಂದ ಇದು ಬಳಲುತಿದೆ ಅದು ಶಾಪದಿಂದ ಮುಕ್ತಿಹೊಂದಿ ಮತ್ತೆ ನಿದ್ರೆಯಿಂದ ಎಚ್ಚತ್ತುಕೊಳ್ಳುತ್ತದೆ ಎಂಬ ಭರವಸೆಯಿಂದ, ಹಳೆಯ ಸೌಂದರ್ಯದಲ್ಲಿ ಸತ್ಯವನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ.

'ಶ್ರೀ ವಿದ್ಯಾರಣ್ಯರ ವಾಣಿ' ಕವಿತೆಯಲ್ಲಿ ವಿಜಯನಗರ ಆರಂಭಕ್ಕೆ ಮುನ್ನ ವಿದ್ಯಾರಣ್ಯರು ಹರಿಹರ ಬುಕ್ಕರಿಗೆ ಪ್ರೋತ್ಸಾಹಿಸಿದಂತೆ ಕವಿ ಹೇಳಿದ್ದಾನೆ.

"ಕನ್ನಡದ ಭಾಗ್ಯ-ಭಾಸ್ಕರನುದಯವಹಹ! ಇ-
ನ್ನಾಗಲಿದೆ; ಸಿರಿ-ಸರಸ್ವತಿಯರೊಂದೆಡೆ ಕುಳಿತ
ಮಣಿ-ಮಂಚದುಯ್ಯಾಲೆ ತೂಗಲಿದೆ; ರಸದೇವಿ
ಯುನ್ಮತ್ತ ನೃತ್ಯ ಕೇಲಿಗೆ ಮತ್ತೆ ಕವಿ ಹೃದಯ-
ರಂಗ ಸಜ್ಜಾಗಲಿದೆ; ವೀರ್ಯ-ಕೀರ್ತಿಯ ಭೇರಿ
ಗುಡುಗಲಿದೆ; ಆರ್ಯ-ಧರ್ಮಸುಗಂಧವಿಡಗಲಿದೆ."

(ಎಸ್.ಆರ್.ಮಳಗಿ, 1936: 84)

ತುಂಗಭದ್ರೆಯ ತೀರದ ಆ ಸುಂದರವಾದ ಪ್ರಕೃತಿಯ ಮಡಿಲಲ್ಲಿ, ಯೋಗಿಗಳ ಸಿದ್ಧಿಯ ನೆಲೆದಲ್ಲಿ ಈ ನೆಲದ ಜನರ ಸ್ವಾಭಿಮಾನದ ಸಂಕೇತವಾದ ಸಾಮ್ರಾಜ್ಯವೊಂದು ಉದಯವಾಗುತ್ತದೆ. ಅಲ್ಲಿ ಕಲೆ, ಸಾಹಿತ್ಯ, ಧರ್ಮ(ಆರ್ಯ), ಸಂಸ್ಕೃತಿಗಳು ಉನ್ನತ ಸ್ಥಾನದಲ್ಲಿದ್ದು, ಅಲ್ಲಿನ ರಾಜರ, ವೀರರ ಕೀರ್ತಿ ಅಜರಾಮರವಾಗಿರುತ್ತದೆ. ಅಂತಹ ನಾಡೊಂದು ಉದಯವಾಗಲಿದೆ. ಕನ್ನಡದ ವೀರಕೇಸರಿ ಹರಿಹರನೇ ಏಳು, ಆ ಮಹಾಸಾಮ್ರಾಜ್ಯದ ಪಟ್ಟಾಭಿಷಕ್ತನಾಗು ಎಂದು ವಿದ್ಯಾರಣ್ಯರ ವಾಣಿ ನುಡಿಯಿತು. ಅಂತೆಯೇ ಆಯಿತು ಎಂದು ಕವಿ ಹೇಳುತ್ತಾರೆ. ಪ್ರಾಚೀನ ಕಾಲದಿಂದಲೂ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ

ವಿಶಿಷ್ಟವಾದ ಕೊಡುಗೆಯನ್ನು ನೀಡಿದ ಈ ನಾಡಿನ ಪೂರ್ವ ಪರಂಪರೆಯಿಂದ ಕವಿಗೆ ಹೊರಬರಲಾಗಿಲ್ಲ. ಆಗಾಗಿ ತನ್ನ ಸಮಕಾಲೀನ ಸಂದರ್ಭದ ಸಾಂಸ್ಕೃತಿಕ ಮತ್ತು ರಾಜಕೀಯ ಒತ್ತಡವನ್ನು ಎದುರಿಸುವಲ್ಲಿ ಕವಿ ಆ ಪರಂಪರೆಗೆ ಮೊರೆ ಹೋಗುತ್ತಾನೆ. ಅದರ ಉಪಾಸಕನಾಗುತ್ತಾನೆ.

ವಿಜಯನಗರದ ವೈಭವವನ್ನು ಹೊಗಳದ ಕವಿಯಿಲ್ಲ. ಅದರ ಸೊಬಗೇ ಅಂಥದ್ದು.

"ಅಮರ ಸೌಂದರ್ಯನೆಲೆ ಸಿಂಗರದ ಭವನಮಂ
ವಿರಚಿಸಿದ ಎನಿತೆನಿತೊ ವರ ಶಿಲ್ಪಿವರ್ಯರುಂ!
ಸತ್ಕಾವ್ಯ ಕೋಟಿಯಿಂ-ವರರತ್ನಮಾಲೆಯಂ
ಎಸಗಿರ್ದ ವರಕವಿಗಳಮಿತ ಕೌಶಲ್ಯದಿಂ!" (ತ್ರಿವಿಕ್ರಮ, 1936: 68)

ಪ್ರಕೃತಿಯ ಸಹಜ ಸೌಂದರ್ಯ ತಾಣದಲಿ ಹುಟ್ಟಿಕೊಂಡ ವಿಜಯನಗರದ ವೈಭವ ನೋಡಲಸದಳ. "ಕಾಲಿದ್ರ ಹಂಪಿ ನೋಡ್ಬೇಕು, ಕಣ್ಣಿದ್ರ ಕನಕಗಿರಿ ನೋಡ್ಬೇಕು" ಎನ್ನುವ ಗಾದೆಯೇ ಇದೆ. ತುಂಗಭದ್ರ ನದಿಯ ಸುಮಧುರ ಕಲರವ, ಗಿರಿಶೃಂಖಲೆಗಳ ಪ್ರಶಾಂತ ವಾತಾವರಣ, ಹೂ ಮರ ಬಳ್ಳಿಗಳ ನಯನ ಮನೋಹರವಾದ ಆ ಪ್ರಕೃತಿಯ ಮಡಿಲಲ್ಲಿ ನಿಲ್ಲುವುದೇ ಒಂದು ಭಾಗ್ಯ. ಅಂತಹ ತಾಣ ಯಾರಿಗೆ ತಾನೇ ಇಡಿಸಲಾರದು. ಇದನ್ನು ಕಂಡ ಕವಿ ಮನಸ್ಸಂತು ಕುಣಿಯುತಿದೆ. ಇಂತಹ ಸ್ಥಳದಲ್ಲಿ ಹುಟ್ಟಿದ ಆ ವಿಜಯನಗರ ಸಾಮ್ರಾಜ್ಯ ಇಂದು ನಮ್ಮ ಮುಂದೆ ಇಲ್ಲ. ಆದರೂ ಆ ಸಾಮ್ರಾಜ್ಯ ಬಿಟ್ಟು ಹೋದ ನೆನಪು ಮಾತ್ರ ಅಲ್ಲಿನ ಪ್ರತಿಯೊಂದು ಕಲ್ಲಿನಲ್ಲಿ ನಾದವಾಗಿ ಹೊರಹೊಮ್ಮುತ್ತಿದೆ. ಹರಿಯುವ ತುಂಗೆಯ ನೀರಿನಲ್ಲಿ ಸಂಗೀತವಾಗಿ ಕೇಳಿಸುತ್ತಿದೆ ಎನ್ನುವ ರೀತಿಯಲ್ಲಿ ಕವಿ ಆ ಸ್ಥಳವನ್ನು ಕುರಿತು, ಅಲ್ಲಿನ ವೀರರ ಶೌರ್ಯ ಪ್ರತಾಪಗಳನ್ನು ಕುರಿತು, ರಾಜರ ಪರಾಕ್ರಮಗಳನ್ನು ಕುರಿತು ಕೊಂಡಾಡುತ್ತಾರೆ.

ಆನಂದ ಕವಿಯ 'ಗೆಲವಿನ ಹೊಳಲು' ಕವಿತೆಯಲ್ಲಿ, ವಿಜಯನಗರದ ವೈಭವ ಮತ್ತು ಆ ಸ್ಥಳದ ಹಿರಿಮೆಯನ್ನು ಹೇಳಲಾಗಿದೆ.

"ವೀರಕನ್ನಡ ಗಂಡುಗಲಿಗಳು ವಿಜಯನಗರದ ತಾಣಮಂ।
ಭೂರಿಸುಂದರ ಶಿಲ್ಪ-ಕಲೆಯಿಂ ಮೆರೆವ ಗುಡಿಗೋಪುರಗಳಂ ॥
ಧಾರುಣಿಗೆಮಿಗಿಲಾದ ತುಂಗಾತೀರ ಪಂಪಾನಾಥನಂ।
ಆರುನೋಡುವವರೆ ಧನ್ಯರು ಪುಟ್ಟಿ ಬಂದುದು ಸಾರ್ಥಕಂ" ॥
(ಆನಂದಕವಿ ಕುರಗುಂದ, 1936: 174)

ಪರ್ಷಿಯಾದ ಪ್ರವಾಸಿ ಅಬ್ದುಲ್ ರಜಾಕ್ "ಬೀಜನಗರದಂತ ನಗರವನ್ನು ಕಣ್ಣು ಕಂಡಿಲ್ಲ ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳು, ಏಳು

ಕೋಟೆಗಳು ಒಂದನ್ನೊಂದು ಆವರಿಸಿಕೊಂಡಿವೆ..........” (ಅಬ್ದುಲ್ ರಜಾಕ್:12-2005) ಹೀಗೆ ಕೇವಲ ದೇಶೀಯರಿಂದ ಮಾತ್ರವಲ್ಲ ವಿದೇಶಿಯರಿಂದಲೂ ಹೊಗಳಿಸಿಕೊಂಡ ವಿಜಯನಗರದ ಸೌಂದರ್ಯ ನಿಜಕ್ಕೂ ರಮಣೀಯವಾದುದು. ಇಲ್ಲಿನ ಪ್ರತಿಯೊಂದು ಗುಡಿ-ಗೋಪುರಗಳನ್ನು, ಕೋಟೆ ಕೊತ್ತಲಗಳನ್ನು, ಗಿರಿ-ಪರ್ವತಗಳನ್ನು, ಮಹಲು-ಮಂದಿರಗಳನ್ನು ಒಳಗೊಂಡ ಈ ಸ್ಥಳವು;

ಪರಮ ವಿದ್ಯಾರಣ್ಯ ಗುರುಗಳು ತಪವಗೈದಿಯ ತಾಣಮಂ ।
ವರದ ಭುವನೇಶ್ವರಿಯು ಹೊನ್ನಿನ ಮಳೆಯ ಸುರಿಸಿದ ಕ್ಷೇತ್ರಮಂ॥

(ಆನಂದಕವಿ ಕುರಗುಂದ, 1936: 174)

ತಪಸ್ವಿಗಳ ತಾಣವನ್ನು, ಪುಣ್ಯಪುರುಷರ ಪಾದ ಸ್ಪರ್ಷದ ಪವಿತ್ರ ಭೂಮಿಯನ್ನು, ಮುತ್ತುರತ್ನಗಳ ನೆಲೆವೀಡನ್ನು, ರಾಜ ಬೀದಿಯ ಠೀವಿಯನ್ನು, ಕವಿಪುಂಗವರು ವಾಸಿಸಿದ ಸ್ಥಳವನ್ನು, ಮುತ್ತು ಮಾಣಿಕ್ಯಗಳನ್ನು ಮಾರುತ್ತಿದ್ದ ಬೀದಿಗಳನ್ನು, ತುಂಗೆಯ ಝುರಿಯ ಮಧುರ ಸ್ವರವನ್ನು- ಹೀಗೆ ಒಂದೇ ಎರಡೇ ವೈವಿಧ್ಯತೆಯಿಂದ ಸೌಂದರ್ಯದ ರಾಶಿಯಂತಿದ್ದ ಈ ಸ್ಥಳವನ್ನು ಕಣ್ಣಾರೆ ಕಂಡಾಗ, ಮನಸಾರೆ ಇಲ್ಲಿನ ಸೊಬಗನ್ನು ಆನಂದಿಸಿದಾಗ ಜನ್ಮ ಸಾರ್ಥಕವಾಗುತ್ತದೆ ಎನ್ನುವ ಕವಿ ಹೃದಯ ಇಲ್ಲಿಯ ಸೌಂದರ್ಯಕ್ಕೆ ಯಾವುದು ಸರಿಯಾಟಿ ಎಂದು ಪ್ರಶ್ನಿಸುತ್ತದೆ. ಆದರೆ ವಿಜಯನಗರದಲ್ಲಿರುವ ಮಸೀದಿಗಳಾಗಲಿ, ಜೈನ ಬಸದಿಗಳಾಗಲಿ ಕವಿ ವರ್ಣನೆಯಲ್ಲಿ ಕಾಣಿಸಿಕೊಂಡಿಲ್ಲ.

ಮೇಲೆ ಉಲ್ಲೇಖಿಸಲಾದ ಕವನಗಳಲ್ಲಿ ಕನ್ನಡ ನಾಡು, ನುಡಿ, ದೇಶ, ಸಂಸ್ಕೃತಿ, ಧರ್ಮದ ಬಗೆಗಿರುವ ಅಕ್ಕರೆ ಅಭಿಮಾನಗಳು ವ್ಯಕ್ತಗೊಂಡಿವೆ. ಅಂದ ಮಾತ್ರಕ್ಕೆ ಕವನಗಳು ಇತಿಹಾಸವನ್ನು, ಜನರ ಜೀವನ ವಿಧಾನವನ್ನು ಹೇಳಿವೆ ಎಂದಲ್ಲ. ಹಾಗಿದ್ದರೆ ಅವು ಕವನಗಳಾಗುವುದಿಲ್ಲ. ನಾಡನ್ನು ಹಾಡಿ ಹೊಗಳುವ ಕವಿಗಳು ಅಲ್ಲಿನ ಚಾರಿತ್ರಿಕ ಪರಂಪರೆಯೊಂದಿಗೆ ಸಮಕಾಲೀನ ಬದುಕಿನ ವಾಸ್ತವ ಚಿತ್ರಣವನ್ನು ಕಟ್ಟಿಕೊಡುತ್ತಾರೆ. ಈ ಕವನಗಳು ಭೂತದ ಮೂಲಕ ವರ್ತಮಾನವನ್ನು ಎದುರಿಸಿ, ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಸಾಧ್ಯ ಎನ್ನುವುದನ್ನು ನಿರೂಪಿಸುತ್ತವೆ.

ಈ ಕವನಗಳಲ್ಲಿ ನಾಡನ್ನು ಅಭಿಮಾನದಿಂದ ಉದಾರವಾಗಿ ಚಿತ್ರಿಸಿರುವುದು ಕಂಡು ಬರುತ್ತದೆ. ಸ್ವ-ದ ನಿರ್ವಚನಕ್ಕೆ ವಿಜಯನಗರದ ಚಾರಿತ್ರಿಕ ನೆನಪುಗಳು ಇಪ್ಪತ್ತನೆಯ ಶತಮಾನದ ಆರಂಭ ಕಾಲದ ಕವಿಗಳಿಗೆ ವಸ್ತುಗಳಾಗಿವೆ. ವಿದ್ಯಾರಣ್ಯರು, ಹರಿಹರ ಬುಕ್ಕರಾದಿ ರಾಜರುಗಳ ಕಾಲದ ದೇವಾಲಯಗಳು, ಅರಮನೆಗಳು, ಸೈನಿಕ ವ್ಯವಸ್ಥೆ, ವೈದಿಕ ಧರ್ಮಕ್ಕೆ ಪ್ರೋತ್ಸಾಹ, ಕವಿಕಲಾವಿದರಿಗೆ ಆಶ್ರಯ, ಮುಂತಾದವು ಕಳೆದ ಶತಮಾನದಲ್ಲಿ ಆದರ್ಶ ಎಂದು ಪರಿಗಣಿಸಿರುವುದು ಕಂಡು ಬರುತ್ತದೆ. ಈ ಕಾರಣದಿಂದಾಗಿಯೇ ವಿಜಯನಗರವನ್ನು

ಕೇಂದ್ರವಾಗಿರಿಸಿಕೊಂಡು ರಚಿಸಿರುವ ಕವಿತೆಗಳಲ್ಲಿ ವೈಭವದ ಸಾಮ್ರಾಜ್ಯವಾಗಿ ಪ್ರತಿನಿಧೀಕರಣಕೊಂಡಿದೆ. ಈ ಮೊದಲೇ ಉಲ್ಲೇಖಿಸಿರುವಂತೆ ಆ ಸಂದರ್ಭದ ಕವಿಗಳಿಗೆ ಚಾರಿತ್ರಿಕವಾಗಿ ಬರೆಯುವುದು ಅನಿವಾರ್ಯವೂ ಆಗಿತ್ತು. ಆಂಗ್ಲರ ಆಡಳಿತವನ್ನು ವಿರೋಧಿಸುವುದು, ಕನ್ನಡ (ನಾಡು) ಹಾಗೂ ಭಾರತದ ಬಗ್ಗೆ ಅಭಿಮಾನವನ್ನು, ಸ್ವಾಭಿಮಾನವನ್ನು, ಇದರ ಜೊತೆಗೆ ಹೋರಾಟದ ಮನೋಭಾವನೆ ಬೆಳೆಸಬೇಕಾಗಿತ್ತು. ಆ ನಾಡನ್ನು ಪರತಂತ್ರದಿಂದ ವಿಮುಕ್ತಿಗೊಳಿಸುವ ಧ್ಯೇಯವು ಅಂದಿನ ಕವಿಗಳದಾಗಿತ್ತು.

–2–

**ಶ್ರೀ ವಿದ್ಯಾರಣ್ಯ ಕೀರ್ತನೆ (1918) : ಶಾಂತಕವಿ**

ಕನ್ನಡದ ಉಳಿವಿಗಾಗಿ ಹಗಲಿರುಳು ಪರಿತಪಿಸಿದವರು ಶಾಂತಕವಿಗಳು. ಬಹುಶಃ ತಮ್ಮ ಸಮಕಾಲೀನ ಕಾಲದ ಕನ್ನಡ ಸ್ಥಿತಿಯನ್ನು ಕಣ್ಣಾರೆ ಕಂಡು ಅನುಭವಿಸಿದವರು. ಆಗಿನ ಕಾಲದ ಮರಾಠಿ ಪ್ರಭಾವವನ್ನು ತಡೆಯುವುದಕ್ಕಾಗಿ ಕನ್ನಡ ನಾಟಗಳನ್ನು ಬರೆದು ರಂಗದ ಮೇಲೆ ತಂದವರು. 'ಬೇಡಲು ಬಂದಿಹನು ಕನ್ನಡದ ದಾಸಯ್ಯ' ಎಂದು ಮನೆಮನೆಗೆ ತೆರಳಿ ಕನ್ನಡ ಕಟ್ಟುವ ಕೆಲಸವನ್ನು ಮಾಡಿದ ಧೀಮಂತರು. ಬಹುತೇಕ ಭಾಷಾಂತರವೇ ನಡೆಯುತ್ತಿದ್ದ ಆ ಸಂದರ್ಭದಲ್ಲಿ ಶಾಂತಕವಿಗಳು ಸ್ವತಂತ್ರ ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಭಾಷೆಯ ಸತ್ವವನ್ನು ಮನವರಿಕೆ ಮಾಡಿಕೊಟ್ಟವರು.

ವಿದ್ಯಾರಣ್ಯರನ್ನು ಕುರಿತು ಶಾಂತಕವಿಗಳು ಬರೆದಿರುವ ಈ ಕೀರ್ತನೆಯಲ್ಲಿ ವಿದ್ಯಾರಣ್ಯರ ವಿಶೇಷತೆಯನ್ನ ವಿವರಿಸುವುದರ ಜೊತೆಗೆ ಆ ಸಂದರ್ಭದ ನಾಡಿನ ಸ್ಥಿತಿಗತಿಯನ್ನು ವಿವರಿಸಿದ್ದಾರೆ. ಆರಂಭದಲ್ಲಿ ಇಷ್ಟದೇವತಾ ಭಜನಾವಾದ ನಂತರ ನಾಡಿನ ವರ್ಣನೆಯಿದೆ. ಈ ನಾಡು ಸೌಖ್ಯದ ಬೀಡು, ಕೀರ್ತಿಯ ನಾಡು, ಅದು ಆತ್ಮಸ್ಫೂರ್ತಿಯ ತೇಜ, ಜ್ಞಾನದ ಕ್ಷಿತಿಜ. ಅದನ್ನು ಒಮ್ಮೆ ಕಣ್ಣಾರೆ ನೋಡಿದೆಯೆಂದರೆ ಮುಖದಲ್ಲಿ ಕಳೆ, ಮನಸ್ಸಿನದಲ್ಲಿ ಧೃತಿ, ಮೈಯಲ್ಲಿ ಬಲ, ಇದಕಿಂತಲೂ ಮಿಗಿಲಾಗಿ ಧರ್ಮಾರ್ಥ ಕಾಮ ಮೋಕ್ಷಗಳು ದೊರೆಯುತ್ತವೆ. ಇದಕ್ಕಿಂತ ಇನ್ನೇನು ಬೇಕು. ಅಂತಹ ನಾಡಿನಲ್ಲಿ ನಮ್ಮ ಜೀವನ ಪಾವನವಾಗುತ್ತದೆ ಎಂದು ಹೇಳುತ್ತಾರೆ.

ಈ ಕೀರ್ತನೆಯಲ್ಲಿ ಕೇಳಪ್ಪ ಮತ್ತು ಹೇಳಪ್ಪನವರ ನಡುವೆ ನಡೆಸುವ ಸಂವಾದದ ಮೂಲಕ ಸ್ವ-ತ್ವದ ಕಲ್ಪನೆಯನ್ನು ಹೇಳಿದ್ದಾರೆ. ಕೇಳಪ್ಪನು ನಿನ್ನ ವಸ್ತುಗಳು ಯಾವುವೆಂದು ಹೇಳಪ್ಪನನ್ನು ಕೇಳಿದಾಗ:

"ಹೊಲಮನೆಗಳು ಹೆಂ–।
ಗಳು ಮಕ್ಕಳು ಮರಿ–।
ಗಳು ಧನಧಾನ್ಯಂ–।

ಗಳಂಬರಗಳು" (ಶಾಂತಕವಿ, 1983:3)ಇವೇ ನನ್ನ ವಸ್ತುಗಳೆಂದು ಹೇಳುತ್ತಾನೆ. ಈ ಭವಬಂಧನದಲ್ಲಿ ಸಿಲುಕಿರುವ ಮನುಷ್ಯನು ತಾನು ತನ್ನದು ಎನ್ನುವುದರಲ್ಲಿಯೇ ಜೀವನವನ್ನು ಕಳೆಯುತ್ತಾನೆ. ಈ ವಸ್ತುಗಳಿಗೂ ಮೀರಿದ ಇನ್ನೊಂದು ವಸ್ತುವಿದೆ. ಅದೇ ತನ್ನ ಊರು, ತನ್ನ ದೇಶ. ಈ ದೇಶ ಭರತಭೂಮಿ ಎಂಥದೆಂದು ಹೇಳುತ್ತಾ:

"ನಮ್ಮದೀ ಭರತಭೂಮಿ ॥ಪಲ್ಲ॥
ಹೆರವರಂ ನಂಬದಲೆ ಜನದೀಶ್ವರಂ ತಾನೆ।
ಧರಿಸಿ ನಾನಾವತಾರಗಳನ್ನು ॥
ಕರೆವ ಸರ್ವಸ್ವಮಂ ಧರೆಯ ಸಂರಕ್ಷಿಸುವ।" (ಶಾಂತಕವಿ, 1983:4)

ಈ ದೇಶವು ಪೂರ್ವಪಾಠ ಶಾಲೆಯಿದ್ದಂತೆ. ಅಂಧಕಾರದಲ್ಲಿದ್ದ ಲೋಕವನ್ನು ಎಚ್ಚರಿಸುವ ಶಕ್ತಿ ಈ ದೇಶಕ್ಕಿದೆ. ಶಿಕ್ಷಿತರು ಹೇಳಿದ ಪದ್ಧತಿಗಳು, ಸದಾಭಿಮಾನ, ಶೌರ್ಯ, ಉತ್ಸಾಹದ ನಾಡಿದು. ಇದು ಭಾಗ್ಯದ ನಿಧಿ ಎಂದು ಹೇಳುತ್ತಾರೆ. ಇದೇ ನಿನ್ನ ವಸ್ತುವು ಇದರ ಬಗ್ಗೆ ನೀನು ಲಕ್ಷ್ಯ ಕೊಡು ಎಂದು ಹೇಳುತ್ತಾರೆ. ಹೇಳಪ್ಪನಿಗೆ ಪದೆ ಪದೆ ನೋಡು ಎಂದಾಗ, ಹೇಳಪ್ಪನು ಹೀಗೆ ಕೇಳಲು ಕಾರಣವನ್ನು ಕೇಳುತ್ತಾನೆ. ನೋಡುವುದರಿಂದ ಪರಿಚಯವಾಗುತ್ತದೆ. ಪರಿಚಯದಿಂದ ಸಂಭಾಷಣೆ, ಸಂಭಾಷಣೆಯಿಂದ ಭಾಷಣ, ಅದರಿಂದ ಸಹವಾಸ, ಅದರಿಂದ ಸಖ್ಯ, ಅದರಿಂದ ಒಕ್ಕಟ್ಟು ಇದರಿಂದ ದೇಶದ ಹಿತವನ್ನು ನಾವು ರಕ್ಷಿಸಿಕೊಳ್ಳಬೇಕು ಎಂದು ಕವಿ ಹೇಳುತ್ತಾರೆ. ನಿನ್ನ ವಸ್ತುವಾದ ಈ ನಾಡಿನ ಲಕ್ಷಣವನ್ನು ಹೇಳುತ್ತೇನೆ ಎನ್ನುತ್ತಾ ಕರ್ನಾಟಕದ ಗಡಿಯನ್ನು ವಿವರಿಸುತ್ತಾರೆ. ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿಯವರೆಗೆ ಈ ನಾಡಿನ ಸೀಮೆ ಹರಡಿಕೊಂಡಿದೆ. ಆಗಿನ ಬ್ರಿಟಿಷ್ ಆಡಳಿತದ ಸಂದರ್ಭದಲ್ಲಿ ಕರ್ನಾಟಕದ ಪ್ರದೇಶಗಳು ಮುಂಬೈ, ಮದ್ರಾಸ್, ಮೈಸೂರು ಕೊಡಗು, ಹೈದರಾಬಾದ್ ಪ್ರಾಂತ್ಯಗಳಲ್ಲಿ ಹರಿದು ಹೋದುದನ್ನು ತಿಳಿಸುತ್ತಾರೆ. ಇವು ಕನ್ನಡದ ಪ್ರದೇಶಗಳೇ ಇವೆಲ್ಲವನ್ನು ಸೇರಿಸಿ ಅದಕ್ಕೊಂದು ಹೆಸರಿಡಬೇಕು. ಅದೇ 'ಕರ್ಣಾಕಟಮಿದು' ಎನ್ನುತ್ತಾರೆ.

ಈ ನಾಡನ್ನು ಆಳಿದ ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಯಾದವರು, ಹೊಯ್ಸಳರು, ಆಳಿದ ನಾಡಿದು– ಇವರೆಲ್ಲ ಈಗ ಕಾಲಗರ್ಭದಲ್ಲಿ ಉದುಗಿಹೋಗಿದ್ದಾರೆ. ಉದುಗಿಹೋದ ನಾಡನ್ನು ಮತ್ತೆ ಕಟ್ಟಬೇಕು. ಅದನ್ನು ಕಟ್ಟಲಿಕೆ ಮೂಲ ಪ್ರೇರಕರಾಗಿ ಬಂದವರೇ ವಿದ್ಯಾರಣ್ಯರು. ಅವರು ಅಪ್ರತಿಮ ತಪಸ್ವಿಗಳು, ಕರ್ಮಠರು, ಭೂತದಯೆಯುಳ್ಳವರು, ಪಂಡಿತರು, ಚತುರರು, ವೇದಾಂತ ಸಿದ್ಧಾಂತಿಯು, ಧೈರ್ಯವಂತರು, ಸಾಹಸಿಗಳು, ರಾಜಕಾರಸ್ಥಾನಿಯು, ಗುಣವಂತರು, ಧನವಂತರು ಇಂತಹ ಮಹಾಮಹಿಮರ ದಿವ್ಯ ತೇಜಸ್ಸಿನಿಂದಲೇ ವಿಜಯನಗರ ಸಾಮ್ರಾಜ್ಯ ಉದಯವಾದದ್ದು.

ಪಂಪಾ ಕ್ಷೇತ್ರದಲ್ಲಿ ಭುವನೇಶ್ವರಿಯನ್ನು ಕಾಣಲೆಂದು ತಪಸ್ಸನ್ನು ಆಚರಿಸುತ್ತಿದ್ದಾಗ ದೇವಿಯು ಪ್ರತ್ಯಕ್ಷಳಾಗಿ :

ದೊರೆಯದು ಜನ್ಮಾಂ
ತರವಿಲ್ಲದೆ ಕೇಳ್
ಸಿರಿಯು ನಿನಗೆ ಭಜ
ಕರ ಶೇಖರನೇ
ಪರರಿಗೆ ನೀನ್ನೈ ವರಗಳನಿತ್ತರೆ
ಬರುವುದು ಭಾಗ್ಯದ
ಸಿರಿಯವರಿಗೆ ನಡೆ" (ಶಾಂತಕವಿ,1983:15) ಎಂದು ದೇವಿಯು ಅಂತರ್ಧಾನವಾಗುತ್ತಾಳೆ.

ಅಲ್ಲಿಂದ ಶೃಂಗೇರಿಗೆ ಬಂದಾಗ ಅಲ್ಲಿ ಒಂದು ದಿನ ಭುವನೇಶ್ವರಿಯು ಸ್ವಪ್ನದಲ್ಲಿ ಬಂದು ಸನ್ಯಾಸವನು ಸ್ವೀಕರಿಸು ಎಂದು ಹೇಳುತ್ತಾಳೆ. ಮರುದಿನವೆ ಸನ್ಯಾಸ ಸ್ವೀಕರಿಸಿದರು. ಒಂದು ದಿನ ಹರಿಹರನು ಬಂದು ನಮ್ಮ ನಾಡಿನ ಮೇಲೆ ಉತ್ತರದ ಯವನರು ದಾಳಿ ಮಾಡಿ ನಮ್ಮ ಮೂರ್ತಿಗಳನ್ನು ಭಗ್ನಗೊಳಿಸಿದ್ದಾರೆ. ಸಂಪತ್ತನ್ನು ಕೊಳ್ಳೆ ಹೊಡೆದಿದ್ದಾರೆ. ನಮ್ಮ ಜನರ ಕುಲವನ್ನು ಕೆಡಿಸಿದ್ದಾರೆ. ಅವರು ಬಂದು ಇಲ್ಲಿ ಗೆಲ್ಲಲ್ಲಿಕ್ಕೆ ನಮ್ಮವರೊಳಗಿನ ತಿಕ್ಕಾಟಗಳೇ ಕಾರಣವಾಗಿವೆ. ಎಂದು ಹೇಳಿ ಮುಂದುವರೆದು:

"ಇಳಿಯುತಿದೆ ಪಾತಾಳ ಖಾತಕೆ
ಬೆಳೆದ ಭಾರತ ದೇಶವು
ಕಳಚುತಿದೆ ಧರ್ಮಾಲಯದ ಹೊಂ-
ಗಳಸ, ಕನ್ನಡಿ, ಧ್ವಜಗಳು
ಉದ್ಧರಿಸುವ ಮಹಾತ್ಮರಿಲ್ಲವೆ
ಇದ್ದರೇಕೆ ವಿಲಂಬವೈ" ॥

(ಶಾಂತಕವಿ, 1983:21)

ಅವರ ದಾಳಿಯಿಂದ ದೇಶ ಅಧೋಗತಿಗೆ ಹೋಗುತ್ತಿದೆ. ಅದನ್ನು ಪುನಃ ಕಟ್ಟಲಿಕೆ ವಿದ್ಯಾರಣ್ಯರು ಸಿದ್ಧರಾಗುತ್ತಾರೆ.

"ಏಳು ಸಾಯಣ ಕಟ್ಟು ಗ್ರಂಥವ
ನೇಳು ಪಂಪಾಕ್ಷೇತ್ರಕೆ
ಗಾಳಿಗಂಟುಗಳೋದಿದೇತಕೆ
ಏಳು ಕ್ಷಣ ಈ ಮಾತ್ರಕೆ"

(ಶಾಂತಕವಿ, 1983:22)

ಎಂದು ತಮ್ಮ ಸಾಯಣನೊಂದಿಗೆ ಪಂಪಾಕ್ಷೇತ್ರಕ್ಕೆ ಬಂದು. ಅಲ್ಲಿ ಹೊಸ ಸಾಮ್ರಾಜ್ಯವನ್ನು ಕಟ್ಟಲಿಕ್ಕೆ ತಯಾರಾಗುತ್ತಾರೆ.

"ಪಾರತಂತ್ರ್ಯವು ಮೋಕ್ಷ ಸುಖಕಪ
ಕಾರಿಯದುವೆ ಅಧೋಗತಿ ।
ಪಾರತಂತ್ರ್ಯ ಸ್ಥಿತಿಯ ಕುಲಸಂ-
ಹಾರವೇ ಸುತಪಃ ಕೃತಿ॥"

(ಶಾಂತಕವಿ, 1983: 22)

ನಾವು ಪಾರತಂತ್ರ್ಯದಿಂದ ಬಿಡುಗಡೆಗೊಂಡಾಗ ಮಾತ್ರ ಮೋಕ್ಷ ಸಾಧನೆ ಸಾಧ್ಯ ಎಂದು ಹೇಳಿದ್ದಾರೆ. ಲಕ್ಷಶಾಸ್ತ್ರಗಳನ್ನು ಓದಿದರೇನು, ಲಕ್ಷ ಸೂತ್ರಗಳನ್ನು ನೋಡಿದರೇನು, ಮೋಕ್ಷ ಸಾಧನೆಗೆ ಪರತಂತ್ರದಿಂದ ಮುಕ್ತಿ ಬೇಕು. ಮೊದಲು ಸ್ವ-ತ್ವವನ್ನು ಕಾಪಾಡಿಕೊಳ್ಳದಿದ್ದರೆ ಜೀವನ ನಿಃಸತ್ವವಾಗುತ್ತದೆ. ಅದಕ್ಕಾಗಿ ಹಂಪೆಗೆ ಬಂದು ರಾಜ್ಯ ಸ್ಥಾಪಿಸಿಕೊಳ್ಳಬೇಕೆನ್ನುತ್ತಾರೆ. ಅದಕ್ಕೆ ಕೊರತೆಯೇನು ಇಲ್ಲ. ಸ್ವಭೂಮಿ ಇದೆ, ಸ್ವ ಭಾಷೆಯಿದೆ, ಸ್ವಾಭಿಮಾನವಿದೆ, ಸ್ವಧರ್ಮವಿದೆ, ಸ್ವದೇಶಬಾಂಧವರಿದ್ದಾರೆ, ಸ್ವಧೈರ್ಯವಿದೆ, ಸ್ವದೇಹವಿದೆ, ಸ್ವದೈವಗಳೂ ಇವೆ ಇವೆಲ್ಲವುಗಳ ಸಹಾಯದಿಂದ ಸ್ವ ರಾಜ್ಯವನ್ನು ಕಟ್ಟಿಕೊಳ್ಳಲಾಗದೆ, ನಿಶ್ಚಿತವಾಗಿ ನಾಡನ್ನು ಕಟ್ಟಬೇಕೆಂದು ಸಿದ್ಧರಾಗುತ್ತಾರೆ. ತುಂಗಭದ್ರಾ ತೀರಕ್ಕೆ ಬಂದು ಅಲ್ಲಿ ಲಕ್ಷಣೋತ್ತಮವಾದ ರಾಜಧಾನಿಯನ್ನು ಕಟ್ಟುತ್ತಾರೆ. ದೇವಿಯನ್ನು ಬೇಡಿಕೊಂಡಾಗ ಅಲ್ಲಿ ಹೊನ್ನಿನ ಮಳೆ ಸುರಿಯುತ್ತದೆ. ಮುಂದೆ ಈ ಸಾಮ್ರಾಜ್ಯ ಸುಂದರವಾಗಿ ರೂಪುಗೊಳ್ಳುತ್ತದೆ. ವಿದ್ಯಾರಣ್ಯರು ಹರಿಹರನಿಗೆ:

"ಇದುಕೋ ಕರ್ಣಾ
ಟದ ಸಿಂಹಾಸನ
ವಿದನೇರ್ರೈ ಹರಿಹರ ರಾಜಾ!
ಇದರಿಂ ಪರಮಾ-
ಭ್ಯುದಯ ದೇಶಕೆ
ಸ್ವಧರ್ಮಕಂ ರಾಜರ ರಾಜಾ!"

(ಶಾಂತಕವಿ, 1983: 29)

ಎಂದು ರಾಜಧರ್ಮದ ವಿಧಿವಿಧಾನಗಳನ್ನೇಳಿ, ಇನ್ನು ಮೇಲೆ ಈ ಸಾಮ್ರಾಜ್ಯವನ್ನು ಸುವ್ಯವಸ್ಥಿತವಾಗಿ ನೋಡಿಕೊಂಡು ಹೋಗುವಂತೆ ಉಪದೇಶಿಸುತ್ತಾರೆ.

ವಿದ್ಯಾರಣ್ಯರ ಈ ಕೀರ್ತನೆಯು ವಿದ್ಯಾರಣ್ಯರು ವಿಜಯನಗರವನ್ನು ಕಟ್ಟಿದ್ದನ್ನು ಕುರಿತು ಹೇಳಿದ್ದಾದರೂ, ಅದರ ಆಂತರ್ಯದ ಧ್ವನಿಯು ಕವಿಗಳು ತಮ್ಮ ಸಮಕಾಲೀನ

ಸಂದರ್ಭದಲ್ಲಿ ಕರ್ನಾಟಕತ್ವ ಮತ್ತು ಭಾರತತತ್ವವನ್ನು ಈ ನಾಡಿನ ಜನ ಬೆಳೆಸಿಕೊಂಡಾಗ ಮಾತ್ರ ಸ್ವತಂತ್ರವಾದ ದೇಶವನ್ನು ಕಟ್ಟಿಕೊಳ್ಳಬಹುದು ಎನ್ನುತ್ತದೆ.

* * *

**ಉಲ್ಲೇಖಗಳು :**


ಕಾ.ವೆಂ.ಶ್ರೀನಿವಾಸ ಮೂರ್ತಿ (ಸಂ), 1998, *ಕನ್ನಡ ಸಾಹಿತ್ಯ* ಮತ್ತು *ಕರ್ನಾಟಕತ್ವ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸಿ.ಪಿ.ಕೆ. : *ಕವಿಗಳ ಕಣ್ಣಿನಲ್ಲಿ ಕರ್ನಾಟಕ* (ಅವಲೋಕನ, ಸಂ.ಎಚ್ಚೆಸ್ಕೆ),

ಕುವೆಂಪು : ಸಾಹಿತ್ಯ ಪ್ರಚಾರ,

ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ, 1936 : ಸಂ:ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ದ.ರಾ.ಬೇಂದ್ರೆ : ಹಂಪೀ ವಿಜಯನಗರ ದರ್ಶನ, 1993 (ಕನ್ನಡ ತಾಯಿತೆ ನುಡಿ ನಮನ : ಸಂ:ಎಲ್.ಎಸ್.ಶೇಷಗಿರಿರಾವ್),

ಅದೇ.

ವಿ.ಕೆ.ಗೋಕಾಕ: ತ್ಯಾವಣ ನಾಯಕ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ :ಸಂ:ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಅದೇ.

ಅಶ್ವತ್ಥ : *ವಿಜಯನಗರ*, 1936. ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀವೆಂಕಟೇಶ ಶ್ರೀ ಶ್ರೀನಿವಾಸ ಪಂಡಿತ.

ಸಾಲಿ ರಾಮಚಂದ್ರರಾಯರ ಸಮಗ್ರಕಾವ್ಯ, 1996, ಸಂ: ಶಿದ್ಧಲಿಂಗಣ ಶೆಟ್ಟಿ

ಪಂ. ಶಂಭುಶರ್ಮರು, : ವಿಜಯನಗರ ಸ್ಮರಣೆ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಅಶ್ವತ್ಥ : ವಿಜಯನಗರ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ :ಸಂ:ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಪಂ.ಶಂಭುಶರ್ಮ :ವಿಜಯನಗರದ ಸ್ಮರಣೆ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ :ಸಂ:ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಸ.ಪ.ಗಾಂವಕರ : ವಿಜಯದಶಮಿ, 1936, ಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಗೋಪಾಲಕೃಷ್ಣ ಅಡಿಗ : 2000, ಸಮಗ್ರ ಕಾವ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

ಅದೇ,

ಸುಮತೀಂದ್ರ ನಾಡಿಗ, ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, 1971, ಸಂ:ಜಿ.ಎಸ್.ಎಸ್.,(ಪ್ರ.ಸಂ), *ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬಿ.ವಿ.ರಮಣನ್ : ಹಂಪೆಯ ಪೆಂಪು, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ :ಸಂ:ಶ್ರೀವೆಂಕಟೇಶ ಶ್ರೀಶ್ರೀನಿವಾಸ ಪಂಡಿತ.

ಅದೇ.

ಕೃಷ್ಣಮೂರ್ತಿ ಪುರಾಣಿಕ : ಚೆನ್ನಿ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀವೆಂಕಟೇಶ ಶ್ರೀ ಶ್ರೀನಿವಾಸ ಪಂಡಿತ.

ಟಿ.ಎನ್.ಶ್ರೀನಿವಾಸಮೂರ್ತಿ : ಗತವೈಭವಗಳ ನಾಡೆ! ಇಂದಿನ ದುರ್ಗತಿ ಬೀಡೆ!, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀವೆಂಕಟೇಶ ಶ್ರೀ ಶ್ರೀನಿವಾಸ ಪಂಡಿತ.

ಅದೇ.

ವೇದವ್ಯಾಸ : ರಾಮರಾಜನ ಸಂದೇಶ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಜಿ.ವಾಸುದೇವರಾವ್ : ರುದ್ರರಂಗ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಯಶೋಧಾಕುಮಾರ : ವಿದ್ಯಾರಣ್ಯ ಮುನಿಗೆ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಎ.ಲಕ್ಷ್ಮಣರಾವ್ : ಹಂಪೆಗೆ, 2007, (ಕನ್ನಡದ ಬಾವುಟ ಸಂ:ಬಿ.ಎಂ.ಶ್ರೀ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

ಅದೇ.

ಕುವೆಂಪು : ಹಂಪೆಯ ಭೀಮ, 2000, ಶಿವಾರೆಡ್ಡಿ ಕೆ,(ಸಂ) *ಕುವೆಂಪು ಸಮಗ್ರ ಕಾವ್ಯ ಸಂ–1*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅದೇ.

ಜೋಳದರಾಶಿ ದೊಡ್ಡನಗೌಡ : ವಿದ್ಯಾರಣ್ಯ, 1998, ಜೋಳದರಾಶಿ ಕಾವ್ಯ, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

ಅಜ್ಞಾತಕವಿ : ತಾಳಿಕೋಟೆಯ ಕಾಳಗದಬ್ಬರ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಅದೇ.

ಭಾರತೀಸುತ : ಹಾಳು ಹಂಪೆ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಶ್ರೀಪರಮೇಶ್ವರ : ಪಂಪಾಸರೋವರ!, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಬಿ.ಎಂ.ಶ್ರೀ : ಕನ್ನಡತಾಯಿ ನೋಟ, 1993, (ಕನ್ನಡ ತಾಯಿಗೆ ನುಡಿ ನಮನ, ಸಂ: ಎಲ್.ಎಸ್.ಶೇಷಗಿರಿರಾವ್,) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅದೇ.

ಅದೇ.

ಅದೇ.

ಈಶ್ವರ ಸಣಕಲ್ಲ : ಶಾಪಗ್ರಸ್ತ ವಿಜಯನಗರ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಎಸ್.ಆರ್.ಮಳಗಿ : ಶ್ರೀವಿದ್ಯಾರಣ್ಯರ ವಾಣಿ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ತ್ರಿವಿಕ್ರಮ : ವಿಜಯನಗರ ವೈಭವ, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಆನಂದಕವಿ ಕುರಗುಂದ : ಗೆಲವಿನ ಹೊಲಳು, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ಅಬ್ದುಲ್ ರಜಾಕ್; 2005, ಅನು: ಹೆಚ್. ಎಲ್. ನಾಗೇಗೌಡ, ಪ್ರವಾಸಿ ಕಂಡ ವಿಜಯನಗರ, ಸಂ: ಡಾ.ಬಿ.ಎ.ವಿವೇಕ ರೈ..

ಆನಂದಕವಿ ಕುರಗುಂದ : ಗೆಲವಿನ ಹೊಲಳು, 1936, ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ : ಸಂ: ಶ್ರೀ ವೆಂಕಟೇಶ, ಶ್ರೀ ಶ್ರೀನಿವಾಸ ಪಂಡಿತ.

ರಾ.ಯ.ಧಾರವಾಡಕರ(ಸಂ), 1983, ಶಾಂತಕವಿಗಳ ಮೂರು ಕೀರ್ತನೆಗಳು, ಸ್ವರಸ್ವರಿ ಪುರ, ಧಾರವಾಡ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

# ಅಧ್ಯಾಯ–6

## ಕಾದಂಬರಿಗಳಲ್ಲಿ ವಿಜಯನಗರದ ಪ್ರತಿನಿಧೀಕರಣ

* ಕರ್ನಾಟಕ ಸಿಂಹಾಸನ ಸ್ಥಾಪನೆ
* ಕನ್ನಡಿಗರ ಕಾರಸ್ಥಾನ
* ಎಚ್ಚಮ ನಾಯಕ
* ಕನ್ನಡಿಗರ ಕರ್ಮಕಥೆ
* ಕುಮುದಿನಿ
* ಮಾಧವ ಕರುಣಾವಿಲಾಸ
* ರಾಜಯೋಗಿ
* ಅಶಾಂತಿ ಪರ್ವ

'ಯುಗಯುಗಾಂತರಗಳ ಅನಂತ ಚಿರನಿದ್ರೆಯಲಿ
ನಿಷ್ಪಂದ ಮೂಕತೆಯ ಜಲಸಮಾಧಿಯೊಳಿಲ್ಲಿ
ಸ್ತಬ್ಧವಾಗಿದೆ ಸರೋವರ ದೇಹ–ದಡದಲ್ಲಿ
ರಾಮಾಯಣದ ಮಹಾಸ್ವಪ್ನ ಚಿನ್ಮುದ್ರೆಯಲಿ'

–ಶ್ರೀಪರಮೇಶ್ವರ.

## ಅಧ್ಯಾಯ-6

# ಕಾದಂಬರಿಗಳಲ್ಲಿ ವಿಜಯನಗರದ ಪ್ರತಿನಿಧೀಕರಣ

ಕಾದಂಬರಿ ಸಾಹಿತ್ಯದ ಬಹುಮುಖ್ಯ ಪ್ರಕಾರಗಳಲ್ಲಿ ಒಂದು. ಕಾವ್ಯ ನಾಟಕಗಳಂತೆ ಅನಿವಾರ್ಯವಾಗಿ ಪಾಲಿಸಬೇಕಾದ ನಿಯಮಗಳು ಅದಕ್ಕಿಲ್ಲ. ಹಾಗಾಗಿಯೇ ಕಾದಂಬರಿಯ ಹರವು ವಿಸ್ತಾರವಾದುದು. ವಿಭಿನ್ನವಾದುದು. ಕಾದಂಬರಿಯ ವಸ್ತು ಖಗೋಳಶಾಸ್ತ್ರದಿಂದ ಹಿಡಿದು ವ್ಯಕ್ತಿಯೊಬ್ಬನ ಅಂತರಂಗದ ವಿಶ್ಲೇಷಣೆಯವರೆಗೆ ಏನು ಬೇಕಾದರೂ ಆಗಬಹುದು. ನಿರ್ದಿಷ್ಟವಾದ ಆಕಾರ ರಹಿತತೆಯೇ ಕಾದಂಬರಿಗಳ ಲಕ್ಷಣ. ಈ ಕಾರಣದಿಂದಾಗಿಯೇ ಕಾದಂಬರಿಯಲ್ಲಿ ವಿಭಿನ್ನ ಮಾದರಿಯ ರಚನೆಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾಣ ಸಿಗುತ್ತವೆ. ಅಲ್ಲಿ ಅಭಿವ್ಯಕ್ತಗೊಂಡಿರುವ ವಿಷಯವು ಕಾಲ್ಪನಿಕವೂ ಹೌದು, ವಾಸ್ತವಿಕವೂ ಹೌದು, ಚಾರಿತ್ರಿಕವೂ ಹೌದು ಹೀಗೆ ಹಲವು ಒಳಹುಗಳನ್ನು ಮೈಗೂಡಿಸಿಕೊಂಡಿರುವ ಕಾದಂಬರಿಯನ್ನು ಹಲವು ನೆಲೆಗಳಿಂದ ಅಧ್ಯಯನಕ್ಕೊಳಪಡಿಸಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯ ಕುರಿತು ಕನ್ನಡದಲ್ಲಿ ಈಗಾಗಲೇ ಮನಃಶಾಸ್ತ್ರೀಯ, ಸಮಾಜಶಾಸ್ತ್ರೀಯ ಮುಂತಾದ ದೃಷ್ಟಿಕೋನಗಳ ಜೊತೆ ಚಾರಿತ್ರಿಕವಾಗಿಯೂ ಅವುಗಳನ್ನು ಅಧ್ಯಯನಕ್ಕೊಳಪಡಿಸಿದ್ದಾರೆ.

ಚಾರಿತ್ರಿಕ ವಸ್ತುವನ್ನು ಆಯ್ದುಕೊಂಡು ಅದನ್ನು ಕಾದಂಬರಿ ರೂಪದಲ್ಲಿ ಹೆಣೆದ ಕಾದಂಬರಿಗಳು ಕನ್ನಡದಲ್ಲಿ ವಿಪುಲವಾಗಿ ದೊರೆಯುತ್ತವೆ. ರಾಷ್ಟ್ರೀಯ ಹೋರಾಟ ಪ್ರಮುಖವಾಗಿದ್ದ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಏಕೀಕರಣದ ಆಶಯವನ್ನು ಹೊತ್ತು ಹುಟ್ಟಿಕೊಂಡ ಕಾದಂಬರಿಗಳು ಚಾರಿತ್ರಿಕ ಘಟನೆಗಳನ್ನು ಪ್ರತಿಬಿಂಬಿಸುತ್ತವೆ. ಅಂತಹ ಸಂದರ್ಭದಲ್ಲಿ ಕನ್ನಡ ಕಾದಂಬರಿಕಾರರನ್ನು ವಿಜಯನಗರದ ಚರಿತ್ರೆ ಬಹುಮುಖ್ಯವಾಗಿ ಆಕರ್ಷಿಸಿತು. ಶ್ರೀ ವಿದ್ಯಾರಣ್ಯರ ಪ್ರೇರಣೆ ಮತ್ತು ಹರಿಹರ-ಬುಕ್ಕರ ಸಾಹಸದಿಂದ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ಕನ್ನಡಿಗರ ರತ್ನ ಸಿಂಹಾಸನದ ಕಲ್ಪನೆ. ಈ ಬಗೆಯ ವಿಚಾರಗಳು ಕನ್ನಡ ಕಾದಂಬರಿಯಲ್ಲಿ ಹೇರಳವಾಗಿವೆ. ಏಕೀಕರಣದ ಪೂರ್ವದ ಸಂದರ್ಭದಲ್ಲಿ ವಿವಿಧ ಸಂಸ್ಥಾನಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳ ಎಲ್ಲ ಜನರಿಗೂ ಈ ಸಂಕೇತಗಳು ಅಭಿಮಾನದ, ಗತವೈಭವದ ಹೆಮ್ಮೆಯ ಸಂಗತಿಗಳಾಗಿದ್ದವು. ಇತರೆ ರಾಜಮನೆತನಗಳು ಐತಿಹಾಸಿಕವಾಗಿ ಮಹತ್ವ ಪಡೆದಿದ್ದರೂ ಹಾಗೂ ಆ ಮೂಲಕ ಕಾದಂಬರಿಗಳು ಕನ್ನಡಿಗರನ್ನು ಜಾಗೃತಗೊಳಿಸಿದ್ದರೂ ವಿಜಯನಗರ ಸಾಮ್ರಾಜ್ಯಕ್ಕೆ ಹೆಚ್ಚಿನ ಆದ್ಯತೆ ಸಿಕ್ಕಿತು. ಬಹುಶಃ ಇದಕ್ಕೆ ಕಾರಣ ಈ ಸಾಮ್ರಾಜ್ಯವು ಕನ್ನಡಿಗರ ಸಾಂಸ್ಕೃತಿಕ ವಿಚಾರಗಳಿಗೆ ಮೂಲ ಕೇಂದ್ರವಾಗಿದ್ದುದು ವಿಶೇಷ. ಹಾಗೆಯೇ ತನ್ನ ಆಡಳಿತದ ವ್ಯಾಪ್ತಿಯಲ್ಲಿ ಕನ್ನಡಿಗರನ್ನಷ್ಟೇ ಅಲ್ಲದೆ ಅನ್ಯ ಭಾಷಿಕ ಪ್ರದೇಶಗಳನ್ನು ತೆಗೆದುಕೊಂಡಿದ್ದಿತು. ಅಲ್ಲದೆ

ಸಾಮ್ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಚಿತ್ರಿಸಿದ ವರ್ಣನಾತ್ಮಕ ಚಿತ್ರಣಗಳು ಮಹತ್ವದವುಗಳು. ಇದಲ್ಲದೆ ಅನ್ಯ ಧರ್ಮೀಯರ ಉಪಟಳದಿಂದ ಹಿಂದೂ ಧರ್ಮವು ಅವನತಿಯತ್ತ ಸಾಗಿದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯವಾಯಿತು.

ಧರ್ಮದ ರಕ್ಷಣೆಯ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತು ಸಾಗಿದ ಈ ಸಾಮ್ರಾಜ್ಯವು ಪ್ರಸ್ತುತ ಸಂದರ್ಭದಲ್ಲಿ ಅಂದರೆ ರಾಷ್ಟ್ರೀಯ ಹೋರಾಟದ ಅವಧಿಯಲ್ಲಿ ಅನ್ಯರಾದ ಬ್ರಿಟಿಷರಿಂದ ಹಿಂದೂ ಸಾಂಸ್ಕೃತಿಕ ಬದುಕನ್ನು ರಕ್ಷಿಸಿಕೊಳ್ಳಬೇಕೆಂಬ ಮಹದಾಸೆಗೆ ಪ್ರೇರಣೆಯಾಯಿತು. ಇಂತಹ ಕಾರಣಗಳಿಂದಾಗಿ ಅನೇಕ ಕಾದಂಬರಿಕಾರರು ಈ ಸಾಮ್ರಾಜ್ಯವನ್ನು ಒಂದು ಆದರ್ಶವನ್ನಾಗಿಟ್ಟುಕೊಂಡು ಅಂದರೆ ಸುವರ್ಣಯುಗದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ರಚಿಸಿದರು. ಈ ಸಾಮ್ರಾಜ್ಯದ ಕುರಿತು ರಚನೆಗೊಂಡಿರುವ ಕಾದಂಬರಿಗಳನ್ನು ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಮೊದಲೇ ಹೇಳಿರುವಂತೆ ವಿಜಯನಗರದ ಐತಿಹಾಸಿಕ ವಿಚಾರಧಾರೆಗಳ ಕುರಿತು ಹಲವು ಬಗೆಯ ಅಧ್ಯಯನಗಳು ನಡೆದಿವೆ. ನಡೆಯುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ವಿಜಯನಗರವನ್ನಾಧರಿಸಿ ರೂಪುಗೊಂಡಿರುವ ಕಾದಂಬರಿಗಳಲ್ಲಿ ಕನ್ನಡ, ಭಾರತ(ರಾಷ್ಟ್ರ), ಹಿಂದೂ ಅಸ್ಮಿತೆಗೆ ಸಂಬಂಧಿಸಿದ ವಿಚಾರಗಳು ಹೇಗೆ ಪ್ರತಿನಿಧೀಕರಣಗೊಂಡಿವೆ ಎನ್ನುವುದರ ವಿಶ್ಲೇಷಣೆಯಿದೆ.

### ಕರ್ನಾಟಕ ಸಿಂಹಾಸನ ಸ್ಥಾಪನೆ : (1922)

ವಿಜಯನಗರಕ್ಕೆ ಸಂಬಂಧಿಸಿದಂತೆ ರಚನೆಗೊಂಡ ಕಾದಂಬರಿಗಳಲ್ಲಿ ಶಂಕರ ಅಣ್ಣಾಜಿ ಕುಲಕರ್ಣಿ ಇವರು ಬರೆದಿರುವ 'ಕರ್ನಾಟಕ ಸಿಂಹಾಸನ ಸ್ಥಾಪನೆ'ಯು ಒಂದು. ಈ ಕಾದಂಬರಿಯ ಪ್ರಸ್ತಾವನೆಯಲ್ಲಿ ಲೇಖಕರು ವಿಜಯನಗರ ಸಾಮ್ರಾಜ್ಯದ ಹಿರಿಮೆಯನ್ನು ಕುರಿತು ಮೆ.ಸಿವಿಲ್‌ರು ಬರೆದ 'ಮರೆತುಹೋದ ಸಾಮ್ರಾಜ್ಯ' ಮತ್ತು ಸೂರ್ಯನಾರಾಯಣಪ್ಪನವರ 'ಎಂದೂ ಮರೆಯದ ಸಾಮ್ರಾಜ್ಯ' ಕೃತಿಗಳಲ್ಲಿನ ಕೆಲ ಸಂಗತಿಗಳನ್ನು ಆಯ್ದುಕೊಂಡು ಅದಕ್ಕೆ ಕಾಲ್ಪನಿಕತೆಯನ್ನು ನೀಡಿ ಕೃತಿ ರಚಿಸಿರುವುದಾಗಿ ಹೇಳಿದ್ದಾರೆ. ಹಾಗೆಯೇ "ಐತಿಹಾಸಿಕ ಕಾದಂಬರಿಯು ಇತಿಹಾಸವಲ್ಲ; ಇತಿಹಾಸ ಹಾಗೂ ಕಲ್ಪನೆಯ ಸಮ್ಮಿಶ್ರಣವು." ಎಂದು ಹೇಳಿರುವಲ್ಲಿ ಲೇಖಕರು ತಾವು ಕಾದಂಬರಿ ರಚಿಸಿರುವ ವಿಧಾನವನ್ನು ಹೇಳಿದಂತಿದೆ. ಈ ಕಾದಂಬರಿಯ ರಚಿತಗೊಂಡಿರುವ ಮುಖ್ಯ ಉದ್ದೇಶವು 20ನೆಯ ಶತಮಾನದ ಆದಿಭಾಗದಲ್ಲಿನ ವಸಹಾತುಶಾಹಿ ಆಡಳಿತದಿಂದ ಉಂಟಾದ ಪರಿಣಾಮಗಳ ವಿರುದ್ಧವಾಗಿ ಕನ್ನಡಿಗರಲ್ಲಿ ಜಾಗೃತಿಯನ್ನು ಉಂಟುಮಾಡುವ ಸಲುವಾಗಿ 14ನೆಯ ಶತಮಾನದಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದ ಐತಿಹಾಸಿಕ ನೆನಪುಗಳ ಮೂಲಕ ತಮ್ಮ ಅಸ್ಮಿತೆಯನ್ನು ನಿರ್ಮಾಣ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಕಾದಂಬರಿ ಪ್ರಾರಂಭವಾಗುವುದು ವಿಜಯನಗರ ಸಾಮ್ರಾಜ್ಯ ಉದಯಿಸುವ ಪೂರ್ವದಲ್ಲಿನ ಚಾರಿತ್ರಿಕ ಸಂಗತಿಗಳನ್ನಾಧರಿಸಿಯೇ. ಇಲ್ಲಿ ಕಾದಂಬರಿಕಾರರು ಎತ್ತುವ ಬಹುಮುಖ್ಯವಾದ ಪ್ರಶ್ನೆ ಧರ್ಮ ಮತ್ತು ನಾಡು ಯಾಕೆ ಪರಾಧೀನವಾದವು ಎನ್ನುವುದು. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವಾಗ ಸಾಂಸ್ಕೃತಿಕ ಚರಿತ್ರೆಯೊಂದನ್ನು ಕಟ್ಟಿಕೊಂಡು, ದೇಶೀಯವಾದ ಸಾಂಸ್ಕೃತಿಕ ಮಾದರಿಯನ್ನು ಅವರು ತಮ್ಮ ಕೃತಿಯಲ್ಲಿ ವಿಶ್ಲೇಷಿಸುತ್ತಾರೆ. ಸಮಾಜವನ್ನು ಸಂಘಟಿಸುವ ಮೌಲ್ಯಗಳ ಅಧಃಪತನದಿಂದಾಗಿ ಧರ್ಮ ಮತ್ತು ನಾಡು ಪರಾಧೀನವಾಯಿತು ಎಂದು ಗ್ರಹಿಸಿ; ಸಂಸ್ಕೃತಿಯನ್ನು ಪುನಃ ಚೈತನ್ಯಶೀಲವನ್ನಾಗಿ ಮಾಡಬಲ್ಲ ಮೌಲ್ಯವನ್ನು ಮಂಡಿಸಲು ಪ್ರಯತ್ನಿಸುತ್ತಾರೆ. ಈ ಕಾರ್ಯ ನಡೆಯುವುದು ಪರ್ಯಾಯವಾಗಿಯೇ ಹೊರತು ನೇರವಾಗಿ ಅಲ್ಲ ಎನ್ನುವುದು ಮುಖ್ಯ. ಇಂದು ಭಾರತ ಎಂದು ಗುರುತಿಸುವ ಭೌಗೋಳಿಕ ಪ್ರದೇಶಕ್ಕೆ ಹಿಂದಿನಿಂದಲೂ ಬೇರೆ ಬೇರೆ ದೇಶಗಳಿಂದ ವಿವಿಧ ಜನಾಂಗದವರು ಬಂದು, ಇಲ್ಲಿ ಬಹುಕಾಲ ನೆಲೆಸಿ, ಇಲ್ಲಿನ ಸಂಸ್ಕೃತಿಯನ್ನು ಸ್ವೀಕರಿಸಿ ಅದರಲ್ಲಿ ಬೆರೆತು ಹೋಗಿದ್ದಾರೆ. ಕೆಲವರು ಇಲ್ಲಿನ ಸಂಪತ್ತನ್ನು ದೋಚಿಕೊಂಡು ತಮ್ಮ ದೇಶಕ್ಕೆ ಹಿಂದಿರುಗಿದ್ದಾರೆ. ಮತ್ತೆ ಕೆಲವರು ಇಲ್ಲಿನ ಪ್ರದೇಶಗಳಲ್ಲಿ ಆಡಳಿತ ನಡೆಸಿ ಇಲ್ಲಿಯೇ ನೆಲೆನಿಂತಿದ್ದಾರೆ. ಅಂತಹವರಲ್ಲಿ ಮುಸ್ಲಿಮರು ಪ್ರಮುಖರು. ವಾಯುವ್ಯ ಭಾಗದಿಂದ ನಮ್ಮ ದೇಶಕ್ಕೆ ಬಂದು ಉತ್ತರ ಭಾರತದಲ್ಲಿ ನೆಲೆ ನಿಂತ ಈ ಮುಸ್ಲಿಂ ದೊರೆಗಳು ದಕ್ಷಿಣ ಭಾರತದ ಮೇಲೆ ಅನೇಕ ಸಾರಿ ದಾಳಿ ಮಾಡಿ, ಸಂಪತ್ತನ್ನು ದೋಚಿಕೊಂಡು, ಅಲ್ಲಿ ತಮ್ಮ ಗುಲಾಮರನ್ನು ಅರಸರನ್ನಾಗಿ ಮಾಡಿ ಉತ್ತರ ಭಾರತಕ್ಕೆ ಹಿಂದಿರುಗಿದ್ದಾರೆ. ಹೀಗೆ ಮುಸ್ಲಿಮರ ದಾಳಿಗೆ ತುತ್ತಾದ ಸಂಸ್ಥಾನಗಳಲ್ಲಿ ಆನೆಗುಂದಿಯೂ ಒಂದು. ಈ ಸಂಸ್ಥಾನವು ಹಿಂದೂ ಧಾರ್ಮಿಕ ಪರಂಪರೆಯನ್ನು ಹೊಂದಿತ್ತು ಎನ್ನುವುದಕ್ಕೆ ಆನೆಗುಂದಿಯನ್ನು ಮಹಾಭಾರತ ಕಾಲದಲ್ಲಿ ದಕ್ಷಿಣ ಹಸ್ತಿನಾವತಿ ಎಂದು ಕರೆಯಲಾಗಿದೆ. ಹಾಗೆಯೇ ರಾಮಾಯಣ ಕಾಲದಲ್ಲಿ ಬಲಾಢ್ಯ ಅರಸನಾದ ವಾಲಿಯು ಕಿಷ್ಕಿಂದೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾನೆ ಎನ್ನುವ ಪ್ರತೀತಿ ಇದೆ. ಒಟ್ಟಾರೆಯಾಗಿ ಹೇಳುವುದಾದರೆ ಬಹುಕಾಲದಿಂದಲೂ ಆನೆಗುಂದಿಯು ಹಿಂದೂ(ವೈದಿಕ) ಧರ್ಮದ ನೆಲೆವೀಡಾಗಿತ್ತು. ಎನ್ನುವುದನ್ನು ಕಾದಂಬರಿಕಾರರು ನಿರೂಪಿಸಿದ್ದಾರೆ.

ಹೀಗೆ ಮುಸ್ಲಿಮರ ದಾಳಿಯಿಂದ ಹಿಂದೂ ಸಂಸ್ಕೃತಿಯು ಅಧಃಪತನದ ಹಾದಿಯಲ್ಲಿದ್ದಾಗ, ವಿದ್ಯಾರಣ್ಯರು ತಮ್ಮ ತಪಸ್ಸಿನ ಫಲದಿಂದ ಹಿಂದೂ ಸಂಸ್ಕೃತಿಯನ್ನು ಪುನಃ ಚೇತನಗೊಳಿಸಿದ್ದಾರೆ ಎನ್ನುವ ವಿಚಾರಗಳು ಇಲ್ಲಿ ವ್ಯಕ್ತವಾಗಿವೆ. ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗಿ ವಿದ್ಯಾರಣ್ಯರಿಗೆ ಹೇಳುವ ಮಾತು ಇದಕ್ಕೆ ಪುಷ್ಠಿ ಕೊಡುತ್ತದೆ.

"ತಾಪಶ್ರೇಷ್ಠನೇ ನಾನು ಸೃಷ್ಠಿ-ಸ್ಥಿತಿ-ಲಯಕರ್ತನಾದ ಪರಮೇಶ್ವರನು. ಸಮೀಪದಲ್ಲಿಯೇ ವಿರೂಪಾಕ್ಷನೆಂಬ ಹೆಸರಿನಿಂದ ನೆಲೆಸಿದ್ದೇನೆ. ನೀನಾದರೂ

ನನ್ನ ಅಂಶವೇ. ನನ್ನ ದೃಶ್ಯ ಸ್ವರೂಪನಾಗಿ ನೀನು ಹುಟ್ಟಿರುವೆ. ಕನ್ನಡಿಗರ ಕಲ್ಯಾಣಕ್ಕಾಗಿಯೂ, ಹಿಂದೂ ಧರ್ಮದ ಉದ್ಧಾರಕ್ಕಾಗಿಯೂ ನೀನೊಂದು ಕೆಲಸ ಮಾಡಬೇಕಾಗಿದೆ. ಏಳು, ಸನಾತನ ಹಿಂದೂ ಧರ್ಮದ ರಕ್ಷಣೆಗಾಗಿ ಸಿದ್ಧನಾಗು. ಯವನರು ಭಾರತೀಯರನ್ನು ಪೀಡಿಸುತ್ತಲಿದ್ದಾರೆ. ದೇವಮಂದಿರಗಳನ್ನು ಕೆಡವುತಲಿದ್ದಾರೆ. ಮೂರ್ತಿಗಳನ್ನು ಒಡೆಯುತ್ತಿದ್ದಾರೆ. ಗೋಮಾತೆಯನ್ನು ಹಿಂಸಿಸುತ್ತಿದ್ದಾರೆ. ಹೀಗೆಯೇ ಬಹುಕಾಲ ನಡೆದರೆ ವೇದ ಧರ್ಮವು ನಿರ್ನಾಮವಾಗಿ ಹೋಗುವುದು........ ಇದಕ್ಕಾಗಿ ನೀನು ಒಂದು ಪ್ರಬಲವಾದ ಭಾರತೀಯ ರಾಜ್ಯವನ್ನು ಸ್ಥಾಪಿಸಿ ಮುಸಲ್ಮಾನರ ಪಾರುಪತ್ಯ ಮಾಡಬೇಕಾಗಿದೆ. ವಿರಕ್ತನಾದ ನೀನು ಜನಸಂಹಾರದ ಯುದ್ಧಕಾರ್ಯವನ್ನು ಕೈಗೊಳ್ಳುವುದು, ಕುಟಿಲವಾದ ರಾಜನೀತಿಯನ್ನು ಅನುಸರಿಸುವುದೂ ಉಚಿತವಾದುದ್ದಲ್ಲ. ಕಾರಣ ನೀನು ಈ ಕೆಲಸವನ್ನು ಇತರರಿಂದ ಮಾಡಿಸಬೇಕಾಗಿದೆ. ಅದಕ್ಕಾಗಿ ಯೋಗ್ಯ ಶಿಷ್ಯರನ್ನು ಸಂಪಾದಿಸು." (ಶಂಕರ ಅಣ್ಣಾಜಿ ಕುಲಕರ್ಣಿ, 1922:13–14)

ಈ ಮಾತನ್ನು ಗಮನಿಸಿದಾಗ ಧರ್ಮ ಪುನಃಚೇತನಗೊಳಿಸುವುದರ ಹಿಂದೆ ಕನ್ನಡ ನಾಡಿನ ಕಲ್ಯಾಣ ಮತ್ತು ಒಕ್ಕೂಟ ಭಾರತ ರಾಜ್ಯವನ್ನು ಕಟ್ಟಿಕೊಳ್ಳುವ ಉದ್ದೇಶ ಸ್ಪಷ್ಟವಾಗಿ ಮೂಡಿ ಬಂದಿದೆ.

ಭಾರತ ಎನ್ನುವ ಗುರುತು ರೂಪುಗೊಳ್ಳಲು ಯವನರ ಧರ್ಮಕ್ಕೂ ಮತ್ತು ಸನಾತನ ಧರ್ಮಕ್ಕೂ ಇರುವ ಆಚಾರ ವಿಚಾರಗಳ ವ್ಯತ್ಯಾಸವೆಂದು ಹೇಳಬಹುದು. ಹಾಗಾಗಿ ಮುಸಲ್ಮಾನರ ಉಪಟಳ ಹಾಗೂ ಕ್ರೂರ ಕೃತ್ಯಗಳಿಂದ ಬೇಸತ್ತು ವಿದ್ಯಾರಣ್ಯರ ಮೂಲಕ ಕಾದಂಬರಿಕಾರ ಹೇಳಿಸುವ ಮಾತುಗಳು ವ್ಯಕ್ತಿಯ ಅಸ್ತಿತ್ವದ ಜೊತೆಗೆ, ಧರ್ಮ ಮತ್ತು ನಾಡಿನ ಅಸ್ತಿತ್ವವನ್ನು ಮುಂದಿಟ್ಟುಕೊಳ್ಳುತ್ತಾರೆ. ಅದಕ್ಕಾಗಿಯೇ ವಿದ್ಯಾರಣ್ಯರು ವಿಜಯನಗರವನ್ನು ಸ್ಥಾಪಿಸುವುದಕ್ಕೆ ಹರಿಹರ ಬುಕ್ಕರನ್ನು ಪ್ರೇರೇಪಿಸುತ್ತಾರೆ. ಅವರು ಮಾಡಬೇಕಾದ ಕಾರ್ಯ ಒಂದು ಸಾಮ್ರಾಜ್ಯ ಕಟ್ಟುವುದು, ಅಂದರೆ ಇಲ್ಲಿ ಒಂದು ನಾಡನ್ನು ನಿರ್ಮಾಣ ಮಾಡುವುದಾಗಿದೆ. ಮುಸಲ್ಮಾನರು ಮಾಡಿದ ಕಾರ್ಯಕ್ಕೆ ಪ್ರತೀಕಾರ ಮಾರ್ಗ ಒಳ್ಳೆಯದಲ್ಲವೆಂದು ಹೇಳಿ, ಹಿಂದೂ ಧರ್ಮದ ಆದರ್ಶ ತತ್ತ್ವವನ್ನು ಪ್ರತಿಪಾದಿಸುತ್ತಾರೆ. ಹಾಗೆಯೇ ಮುಸಲ್ಮಾರನ್ನೆದುರಿಸುವುದಕ್ಕೆ ಜನರನ್ನು ಪ್ರೇರೇಪಿಸುವಂತೆ ವಿದ್ಯಾರಣ್ಯರ ಮೂಲಕ ಹರಿಹರ ಬುಕ್ಕರಿಗೆ ಹೇಳುವ ಮಾತು ಮತ್ತೊಂದು ಬಗೆಯದು. ಒಟ್ಟಿನಲ್ಲಿ ವಸಾಹತುಶಾಹಿಯ ಪ್ರಾಬಲ್ಯವನ್ನು ಎದುರಿಸುತ್ತಿರುವ ಕಾದಂಬರಿಕಾರ ತನ್ನ ಕಾಲದ ವಾಸ್ತವ ಸ್ಥಿತಿಯನ್ನು ಎದುರಿಸಲು ಬೇಕಾದ ಸಖ್ಯ ಮಾರ್ಗಗಳನ್ನು ಹುಡುಕುವುದೇ ಅವರ ಗಮ್ಯ ಗುರಿ ಎನಿಸುತ್ತದೆ.

ಈ ಕಾದಂಬರಿಯ ಇನ್ನೊಂದು ಪ್ರಮುಖ ಅಂಶವೆಂದರೆ ನಮ್ಮ ಅಸ್ಮಿತೆಯನ್ನು ಕಳೆದುಕೊಳ್ಳಲು ಕಾರಣವಾದ ಸಾಂಸ್ಕೃತಿಕ ಅಂಶಗಳು ಯಾವುವು ಎನ್ನುವುದನ್ನು

ಚಿತ್ರಿಸುವುದಾಗಿದೆ. ವಿಜಯನಗರ ಸ್ಥಾಪನೆಗೊಳ್ಳುವ ಪೂರ್ವದಲ್ಲಿ ಮಹಾಸಾಮ್ರಾಜ್ಯವೆಂದು ಕರೆಯಿಸಿಕೊಳ್ಳುವ ಯಾವುದೊಂದು ಸಾಮ್ರಾಜ್ಯವು ಹಿಂದೂಸ್ತಾನದಲ್ಲಿ ಇರಲಿಲ್ಲ. ಆ ಸಂದರ್ಭದಲ್ಲಿ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳಾಗಿ ವಿಭಜನೆಗೊಂಡಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ದ್ವಾರಸಮುದ್ರ, ದೇವಗಿರಿ, ವಾರಂಗಲ್ಲು, ಕಂಪಲಿ, ಆನೆಗುಂದಿ ಮುಂತಾದವುಗಳು. ಇವು ಮೇಲ್ನೋಟಕ್ಕೆ ಹಿಂದೂ ಸಂಸ್ಥಾನಗಳೆಂದು ಕಂಡುಬಂದರೂ ಅವುಗಳಲ್ಲಿ ಪರಸ್ಪರ ಹೊಂದಾಣಿಕೆಯೆಂಬುದು ಇರಲಿಲ್ಲ. ಒಂದು ರಾಜ್ಯದ ಉನ್ನತಿಯನ್ನು ಮತ್ತೊಂದು ರಾಜ್ಯ ಸಹಿಸುತ್ತಿರಲಿಲ್ಲ. ಸಮೀಪದ ಸಂಸ್ಥಾನಿಕರು ಆಳಾದರೆ ತಮಗೆ ಲೇಸೆಂದು ಉಳಿದವರು ತಿಳಿದಿದ್ದರು.

> "ಉತ್ತರದಲ್ಲಿರುವ ಮುಸಲ್ಮಾನರು ದೂರದಲ್ಲಿಯ ಬಲ್ಲಾಳರ ಮೇಲೆ ದಂಡೆತ್ತಿ ಬಂದರು. ದಕ್ಷಿಣದ ಸಂಸ್ಥಾನಿಕರೆಲ್ಲರೂ ಒಕ್ಕಟ್ಟಾಗಿ ಅವರನ್ನೆದುರಿಸಿದ್ದರೆ, ಮುಸಲ್ಮಾನರ ಆಟವು ಎಷ್ಟು ಮಾತ್ರವೂ ನಡೆಯುವಂತಿದ್ದಿಲ್ಲ. ಆದರೆ ಕರ್ನಾಟಕದಲ್ಲಿ ನಮ್ಮ ದುರದೃಷ್ಟದಿಂದ ಹೊಟ್ಟೆಕಿಚ್ಚು ಹಬ್ಬಿತ್ತು. ಬಲ್ಲಾಳ ಅರಸನಿಗೆ ಉಳಿದವರು ಯಾರೂ ನೆರವಾಗಲಿಲ್ಲ." (ಶಂಕರ ಅಣ್ಣಾಜಿ ಕುಲಕರ್ಣಿ, 1922: 33)

ಹಾಗೆಯೇ ಸಾಮ್ರಾಜ್ಯದಲ್ಲಿ ಅನೇಕ ಆಂತರಿಕ ಕಲಹಗಳು ಇದ್ದುದರಿಂದ ಈ ಸಾಮ್ರಾಜ್ಯಗಳು ಮುಸಲ್ಮಾನರ ದಾಳಿಗೆ ಪ್ರತಿದಾಳಿಯನ್ನು ಮಾಡಲು ಸಾಧ್ಯವಾಗಲಿಲ್ಲ. ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುವ ಕಾಮಾಕ್ಷಿ ಪಾತ್ರದ ಮೂಲಕ ಅದು ವ್ಯಕ್ತವಾಗುತ್ತದೆ. ಕಾಮಾಕ್ಷಿಯು ತಾನು ಮಹಾರಾಣಿಯಾಗಬೇಕೆನ್ನುವ ಹಂಬಲವನ್ನು ಹೊತ್ತವಳು. ತನ್ನ ಮನದಾಸೆಯ ಈಡೇರಿಕೆಗಾಗಿ ರಾಜ ಜಂಬುಕೇಶ್ವರನನ್ನು ಮದುವೆಯಾಗಲು ಮುಂದಾಗುತ್ತಾಳೆ. ಆದರೆ ರಾಜ ತಿರಸ್ಕರಿಸುತ್ತಾನೆ. ತನ್ನ ಕಾರ್ಯಸಾಧನೆಗಾಗಿ ಹಾಗೂ ತನ್ನನ್ನು ಬಡವಳೆಂದು ತಿರಸ್ಕರಿಸಿದ ರಾಜನ ಮೇಲೆ ಸೇಡು ತೀರಿಸಿಕೊಳ್ಳಲು ಮಹಾಮಂತ್ರಿಯಾದ ವೃದ್ಧ ಸಂಗಮನಿಗೆ ಎರಡನೆಯ ಹೆಂಡತಿಯಾಗುತ್ತಾಳೆ. ಮಹಾಮಂತ್ರಿಯ ಮಡದಿಯಾಗಿ ಆ ಸಾಮ್ರಾಜ್ಯದ ಆಗುಹೋಗುಗಳನ್ನು ತಿಳಿದುಕೊಂಡು, ಆ ಮೂಲಕ ಜಂಬುಕೇಶ್ವರನನ್ನು ಪಟ್ಟದಿಂದ ತಳ್ಳಿ, ಆ ಸ್ಥಾನದಲ್ಲಿ ತನ್ನ ಪತಿಯನ್ನು ಕೂಡಿಸಿದರೆ ತನ್ನ ಆಸೆ ಕೈಗೂಡಬಹುದೆಂದು ಆಲೋಚಿಸುತ್ತಾಳೆ. ಇದಕ್ಕಾಗಿ ಇದ್ದೊಬ್ಬ ಜಂಬುಕೇಶ್ವರ ಮಗಳನ್ನು ಬಾದಶಹನು ಹೊತ್ತೊಯ್ಯುವಂತೆ ಮಾಡಲು ತನ್ನ ದಾಸಿಯನ್ನು ಫಕೀರ ವೇಷದಲ್ಲಿ ದಿಲ್ಲಿ ದರಬಾರಿಗೆ ಕಳುಹಿಸಿ ಬಾದಶಹನಲ್ಲಿ ಆಸೆ ಹುಟ್ಟಿಸುವಂತೆ ಮಾಡುತ್ತಾಳೆ. ಹಾಗೆಯೇ ಬಾದಶಹನ ಸೈನ್ಯ ಕಂಪಿಲ ರಾಜ್ಯದ ಮೇಲೆ ದಾಳಿ ಮಾಡಿದಾಗ ಜಂಬುಕೇಶ್ವರನು ಕಳುಹಿಸಿದ ಸೈನ್ಯವು ಕಂಪಿಲ ಸಂಸ್ಥಾನದ ರಾಯನಿಗೆ ಸರಿಯಾದ ಸಮಯಕ್ಕೆ ಮುಟ್ಟದಂತೆ ಗಂಡನ ಸಹಾಯದಿಂದ ಕುತಂತ್ರವನ್ನು ಹೆಣೆಯುತ್ತಾಳೆ. ಇಂತಹ ಸ್ವಾರ್ಥ ಸಾಧನೆಯ

ಉದ್ದೇಶಗಳಿಂದ ಸಂಸ್ಥಾನಗಳು ಪರಕೀಯರ ದಾಳಿಗೆ ತುತ್ತಾಗಿ ನಾಶವಾಗುತ್ತಿದ್ದವು ಎನ್ನುವುದನ್ನು ಕಾದಂಬರಿಕಾರರು ಎತ್ತಿ ತೋರಿಸಿದ್ದಾರೆ.

ಕನ್ನಡಿಗರ ಹಾಗೂ ಹಿಂದೂಗಳ ಉದಾರತೆಯೇ ತಮ್ಮ ಅವನತಿಗೆ ಕಾರಣವಾಗಿದೆ ಎನ್ನುವ ಅಂಶಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಬಾದಶಹಾನ ಅಣ್ಣನ ಮಗನಾದ ಬಾಹುದ್ಧೀನನು ಬಂಗಾಲದ ಸುಭೇದಾರನಾಗಿದ್ದನು. ಆ ಸಂದರ್ಭದಲ್ಲಿ ಬಾಹುದ್ಧೀನನು ತನ್ನನ್ನು ತಿರಸ್ಕರಿಸಿದನೆನ್ನುವ ಫಕೀರರ ಮಾತನ್ನು ನಂಬಿದ ಬಾದಶಹನು ಅವನನ್ನು ಶಿಕ್ಷಿಸುವ ಸಲುವಾಗಿ ಬಂಗಾಲಕ್ಕೆ ದಂಡೆತ್ತಿ ಬರುತ್ತಾನೆ. ಈ ವಿಷಯವನ್ನು ತಿಳಿದ ಬಾಹುದ್ಧೀನನು ಕಂಪಿಲ ಸಂಸ್ಥಾನದ ರಾಯನ ಸಹಾಯ ಯಾಚಿಸುತ್ತಾನೆ. ಕಂಪಿಲೆಯ ರಾಯನು ತನ್ನ ಸೈನ್ಯವು ಬಾದಶಹಾನ ಸೈನ್ಯವನ್ನು ಎದುರಿಸುವ ಶಕ್ತಿಯನ್ನು ಹೊಂದಿಲ್ಲ ಎನ್ನುವುದನ್ನು ಅರಿತಿದ್ದರೂ ಸಹ ತನ್ನನ್ನು ಅರಸಿ ಬಂದವರನ್ನು ಕಾಪಾಡುವುದು ಹಿಂದೂಗಳ ಮುಖ್ಯ ಕರ್ತವ್ಯವೆಂದು ಭಾವಿಸುತ್ತಾನೆ. ಇಂತಹ ತ್ಯಾಗ ಗುಣವೇ ಹಿಂದೂಗಳ ನಿಜವಾದ ಧರ್ಮ ಎಂದು ಹೇಳುತ್ತಾನೆ. ಇಂತಹ ಆದರ್ಶ ಗುಣಗಳಿಂದಾಗಿಯೇ ಮುಂದೊಂದು ದಿನ ಕಂಪಿಲ ಸಂಸ್ಥಾನವು ಎದುರಿಸಿದ ಪರಿಣಾಮವನ್ನು ಕಾದಂಬರಿಕಾರರು ಕನ್ನಡಿಗರ ಮನಃ ಕರಗುವಂತೆ ಚಿತ್ರಿಸಿದ್ದಾರೆ. ಫಕೀರನ ವೇಷ ಧರಿಸಿ ಬಾದಶಹನ ದರಬಾರಿಗೆ ಭೇಟಿ ನೀಡಿ ಅಲ್ಲಿನ ಎಲ್ಲಾ ವಿಷಯಗಳನ್ನು ಬಲ್ಲ ಬುಕ್ಕನು ಸನ್ಯಾಸಿ ವೇಷದಲ್ಲಿ ಕಂಪಿಲರಾಯನಲ್ಲಿಗೆ ಬಂದು ಬಾಹುದ್ಧೀನನಿಗೆ ಆಶ್ರಯ ನೀಡುವುದಕ್ಕೆ ಅವಕಾಶ ಕೊಡಬೇಡವೆಂದು ಹೇಳಿದರೂ ಸಹ ಕಂಪಿಲರಾಯ ಶರಣು ಬಂದವರನ್ನು ರಕ್ಷಿಸುವುದೇ ಹಿಂದೂಗಳ ಶ್ರೇಷ್ಠ ಧರ್ಮವೆಂದು ಹೇಳಿ ಬಾಹುದ್ಧೀನನಿಗೆ ಆಶ್ರಯ ನೀಡುತ್ತಾನೆ.

> "ಮಾನವನ ಈ ಮೂರುವರೆ ಮೊಳ ಉದ್ದವಾದ ದೇಹವು ಅಸ್ಥಿರವಾಗಿದ್ದು, ಇದು ಒಂದಿಲ್ಲೊಂದು ದಿವ ನಾಶವಾಗಲೇಬೇಕು; ಪಂಚಮಹಾಭೂತಗಳಿಂದ ನಿರ್ಮಿತವಾದ ಈ ಯಂತ್ರವು, ತನ್ನ ಕೆಲಸವನ್ನು ನಡೆಯಿಸಲಸಮರ್ಥವಾದ ಬಳಿಕ, ತಿರುಗಿ ಪಂಚಮಹಾಭೂತಗಳಲ್ಲಿ ಕೂಡಿಹೋಗುವುದೇ ನ್ಯಾಯವು. ಅದಕ್ಕಾಗಿ ನಮ್ಮ ಪೂರ್ವಜರು ಈ ದೇಹವನ್ನು ನಂಬದೆ, ದೇಹಕ್ಕೆ ಮೂಲ ಕಾರಣನಾದ ದೇಹಿಯನ್ನು ನಂಬುವುದು ಲೇಸೆಂದು ಸಾರಿ ಹೇಳಿದರು. ಈ ದೇಹದ ಬೇರೆ ಬೇರೆ ಆವಸ್ಥೆಗಳಿಗೆ ಶುಭಾಶುಭ ಕಾರ್ಯಗಳು ಕಾರಣೀ ಭೂತವಾಗಿರುವುದರಿಂದ, ಪ್ರತಿಯೊಬ್ಬನು ತನ್ನ ಕೈಯಿಂದಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಬೋಧಿಸಿದರು." (ಶಂಕರ ಅಣ್ಣಾಜಿ ಕುಲಕರ್ಣಿ, 1922 : 118)

ಎನ್ನುವಂತಹ ಕಾದಂಬರಿಕಾರರ ಮಾತುಗಳು ಹಿಂದೂಗಳ ಔದಾರ್ಯವನ್ನು ಕುರಿತದ್ದಾಗಿದೆ. ಇದರಿಂದ ಉಂಟಾಗುವ ಪರಿಣಾವನ್ನು ಕೂಡ ಕಾದಂಬರಿಕಾರರು

ವಿವರಿಸುತ್ತಾರೆ. ಕಂಪಿಲರಾಯನು ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ಸಂಸ್ಥಾನದ ಪ್ರಜೆಗಳು ಅನುಭವಿಸುವ ಘೋರವಾದ ಪರಿಣಾಮವನ್ನು ಕಾದಂಬರಿಕಾರರು ಮನಮುಟ್ಟುವಂತೆ ವಿವರಿಸುತ್ತಾರೆ. ಆ ಕಾಲದ ಜನರು ಸತೀತ್ವ ರಕ್ಷಣೆಗೆ ಮಹತ್ವ ಕೊಟ್ಟವರು ಹಾಗೂ ಪಾತಿವ್ರತ್ಯದ ಪವಿತ್ರತೆಗೆ ಹೆಚ್ಚಿನ ಮಾನ್ಯತೆ ನೀಡಿದವರಾಗಿದ್ದರಿಂದ ಅಪಮಾನಕ್ಕಿಂತ ಸಾಯುವುದೇ ಲೇಸೆಂದು ಬಗೆದು, ವಿರೋಧಿಗಳ ಕೈಯಗೆ ಹೆಂಡಿರು, ಮಕ್ಕಳು, ತಾಯಂದಿರನ್ನು ಕೊಡದೆ ಅಗ್ನಿಗಾಹುತಿ ನೀಡಿದರು. ಒಂದೆಡೆ ಗ್ರಾಮದ ದೇವಸ್ಥಾನದ ಪ್ರಾಂಗಣದಲ್ಲಿ ನಿರ್ಮಿಸಿದ ಚಿತೆಗೇರಿ ತಮ್ಮ ಆತ್ಮಾಹುತಿಗಾಗಿ ನೂರಾರು ಮುತ್ತೈದೆಯರು ಸಾಲುಗಟ್ಟಿ ನಿಂತಿದ್ದರೆ, ಮತ್ತೊಂದೆಡೆ ತಮ್ಮ ಮಾತಾಸುತೆಯರ ಕಡೆಯ ಅಪ್ಪಣೆಯನ್ನು ಹೊಂದಿ, ಸತಿಯರ ಕಡೆಯ ತಾಂಬೂಲವನ್ನು ಸ್ವೀಕರಿಸಿ, ಹಳದೀ ವಸ್ತ್ರಗಳನ್ನು ಧರಿಸಿ ರಣಾಂಗಣಕ್ಕೆ ದೇಹವನ್ನರ್ಪಿಸುವುದಕ್ಕೆ ಸಿದ್ಧರಾಗಿ ನಿಂತಿದ್ದ ವೀರರ ದಂಡು. ಹೀಗೆ ಪರರ ಕೈಯಲ್ಲಿ ಹೀನಾಯವಾಗಿ ಸಾಯದೆ, ವೀರತ್ವದಿಂದ, ಪಾತಿವ್ರತ್ಯದಿಂದ ಜೀವನವನ್ನು ಮುಕ್ತಿಗೊಳಿಕೊಳ್ಳಬೇಕೆಂದುಕೊಂಡ ಕಂಪಿಲ ಸಂಸ್ಥಾನದ ಹಿಂದೂ ಪ್ರಜೆಗಳ ಮನದಿಚ್ಛೆ ಕಾದಂಬರಿಯಲ್ಲಿ ಮಡುವುಗಟ್ಟಿ ನಿಂತಿದೆ.

ಹೀಗೆ ಕಾದಂಬರಿಕಾರರು ಸಂಸ್ಥಾನಗಳಲ್ಲಿನ ಲೋಪದೋಷಗಳು ಅನ್ಯರಿಗೆ ಹೇಗೆ ಸಹಕಾರಿಯಾಗಿದ್ದವು ಎನ್ನುವುದನ್ನು ಕಂಪಿಲೆ ಮತ್ತು ಆನೆಗುಂದಿ ಸಂಸ್ಥಾನಗಳ ನಿದರ್ಶನಗಳ ಮೂಲಕ ವಿವರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಹಿಂದೂಗಳು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬೇಕೆಂಬ ಹಂಬಲವನ್ನು ಹೊತ್ತು, ಅಂತಹ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಪ್ರಯತ್ನಿಸಿದ ಸಂಗತಿ ಈ ಕಾದಂಬರಿಯಲ್ಲಿ ಮೈದಾಳಿ ನಿಂತಿದೆ.

> "ಒಕ್ಕಟ್ಟಿನ ಅಭಾವದ ಮೂಲಕ ಕನ್ನಡಿಗರು ಮುಸಲ್ಮಾನರಿಂದ ಬಹು ದುಃಖವನನ್ನನುಭವಿಸಬೇಕಾಯಿತು. ಒಂದೊಂದೇ ಹಿಂದೂ ರಾಜ್ಯಗಳು ಅವರ ತುತ್ತಾಗತೊಡಗಿದವು. ದೇವಗಿರಿಯು ಹೋಯಿತು. ವರಂಗಲವು ನಾಶವಾಯಿತು. ಕಂಪಿಲವು ನಿರ್ಮೂಲವಾಯಿತು. ಆನೆಗುಂದಿಯ ರಾಜಮನೆತನವು ಹೇಳ ಹೆಸರಿಲ್ಲವಾಗಿ ಹೋಯಿತು. ಆದರೆ ಕನ್ನಡಿಗರ ಸುದೈವದಿಂದ ಶ್ರೀ ವಿದ್ಯಾರಣ್ಯರಂತಹ ಮಹಾತ್ಮರ ಪ್ರಯತ್ನದಿಂದ ಒಂದು ಪ್ರಬಲವಾದ ಹಿಂದೂ ರಾಜ್ಯವು ಆನೆಗುಂದಿಯ ಬಳಿಯಲ್ಲಿಯೇ ಸ್ಥಾಪಿತವಾಯಿತು. ಅದು ಕನ್ನಡಿಗರ ದುಃಖವನನ್ನು ತಪ್ಪಿಸಿ, ಅವರ ಪುಣ್ಯ ತೀರುವವರೆಗೆ ತಲೆಯೆತ್ತಿ ಮೆರೆಯಿತು." (ಶಂಕರ ಅಣ್ಣಾಜಿ ಕುಲಕರ್ಣಿ, 1922:33) ಅದೇ ವಿಜಯನಗರ. ಅಂದರೆ ಶ್ರೀವಿದ್ಯಾರಣ್ಯರು ತಮ್ಮ ತಪಃಶಕ್ತಿಯಿಂದ ಹರಿಹರ ಬುಕ್ಕರ ಮುಖಾಂತರ ವಿಜಯನಗರವನ್ನು ಸ್ಥಾಪಿಸಿದ ವಿವರಗಳ ಮೂಲಕ ಇದೊಂದು ಹಿಂದೂ ಧರ್ಮದ ಕೇಂದ್ರವೆಂತಲೂ, ಕನ್ನಡಿಗರ ಸಾಮ್ರಾಜ್ಯವೆಂತಲೂ, ಇದು

ಭಾರತೀಯರ ಸಾಮ್ರಾಜ್ಯವಾಗಬೇಕೆಂಬ ಆಶಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಶ್ರೀಲಕ್ಷ್ಮೀಯು ವಿದ್ಯಾರಣ್ಯರಿಗೆ ದರ್ಶನವಿತ್ತು ಹೀಗೆ ಹೇಳುತ್ತಾಳೆ.

"ನೀನು ನಿನ್ನ ಶಿಷ್ಯರಿಂದ ಒಂದು ಪ್ರಬಲವಾದ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಲು ಯೋಚಿಸಿರುವೆ. ಈ ನಿನ್ನ ಪ್ರಯತ್ನವು ಸ್ತುತ್ಯವಾದ್ದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಕಾರ್ಯವು ನನ್ನ ಸಹಾಯವಿಲ್ಲದೆ ಆಗದು. ಇದನ್ನು ನೀನೆಂದೂ ಮರೆಯಕೂಡದು.... ನಾನು ಕೊಡುತ್ತಿರುವ ಧನವನ್ನು ಶಿಷ್ಯರಿಗೆ ಕೊಡು. ನಿನ್ನ ಶಿಷ್ಯರು ಆ ದ್ರವ್ಯ ಬಲದಿಂದ ಅನಾಯಾಸವಾಗಿ ಕನ್ನಡಿಗರ ಸಾಮ್ರಾಜ್ಯವನ್ನು ನೆಲೆಗೊಳಿಸುವರು." (ಶಂಕರ ಅಣ್ಣಾಜಿ ಕುಲಕರ್ಣಿ, 1922: 7)

ಎಂದು ಹೇಳಿದರೂ, ಲಕ್ಷ್ಮೀಯ ಮಾತನ್ನು ತಿರಸ್ಕರಿಸಿ ಈ ಮೊದಲೇ ಉಲ್ಲೇಖಿಸಿರುವಂತೆ ವಿರೂಪಾಕ್ಷನ ಆಜ್ಞೆಯ ಮೇರೆಗೆ ಈ ಸಾಮ್ರಾಜ್ಯ ಸ್ಥಾಪಿಸುವ ವಿವರಗಳು ಈ ಕಾದಂಬರಿಯ ವಿಶೇಷವಾಗಿವೆ. ಒಟ್ಟಿನಲ್ಲಿ ವಿರೂಪಾಕ್ಷನ ಅನುಗ್ರಹದಿಂದ ಈ ವಿಜಯನಗರ ಉದಯವಾಯಿತು ಎನ್ನುವ ಸಂಗತಿಯನ್ನು ಪ್ರತಿಬಿಂಬಿಸಲಾಗಿದೆ. ಇತರ ಕಾದಂಬರಿ, ನಾಟಕಗಳಲ್ಲಿ ಈ ವಿವರಗಳು ಕಾಣಸಿಗುವುದಿಲ್ಲ.

ಪರಕೀಯರ ಅಧೀನದಲ್ಲಿರುವ ನಾವುಗಳು ನಮ್ಮತನವನ್ನು ಕುರಿತು ಅಂದರೆ ನಮ್ಮ ನಾಡು, ನಮ್ಮ ದೇಶ ಎನ್ನುವ ಕಲ್ಪನೆಗಳ ಬಗ್ಗೆ ಯೋಚಿಸುತ್ತೇವೆ. ಆ ಕುರಿತು ಕನಸು ಕಾಣುತ್ತೇವೆ. ಅಂತಹ ಕನಸನ್ನು ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಹರಿಹರನಲ್ಲಿತ್ತು ಎಂಬುದನ್ನು ಲೇಖಕರು ಉಲ್ಲೇಖಿಸುತ್ತಾರೆ. ಇಲ್ಲಿ ಒಂದು ಗುಲಾಬಿಯನ್ನು ನಿದರ್ಶನವನ್ನಾಗಿಟ್ಟುಕೊಂಡ ಲೇಖಕರು ಹರಿಹರ ಮತ್ತು ಯವನನ ಮೂಲಕ ಹೇಳಿಸುವ ಮಾತು ಗಮನಾರ್ಹವಾದುದು. ಹರಿಹರನು ಸುಂದರವಾದ ಗುಲಾಬಿ ಹೂವನ್ನು ಕಿತ್ತುಕೊಳ್ಳಲು ಹೋದಾಗ ಯವನನು ಬಂದು ಈ ಪುಷ್ಪವು ನನ್ನ ಉಪಭೋಗ ವಸ್ತು, ಇದರ ಮೇಲೆ ನಿನ್ನ ಒಡೆತನವಿಲ್ಲ ಎನ್ನುತ್ತಾನೆ. ಆಗ ಹರಿಹರನು ಈ ತೋಟ ನನ್ನದು ವಿದೇಶಿಯನಾದ ನಿನಗೆ ಇರದ ಸ್ವಾಮಿತ್ವ ಇಲ್ಲವೆನ್ನುತ್ತಾನೆ. ಆಗ–

"ನೀನು ಕನಸಿನಲ್ಲಿರುವಂತೆ ತೋರುತ್ತುದೆ. ಎಚ್ಚರಾಗಿ ನೋಡು. ಹಿಂದುಸ್ತಾನವು ನಮ್ಮದಾಗಿ ಹೋಗಿದೆ. ಹಿಂದುಸ್ತಾನದೊಳಗಿನ ಪ್ರತಿಯೊಂದು ಸುಂದರ ವಸ್ತುವು ಮುಸಲ್ಮಾನರ ಸ್ವಾಮಿತ್ವಕ್ಕೊಳಗಾಗಿದೆ. ನಮಗೆ ಬೇಡಾದ ವಸ್ತುಗಳನ್ನು ಮಾತ್ರ ಕಾಫರರಾದ ನೀವು ಉಪಭೋಗಿಸಬಹುದು." (ಶಂಕರ ಅಣ್ಣಾಜಿ ಕುಲಕರ್ಣಿ, 1922:67)

ಎಂದಾಗ, ಆ ಹೂವನ್ನು ತೆಗೆದುಕೊಂಡ ಹರಿಹರನು ನಾನು ಕನಸಿನಲ್ಲಿಲ್ಲ, ನಿನ್ನಲ್ಲಿ ನಿಜವಾದ ಸಾಮರ್ಥ್ಯವಿದ್ದರೆ ಇದನ್ನು ಕಸಿದುಕೊಂಡು ಹೋಗು ಎನ್ನುವ ಮಾತು ನಾವು ಕಟ್ಟಿಕೊಳ್ಳಬೇಕಾದ ನಾಡಿನ ಅಭಿಮಾನದ ಪ್ರತೀಕವಾಗಿ ಮೂಡಿ ಬಂದಂತಿದೆ.

**ಕನ್ನಡಿಗರ ಕಾರಸ್ಥಾನ : (1927)**

ಆರ್.ಟಿ.ಕರ್ಪೂರ ಅವರಿಂದ ರಚಿತಗೊಂಡ ಈ ಕಾದಂಬರಿಯು ಆರಂಭಗೊಳ್ಳುವುದು ವಿಜಯನಗರವು ಘನತೆಗೇರಿದ ಕಾಲದಲ್ಲಿ. ಅಂದರೆ ಶ್ರೀಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗಳು ಉತ್ಕೃಷ್ಟತೆಯಿಂದ ಕೂಡಿತ್ತು. ಕನ್ನಡ ವೀರರು, ಮುತ್ಸದ್ದಿಗಳು, ಮಂತ್ರಿಗಳು ಪ್ರಪಂಚವೇ ತಿರುಗಿ ನೋಡುವಂತಹ ಕಾರ್ಯ ಪ್ರವರ್ತಕರಾಗಿದ್ದ ಕಾಲವದು. ಹೀಗೆ ಹಿಂದೂ ಸಾಮ್ರಾಜ್ಯವೆನಿಸಿಕೊಂಡ ವಿಜಯನಗರವು ಸಮೃದ್ಧಿಯ ತುತ್ತತುದಿಯಲ್ಲಿತ್ತು. ಹೀಗೆ ಅಬ್ಬರದಿಂದ ಕನ್ನಡಿಗರಿಗೆ ವಿಷಯಾಂಧರಾದ ಮುಸಲ್ಮಾನರು ಕೊಟ್ಟ ಉಪದ್ರವ, ಅದನ್ನು ಕನ್ನಡಿಗರು ಬಗ್ಗು ಬಡಿದ ರೀತಿಯನ್ನು ಈ ಕಾದಂಬರಿ ವಿವರಿಸುತ್ತದೆ. ಕನ್ನಡಿಗರ ದೇಹ ಸಾಮರ್ಥ್ಯ ಮತ್ತು ಬುದ್ಧಿ ಸಾಮರ್ಥ್ಯ ಎಂತಹದೆಂಬುದನ್ನು ಇಲ್ಲಿ ಪ್ರಕಟಿಸಲಾಗಿದೆ.

ವಿಜಯನಗರವನ್ನು ಕೇಂದ್ರವಾಗಿಟ್ಟುಕೊಂಡ ರಚಿತವಾದ ಈ ಕಾದಂಬರಿಯು ಕೊಂಡಪಲ್ಲಿ, ಉದಯಗಿರಿ, ಬಿಜಾಪೂರ, ರಾಯಚೂರು, ಬೀದರ ಸಂಸ್ಥಾನಗಳವರೆಗೂ ತನ್ನ ವ್ಯಾಪ್ತಿಯನ್ನು ಚಾಚಿಕೊಂಡಿದೆ. ಕರ್ನಾಟಕ ಏಕೀಕರಣ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕಾಲವದು. ಹೋರಾಟಕ್ಕೆ ಜನರನ್ನು ಅಣಿಗೊಳಿಸುವ ಉದ್ದೇಶವಿತ್ತು. ಅದಕ್ಕಾಗಿ ಹಿಂದೆ ಮುಸ್ಲಿಮರ ಪ್ರಭುತ್ವದ ಕಾಲದಲ್ಲಿಯೂ ಸ್ವತಂತ್ರವಾಗಿ ತಲೆಯೆತ್ತಿ ನಿಂತು, ಹಿಂದೂ ಧರ್ಮದ ರಕ್ಷಣೆಯ ಹೊಣೆಯನ್ನು ಹೊತ್ತಿದ್ದ ವಿಜಯನಗರವನ್ನು ಕಾದಂಬರಿಕಾರು ಹಿನ್ನೆಲೆಯಾಗಿ ತೆಗೆದುಕೊಂಡು ಆ ಮೂಲಕ ಇಂದಿನ ಕನ್ನಡಿಗರ ಹೆಗ್ಗುರುತುಗಳನ್ನು ಹೇಳಲು ಪ್ರಯತ್ನಿಸಿದ್ದಾರೆ. ಈ ಅಂಶಗಳು ಕಾದಂಬರಿಯಲ್ಲಿ ನೇರವಾಗಿ ದೊರೆಯದಿದ್ದರೂ ಸಹಿತ ಇಂದಿನ ಕರ್ನಾಟಕದ ಪ್ರದೇಶಗಳಾದ ಬಿಜಾಪುರ, ರಾಯಚೂರು, ಬೀದರ್‌ಗಳನ್ನು ಈ ಕಾದಂಬರಿಯಲ್ಲಿ ಕನ್ನಡಿಗರ ಪ್ರದೇಶಗಳೆಂದು ಗುರುತಿಸದೆ; ಅವು ಮುಸಲ್ಮಾನರ ಪ್ರದೇಶಗಳೆಂಬ ಹಣೆಪಟ್ಟ ಇದನ್ನು ಖಚಿತಪಡಿಸುತ್ತದೆ. ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು, ಹಿಂದೂ ಧರ್ಮದ ಸಾಮ್ರಾಜ್ಯವೆಂದು ಗುರುತಿಸುವ ಅಂಶಗಳು ಕಾದಂಬರಿಯಲ್ಲಿ ದೊರೆಯುತ್ತವೆ.

ಕೊಂಡಪಲ್ಲಿ ಎಂಬ ದುರ್ಗದಲ್ಲಿ ವೀರನಾರಾಯಣ ಗಜಪತಿಯೆಂಬೊಬ್ಬ ಪಾಳೇಗಾರನು ಆಳುತ್ತಿದ್ದ. ಈತನು ಮಹತ್ವಾಕಾಂಕ್ಷಿಯಾಗಿದ್ದ. ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ವಿಜಯನಗರದ ಸೈನ್ಯದ ಸಹಾಯವನ್ನು ಪಡೆಯುವುದಕ್ಕಾಗಿ

ವಿಜಯನಗರಕ್ಕೆ ತನ್ನ ಮುಕ್ಕಾಲು ಪಾಲು ಸೈನ್ಯವನ್ನು ಕಳಿಸಿದ. ಈ ವಿಷಯ ತಿಳಿದ ರಾಯಚೂರಿನ ದುರ್ಗಾಧಿಪತಿಯಾದ ದಾವಲ್‌ಖಾನ್‌ನು ಕೊಂಡಪಲ್ಲಿಯ ಮೇಲೆ ದಾಳಿ ಮಾಡುತ್ತಾನೆ. ಆ ಸಂದರ್ಭದಲ್ಲಿ ಅವನ ದಾಳಿಯನ್ನು ಎದುರಿಸಲು ಕೊಂಡಪಲ್ಲಿಯಲ್ಲಿ ಸೈನ್ಯವಿರಲಿಲ್ಲ. ಚಾಣಾಕ್ಷನಾದ ಮಂತ್ರಿ ಸದಾಶಿವನು ವೇಷ ಬದಲಿಸಿ ಖಾನ್‌ನ ಪಕ್ಷವಹಿಸುವಂತೆ ನಟಿಸಿ ವಿಜಯನಗರದಿಂದ ಸೈನ್ಯವನ್ನು ತರಿಸಿಕೊಂಡು ಕೊಂಡಪಲ್ಲಿಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆದರೆ ಈ ಪ್ರಯತ್ನ ಫಲಿಸುವುದಿಲ್ಲ. ಖಾನ್‌ನು ವೀರನಾರಾಯಣ ಗಜಪತಿಯನ್ನು ಸೋಲಿಸಿ ಸಂಪತ್ತನ್ನು ದೋಚಿಕೊಂಡು, ಗಜಪತಿಯ ರಾಣಿಯಾದ ಪದ್ಮಿನಿಯನ್ನು ಅಪಹರಿಸಿಕೊಂಡು ಬರುತ್ತಾನೆ. ಈ ವಿಷಯವನ್ನು ತಿಳಿದ ಸದಾಶಿವನು ವಿಜಯನಗರ ಸಾಮ್ರಾಜ್ಯದ ಅಮಾತ್ಯರಾದ ತಿಮ್ಮರಸರೊಂದಿಗೆ ಚರ್ಚಿಸಿ ರಾಣಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಖಾನ್‌ನು ಅಪಹರಿಸಿದ್ದು ತಪ್ಪು ಎಂದು ಭಾವಿಸುವುದಾದರೆ, ಇದೇ ಕಾದಂಬರಿಯಲ್ಲಿ ಶ್ರೀಕೃಷ್ಣದೇವರಾಯನು ಉದಯಗಿರಿಯ ರಾಜ್ಯದ ಮೇಲೆ ದಾಳಿ ಮಾಡಿ ಅಲ್ಲಿನ ರಾಜಕುಮಾರಿಯನ್ನು ತಂದು ಆನೆಗುಂದಿಯಲ್ಲಿಟ್ಟ ಪ್ರಸ್ತಾಪ ಬರುತ್ತದೆ. ಆದರೆ ಇಲ್ಲಿ ಮುಖ್ಯವಾದ ವಿಷಯವೆಂದರೆ ಇತರರು ಮಾಡಿದ್ದು ತಪ್ಪು ಎಂದು ಗುರುತಿಸಿದರೆ ನಮ್ಮವರೇ ಅಂದರೆ ಇಲ್ಲಿ ವಿಜಯನಗರದವರು ಮಾಡಿದವು ತಪ್ಪೆಂದು ಪರಿಗಣಿಸದೆ ಅದನ್ನು ರಾಜಧರ್ಮ ಎಂದು ಪರಿಗಣಿಸಲಾಗುತ್ತದೆ. ಇಂತಹ ದ್ವಂದ್ವ ಸಂಗತಿಗಳು ಕಾದಂಬರಿಯಲ್ಲಿ ಕಾಣಸಿಗುತ್ತವೆ.

ಈ ಕಾದಂಬರಿಯಲ್ಲಿ ಮೂಡಿ ಬಂದ ಪ್ರಮುಖ ಅಂಶವೆಂದರೆ ರಾಜ್ಯವನ್ನು ಗೆದ್ದ ನಂತರ ಅಲ್ಲಿನ ರಾಣಿಯರನ್ನಾಗಲಿ. ರಾಜಕುಮಾರಿಯರನ್ನಾಗಲಿ ಅಪಹರಿಸಿಕೊಂಡು ಬರುವುದು ಒಂದು ರೀತಿಯಲ್ಲಿ ರಾಜಧರ್ಮ ಎಂದೆನಿಸಿದರೂ; ಅಪಹರಿಸಿತಂದ ಮಹಿಳೆಯರನ್ನು ಗೌರವಯುತವಾಗಿ ಕಾಣುವುದು ಮತ್ತು ತಮ್ಮ ರಾಜ್ಯದಿಂದ ಅಪಹರಿಸಲ್ಪಟ್ಟ ಸ್ತ್ರೀಯರನ್ನು ಉಳಿಸಿಕೊಳ್ಳುವ ಸಲುವಾಗಿ ವಿಜಯನಗರ ಸಾಮ್ರಾಜ್ಯದಲ್ಲಿನ ಸೈನಿಕರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ಸ್ತ್ರೀಯರಿಗೆ ಉಂಟಾಗುವ ಅವಮಾನವನ್ನು ತಡೆಯಲು ಮಾಡಿದ ಪ್ರಯತ್ನಗಳು ಕಾದಂಬರಿಯಲ್ಲಿ ಮನಃಕರಗುವಂತೆ ಚಿತ್ರಿತವಾಗಿವೆ. ಹಾಗೆಯೇ ಇಲ್ಲಿನ ಇನ್ನೊಂದು ಮುಖ್ಯ ಅಂಶವೆಂದರೆ ಅಪಹರಿಸಲ್ಪಟ್ಟ ಮಹಿಳೆಯರ ಗೌರವ ಕಾಪಾಡುವುದು ಹಿಂದೂ ಧರ್ಮದ ಆದರ್ಶದ ಪ್ರತೀಕವೂ ಹೌದು ಎನ್ನುವುದರ ಹಿನ್ನೆಲೆಯಲ್ಲಿ ಹಿಂದೂ ಧರ್ಮದ ಪ್ರತಿನಿಧೀಕರಣವಾಗಿದ್ದ ವಿಜಯನಗರವು ಇಂತಹ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದ ಅಂಶ ಗೋಚರವಾಗುತ್ತದೆ.

ಕಾದಂಬರಿಕಾರರು ವಿಜಯನಗರ ಸಾಮ್ರಾಜ್ಯದಲ್ಲಿನ ರಾಜಸೇವಾಸಕ್ತ ವರ್ಗವು ಆ ಸಾಮ್ರಾಜ್ಯದ ಉನ್ನತಿಗಾಗಿ ಹಾಗೂ ಉಳಿವಿಗಾಗಿ ಮಾಡಿದ ಪ್ರಯತ್ನಗಳ ಕುರಿತು ಹೆಚ್ಚು ಒತ್ತು

ಕೊಟ್ಟಿದ್ದಾರೆ. ಈ ಸಾಮ್ರಾಜ್ಯದಲ್ಲಿದ್ದ ಸ್ವಾಮಿನಿಷ್ಠ ಸೇವಕರು ಸಾಮ್ರಾಜ್ಯದ ಪ್ರತಿಷ್ಠೆಯ ವಿಷಯ ಬಂದಾಗ ಸಾಮ್ರಾಜ್ಯದ ಪ್ರತಿಷ್ಠೆಯನ್ನು ತಮ್ಮ ಪ್ರತಿಷ್ಠೆಯೆಂಬಂತೆ ಭಾವಿಸಿಕೊಂಡು ಅದನ್ನು ಉಳಿಸಿಕೊಳ್ಳಲು ಜೀವದ ಹಂಗುದೊರೆದು ಹೋರಾಡುತ್ತಿದ್ದರು. ಈ ಕಾದಂಬರಿಯಲ್ಲಿ ಬರುವ ಪ್ರಕಾಶ, ಪ್ರಕಾಶೇಶ್ವರ, ರುದ್ರದೇವಾದಿ ಮತ್ತು ಫಕೀರನ ವೇಷಧಾರಿಯಾದ ಸದಾಶಿವರ ಪಾತ್ರಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿ ನಿಲ್ಲುತ್ತವೆ. ಇವರೆಲ್ಲರ ಪ್ರಯತ್ನದ ಫಲವಾಗಿ ರಾಯಚೂರನ್ನು ಅನಾಯಾಸವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಯಿತು. ರಾಯಚೂರನ್ನು ವಶಪಡಿಸಿಕೊಂಡಾಗ ಅದರ ರಕ್ಷಣೆಗಾಗಿ ಬಂದಿದ್ದ ಬಿಜಾಪೂರ ಬಾದ್‌ಷಾಹನು ಮಾರ್ಗಮಧ್ಯದಲ್ಲಿಯೇ ಕನ್ನಡಿಗರ ವೀರತ್ವವನ್ನು ಕಂಡು ಬೆದರಿ ಬೆರಗಾಗಿ,

> "ಇನ್ನು ಮುಂದೆ ನಾವು ಹ್ಯಾಗೆ ಮಾಡಬೇಕು? ರಾಯಚೂರಿಗೆ ಹೋದರೆ ಬುಭುಕ್ಷಿತರಾದ ಆ ಕನ್ನಡಿಗರು ನಮ್ಮನ್ನು ನಮ್ಮ ದಂಡಾಳುಗಳನ್ನು ಬಡಿದು ಬಾಯಲ್ಲಿ ಹಾಕಿಕೊಳ್ಳುವರು. ತಿರುಗಿ ನಾವು ಬಿಜಾಪುರವನ್ನು ಕಾಣಲಾರೆವು. ಇನ್ನು ಹಾಗೆ ಇತ್ತಿಂದಲೇ ತಿರುಗಿ ಹೋಗಬೇಕೆಂದರೆ ನಮ್ಮ ದಂಡಿನಲ್ಲಾದರೂ ಶತ್ರುಗಳ ಗುಪ್ತಚಾರರು ಎಷ್ಟು ಜನ ಇರುವರೋ ಯಾರಿಗೆ ಗೊತ್ತು? ನಾವು ಮುಂದೆ ಹೋಗಲು ಹಿಂದಿನಿಂದ ಕನ್ನಡಿಗರು ಗಂಟು ಬಿದ್ದು, ನಡುದಾರಿಯಲ್ಲಿಯೇ ನಮ್ಮನ್ನು ತರುಬಿದರೆ ಹ್ಯಾಗೆ ಮಾಡಬೇಕು?" (ಆರ್.ಟಿ.ಕಪೂರ್ತ, 1927 :94)ಎಂದು ಕನ್ನಡಿಗರ ವೀರತ್ವದ ಮುಂದೆ ಕುಗ್ಗಿಕೃಷಗೊಂಡು, ಎದೆಗೊಟ್ಟು ಹೋರಾಡಲಾರದೆ ಸಂಧಾನಕ್ಕೆ ಮುಂದಾಗುತ್ತಾನೆ.

ಮೇಲಿನ ಅಂಶವನ್ನು ಗಮನಿಸಿದಾಗ ಅಂದಿನ ಸಂದರ್ಭವು ವೈರತ್ವವನ್ನು ಮರೆತು ಸಂಧಾನ ಕಾರ್ಯಗಳ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಾಗಿತ್ತು. ಕಾದಂಬರಿಕಾರರು ಈ ರೀತಿ ಹೇಳುವಲ್ಲಿ ಎರಡು ಅಂಶಗಳು ಪ್ರಕಟಗೊಳ್ಳುತ್ತವೆ. ಒಂದು ಕನ್ನಡಿಗರು ತಪ್ಪೊಪ್ಪಿಕೊಂಡವರನ್ನು ಮನ್ನಿಸುವ ಗುಣ ಹೊಂದಿದ್ದರೆಂಬುದು, ಇನ್ನೊಂದು ಕಾದಂಬರಿಕಾರರ ಕಾಲದ ಅಗತ್ಯವೂ ಕೂಡ ಅಂತಹದನ್ನೇ ಬಯಸುತ್ತಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಆ ಮೂಲಕ ವಿಜಯನಗರ ಸಾಮ್ರಾಜ್ಯವು ಕನ್ನಡಿಗರ ಸಾಂಸ್ಕೃತಿಕ ಐಕ್ಯತೆಯ ಪ್ರತೀಕವೆಂಬಂತೆ ಈ ಕಾದಂಬರಿಯಲ್ಲಿ ಮೂಡಿಬಂದಿದೆ.

**ಎಚ್ಚಮ ನಾಯಕ : (1936)**

ವಿಜಯನಗರ ಸಾಮ್ರಾಜ್ಯವು ಯವನರ ದಾಳಿಯಿಂದ ಅವನತಿ ಹೊಂದಿ, ಅಲ್ಲಿನ ರಾಜಪರಿವಾರದವರು ಅಲ್ಲಿಂದ ಪೆನುಗೊಂಡಾಕ್ಕೆ ಬಂದು ನೆಲೆನಿಂತರು. ತರುವಾಯ ತಿರುಮಲನ ನಂತರ ಆತನ ಮಗ ಶ್ರೀರಂಗರಾಯ ಪಟ್ಟಕ್ಕೆ ಬಂದ. ಅವನ ನಂತರ ಅವನ

ತಮ್ಮನಾದ ವೆಂಕಟಪತಿದೇವನು ಪಟ್ಟಾಭಿಷಕ್ತನಾದನು. ಆತನ ಆಡಳಿತಾವಧಿಯಲ್ಲಾದ ಘಟನೆಗಳನ್ನಿಟ್ಟುಕೊಂಡು ಶ್ರೀ ನಾಗೇಶ ಅವರ ಎಚ್ಚಮ ನಾಯಕ ಕಾದಂಬರಿಯು ಆರಂಭಗೊಂಡು, ಮುಮ್ಮಡಿ ಶ್ರೀರಂಗರಾಯರ ಆಡಳಿತವನ್ನೊಳಗೊಂಡು ರಾಮರಾಯನ ಪಟ್ಟಾಭಿಷೇಕದೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಈ ಕಾದಂಬರಿಗೆ ದೇಸಾಯಿ ಪಾಂಡುರಂಗರವರು ಬರೆದ 'ವಿಜಯನಗರ ಸಾಮ್ರಾಜ್ಯ' ಎನ್ನುವ ಚಾರಿತ್ರಿಕ ಕೃತಿಯೇ ಆಧಾರವಾಗಿದೆ ಎಂದು ಸ್ವತಃ ಲೇಖಕರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಈ ಕಾದಂಬರಿಯನ್ನು ವಿಜಯನಗರ ಸ್ಥಾಪನೆಯಾದ ಆರುನೂರು ವರ್ಷಗಳ ನಂತರ (1936ರಲ್ಲಿ) ಜರುಗಿದ ವಿಜಯನಗರ ಸಾಮ್ರಾಜ್ಯದ ಮೊದಲನೆ ಜಯಂತ್ಯೋತ್ಸವದ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಲಾಯಿತು.

ಈ ವೇಳೆಗಾಗಲೇ ಭಾರತದಲ್ಲಿ ಬ್ರಿಟಿಷರ ಆಡಳಿತದಿಂದ ಮುಕ್ತರಾಗಬೇಕೆಂಬ ಹಂಬಲದಿಂದ ರಾಷ್ಟ್ರೀಯ ಹೋರಾಟ ತೀವ್ರ ಸ್ವರೂಪವನ್ನು ಪಡೆದಿತ್ತು. ಹಾಗೆಯೇ ಪ್ರಾಂತೀಯ ಮಟ್ಟದಲ್ಲಿ ಭಾಷಿಕ ಪ್ರದೇಶಗಳು ಒಂದೇ ಆಡಳಿತದ ಅಡಿಯಲ್ಲಿರಬೇಕೆಂಬ ಉದ್ದೇಶದಿಂದ ಹಲವು ಚಳುವಳಿಗಳು ಆರಂಭಗೊಂಡಿದ್ದವು. ಅಂತಹ ಸಂದರ್ಭದಲ್ಲಿ ಕರ್ನಾಟದಲ್ಲಿಯೂ ಏಕೀಕರಣ ಚಳುವಳಿಯು ತನ್ನ ಹೋರಾಟದ ಸ್ವರೂಪವನ್ನು ತೀವ್ರಗೊಳಿಸಿತ್ತು, ಆಗ ಜನರಲ್ಲಿ ನಾಡು ನುಡಿಯ ಬಗೆಗೆ ಅಭಿಮಾನ ಮೂಡಿಸುವುದರ ಜೊತೆಗೆ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸುವುದಕ್ಕಾಗಿ ಚಳುವಳಿಗಾರರ, ಪತ್ರಿಕೆಗಳ ಸಾಧನೆ ಸ್ಮರಣೀಯ. ಆ ಸಂದರ್ಭದಲ್ಲಿ ಬಂದ ಸಾಹಿತ್ಯ ಕೃತಿಗಳೂ ಸಹಿತ ಇಂತಹ ಉದ್ಧೇಶದಿಂದಲೇ ರಚಿತಗೊಂಡತವುಗಳು. ಹೀಗೆ ರೂಪುಗೊಂಡ ಕೃತಿಗಳು ವರ್ತಮಾನದ ಊನತೆಯನ್ನು ತುಂಬಿಕೊಳ್ಳಲು ಗತಕಾಲದ ಸ್ಮರಣೀಯ ಘಟನೆಗಳನ್ನು ಮರುಪೋಣಿಸುವುದರ ಮೂಲಕ ಜನರಲ್ಲಿ ನಾಡು, ನುಡಿ, ರಾಷ್ಟ್ರ, ಧರ್ಮದ ಪ್ರಜ್ಞೆಯನ್ನು ಬೆಳೆಸಲು ಪ್ರಯತ್ನಿಸಿದರು. ಇಂತಹ ಸಂದರ್ಭದಲ್ಲಿ ನಮ್ಮ ಸಾಹಿತಿಗಳಿಗೆ ಸಿಕ್ಕ ಗಣಿ ವಿಜಯನಗರದ ಚರಿತ್ರೆ, ಹಿಂದೂ ಧರ್ಮದ ನೆಲೆವೀಡಾಗಿ, ಕನ್ನಡಿಗರ ಆದರ್ಶ ರಾಜ್ಯವಾಗಿ ಮೆರೆದು ಮಾಯವಾಗಿದ್ದ ವಿಜಯನಗರದ ಚಾರಿತ್ರಿಕ ನೆನಪುಗಳ ಮುಖೇನ ಜನರನ್ನು ಅಂದಿನ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಮಹಾಹೋರಾಟಗಳಿಗೆ ಅಣಿಗೊಳಿಸುವುದಾಗಿತ್ತು. ಈ ಹಿನ್ನೆಲೆಯಲ್ಲಿ ಈ ಕಾದಂಬರಿ ಮೈದಾಳಿ ನಿಂತಿದೆ.

> "ಭರತ ಖಂಡದ ಇತಿಹಾಸವನ್ನು ನಿರೀಕ್ಷಿಸಿದರೆ, ವಿದೇಶಿಗರೂ, ವಿಧರ್ಮಿಗಳೂ ಆದ ಅರಸರಿಂದ ರಾಷ್ಟ್ರದ ಸುಖ ಸ್ವಾತಂತ್ರ್ಯ ಸಂಸ್ಕೃತಿಗಳಿಗೆ ಬಾದೆಯುಂಟಾದ ದೃಶ್ಯಗಳೇ ಬಹುಮಟ್ಟಿಗೆ ದೃಗ್ಗೋಚರವಾಗುವವು. ಇದೇ ಕಾರಣಕ್ಕಾಗಿಯೇ ರಾಷ್ಟ್ರ ಧರ್ಮಾಭಿಮಾನಿಗಳಾದ ವಿಭೂತಿಗಳು ತಮ್ಮ ಸತ್ವದಿಂದ ಸ್ವರಾಜ್ಯ ಸ್ಥಾಪನೆ ಮಾಡಿ, ಭಾರತೀಯರ ಸಂಸ್ಕೃತಿಯನ್ನೂ, ಧರ್ಮವನ್ನೂ, ಸ್ವಾತಂತ್ರ್ಯವನ್ನೂ

ಕಾಯುತ್ತ ಬಂದರು. ವಿಜಯನಗರ ಸ್ಥಾಪನೆಯ ಉದ್ದೇಶವೂ ಇದೇ ಆಗಿದ್ದಿತು. ಒಮ್ಮೊಮ್ಮೆ ವಿದೇಶಿಗರೂ ವಿಧರ್ಮಿಗಳೂ ಆದವರಿಂದಷ್ಟೇ ಅಲ್ಲ; ಸ್ವಾರ್ಥಾಂಧರಾದ ಸ್ವಧರ್ಮೀಯರಿಂದ ಸಹ ರಾಷ್ಟ್ರದ ಸೌಖ್ಯಕ್ಕೆ ಬಾದೆಯುಂಟಾದ ದೃಶ್ಯಗಳನ್ನಾದರೂ ಭರತಭೂಮಿಯ ಇತಿಹಾಸದಲ್ಲಿ ಕಾಣಬಹುದಾಗಿದೆ. ಅರವೀಡು ಮನೆತನದ ವೆಂಕಟಪತಿದೇವರಾಯನ ನಿಧನಾನಂತರದಲ್ಲಿ ಸಾಮ್ರಾಜ್ಯದ ಪರಿಸ್ಥಿತಿಯು ಇದೇ ವಿಧವಾಗಿ ಪರಿಣಮಿಸಿತು. ರಾಷ್ಟ್ರಾಭಿಮಾನಿಯೂ ಸ್ವಾಮಿನಿಷ್ಠನೂ ಆದ ಎಚ್ಚಮನಾಯಕನು ಜ್ಞಾತಿಯುದ್ಧದ ಬೇಗೆಯನ್ನು ನಷ್ಟಪಡಿಸಿ, ಸಾಮ್ರಾಜ್ಯದ ನಿಜವಾದ ಬಾಧ್ಯಸ್ತರಿಗೆ ರಾಜಸಿಂಹಾಸನವನ್ನು ದೊರಕಿಸಿಕೊಟ್ಟ ಹೃದಯ ಸ್ಪರ್ಶಿಯಾದ ಕಥಾನಕವು ಇದರಲ್ಲಿದೆ." (ನಾಗೇಶ, 1936: ಮುನ್ನುಡಿಯಿಂದ) ಎಂದಿರುವ ಮಾತುಗಳನ್ನು ಗಮನಿಸಿದಾಗ ಮೇಲಿನ ಅಂಶವು ಸ್ಪಷ್ಟವಾಗುತ್ತದೆ.

ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿದ ನಂತರ ಯಾವುದೊಂದು ಮಹಾಸಾಮ್ರಾಜ್ಯ ಉದಯಿಸಲಿಲ್ಲ. ಅನೇಕ ಸಣ್ಣ ಪುಟ್ಟ ರಾಜರುಗಳ ಆಡಳಿತ ಶಾಖೆಗಳು ತಲೆಯೆತ್ತಿದ್ದವು. ಅವುಗಳೆಂದರೆ ವೆಲ್ಲೂರು, ಮಧುರೆ, ತಾಂಜವೂರು ಮುಂತಾದವು. ಹೀಗೆ ಉದಯಿಸಿದ ರಾಜ್ಯಗಳಲ್ಲಿ ಅಧಿಕಾರಕ್ಕಾಗಿ ಅನೇಕ ಆಂತರಿಕ ಕಚ್ಚಾಟಗಳು, ಒಳಸಂಚುಗಳು ಮುಂತಾದ ಸಮಸ್ಯೆಗಳು ಉಲ್ಬಣಗೊಂಡಿದ್ದವು. ಹಾಗೆಯೇ ಈ ಸಂದರ್ಭದಲ್ಲಿ ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಪರಕೀಯರು ಈ ದೌರ್ಬಲ್ಯಗಳನ್ನು ಬಳಸಿಕೊಂಡು ತಮ್ಮ ಅಧಿಪತ್ಯವನ್ನು ಸ್ಥಾಪಿಸುವ ಹುನ್ನಾರದಲ್ಲಿದ್ದರು ಎಂಬುದನ್ನು ಕಾದಂಬರಿಕಾರರು ಎಚ್ಚಮ ನಾಯಕನ ಮೂಲಕ ಅಭಿವ್ಯಕ್ತಿಸಿದ್ದಾರೆ.

"ವಿದೇಶಿಯ ವ್ಯಾಪಾರಿಗಳಾದ ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಅಲ್ಲಲ್ಲಿ ಕಾಲು ಚಾಚುತ್ತಿರುವರು. ಕೇವಲ ವ್ಯಾಪಾರವೇ ಅವರ ಮುಖ್ಯ ಧ್ಯೇಯವಾಗಿ ಕಾಣುವುದಿಲ್ಲ. ಇಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿಬೇಕೆಂದೂ, ಧರ್ಮವನ್ನು ಬೆಳೆಯಿಸಬೇಕೆಂದೂ ಅವರು ಹೊಂಚು ಹಾಕಿದ್ದಾರೆ. ಪೋರ್ತುಗೀಜ ಪಾದ್ರಿಗಳು ಎಷ್ಟೋ ಕಡೆಗೆ ಬಲುಮೆಯಿಂದ ಹಿಂದುಗಳನ್ನು ಸ್ವಧರ್ಮದಲ್ಲಿ ತೆಗೆದುಕೊಂಡಿದ್ದಾರೆ. ನಾವು ಈಗ ಅವರ ಕೃತ್ಯಗಳನ್ನು ಉಪೇಕ್ಷಿಸಿದರೆ ಮುಂದೆ ವಿದೇಶಿಗಳಾದ ಆ ಕ್ರೈಸ್ತರೇ ಈ ದೇಶಕ್ಕೆ ಮೃತ್ಯು ರೂಪಿಗಳಾಗಿ ಪರಿಣಮಿಸಬಹುದು." (ನಾಗೇಶ, 1936:7) ಹಾಗೆಯೇ "ನಾವು ನಮ್ಮ ಕರ್ನಾಟಕ ಸಾಮ್ರಾಜ್ಯವನ್ನು ಅಭ್ಯುದಯಗೊಳಿಸಬೇಕಾದರೆ, ನಮ್ಮ ನಮ್ಮೊಳಗಿನ ಒಡಕು-ವೈಮನಸ್ಸುಗಳನ್ನು ಮುರಿಯಲೇಬೇಕು. ನಮ್ಮ ಒಳಜಗಳ, ಸ್ವಾರ್ಥಪರತೆ, ಸಂಕುಚಿತ ಬುದ್ಧಿ ಮೊದಲಾದವುಗಳ ಲಾಭ ಹೊಂದಿ, ವಿದೇಶಿಯರು ನಮ್ಮನ್ನು

ಹಣಿಯಹತ್ತಿರುವರು. ವಿಜಯನಗರದ ವೈಭವವನ್ನೂ ಕನ್ನಡಿಗರ ಗೌರವವನ್ನೂ ಸೂರೆ ಮಾಡಿದ ರಾಕ್ಷಸತಂಗಡಿಯ ಮಹಾಯುದ್ಧವು ನಮಗೆ ಏನು ಹೇಳುತ್ತಲಿದೆ? ರಾಮರಾಯರಂತಹ ಕರ್ತೃತ್ವಶಾಲಿಗಳೂ ನಾಮಾಂಕಿತ ಶೂರರೂ ಆದ ಪುರುಷ ಶ್ರೇಷ್ಠರನ್ನು ಆಹುತಿಯಾಗಿ ಕೊಂಡದ್ದಲ್ಲದೆ, ವಿಜಯನಗರ ರಾಜಧಾನಿಯ ಅಸ್ತಿತ್ವವನ್ನೂ ಅದರೊಡನೆ ಸಾಮ್ರಾಜ್ಯದ ಗೌರವ - ಅಭ್ಯುದಯಗಳನ್ನೂ ರಾಕ್ಷಸತಂಗಡಿಯ ಮಹಾಯುದ್ಧವು ಮಣ್ಣು ಪಾಲು ಮಾಡಿತು. ಶಾಹೀರಾಜ್ಯಗಳ ಐಕ್ಯವೇ ಸಮರ್ಥವಾದ ವಿಜಯನಗರ ಸಾಮ್ರಾಜ್ಯದ ಅವನತಿಗೆ ಕಾರಣೀಭೂತವಾಯಿತು. ಪ್ರಸಂಗದಲ್ಲಿ ಪರಕೀಯರು ಹೇಗೆ ಐಕ್ಯ ಹೊಂದುವರು ನೋಡಿರಿ! ನಾವು ನಮ್ಮಲ್ಲಿ ಐಕ್ಯ ಬುದ್ಧಿ - ರಾಷ್ಟ್ರಾಭಿಮಾನಗಳನ್ನು ನೆಲೆಗೊಳಿಸಿದರೆ ಹಿಂದೂಗಳ ಹೆಸರು ತೆಗೆಯುವ ಎದೆಯು ಯಾವ ಪರಕೀಯನದಾಗುವುದು? ನಮ್ಮಲ್ಲಿ ಐಕ್ಯವೂ ರಾಷ್ಟ್ರಾಭಿಮಾನವೂ ಇಲ್ಲದ್ದರಿಂದಲೇ ವಿದೇಶಿಯರು ನಮ್ಮನ್ನು ರಸಾತಳಕ್ಕೆ ತುಳಿಯಲು ಮುಂದಾದರು. ಭಾರತದ ಬಹುಭಾಗವು ವಿದೇಶಿಯ ದಾಸ್ಯಕ್ಕೂ ಒಳಗಾಗಿರುವುದು. ಕರ್ನಾಟಕದ್ದಷ್ಟೇ ಏಕೆ, ಇಡೀ ಭರತ ವರ್ಷವನ್ನು ಸ್ವಾತಂತ್ರಗಿರಿಯ ಅತ್ಯುಚ್ಚಶಿಖರದ ಮೇಲೇರಿಸಬೇಕೆಂಬ ಉದ್ದೇಶದಿಂದಲೇ ಶ್ರೀಮದ್ವಿದ್ಯಾರಣ್ಯ ಮುನಿಗಳು ಕರ್ನಾಟಕ ಸಾಮ್ರಾಜ್ಯ ಸ್ಥಾಪನೆ ಮಾಡಿದರು. ರಾಕ್ಷಸ ತಂಗಡಿಯ ಯುದ್ಧದಲ್ಲಿ ನಮ್ಮವರಿಗೆ ವಿಜಯಲಾಭವಾಗಿದ್ದರೆ ಕರ್ನಾಟಕವಷ್ಟೇ ಏಕೆ, ಇಡೀ ಭಾರತವು ಕೂಡಾ ಉನ್ನತಪಥವನ್ನು ಹಿಡಿಯುತ್ತಿತ್ತು." (ನಾಗೇಶ, 1936:21)

ಎಂದಿರುವುದನ್ನು ಗಮನಿಸಿದಾಗ ಸಾಮ್ರಾಜ್ಯದಲ್ಲಿನ ಒಳಜಗಳಗಳನ್ನು ನಿಯಂತ್ರಿಸುವುದರ ಮೂಲಕ ಐಕ್ಯತೆಯ ಭಾವನೆಯನ್ನು ಮೂಡಿಸುವುದರಿಂದ ವಿದೇಶಿಯರಿಂದ ಆಗಬಹುದಾದ ಧಾರ್ಮಿಕ ಮತ್ತು ರಾಜಕೀಯ ಆಕ್ರಮಗಳನ್ನು ತಡೆಯಬಹುದಾಗಿದೆ. ಆ ಮೂಲಕ ನಮ್ಮದೇ ಆದ ಸ್ವತಂತ್ರ ನಾಡನ್ನು ಕಟ್ಟಿಕೊಳ್ಳಬಹುದು. ಹಾಗೆಯೇ ಧರ್ಮವನ್ನೂ ಸಹ ರಕ್ಷಿಸಬಹುದು ಎನ್ನುವ ಸೂಚನೆಯನ್ನು ಕಾದಂಬರಿಕಾರರು ನೀಡಿದ್ದಾರೆ. ಹಿಂದೂಗಳ ಸಾಮ್ರಾಜ್ಯವೆಂದು ಕರೆಯಿಸಿಕೊಂಡ ವಿಜಯನಗರವು ತನ್ನ ಅವನತಿಯನ್ನು ತಂದುಕೊಂಡ ಬಗೆಯನ್ನು ವಿವರಿಸುತ್ತಾ ಮತ್ತೆ ಅಂತಹದೇ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬೇಕೆಂದು ಹೇಳುವುದರಲ್ಲಿನ ಕಾದಂಬರಿಕಾರರ ಆಶಯವು ನಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವುದು ಹಾಗೂ ಹಿಂದೂ ರಾಷ್ಟ್ರೀಯತೆಯನ್ನು ಪ್ರತಿಪಾದಿಸುವುದಾಗಿದೆ. ಅಂದರೆ ಹರಿದು ಹಂಚಿ ಹೋದ ಸಂಸ್ಥಾನಗಳನ್ನು ಒಂದುಗೂಡಿಸುವುದು ಆ ಮೂಲಕ ಕನ್ನಡಿಗರ ಏಕೀಕರಣ ಮತ್ತು ಭಾರತವನ್ನು ಸಮಗ್ರ ರಾಷ್ಟ್ರವನ್ನಾಗಿ ಪರಿಭಾವಿಸುವ ಆಶಯ ಇಲ್ಲಿ ವ್ಯಕ್ತವಾಗಿದೆ.

ಈ ಸಂದರ್ಭದಲ್ಲಿ ಇನ್ನಷ್ಟು ಅಂಶಗಳನ್ನು ಕಾದಂಬರಿಯಲ್ಲಿ ವ್ಯಕ್ತವಾದ ಸಂಗತಿಗಳೊಂದಿಗೆ ವಿಸ್ತರಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಕಾದಂಬರಿಕಾರರು ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಕರೆಯುತ್ತಾರೆ. ಅಲ್ಲಿನ ಸಾಮ್ರಾಟನನ್ನು ಕರ್ನಾಟಕ ಸಿಂಹಾಸನ ಸಾಮ್ರಾಟನೆಂದು ಕರೆಯುತ್ತಾರೆ. ವಿಜಯನಗರ ಸಾಮ್ರಾಜ್ಯವು ಯವನರ ದಾಳಿಯಿಂದ ಅವನತಿ ಹೊಂದಿದ ತರುವಾಯ ವೆಂಕಟಪತಿರಾಯನು ಪೆನುಗೊಂಡ, ಚಂದ್ರಗಿರಿ, ವೆಲ್ಲೂರುಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದರೂ ಆ ರಾಜ್ಯಗಳನ್ನು ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯ ಎಂದೇ ಕರೆಯುತ್ತಾರೆ. ವಿಜಯನಗರವನ್ನು ಕರ್ನಾಟಕ ಸಾಮ್ರಾಜ್ಯ ಎಂದು ಕರೆದುಕೊಳ್ಳಲು ಮುಖ್ಯವಾಗಿ ಮಹಮ್ಮದೀಯರ ದಾಳಿಗಳೇ ಎಂಬುದು ತಿಳಿದು ಬರುತ್ತದೆ. ಏಕೆಂದರೆ ಮಹಮ್ಮದೀಯರ ದಾಳಿಯಿಂದ ತತ್ತರಿಸಿ ಹೋಗಿ ಧರ್ಮದ ಹಾಗೂ ನಾಡಿನ ಉಳಿವಿಗಾಗಿ ನಮ್ಮದೇ ಸುಭದ್ರವಾದ ಸಾಮ್ರಾಜ್ಯವನ್ನು ಕಟ್ಟಿಕೊಳ್ಳಬೇಕೆಂಬ ಹಂಬಲದಿಂದಲೇ ವಿಜಯನಗರ ನಿರ್ಮಾಣವಾದದ್ದು. ಹಾಗೆಯೇ ಇದರ ಅಂತ್ಯವು ಕೂಡ ಮಹಮ್ಮದೀಯರ ದಾಳಿಯಿಂದಲೇ ಆಗಿದೆ. ಈ ಕಾರಣಕ್ಕಾಗಿ ಆ ಸಂದರ್ಭದಲ್ಲಿ ಬಲಶಾಲಿಯಾದ ಹಿಂದೂ ಸಾಮ್ರಾಜ್ಯವೊಂದು ಈ ನಾಡಿನಲ್ಲಿ ಇರಲಿಲ್ಲ. ಇದರಿಂದಾಗಿ ನಾವು ಕಂಡ ಮಹಾಸಾಮ್ರಾಜ್ಯವೊಂದು ನಶಿಸಿ ಹೋದಾಗ ಅದರ ಕಾರ್ಯವೈಖರಿ ಹಾಗೂ ಆ ಸಾಮ್ರಾಜ್ಯ ಧರ್ಮಕ್ಕಾಗಿ ಕೈಗೊಂಡ ಕಾರ್ಯಗಳನ್ನು ಗಮನಿಸಿ ಮತ್ತು ವಿಜಯನಗರ ಅವನತಿ ಹೊಂದಿದ ನಂತರ ಸ್ವಲ್ಪ ಕಾಲದಲ್ಲಿಯೇ ನಮ್ಮ ದೇಶದ ಮೇಲಾದ ಪರಕೀಯರ ದಾಳಿಗಳಿಂದ ನಾಡು ಮತ್ತು ಧರ್ಮ ಬಲವಾದ ಪೆಟ್ಟು ತಿಂದವು. ಆದುದರಿಂದ ನಮ್ಮದೇ ಎಂದು ಹೇಳಿಕೊಳ್ಳಲಿಕ್ಕೆ ಒಂದು ಸಾಮ್ರಾಜ್ಯವಾದರೂ ಇರಲಿಲ್ಲ. ಇದ್ದ ಮೈಸೂರು ಸಂಸ್ಥಾನವು ಒಡೆಯರ ಆಡಳಿತದಲ್ಲಿದ್ದರೂ ಅದು ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಅವರ ನಿರ್ದೇಶನದಡಿಯಲ್ಲಿ ಆಡಳಿತ ನಡೆಸುತ್ತಿತ್ತು. ಅವರ ದುರಾಡಳಿತದಿಂದಾಗಿ ಸ್ವಾಭಿಮಾನಿಗಳೆನಿಸಿಕೊಂಡ ಕನ್ನಡಿಗರಿಗೆ ಸ್ವಾಭಿಮಾನದ ಪ್ರಶ್ನೆ ಬಹುಮುಖ್ಯವಾಗಿ ಕಾಡಿ ಆಗ ಕರ್ನಾಟಕ ಎಂಬ ನಾಡನ್ನು ರೂಪಿಸಿಕೊಳ್ಳಬೇಕೆಂಬ ಅಭಿಲಾಷೆಯುಂಟಾದಂತಿದೆ. ಅದಕ್ಕಾಗಿಯೇ ಆ ಸಂದರ್ಭದ ಜನ ಕನ್ನಡಿಗರ ಹಾಗೂ ಹಿಂದೂಗಳ ಸಮೃದ್ಧಿಯ ಸಂಕೇತವಾದ ವಿಜಯನಗರವನ್ನು ಆದರ್ಶವಾಗಿಟ್ಟುಕೊಂಡು ಆ ಮೂಲಕ ತಮ್ಮತನವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದರು. ವಿಜಯನಗರ ಸಾಮ್ರಾಜ್ಯವು ವೈಭವಶಾಲಿಯಾದ ರಾಷ್ಟ್ರವೆಂದು, ಬಲಸಮೃದ್ಧಿಯಾದ ರಾಜ್ಯವೆಂದು ಪರಿಭಾವಿಸಲಾಗಿದ. ಅಂತಹ ಸಾಮ್ರಾಜ್ಯದ ಆಡಳಿತವನ್ನು ಆದರ್ಶವೆಂದು ಅನುಕರಿಸುತ್ತಾರೆ. ಅಂತಹ ಆದರ್ಶ ಸಾಮ್ರಾಜ್ಯ ನಿರ್ಮಾಣ ಕಾರ್ಯದಲ್ಲಿ ವೆಂಕಟಪತಿರಾಯನು ತೊಡಗುತ್ತಾನೆ. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಸ್ವಾರ್ಥ ಸಾಧನೆಗಾಗಿ ಅಧಿಕಾರದ ದಾಹದಿಂದ ರಾಜ್ಯ ವಿದ್ರೋಹಿ ಕಾರ್ಯದಲ್ಲಿ ತೊಡಗಿದವರನ್ನು ರಾಜನಿಷ್ಠ ಸೇವಕರು, ಅಧಿಕಾರಿ ವರ್ಗದವರು ಹೇಗೆ ಕಾಪಾಡಿಕೊಂಡರೆಂಬುದು ಕಾದಂಬರಿಯ ಮುಖ್ಯ ಆಶಯ.

ಕಾದಂಬರಿಯಲ್ಲಿ ಇನ್ನೊಂದು ಮುಖ್ಯ ಅಂಶವೆಂದರೆ ಒಂದು ಸಾಮ್ರಾಜ್ಯದ ಅಧಿಪತಿಯಾಗಬೇಕಾದರೆ ಅವನು ಹಿಂದೂ ಧರ್ಮದ ಸಂಪ್ರದಾಯದ ಪ್ರಕಾರ ಕ್ಷತ್ರಿಯನೇ ಆಗಿರಬೇಕು. ಆದರೆ ಪೆನುಗೊಂಡದಲ್ಲಿ ಆರು ಜನ ಮಡದಿಯರನ್ನು ಹೊಂದಿದ್ದ ವೆಂಕಟಪತಿರಾಯನಿಗೆ ಪುತ್ರ ಸಂತಾನವಿರಲಿಲ್ಲ. ಆಗ ಅವನ ಹೆಂಡತಿ ಓಬಮ್ಮಾಂಬಿಕೆಯು ಸಾಮ್ರಾಜ್ಯದಲ್ಲಿ ತನ್ನ ಪ್ರತಿಷ್ಠೆಯು ಬೆಳೆಯಬೇಕೆಂದು, ರಾಯನ ಪ್ರೇಮಾದರಗಳು ತನ್ನಲ್ಲಿ ಹೆಚ್ಚಾಗಬೇಕೆಂದು ಯೋಚಿಸಿ, ಚಂದ್ರಗಿರಿ ರಾಜಧಾನಿಯೊಳಗಿನ ಒಬ್ಬ ಬ್ರಾಹ್ಮಣ ಮಹಿಳೆಯಿಂದ ಮಗುವನ್ನು ಪಡೆದು ಅದು ತನ್ನ ಮಗುವೆಂಬಂತೆ ಹೇಳಿಕೊಂಡು ಅವನನ್ನೇ ಕರ್ನಾಟಕ ಸಾಮ್ರಾಜ್ಯದ ಯುವರಾಜನನ್ನಾಗಿ ಬಿಂಬಿಸತೊಡಗಿದಳು. ಆದರೆ ಈ ಸತ್ಯವನ್ನು ಅರಿತ ಎಚ್ಚಮ ನಾಯಕನು ಕರ್ನಾಟಕ ಸಿಂಹಾಸನವನ್ನು ಅಲಂಕರಿಸಲು ಕ್ಷತ್ರಿಯನೇ ಅರ್ಹ. ಅನ್ಯ ಕುಲದವನು ಅದಕ್ಕೆ ಅರ್ಹನಲ್ಲ. ಆ ಮನೆತನದಲ್ಲಿ ಪುತ್ರ ಸಂತಾನವಿಲ್ಲದಾಗ ಇದೇ ವಂಶಸ್ಥರು ರಾಜ ಪದವಿಯನ್ನು ಅಲಂಕರಿಸುವಂತೆ ನೋಡಿಕೊಳ್ಳುತ್ತಾನೆ. ಈ ಅಂಶವನ್ನು ಗಮನಿಸಿದಾಗ ಸಿಂಹಾಸನದ ಪವಿತ್ರತೆಯನ್ನು, ಆ ಕಾಲದ ಸಾಮಾಜಿಕ ಮೌಲ್ಯವನ್ನು ಉಳಿಸಿಕೊಳ್ಳಲು ಅಂದಿನ ವೀರರು ಮಾಡಿದ ಹೋರಾಟವು ಕನ್ನಡಿಗರು ತಮ್ಮ ಧಾರ್ಮಿಕ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳಲು ಪ್ರೇರೇಪಿಸುತ್ತದೆ. ಇಂತಹ ಧಾರ್ಮಿಕ ನಂಬಿಕೆಗಳನ್ನು ನಮ್ಮ ಪೂರ್ವಜರು ಹೊಂದಿದ್ದರು. ಆದರೆ ಇಂದು ನಾವು ಅನ್ಯಧರ್ಮೀಯರಷ್ಟೇ ಅಲ್ಲ; ಅನ್ಯ ದೇಶಿಯರೂ ಆದವರನ್ನು ನಮ್ಮ ಒಡೆಯರೆಂದು ಒಪ್ಪಿಕೊಂಡರೆ ನಮ್ಮ ಧಾರ್ಮಿಕ ಆಶಯಗಳನ್ನು ಧಿಕ್ಕರಿಸಿದಂತಾಗುತ್ತದೆ ಎಂದು ಹೇಳುವುದರ ಮೂಲಕ ಕಾದಂಬರಿಕಾರರು ಅಂದಿನ ಕನ್ನಡ, ಭಾರತ(ರಾಷ್ಟ್ರೀಯ) ಹೋರಾಟಕ್ಕೆ ದೈವಿಸಂಭೂತರಾದ ಕನ್ನಡಿಗರನ್ನು ಜಾಗೃತಗೊಳಿಸಿದ್ದಾರೆ.

ಕಾದಂಬರಿಕಾರರು ರಾಜ್ಯ ಮತ್ತು ರಾಷ್ಟ್ರ ನಿರ್ಮಾಣದ ವಿಷಯ ಬಂದಾಗ-

> "ನಾನು ತಮ್ಮೆಲ್ಲರಿಗೆ ನನ್ನ ಮನೋದಯವನ್ನು ತಿಳಿಸುವುದೇನೆಂದರೆ, ವಿಜಯನಗರದ ಸ್ವರ್ಗಸ್ಥ ಸಾಮ್ರಾಟರಾದ ವೆಂಕಟಪತಿದೇವರಾಯರ ಅಂತಿಮ ಧ್ಯೇಯವನ್ನು ರಾಕ್ಷಸತಂಗಡಿ ವಿಪ್ಲವದ ಪೂರ್ವದಲ್ಲಿದ್ದ ವೈಭವವನ್ನು- ಸಾಧಿಸುವುದಕ್ಕಾಗಿ ನಾನು ಸಾಹಸ ಮಾಡುವೆನು. ಪಂಪಾಪತಿ ವಿರೂಪಾಕ್ಷನೂ ನಾಡದೇವಿಯಾದ ಭುವನೇಶ್ವರಿಯೂ ತಿರುಪತಿ ವೆಂಕಟೇಶನು ನನ್ನ ಮನೋದಯವನ್ನು ಈಡೇರಿಸದೆ ಇರಲಾರರೆಂದು ನನ್ನ ಭರವಸೆಯುಂಟು."
> (ನಾಗೇಶ, 1936:20)

ಎಂದು ಶ್ರೀರಂಗರಾಯನ ಮೂಲಕ ಪಟ್ಟಾಭಿಷೇಕದ ಸಂದರ್ಭದಲ್ಲಿ ಹೇಳಿಸುವ ಮಾತುಗಳು ಹಿಂದಿನ ಚರಿತ್ರೆಯ ಘಟನೆಗಳು ಮುಂದಿನವರಿಗೆ ಹೇಗೆ ಆದರ್ಶವಾಗುತ್ತವೆ ಮತ್ತು ಮುನ್ನಡೆಯಬೇಕಾದ ಸಂದರ್ಭದಲ್ಲಿ ಯಾವ ರೀತಿಯ ಎಚ್ಚರಿಕೆಗಳನ್ನು

ಇಟ್ಟುಕೊಳ್ಳಬೇಕೆಂಬುದನ್ನು ಈ ಮಾತಿನ ಮೂಲಕ ಧ್ವನಿಸುತ್ತಾರೆ. ವಿಜಯನಗರ ಸಾಮ್ರಾಜ್ಯವು ಅನ್ಯ ಧರ್ಮೀಯರಿಂದ ಅವನತಿ ಹೊಂದಿದಾಗ; ಮತ್ತೆ ಅಂತಹ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿಕೊಳ್ಳಲು ಆ ಕಾಲದ ಜನ ವಿಫಲರಾದರು. ಇದು ಹಿಂದೂಗಳಿಗೆ ಮತ್ತು ಕನ್ನಡಿಗರಿಗೆ ಒಂದು ಪಾಠ ಎನ್ನುವಂತೆ ಕಾದಂಬರಿಕಾರರು ಚಿತ್ರಿಸುತ್ತಾರೆ. ಏಕೆಂದರೆ ವಾಸ್ತವದ ಸಂದರ್ಭದಲ್ಲಿ ಬ್ರಿಟಿಷರಿಂದ ಆಳಲ್ಪಡುತ್ತಿದ್ದ ಈ ಇಂಡಿಯಾದಲ್ಲಿ ಕೇವಲ ರಾಜಕೀಯ ಸ್ಥಿತಿ ಮಾತ್ರ ಅವರಂತಿರಲಿಲ್ಲ. ಅವರು ಧಾರ್ಮಿಕ ವಲಯಕ್ಕೂ ಹೊಕ್ಕು ಅಲ್ಲಿ ಮತಾಂತರಕ್ಕೂ ಕೈ ಹಾಕಿದರು. ಇಂತಹ ಸಂದರ್ಭದಲ್ಲಿ ನಾವು ಕೇವಲ ನಾಡನ್ನು ಮಾತ್ರವಲ್ಲ ಒಟ್ಟಾರೆ ನಮ್ಮ ಸಾಂಸ್ಕೃತಿಕ ಬದುಕನ್ನು ರೂಪಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಹಿಂದೆ ಆದ ತಪ್ಪುಗಳು ಮರುಕಳಿಸದಂತೆ ಎಚ್ಚೆತ್ತುಕೊಂಡು ನಾಡನ್ನು ಕಟ್ಟುವ, ಧರ್ಮವನ್ನು ರಕ್ಷಿಸುವ ಕಾರ್ಯಕ್ಕೆ ಮುಂದಾಗಬೇಕೆಂದು ಹೇಳುವ ಮೂಲಕ ಧರ್ಮದ ಆಧಾರದ ಮೇಲೆ ನಾಡು ಮತ್ತು ರಾಷ್ಟ್ರ ಎನ್ನುವ ಗುರುತುಗಳನ್ನು ನಿರ್ಮಾಣಮಾಡಿಕೊಳ್ಳಲು ಪ್ರೇರೇಪಿಸುತ್ತಾರೆ.

ವಿಜಯನಗರ ಸಾಮ್ರಾಜ್ಯವು ರಕ್ಕಸತಂಗಡಗಿ ಯುದ್ಧದಲ್ಲಿ ಸೋತು ಹೋಯಿತು. ಆ ವಿಷಯ ತಿಳಿದೊಡನೆ ರಾಜಧಾನಿಯಲ್ಲಿನ ರಾಜಪರಿವಾರವೆಲ್ಲ ಪೆನುಗೊಂಡಕ್ಕೆ ಹೊರಟುಹೋದರು. ಜಯಶಾಲಿಯಾದ ಶಾಹೀ ಸೈನಿಕರು ವಿಜಯನಗರವನ್ನು ಸುಮಾರು ಆರು ತಿಂಗಳ ಕಾಲ ಕೊಳ್ಳೆ ಹೊಡೆದರು ಎನ್ನುವ ವಿಚಾರಗಳು ಚಾರಿತ್ರಿಕವಾಗಿ ಗುರುತಿಸಲ್ಪಟ್ಟಿವೆ. ಆದರೆ ಚರಿತ್ರೆಯನ್ನು ಪುನರಾವಲೋಕಿಸಿದಾಗ ಒಂದು ಸಂಶಯ ಹುಟ್ಟಿಕೊಳ್ಳುತ್ತದೆ. ವಸ್ತು ಸ್ಥಿತಿಯನ್ನು ಗಮನಿಸಿದಾಗ ಅಲ್ಲಿ ವೈಷ್ಣವ ದೇವಾಲಯಗಳೇ ಅಧಿಕ ಪ್ರಮಾಣದಲ್ಲಿ ನಾಶವಾದವು. ಅಪವಾದವೆಂಬಂತೆ ಕೆಲ ಶೈವ ದೇವಾಲಯಗಳು ನಾಶವಾಗಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮುಸಲ್ಮಾನರು ವೈಷ್ಣವರ ದೇವಾಲಯಗಳನ್ನು ಮಾತ್ರ ನಾಶ ಮಾಡಲು ಕಾರಣವೇನು? ಅಥವಾ ತಮ್ಮ ವಿರುದ್ಧ ಹೋರಾಟ ಮಾಡಿದ ಅರಸ ವೈಷ್ಣವನು ಎನ್ನುವ ಕಾರಣಕ್ಕೆ ಈ ರೀತಿ ಮಾಡಿದರೆ? ಅಥವಾ ಮುಸಲ್ಮಾನರ ಹೆಸರಿನಲ್ಲಿ ಶೈವರೇ ಆ ದೇವಾಲಯಗಳನ್ನು ನಾಶ ಮಾಡಿದರೆ? ಎನ್ನುವಂತಹ ಅನುಮಾನ ಕಾದಂಬರಿಕಾರರಿಗೆ ಕಾಡಿದಂತಿದೆ. ಅದಕ್ಕಾಗಿಯೇ ಹಿಂದೂ ಧರ್ಮದ ಆಧಾರದ ಮೇಲೆ ರಾಷ್ಟ್ರದ ಕಲ್ಪನೆಯನ್ನು ಹೊತ್ತು ಹೊರಟಿರುವ ಸಂದರ್ಭದಲ್ಲಿ ಶೈವ ವೈಷ್ಣವ ಎನ್ನುವ ಮತೀಯ ಭಾವನೆಗೆ ಅವಕಾಶ ಒದಗಬಾರದು ಎನ್ನುವ ಕಾರಣಕ್ಕಾಗಿ ಕಾದಂಬರಿಯ ಬಹುತೇಕ ಕಡೆ ಶೈವ(ವಿರೂಪಾಕ್ಷ) ದೇವರುಗಳ ಸ್ಮರಣೆಯೊಂದಿಗೆ ವೈಷ್ಣವ(ತಿರುಪತಿ ವೆಂಕಟೇಶ) ದೇವರುಗಳನ್ನೂ, ಶಾಕ್ತದೇವತೆ(ಭುವನೇಶ್ವರಿ)ಯನ್ನೂ ಸ್ಮರಿಸಿದ್ದಾರೆ. ಆ ಮೂಲಕ ಪರಕೀಯರ ಸಾಂಸ್ಕೃತಿಕ ಯಜಮಾನಿಕೆಯನ್ನು ವಿರೋಧಿಸಿ ಹಿಂದೂಧರ್ಮದ ಅಡಿಯಲ್ಲಿ ಕನ್ನಡಿಗರ ಯಜಮಾನಿಕೆಯನ್ನು ಸ್ಥಾಪಿಸುವ ಆಶಯವಿದೆ.

ಒಟ್ಟಿನಲ್ಲಿ ಈ ಕಾದಂಬರಿಯಲ್ಲಿ ವ್ಯಕ್ತಗೊಂಡಿರುವ ಬಹುಮುಖ್ಯ ತಿರುಳು ವರ್ತಮಾನದ ಸ್ಥಿತಿಗತಿಯನ್ನು ಎದುರಿಸಲು; ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಭೂತಕಾಲದ ಮೊರೆಹೋಗುತ್ತಾರೆ. ಅಲ್ಲಿ ಚಾರಿತ್ರಿಕವಾಗಿ ದಾಖಲಾದ ಅಂಶಗಳನ್ನು ಇಟ್ಟುಕೊಂಡು ವಾಸ್ತವದಲ್ಲಿ ನಮ್ಮ ಅಸ್ತಿತ್ವವನ್ನು ರೂಪಿಸಿಕೊಳ್ಳಲು ವಿಜಯನಗರದ ಚಾರಿತ್ರಿಕ ನೆನಪುಗಳನ್ನು ಭಾವನಾತ್ಮಕವಾಗಿ ಬಳಸಿಕೊಳ್ಳಲಾಗಿದೆ.

**ಕನ್ನಡಿಗರ ಕರ್ಮಕಥೆ :**(1916)

ರಾಬರ್ಟ್ ಸೆವೆಲ್ ಅವರ 'A Forgotten Empire' ಕೃತಿಯ 14 ಮತ್ತು 15ನೆಯ ಪ್ರಕರಣಗಳನ್ನಿಟ್ಟುಕೊಂಡು ಹರಿನಾರಾಯಣ ಆಪಟೆಯವರು ಮರಾಠಿಯಲ್ಲಿ 'ವಜ್ರಾಘಾತ' ಎನ್ನುವ ಕಾದಂಬರಿಯನ್ನು ಬರೆದರು. ಅದನ್ನೇ ಕನ್ನಡಕ್ಕೆ ಗಳಗನಾಥರು 33 ಪ್ರಕರಣಗಳಲ್ಲಿ 'ಕನ್ನಡಿಗರ ಕರ್ಮಕಥೆ' ಎಂದು ಅನುವಾದಿಸಿದ್ದಾರೆ. ವಿಜಯನಗರ ಸಾಮ್ರಾಜ್ಯ ಅವನತಿಯು ಹರಿನಾರಯಣರಿಗೆ 'ವಜ್ರಾಘಾತ'ವಾದರೆ ಗಳಗನಾಥರಿಗೆ ಅದು 'ಕನ್ನಡಿಗರ ಕರ್ಮಕತೆ'ಯಾಗಿ ಕಂಡಿದೆ.

ರಾಮರಾಯನು ಮುಸಲ್ಮಾನ ಯುವತಿ ಮೇಹರಜಾನಳ ರೂಪಕ್ಕೆ ಮನಸೋತು ಅವಳಲ್ಲಿ ಮೋಹಿತನಾಗುತ್ತಾನೆ. ಮದುವೆಯಾಗುವುದಾಗಿ ವಚನ ನೀಡುತ್ತಾನೆ. ಆದರೆ ಕೃಷ್ಣದೇವರಾಯನ ಮಗಳನ್ನು ಮದುವೆಯಾದರೆ ಅಧಿಕಾರ ದೊರೆಯುತ್ತದೆಯಲ್ಲ ಎಂಬ ಆಸೆಯಿಂದ, ಪ್ರೇಯಸಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುವಲ್ಲಿ ವಿಫಲನಾಗುತ್ತಾನೆ. ಆಗಲೇ ಗರ್ಭಿಣಿಯಾಗಿದ್ದ ಮೇಹರ್ಜಾನಳು ತನ್ನನ್ನು ಅಧಿಕಾರಾಂಕ್ಷೆಯಿಂದ ರಾಮರಾಯ ಕೈಬಿಟ್ಟನಲ್ಲ ಎಂದು ದುಃಖಿಸುತ್ತಾಳೆ. ಆ ದುಃಖವೇ ದ್ವೇಷವಾಗಿ ಮುಂದೆ ರಾಮರಾಯನ ನಾಶಕ್ಕೆ ಕಾರಣವಾಗುತ್ತದೆ. ರಾಮರಾಯನ ನಾಶದೊಂದಿಗೆ ಇಡೀ ವಿಜಯನಗರವೇ ವಿನಾಶವಾಗುತ್ತದೆ. ಕಾದಂಬರಿಯ ರಚನೆಯ ಕಾಲದಲ್ಲಿ ವಿಜಯನಗರವು ಕನ್ನಡಿಗರ ಸಾಮ್ರಾಜ್ಯದ ಪ್ರತೀಕವೆಂದು ಭಾವಿಸಲಾಗಿದ್ದರಿಂದಲೇ ಅದು ಕನ್ನಡಿಗರ ಕಥೆಯಾಗಿದೆ; ವ್ಯಥೆಯೂ ಆಗಿದೆ.

ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವದ ತುತ್ತ ತುದಿಯಲ್ಲಿತ್ತು. ಆತನ ಆಡಳಿತದ ಕೊನೆಯ ದಿನಗಳಲ್ಲಿ ಸಾಮ್ರಾಜ್ಯದಲ್ಲಿ ಅನೇಕ ಗೊಂದಲಗಳು ಸೃಷ್ಟಿಗೊಂಡಿದ್ದವು. ಈ ವೇಳೆಗಾಗಲೇ ವಿಜಯನಗರ ಸ್ಥಾಪನೆಯಾಗಿ ಮುನ್ನೂರು ವರ್ಷಗಳು ಗತಿಸಿದ್ದವು. ಆ ಸಮಯದಲ್ಲಿ ಅಲ್ಲಿನ ಸ್ಥಿತಿಯನ್ನು ಕುರಿತು ಕಾದಂಬರಿಕಾರರು ಈ ರೀತಿ ಅಭಿಪ್ರಾಯಪಡುತ್ತಾರೆ.

> "ಕನ್ನಡಿಗರಲ್ಲಿ ಸತ್ವಕ್ಕಿಂತ, ವಿಷಯ ಸುಖಲೋಲುಪತೆಯೂ, ಸೌಜನ್ಯಕ್ಕಿಂತ ಮದಾಂಧತೆಯೂ, ಪೌರುಷಕ್ಕಿಂತ ಡಾಂಭಿಕತೆಯೂ, ಸತ್ಯಕ್ಕಿಂತ

ಮೋಸಗಾರಿಕೆಯೂ ವಿಶೇಷವಾಗಿದ್ದವು. ಈ ಸ್ಥಿತಿಯು ರಾಷ್ಟವನ್ನಂಟಿಕೊಂಡ ಕ್ಷಯರೋಗವೆಂತಲೂ ಹೇಳಬಹುದು." (ಗಳಗನಾಥ, 1999 : 21)

ಹಿಂದೆ ಅತಿಪರಿಶ್ರಮದಿಂದ ಹುಟ್ಟಿದ್ದು ಈ ಸಾಮ್ರಾಜ್ಯ. ಅದು ಹುಟ್ಟಿದ ಕಾಲದ ಸ್ಥಿತಿಯೂ ಅಂತಹದಾಗಿತ್ತು. ಅದರ ಧ್ಯೇಯೋದ್ದೇಶಗಳು ಉನ್ನತವಾಗಿದ್ದು, ಆದರ್ಶನೀಯವೂ ಆಗಿದ್ದವು. ಅಂತಹ ಸಾಮ್ರಾಜ್ಯವು ಕೃಷ್ಣದೇವರಾಯನ ಆಡಳಿತ ಕೊನೆಯ ದಿನಗಳಲ್ಲಿ ಬೇರೆಯದೇ ದಾರಿ ಹಿಡಿದಿತ್ತು. ಆರಂಭದಲ್ಲಿದ್ದಂತಹ ಒತ್ತಡಗಳಾಗಲಿ, ಗುರುತವಾದ ಹೊಣೆಯನ್ನು ಮರೆತು ರಾಜರು ಸುಖದ ಸುಪ್ಪತ್ತಿಗೆಯಲ್ಲಿ ಲೋಲಾಡುತ್ತಿದ್ದರು. ಅಧಿಕಾರದ ಆಸೆಗಾಗಿ ಸಾಮ್ರಾಜ್ಯದ ಹಿತಚಿಂತನೆಯನ್ನು ಮರೆತಿದ್ದರು.

ಆ ಸಮಯದಲ್ಲಿ ಬಹುಜನ ಸರದಾರರು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದ್ದರು. ಅಂಥವರಲ್ಲಿ ರಾಮರಾಯನೂ ಒಬ್ಬ. ಈ ಗೊಂದಲದ ಸಂದರ್ಭದಲ್ಲಿ ಪರಾಕ್ರಮಿಯಾಗಿದ್ದ ರಾಮರಾಯನು ಅದರ ಸದುಪಯೋಗ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದನು. ಕೃಷ್ಣದೇವರಾಯನೂ ಕೂಡ ಇವನ ಧೈರ್ಯ, ಸಾಹಸ, ಪರಾಕ್ರಮ, ರಾಜಕಾರಣದ ಕುಶಲತೆಯನ್ನು ಕಂಡು ಅವನನ್ನು ಉನ್ನತ ಪದವಿಗೇರಿಸುತ್ತಿದ್ದನು. ಅಲ್ಲದೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ, ಮಂತ್ರಿಯ ಪದವಿಗೇರಿಸಲು ಯೋಚಿಸಿದ್ದನು. ಇದರಿಂದಾಗಿ ರಾಮರಾಯನಲ್ಲಿ ಅಧಿಕಾರದ ಆಸೆ ಹೆಚ್ಚಾಯಿತು. ಆದರೆ ಅವನು ಧರ್ಮ ಸಂಕಟದಲ್ಲಿ ಸಿಲುಕಿದ. ಈಗಾಗಲೇ ಮೇಹರ್ಜಾನಳೊಂದಿಗೆ ಪಾಣಿಗ್ರಹಣ ಮಾಡಿದ್ದರಿಂದ ಅವನ ಆಸೆ ಎಲ್ಲಿ ಕಮರಿ ಹೋಗುವುದೆಂಬ ಆತಂಕ ಹೆಚ್ಚಾಯಿತು. ತಾನು ಹಿಂದೂ ಅವಳು ಯವನ ಧರ್ಮವಳೆಂಬುದೇ ಇದಕ್ಕೆ ಮುಖ್ಯ ಕಾರಣ. ಒಂದು ವೇಳೆ ಮೇಹರ್ಜಾನಳನ್ನು ಕೈ ಹಿಡಿದರೆ ಹಿಂದೂ ಧರ್ಮದ ಅಭಿಮಾನಿಯಾದ ಕೃಷ್ಣದೇವರಾಯ ಮತ್ತು ಆತನ ಪ್ರಜೆಗಳು ಕ್ಷಮಿಸಲಾರರು. ಅದಕ್ಕಾಗಿ ಮೇಹರ್ಜಾನಳನ್ನು ಮದುವೆಯಾಗುವುದಿಲ್ಲ. ಆದರೆ ಆ ಸಂದರ್ಭಕ್ಕಾಗಲೇ ಮೇಹರ್ಜಾನಳು ಗರ್ಭಿಣಿ ಎಂಬ ವಿಚಾರವೂ ಅವನಿಗೆ ತಿಳಿಯದಿರಲಿಲ್ಲ. ತಾನು ಕೃಷ್ಣದೇವರಾಯನ ಮಗಳನ್ನು ಮದುವೆಯಾಗುವವರೆಗೆ ಏಕಾಂತದಲ್ಲಿರಬೇಕೆಂದು ತಿಳಿಸುತ್ತಾನೆ.

ಕೃಷ್ಣದೇವರಾಯನ ಮಗಳನ್ನು ರಾಮರಾಯ ಮದುವೆಯಾಗುವುದಾದರೆ ನನ್ನ ಪಾಲಿಗೆ ಪಟ್ಟದ ರಾಣಿಯಾಗುವ ಭಾಗ್ಯ ಎಲ್ಲಿ ಉಳಿಯಿತು. ನಾನು ಅನ್ಯ ಧರ್ಮೀಯಳೆಂಬ ಕಾರಣಕ್ಕಾಗಿ ಅಲ್ಲವೆ ನನಗೆ ಈ ಸ್ಥಿತಿ ಬಂದಿದ್ದು. ನಾನು ಹಿಂದೂ ಧರ್ಮೀಯನನ್ನು ಕೈಹಿಡಿದಿದ್ದೇ ಅಪರಾಧವಾಯಿತಲ್ಲ ಎಂದುಕೊಳ್ಳುತ್ತಾಳೆ. ತನಗಾದ ಅನ್ಯಾಯಕ್ಕಾಗಿ ಇಂದ್ರೀಯ ಸುಖಗಳನೆಲ್ಲ ಮರೆತು, ನಾನು ಹುಟ್ಟಿದ ಧರ್ಮದಿಂದಲೇ ಅವನ ವಿರುದ್ಧ ಸೇಡು ತೀರಿಸಿಕೊಂಡರೆ ನಾನು ಹುಟ್ಟಿದ ಜಾತಿಗೆ ಸಾರ್ಥಕ ಎಂದು ಭಾವಿಸಿ, ಹಿಂದೆ ಇದ್ದ ಮೇಹರ್ಜಾನಳಲ್ಲ.

"ಆಗ ಆಕೆಯು ಹಿಂದುವಿದ್ದಳು. ಈಗ ಆಕೆಯು ಸುಟ್ಟು ಬೂದಿಯಾಗಿ ಹೋದಳು. ಈಗಿನ ಮೇಹರ್ಜಾನಳು ಮುಸಲ್ಮಾನಳಿರುತ್ತಾಳೆ. ಆಕೆಯು ತನ್ನ ಜ್ಞಾತಿಗಳಾದ ಮುಸಲ್ಮಾನರಂತೆ ರಾಮರಾಯನ ಸಂಗೀತ ದ್ವೇಷ ಮಾಡುವವಳೇ ಸರಿ. ಆಕೆಯು ತಾನು ಬದುಕುವವರೆಗೆ ರಾಮರಾಯನ ಸೇಡು ತೀರಿಸಿಕೊಳ್ಳಲಿಕ್ಕೆ ಯತ್ನಿಸುವವಳೇ ಸರಿ." (ಗಳಗನಾಥ, 1999:41) ಎಂದು ಪ್ರತಿಜ್ಞೆ ಮಾಡುತ್ತಾಳೆ. ಅದನ್ನು ಸಾಧಿಸಲು ಮಸೀದಿಗೆ ಹೋಗುವ ನೆಪದಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಬಿಜಾಪುರಕ್ಕೆ ಹೊರಟು ಹೋಗುತ್ತಾಳೆ.

ಇತ್ತ ರಾಮರಾಯನು ಅವಳನ್ನು ಮದುವೆಯಾಗಲು ನಿರಾಕರಿಸಿದ್ದರೂ ಅವಳ ಪ್ರೀತಿ ಕಡಿಮೆಯಾಗಿರಲಿಲ್ಲ. ಅವಳ ಶೋಧನೆಗಾಗಿ ಸಂಗನಪಲ್ಲಿಗೆ ಹೊರಟಿದ್ದರೂ ಕೂಡ ಮುಸಲ್ಮಾನರ ಪಿತೂರಿಗಳು ನಡೆಯುತ್ತವೆಯೆಂಬುದು ತಿಳಿದು ಬಂದಿದೆ. ಅದನ್ನು ಪರೀಕ್ಷಿಸಿಕೊಂಡು ಬರುತ್ತೇನೆಂದು ಅವಳನ್ನು ಹುಡುಕಿಸುತ್ತಾನೆ. ಮೊದಮೊದಲು ಸಕ್ತಿಯಿಂದ ಶೋಧಕ್ಕೆ ಪ್ರಯತ್ನಿಸಿದನಾದರೂ ದಿನಕಳೆದಂತೆ ಅವನ ಉತ್ಸಾಹವೂ ಕುಗ್ಗಿ ಹೋಯಿತು. 'ಹೋದರೆ ಹೋದಳು. ನಾನೇನು ಆಕೆಯನ್ನು ಬಿಟ್ಟಿದ್ದಿಲ್ಲ. ಸುಖವನ್ನು ಭೋಗಿಸಬೇಕೆಂಬುದು ಆಕೆಯ ಹಣೆಬರದಲ್ಲಿಯೇ ಬರೆದಿಲ್ಲ. ನಾನು ಮಾಡುವದೇನು?' ಎಂದು ತನ್ನ ತಪ್ಪನ್ನು ಸಮರ್ಥಿಸಿಕೊಂಡು ಸುಮ್ಮನಾಗುತ್ತಾನೆ.

ರಾಮರಾಯನು ಕೃಷ್ಣದೇವರಾಯನ ಮಗಳನ್ನು ಮದುವೆಯಾದ. ರಾಮರಾಯನು ತನ್ನ ಅಣ್ಣನಾದ ತಿರುಮಲನನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡ. ಹಾಗೆಯೇ ರಾಜ್ಯದ ಉನ್ನತ ಹುದ್ದೆಗಳು ತನ್ನ ಅನುಕೂಲಸ್ತರಿಗೆ ದೊರೆಯುವಂತೆ ನೋಡಿಕೊಂಡ. ಇದರಿಂದ ಅನೇಕ ಸರದಾರರುಗಳಿಗೆ ಅಸಮಾಧಾನವಾಗುತ್ತದೆ. ಆದರೆ ಅದು ಹೊರಹಾಕುವಂತಿರಲಿಲ್ಲ. ಈ ವೇಳೆಗಾಗಲೇ ಕೃಷ್ಣದೇವರಾಯನು ಬೇನೆಗೆ ತುತ್ತಾಗಿದ್ದನು. ಇಂತಹ ಸಂದರ್ಭದಲ್ಲಿ ಅವನ ಮಗನು ವಿಷ ಪ್ರಯೋಗದಿಂದ ಮರಣಕ್ಕೀಡಾಗುತ್ತಾನೆ. ಪುತ್ರಶೋಕದಿಂದ ಕೆಲದಿನಗಳಲ್ಲಿ ಕೃಷ್ಣದೇವರಾಯನು ಮರಣಹೊಂದಿದನು.

"ಕೃಷ್ಣದೇವರಾಜರಿಗೆ ವಿಜಯನಗರದ ಸಿಂಹಾಸನವು ಅನಾಯಾಸವಾಗಿ ದೊರೆತಿದ್ದಿಲ್ಲ. ಅವರು ತಮಗಿಂತಲೂ ಗಾದಿಯ ಮೇಲೆ ವಿಶೇಷ ಹಕ್ಕು ಇರುವ ತಮ್ಮ ಮೂವರು ತಮ್ಮಂದಿರನ್ನೂ, ಒಬ್ಬ ಅಣ್ಣನ ಮಗನನ್ನೂ ಮಹತ್ವಾಕಾಂಕ್ಷೆಯಿಂದ ಸೆರೆಯಲ್ಲಿಟ್ಟು ವಿಜಯನಗರದ ಪಟ್ಟವೇರಿದ್ದರು." (ಗಳಗನಾಥ, 1999:41)

ತರುವಾಯ ಸೆರೆಮನೆಯಲ್ಲಿದ್ದ ಅಚ್ಯುತರಾಯನೆಂಬುವನು ಪಟ್ಟಾಭಿಷಿಕ್ತನಾಗುತ್ತಾನೆ. ಹಿಂದೆ ತನಗಾದ ಅನ್ಯಾಯಕ್ಕಾಗಿ ಈಗ ರಾಮರಾಯನ ಪಕ್ಷದವರ ಮೇಲೆ ಸೇಡು

ತೀರಿಸಿಕೊಳ್ಳಲು ಮುಂದಾಗುತ್ತಾನೆ. ಇದರಿಂದ ರಾಮರಾಯನು ಕೆಲಕಾಲ ಅಜ್ಞಾತವಾಸ ಅನುಭವಿಸುತ್ತಾನೆ.

ಅಚ್ಯುತರಾಯನು ಸಮರ್ಥ ಅರಸನಲ್ಲ. ಎಲ್ಲಾ ಅಧಿಕಾರವನ್ನು ಮಂತ್ರಿಯಾದ ಹೋಜೆ ತಿರುಮಲರಾಯನಿಗೆ ನೀಡುತ್ತಾನೆ. ಇದರಿಂದ ರಾಜ್ಯದಲ್ಲಿ ರಾಮರಾಯನು ಅವರ ವಿರುದ್ಧ ಜನರ ಬೆಂಬಲದೊಂದಿಗೆ ಬಂಡಾಯವೇಳುತ್ತಾನೆ. ರಾಜ್ಯದಲ್ಲಿನ ಈ ಆಂತರಿಕ ಕಲಹವನ್ನು ಸದುಪಯೋಗ ಮಾಡಿಕೊಳ್ಳಲು ಬಿಜಾಪುರದ ಸುಲ್ತಾನನು ತುಂಗಭದ್ರ ತೀರಕ್ಕೆ ಬಂದಿರುತ್ತಾನೆ. ಪುಕ್ಕಲನಾದ ದೊರೆ ಅಚ್ಯುತರಾಯನು ಸುಲ್ತಾನನ್ನು ಸಂಧಿಗೆ ಕರೆದು ಅವನು ಕೇಳಿದಷ್ಟು ಕಪ್ಪವನ್ನು ಕೊಡಲು ಸಿದ್ಧನಾಗುತ್ತಾನೆ. ಪವಿತ್ರವಾದ ವಿಜಯನಗರದ ಸಿಂಹಾಸನಕ್ಕೆ ಸುಲ್ತಾನನ್ನು ಕರೆಸಿಕೊಂಡದ್ದು ಜನರಿಗೂ ಇಷ್ಟವಾಗಲಿಲ್ಲ. ಆಗ ರಾಮರಾಯನು ಸುಲ್ತಾನನಿಗೆ ನಿನ್ನನ್ನು ಸೈನ್ಯ ಸಮೇತವಾಗಿ ಬಂಧಿಸುವ ಯತ್ನ ನಡೆದಿದೆಯೆಂದು ಹೇಳಿ ಅವನನ್ನು ಸಾಮ್ರಾಜ್ಯ ಬಿಟ್ಟು ಹೋಗುವಂತೆ ಮಾಡುತ್ತಾನೆ. ಇತ್ತ ತಿರುಮಲನ ಮೇಲೆ ದಾಳಿ ಮಾಡಿ ಅವನನ್ನು ಬಂಧಿಸುತ್ತಾನೆ. ಮತ್ತೆ ರಾಜ್ಯ ಅಧಿಕಾರವೆಲ್ಲವೂ ರಾಮರಾಯನ ಕೈಗೆ ಬರುತ್ತದೆ. ಕಾಕತಾಳೀಯವೆಂಬಂತೆ ಅದೇ ಸಂದರ್ಭದಲ್ಲಿ ಅಚ್ಯುತರಾಯನು ಮರಣ ಹೊಂದುತ್ತಾನೆ. ನಂತರ ಸದಾಶಿವರಾಯ ಅಧಿಕಾರದ ಗದ್ದುಗೆ ಏರಿಸಿ ಅವನನ್ನು ನಾಮಮಾತ್ರ ರಾಜನನ್ನಾಗಿಸುತ್ತಾನೆ. ಹೀಗಾಗಿ ರಾಜ್ಯದ ಎಲ್ಲ ಆಗು ಹೋಗುಗಳು ರಾಮರಾಯನ ಅಣತಿಯಂತೆ ನಡೆಯುತ್ತವೆ.

ಇಷ್ಟೆಲ್ಲಾ ಆದರೂ ರಾಮರಾಯನ ಬಗ್ಗೆ ಪ್ರಜೆಗಳಲ್ಲಿದ್ದ ಅಭಿಪ್ರಾಯದ ಬಗ್ಗೆ ಕಾದಂಬರಿಕಾರರು ಹೀಗೆ ಹೇಳುತ್ತಾರೆ.

> "ರಾಮರಾಜನ ವಿಷಯವಾಗಿ ಯಾವತ್ತು ಜನರು ಆದರ ಬುದ್ಧಿಯುಳ್ಳವರಾಗಿದ್ದರು. ಆತನ ಬುದ್ಧಿ ಸಾಮರ್ಥ್ಯದಿಂದಲೇ ವಿಜಯನಗರದ ಸಂರಕ್ಷಣವಾಯಿತೆಂದು ಎಲ್ಲರು ತಿಳಿದಿದ್ದರು. ರಾಮರಾಜನು ಒಳ್ಳೇ ಚತುರನೂ, ಮಹಾಪರಾಕ್ರಮಿಯೂ, ನಿಜವಾದ ಹಿಂದೂ ಧರ್ಮಾಭಿಮಾನಿಯೂ ಎಂಬ ಕೀರ್ತಿ ಎಲ್ಲೆಡೆಗೆ ಹಬ್ಬಿತು." (ಗಳಗನಾಥ, 1999:75)

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ರಾಮರಾಯನಲ್ಲಿ ರಾಜಕೀಯವಾಗಿ ಅನೇಕ ದೋಷಗಳಿದ್ದವು ಎಂಬುದನ್ನು ಈ ಮೊದಲೆ ಹೇಳಲಾಗಿದೆ. ಆದರೂ ಪ್ರಜೆಗಳು ವೈದಿಕ ಧರ್ಮದ ಅನುಯಾಯಿ ಎಂಬ ಕಾರಣಕ್ಕಾಗಿ ರಾಮರಾಯನನ್ನು ಮೆಚ್ಚಿಕೊಂಡಿದ್ದರು.

ಬಿಜಾಪೂರ ಸುಲ್ತಾನರೊಡನೆ ಆದ ಒಪ್ಪಂದದ ಪ್ರಕಾರ ಆ ಸಾಮ್ರಾಜ್ಯದ ವಕೀಲಿಯೊಬ್ಬನನ್ನು ವಿಜಯನಗರದ ರಾಜದರ್ಬಾರದ ಸಂದರ್ಭದಲ್ಲಿ ಇಟ್ಟುಕೊಳ್ಳಬೇಕಾಗಿತ್ತು. ಹೀಗೆ ವಕೀಲಿಯಾಗಿ ಬಂದವನು ಬೇರೆ ಯಾರು ಆಗಿರಲಿಲ್ಲ. ಅವನು ರಾಮರಾಯನ

ಪ್ರೇಯಸಿಯ ಮಗನಾದ ರಣಮಸ್ತಖಾನ. ಇವನು ಕುಂಜವನಲ್ಲಿ ವಾಸವಾಗಿರಲಿಕ್ಕೆ ವ್ಯವಸ್ಥೆ ಮಾಡಲಾಯಿತು. ರಾಮರಾಯನು ವಿಜಯನಗರದ ಸೀಮೆಯೊಳಗೆ ಸಂಶಯಾಸ್ಪದವಾದ ವ್ಯಕ್ತಿಗಳು ಕಂಡುಬಂದಲ್ಲಿ ಅವರನ್ನು ರಾಜ್ಯಕ್ಕೆ ಒಪ್ಪಿಸುವಂತೆ ಆಜ್ಞಾಪಿಸಿದನು. ಆಗ ಬಿಜಾಪುರ ಸುಲ್ತಾನರ ಸ್ತ್ರೀಯೋರ್ವಳು ಇಲ್ಲಿನ ಸಂಗನಪಲ್ಲಿನಯ ದರಗೆಗೆ ದರ್ಶನಕ್ಕೆಂದು ಬರುತ್ತಾಳೆ. ಇಲ್ಲಿನವರು ಮುಸ್ಲಿಮರು ಮಹಿಳೆಯ ವೇಷದಲ್ಲಿ ಬಂದು ಇಲ್ಲಿನ ಸಮಾಚಾರ ತಿಳಿದುಕೊಳ್ಳಲು ಬಂದಿದ್ದಾರೆಂದು, ಅವರನ್ನು ರಾಜದರ್ಬಾರಿಗೆ ಕರೆತರುತ್ತಾರೆ. ಹಿಂದೂಗಳು ಮಹಿಳೆಯರಿಗೆ ತೊಂದರೆ ಕೊಡುವುದಿಲ್ಲ ಎಂಬ ಕಾರಣಕ್ಕಾಗಿ ನೀವು ಈ ವೇಷದಲ್ಲಿ ಬರುತ್ತೀರಿ. ಅದಕ್ಕಾಗಿ ನೀವು ಮಹಿಳೆಯರೋ, ಪುರುಷರೋ ಎನ್ನುವುದನ್ನು ಪರೀಕ್ಷಿಸಬೇಕು. ನೀವು ನಿಮ್ಮ ಬುರುಕಿಗಳನ್ನು ತೆಗೆಯಿರಿ ಎನ್ನುತ್ತಾನೆ ರಾಮರಾಯ. ಅದೇ ಸಂದರ್ಭದಲ್ಲಿ ಅಲ್ಲಿದ್ದ ವಕೀಲಿ ರಣಮಸ್ತಖಾನ್‌ನು ಬುರುಕಿ ತೆಗೆದಿದ್ದು ದೊಡ್ಡ ಅಪರಾಧ. ಅದು ತನ್ನ ಇಸ್ಲಾಂ ಧರ್ಮಕ್ಕೆ ಮಾಡಿದ ಅಪಮಾನ ಎನ್ನುತ್ತಾನೆ. "ನನ್ನ ಶರೀರ ಸಾವಿರಾರು ಚೂರುಗಳಾದರೂ ಚಿಂತೆಯಿಲ್ಲ; ಆದರೆ ನಾನು ಬದುಕಿರುವರೆಗೆ ಈ ಸ್ತ್ರೀಯರ ಮೈಮೇಲಿನ ಬುರುಕಿಗಳನ್ನು ದೂರ ಮಾಡಲಿಕ್ಕಿಲ್ಲ." (ಗಳಗನಾಥ, 1999:93) ಎಂದು ತನ್ನ ಧರ್ಮದ ಮೇಲಿನ ಅಭಿಮಾನದಿಂದ ಹೇಳುತ್ತಾನೆ. ಕೊನೆಗೆ ಆ ಮಹಿಳೆಯರು ಬುರುಕಿ ತೆಗೆಯುತ್ತಾರೆ. ಇದೇ ಸಿಟ್ಟು ಮುಂದೆ ರಣಮಸ್ತಖಾನ್‌ನಲ್ಲಿ ದ್ವೇಷವಾಗುತ್ತದೆ. ಅವಳ ಸೌಂದರ್ಯವನ್ನು ಕಂಡು ರಣಮಸ್ತಖಾನ್‌ನು ಅವಳಿಗೆ ಮನಸೋಲುತ್ತಾನೆ. ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಅವಳನ್ನು ಅಪಮಾನಿಸಿದ ರಾಮರಾಯನನ್ನು ನಾಶ ಮಾಡುವುದಾಗಿಯೂ ಪ್ರತಿಜ್ಞೆ ಮಾಡುತ್ತಾನೆ.

ರಣಮಸ್ತಖಾನನು ಬಿಜಾಪೂರ ಸುಲ್ತಾನರೊಂದಿಗೆ ಗುಪ್ತ ಮಾತುಕತೆ ನಡೆಸಿ, ಆ ಮೂಲಕ ರಾಮರಾಯನನ್ನು ನಾಶ ಪಡಿಸಲು ಸಿದ್ಧನಾಗುತ್ತಾನೆ. ಇತ್ತ ಒಳಸಂಚನ್ನು ಅರಿಯದ ರಾಮರಾಯನು ಪುತ್ರ ವಾತ್ಸಲ್ಯದಿಂದ ರಣಮಸ್ತಖಾನನನ್ನು ತನ್ನ ಚಾರಕನ್ನಾಗಿ ಮಾಡಿಕೊಂಡು, ನಂತರ ಅವನನ್ನೇ ಸೇನಾಧಿಪತಿಯನ್ನಾಗಿ ಮಾಡಿ ಸಂತೋಷಪಡುತ್ತಾನೆ. ರಣಮಸ್ತುಖಾನನು ಮುಸ್ಲಿಮನಾದರೂ ರಾಮರಾಯನಿಗೆ ಹಿಂದೂವಾಗಿ ಕಾಣಿಸುತ್ತಾನೆ, ಆದರೆ ರಣಮಸ್ತುಖಾನನಿಗೆ ರಾಮರಾಯನು ಹಿಂದೂವಾಗಿಯೇ ಕಾಣಿಸುತ್ತಾನೆ. ರಣಮಸ್ತುಖಾನನನ್ನು ಅತಿಯಾಗಿ ಮೇಲೇರಿಸಿದ್ದೇ ತನಗೆ ತಿರುಗು ಬಾಣವಾಗುತ್ತದೆಂದು ಎಂದೂ ಅನಿಸಲಿಲ್ಲ. ದ್ವೇಷವನ್ನು ಸಾಧಿಸುವದಕ್ಕಾಗಿ ಹವಣಿಸುತ್ತಿದ್ದ ರಣಮಸ್ತುಖಾನನಿಗೆ ಇದು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ಇನ್ನೂ ಅನುಕೂಲಕರವಾಯಿತು.

ಅತ್ತ ನಾಲ್ಕು ಜನ ಸುಲ್ತಾನರು ತಮ್ಮ ತಮ್ಮಲ್ಲಿನ ವೈಷಮ್ಯಗಳನ್ನು ಮರೆತು ಒಂದಾಗ ತೊಡಗಿದರು. ಅವರು ಒಂದಾದ ಬಗೆಯನ್ನು ಕಾದಂಬರಿಯಲ್ಲಿ ಹೀಗೆ ಹೇಳಲಾಗಿದೆ.

> "ಅಹಮ್ಮದನಗರದ ಹುಸೇನ ನಿಜಾಮಶಹನು, ತನ್ನ ಮಗಳಾದ ಚಾಂದಬೀಬಿ ಎಂಬವಳನ್ನು ವಿಜಾಪುರದ ಅಲಿ ಆದಿಲಶಹನಿಗೆ ಲಗ್ನಮಾಡಿಕೊಟ್ಟನು.

> ಅಲಿಆದಿಲಶಹನು ತನ್ನ ತಂಗಿಯನ್ನು ಹುಸೇನ ನಿಜಾಮಶಹನ ಮಗನಿಗೆ ಲಗ್ನ ಮಾಡಿಕೊಟ್ಟನು. ಈ ಎಲ್ಲ ಸಂಬಂಧಗಳು ಕೇವಲ ರಾಜಕಾರಣದ ಸಲುವಾಗಿಯೇ ಆದವು." (ಗಳಗನಾಥ, 1999:185)

ಪರಸ್ಪರರ ನಡುವೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದರ ಮೂಲಕ ಬಾದಶಹರನಡುವೆ ಒಕ್ಕಟ್ಟು ಉಂಟಾಯಿತು. ಇಲ್ಲಿ ಹಣ, ರಾಜ್ಯದ ಹಂಚಿಕೆಯಂಥವುಗಳನ್ನಾಧರಿಸಿ ರೂಪುಗೊಂಡ ಒಕ್ಕಟ್ಟು ಬಹುದಿನ ಮುಂದುವರೆಯುವುದಿಲ್ಲ. ಆದರೆ ಧರ್ಮ(ಇಸ್ಲಾಂ)ವನ್ನಾಧರಿಸಿದ ವೈವಾಹಿಕ ಸಂಬಂಧವು ದೀರ್ಘಕಾಲ ಮುಂದುವರೆಯಬಹುದು ಎಂಬ ಆಕಾಂಕ್ಷೆ ಅವರಲ್ಲಿ ಮೂಡಿತು. ಹೀಗೆ ಗೆಲುವಿಗಾಗಿ ಎಲ್ಲ ಮುಸ್ಲಿಮರು ಸಿದ್ಧರಾಗತೊಡಗಿದ್ದರು. ಅವರಿಗೆ ವಿಜಯನಗರದ ಕೆಲವು(ಮುಸ್ಲಿಂ) ಸೈನಿಕರ ಸಹಾಯವಿತ್ತು ಎಂಬುದನ್ನು ಮರೆಯುವಂತಿಲ್ಲ. ರಣಮಸ್ತುಖಾನನು ವಿಜಯನಗರದಲ್ಲಿದ್ದು ಇಲ್ಲಿನ ಸಮಾಚಾರಗಳನ್ನೆಲ್ಲಾ ಆದಿಲ್‌ಶಾಹಿಗಳಿಗೆ ಮುಟ್ಟಿಸುತ್ತಿದ್ದ. ಹೀಗಾಗಿ ಅವರು ವಿಜಯನಗರದ ಮೇಲೆ ದಾಳಿ ಮಾಡಲು ಇನ್ನೂ ಅನುಕೂಲವಾಗತೊಡಗಿತು.

ಆದರೆ ಈ ಮಾಹಿತಿಯು ಗುಪ್ತಚರರ ಮೂಲಕ ರಾಮರಾಯನ ಕಿವಿಗೆ ಬಿದ್ದರೂ, ಆತ ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ.

> "ಮಾಡಲಿ, ಅವರು ಬೇಕಾದದ್ದು ಮಾಡಲಿ, ಈ ಬಾದಶಹನು ಆ ಬಾದಶಹನ ಮಗಳನ್ನು ಲಗ್ನಮಾಡಿಕೊಂಡರೆ, ಆ ಬಾದಶಹನು ಈ ಬಾದಶಹನ ಮಗನಿಗೆ ತನ್ನ ತಂಗಿಯನ್ನು ಕೊಟ್ಟರೆ, ಸೈನ್ಯದ ಸಾಮರ್ಥ್ಯ ಹೆಚ್ಚಿದಹಾಗಾಗುವದೊ? ಆ ಮಕ್ಕಳಿಗೆ ಮಾಡಬೇಕಾಗಿದ್ದ ಒಕ್ಕಟ್ಟನ್ನು ಗಟ್ಟಿಮುಟ್ಟಿಯಾಗಿ ಮಾಡಿಕೊಂಡು ಒಮ್ಮೆಲೆ ಚಿಟ್ಟಿಯ ಹಿಂಡಿನಂತೆ ನಮ್ಮ ಮೇಲೆ ಸಾಗಿಬರಬೇಕೆಂದು ಹೇಳಬೇಕು. ವಿಜಯನಗರದ ರಾಯರನ್ನು ಕೆಣಕುವುದು ಅವರಿಗೆ ಸುಲಭವಾಗಿ ಕಂಡಿದೆ; ಆದರೆ ಕೆಣಕಿ ನೋಡಲಿ, ಚಿಟ್ಟಿಗಳ ಹಿಂಡು ಬೆಂಕಿಯಲ್ಲಿ ಪಟಪಟ ಬಿದ್ದು ನಾಶವಾಗುವಂತೆ, ಅವರ ನಾಶವಾಗಬೇಕಾದೀತು." (ಗಳಗನಾಥ, 1999:184) ಎಂದು ಹೇಳುತ್ತಾನೆ. ಆಗ ದರ್ಬಾರಿನ ಜನರು "ಮಹಾಪ್ರಭೋ, ಹೌದು ಆ ಮುಸಲರ ಗತಿಯು ಹೀಗೆಯೇ ಆಗಬೇಕೆಂದು ಈಶ್ವರಿ ಸಂಕೇತವಿರುತ್ತದೆ, ಅಂತೇ ಅವರಿಗೆ ಅಂಥ ಬುದ್ಧಿಯು ಉತ್ಪನ್ನವಾಗಿರುವುದು, ಆಗಲಿ, ಒಮ್ಮೆ ಈ ಎಲ್ಲ ಮಹಮದೀಯರ ಉಚ್ಛೇದವಾಗಿ ಹೋಗಲಿ. ಅಂದರೆ, ಭರತಖಂಡದಲ್ಲಿ ಸರ್ವತ್ರ ವೈದಿಕಧರ್ಮ ಪ್ರಸಾರವಾಗುವದು." (ಗಳಗನಾಥ, 1999: 184) ಎನ್ನುತ್ತಾರೆ.

ಇದು ಕೇವಲ ದರ್ಬಾರಿನಲ್ಲಿ ಆಡುವ ಮಾತಾಗಿತ್ತು. ಆದರೆ ಯುದ್ಧಕ್ಕೆ ತಕ್ಕಂತಹ ಸಿದ್ಧತೆ ಇರಲಿಲ್ಲ. ಹಾಗೆಯೇ ರಾಮರಾಯನು ತಾನು ತಮ್ಮ ಸೇನಾಧಿಪತಿಗಳಿಗೆ ಬರೆದ

ಪತ್ರಗಳನ್ನು ರಣಮಸ್ತಖಾನನ ಮುಂದೆ ಓದಿಸುತ್ತಿದ್ದನು. ಅದರಲ್ಲಿನ ವಿಷಯಗಳನ್ನು ತಿಳಿದ ರಣಮಸ್ತುಖಾನನು ಆ ಪತ್ರಗಳನ್ನು ಆದಿಲ್‌ಶಾಹಿಗಳಿಗೆ ಮುಟ್ಟುವಂತೆ ರಹಸ್ಯವಾಗಿ ನೋಡಿಕೊಳ್ಳುತ್ತಿದ್ದ. ಇದು ಮಾತ್ರ ರಾಮರಾಯನ ಗಮನಕ್ಕೆ ಬರಲೇ ಇಲ್ಲ. ಬಂದರೂ ನಂಬುತ್ತಿರಲಿಲ್ಲ. ಮಗನೆಂಬ ಮಮಕಾರ ಅವನನ್ನು ಆ ಸ್ಥಿತಿಗೆ ತಂದು ನಿಲ್ಲಿಸಿತ್ತು.

ರಾಮರಾಯನಿಗೆ ಮುಸ್ಲಿಮರಷ್ಟೇ ಅಲ್ಲ, ಸ್ವಜನರಲ್ಲಿ ಬಹುಜನರು ವೈರಿಗಳಿದ್ದರು. ಸದಾಶಿವನನ್ನು ಹೆಸರಿಗೆ ಮಾತ್ರ ರಾಜನನ್ನಾಗಿ ಮಾಡಿ ಸೆರೆಯಲ್ಲಿಟ್ಟು ತಾನೇ ಕಾರಭಾರವನ್ನು ನಡೆಸುತ್ತಿದ್ದ. ವರ್ಷಕ್ಕೊಂದು ಬಾರಿ ಮಾತ್ರ ಸದಾಶಿವನನ್ನು ಸಿಂಹಾಸನದ ಮೇಲೆ ಕೂಡಿಸಿ ಅರಸುತನದ ಮರ್ಯಾದೆಯನ್ನು ಕೊಡುತ್ತಿದ್ದ. ಈ ಕಾರಣದಿಂದಾಗಿ ವಿಜಯನಗರದಲ್ಲಿಯೇ ಇವನ ವಿರೋಧಿಗಳು ಹುಟ್ಟಿಕೊಂಡಿದ್ದರು. ಹಾಗೆಯೇ ರಾಮರಾಯನ ಸೈನ್ಯದಲ್ಲಿದ್ದವರು ಕೇವಲ ಹಿಂದೂಗಳಲ್ಲ. ಅಲ್ಲಿ ಮುಸ್ಲಿಮರು, ಅರಬರು, ಪಠಾಣರು, ತುರ್ಕರು, ತಾಬೂಲದ ಪಾಠಣರು ಹೀಗೆ ಬೇರೆ ಬೇರೆ ಭಾಷೆಯವರಿದ್ದರು. ಅವರು ಹಿಂದೂ ರಾಜ್ಯವನ್ನು ಉಳಿಸುವುದಕ್ಕಿಂತ ಮುಖ್ಯವಾಗಿ ಸೌಲಭ್ಯಾಕಾಂಕ್ಷಿಗಳಾಗಿ ಯುದ್ಧ ಮಾಡುತ್ತಿದ್ದರು. ಈ ಎಲ್ಲ ಅಡೆತಡೆಗಳ ನಡುವೆಯೂ ವೃದ್ಧ ರಾಮರಾಯನು ಅತ್ಯುತ್ಸಾಹದಿಂದ ಯುದ್ಧಕ್ಕೆ ಮುನ್ನುಗ್ಗುತ್ತಿದ್ದ.

"ಶ್ರೀ ವಿಜಯವಿಠ್ಠಲನು, ನಮಗೆ ಅತ್ಯುತ್ತಮ ಪ್ರಸಂಗವನ್ನು ಒದಗಿಸಿಕೊಟ್ಟಿರುತ್ತಾನೆ. ಈ ಪ್ರಸಂಗದಲ್ಲಿ ನಾವು ಭಾರತೀಯ ವೀರರಂತೆ ಯುದ್ಧಮಾಡಿದರೆ, ಭರತಖಂಡದ ತುಂಬ ನಮ್ಮ ಸಾಮ್ರಾಜ್ಯವಾಗಬಹುದು." (ಗಳಗನಾಥ, 1999:195) ಎನ್ನುವ ರಾಮರಾಯನ ಮಾತುಗಳಲ್ಲಿನ 'ಭಾರತೀಯ ವೀರರಂತೆ' ಎಂದಿರುವಲ್ಲಿ ಮೊದಲು ನಮ್ಮ ನಾಡು(ಕನ್ನಡ) ಆ ಮೂಲಕ ರಾಷ್ಟ್ರ(ಭಾರತ)ವನ್ನು ಕಟ್ಟಿಕೊಳ್ಳುವ ಕರೆ ಇದೆ. ಹೀಗೆ ಹಿಂದೂ(ವೈದಿಕ) ಸೈನಿಕರನ್ನು ಯುದ್ಧಕ್ಕೆ ಸನ್ನದ್ಧರನ್ನಾಗಿಸುತ್ತಿದ್ದ. ಹಾಗೆಯೇ–

> "ವೀರರೇ, ಶತ್ರುಗಳು ಈಗ ಮೈಮೇಲೆ ಏರಿಬಂದರೆ ಅವರನ್ನು ಹಿಂದಕ್ಕೆದೂಡುತ್ತ ದೂಡತ್ತ ವಿಜಾಪುರದವರೆಗೆ ಹೋಗಿ ಆ ಪಟ್ಟಣವನ್ನು ಕೈವಶಮಾಡಿಕೊಳ್ಳಬೇಕೆಂಬ ಮಾತನ್ನು ಲಕ್ಷದಲ್ಲಿಟ್ಟು, ನೀವು ಯುದ್ಧಮಾಡತಕ್ಕದ್ದು. ವಿಜಾಪುರವು ಕೈವಶವಾದ ಬಳಿಕದನ್ನು ಸುಲಿಯುವುದಕ್ಕಾಗಿ ನಿಮಗೆ ಐದು ದಿವಸಗಳವರೆಗೆ ಪರವಾನಿಗೆಯನ್ನು ಕೊಡುವೆವು. ಆ ಸುಲಿಗೆಯಲ್ಲಿ ಅವರವರಿಗೆ ಸಿಕ್ಕ ಪದಾರ್ಥಗಳು ಅವರವರವೇ, ಎಂದು ತಿಳಿಯಲಾಗುವುದು; ಎಂದು ನಿಮ್ಮ ನಿಮ್ಮ ಜನರೊಳಗೆ ತಿಳಿಸತಕ್ಕದ್ದು." (ಗಳಗನಾಥ, 1999:223) ಎನ್ನುವ ರಾಮರಾಯನ ಮಾತುಗಳನ್ನು ಗಮನಿಸಿದಾಗ, ಒಂದು ಸಾಮ್ರಾಜ್ಯದ ದೊರೆ ಇನ್ನೊಂದು ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡಾಗ, ಅಲ್ಲಿ ಸುಲಿಗೆ ಮಾಡುವುದು ಆ ಕಾಲದಲ್ಲಿ ಸಹಜವಾಗಿದ್ದಂತೆ ತೋರುತ್ತದೆ.

ಹೀಗೆ ರಾಮರಾಯನು ವೃದ್ಧಾಪ್ಯದಲ್ಲಿಯೂ ಉತ್ಸಾಹದಿಂದ ಯುದ್ಧಕ್ಕೆ ಸನ್ನದ್ಧನಾದ. ಆದರೆ ರಣಮಸ್ತಖಾನನ ಕುತಂತ್ರದ ಮುಂದೆ ಇವನ ಶೌರ್ಯ, ಪರಾಕ್ರಮ, ಸಾಹಸಗಳೆಲ್ಲ ವ್ಯರ್ಥವಾಗಿ ಹೋದವು. ರಣಮಸ್ತಖಾನನು ಆದಿಲ್‌ಶಾಹಿಗಳಿಗೆ ಸಹಾಯಕವಾಗುವಂತೆ ವಿಜಯನಗರದ ದೊಡ್ಡ ಸೈನ್ಯವನ್ನು ಮೂರು ತುಕಡಿಗಳಾಗಿ ವಿಭಾಗಿಸಿ ವಿಜಯನಗರ ಸೈನ್ಯವನ್ನು ದಿಕ್ಕುತಪ್ಪುವಂತೆ ಮಾಡಿದ. ಈ ಎಲ್ಲ ಅನುಕೂಲತೆಯನ್ನು ಪಡೆದ ಮುಸಲರ ಸೈನ್ಯವು ವಿಜಯನಗರ ಸೈನ್ಯವನ್ನು ಯುದ್ಧರಂಗದಿಂದ ಹಿಮ್ಮೆಟ್ಟಿಸಿತು. ಕೊನೆಗೆ ಅಸಹಾಯಕ ಸ್ಥಿತಿಯಲ್ಲಿದ್ದ ರಾಮರಾಯನನ್ನು ನೂರಹಜನಳನ್ನು ಪಡೆದುಕೊಳ್ಳುವುದಕ್ಕಾಗಿ ರಣಮಸ್ತನು ತಂದೆಯೆನ್ನುವುದನ್ನು ಅರಿಯದಿದ್ದರೂ ಚಿಂತೆಯಿಲ್ಲ; ತನ್ನನ್ನು ಮಗನಂತೆ ಗೌರವಿಸಿ ಅತ್ಯಂತ ಆದರ ಪ್ರೀತಿಯಿಂದ ಕಂಡು ತನ್ನ ಏಳ್ಗೆಯನ್ನೇ ಬಯಸಿದ ಆಪ್ತನೆಂದೂ ಭಾವಿಸದೆ, ಕಿಂಚಿತ್ತು ಕರುಣೆ ತೋರದೆ ನಿರ್ದಾಕ್ಷಿಣ್ಯವಾಗಿ ಕೊಲೆಗೈದ. ಇನ್ನೇನು ತನಗೆ ಬೇಕಾದ ನೂರಜಹಾನಳನ್ನು ಪಡೆಯುವುದಕ್ಕಾಗಿ ರಾಮರಾಯನ ರುಂಡವನ್ನು ತೆಗೆದುಕೊಂಡು ಕುಂಜವನಕ್ಕೆ ಬಂದ. ಅಲ್ಲಿ ತನ್ನ ತಾಯಿಯಿಂದ ರಾಮರಾಯನು ತನ್ನ ತಂದೆ ಎಂಬುದನ್ನು ತಿಳಿದು ದಿಙ್ಮೂಢನಾದ. ಕೊನೆಗೆ ತನ್ನ ತಾಯಿ ಹಾರಿದ ಪುಷ್ಕರಣಿಯಲ್ಲಿ ನೂರಜಹಾನಳೊಂದಿಗೆ ಪುಷ್ಕರಣಿಗೆ ಹಾರಿದ.

ಇತ್ತ ರಣರಂಗದಿಂದ ಪಾರಾಗಿ ಬಂದ ತಿರುಮಲ ರಾಯನು ಸೆರೆಯಲ್ಲಿದ್ದ ಸದಾಶಿವರಾಯನನ್ನು ಬಿಡಿಸಿಕೊಂಡು ಇದ್ದ ಬದ್ದ ಸಂಪತ್ತನ್ನೆಲ್ಲ ಏರಿಕೊಂಡು ರಾಜಧಾನಿಯಿಂದ ಹೊರಟುಹೋದ.

> "ಪ್ರತ್ಯಕ್ಷ ಸೇನಾಪತಿಯೇ ಹೀಗೆ ಓಡಿಹೋದ ಬಳಿಕ ಉಳಿದವರು ಏನು ಮಾಡಬೇಕು? ಯಾವನ ಕೈಗೆ ಏನು ಸಿಕ್ಕಿತೋ ಅದನ್ನು ತಕ್ಕೊಂಡು ಜನರು ರಾಜಧಾನಿಗೆ ಶರಣು ಹೊಡೆದು ನಡೆಯಹತ್ತಿದರು. ಪಟ್ಟಣದೊಳಗಿನ ಶೆಟ್ಟರು – ಸಾಹುಕಾರರು ಮಾತ್ರ ಎಲ್ಲಿಗೂ ಹೋಗಲಿಕ್ಕೆ ಬಾರದಾಯಿತು...... ಅವರು ತಮ್ಮ ಸಂಪತ್ತನ್ನೆಲ್ಲ ಹೂಳಿಕೊಂಡು ಕೂತರು..... ಈ ಅರಾಜಕ ಸ್ಥಿತಿಯಲ್ಲಿ ಲಮಾಣಿಗಳು, ಕೊರಚರು ಮುಂತಾದ ಕಾಡು ಜನರು ಹಗಲುಹಾಡೆ ಸಾವುಕಾರರ ಮನೆಗೆ ದಲವಡೆಗಳನ್ನಿಕ್ಕ ಹತ್ತಿದರು." (ಗಳಗನಾಥ, 1999: 223)

ಹೀಗೆ ವಿಜಯನಗರ ಸಂಪತ್ತು ಕೇವಲ ಮುಸಲ್ಮಾನರ ವಶವಾಗದೆ ಸ್ಥಳೀಯರ ವಶವೂ ಆಯಿತು. ನಂತರ ಬಂದ ಮುಸ್ಲಿಮರು ಇದ್ದಬದ್ದನ್ನೆಲ್ಲಾ ಸುಲಿಗೆ ಮಾಡಿ, ದೇವಾಲಯಗಳನ್ನು, ಮೂರ್ತಿಗಳನ್ನು ಹಾಳು ಮಾಡಿದರು. ಹೀಗೆ ಎಂದೂ ಮರೆಯದ ಕನ್ನಡಿಗರ ಮಹಾಸಾಮ್ರಾಜ್ಯ ಹಸ್ತಂಗತವಾಯಿತು.

ವಿಜಯನಗರವು ಯಾವುದನ್ನು ಆದರ್ಶ ಎಂದು ಪರಿಗಣಿಸಿತ್ತೋ ಅದೇ ಅದಕ್ಕೆ ಮುಳುವಾಯಿತು. ಒಂದು, ಮಸೀದಿ ಮಂದಿರಗಳ ನಿರ್ಮಾಣ. ಆದರ್ಶದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ಈ ಮಸೀದಿ ಮಂದಿರಗಳಲ್ಲಿ ಆಯಾ ಧರ್ಮೀಯರು ತಮ್ಮ ಆಚರಣೆಯನ್ನು ಪೂರೈಸಿಕೊಳ್ಳಲಿ ಎನ್ನುವುದು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಸರಿಯೆನಿಸಬಹುದು. ಆದರೆ ಇಲ್ಲಿಂದಲೇ ಆಯಾ ಸಮುದಾಯಗಳು ಒಟ್ಟುಗೂಡುವುದು ಮತ್ತು ಧರ್ಮದ ಹಿನ್ನೆಲೆಯಲ್ಲಿ ಪಿತೂರಿಯನ್ನು ಹೂಡಲು ಇವೇ ಕೇಂದ್ರಗಳಾಗಿದ್ದವು. ವಿಜಯನಗರ ಹಾಗೂ ಮುಸಲ್ಮಾನ ರಾಜ್ಯಗಳ ಮೇರೆಯಲ್ಲಿದ್ದ ಸಂಗನಪಲ್ಲಿ ದರ್ಗವೇ ಇದಕ್ಕೆ ನಿದರ್ಶನ.

ಮಧ್ಯಯುಗದಲ್ಲಿ ಅತ್ಯಂತ ಉಜ್ವಲವಾದ ಕೀರ್ತಿ ಪತಾಕೆಯಿಂದ ಬೆಳಗಿದ ವಿಜಯನಗರ ಸಾಮ್ರಾಜ್ಯವು, ರಾಜ್ಯತ್ವಕ್ಕಾಗಿ ನಡೆದ ಆಂತರಿಕ ಕಲಹಗಳು, ಪರಸ್ಪರ ದ್ವೇಷ ಅಸೂಯೆಗಳು, ಮೋಸ ವಂಚನೆಗಳು, ನಂಬಿಕೆ ದ್ರೋಹಿಗಳಾದ ಅನ್ಯ ಧರ್ಮೀಯ ಸೈನಿಕರು, ಅಸಮರ್ಥ ರಾಜರ ಆಡಳಿತ, ಅಹಂಭಾವದಿಂದ ಕನ್ನಡ ಸೈನಿಕರು, ಎಲ್ಲಕ್ಕೂ ಮಿಗಿಲಾಗಿ ಸ್ತ್ರೀಲೋಲುಪತೆ ಮತ್ತು ವಿಲಾಸಿ ಪ್ರಿಯತೆ ಇವುಗಳೆಲ್ಲವೂ ಈ ಸಾಮ್ರಾಜ್ಯದ ವಿನಾಶಕ್ಕೆ ಹೇಗೆ ಕಾರಣವಾದವು ಎಂಬುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳ ಪರಿಹಾರವೇ ಒಂದು ಸಮೃದ್ಧವಾದ ಸಮಗ್ರ ರಾಷ್ಟ್ರ ನಿರ್ಮಾಣಕ್ಕೆ ಸಾಧ್ಯ ಎನ್ನುವಂತೆ ಅವುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಚರಿತ್ರೆಯಲ್ಲಾದ ಇಂತಹ ತಪ್ಪುಗಳನ್ನು ಸಮಕಾಲೀನ ಸಂದರ್ಭದಲ್ಲಿ ಮರುಕಳಿಸಿದಂತೆ ನೋಡಿಕೊಳ್ಳಬೇಕು. ಹಾಗೆಯೇ ಅವುಗಳು ಭವಿಷ್ಯತ್ತನ್ನು ರೂಪಿಸಿಕೊಳ್ಳಲು ಪಾಠಗಳಾಗಬೇಕು ಎಂಬ ಆಶಯವು ಕಾದಂಬರಿಯ ಉದ್ದಕ್ಕೂ ಗೋಚರಿಸುತ್ತದೆ.

**ಕುಮುದಿನಿ (1913):**

ವಿಜಯನಗರ ಸಾಮ್ರಾಜ್ಯವು ಸುಲ್ತಾನದ ದಾಳಿಯಿಂದ ಅವನತಿ ಹೊಂದಿದ 50 ವರ್ಷಗಳ ನಂತರ ಅಲ್ಲಿನ ರಾಜವಂಶಿಯರು ಚಂದ್ರಗಿರಿಯನ್ನು ಕೇಂದ್ರವಾಗಿಸಿಕೊಂಡು ಆಡಳಿತ ನಡೆಸುತ್ತಿದ್ದ ಘಟನೆಯು ಈ ಕಾದಂಬರಿಯ ಕಥಾವಸ್ತು. ಆನೆಯಂಥ ವಿಜಯನಗರ ಸಾಮ್ರಾಜ್ಯ ಕಳಕೊಂಡು, ಬಾಲದಂಥ ಚಂದ್ರಗಿರಿ ಸಂಸ್ಥಾನಕ್ಕೆ ಬಡಿದಾಡಿದ ಈ ಕಥೆಯನ್ನು ಇಲ್ಲಿ ಬಳಸಿಕೊಂಡಿರುವುದರಿಂದ ಇದಕ್ಕೆ 'ಬಾಲಕ್ಕೆ ಬಡಿದಾಟ' ಎಂದೂ ಕರೆದಿದ್ದೇನೆ ಎಂದು ಗಳಗನಾಥರು ಈ ಕಾದಂಬರಿಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಇದೇ ವಸ್ತುವನ್ನಿಟ್ಟುಕೊಂಡು ಗರುಡಸದಾಶಿವರಾಯರು 'ಯಚ್ಚಮ ನಾಯಕ'ಎನ್ನುವ ನಾಟಕವನ್ನು, ನಾಗೇಶರವರು 'ಎಚ್ಚಮನಾಯಕ' ಎನ್ನುವ ಕಾದಂಬರಿಯನ್ನು ರಚಿಸಿದ್ದಾರೆ. ಈ ಮೂರು ಪಠ್ಯಗಳ ಅನೇಕ ಸಂಗತಿಗಳಲ್ಲಿ ಸಾಮ್ಯತೆಗಳಿವೆ. ಈಗಾಗಲೇ ಅವುಗಳನ್ನು ವಿಸ್ತೃತವಾದ ಚರ್ಚಿಸಿರುವುದರಿಂದ ಈ ಕಾದಂಬರಿಯಲ್ಲಿನ ಕೆಲ ಅಂಶಗಳನ್ನು ಮಾತ್ರ ವಿಶ್ಲೇಷಿಸಲಾಗಿದೆ.

ವೆಂಕಟಪತಿರಾಯನ ಮರಣದ ನಂತರ ಆ ಸಿಂಹಾಸನವನ್ನು ಅವನ ಸಹೋದರನ ಮಗ ಚಿಕ್ಕರಾಯ ಅಲಂಕರಿಸಿದ. ಬ್ರಾಹ್ಮಣ ಪುತ್ರರೋರ್ವನನ್ನು ತನ್ನ ಮಗುವೆಂದು ಹೇಳಿದ್ದ ಬಾಯಮ್ಮನಿಗೆ ಇದು ಸಹಿಸದಾಯಿತು. ಜಗರಾಯರನು ಕುತಂತ್ರ ನಡೆಸಿ ರಾಜನನ್ನು ಸೆರೆಯಲ್ಲಿಟ್ಟು ಬಾಯಮ್ಮನ ತನ್ನ ಮಗನೆಂದು ಹೇಳಿದವನನ್ನು ಪಟ್ಟಕ್ಕೆ ಕೂರಿಸಿದ. ಇದರಿಂದ ಎಚ್ಚಮನಾಯಕನು ಕೋಪಗೊಂಡನು. ಪರಮಪವಿತ್ರವಾದ ಆ ಸಿಂಹಾಸನಕ್ಕೆ ಅನ್ಯ ಜಾತಿಯವನನ್ನು ತಂದು ಕೂರಿಸುವುದು ಅವನಿಗೆ ಸರ್ವತಾ ಇಷ್ಟವಿರಲಿಲ್ಲ. ಸೆರೆಯಲ್ಲಿದ್ದ ಅರಸ ಮತ್ತು ಅವರ ಪರಿವಾರವನ್ನು ಬಿಡಿಸಲು ಪ್ರಯತ್ನ ಮಾಡಿದ. ಅಗಸನ ಸಹಾಯದಿಂದ ರಾಜಕುಮಾರನನ್ನು ಮಾತ್ರ ಸೆರೆಯಿಂದ ಬಿಡಿಸಲು ಯಶಸ್ವಿಯಾದ. ಸೆರೆಮನೆಯಲ್ಲಿದ್ದ ರಾಜಪರಿವಾರವನ್ನೆಲ್ಲ ಕೊಲ್ಲಲು ಆಜ್ಞೆ ಮಾಡಲಾಯಿತು. ಚಿನ್ನ ಓಬಲರ ಒತ್ತಾಯಕ್ಕೆ ಮಣಿದ ರಾಜ ತನ್ನ ಪರಿವಾರವನ್ನು ತಾನೇ ಕೊಂದು, ತಾನೂ ಆತ್ಮಹತ್ಯೆ ಮಾಡಿಕೊಂಡ. ಎಚ್ಚಮನಾಯಕನು ಜಗರಾಯನ ಸೈನ್ಯವನ್ನು ಸೋಲಿಸಿ ಚಿಕ್ಕರಾಯನ ಮಗನಿಗೆ ಪಟ್ಟ ಕಟ್ಟಿದ.

ಸಾಮ್ರಾಜ್ಯನಿಷ್ಠ ಸೇವಕನಾದ ಎಚ್ಚಮ ನಾಯಕನ ಶೌರ್ಯ, ಸಾಹಸಗಳು ಈ ಕಾದಂಬರಿಯಲ್ಲಿ ಮೂಡಿಬಂದಿವೆ. ಎಚ್ಚಮನನ್ನು ಕಥಾನಾಯಕನ್ನಾಗಿ ಮಾಡಿಕೊಂಡು, ಅವನಿಗೆ ತಕ್ಕುದಾದ ಕುಮುದಿನಿಯನ್ನು ಕಾದಂಬರಿಕಾರರು ಸೃಷ್ಟಿಸಿದ್ದಾರೆ. ಕುಮುದಿನಿಯು ಎಚ್ಚಮನಾಯಕನೊಂದಿಗೆ ಸೇರಿಕೊಂಡಾಗಿನಿಂದ ಕಾದಂಬರಿಯ ಕೊನೆಯ ವರೆಗೆ ಒಂದಿಲ್ಲೊಂದು ಕಡೆಯಿಂದ ಸಹಾಯಕಳಾಗಿ ನಿಲ್ಲುತ್ತಾಳೆ.

ಸಾಮ್ರಾಜ್ಯನಿಷ್ಠ ಎಚ್ಚಮ ನಾಯಕನು ಪಂಪಾಕ್ಷೇತ್ರಕ್ಕೆ ಬಂದಾಗ ಹಾಳು ಹಂಪೆಯನ್ನು ನೋಡಿ ಶ್ರೀವಿರೂಪಾಕ್ಷನ ಸನ್ನಿಧಿಯಲ್ಲಿ ನಿಂತು ಹೀಗೆನ್ನುತ್ತಾನೆ.

> "ದೇವಾದಿದೇವನೇ, ಏನು ನಿನ್ನ ವಿಚಿತ್ರ ಚರಿತ್ರವಿದು! ನಿನ್ನ ತಂತ್ರದಿಂದ ಕ್ಷಣದಲ್ಲಿ ತಿಪ್ಪೆಯು ಉಪ್ಪರಿಗೆಯಾಗುವುದು. ಈಗ ಐವತ್ತು ವರ್ಷಗಳ ಹಿಂದೆ ವೈಭವ ಶಿಖರವನ್ನು ಮುಟ್ಟಿದ್ದ ವಿಜಯನಗರದ ರಾಜ್ಯವು ಈಗ ಮಣ್ಣುಗೂಡಿ ಹೋಗಿರುವುದಲ್ಲ! ಅದನ್ನು ಸುಮಾರು ಮುನ್ನೂರು ವರ್ಷಗಳ ಹಿಂದೆ ಶ್ರೀ ವಿದ್ಯಾರಣ್ಯರು ನಿನ್ನ ಆಜ್ಞೆಯಿಂದಲ ಹುಕ್ಕರಾಜನ ಕೈಯಿಂದ ಸ್ಥಾಪಿಸಲಿಲ್ಲವೆ? ಆ ರಾಜ್ಯ ಸ್ಥಾಪಮನೆಗಾಗಿ ಆ ಮಹಾತ್ಮರು ತಮ್ಮ ತಪಃಪ್ರಭಾವದಿಂದ ತಾವಿರುವ ಪ್ರದೇಶದ ಮೇಲೆ ಮೂರೂ ಮುಕ್ಕಾಲು ಗಳಿಗೆ ಬಂಗಾರದ ಮಳೆಯನ್ನು ಸುರಿಸಿದರಂತೆ!"(ಗಳಗನಾಥ: 1999:243)

ಈ ಉಲ್ಲೇಖವನ್ನು ಗಮನಿಸಿದಾಗ ಸುವರ್ಣ ವೃಷ್ಟಿಯ ಸಂದರ್ಭದಲ್ಲಿ ಭುವನೇಶ್ವರಿಯನ್ನು ನೆನಪಿಸಿಕೊಳ್ಳದೇ, ವಿರೂಪಾಕ್ಷನ ಕೃಪೆಯನ್ನೇ ಕಾದಂಬರಿಕಾರರು ಸ್ಮರಿಸುತ್ತಾರೆ. ಅಂದರೆ ಆ ಸಂದರ್ಭದಲ್ಲಿ ಭುವನೇಶ್ವರಿಯ ಪರಿಕಲ್ಪನೆ ಇನ್ನು ಅಷ್ಟಾಗಿ ಬೆಳೆದಿರಲಿಲ್ಲವೆನಿಸುತ್ತದೆ.

ಹಾಗೆಯೇ ಮುಂದುವರೆದು ಎಚ್ಚಮ ನಾಯಕನು ವಿರೂಪಾಕ್ಷನಲ್ಲಿ ಹೀಗೆ ಹೇಳುತ್ತಾನೆ.

"ನೀನೇ ಹೀಗೆ ಕಣ್ಣುಮುಚ್ಚಿಕೊಂಡು ನಡೆಯಹತ್ತಿದ ಬಳಿಕ ನಮ್ಮಂಥ ಕ್ಷುದ್ರರು ಮಾಡುವುದೇನು? ವಿಜಯನಗರದ ಹಾಳು ಬೀದಿಗಳಲ್ಲಿ ಉರುಳಾಡುತ್ತಿರುವ ದೇವರ ಅನಂತ ಮೂರ್ತಿಗಳನ್ನು ನೆನಿಸಿಕೊಂಡರೆ, ಆ ಕಲ್ಲಿನ ಮೂರ್ತಿಗಳು ಕಲ್ಲೇ ಅಲ್ಲದೆ ದೇವರಲ್ಲೆಂಬ ಮಾತು ಮನದಟ್ಟಾಗುತ್ತದೆ. ಹಾಯ್ ಹಾಯ್! ಹತಭಾಗಿಗಳಾದ ಕನ್ನಡಿಗರೇ, ನಿಮ್ಮ ಮೊರೆಯನು ಕೇಳುವವರಾರು ಇಲ್ಲದಾಯಿತು. ಎಲೈ ಅನಾಥ ರಕ್ಷಕನೆಂದು ಹೊಗಳಿಸಿಕೊಳ್ಳುವ ಮೃತ್ಯುಂಜಯನೇ, ತಾಳಿಯ ಕೋಟೆಯ ಆ ಭಯಂಕರ ಯುದ್ಧವು ಮುಗಿದ ಬಳಿಕ ದುಷ್ಟರಾದ ಮುಸಲ್ಮಾನರು ಲಕ್ಷಾವಧಿ ಹಿಂದೂ ಪ್ರಜೆಗಳ ತಲೆಗಳನ್ನು ಕುರಿಗಳಂತೆ ಕರಕರ ಕೊಯ್ಯುವಾಗ ನಿನಗೆ ಸ್ವಲ್ಪವಾದರೂ ದಯವು ಬರಲಿಲ್ಲವಲ್ಲ!"(ಗಳಗನಾಥ, 1999:244) ಎಂದು ನಿಂದಿಸುತ್ತಾನೆ. ಆದರ್ಶ ಸಾಮ್ರಾಜ್ಯದ ಅವನತಿಯ ಮುಂದೆ ದೇವರು ರಕ್ಷಕನಾಗಲಿಲ್ಲವಲ್ಲ ಎಂಬ ಕೊರಗು ಸಾಮ್ರಾಜ್ಯನಿಷ್ಠ ಸೇವಕನಾದ ಎಚ್ಚಮನಾಯಕನಲ್ಲಿದೆ.

ವಿಜಯನಗರದ ಸಂಪತ್ತು ಅನ್ಯ ರಾಜರನ್ನು ಮಾತ್ರವಲ್ಲ ರಾಜವಂಶೀಯರಲ್ಲಿ ಕೂಡ ಆಸೆಯನ್ನು ಹುಟ್ಟಿಸಿತ್ತು. ಅದರ ಆಕರ್ಷಣೆಯಿಂದಾಗಿಯೇ ಈ ಸಾಮ್ರಾಜ್ಯದಲ್ಲಿ ಅಂತಃಕಲಹಗಳು ಹುಟ್ಟಿಕೊಂಡವು ಎನ್ನುವ ಅಂಶ ಈ ಕಾದಂಬರಿಯಲ್ಲಿ ಕಂಡುಬರುತ್ತದೆ. ಚಂದ್ರಗಿರಿಗೆ ವಿಜಯನಗರದ ಸಂಪತ್ತನ್ನು ತೆಗೆದುಕೊಂಡು ಹೋದದ್ದು ಕಡಿಮೆಯೇನಲ್ಲ. ಅಲ್ಲಿನ ಅಪಾರವಾದ ಸಂಪತ್ತೇ ಜಗರಾಯನಂಥವರನ್ನು ಆಕರ್ಷಿಸಿತು. ಸಂಪತ್ತಿನ ಮೇಲಿನ ಮೋಹದಿಂದಾಗಿ ಎಂತಹ ರಾಜದ್ರೋಹ ಕಾರ್ಯಕ್ಕೂ ಕೈ ಹಾಕಲು ಅವರು ಮುಂದಾದರು. ಇಂತಹ ಸಂದರ್ಭದಲ್ಲಿ ಸಾಮ್ರಾಜ್ಯ ನಿಷ್ಠ ಎಚ್ಚಮ ನಾಯಕನ ಮತ್ತು ಆತನ ಸಹಚರರ ಕೆಚ್ಚೆದೆಯ ಸಾಹಸವು ಕನ್ನಡಿಗರ ಅನನ್ಯತೆಯನ್ನು ಹೇಳುವಲ್ಲಿ ಸಹಕಾರಿಯಾಗುತ್ತವೆ.

**ಮಾಧವ ಕರುಣಾವಿಲಾಸ : (1923)**

ವಿಜಯನಗರ ಸಾಮ್ರಾಜ್ಯದ ಆರಂಭದ ಇತಿಹಾಸವನ್ನು ಹೇಳುವದರೊಂದಿಗೆ ವಿದ್ಯಾರಣ್ಯರ ಮಹತ್ವವನ್ನು ಪರಿಚಯಿಸುವ 60 ಪ್ರಕರಣಗಳ ಬೃಹತ್ ಕಾದಂಬರಿ ಇದಾಗಿದೆ. ಕಾದಂಬರಿಯ ರಚನೆಯ ಬಗ್ಗೆ ಗಳಗನಾಥರು ಪ್ರಸ್ತಾವನೆಯಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ.

"ಪುಣ್ಯವಂತರೇ, ನಾನೂ ನಿಮ್ಮ ಕಾಲದವನೇ; ಅಂದಬಳಿಕ ಈಗ 600 ವರ್ಷಗಳ ಹಿಂದೆ ಆಗಿಹೋಗಿರುವ ಮಾಧವಾಚಾರ್ಯರನ್ನು ನಿಮ್ಮಂತೆ ನಾನೂ ಕಂಡವನಲ್ಲ. ಹೀಗಿರುವಾಗ, ಅವರನ್ನು ಕಂಡವರಾಗಲಿ, ಸ್ವತಃ ಅವರೇ ಆಗಲಿ ಆಗಿನ ಪ್ರಸಂಗವನ್ನು ಕುರಿತು ನನ್ನನ್ನು ಪ್ರೇರಿಸದಿದ್ದರೆ ನಾನಾದರೂ ಏನು ಬರೆಯಬೇಕು? ಆದ್ದರಿಂದ ಪ್ರತ್ಯಕ್ಷ ಮಾಧವಾಚಾರ್ಯರೇ ಕರುಣಿಸಿ ಪ್ರೇರಕರಾಗಿ ನನ್ನ ಕೈಯಿಂದ ಈ ಕಾದಂಬರಿಯನ್ನು ಬರೆಸಿರುವುದರಿಂದ, ಇದರ ವಿಷಯವಾಗಿ ಕನ್ನಡಿಗರು ನೀವು ಸರ್ವಥಾ ಅವಿಶ್ವಾಸಪಡತಕ್ಕದ್ದಲ್ಲ. ಕನ್ನಡಿಗರನ್ನು

ಹಿಂದಕ್ಕೆ ಉದ್ಧರಿಸಿದ ಮಹಾತ್ಮರಾದ ಆ ಮಾಧವಾಚಾರ್ಯರು ಈಗಾದರೂ ಕನ್ನಡಿಗರೊಡನೆ ಇಡಿಯ ಭರತ ಭೂಮಿಯನ್ನೇ ಜಾಗ್ರತಗೊಳಿಸುವುದಕ್ಕಾಗಿ ನನ್ನ ಮುಖಾಂತರ ಈ ಕಾದಂಬರೀ ರೂಪದಿಂದ ಬೋಧಿಸಿರುವರೆಂದು ತಿಳಿದು ನೀವು ಜಾಗ್ರತರಾಗತಕ್ಕದ್ದು." (ಗಳಗನಾಥ, 1999:ಪ್ರಸ್ತಾವನೆ 5)

ಈ ಕಾದಂಬರಿ ರಚನೆಯ ವೇಳೆಗೆ ವಿಜಯನಗರ ಚರಿತ್ರೆಗೆ ಸಂಬಂಧಿಸಿ ಸಾಕಷ್ಟು ಮಾಹಿತಿ ಲಭ್ಯವಾಗಿರಲಿಲ್ಲ. ಅದಕ್ಕಾಗಿ ಓದುಗರು ನಂಬುವ ರೀತಿಯಲ್ಲಿ ಈ ಕಾದಂಬರಿಯನ್ನು ರಚಿಸಿದ್ದನ್ನು ಗಳಗನಾಥರು ಹೇಳಿದ್ದಾರೆ. ರಾಷ್ಟ್ರವನ್ನು ಪರತಂತ್ರದಿಂದ ಬಿಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಜನರನ್ನು ಜಾಗ್ರತರನ್ನಾಗಿಸಲು ಮಾಡಿರುವ ಪ್ರಯತ್ನದ ಫಲವಾಗಿ ಈ ಕಾದಂಬರಿ ಮೂಡಿಬಂದಿದೆ.

ಈ ಬೃಹತ್ ಕಾದಂಬರಿಯ ಕುರಿತು ಹಲವಾರು ಜನ ವಿಮರ್ಶಕರು, ಸಂಶೋಧಕರು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

"ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಯಂಥ ವಸ್ತು ಸಹಜವಾಗಿಯೇ ಆಕರ್ಷಕವಾಗಬಹುದಿತ್ತು. ಆದರೆ ಕಥಾವಸ್ತು ಗಳಗನಾಥರ ಶಕ್ತಿಯನ್ನು ಮೀರಿ ದೊಡ್ಡದಾಯಿತೋ, ಅಥವಾ ತತ್ವ ಧರ್ಮಗಳ ಮೇಲಿನ ದೀರ್ಘ ಚರ್ಚೆಗಳಿಂದ ಅವರೇ ಅದನ್ನು ದೊಡ್ಡದಾಗಿಸಿದರೋ ಹೇಳುವುದು ಬಿಗಿಯಾಗಿದೆ."(ಕೀರ್ತಿನಾಥ ಕುರ್ತಕೋಟಿ, 2002: 175)

ಗಳಗನಾಥರು ಐತಿಹಾಸಿಕ ನಿರೂಪಣೆಯನ್ನು ಕಲ್ಪನೆಗೆ ಒಗ್ಗಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಗುರುತಿಸಿದ್ದಾರೆ. ಕೃಷ್ಣಮೂರ್ತಿ ಕಿತ್ತೂರು ಅವರು ಗಳಗನಾಥರ ಈ ಕಾದಂಬರಿಯ ಕುರಿತು–

"ಇದರಲ್ಲಿ ಇತಿಹಾಸಕ್ಕಿಂತ ಲೇಖಕರ ಕಲ್ಪನೆಯೇ ಪ್ರಧಾನವಾಗಿ ಕಾದಂಬರಿನ್ನು ರೂಪಿಸಿದೆ. ಅಲ್ಲದೆ ಇದರಲ್ಲಿ ನಿರೂಪಿತವಾದ ಅನೇಕ ಐತಿಹಾಸಿಕ ಘಟನೆಗಳೂ ಕೂಡ ಖಚಿತವಾಗಿ ನಿರ್ಣೀತವಾದ ಐತಿಹಾಸಿಕ ಸತ್ಯಘಟನೆಗಳಲ್ಲ."(ಕೃಷ್ಣಮೂರ್ತಿ ಕಿತ್ತೂರು, 1978:243) ಎಂದು ಹೇಳಿದ್ದಾರೆ. ಕಾದಂಬರಿಯಲ್ಲಿ ಉಕ್ತವಾಗಿರುವ ವಿಚಾರಗಳನ್ನು ಗಮನಿಸಿದಾಗ ಕಿತ್ತೂರರ ಅಭಿಪ್ರಾಯ ಸಮಂಜಸವಾದುದೆನಿಸುತ್ತದೆ.

"ಗಳಗನಾಥರ ವೈದಿಕ ಶ್ರದ್ಧೆ, ಪುನರುತ್ಥಾನವಾದೀ ಆಶಯ ಮತ್ತು ಈ ಬಗೆಯ ಕಾದಂಬರೀ ರೂಪಕ್ಕೆ ಸಂಬಂಧವಿದೆ. 3 ಅಂಶಗಳು ಇಲ್ಲಿ ಪ್ರಧಾನವಾಗಿವೆ.

1. ವರ್ಣಾಶ್ರಮ ಧರ್ಮದ ಪಾಲನೆ.
2. ಕರ್ನಾಟಕ ಜಾಗೃತಿ.
3. ಧಾರ್ಮಿಕ ಸಂವಿಧಾನವನ್ನು ವಿಚಲಿತಗೊಳಿಸದೆಯೇ ಒಗ್ಗಟ್ಟಿನ ಸಾಧನೆ." (ಶಿವರಾಮ ಪಡಿಕ್ಕಲ್, 2001: 205) ಎಂದು ಶಿವರಾಮ ಪಡಿಕ್ಕಲ್ ಅಭಿಪ್ರಾಯ ಪಟ್ಟಿದ್ದಾರೆ.

ವೈದಿಕ ಧರ್ಮದ ನೆರಳಿನಲ್ಲಿ ಅರಳಿದ ಈ ಕಾದಂಬರಿಯು ಧರ್ಮದ ಚೌಕಟ್ಟಿನಲ್ಲಿಯೇ ಮುಂದುವರೆದು ಆ ಮೂಲಕ ನಾಡಿನ ನಿರ್ಮಾಣದ ಗುರುತನ್ನು ಹುಡುಕುವ ಪ್ರಯತ್ನ ಮಾಡಿರುವುದನ್ನು ಇವರು ಗುರುತಿಸಿದ್ದಾರೆ.

ಜಿ.ಎಚ್.ನಾಯಕರು ಮಾಧವ ಕರುಣಾವಿಲಾಸದಲ್ಲಿನ ಧರ್ಮದ ಬಗೆಗಿನ ದೀರ್ಘವಾದ ಚರ್ಚೆ, ಜಾತಿಯತೆಯ ಬಗ್ಗೆ ನಡೆಯುವ ಚರ್ಚೆ, ಉಪದೇಶಗಳು ಕಾದಂಬರಿಗೆ ಪೋಷಕವಾಗಿಲ್ಲ ಎಂದು ಹೇಳಿದ್ದಾರೆ. ಶ್ರೀನಿವಾಸ ಹಾವನೂರರು ಒಂದು ಅರ್ಥದಲ್ಲಿ ಈ ಕಾದಂಬರಿ ಮಹಾಭಾರತವೇ ಆಗಿದೆ ಎನ್ನುತ್ತಾರೆ. ಸಾಲಿ ರಾಮಚಂದ್ರರಾಯರು ಕನ್ನಡಿಗರು ತಮ್ಮನ್ನೇ ಮರೆತಿದ್ದ ಸಂದರ್ಭದಲ್ಲಿ ಬಂದ ಈ ಕಾದಂಬರಿಯು ಕನ್ನಡಿಗರಲ್ಲಿ ಜಾಗ್ರತೆಯನ್ನುಂಟು ಮಾಡಿದ್ದು ಎಂದಿದ್ದಾರೆ. ಹೀಗೆ ಹಲವು ವಿದ್ವಾಂಸರು ಮಾಧವ ಕರುಣಾವಿಲಾಸದ ಕಲ್ಪಿತ ಇತಿಹಾಸ ಹಾಗೂ ತತ್ವಮಥನವನ್ನು ಕುರಿತು ಹೇಳಿದ್ದಾರೆ. ಆದರೂ ಈ ಅಧ್ಯಯನಕ್ಕೆ ಪೂರಕವಾಗುವ ಅಂಶಗಳ ಹಿನ್ನೆಲೆಯಲ್ಲಿ ಕಾದಂಬರಿಯಲ್ಲಿ ವ್ಯಕ್ತವಾಗಿರುವ ಅಂಶಗಳನ್ನು ಇಲ್ಲಿ ಗುರುತಿಸಲಾಗಿದೆ.

ಮಾಧವರ ಧರ್ಮ ರಕ್ಷಣೆಯ ಪ್ರಯತ್ನದಿಂದ ವಿಜಯನಗರ ಉದಯವಾದುದ್ದರ ಬಗೆಗೆ ಕಾದಂಬರಿಯಲ್ಲಿ ಹೀಗೆ ಹೇಳಲಾಗಿದೆ. "ಕಾಲ ಮಹಿಮೆಯಿಂದ ಕನ್ನಡಿಗರು ನೀಚರ ಸ್ವಾರ್ಥಕ್ಕೂ, ಅಂತಃಕಲಹಗಳಿಗೂ ಗುರಿಯಾಗಿ, ಒಕ್ಕಟ್ಟು ಕಳೆದುಕೊಂಡಿರುವರು. ಸದ್ಗುಣಗಳನ್ನು ಹಾಳು ಮಾಡಿಕೊಂಡಿರುವರು. ಈ ಹೀನಸ್ಥಿತಿಯು ಒದಗಲಿಕ್ಕೆ ಸತ್ಸಂಗದ ಅಭಾವವೇ ಕಾರಣವು." (ಗಳಗನಾಥರು, 1999:15) ಇಂತಹ ಸಂದರ್ಭದಲ್ಲಿ ಮಾಧವರು ಬಂದು ಜನರಲ್ಲಿ ಧರ್ಮದ ಬಗೆಗೆ ತಿಳುವಳಿಕೆ ಮೂಡಿಸಿ ದೈವಭಕ್ತಿ, ನಿಸ್ವಾರ್ಥ ಬುದ್ಧಿ ಹಾಗೂ ಒಗ್ಗಟ್ಟು ಮೂಡಿಸಿದರು ಎನ್ನುವುದನ್ನು ಗಳಗನಾಥರು ಈ ಕಾದಂಬರಿಯಲ್ಲಿ ಹೇಳಿದ್ದಾರೆ. ಮತ್ತು ಕನ್ನಡ ಜನರಿಗೆ ಹೀನಸ್ಥಿತಿ ಉಂಟಾಗಲು ನೀಚ ಸ್ವಾರ್ಥಪರತೆ, ಹೇಡಿತನ, ವಂಚಕತನ, ಸದಭಿಮಾನ ಶೂನ್ಯತೆ, ಅನೇಕತ್ವ ಅಲಸ್ಯ, ಸ್ವಚ್ಛಂದವೃತ್ತಿ ಗುಣಗಳು ಕಾರಣವಾಗಿವೆ ಎನ್ನುವುದನ್ನು ತಿಳಿಸುತ್ತಾರೆ.

ಮಾಧವರು ಹಿಂದೂಗಳ ಮೇಲೆ ಮುಸಲ್ಮಾನರು ನಡೆಸುತ್ತಿದ್ದ ಅಮಾನವೀಯ ಕೃತ್ಯಗಳನ್ನು ಕಂಡು ಕನಿಕರದಿಂದ ಕುದ್ದು ಹೋಗಿದ್ದಾರೆ. "ಕರ್ನಾಟಕ ಭೂಮಾತೆಯೇ, ನೀನು ತೇಜೋಹೀನಳಾದೆಯಾ? ವೀರಪುತ್ರರು ನಿನ್ನಲ್ಲಿ ಹುಟ್ಟದಾದರೆ? ನಮ್ಮಂಥ ಕೈಲಾಗದವರನ್ನು ಹಡೆದು ನೀನು ವ್ಯರ್ಥವಾಗಿ ದಣಿದೆ!"(ಗಳಗನಾಥರು, 1999:22) ಎಂದು ತಮ್ಮ ಶಾಸ್ತ್ರ ಪಾಂಡಿತ್ಯವನ್ನು ಕುರಿತು, ಕೇವಲ ಪಾಂಡಿತ್ಯವನ್ನು ಹೊಂದಿ ಧರ್ಮ ರಕ್ಷಣೆಯನ್ನು ಮಾಡಲಾಗದ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಅದಕ್ಕಾಗಿ ಶಾಸ್ತ್ರಗಳನ್ನು ಎತ್ತಿಟ್ಟು ಧರ್ಮ ರಕ್ಷಣೆಗಾಗಿ ಸಾಮ್ರಾಜ್ಯ ನಿರ್ಮಾಣ ಕಾರ್ಯಕ್ಕೆ ಮುಂದಾದರು. ಕರ್ನಾಟಕ ಸಿಂಹಾಸನಾಸ್ಥಾಪನಾಚಾರ್ಯ ಎಂಬ ಹಿರಿಮೆಗೂ ಪಾತ್ರರಾದರು ಎನ್ನುವ ಅಂಶ ಈ ಕಾದಂಬರಿಯಲ್ಲಿ ವ್ಯಕ್ತಗೊಂಡಿದೆ.

ಭುವನೇಶ್ವರಿ ಹಾಗೂ ಮಾಧವರ ನಡುವಿನ ಸಂಭಾಷಣೆಯಲ್ಲಿ ಭುವನೇಶ್ವರಿಯು ಮಾಧವನಿಗೆ ನೀನು ಸಂಕುಚಿತನಾಗಿದ್ದೀಯಾ, ಕರ್ನಾಟಕವಷ್ಟೇ ನಿನ್ನ ಕಲ್ಯಾಣ ಕ್ಷೇತ್ರವೇ ಎಂದಾಗ ಮಾಧವರು ಹೀಗೆ ಹೇಳುತ್ತಾರೆ.

"ಹೌದು ಜನನೀ, ನಿನ್ನ ಮಾತಿಗೆ ನಾನೆಲ್ಲಿ ಅಲ್ಲವೆನ್ನುತ್ತೇನೆ? ಆದಿಮಾಯೆಯೆನಿಸಿದ ನಿನ್ನ ಚರಣಕ್ಕೆರಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಕಾರ್ಯತಃ ನಾನು ಕರ್ನಾಟಕದ ಹಿತವನ್ನು ಚಿಂತಿಸುವದು ನಿಜವಿದ್ದರೂ, ತತ್ವತಃ ನಾನು ಜಗತ್ತಿನ ಹಿತವನ್ನೇ ಚಿಂತಿಸಿದ ಹಾಗಾಗುವುದು... ನಿನ್ನ ಕೃಪೆಯಿಂದ ನಾನು ಮಾಡುವ ಕರ್ನಾಟಕದ ಉದ್ಧಾರದ ತತ್ವಗಳು ಜಗತ್ತನ್ನೇ ಉದ್ಧರಿಸುವುದರಲ್ಲಿ ಸಂಶಯವಿಲ್ಲ... ಉದಾತ್ತ ತತ್ವಗಳ ಜೀರ್ಣೋದ್ಧಾರವು ಅಲ್ಲಲ್ಲಿ ಭಗವತ್ಕೃಪೆಯಿಂದ ಆಗಾಗ್ಗೆ ಆಗಬೇಕಾಗುತ್ತದೆ; ಆದ್ದರಿಂದ ಕರ್ನಾಟಕದ ಉದ್ಧಾರಕ್ಕೋಸ್ಕರ ನೀನು ನನ್ನನ್ನು ಅನುಗ್ರಹಿಸು."( ಗಳಗನಾಥರು, 1999:81)

ಕರ್ನಾಟಕದ ಸುಧಾರಣೆಯೆಂದರೆ ಅದು ಜಗತ್ತಿನ ಸುಧಾರಣೆಯಾದಂತೆ ಎಂದು ಹೇಳಲಾಗಿದೆ. ಅಂದರೆ ಮಾಧವ ಆ ತತ್ವಗಳು ಮಾನವೀಯ ಸಂಬಂಧ ಬೆಸೆಯಲಿಕ್ಕೆ ಯೋಗ್ಯವಾದವುಗಳು ಎನ್ನುವ ಅಭಿಪ್ರಾಯವನ್ನು ಕಾದಂಬರಿಕಾರರು ತಾಳಿದ್ದಾರೆ. ಹಾಗೆಯೇ ಅನ್ಯ ಧರ್ಮೀಯನಾದ ಬಾಹುದ್ದೀನನ ಮೂಲಕ ಹೇಳಿಸುವ ಮಾತುಗಳು ನಾಡು ನಿರ್ಮಾಣಕ್ಕೆ ಜಾಗೃತರಾಗಬೇಕೆಂಬ ಸಂದೇಶವನ್ನು ತಿಳಿಸುತ್ತವೆ.

"ಒಂದೊಂದು ಪ್ರಸಂಗದಲ್ಲಿ ಒಂದೊಂದು ವರ್ಗದ ಜನರಿಗೆ ಗೌರವ ಉಂಟಾಗುತ್ತಿರುತ್ತದೆ. ರಾಷ್ಟ್ರ ಕಾರ್ಯಕ್ಕೆ ಬುದ್ಧಿಬಲ-ಶರೀರಬಲಗಳ ಅವಶ್ಯಕತೆಯಿರುತ್ತದೆಯಷ್ಟೇ? ಆ ಎರಡು ಬಲಗಳಲ್ಲಿ ಶಾಂತತೆಯ ಕಾಲದೊಳಗೆ ಬುದ್ಧಿಬಲಕ್ಕೆ ವಿಶೇಷ ಗೌರವವಿರುವದೂ, ಯುದ್ಧಕಾಲದಲ್ಲಿ ಶಾರೀರ ಬಲಕ್ಕೆ ವಿಶೇಷ ಗೌರವವಿರುವದೂ ಸ್ವಾಭಾವಿಕವು"( ಗಳಗನಾಥರು, 1999: 123)

ಒಂದು ರಾಷ್ಟ್ರ ನಿರ್ಮಾಣ ಕಾರ್ಯವು ಕೇವಲ ಒಂದು ವರ್ಗದಿಂದಾಗುವ ಕಾರ್ಯವಲ್ಲ. ಅದಕ್ಕೆ ಎಲ್ಲಾ ವರ್ಗಗಳು ಒಂದಾಗಬೇಕು. ಒಗ್ಗಟ್ಟಿನ ಬೆನ್ನಲ್ಲಿ ರಾಷ್ಟ್ರ ಉದಯವನ್ನು ಗಳಗನಾಥರು ಕಾಣುತ್ತಾರೆ. ಮಾಧವನ ಪ್ರೇರಣೆಯಿಂದಾಗಿ ಎಲ್ಲಾ ವರ್ಗದ ಜನರು ಒಗ್ಗೂಡಿದರು ಎಂದು ಹೇಳುತ್ತಾರೆ.

"ತಾವು ಬ್ರಾಹ್ಮಣರು, ತಾವು ಲಿಂಗವಂತರು, ತಾವು ಕ್ಷತ್ರಿಯರು, ತಾವು ವೈಶ್ಯರು, ತಾವು ಶೂದ್ರರು, ತಾವು ಅತೀ ಶೂದ್ರರು ಎಂಬ ಭೇದಭಾವ ಮರೆತುಬಿಟ್ಟರು...... ಪ್ರತಿಯೊಬ್ಬರ ಕಣ್ಣೆದುರಿಗೆ ದೇಶೋದ್ಧಾರದ ಕಾರ್ಯವೊಂದು ಕಟ್ಟಿಬಿಟ್ಟದ್ದರಿಂದ ಒಕ್ಕಟ್ಟಿಗೆ ಬಾಧೆತರುವ ಅವರ ಕ್ಷುದ್ರ ಭೇದಭಾವದ ವಿಚಾರಗಳೆಲ್ಲ ಅಳಿದು ಹೋಗಿ, ಅವರೆಲ್ಲರು 'ತಾವು ದೇಶಬಾಂಧವರು ಕರ್ನಾಟಕ ಭೂಮಾತೆಯ ಮಕ್ಕಳು. ನಮ್ಮನ್ನು ಅನ್ಯಾಯದಿಂದ ತುಳಿದು ನೆಲಕ್ಕೊರಿಸಬಂದ ವೈರಿಗಳ

ಮಗ್ಗಲು ಮುರಿಯುವವರು' ಎಂಬ ವಿಚಾರಗಳು ಮುಪ್ಪುರಿಯ ಬಲವಾದ ಒಂದೇ ಹಗ್ಗದಿಂದ ಗಟ್ಟಿಮುಟ್ಟಾಗಿ ಕಟ್ಟಲ್ಪಟ್ಟರು."( ಗಳಗನಾಥರು, 1999:135)

ಜಾತಿ, ಮತ, ಲಿಂಗ, ವಯಸ್ಸಿನ ಅಂತರವನ್ನು ಮರೆತು ಎಲ್ಲರೂ ಒಂದಾಗಿ ಮಾಧವನ ಮಾತಿಗೆ ಓಗೊಟ್ಟು ಮಹಾಸಾಮ್ರಾಜ್ಯವೊಂದರ ನಿರ್ಮಾಣಕ್ಕೆ ಕಾರಣಕರ್ತರಾದರು. ಕಾದಂಬರಿಕಾರರು ತಮ್ಮ ಸಮಕಾಲೀನ ಸಂದರ್ಭದಲ್ಲಿ ಕಟ್ಟಿಕೊಳ್ಳಬೇಕಾದ ನಾಡಿನ ಕಾರ್ಯಕ್ಕೆ ಈ ಬಗೆಯ ಒಗ್ಗಟ್ಟು ಅಗತ್ಯ ಎನ್ನುವುದನ್ನು ವಿಜಯನಗರದ ಚರಿತ್ರೆಯ ಮೂಲಕ ಸಮೀಕರಿಸಿ ಹೇಳಿದ್ದಾರೆ. ಧರ್ಮ ಜಾಗ್ರತಿ ಹಾಗೂ ರಾಷ್ಟ್ರ ಜಾಗ್ರತಿಗಾಗಿ ವೈದಿಕ ಧರ್ಮದ ಯಾವ ಜಾತಿಯವರೇ ಆಗಲಿ ಉದ್ದೇಶವರಿತು ವಿವೇಕದಿಂದ ನಡೆದುಕೊಳ್ಳಬೇಕು ಎಂದು ಹೇಳುತ್ತಾರೆ.

ಹಾಗೆಯೇ ಅನ್ಯರ ಆಳ್ವಿಕೆಗೆ ಒಳಪಟ್ಟಿರುವ ನಮ್ಮ ನಾಡನ್ನು ನಾವು ಪಡೆಯಲು ಅವರು ಕರೆ ಕೊಡುವ ರೀತಿ ಹೀಗಿದೆ.

> "ಶೂರರಾದ ಕನ್ನಡಿಗರೆ, ಏಳಿರಿ ಟೊಂಕಕಟ್ಟಿರಿ; ನಮ್ಮ ಸ್ವಾತಂತ್ರ್ಯವನ್ನು ನಷ್ಟಪಡಿಸಬಂದ ಮುಸಲ್ಮಾನರನ್ನು ಹೊಡೆದೋಡಿಸುವುದಕ್ಕಾಗಿ ಸಡ್ಡು ಹೊಡೆದು ನಿಂತುಕೊಳ್ಳಿರಿ. ಮಂದಿಯ ಸ್ವಾತಂತ್ರ್ಯ ಹರಣ ಮಾಡುವುದು ಪಾತಕವಾಗಿದ್ದರೆ, ತನ್ನ ಸ್ವಾತಂತ್ರ್ಯವನ್ನು ತಾನೇ ನಷ್ಟಪಡಿಸಿಕೊಳ್ಳುವುದು ಮಹಾಪಾತಕವಾಗಿರುವುದು." (ಗಳಗನಾಥರು, 1999:129)

ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬನು ಸ್ವತಂತ್ರನು. ಆದರೆ ಶಕ್ತ್ಯಾನುಸಾರವಾಗಿ ಆ ಸ್ವಾತಂತ್ರ್ಯವನ್ನು ಪಡೆಯುವವರು ಪಡೆಯುತ್ತಾರೆ, ಇಲ್ಲದವರು ಕಳೆದುಕೊಳ್ಳುತ್ತಾರೆ. ಕಳೆದು ಕೊಂಡವನು ಹೇಡಿಯಾಗುತ್ತಾನೆ. ಆದರೆ ವೀರಾಧಿ ವೀರರು ಆಗಿಹೋದ ಮಣ್ಣಿನಲ್ಲಿ ಜನಿಸಿದ ನಾವುಗಳು ನಮ್ಮ ವೀರತ್ವರಿಂದ ನಮ್ಮ ಪಾಲಿನ ಸ್ವತಂತ್ರ್ಯವನ್ನು ನಾವು ಪಡೆದುಕೊಳ್ಳೋಣ ಎನ್ನುವ ಆಶಯವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ.

ಈ ಕಾದಂಬರಿಯಲ್ಲಿ ಗಳಗನಾಥರು ವಿದ್ಯಾರಣ್ಯರ, ಬ್ರಾಹ್ಮಣತ್ವದ ಕುರಿತ ಅನೇಕ ವಿಚಾರಗಳು ಹೆಣೆಯಲ್ಪಟ್ಟಿರುವುದು ಕಂಡು ಬರುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿನ ಸುಧಾರಣಾವಾದಿ ವಿಚಾರಗಳೆಲ್ಲವೂ ಕೂಡ ವಿದ್ಯಾರಣ್ಯರ ಕಾಲಕ್ಕಾಗಲೇ ಪ್ರಚಲಿತವಾಗಿದ್ದವು ಎನ್ನುವಂತೆ ಚಿತ್ರಿಸಿರುವುದು ಓದುಗರಲ್ಲಿ ಗೊಂದಲಗಳನ್ನು ಉಂಟುಮಾಡುತ್ತದೆ. ಜಾತ್ಯತೀತ ವಿಚಾರಗಳನ್ನು ಹೇಳುವ ಸಂದರ್ಭದಲ್ಲಿ ಮಾದಿಗರ ದುರುಗಪ್ಪನ ಮಾತುಗಳನ್ನು ಇಲ್ಲಿ ಗಮನಿಸಬೇಕಾಗುತ್ತದೆ. ದುರುಗಪ್ಪನಿಗೆ ನೀನು ಬೇರಯವನಲ್ಲ ನಮ್ಮ ಮಗನೇ ಇದ್ದೀಯ ಎಂದು ಮಾಧವರು ಹೇಳುತ್ತಾರೆ. ಪರಂಪರಾಗತವಾಗಿ ಬಂದ ನಂಬಿಕೆಗಳಿಗನುಗುಣವಾಗಿ ದುರುಗಪ್ಪ ತಾನು ಎಷ್ಟಿದ್ದರೂ ಕೀಳು ಕುಲದವನೇ ಎಂದಾಗ ಲೇಖಕರು ಅದನ್ನು ಸಮರ್ಪಕ ಮಾತು ಎಂದು ಕರೆಯುತ್ತಾರೆ. ಒಂದೆಡೆ ಸಮಾನತಾ ತತ್ವದ ಮೇಲೆ ರಾಷ್ಟ್ರ ನಿರ್ಮಾಣ ಸಾಧ್ಯ

ಎನ್ನುತ್ತ, ಮತ್ತೊಂದೆಡೆ ಇಂತಹ ಜಾತಿ ವಿಚಾರಗಳನ್ನು ಹೇಳುವುದು ಗೊಂದಲವಾಗಿ ತೋರುತ್ತದೆ. ಇಂತಹ ಹಲವು ಸಂಗತಿಗಳು ಕಾದಂಬರಿಯಲ್ಲಿ ಕಾಣಿಸುತ್ತವೆ.

ಏನೇ ಇದ್ದರೂ ಕರ್ನಾಟಕ ಏಕೀಕರಣ ಹಾಗೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಲ್ಪಿತ ಹಾಗೂ ಬೋಧನಾತ್ಮಕ ವಿಚಾರಗಳಿಗೆ ಮನ್ನಣೆ ಇದ್ದಿತು. ಅಂತಹ ಸಂದರ್ಭದಲ್ಲಿ ಗಳಗನಾಥರು ವಿಜಯನಗರದ ಚರಿತ್ರೆಯಲ್ಲಿನ ಘಟನೆಯನ್ನಾಧರಿಸಿ ಅದಕ್ಕೆ ತಮ್ಮ ಕಲ್ಪನೆಯ ನೀರನ್ನೆರೆದು ಜನರೆದುರಿಗೆ ಇಟ್ಟರು. ಆ ಮೂಲಕ ಜನರಲ್ಲಿ ನಾಡು-ನುಡಿಯ ಮೇಲಿನ ಅಭಿಮಾನವು ಹುಟ್ಟಿ, ಜನ ಜಾಗೃತರಾಗಿ ಅನ್ಯರ ಆಕ್ರಮಣದ ಆಡಳಿತದ ವಿರುದ್ಧ ಹೋರಾಡುವಂತೆ ಕರೆ ನೀಡಿದರು.

**ರಾಜಯೋಗಿ : (1934)**

ರಾಜಯೋಗಿ ಕಾದಂಬರಿಯು ವಿಜಯನಗರದ ಸಂಗಮ ವಂಶದ ಆಡಳಿತದ ಸಂಧ್ಯಾಕಾಲದ ಘಟನೆಗಳ ವಸ್ತುವನ್ನು ಒಳಗೊಂಡಿದೆ. ಲೇಖಕರು ಐತಿಹಾಸಿಕ ಕಾದಂಬರಿ ರಚನೆಯ ಬಗ್ಗೆ ಹೀಗೆ ಹೇಳಿದ್ದಾರೆ.

> "ನ್ಯೂನೀಜ್ ಎಂಬ ವಿದೇಶಿ ಯಾತ್ರಿಕನೊಬ್ಬನು ವಿಜಯನಗರಕ್ಕೆ ಸಂಬಂಧಿಸಿದ ವರದಿಯಲ್ಲಿ ಮೂಡಿನಿಂತಿರುವ ಏಳೆಂಟು ಪಂಕ್ತಿಗಳಲ್ಲಿ ಅಡಕವಾಗಿರುವ ಚಿಕ್ಕ ಸಂಗತಿಯೊಂದರ ಆಧಾರದಿಂದ ರಾಜಯೋಗಿ, ಅಶಾಂತಿಪರ್ವ ಇವೆರಡು ಕಾದಂಬರಿಗಳು ರಚನೆಗೊಂಡಿವೆ ಎಂದಿದ್ದಾರೆ" (ಆನಂದಕಂದ, 1934:ಮೊದಲ ಮಾತು)

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ನಿರ್ಮಾಣ ಮಾಡಿಕೊಳ್ಳಲು ವಿಜಯನಗರ ಸಾಮ್ರಾಜ್ಯದ ಆಡಳಿತದ ಅವಧಿಯಲ್ಲಿ ನಿರ್ಮಾಣವಾದ ಸ್ಮಾರಕಗಳು, ಶಾಸನಗಳು, ನಾಣ್ಯಗಳು ಮತ್ತು ಸಾಹಿತ್ಯ ಕೃತಿಗಳು ಮುಂತಾದ ಆಕರಗಳು ಸಾಕಷ್ಟಿವೆ, ಆದರೆ ವಿಜಯನಗರದ ವೈಭವದ ಇತಿಹಾಸವನ್ನು ಓದುವವರು ಇಲ್ಲವೆ ಯಾರಾದರೂ ಹೇಳುವುದನ್ನು ಕೇಳಿದರೆ ಕೆಲವರು ಉತ್ಪ್ರೇಕ್ಷೆ, ಅತಿಶಯೋಕ್ತಿಯ ಮಾತು, ಕಟ್ಟು ಕತೆ ಎಂದು ಹೇಳಬಹುದು. ಏಕೆಂದರೆ ರಾಜರ ಆಡಳಿತ ಅವಧಿಯಲ್ಲಿ ರೂಪುಗೊಂಡ ಈ ಆಕರಗಳು ಅವರ ಪರವಾದ ಸಂಗತಿಗಳನ್ನು ಒಳಗೊಂಡಿವೆ ಎನ್ನುವ ವಿಚಾರಗಳಿಗೆ ದಾರಿ ಮಾಡಿಕೊಡುತ್ತವೆ ಎನ್ನುವ ಆತಂಕ ಲೇಖಕರಿಗಿದ್ದಂತೆ ತೋರುತ್ತದೆ. ಆದ್ದರಿಂದ ಅವರು ವಿಜಯಗರದ ಘನತೆಯ ಕಾಲದಲ್ಲಿ ನಮ್ಮ ನಾಡಿಗೆ ಬಂದಿದ್ದ ಪಾಶ್ಚಾತ್ಯ ಪ್ರವಾಸಿಗರು, ರಾಯಭಾರಿಗಳು ತಮ್ಮ ಕಣ್ಣಿಂದ ನೋಡಿ ಅನುಭವಿಸಿದ ಅನೇಕ ಸಂಗತಿಗಳನ್ನು ವಿಷಾದವಾಗಿ ವರ್ಣಿಸಿದ್ದಾರೆ. ಆ ಸಂಗತಿಗಳೇ ಕಾದಂಬರಿಗೆ ಆಕರವೆಂದಿರುವುದು ವಿಜಯನಗರದ ಐತಿಹಾಸಿಕ ಮಹತ್ವವನ್ನು ಒತ್ತಿ ಹೇಳಲು ಪ್ರಯತ್ನಿಸಿದೆ.

ಸಂಗಮ ವಂಶದ ಸುಸಂಸ್ಕೃತ ರಾಜನೆಂದು, ಉತ್ತಮ ಆಡಳಿತಗಾರನೆಂದು ಪ್ರಸಿದ್ಧಿ ಪಡೆದ ಮಲ್ಲಿಕಾರ್ಜುನನ ತರುವಾಯ ಆತನ ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿದ್ದರಿಂದ ಆತನ ತಮ್ಮನಾದ ವಿರೂಪಾಕ್ಷನು ಸಿಂಹಾಸನಾಧಿಕಾರಿಯಾಗುತ್ತಾನೆ. ಆತನ ಆಡಳಿತಾವಧಿಯಲ್ಲಿನ ಘಟನೆಗಳನ್ನು ಈ ಕಾದಂಬರಿ ಒಳಗೊಂಡಿದೆ. ಮಲ್ಲಿಕಾರ್ಜುನ ದೊರೆಯ ಅಳಿದುಳಿದ ಇಬ್ಬರು ಮಕ್ಕಳಲ್ಲಿ ಹಿರಿಯನಾದ ರಾಜಶೇಖರ ಕಾದಂಬರಿಯ ನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾನೆ. ಕಿರಿಯನಾದ ಪೆದ್ದರಾಯ ಮತ್ತು ಸಾಳುವ ನರಸಿಂಹ ಸಹ ನಾಯಕನ ಪಾತ್ರಗಳಾಗಿವೆ. ದುರಂತ ಪ್ರತಿನಾಯಕನಾದ ವಿರೂಪಾಕ್ಷರಾಯನು ಐತಿಹಾಸಿಕ ವ್ಯಕ್ತಿಗಳಾಗಿದ್ದಾರೆ. ಉಳಿದ ಪೋಷಕ ಪಾತ್ರಗಳು ಕಾದಂಬರಿಕಾರ ಕಲ್ಪನೆಯಿಂದ ಮೂಡಿಬಂದಿವೆ. ಲೇಖಕರು ಈ ಐತಿಹಾಸಿಕ ಕಾದಂಬರಿಯನ್ನು ತಮ್ಮ ಕಾಲದ ಸಾಂಸ್ಕೃತಿಕ ಸನ್ನಿವೇಶಗಳಿಗೆ ಅನುಗುಣವಾಗಿ ಹಲವಾರು ಸನ್ನಿವೇಶಗಳನ್ನು ಕಲ್ಪನಾ ಲೋಕದಿಂದ ಚಿತ್ರಿಸಿದರೂ ಪ್ರತಿಯೊಂದು ಸನ್ನಿವೇಶವು ಇತಿಹಾಸದ ನೈಜ ಘಟನೆಯಂತೆ ಕಾಣಿಸುವುದನ್ನು ಗಮನಿಸಿದಾಗ ಈ ಕಾದಂಬರಿಯ ಘನತೆ ಗೋಚರಿಸದೇ ಇರದು.

ಕಾದಂಬರಿಕಾರರು ಮಲ್ಲಿಕಾರ್ಜುನ ದೊರೆಯ ನಂತರ ರಾಜ್ಯಾಧಿಕಾರ ವಹಿಸಿಕೊಂಡ ವಿರೂಪಾಕ್ಷರಾಯನ ಕಾಲದ ಆಡಳಿತಾವಧಿಯಲ್ಲಿ ಉಂಟಾದ ಸಮಸ್ಯೆಗಳನ್ನು ತಮ್ಮ ಸಮಕಾಲೀನ ಸಂದರ್ಭದೊಂದಿಗೆ ಸಮೀಕರಿಸಿದ್ದಾರೆ. ಅಂದರೆ ಬ್ರಿಟಿಷರ ಆಡಳಿತಾವಧಿಯಲ್ಲಿ ನಾಯಕತ್ವದ ಕೊರತೆ, ರಾಜ್ಯ ಮತ್ತು ರಾಷ್ಟ್ರದ ಬಗೆಗಿನ ಅಭಿಮಾನವಾಗಲಿ, ಸೇವಾಮನೋಭಾವನೆ ಇಲ್ಲದಿರುವುದರಿಂದ ಉಂಟಾಗಬಹುದಾದ ಸಮಸ್ಯೆಗಳ ಸ್ವರೂಪವನ್ನು ಹೇಳಬೇಕಾಗಿದೆ. ಆದ್ದರಿಂದ ಕಾದಂಬರಿಕಾರರು ವಿರೂಪಾಕ್ಷರಾಯನ ಆಡಳಿತವನ್ನು ಸಂಕೇತವಾಗಿಟ್ಟುಕೊಂಡು ತಮ್ಮ ಕಾಲದ ಸ್ಥಿತಿಗತಿಯನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಅಂದರೆ ವಿರೂಪಾಕ್ಷರಾಯನ ವಿಲಾಸಿ ಪ್ರಿಯತೆ, ಸ್ತ್ರೀ ಲಂಪಟತನ, ಧಾರ್ಮಿಕ ಉದಾರತೆಯಂತಹ ಗುಣಗಳಿಂದ ಸಾಮ್ರಾಜ್ಯಕ್ಕೆ ಉಂಟಾಗಬಹುದಾದ ಪರಿಣಾಮಗಳಾವುವು, ಅಂತಹ ಸಂದರ್ಭದಲ್ಲಿ ಸಾಮ್ರಾಜ್ಯಕ್ಕೆ ಒದಗಿದ ಆಪತ್ತುಗಳನ್ನು ಸಾಮ್ರಾಜ್ಯ ನಿಷ್ಠರು, ಧರ್ಮಾಭಿಮಾನಿಗಳು, ರಾಷ್ಟ್ರ ಸೇವಕರು ಸಾಮ್ರಾಜ್ಯದ ಉಳಿವಿಗಾಗಿ ಮಾಡಿದ ತ್ಯಾಗ ಬಲಿದಾನಗಳಂತಹ ಸಂಗತಿಗಳನ್ನು ಹೇಳುವುದರ ಮೂಲಕ ಕನ್ನಡಿಗರನ್ನು ಒಂದುಗೂಡಿಸುವುದು, ರಾಷ್ಟ್ರವನ್ನು ಪರತಂತ್ರದ ಆಡಳಿತದಿಂದ ಮುಕ್ತಿಗೊಳಿಸಲು ಜನರಲ್ಲಿ ರಾಜ್ಯ ಮತ್ತು ರಾಷ್ಟ್ರ ಕುರಿತಾದ ಸೇವಾ ಮನೋಭಾವನೆಯನ್ನು ಮೂಡಿಸುವುದಾಗಿದೆ.

ಮಲ್ಲಿಕಾರ್ಜುನರಾಯ ಗತಿಸಿಹೋದ ಸಂದರ್ಭದಲ್ಲಿ ಆತನ ಮಕ್ಕಳು ಅಪ್ರಾಪ್ತ ವಯಸ್ಸಿನವರಾಗಿದ್ದರು. ಇದರ ಲಾಭಪಡೆದು ಆತನ ಸಹೋದರ ವಿರೂಪಾಕ್ಷರಾಯನು ತನ್ನ ಅಣ್ಣನ ಮಕ್ಕಳನ್ನು ಕಡೆಗಣಿಸಿ ತಾನು ರಾಜ್ಯಾಧಿಕಾರವಹಿಸಿಕೊಂಡನು. ಇದರಿಂದಾಗಿ ಕೆಲವು ದಿನಗಳವರೆಗೆ ಅಣ್ಣ ತಮ್ಮಂದಿರು ಚಿಕ್ಕಪ್ಪನ ಭೀತಿಯಿಂದಾಗಿ ತಲೆಮರೆಸಿಕೊಳ್ಳುವ ಪರಿಸ್ಥಿತಿ

ಉಂಟಾಯಿತು. ಆದರೂ ಆ ಸಂದರ್ಭದಲ್ಲಿ ಮಹಾಮಂತ್ರಿಯಾದ ಸಾಳ್ವ ನರಸಿಂಹನ ರಾಜಭಕ್ತಿ ಮತ್ತು ಸಾಮ್ರಾಜ್ಯದ ಮೇಲಿನ ಅಭಿಮಾನದಿಂದ ಮಲ್ಲಿಕಾರ್ಜುನನ ಮಕ್ಕಳಿಗೆ ರಾಜ್ಯದಲ್ಲಿ ಅರಸನ ಸಂಬಂಧಿಕರಿಗೆ ದೊರೆಯಬೇಕಾದ ಮಾನ ಸನ್ಮಾನಗಳು ದೊರೆತವು. ವಿರೂಪಾಕ್ಷರಾಯನು ರಾಜ್ಯಾಧಿಕಾರ ವಹಿಸಿಕೊಂಡ ನಂತರ ಸಾಮ್ರಾಜ್ಯದ ಹಿತಚಿಂತನೆಗೆ, ಪ್ರಜೆಗಳಿಗೆ ಇರುವ ಸಮಸ್ಯೆಗಳತ್ತ ಗಮನ ಹರಿಸದೆ ಬರಿ ವಿಲಾಸಿ ಜೀವನ ಕಳೆಯತೊಡಗಿದನು. ಹೀಗಾಗಿ ರಾಜ್ಯದಲ್ಲಿ ಹಲವಾರು ಸಂದರ್ಭದಲ್ಲಿ ಬರಿ ಸಂತೋಷದ ಸಭೆಗಳೇ ಹೆಚ್ಚು. ಆ ಸಭೆ ಸಮಾರಂಭಗಳಿಗೆ ಹೊಣೆಗಾರಿಕೆಯುಳ್ಳ ಸಾಮಂತರಿಗೆ, ಸರದಾರರಿಗೆ, ಮಂತ್ರಿಗಳಿಗೆ ಆಹ್ವಾನವೇ ಇರುತ್ತಿರಲಿಲ್ಲ. ಆ ಸಂತೋಷ ಕೂಟಗಳು ಹೇಗಿರುತ್ತಿದ್ದವೆಂದರೆ–

> "ವಿರುಪಾಕ್ಷ ರಾಜನ ಸಂತೋಷ ಸಭೆಗಳೆಂದರೆ ಅಲ್ಲಿ ಇನ್ನಾವ ವಿಷಯಗಳ ಚರ್ಚೆಯೂ ಇಲ್ಲ. ಬರೀ ದೇಶ–ವಿದೇಶದ ಸೂಳೆಯರ ಹಾಡು–ಕುಣಿತ, ಮಾದಕ ರಸಗಳ ಪಾನಸಂಭ್ರಮ; ಕುಡಿದು ಮತ್ತೇರಿದವರ ಬಡಬಡಿಕೆಯ ವಿಧವಿಧದ ಹುಚ್ಚಾಟ; ಇವೇ ಅಲ್ಲಿಯ ಮುಖ್ಯ ಕಾರ್ಯಕಲಾಪಗಳು, ಆಗಿನ ಮಹಾರಾಜರ ಮನೋಲಹರಿ ಹೇಗೆ ಹೇಗೆ ಹೊರಳುತ್ತಿರುವುದೆಂಬುದರ ನಿಯಮವಿರದು. ಉಲ್ಲಾಸದ ಕಡೆಗೆ ಹರಿಯುತ್ತಿದ್ದರೆ ಕೋಲುಕಾರನಿಗೆ ಸೇನಾಪತಿಯ ಪದವಿ ದೊರೆಯುತ್ತಿದ್ದಿತು. ಅಡಿಗೆಯವನಿಗೆ ನ್ಯಾಯ ಮಾರ್ತಾಂಡನ ಅಧಿಕಾರವು ಸಿಕ್ಕುತ್ತಿದ್ದಿತು. ಸಂತೆಯ ಸೂಳೆಯೊಬ್ಬಳು ಅಂತಃಪುರಕ್ಕೆ ರಾಣಿಯಾಗಿ ಬಂದೂ ಬಂದಳೇ!" (ಆನಂದಕಂದ, 1934:19)
> ಆಹ್ವಾನವಿದ್ದರೂ ಕೆಲವು ನಿಷ್ಠಾವಂತರು ರಾಜಾಜ್ಞೆಯನ್ನು ಮುರಿಯಲಾಗದೆ ಅಲ್ಲಿಗೆ ಹೋಗುತ್ತಿದ್ದರು ಎನ್ನುವದನ್ನು ಗಮನಿಸಿದಾಗ ವಿರೂಪಾಕ್ಷನ ಕಾರ್ಯವೈಖರಿಯು ಗೋಚಸಿರುತ್ತದೆ.

ವಿರೂಪಾಕ್ಷರಾಯನಿಗಿರುವ ದೌರ್ಬಲ್ಯವನ್ನು ಅರಿತ ನಾಷೀರ್ ಮಹ್ಮದಖಾನನು ರಾಜನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು. ಮೋಜಿನ ಜೀವನಕ್ಕೆ ಮಾರು ಹೋಗಿದ್ದ ರಾಯನಿಗೆ ನಾಷೀರ್‌ನ ವಿಚಾರಗಳೇ ಸರಿಯೆನಿಸುತ್ತಿದ್ದವು. ಇದರಿಂದಾಗಿ ರಾಜನಿಷ್ಠರೆಲ್ಲರೂ ರಾಯನಿಗೆ ರಾಜದ್ರೋಹಿಗಳಾಗಿ ಕಾಣಿಸುತ್ತಾರೆ. ಮನಸ್ಸಿನಲ್ಲಿ ದ್ರೋಹವಿಟ್ಟುಕೊಂಡು ಸ್ವಾಮಿನಿಷ್ಠನಂತೆ ಸೋಗು ಹಾಕಿದ್ದ ನಾಷೀರ್‌ನೇ ರಾಯನಿಗೆ ರಾಜನಿಷ್ಠನಂತೆ ಕಾಣುತ್ತಿದ್ದ. ಸಂತೋಷದ ಅಮಲಿನಲ್ಲಿ ತೇಲುತ್ತಿದ್ದ ರಾಯನಿಗೆ ಸಾಮ್ರಾಜ್ಯದ ಆಗುಹೋಗುಗಳ ಬಗ್ಗೆ, ಪ್ರಜೆಗಳ ಯೋಗಕ್ಷೇಮದ ಬಗ್ಗೆ ಕಿಂಚಿತ್ತೂ ಗಮನಹರಿಸಲಿಲ್ಲ. ನಾಷೀರ್‌ನು ನಿರ್ಮಿಸಿದ ಮೋಹ ಎಂಬ ಮಾಯಾಜಾಲದಲ್ಲಿ ಬಿದ್ದು ಹೋಗಿದ್ದ. ನಾಷೀರನು ರಾಯ ಇಂತಹ ಅಮಲಿನಲ್ಲಿರುವಾಗಲೇ ತನ್ನ ಕಪಟ ಕಾರಸ್ಥಾನದ ಕೆಲಸಗಳನ್ನು ಮಾಡಿಕೊಳ್ಳಲು ಯತ್ನಿಸುತ್ತಿದ್ದ. ತನ್ನ ಮಗನಿಗೆ ರಾಯಚೂರು ದುರ್ಗದ ಅಧಿಪತ್ಯವನ್ನು ಕೊಡುವಂತೆ

ಮನವೊಲಿಸಿದ. ಅವನ ಮಾತಿಗೆ ಮರುಳಾದ ವಿರೂಪಾಕ್ಷರಾಯನು ಹೀಗೆನ್ನುತ್ತಾನೆ. "ನಾಷೀರ್‌ಖಾನ್, ನಾಳೆಯ ಸಭೆಯಲ್ಲಿ ನಿಮ್ಮ ಮಗನಿಗೆ ರಾಯಚೂರು ದುರ್ಗಾಧಿಪತ್ಯವನ್ನು ಕೊಟ್ಟೇಬಿಡುತ್ತೇನೆ. ನೀವು ಆತನನ್ನೂ ನಾಳೆಯ ಸಭೆಗೆ ಕರೆದುಕೊಂಡು ಬರುವಂತೆ ಏರ್ಪಾಡು ಮಾಡಿಬಿಡಿರಿ." (ಆನಂದಕಂದ, 1934:21) ಹಿಂದೂಮುಂದು ವಿಚಾರ ಮಾಡದೆ ಈ ರೀತಿ ನಾಷೀರ್‌ನ ಮಾತುಗಳಿಗೆ ರಾಯ ಮನ್ನಣೆ ನೀಡುತ್ತಿದ್ದ. ವೈರಿಗಳಾದ ಮುಸ್ಲಿಮರಿಗೆ ರಾಜ್ಯಾಧಿಕಾರದಲ್ಲಿ ಪ್ರಮುಖ ಸ್ಥಾನಗಳನ್ನು ನೀಡಿದರೆ ಮುಂದಾಗಬಹುದಾದ ಅನಾಹುತದ ಬಗ್ಗೆ ಎಳ್ಳಷ್ಟೂ ವಿಚಾರ ಮಾಡುತ್ತಿರಲಿಲ್ಲ. ಇಂತಹ ವಿಚಾರಗಳನ್ನು ಕಾದಂಬರಿಕಾರರು ಹೇಳುವ ಮೂಲಕ ಒಂದು ಸಾಮ್ರಾಜ್ಯವು ಹರಿದು ಹಂಚಿ ಹೋದರೆ ಆಗಬಹುದಾದ ಪರಿಣಾಮಗಳನ್ನು, ಸಮಕಾಲೀನ ಸಂದರ್ಭದಲ್ಲಿ ಛಿದ್ರಗೊಂಡಿದ್ದ ಕನ್ನಡ ನಾಡನ್ನು ಒಂದುಗೂಡಿಸಲು ಪ್ರೇರಕವಾಗುವಂತೆ ಮಾಡುತ್ತಾರೆ.

ಒಂದೆಡೆ ರಾಯನು ಸಂತೋಷ ಸಭೆಯಲ್ಲಿ ಕಾಲಕಳೆಯುತ್ತಿದ್ದರೆ, ಮತ್ತೊಂದೆಡೆ ಇದರಿಂದುಂಟಾಗುವ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂದು ಸಾಮ್ರಾಜ್ಯನಿಷ್ಠರು ಪ್ರಯತ್ನಿಸುತ್ತಿದ್ದರು. ಅವರು ಈ ಸಾಮ್ರಾಜ್ಯದ ಬಗ್ಗೆ ಹೊಂದಿದ್ದ ನಿಲುವು ಅದನ್ನು ಸ್ಪಷ್ಟಪಡಿಸುತ್ತದೆ.

> "ನಮ್ಮ ಸದ್ಧರ್ಮ, ಸಂಸ್ಕೃತಿಗಳನ್ನು ಕಾಪಾಡುವುದಕ್ಕಾಗಿ ನಿಂತುಕೊಂಡ ಈ ಸಾಮ್ರಾಜ್ಯಕ್ಕಾಗಿ, ನಮ್ಮ ಮೊದಲಿಗರು ಸಲ್ಲಿಸಿದ ಆತ್ಮಾಹುತಿಯ ಚಿತ್ರಗಳು ನನ್ನ ಕಣ್ಣೆದುರಿನಲ್ಲಿ ಮರಳಿ ಮರಳಿ ಅಂದು ಕುಣಿದಾಡಿ ಹೋದವು. ಎಷ್ಟು ಜನ ತಾಯಿ-ತಂದೆಗಳು ತಮ್ಮ ಕರುಳನ್ನು ಕಳೆದುಕೊಂಡ ಕೂಗಿಟ್ಟರೊ! ಎಷ್ಟು ಜನ ಸುಮಂಗಲೆಯರು ತಮ್ಮ ಮಾಂಗಲ್ಯವನ್ನು ಕಳೆದುಕೊಂಡು ಮರುಗಿದರೊ! ಇನ್ನೆಷ್ಟು ಜನ ಪ್ರಣಯಿಗಳು ತಮ್ಮ ಪ್ರಿಯಜನರ ಅಗಲಿಕೆಯ ತಾಪದಿಂದ ಕಂಗೆಟ್ಟರೊ ಅದನ್ನೆಲ್ಲ ಯಾರು ಅಳೆದು ಹೇಳಬಲ್ಲರು? ಅವರೆಲ್ಲರ ತ್ಯಾಗ-ತಪಸ್ಸುಗಳ ಪೂರ್ಣ ಫಲವೇ ಈ ಭವ್ಯ ಸಾಮ್ರಾಜ್ಯವೆಂಬ ಮಾತು, ನನ್ನ ಮನದಲ್ಲೀಗ ನೆಟ್ಟು ನಿಂತಿದೆ." (ಆನಂದಕಂದ, 1934:23)

ಎನ್ನುವ ಮಾತುಗಳು ಇದಕ್ಕೆ ನಿದರ್ಶನವಾಗುತ್ತವೆ. ಸಾಮ್ರಾಜ್ಯದ ಒಳಿತಿಗಾಗಿ ತನ್ನ ಜೀವನವನ್ನೇ ಸಮರ್ಪಿಸಲು ಸಿದ್ಧವಾದ ಹೇಮಾನಂತಹ ಹೆಣ್ಣುಮಗಳು ರಾಜ್ಯ ಕಟ್ಟುವ ಕಾರ್ಯಕ್ಕೆ ಪ್ರೇರಕಳೂ, ಅನುಕರಣೀಯಳೂ ಆಗುತ್ತಾಳೆ. ತಾನು ಹುಟ್ಟಿದ ನೆಲದ ಬಗ್ಗೆ ಅಭಿಮಾನವನ್ನು ತಾಳಲು ಮತ್ತು ಧರ್ಮದ ಮಹತ್ವವನ್ನು ಸಾರುವಂತಹ ಕೆಲಸಕ್ಕೆ ಕಾದಂಬರಿಕಾರರು ಮುಂದಾಗಿದ್ದಾರೆ.

ನಾಷೀರ ಖಾನನು ಗೌಪ್ಯವಾಗಿ ಕುಲಬುರ್ಗಿಯ ಸುಲ್ತಾನರಿಗೆ ವಿಜಯನಗರದ ಮೇಲೆ ದಾಳಿ ಮಾಡುವಂತೆ ಪತ್ರವನ್ನು ಕಳಿಸಿಕೊಟ್ಟಿರುತ್ತಾನೆ. ಅದನ್ನು ತಿಳಿದಿದ್ದ ದಿಲಾವರ್‌ಖಾನ್‌ನು ಆ ಪತ್ರವು ಕಲಬುರ್ಗಿಗಿಗೆ ತಲುಪದಂತೆ ಮಾರ್ಗ ಮಧ್ಯದಲ್ಲಿ ಪತ್ರ ತೆಗೆದುಕೊಂಡು

ಹೋಗುತ್ತಿರುವವರನ್ನು ಸಂಹರಿಸುತ್ತಾನೆ. ದಿಲಾವರ್‌ಖಾನ್‌ನು ಒಬ್ಬ ಮುಸ್ಲಿಮನಾಗಿದ್ದೂ ಕೂಡ ಇಲ್ಲಿ ಹಿಂದೂ ಸಾಮ್ರಾಜ್ಯವೆನಿಸಿಕೊಂಡ ವಿಜಯನಗರಕ್ಕೆ ಸಹಾಯ ಮಾಡಿದ್ದು ಮೇಲ್ನೋಟಕ್ಕೆ ವಿಶಿಷ್ಟವೆನಿಸುತ್ತದೆ. ಏಕೆಂದರೆ ಕಾದಂಬರಿಕಾರರು ಧರ್ಮ ಸಹಿಷ್ಣುತೆಯನ್ನು ಸಾರಲು ಈ ರೀತಿ ಮಾಡಿದ್ದಾರೋ ಎನಿಸುತ್ತದೆ. ಆದರೆ ದಿಲಾವರ್‌ಖಾನನು ಮೂಲತಃ ಕಲಬುರ್ಗಿ ಸುಲ್ತಾನರಲ್ಲಿದ್ದು ಬಂದವನು. ಅಲ್ಲಿನ ಹಿಂದೂಗಳ ಮೇಲೆ ಆಗುತ್ತಿದ್ದ ಅನ್ಯಾಯವನ್ನು ಕಂಡು, ಕನ್ನಡಿಗರ, ಹಿಂದೂಗಳ ಸಾಮ್ರಾಜ್ಯವೆನಿಸಿಕೊಂಡ ವಿಜಯನಗರಕ್ಕೆ ಬಂದವನು. ದಿಲಾವರ್‌ಖಾನನು ಹುಟ್ಟಿದ್ದು ವೈದಿಕ ಧರ್ಮದಲ್ಲಿ. ತಂದೆತಾಯಿಗಳು ಚಿಕ್ಕವನಿರುವಾಗಲೇ ತೀರಿದ್ದರಿಂದ, ಇವನು ನಂತರ ಮಹಮ್ಮದೀಯರ ಧರ್ಮ ಸಂಸ್ಕಾರದಿಂದ ಮುಸ್ಲಿಮನಾದನು ಎನ್ನುವುದು ಗಮನಿಸಬೇಕಾದ ಅಂಶ. ಆದರೆ ಇಲ್ಲಿನ ಇನ್ನೊಂದು ಪ್ರಮುಖ ಅಂಶವೆಂದರೆ, ಕನ್ನಡಿಗರಾಗಿದ್ದವರೂ ಎಲ್ಲೇ ಇದ್ದರೂ ಅವರ ಮನವು ಈ ನಾಡಿಗಾಗಿ ಯಾವಾಗಲೂ ಮಿಡಿಯುತ್ತಿರುತ್ತದೆ. ಅವರು ನಾಡು ಕಟ್ಟುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ ಎನ್ನುವುದನ್ನು ಕಾದಂಬರಿಕಾರರು ತಿಳಿಸಿದ್ದಾರೆ. ಅಂದರೆ ಲೇಖಕರ ಸಮಕಾಲೀನ ಸಂದರ್ಭದಲ್ಲಿ ನಡೆಯುತ್ತಿದ್ದ ಕರ್ನಾಟಕ ಏಕೀಕರಣ ಚಳುವಳಿಗೆ ಬೇರೆ ಬೇರೆ ಪ್ರಾಂತ್ಯಗಳಲ್ಲಿದ್ದ ಕನ್ನಡಿಗರು ಒಗ್ಗೂಡಿ ಹೋರಾಡಬೇಕಾದ ಅಗತ್ಯತೆಯನ್ನು ಹೇಳಿದ್ದಾರೆ.

ರಾಜನಿಷ್ಠತೆಗಿಂತ ಸಾಮ್ರಾಜ್ಯ ನಿಷ್ಠತೆ ಬಹಳ ಮುಖ್ಯವಾದುದು. ರಾಜಶೇಖರನ ಮೂಲಕ ಈ ಕಾದಂಬರಿಯಲ್ಲಿ ಹೇಳಿಸಿರುವ ಮಾತುಗಳನ್ನು ಇದಕ್ಕೆ ಪೂರಕವಾಗಿ ನೋಡಬಹುದು.

> "...ನಮ್ಮ ಕನ್ನಡ ಜನರನ್ನು ಕಂಡರೆ ಆಗದವರ ಕೈಗೆ ಒಂದೊಂದಾಗಿ ನಮ್ಮ ರಾಜ್ಯ ಸೂತ್ರಗಳು ಹೋಗಲು ತೊಡಗಿವೆ. ವಿದ್ರೋಹಿಗಳಿಂದ ಹಿಂದೂ ರಾಜ-ಸುರತ್ರಾಣನ ಸಾಮ್ರಾಜ್ಯವು ನಷ್ಟವಾಗದಂತೆ ನಾವೆಲ್ಲರೂ ಕಂದೆರೆದು ಕಾದುಕೊಂಡಿರಬೇಕಾದ ಕಾಲವಿದು! ಸಾಮ್ರಾಜ್ಯವು ರಾಜನೊಬ್ಬನ ವಿಷಯೋಪಭೋಗದ ಸಾಮಗ್ರಿಯಲ್ಲ; ನಾಡಿನ ಜನತೆಯಲ್ಲಿ ಶಾಂತಿ-ಸುಖಗಳನ್ನು ಬಿತ್ತಿ ಬೆಳೆಯಿಸುವ ಸಾಧನೆಯು! ಒಬ್ಬ ರಾಜನು ಹೋದರೆ, ಆತನ ಬೆನ್ನ ಹಿಂದೆಯೆ ಇನ್ನೊಬ್ಬನು ಬರುತ್ತಾನೆ. ಸಾಮ್ರಾಜ್ಯವು ನಿತ್ಯ; ರಾಜನು ಅನಿತ್ಯ! ಅದಕ್ಕೆಂತಲೇ ಸಾಮ್ರಾಜ್ಯ ನಿಷ್ಠೆಯು ನಮಗೆ ಮುಖ್ಯ; ರಾಜನಿಷ್ಠೆಯು ಗೌಣ!"
> (ಆನಂದಕಂದ, 1934:39)

ಬ್ರಿಟಿಷರ ಆಡಳಿತಾವಧಿಯಲ್ಲಿ ಹಲವು ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರ ಪ್ರದೇಶದಲ್ಲಿ ಉಂಟಾಗುವ ಪರಿಣಾಮಗಳ ಸ್ವರೂಪವನ್ನು ತಿಳಿಸಲು ಚಾರಿತ್ರಿಕ ಘಟನೆಯನ್ನು ಆಯ್ದುಕೊಂಡಿದ್ದಾರೆ. ರಾಜನಿಗಿಂತಲೂ ಸಾಮ್ರಾಜ್ಯವು ಮುಖ್ಯ ಎನ್ನುವುದು, ಒಂದು ನಾಡಿನ ಐಕ್ಯತೆಗೆ ವೈದಿಕ ಧರ್ಮದ ಬಗ್ಗೆ ಜನರಲ್ಲಿ ಅಭಿಮಾನ ಮೂಡಿಸಿ, ಆ ಮೂಲಕ ನಾಡಿನ ಐಕ್ಯತೆಗೆ ವೈದಿಕ ಧರ್ಮದ

ಹಿನ್ನೆಲೆಯಲ್ಲಿ ಜನರನ್ನು ಸಜ್ಜುಗೊಳಿಸಿದಂತಿದೆ. ಅಷ್ಟೇ ಅಲ್ಲದೆ ಲೇಖಕರು ಜನರನ್ನು ಪ್ರಚೋದಿಸುವ ರೀತಿ ವಿಸ್ಮಯವಾದುದು. ಏಕೆಂದರೆ ಅವರು "ನಿಸರ್ಗ ಶತ್ರುಗಳಾದ ವಿಧರ್ಮಿಯರ ಕಡೆಗೆ ಒಂದರ ಹಿಂದೊಂದು ಗಡಿ ಕೋಟೆಯ ಅಧಿಪತ್ಯ ಹೋಗಲು ತೊಡಗಿದೆ." (ಆನಂದಕಂದ, 1934:26) ಎಂದಿರುವುದನ್ನು ನೋಡಿದಾಗ, ಅನ್ಯ ಧರ್ಮೀಯರು ನಮಗೆ ಹುಟ್ಟಿನಿಂದಲೇ ಶತ್ರುಗಳಾಗಿದ್ದಾರೆ, ಅದು ನಿಸರ್ಗ ಸಹಜ ನಿಯಮವೆಂಬಂತೆ ಚಿತ್ರಿಸಿದ್ದಾರೆ. ಆ ಮೂಲಕ ರಾಜ್ಯ ರಕ್ಷಣೆಯ ಕಾರ್ಯ ಪವಿತ್ರವಾದ ಧರ್ಮ ಕಾರ್ಯ ಎಂಬುದನ್ನು ಹೇಳಿದ್ದಾರೆ.

ನಾಡಿನ ಹಿತಕ್ಕಾಗಿ ಎಂತಹ ತ್ಯಾಗಕ್ಕೂ ಸಿದ್ಧರಿರಬೇಕೆಂಬುದನ್ನು ಹೇಮಾ ಮತ್ತು ರಾಜಶೇಖರ ಈ ಎರಡು ಪಾತ್ರಗಳ ಮೂಲಕ ಚಿತ್ರಿಸುತ್ತಾರೆ.

> "ಹೇಮಾ, ನನ್ನ ನಿನ್ನಂತಹ ವ್ಯಕ್ತಿಗಳ ಬಾಳು ಈ ಸಾಮ್ರಾಜ್ಯದೆದುರಿನಲ್ಲಿ ಹುಲ್ಲಿಗಿಂತ ಕೀಳೆಂದು ಎನಿಸುತ್ತದೆ ನನಗೆ. ಈಗ ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಬ್ಬ ವೈದಿಕ ಮತಾಭಿಮಾನಿಯೂ, ತನ್ನ ವೈಯಕ್ತಿಕ ಆಶೆ-ಆಕಾಂಕ್ಷೆಗಳನ್ನೆಲ್ಲ ಈ ಸಾಮ್ರಾಜ್ಯ ಸಂರಕ್ಷಣೆಯ ಕಾರ್ಯಕ್ಕಾಗಿ ಹೋಮಿಸಿಬಿಡಬೇಕಾಗುತ್ತದೆ." (ಆನಂದಕಂದ, 1934:6)

ಹೇಮಾ ಮತ್ತು ರಾಜಶೇಖರ ಬಾಲ್ಯದಿಂದಲೂ ಪ್ರೀತಿಸಿದ್ದವರು. ಆದರೆ ಸಾಮ್ರಾಜ್ಯದ ಹಿತದೃಷ್ಟಿಯಿಂದ ಅವರು ತಮ್ಮ ಪವಿತ್ರವಾದ ಪ್ರೇಮವನ್ನೇ ತ್ಯಾಗ ಮಾಡುತ್ತಾರೆ. ಈ ಪ್ರೇಮದ ತ್ಯಾಗ ಓದುಗರಿಗೆ ಬಹುದೊಡ್ಡದಾಗಿ ಕಾಣದಿರಬಹುದು. ಆದರೆ ಆ ತ್ಯಾಗದಲ್ಲಿನ ಆ ಅಗಲಿಕೆಯ ವೇದನೆ ಎಂತಹದು ಎನ್ನುವುದು ಆ ಎರಡು ಹೃದಯಗಳೇ ಬಲ್ಲವು. ಆದರೂ ಆ ವೇದನೆಯನ್ನು ಅನುಭವಿಸಲು ಅವರು ಸಿದ್ಧರಾಗುತ್ತಾರೆ. ಅಂದರೆ ವೈಯಕ್ತಿಕ ಬದುಕಿಗಾಗಿ ಬದುಕುವುದಕ್ಕಿಂತ, ನಾಡಿಗಾಗಿ, ಧರ್ಮಕ್ಕಾಗಿ ಬದುಕಬೇಕೆಂಬ ಸಂದೇಶವನ್ನು ಕಾದಂಬರಿಕಾರರು ನೀಡಿದ್ದಾರೆ. ರಾಜ ವಿಷಯ ಲಾಲಸೆನಾಗಿದ್ದರೂ, ಪ್ರಜೆಗಳು ಜಾಗೃತರಾಗಿದ್ದರೆ ನಾಡಿಗೆ, ಧರ್ಮಕ್ಕೆ ಒದಗುವ ಆಪತ್ತುಗಳನ್ನು ತಪ್ಪಿಸಬಹುದೆನ್ನುವ ನಿಲುವಿಗೆ ಬಂದಿದ್ದಾರೆ.

ಕಾದಂಬರಿಯುದ್ದಕ್ಕೂ ವಿಜಯನಗರ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು, ವೈದಿಕ ಧರ್ಮದ ಸಾಮ್ರಾಜ್ಯ ಎನ್ನುವ ಉಲ್ಲೇಖಗಳು ಸಿಗುತ್ತವೆ. ರಾಜಶೇಖರ ಮತ್ತು ಪೆದ್ದರಾಯರು ಸಾಮ್ರಾಜ್ಯದ ಕುರಿತು ಮಾತನಾಡುತ್ತಿರುವಾಗ, ಚಿಕ್ಕಪ್ಪನು ತನ್ನ ಸಾಮ್ರಾಜ್ಯವೆಂಬಂತೆ ವರ್ತಿಸುತ್ತಿದ್ದಾನೆ. ಇಂತಹದರಲ್ಲಿ ನಮ್ಮದೇನಿದೆ ಈ ಸಾಮ್ರಾಜ್ಯದಲ್ಲಿ ಎಂಬ ಪೆದ್ದರಾಯನ ಪ್ರಶ್ನೆಗೆ, ರಾಜಶೇಖರನು "... ನನ್ನ ಸಾಮ್ರಾಜ್ಯ, ನಿನ್ನ ಸಾಮ್ರಾಜ್ಯ, ಪ್ರತಿಯೊಬ್ಬ ಕನ್ನಡಿಗರ ಸಾಮ್ರಾಜ್ಯ! ವೈದಿಕ ಧರ್ಮಾಭಿಮಾನಿಗಳೆಲ್ಲರದೂ ಸಾಮ್ರಾಜ್ಯ! ಆ ಧರ್ಮ ರಕ್ಷಣೆಗಾಗಿಯೇ ಕೈಯೆತ್ತಿನಿಂತ ಶ್ರೀಪಂಪಾಪತಿಯ ಸಾಮ್ರಾಜ್ಯ!" (ಆನಂದಕಂದ, 1934:16) ಎಂದು ಹೇಳುತ್ತಾನೆ. ಅಂದರೆ ಒಂದು ಸಾಮ್ರಾಜ್ಯವೆನ್ನುವುದು ಯಾರ ಸ್ವತ್ತೂ ಅಲ್ಲ.

ಅದು ಇರುವುದೇ ಪ್ರಜೆಗಳಿಗಾಗಿ. ಅದು ರಾಜನ ಐಹಿಕ ಸುಖಕ್ಕಾಗಿ ಮಾತ್ರವಲ್ಲ. ನಾಡಿನ ಜನತೆಯ ಹಿತರಕ್ಷಣೆಗಾಗಿ. ಸದ್ಧರ್ಮ, ಸದಾಚಾರಗಳನ್ನು ಅಳವಡಿಸಿಕೊಂಡು, ಶಾಂತಿ ನೆಲೆಗೊಳಿಸುವಂತೆ ಮಾಡುವುದೇ ನಿಜವಾದ ನಾಡ ಸೇವೆ. ಅದನ್ನು ಅಧಿಕಾರಿಯಷ್ಟೇ ಮಾಡಬೇಕಿಲ್ಲ. ಅಭಿಮಾನವಿರುವ ಪ್ರತಿಯೊಬ್ಬ ಪ್ರಜೆ ಮಾಡಬಹುದು. ಪ್ರತಿಫಲಾಪೇಕ್ಷೆಯಿಲ್ಲದೆ ನಾಡಿಗಾಗಿ ಸೇವೆ ಸಲ್ಲಿಸಬೇಕಾದ ಅನಿವಾರ್ಯತೆ ಕಾದಂಬರಿಕಾರರು ಸಮಕಾಲೀನ ಸಂದರ್ಭದ ಪರಿಸ್ಥಿತಿಗನುಣವಾಗಿ ವಿವರಿಸಿದ್ದಾರೆ. ದೇಹ ಚೇತನಕ್ಕೆ ಉಸಿರಾಟವು ಎಷ್ಟು ಸಹಜವೋ ನಾಡ ಅಭಿಮಾನವೂ ಅಷ್ಟೇ ಸಹಜವಾಗಿರಬೇಕೆಂಬುದನ್ನು ಒತ್ತಿ ಹೇಳಿದ್ದಾರೆ.

ಪ್ರಜಾಪೀಡಕನಾಗಿದ್ದ ವಿರೂಪಾಕ್ಷರಾಯನ ಬಗ್ಗೆ 'ರಾಜಯೋಗಿ'ಯಾದ ರಾಜಶೇಖರನಿಗೆ ಅಸಮಧಾನ. ಅತೃಪ್ತಿ ಇತ್ತು. ರೋಷನಾರಾ ಎಂಬ ಮುಸ್ಲಿಂ ನರ್ತಕಿಯ ಮೋಹಕ್ಕೆ ಬಿದ್ದು ಅವಳನ್ನು ನಾಷೀರ್‌ಖಾನ್‌ನ ಸಹಾಯದಿಂದ ವಿವಾಹವಾಗಲು ರಾಯ ತಯಾರಿ ನಡೆಸುತ್ತಾನೆ. ಈ ಅನೀತಿಯುಕ್ತ ವರ್ತನೆ ಕಂಡು ರಾಜಶೇಖರ ಚಿಕ್ಕಪ್ಪನನ್ನು ಕೊಲೆ ಮಾಡುತ್ತಾನೆ.

> "ರಾಜಯೋಗಿಯು ಹೇಡಿ, ಅಸಹಾಯಕ, ಅಸಮರ್ಥ ಅಲ್ಲ; ಕ್ಷಾತ್ರ ಧರ್ಮದ ಪಾಲನೆಗಾಗಿ ಯೋಗಿಯೂ ಕ್ರಾಂತಿಕಾರನಾಗಿ, ಕರ್ತವ್ಯ ಪರತೆಯನ್ನೂ ಮೆರೆಯಬೇಕಾದದ್ದು 'ಧರ್ಮಕಾರಣ– ಎಂದುಕೊಳ್ಳುತ್ತಾನೆ ರಾಜಶೇಖರ. ಪಿತೃಹತ್ಯಾದೋಷ ಹೊತ್ತು ಭಾವಸತ್ಯದ ಚಿತ್ರಣ, 'ರಾಜಯೋಗಿ'ಯ ಸಂಕಲ್ಪದಿಂದ. ಬಹುಮನಿ ಸುಲ್ತಾನನ ಸಂಚಿನ ದಾಳಿ ವಿಫಲವಾಗಿ ಕರ್ನಾಟಕ ಸಾಮ್ರಾಜ್ಯದ ಸುರಕ್ಷೆ ಸಾಧ್ಯವಾಗುವುದು." (ಗುರುಲಿಂಗ ಕಾಪಸೆ, 2003:34)ಎನ್ನುವುದು ಕಾದಂಬರಿಯ ಆಶಯವಾಗಿರುವುದನ್ನು ಗುರುತಿಸಲಾಗಿದೆ.

**ಅಶಾಂತಿ ಪರ್ವ : (1935)**

ರಾಜಯೋಗಿ ಕಾದಂಬರಿಯ ಮುಂದುವರೆದ ಭಾಗವಾಗಿ ಅಶಾಂತಿಪರ್ವ ಮೂಡಿ ಬಂದಿದೆ. ವಿರೂಪಾಕ್ಷರಾಯನ ಹತ್ಯೆಯ ನಂತರ ಸಾಳ್ವ ನರಸಿಂಹನು ಸಿಂಹಾಸನವನ್ನಲಂಕರಿಸುವ ಸಂದರ್ಭದ ನಡುವಿನ ಅವಧಿಯಲ್ಲಿ ಘಟಿಸಿದ ವಿಜಯನಗರದ ಚಿತ್ರಣವನ್ನು ಈ ಕಾದಂಬರಿ ಒಳಗೊಂಡಿದೆ.

ವಿರೂಪಾಕ್ಷರಾಯನ ಕೊಲೆಯ ನಂತರ ಯಾರು ಅರಸರಾಗಬೇಕೆಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಸಾಮ್ರಾಜ್ಯದಲ್ಲಿನ ಮಂತ್ರಿಗಳು, ಸಾಮಂತ ರಾಜರು, ಪ್ರಜೆಗಳೆಲ್ಲರ ಅಭಿಪ್ರಾಯವು ರಾಜಶೇಖರನೇ ರಾಜನಾಗಬೇಕೆನ್ನುತ್ತಾರೆ. ಆದರೆ ರಾಜಶೇಖರ ರಾಜ ಪದವಿಯನ್ನು ನಿರಾಕರಿಸುತ್ತಾನೆ. ಅದಕ್ಕೆ ಕಾದಂಬರಿಯಲ್ಲಿ ಈ ರೀತಿ ಹೇಳಲಾಗಿದೆ.

"ಗತಿಸಿದ ವಿರೂಪಾಕ್ಷರಾಯ ರಾಜಶೇಖರನಿಗೆ ಚಿಕ್ಕಪ್ಪನಾಗಬೇಕಲ್ಲವೇ? ಸಾಮ್ರಾಜ್ಯದ ಹಿತಕ್ಕಾಗಿಯೇ ಆಗಲೊಲ್ಲದೇಕೆ, ಚಿಕ್ಕಪ್ಪನ ಕೊಲೆ ಮಾಡಿದುದರಿಂದ ಪಿತೃವಧೆಯ ಪಾತಕ ತನಗೆ ತಗುಲಿಕೊಂಡಿತಂತೆ. ಅದಕ್ಕಾಗಿ ತಾನು ದೊರೆಯಾಗಿ, ಕರ್ಣಾಟಕ ಸಾಮ್ರಾಜ್ಯದ ಪವಿತ್ರವಾದ ಸಿಂಹಾಸನಕ್ಕೆ ಆ ಪಾತಕದ ಮೈಲಿಗೆಯನ್ನು ಸೋಂಕಿಸಲಾರೆನೆಂದು ಆತ ಹೇಳಿದನಂತೆ." (ಆನಂದಕಂದ, 1935:13)

ಕರ್ನಾಟಕದ ಸಿಂಹಾಸನವು ಪವಿತ್ರವಾದುದು. ಆ ಸ್ಥಾನದಲ್ಲಿ ಕೂಡಲು ಅರ್ಹತೆ ಬೇಕು. ಆದರೆ ಇಂದು ಅಂತಹ ಸಿಂಹಾಸನದ ಮೇಲೆ ಅರ್ಹ ವ್ಯಕ್ತಿಗಳಿಲ್ಲದೆ ಸಾಮ್ರಾಜ್ಯದಲ್ಲಿ ಅಶಾಂತಿಯುಂಟಾಗಿದೆ. ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಸಮಕಾಲೀನ ಸಂದರ್ಭದಲ್ಲಿ ಉಂಟಾದ ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ವಿಜಯನಗರದ ಇತಿಹಾಸದೊಂದಿಗೆ ಸಮೀಕರಿಸಲಾಗಿದೆ ಎಂದು ಹೇಳಬಹುದು.

ಪೆದ್ದಣ್ಣನ ಮೂಲಕ ಕಾದಂಬರಿಕಾರರು ಹೇಳಿಸುವ ಮಾತುಗಳನ್ನು ಇಲ್ಲಿ ಗಮನಿಸಬೇಕು.

"ಕರ್ಣಾಟಕ ರಾಜ್ಯಲಕ್ಷ್ಮಿಯ ವೈಭವವನ್ನು! ಹಿಮಾಚಲದಿಂದ ಸೇತುಬಂಧದವರೆಗೆ ಸಮಗ್ರ ಭಾರತದಲ್ಲಿ ವಿಧರ್ಮಿಯರ ಸದ್ದು ಸುಳಿದಾಟಗಳು, ಎಲ್ಲಿಯೂ ಕಿವಿಗೆ ಕೇಳದಂತೆ ಕಿವಿಗೆ ಬೀಳದಂತೆ ಮಾಡಿಬಿಡುತ್ತೇನೆ. ಇದುವರೆಗಿನ ನನ್ನ ಕನಸುಗಳನ್ನೆಲ್ಲ ಕಾರ್ಯ ರೂಪದಲ್ಲಿ ತಂದು ತೋರಿಸುತ್ತೇನೆ." (ಆನಂದಕಂದ, 1935:18) ಪರಧರ್ಮೀಯರಿಂದ ಕರ್ನಾಟಕವನ್ನಷ್ಟೇ ಅಲ್ಲದೆ ಸಮಗ್ರ ಭಾರತವನ್ನು ಮುಕ್ತಿಗೊಳಿಸಿ, ಹೊಸ ರಾಜ್ಯ ಮತ್ತು ರಾಷ್ಟ್ರ ನಿರ್ಮಾಣ ಮಾಡಿಕೊಳ್ಳಬೇಕಾದ ಒತ್ತಾಸೆಯನ್ನು ಅಭಿವ್ಯಕ್ತಿಸಿರುವುದು ಇಲ್ಲಿ ಕಂಡುಬರುತ್ತದೆ.

ನಾಡು ಸುಖವಾಗಿದ್ದರೆ ನಾವು ಸುಖವಾಗಿರುತ್ತೇವೆ ಎನ್ನುವ ಮಾತು ಈ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತದೆ. "ಸಾಮ್ರಾಜ್ಯವು ನಿಷ್ಕಂಟಕವಾಗಿ ಸಾಗಲು ತೊಡಗಿತೆಂದರೆ ನಾವೆಲ್ಲರೂ ತಾಯತೊಡೆಯಲ್ಲಿ ಮಲಗಿದ್ದ ಹಸುಮಗುವಿನಂತೆ ಈ ಕನ್ನಡತಾಯ ತೊಡೆಮಡಿಲಲ್ಲಿ ಹಾಯಾಗಿ ಮಲಗಿಕೊಂಡಿರಬಹುದು!" (ಆನಂದಕಂದ, 1935: 73) ಯಾವ ಆಪತ್ತಿಗೂ ಒಳಗಾಗದಂತೆ ನಾವು ನಮ್ಮ ನಾಡದೇವಿಯನ್ನು ಕಾಪಾಡಿದರೆ, ನಮಗೂ ಯಾವ ಆಪತ್ತುಗಳು ಬರುವುದಿಲ್ಲ. ಅಂತಹ ಆಪತ್ತುಗಳು ಒದಗದಂತೆ ಮುನ್ನೆಚ್ಚರಿಕೆ ವಹಿಸಿಕೊಳ್ಳಬೇಕೆಂಬುದೇ ಕಾದಂಬರಿಕಾರರ ಅನಿಸಿಕೆಯಾಗಿದೆ. ಹಾಗೆಯೇ ನಾಡಿನ ಕುರಿತಂತೆ ರಾಜಶೇಖರನು ಪೆದ್ದರಾಯನ ಪಟ್ಟಾಭಿಷೇಕದ ಸಂದರ್ಭದಲ್ಲಿ ಹೇಳುವ ಮಾತುಗಳನ್ನು ನೋಡೋಣ.

"ನಮ್ಮ ಕನ್ನಡ ಸಾಮ್ರಾಜ್ಯವು ಭಾರತದ ಬೇರೆ ಬೇರೆ ದೇಶದ ರಾಜ್ಯಗಳಿಗೆ ಆದರ್ಶವಾಗಿರಬೇಕೆಂಬ ಮಾತು, ರಾಜಪ್ರಜೆಗಳಿಬ್ಬರ ಹೃದಯದಲ್ಲಿಯೂ

> ಬೇರೂರಿನಿಲ್ಲಬೇಕು! ಹಾಗೆ ಆದಾಗಲೆ 'ದೊರೆಯು ದೇವ ದೇವನ ಪ್ರತಿನಿಧಿ!' ಪ್ರಜೆಗಳು ಆತನ ಪ್ರಾತಿನಿಧ್ಯವನ್ನು ಒಪ್ಪಿ ನಡೆಯುವವರು ಎಂಬಂತಾಗಿ, ಶಾಂತಿ ಸಮಾಧಾನಗಳು ಅಖಂಡವಾಗಿ ನೆಲೆಗೊಳ್ಳುವವು." (ಆನಂದಕಂದ, 1935:115)

ಎನ್ನುವಂತಹ ಮಾತುಗಳೂ ಸಹ ಮೇಲಿನ ವಿಚಾರಕ್ಕೆ ಪೂರಕವಾದವುಗಳಾಗಿವೆ. ರಾಜ ಮತ್ತು ಪ್ರಜೆಗಳು ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸಿದಾಗ ನಾಡಿನ ಏಳಿಗೆಯಾಗುತ್ತದೆ. ಈ ಎರಡೂ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ನಮ್ಮ ನಾಡನ್ನು ನಾವು ಆಳಬೇಕು. ಪರಕೀಯತೆಯೆನ್ನುವುದು ನಮ್ಮಿಂದ ದೂರವಾಗಬೇಕು ಎನ್ನುವ ಆಶಯ ಇಲ್ಲಿದೆ.

ಪಟ್ಟಧಾರಿಯಾದ ಪೆದ್ದರಾಯನು ಸಾಮ್ರಾಜ್ಯದ ಕುರಿತು ಹೇಳುವ ಮಾತುಗಳು ಹೀಗಿವೆ.

> "ಸಾಮ್ರಾಜ್ಯದ ಪ್ರೇಮಿಗಳಾದ ನನ್ನ ಕನ್ನಡ ವೀರಬಂಧೂಗಳೇ ಸಿಂಹಾಸನವನ್ನು ಏರಿ ಕುಳಿತವನು ಅನುಸರಿಸಬೇಕಾದ ಕರ್ತವ್ಯಗಳ ಜಾಗ್ರತಿಯು ನನ್ನಲ್ಲಿಯೂ ಇದೆಯೆಂದು ನಾನು ಭಾವಿಸುತ್ತೇನೆ. ಕನ್ನಡ ಜನರೆಲ್ಲರೂ ಸೌಖ್ಯವಾಗಿ ಇರಬೇಕೆಂದು ನನ್ನ ಮನಃಪೂರ್ವಕವಾದ ಆಶೆಯಿದೆ. ಎಲ್ಲೆಲ್ಲಿಯೂ ನಮ್ಮ ವೈದಿಕ ಧರ್ಮವು ತಲೆಯೆತ್ತಿ ನಿಲ್ಲಬೇಕೆಂದು ನನ್ನ ಅಂತರಂಗದ ಅಪೇಕ್ಷೆಯಿದೆ. 'ಕನ್ನಡಿಗರೆಲ್ಲರೂ ವೀರರು, ಧೀರರು, ಸಾಹಸಿಗಳು, ಗಂಡೆದೆಯವರು' ಎಂದು ನಮಗೆ ವೈರಿಗಳಾಗಿದ್ದವರೂ ನಮ್ಮನ್ನು ಹಾಡಿಹೊಗಳುವಂತೆ ಮಾಡಬೇಕೆಂದು, ನಿರಂತರವೂ ನನ್ನ ಹೃದಯವು ತಾಂಡವವಾಡುತ್ತಲಿದೆ. ತಮ್ಮೆಲ್ಲರ ತೋಳ ನೆರವು ನನಗೆ ಇದ್ದುದಾದರೆ ಅಂತಹ ಕಾಲವು ನಮ್ಮನ್ನು ಬೇಗನೆ ಸಮೀಪಿಸುವಂತೆ ಮಾಡಬೇಕೆಂಬ ಆತುರವು ನನ್ನ ಅಂಗಾಂಗಳನ್ನೂ ಸ್ಫುರಣಗೊಳಿಸುತ್ತಲಿದೆ. ಶಕ್ತಿದಾತ್ರಿಯಯಾದ ಭುವನೇಶ್ವರಿಯ ದಯೆಯ ದೃಷ್ಟಿ... ನನಗೆ... ತಮ್ಮೆಲ್ಲರಿಗೆ ನಿಲ್ಲಬೇಕು... ಅಷ್ಟೆ!" (ಆನಂದಕಂದ, 1935:13)

ಅಂದರೆ ಕನ್ನಡ ಭಾಷಿಕರೆಲ್ಲರೂ ಒಂದಾದರೆ ನಮ್ಮನ್ನು ಯಾವ ಶಕ್ತಿಯೂ ಎದುರಿಸಲಾರದು ಎನ್ನುವುದಕ್ಕೆ ಲೇಖಕರು ಚರಿತ್ರೆಯನ್ನು ನಿದರ್ಶನವಾಗಿ ಹೇಳುತ್ತಾ ಹೋಗುತ್ತಾರೆ. ಕನ್ನಡಿಗರ ವೀರತ್ವವನ್ನು ಹೇಳುತ್ತ ಮತ್ತೆ ಎಚ್ಚೆತ್ತುಕೊಂಡು ಅನ್ಯರ ಆಳ್ವಿಕೆಯಲ್ಲಿರುವ ನಮ್ಮ ನಾಡದೇವಿ ಭುವನೇಶ್ವರಿಯನ್ನು ಬಂಧಮುಕ್ತಳನ್ನಾಗಿ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ.

ಈಶ್ವರನಾಯಕನ ದುರ್ಬೋಧನೆಗೆ ಕಿವಿಗೊಟ್ಟ ಪೆದ್ದರಾಯನು ವಿಜಯನಗರದಲ್ಲಿರುವ ಮುಸ್ಲಿಮರೆಲ್ಲರೂ ರಾಜ್ಯ ಬಿಟ್ಟು ಹೋಗಬೇಕೆಂದು ರಾಜಾಜ್ಞೆ ಹೊರಡಿಸುತ್ತಾನೆ. ಈ ವಜ್ರಾಘಾತದ ಆಜ್ಞೆಯಿಂದ ನೊಂದ ಮುಸ್ಲಿಮರು ರಾಜಶೇಖರನಲ್ಲಿಗೆ ಹೋಗಿ ತಮ್ಮ

ಅಳಲನ್ನು ತೋಡಿಕೊಳ್ಳುತ್ತಾರೆ. ರಾಜಶೇಖರನು ಇದು ತಪ್ಪು ಎಂದು ಪೆದ್ದರಾಯನಿಗೆ ಹೇಳಿದಾಗ ಆತನ ಉತ್ತರ ಹೀಗಿದೆ.

> "ಉತ್ತರ ಭಾರತದಲ್ಲಿ ಮಹಮ್ಮದೀಯ ದೊರೆಗಳು, ವೈದಿಕ ಧರ್ಮದ ಬಡಬಗ್ಗರಿಂದಲೂ ತೆಗೆದುಕೊಳ್ಳುತ್ತಿದ್ದ ತಲೆದಂಡದಲ್ಲಿ, ದಯೆ-ದಾಕ್ಷಿಣ್ಯಗಳನ್ನೇನಾದರೂ ತೋರಿಸುತ್ತಾರೆಯೇ? ಮಹಮ್ಮದ್ ತುಘಲಖನ ಚರಿತ್ರೆಯನ್ನು ಕೇಳಿಲ್ಲವೆ ನೀವು? ಭಾರತೀಯರನ್ನು ಪಶುಗಳಂತೆ ಬೇಟೆಯಾಡುತ್ತಿದ್ದನಂತೆ! ಮುಯ್ಯಿಗೆ ಮುಯ್ಯಿ ತೀರಲೇಬೇಕು! ಮಾಡಿದವರು ಉಣ್ಣಬೇಕು ಮನದಂತಹ ಕಡುಬು!"( ಆನಂದಕಂದ, 1935:145)

ಯಾರೋ ಒಬ್ಬ ರಾಜನು ಮಾಡಿದ ತಪ್ಪಿಗೆ ಒಂದು ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ತಪ್ಪು. ಯಾರೋ ಮಾಡಿದ ತಪ್ಪಿಗೆ ಮತ್ತ್ಯಾರೋ ತಲೆದಂಡ ತೆರುವುದು ಸರಿಯಲ್ಲ ಎಂದು ರಾಜಶೇಖರ ಹೇಳುತ್ತಾನೆ. ಆದರೆ ಪೆದ್ದರಾಯನು ರಾಜಶೇಖರನ ಮಾತುಗಳನ್ನು ತಿರಸ್ಕರಿಸುತ್ತಾನೆ. ಮುಸ್ಲಿಮರ ಪರವಾದ ರಾಜಶೇಖರನನ್ನು ಕೊಲೆ ಮಾಡಲಾಗುತ್ತದೆ. ಇದು ಪೆದ್ದರಾಯನ ಸ್ವಂತದ ನಿರ್ಣಯವಲ್ಲ. ಅಧಿಕಾರದ ದಾಹಕ್ಕಾಗಿ ಈಶ್ವರನಾಯಕನು ರೂಪಿಸಿದ ಕುತಂತ್ರ. ಇದರ ಅರಿವಾದಾಗ ಪೆದ್ದರಾಯ ರಾಜ್ಯವನ್ನೇ ತ್ಯಜಿಸಿಬಿಡುತ್ತಾನೆ. ಚಂದ್ರಗಿರಿಯಿಂದ ಬಂದ ಸಾಳ್ವ ನರಸಿಂಹನು ಅಧಿಕಾರರೂಢನಾಗುತ್ತಾನೆ. ಇಲ್ಲಿಯವರೆಗಿದ್ದ ಅಶಾಂತಿ ವಾತಾವರಣವನ್ನು ಬದಲಿಸಲು ನರಸಿಂಹನು ಸಿದ್ಧನಾಗುತ್ತಾನೆ. ಇಲ್ಲಿಗೆ ಇದುವರೆಗಿದ್ದ ಅಶಾಂತಿಪರ್ವ ಮುಕ್ತಯವಾಗುತ್ತದೆ. ವಿಜಯನಗರ ಹೊಸ ಬದಲಾವಣೆಯ ಹೊಸ್ತಿಲಲ್ಲಿ ಬಂದು ನಿಲ್ಲುತ್ತದೆ.

ಆನಂದಕಂದರ ಈ ಎರಡೂ ಕಾದಂಬರಿಗಳು ಇತರ ಕಾದಂಬರಿಕಾರರಿಗಿಂತ ಭಿನ್ನವಾಗಿ ಕಾಣಿಸುತ್ತವೆ. ಬಹುತೇಕ ಕಾದಂಬರಿಕಾರರು ವಿಜಯನಗರ ಆರಂಭದ ಅಥವಾ ಅಂತಿಮ ಕಾಲದ ಇತಿಹಾಸವನ್ನು ಆಧರಿಸಿದರೆ, ಆನಂದಕಂದರು ಸಂಗಮ ವಂಶದ ಅರಸರ ಕಾಲದ ವಿಜಯನಗರದ ಘಟನೆಯನ್ನು ಆಧರಿಸಿ ಕಾದಂಬರಿಗಳನ್ನು ರಚಿಸಿದ್ದಾರೆ. ಬ್ರಿಟಿಷರ ಆಡಳಿತವನ್ನು ವಿರೋಧಿಸಲು ಇಲ್ಲಿ ಮುಸ್ಲಿಮರನ್ನು ಸಂಕೇತವಾಗಿಟ್ಟುಕೊಂಡಿದ್ದರೂ, ಎಲ್ಲಾ ಮುಸ್ಲಿಮರು ಅಪರಾಧಿಗಳಲ್ಲ ಎನ್ನುವ ನಿಲುವನ್ನು ತಾಳುತ್ತಾರೆ. ಆ ಮೂಲಕ ಕೋಮುಸೌಹಾರ್ದತೆಗೆ ಸಹಾಯಕವಾಗುವಂತೆ ಹಲವು ಅಂಶಗಳನ್ನು ಕಾದಂಬರಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಹೊಸಗನ್ನಡ ಸಾಹಿತ್ಯದ ಹೊಸ ಪ್ರಭೇದವಾಗಿದ್ದ ಕಾದಂಬರಿ ಬಹುಬಗೆಯ ಓದುಗರನ್ನು ಆಕರ್ಷಿಸಿತ್ತು. ಇದನ್ನರಿತ ಅನೇಕ ಬರಹಗಾರರು ಈ ಪ್ರಕಾರದಲ್ಲಿ ಸಾಹಿತ್ಯ ಕೃಷಿ ಮಾಡಿದರು. ಸ್ವಾತಂತ್ರ್ಯಪೂರ್ವದ ಸಂದರ್ಭದಲ್ಲಿ ಕನ್ನಡದಲ್ಲಿ ಬಂದ ಅನೇಕ ಕಾದಂಬರಿಗಳು ಚಾರಿತ್ರಿಕ ವಸ್ತುವನ್ನಿಟ್ಟುಕೊಂಡು ಸಮಕಾಲೀನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಬಗೆಯನ್ನು ವಿವರಿಸುತ್ತವೆ. ವಿಜಯನಗರ ಸ್ಥಾಪನೆಯಿಂದ ಅದರ ಅವನತಿಯವರೆಗಿನ ವಿವಿಧ ಕಾಲಘಟ್ಟದ

ಸಂಗತಿಗಳನ್ನು ಒಳಗೊಂಡು ಅನೇಕ ಕಾದಂಬರಿಗಳು ರಚನೆಗೊಂಡಿವೆ. ಹೀಗೆ ರಚನೆಗೊಂಡ ಕಾದಂಬರಿಗಳಲ್ಲಿ ವೈದಿಕ ಧರ್ಮವನ್ನು, ವಿದ್ಯಾರಣ್ಯರನ್ನು ಹೆಚ್ಚು ವೈಭವೀಕರಿಸಲಾಗಿದೆ. ವಿದ್ಯಾರಣ್ಯರ ತಪಸ್ಸಿನ ಫಲದಿಂದ ಉದಯಿಸಿದ ಈ ಸಾಮ್ರಾಜ್ಯವು ಅನೇಕ ಏಳು ಬೀಳುಗಳನ್ನು ಕಂಡಿದೆ. ಇದಕ್ಕೆ ಅಂದಿನ ರಾಜಕೀಯ ವ್ಯವಸ್ಥೆಯಲ್ಲಿನ ಆಂತರಿಕ ಕಲಹಗಳು, ರಾಜರ ವಿಲಾಸಿ ಪ್ರಿಯತೆ, ಮೇಲಿಂದ ಮೇಲೆ ಕೈಗೊಂಡ ಯುದ್ಧಗಳು, ಜಗತ್ತೇ ತಿರುಗಿ ನೋಡುವಂತಹ ಅಲ್ಲಿನ ಸಂಪತ್ತು, ವಿಧರ್ಮೀಯ ಸೈನಿಕರ ವಿಶ್ವಾಸ ಘಾತುಕತನ ಮುಂತಾದವುಗಳು ಕಾರಣವಾಗಿವೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಸಾಮ್ರಾಜ್ಯ ನಿಷ್ಠರು ತೋರಿಸ ಸಾಹಸ, ನಾಡಿನ ಮೇಲಿನ ಅವರ ಅಭಿಮಾನ, ಅವನತಿಯ ಹಾದಿಹಿಡಿದ ಸಾಮ್ರಾಜ್ಯವನ್ನು ಕಾಪಾಡಿಕೊಂಡ ಬಗೆ- ಇವುಗಳು ಅನುಕರಣೀಯವಾದವುಗಳು ಎನ್ನುವುದನ್ನು ಈ ಮೇಲೆ ನೋಡಲಾದ ಕಾದಂಬರಿಗಳಲ್ಲಿ ನೋಡಬಹುದಾಗಿದೆ. ಇಂತಹ ಘಟನೆಗಳನ್ನು ಆದರ್ಶ ಮೌಲ್ಯಗಳೆಂದು ಹೇಳುವ ಮೂಲಕ ಜನರಲ್ಲಿ ತಮ್ಮ ಗುರುತನ್ನು ಕಟ್ಟಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಹೀಗಾಗಿ ಕನ್ನಡ ಮತ್ತು ಹಿಂದೂ ಗುರುತುಗಳನ್ನು ರೂಪಿಸಿಕೊಳ್ಳಲು ನೀಡಿದ ಪ್ರೇರಣೆಗಳು ಕಂಡು ಬರುತ್ತವೆ. ಹಿಂದೂ ರಾಷ್ಟ್ರೀಯತೆಯನ್ನು ರೂಪಿಸಿಕೊಳ್ಳಲು ಪ್ರೇರಕವಾದ ಅಂಶಗಳು ಹೆಚ್ಚಿವೆ.

* * *

**ಉಲ್ಲೇಖಗಳು :**


ಕುಲಕರ್ಣಿ ಶಂಕರ ಅಣ್ಣಾಜಿ, 1922, *ಕರ್ನಾಟಕ ಸಿಂಹಾಸನ ಸ್ಥಾಪನೆ*, ಶ್ರೀವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಧಾರವಾಡ.

ಅದೇ.

ಅದೇ.

ಅದೇ.

ಅದೇ.

ಅದೇ.

ಕರ್ಪೂರ್ ಆರ್.ಟಿ., 1927, *ಕನ್ನಡಿಗರ ಕಾರಸ್ಥಾನ*, ಶ್ರೀಕ್ಷೇತ್ರ ಆನಂದವನ.

ನಾಗೇಶ, 1939, *ಎಚ್ಚಮನಾಯಕ, ಸದ್ಭಾವಚಂದ್ರಿಕೆ*, ಆನಂದವನ ಅಗಡಿ.

ಅದೇ.

ಅದೇ.

ಅದೇ.

ಗಳಗನಾಥ, 1999, *ಕನ್ನಡಿಗರ ಕರ್ಮಕಥೆ,* (ಗಳಗನಾಥರ ಕಾದಂಬರಿಗಳು ಸಂ–2) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಗಳಗನಾಥ, 1999, ಕುಮುದಿನಿ, (ಗಳಗನಾಥರ ಕಾದಂಬರಿಗಳು ಸಂ–2)ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅದೇ.

ಗಳಗನಾಥ, 1999, ಮಾಧವ ಕರುಣಾವಿಲಾಸ, (ಗಳಗನಾಥರ ಕಾದಂಬರಿಗಳು ಸಂ–1) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೀರ್ತಿನಾಥ ಕುರ್ತುಕೋಟಿ, 2002, ಯುಗಧರ್ಮ ಮತ್ತು ಸಾಹಿತ್ಯ ದರ್ಶನ.

ಕೃಷ್ಣಮೂರ್ತಿ ಕಿತ್ತೂರು, 1978, :ಗಳಗನಾಥರು ಮತ್ತು ಅವರ ಕಾದಂಬರಿಗಳು.

ಶಿವರಾಮ ಪಡಿಕ್ಕಲ್, 2001, ನಾಡು ನುಡಿಯ ರೂಪಕ: ರಾಷ್ಟ್ರ, ಆಧುನಿಕತೆ ಮತ್ತು ಕನ್ನಡದ ಮೊದಲ ಕಾದಂಬರಿಗಳು.

ಗಳಗನಾಥ, 1999, ಮಾಧವ ಕರುಣಾವಿಲಾಸ, (ಗಳಗನಾಥರ ಕಾದಂಬರಿಗಳು ಸಂ–1) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಆನಂದಕಂದ, 1934; ರಾಜಯೋಗಿ. ಮನೋಹರ ಗ್ರಂಥಮಾಲೆ, ಧಾರವಾಡ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಅದೇ.

ಗುರುಲಿಂಗ ಕಾಪಸೆ(ಸಂ), 2003, ಆನಂದಕಂದ ದೇಶೀ ಪ್ರತಿಭೆಯ ಸಾಧನೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

ಆನಂದಕಂದ 1935: ಅಶಾಂತಿಪರ್ವ. ಶರತ್ ಪ್ರಕಾಶನ ಮಂದಿರ, ಧಾರವಾಡ.

ಅದೇ.

ಅದೇ.

ಅದೇ.

ಅದೇ.

ಅದೇ.

# ಅಧ್ಯಾಯ–7

# ಪ್ರವಾಸಿ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

* ಪಂಪಯಾತ್ರೆ
* ಜೀರ್ಣ ವಿಜಯನಗರಾದರ್ಶನಂ
* ಪ್ರವಾಸಿಗರ ಕೈಪಿಡಿಗಳಲ್ಲಿ ಹಂಪಿ ಸ್ಮಾರಕಗಳ ನಿರೂಪಣೆ
* ಮಾರ್ಗದರ್ಶಕರು ನಿರೂಪಿಸುವ ವಿಜಯನಗರ

ನಿದ್ದೆ ಬಾರದು ಇನ್ನು ಈ ಜನ್ಮಕ್ಕೆ
ಬಿದ್ದ ಹಂಪೆಯ ಕಂಡು ಕಂಗೆಟ್ಟೆನು...
ಶತಮಾನ ನಾಲ್ಕಾಯ್ತು ವಿಜಯನಗರಿ
ಅತಿನಿದ್ದೆ ಗತಿಹೊಂದಿ ಅವರ ನಗರಿ

–ಹೊಯಿಸಳ

# ಅಧ್ಯಾಯ-7

## ಪ್ರವಾಸಿ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ

ಐತಿಹಾಸಿಕವಾಗಿ ತುಂಬಾ ಪ್ರಸಿದ್ಧವಾಗಿರುವ ಹಂಪಿ ಕ್ಷೇತ್ರವು ಪ್ರವಾಸಿಗರ ಕೇಂದ್ರವಾಗಿಯೂ ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ಐತಿಹಾಸಿಕ ಸ್ಮಾರಕಗಳಿಗೂ ಮತ್ತು ಪ್ರವಾಸೋದ್ಯಮಕ್ಕೂ ನೇರವಾದ ಸಂಬಂಧವಿದೆ ಎನ್ನುವ ಮಾತಿಗೆ ಹಂಪಿಯೇ ನಿರ್ದಶನವಾಗಿದೆ. ಐತಿಹಾಸಿಕವಾಗಿ ಪ್ರಸಿದ್ಧವಾದ ಹಂಪಿ ಪರಿಸರದಲ್ಲಿ ಇರುವ ಸ್ಮಾರಕಗಳು ಮತ್ತು ಲಿಖಿತ ಸಾಮಗ್ರಿಗಳು ಸಾಮಾನ್ಯವಾಗಿ ರಾಜಮಹಾರಾಜರುಗಳ ವೈಭವದ ಆಡಳಿತ, ಅವರು ಕೊಟ್ಟ ದಾನದ ಪ್ರಶಂಸೆ, ಯುದ್ಧ ಮತ್ತು ಇತರ ಸಂದರ್ಭದಲ್ಲಿ ಅವರ ಪರವಾಗಿ ಹೋರಾಡಿದ ವೀರಯೋಧರ ಸಾಹಸಗಾಥೆಯನ್ನು ಉಲ್ಲೇಖಿಸುತ್ತವೆ. ಈ ವಿವರಗಳಗೆ ಇಂದು ಆಳಿದುಳಿದ ಸ್ಮಾರಕಗಳೆ ಆಕರಗಳಾಗಿವೆ. ಇಂಥಲ್ಲಿ ಬಹುಸಂಖ್ಯಾತ ಜನಸಾಮಾನ್ಯರ ಮತ್ತು ಅವರ ಪ್ರತಿಕ್ರಿಯೆಗಳು ನಿರಾಕರಣೆಗೆ ಒಳಗಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಸಾಮಾನ್ಯವಾಗಿ ಜನರು ತಮ್ಮ ಪರಂಪರೆಯ ನೆನಪುಗಳನ್ನು ಮೌಖಿಕ ರೂಪದಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಲಿಖಿತ(ಸ್ಮಾರಕ) ಮತ್ತು ಮೌಖಿಕ, ಚಾರಿತ್ರಿಕ ನೆನಪುಗಳ ಸಂಮಿಶ್ರಣದ ಮುಖೇನ ಹಂಪಿಯ ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸು ಪ್ರಯತ್ನವನ್ನು ಪ್ರವಾಸಿಗರ ಕೈಪಿಡಿಗಳ ಬರಹಗಾರರು ಮತ್ತು ಮಾರ್ಗದರ್ಶಕರುಗಳು ಮಾಡಿದ್ದಾರೆ, ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಲಿಖಿತ ಮತ್ತು ಮೌಖಿಕ ದಾಖಲೆಗಿಂತ ಬಹಳ ಕುತೂಹಲದ ಸಂಗತಿಗಳು ಕಾಣಸಿಗುತ್ತವೆ ಎನ್ನುವುದನ್ನು ಮರೆಯುವಂತಿಲ್ಲ. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಪ್ರವಾಸಿ ಕೈಪಿಡಿಗಳನ್ನು, ಮಾರ್ಗದರ್ಶಕರ ನಿರೂಪಣೆಯನ್ನು ಹಾಗೂ ಪ್ರವಾಸಿ ಕೃತಿಗಳನ್ನು ಕುರಿತು ಚರ್ಚಿಸಲಾಗಿದೆ.

–1–

**ಪಂಪಯಾತ್ರೆ : (1926)**

ವಿ.ಸೀತಾರಾಮಯ್ಯನವರು ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳವನ್ನು ಮುಗಿಸಿಕೊಂಡು ಬರುವಾಗ ಡಿ.ವಿ.ಜಿ., ಟಿ.ಎಸ್.ವೆಂಕಣ್ಣಯ್ಯ, ಬೆಳ್ಳಾವೆ ವೆಂಕಟ ನಾರಾಯಣಪ್ಪ ಮತ್ತು ಎಂ.ಆರ್.ಶ್ರೀನಿವಾಸಮೂರ್ತಿರ ಜೊತೆಗೂಡಿ ಹಂಪೆ ಯಾತ್ರೆ ಕೈಗೊಂಡು ಆ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ.

ಈ ಸಮಯಕ್ಕಾಗಲೇ ಪ್ರಕಟಗೊಂಡಿದ್ದ 'ಮರೆತು ಹೋದ ಮಹಾಸಾಮ್ರಾಜ್ಯ', 'ಎಂದೂ ಮರೆಯದ ಮಹಾಸಾಮ್ರಾಜ್ಯ' ಮತ್ತು 'ಕರ್ನಾಟಕ ಗತವೈಭವ' ಕೃತಿಗಳು ಹಂಪೆಗೆ ಚಾರಿತ್ರಿಕ ಮಹತ್ವವನ್ನು ತಂದುಕೊಟ್ಟಿದ್ದವು. ಕರ್ನಾಟಕ ಏಕೀಕರಣ ಚಳುವಳಿ ಬಿರುಸುಗೊಂಡ

ಸಂದರ್ಭದಲ್ಲಿ ಹಂಪೆಗೆ ಮತ್ತಷ್ಟು ಮಹತ್ವ ಪ್ರಾಪ್ತಿಯಾಯಿತು. ಬರಹಗಾರರ, ಕವಿಗಳ, ನಾಡಿನ ಚಿಂತಕರನ್ನು ಹಂಪೆ ಕೈ ಮಾಡಿ ಕರೆಯಿತು. ಇಂತಹ ಸಂದರ್ಭದಲ್ಲಿ ವಿ.ಸೀತಾರಾಮಯ್ಯನವರು ತಮ್ಮ ಯಾತ್ರೆಯನ್ನು ಹಂಪೆಯೆಡೆಗೆ ಕೈಗೊಂಡಿರುವುದು ಸಹಜವಾಗಿ ತೋರುತ್ತದೆ. ಆ ಸಂದರ್ಭದಲ್ಲಿ ಹಂಪೆಯಲ್ಲಿ ವಿರೂಪಾಕ್ಷ ದೇವಸ್ಥಾನವನ್ನು ಬಿಟ್ಟರೆ ಉಳಿದ ಸ್ಮಾರಕಗಳಿಗೆ ಅಷ್ಟೇನು ಪ್ರಾಮುಖ್ಯತೆ ದೊರೆತಿರಲಿಲ್ಲ ಎನ್ನುವುದು ಈ ಕೃತಿಯಲ್ಲಿ ವಿವರಿಸಲ್ಪಟ್ಟ ಸಂಗತಿಗಳಿಂದ ತಿಳಿದು ಬರುತ್ತದೆ. "ಹಂಪೆ ಪುಣ್ಯಕ್ಷೇತ್ರ; ಇಂಥ ಪುಣ್ಯಸ್ಥಳದಲ್ಲಿ ಇಷ್ಟು ಚೇಳು ಮೊಂಡರಕಪ್ಪೆಗಳು ಏಕಿವೆಯೋ ಪಂಪಾಪತಿಗೇ ಗೊತ್ತು. ಮೊಳದುದ್ದ ಮೊಂಡರಕಪ್ಪೆ, ಗೇಣುದ್ದ ಚೇಳುಗಳೆ? ಈ ಜನರಿಗೆ ಭಯವಿಲ್ಲವೆನೋ? ಅವರಿಗಿಂತೂ ಅದು ಸಾಮಾನ್ಯವಾಗಿ ಹೋಗಿದೆ."(ವಿ.ಸೀತಾರಾಮಯ್ಯ, 2005:249) ಎನ್ನುವಲ್ಲಿ ಅಂದಿನ ಹಂಪೆಯ ಸ್ಥಿತಿಗತಿಯ ದರ್ಶನವಾಗುತ್ತದೆ.

ಪ್ರವಾಸ ಸಂದರ್ಭದಲ್ಲಿ ಊಟದ ವಿಚಾರವಾಗಿ ಹೇಳುವ ಮಾತುಗಳು ಗಮನಿಸತಕ್ಕವಾಗಿವೆ. "ನಮಗೆ ವ್ರತವಿಲ್ಲ, ನಿಷ್ಠೆಯಿಲ್ಲ. ಆಚಾರವಿಲ್ಲ; ಊಟ ಉಪಚಾರಗಳಲ್ಲಿ ಯಗ್ಗಿಲ್ಲ. ಹೋಟೇಲುಗಳಿರುವ ಕಡೆ ಹೋಗಿ ಊಟ ಮಾಡುವೆವು. ತಿಂಡಿ ಗಿಂಡಿ– ಅವು ಹೇಗಾದರೂ ಇರಲಿ ಮಾಡುವವರು ಬ್ರಾಹ್ಮಣರಾಗಿದ್ದರೆ ಸರಿ– ಹೋಗಿ ತಿಂದು ಬಿಡುವೆವು. ಆನಂದ ಭವನಗಳಲ್ಲಿ ತಿನ್ನುವ ನಮಗೆ ಎಲ್ಲಾದರೇನು?"(ವಿ.ಸೀತಾರಾಮಯ್ಯ, 2005:252) ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿನ ನಿಯಮಗಳು ಗಟ್ಟಿತನವನ್ನು ಈ ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತವೆ. ಹಾಗೆಯೇ ಇದೇ ದೃಷ್ಟಿಯಿಂದ ಇವರು ಹಂಪೆಯನ್ನು ನೋಡಿದರೋ ಎನ್ನುವ ಸಂಶಯವೂ ಮೂಡುತ್ತದೆ. ಅದೇನೆ ಇದ್ದರೂ ಇಲ್ಲ ಹಂಪೆಯನ್ನು ವಿ.ಸಿ.ಯವರು ಗ್ರಹಿಸಿದ ಬಗೆಯನ್ನು ನೋಡುವುದು ಉಚಿತ.

ಹಲವು ತೊಂದರೆಗಳ ನಡುವೆಯೂ ಹಂಪೆಯಲ್ಲಿನ ಭಗ್ನ ಮೂರ್ತಿಗಳನ್ನು ಕಂಡ ವಿ.ಸೀ.ಯವರು ಹೀಗೆನ್ನುತ್ತಾರೆ. "ನಿಜವಾದ ದೇವತಾ ವಿಗ್ರಹಗಳಿವು. ಹೀಗಿದ್ದರಲ್ಲವೇ, ಜನರಿಗೆ ಅವುಗಳಲ್ಲಿ ಭಕ್ತಿಯೂ ಪ್ರೀತಿಯೂ ಹುಟ್ಟುವುದು;? ಆದರೆ ನಾವು ಹತಭಾಗ್ಯರು. ಆ ದೇವತಾ ಮೂರ್ತಿಗಳನ್ನು ಕಣ್ಣಾರೆ ನೋಡಿ ಸಂತೋಷಪಡುವ ಪುಣ್ಯವು ನಮಗೆ ಎಲ್ಲಿ ಬಂದೀತು? ಯಾರೊ ಕ್ರೂರಕರ್ಮಿಗಳು– ಘಾತಕರು– ಈ ಸೌಂದರ್ಯವನ್ನೇ ದೂರದಿಂದ ಹುಡುಕಿಕೊಂಡು ಬಂದ ವಿಗಹ್ರಹಗಳ ಚೆಂದವನ್ನೂ ಚೆಲುವನ್ನೂ ನೋಡಿ ಸಹಿಸಲಾರದೆ ಅವನ್ನು ಭಿನ್ನ ಮಾಡಿದ್ದಾರೆ. ಅನ್ಯಮತೀಯರೇ ಅದನ್ನು ಮಾಡಿರಬೇಕೆನ್ನಲಾರೆ, ನಾಶಕ್ರಿಯೆಯಲ್ಲಿ ನಮ್ಮವರ ವ್ಯಾಪಾರ ಸಣ್ಣದೇನಲ್ಲ." (ವಿ.ಸೀತಾರಾಮಯ್ಯ, 2005:261) ಭಗ್ನಗೊಂಡು ನಿಂತಿರುವ ಮೂರ್ತಿಗಳು ಅನ್ಯರ ದಾಳಿಯಿಂದಾದ ಪರಿಣಾಮವನ್ನು ಸೂಚಿಸುತ್ತವೆ ಎನ್ನುವ ವಾದವನ್ನು ವಿ.ಸೀ.ಯವರು ತಳ್ಳಿಹಾಕುತ್ತಾರೆ. ಏಕೆಂದರೆ ಸುಮಾರು ಸು.600 ವರ್ಷಗಳ ಅವಧಿಯಲ್ಲಿ ಪ್ರಕೃತಿಯ ವಿಕೋಪದಿಂದ, ಹಣದಾಸೆಗಾಗಿ ನಮ್ಮವರೇ

ಎಸಗಿದ ದುಷ್ಕೃತ್ಯಗಳಿಂದ, ಚಾರಿತ್ರಿಕ ಅರಿವಿರದ ಪಾಮರರಿಂದ– ಹೀಗೆ ಬೇರೆ ಬೇರೆ ಕಾರಣಗಳಿಂದಾಗಿಯೂ ಮೂರ್ತಿಗಳು ಭಗ್ನವಾಗಿವೆ ಎನ್ನುವಂತಹದ್ದು ಅವರ ಗಮನಕ್ಕೆ ಬಂದಂತಿದೆ.

ವಿ.ಸೀ.ಯವರ ಪ್ರವಾಸ ಕಥನದ ಅನುಭವದ ನಿರೂಪಣೆಯು ತುಂಬಾ ಚೆನ್ನಾಗಿ ಮೂಡಿಬಂದಿದೆ. ಮೊದಲ ಹಂತದಲ್ಲಿ ತಮ್ಮೊಂದಿಗಿದ್ದ ಸಹ ಪ್ರವಾಸಿಗರೊಂದಿಗಿನ ಸಂಭಾಷಣೆಯ ಜೊತೆಗೆ ತಮ್ಮ ಅನುಭವವನ್ನು ವಿವರಿಸುತ್ತಾರೆ. ಎರಡನೆ ಹಂತದಲ್ಲಿ ಹಂಪೆಯನ್ನು ಕಂಡು ಸ್ವತಃ ತಮ್ಮ ಮನಸ್ಸಿನಲ್ಲಾದ ತಳಮಳಗಳನ್ನು ವಿವರಿಸುತ್ತಾರೆ. ಚೆನ್ನಯ್ಯನ ಮಾರ್ಗದರ್ಶನ ಮೂಲಕ ಹಂಪೆಯನ್ನು ಪರಿಚಯಿಸಿಕೊಳ್ಳುವ ತಂಡಕ್ಕೆ ಇಲ್ಲಿನ ಒಂದೊಂದು ಸ್ಥಳ ನೋಡಿದ ಕೂಡಲೇ ಅದರ ಹಿಂದಿರುವ ಚರಿತ್ರೆಯ ನೆನಪು ಕಾಡುತ್ತದೆ. ಅದಕ್ಕೆ ಪೌರಾಣಿಕ ಘಟನೆಗಳು ಕೂಡ ಸಾತಿಯಾಗಿ ನಿಲ್ಲುತ್ತವೆ. ಹಾಗೆಯೇ ಹಂಪೆಯ ಪ್ರಮುಖ ಸ್ಮಾರಕಗಳನ್ನು ವೀಕ್ಷಿಸಿ ವಿಶ್ರಾಂತಿ ಪಡೆಯುವಾಗ ತಮ್ಮ ಕನಸಿನ ಮೂಲಕ ಕಣ್ಮರೆಯಾದ ವಿಜಯನಗರ ಕಾಲದ ವೈಭವವನ್ನು ಕಾಣುತ್ತಾರೆ.

ಅವರು ತಾವು ಕನಸಿನ ರೂಪದಲ್ಲಿ ಕಂಡದ್ದನ್ನು ಹೇಳುವಾಗ ವಿಜಯನಗರವನ್ನು ಯವನರಿಂದ ರಕ್ಷಿಸಲು ಪಣತೊಡಬೇಕಾದ ಸಮಯ ಬಂದಾಗ ರಾಜನೇಳುವ ಮಾತುಗಳು ಅವರಿಗೆ ರಿಂಗಣಿಸಿದ ಬಗೆ ಹೀಗೆ. "ಪ್ರಜೆಗಳೆ, ಇವರಿಗೆ ನಮ್ಮ ಮೇಲೆ ಎಷ್ಟು ದ್ವೇಷಾಸೂಯೆಗಳಿವೆಯೊ ನಿಮಗೆ ತಿಳಿದೇ ಇದೆ. ಪವಿತ್ರ ಮಂದಿರಗಳನ್ನು ಒಡೆಯುವುದು; ಧರ್ಮವನ್ನು ಕಲುಷಿತ ಮಾಡುವುದು; ಗೋವಧೆ ಮಾಡುವುದು ಅಬಲೆಯರಾದ ನಿಮ್ಮ ಸಂತತಿ ಸತಿಯರ ಮಾನಕ್ಕೂ ನಿಮ್ಮ ಧರ್ಮಕ್ಕೂ ಈ ನಿಮ್ಮ ರಾಷ್ಟ್ರ ಕೀರ್ತಿಯ ಸ್ಥೈರ್ಯಕ್ಕೂ ಬದ್ಧ ವೈರಿಗಳಿವರು, ಕೆಣಕಿ ಬಂದಿರುವ ಅವನ್ನು ಉಗ್ಘಡಿಸಿ ನುಗ್ಗುತ್ತಾರೆ. ಅದು ಅವರ ಯುದ್ಧಘೋಷ. ನೂಕಿನ ಉದ್ಗಾರ. ಇವರ ಸೊಕ್ಕನ್ನು ಈಗಲೇ ಮುರಿಯಬೇಕು... ದೇಶ ಭಕ್ತಗ್ರಾಣಿಗಳೇ! ಎಲ್ಲಿ, ನಾವು ಹೇಡಿಗಳಲ್ಲವೆಂದೂ ಎಂದಿಗೂ ಹಿಂದೆ ನಿಲ್ಲವೆಂದೂ ಶಪಥಮಾಡಿ ಹೇಳಿ; ವೈದಿಕರು ಶಾಂತಿಕರ್ಮಗಳನ್ನೂ ಅರ್ಚಕರು ಪೂಜೆಗಳನ್ನು ಮಾಡಿ ಹೋಗಿ; ನಿಮ್ಮ ಧ್ವನಿಗಳನ್ನು ಕೇಳಿಯೇ ಈ ಕ್ಷುದ್ರ ಜಂತುಗಳು ಪಲಾಯನಗೈಯುವವು ಎನ್ನುತ್ತಿರುವನು." (ವಿ.ಸೀತಾರಾಮಯ್ಯ, 2005:261) ಹಂಪೆಯ ದರ್ಶವನ್ನೆಲ್ಲಾ ಮುಗಿಸಿದ ಮೇಲೆ ವಿ.ಸೀ.ಯವರು ಈ ಬಗೆಯ ಕನಸು ಕಂಡದ್ದು ಏಕೆ? ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ. ಅದಕ್ಕೆ ಉತ್ತರವೂ ಅಷ್ಟೇ ಸಹಜವಾಗಿದೆ. ಮುಸ್ಲಿಮರ ದಾಳಿಯಿಂದಾಗಿ ಹಂಪೆ ಹಾಳಾಯಿತಲ್ಲ ಎನ್ನುವ ಕೊರತೆವೇ ಇದಕ್ಕೆ ಕಾರಣ ಎನಿಸುತ್ತದೆ. ಮೇಲೆ ಬಿದ್ದವರನ್ನು ಎದುರಿಸಲು ರಾಜ ಕರೆಕೊಡುವ ಮಾದರಿಯಲ್ಲಿಯೇ ಇಲ್ಲಿ ಲೇಖಕರು ಅನ್ಯರ ಆಕ್ರಮಣಕ್ಕೆ ಒಳಗಾಗಿರುವ ನಾಡನ್ನು ಸ್ವಾಧೀನ ಪಡಿಸಿಕೊಳ್ಳಲು ಕರೆನೀಡಿದಂತಿದೆ.

**ಜೀರ್ಣ ವಿಜಯನಗರಾದರ್ಶನಂ :(1916)**

ಹಂಪಿಯ ಕುರಿತು ಕನ್ನಡದಲ್ಲಿ ಬಂದಿರುವ ಮೊದಲ ಪ್ರವಾಸಿ ಕೃಪಿಡಿ ಎನ್ನಲಾಗಿದೆ. ಈ ಕೃತಿಯನ್ನು ಸಂಪಾದಿಸಿರುವ ಲಕ್ಷಣ ತೆಲಗಾವಿಯವರು ಈ ಕೃತಿಯು 1916ರಲ್ಲಿ ಪ್ರಕಟಗೊಂಡಿರುವುದಾದರೂ ಇದರ ಹಸ್ತಪ್ರತಿಯು ಅದಕ್ಕೂ ಮುಂಚೆಯೇ ಸಿದ್ಧಗೊಂಡಿರಬೇಕೆಂದು ಹೇಳುತ್ತಾರೆ. ಆದರೆ ಈ ಕೃತಿಯಲ್ಲಿ ಪ್ರವಾಸವನ್ನು ಕೈಗೊಂಡ ವರ್ಷವನ್ನಾಗಲಿ, ತಾವು ಕೃತಿ ರಚಿಸಿದ ವರ್ಷವನ್ನಾಗಲಿ ಹೆಸರಿಸಿಲ್ಲ. ಇದರ ಪ್ರಕಟಿತ ವರ್ಷ 1916.

ಈ ಕೃತಿಯನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು. ಪೂರ್ವಭಾಗ, ಮತ್ತೊಂದು ಉತ್ತರ ಭಾಗ. ಪೂರ್ವಭಾಗದಲ್ಲಿ 1336ರಿಂದ 1565ರ ವರೆಗಿನ ವಿಜಯನಗರದ ಚರಿತ್ರೆಯನ್ನು ಹೇಳಲಾಗಿದೆ. ಉತ್ತರ ಭಾಗವು ಜೀರ್ಣವಾದ ವಿಜಯನಗರದ ಸ್ಮಾರಕಗಳ ವಿವರಣೆಯನ್ನೊಳಗೊಂಡಿದೆ.

ಪೂರ್ವಭಾಗದಲ್ಲಿ ರಾಮಸ್ವಾಮಯ್ಯಂಗಾರ ಅವರು ವಿಜಯನಗರದ ಸಾಮ್ರಾಜ್ಯದ ಚರಿತ್ರೆಯ ಕುರಿತು ಹೇಳುತ್ತಾ, ವಿಜಯನಗರ ಸಾಮ್ರಾಜ್ಯ ಹುಟ್ಟಿಕೊಂಡುದರ ಹಿಂದಿನ ಭೂಮಿಕೆಯನ್ನು ವಿಶ್ಲೇಷಿಸುತ್ತಾರೆ. ಉತ್ತರ ಹಿಂದೂಸ್ತಾನದಿಂದ ದಕ್ಷಿಣದ ಮೇಲೆ ದಾಳಿ ಆರಂಭಿಸಿದ ಮಹಮ್ಮದೀಯರು ಕ್ರಿ.ಶ.1307ರಲ್ಲಿ ದೇವಗಿರಿಯನ್ನು, ಕ್ರಿ.ಶ. 1310ರಲ್ಲಿ ದ್ವಾರಸಮುದ್ರವನ್ನು ವಶಪಡಿಸಿಕೊಂಡರು. ನಂತರ ಓರಂಗಲ್ಲಿನ ಪ್ರತಾಪರುದ್ರನನ್ನು ಬಂಧಿಸಿದರು. ಹೀಗೆ ಒಂದರ ಹಿಂದೆ ಒಂದರಂತೆ ದಕ್ಷಿಣದ ಹಿಂದೂ ರಾಜ್ಯಗಳು ಮುಸ್ಲಿಮರ ದಾಳಿಗೆ ತುತ್ತಾಗಿ ಅವನತಿ ಹೊಂದಿದವು. "ಹೀಗೆ ದಕ್ಷಿಣ ದೇಶದಲ್ಲಿನ ಹಿಂದೂ ರಾಜ್ಯಗಳೆಲ್ಲವೂ ತಳಹತ್ತಿದ್ದರಿಂದ ಹಿಂದೂ ಮತಕ್ಕೂ ದೇಶ ಸ್ವಾತಂತ್ರ್ಯಕ್ಕೂ ಆಧಾರಸ್ತಂಭವೇ ಇಲ್ಲದೆ ಹೋಯಿತು. ಹಿಂದೂ ದೇಶಕ್ಕೆ ಅಂತಹ ವಿಪನ್ನಾವಸ್ಥೆಯು ಪ್ರಾಪ್ತವಾದ ಸಂದರ್ಭದಲ್ಲಿ ಅದನ್ನುದ್ಧರಿಸುವುದಕ್ಕೆ ಅವತರಿಸಿದ ರಾಜ್ಯವೇ ಈ ವಿಜಯನಗರ ಸಾಮ್ರಾಜ್ಯವು." (ಕೆ.ರಾಮಸ್ವಾಮಯ್ಯಂಗಾರ, 2006:19) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಒಂದು ವೇಳೆ ವಿಜಯನಗರ ಸಾಮ್ರಾಜ್ಯ ಉದಯಿಸದಿದ್ದರೆ ಹದಿನಾಲ್ಕನೆಯ ಶತಮಾನಕ್ಕಾಗಲೇ ಹಿಂದೂ ದೇಶವು ಮಹಮ್ಮದೀಯರ ದೇಶವಾಗಿ ಹೋಗುತ್ತಿತ್ತು ಎನ್ನುತ್ತಾರೆ.

ಸಂಗಮನ ಮಕ್ಕಳಾದ ಹರಿಹರ ಬುಕ್ಕರಾಯರು ಓರಂಗಲ್ಲಿನಲ್ಲಿದ್ದರು. ಓರಂಗಲ್ಲಿನ ದಾಳಿಯ ನಂತರ ಆನೆಗೊಂದಿಗೆ ಬರುತ್ತಾರೆ. ಇಲ್ಲಿ ಮಂತ್ರಿಯಾಗಿ. ಕೋಶಾಧ್ಯಕ್ಷರಾಗಿ ಸೇವೆಯಲ್ಲಿ ನಿರತರಾಗುತ್ತಾರೆ. ಸುಲ್ತಾನನ ಆಗ್ರಹಕ್ಕೆ ಗುರಿಯಾದ ಅವನ ಸೋದರಳಿಯನು ಬಂದು ಇವರ ಆಸ್ಥಾನದಲ್ಲಿ ಆಶ್ರಯಪಡೆಯುತ್ತಾನೆ. ಕ್ರೋಧಗೊಂಡ ಸುಲ್ತಾನನು ಆನೆಗೊಂದಿಯ ಮೇಲೆ ದಾಳಿ ಮಾಡುತ್ತಾನೆ. ಇವರನ್ನು ಸೆರೆಯಲ್ಲಿಟ್ಟು ತನ್ನ ಪ್ರತಿನಿಧಿಯನ್ನು ಆನೆಗೊಂದಿಯ ಸಾಮಂತನನ್ನಾಗಿ ನೇಮಿಸುತ್ತಾನೆ. ಆದರೆ ಅಲ್ಲಿನ ಜನರ ವಿರೋಧದಿಂದಾಗಿ

ಸೆರೆಯಲ್ಲಿದ್ದ ಹರಿಹರನಿಗೆ ರಾಜ್ಯ ಒಪ್ಪಿಸಿ ತನ್ನ ಸಾಮಾಂತನನ್ನಾಗಿಸಿಕೊಳ್ಳುತ್ತಾನೆ. ಹರಿಹರನಿಗೆ ವಿದ್ಯಾರಣ್ಯರು ಕುಲಗುರುವಾಗಿರುತ್ತಾರೆ. ಅವರ ಸಲಹೆಯ ಮೇರೆಗೆ ವಿಜಯನಗರ ಸಾಮ್ರಾಜ್ಯವನ್ನು ನಿರ್ಮಿಸುತ್ತಾನೆ.

> "...ಶ್ರೀ ಭುವನೇಶ್ವರಿಯ ಅನುಗ್ರಹದಿಂದ ವಿಜಯನಗರದ ಮೇಲೆ ಮೂರು ಗಳಿಗೆಯ ಹೊತ್ತು ಸುವರ್ಣವೃಷ್ಟಿಯನ್ನು ಸುರಿಸಿದರಂತೆ!! ಯತ್ಯಾಶ್ರಮ ಸ್ವೀಕಾರದಿಂದ ಐಹಿಕ ಸುಖಗಳಲ್ಲಿ ಸ್ವಲ್ಪವೂ ಇಚ್ಛೆಯಿಲ್ಲದವರಾಗಿದ್ದರೂ, ದೇಶವೆಲ್ಲವೂ ತುರುಷ್ಕರಿಂದ ಅರಾಜಕವಾದುದನ್ನು, ಶ್ರೌತಸ್ಮಾರ್ತಕರ್ಮಗಳೆಲ್ಲವೂ ನಶಿಸುತ್ತಿರುವುದನ್ನೂ ನೋಡಿ, ಸ್ವದೇಶ ಸ್ವಮತಗಳನ್ನುದ್ಧರಿಸುವುದಕ್ಕಾಗಿ ಕೇವಲ ನಿರಪೇಕ್ಷಾಬುದ್ಧಿಯಿಂದ ಈ ಮಹಾನುಭಾವರು ವಿಜಯನಗರವೆಂಬ ಹಿಂದೂ ರಾಜ್ಯವನ್ನು ನಿರ್ಮಿಸಿದುದನ್ನು ನೋಡಿದರೆ ಇವರು ಅದ್ವಿತೀಯ ಮಹಾಪುರುಷರೆಂದು ಹೇಳಬೇಕಾಗಿದೆ."(ಕೆ.ರಾಮಸ್ವಾಮಯ್ಯಂಗಾರ, 2006:22)

ಸ್ವಧರ್ಮ ಮತ್ತು ಸ್ವದೇಶಕ್ಕಾಗಿ ವಿದ್ಯಾರಣ್ಯರು ಕೈಗೊಂಡ ಕಾರ್ಯ ಮಹತ್ತರವಾದುದು. ದೇಶ ಅನ್ಯ ಧರ್ಮೀಯರಾದ ತುರುಷ್ಕರ ಕೈವಶವಾದಾಗ, ಪುರಾತನಕಾಲದಿಂದಲೂ ಬಂದ ಇಲ್ಲಿನ ಧರ್ಮ, ಇಲ್ಲಿನ ಜನರು ಅನುಭವಿಸುತ್ತಿದ್ದ ಯಾತನೆಯನ್ನು ನೋಡಲಾರದೆ ವಿದ್ಯಾರಣ್ಯರು ದೇಶದ ಹಾಗೂ ಧರ್ಮದ ರಕ್ಷಣೆಗಾಗಿ ಈ ಸಾಮ್ರಾಜ್ಯ ನಿರ್ಮಿಸಿದರು ಎಂದು ಹೇಳುತ್ತಾರೆ.

ಹಾಗೆಯೇ ಮುಂದುವರೆದು ವಿಜಯನರವನ್ನಾಳಿದ ರಾಜರ ಹಾಗೂ ಅವರ ಕಾಲದಲ್ಲಿ ನಡೆದಿವೆ ಎನ್ನಲಾದ ಘಟನೆಗಳನ್ನಿಟ್ಟು ಸಂಕ್ಷಿಪ್ತ ಚರಿತ್ರೆಯನ್ನು ಹೆಣೆದಿದ್ದಾರೆ. ಇಲ್ಲಿ ರೂಪಿತವಾದ ಚರಿತ್ರೆಯು ಕೇವಲ ರಾಜಕೀಯದ್ದಾಗಿದರೆ ಅದು ಸಾಮಾಜಿಕ, ಆರ್ಥಿಕ, ಧಾರ್ಮಿಕ ಚರಿತ್ರೆಯನ್ನು ಒಳಗೊಂಡಿರುವುದು ಈ ಕೃತಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ರಕ್ಕಸತಂಗಡಗಿ ಯುದ್ಧದ ಪರಾಜಯದ ನಂತರ ಸೋತ ಸೈನಿಕರು ವಿಜಯನಗರಕ್ಕೆ ಹೋಗಿ ತಮ್ಮ ಭಾರ್ಯಾ ಪುತ್ರಾದಿಗಳನ್ನೂ ತಮಗೆ ಸಾಧ್ಯವಾದಷ್ಟು ಸಂಪತ್ತನ್ನು ತೆಗೆದುಕೊಂಡು ಪಟ್ಟಣ ಬಿಟ್ಟು ಓಡಿಹೋದರು. ಮೂರು ದಿನದ ನಂತರ ಮುಸ್ಲಿಂ ಸೈನಿಕರು ವಿಜಯನಗರವನ್ನು ಧ್ವಂಸ ಮಾಡಿ, ಘೋರಕೃತ್ಯಗಳನ್ನು ನಡೆಸಿ ಕೊಳ್ಳೆ ಹೊಡೆದರು. ಪುರವಾಸಿಗಳು ಊರು ಬಿಟ್ಟು ಹೋದರು. ವಿಜಯನಗರವು 'ವಿಜನ'ಸ್ಥಾನವಾಯಿತು ಎಂದು ಹೇಳಿದ್ದಾರೆ. ಅತ್ಯಂತ ವೈಭವದಿಂದ ಮೆರೆದ ಮಹಾಸಾಮ್ರಾಜ್ಯ ಅಲ್ಪಕಾಲದಲ್ಲಿಯೇ ಮುಸ್ಲಿಮರ ದುಷ್ಕೃತ್ಯದಿಂದ ಅವನತಿ ಹೊಂದಿತಲ್ಲ ಎನ್ನುವುದನ್ನು 'ಜಾತಸ್ಯಮರಣಂಧ್ರುವಂ' ಎಂದು ಹೇಳಿ, ಮುಂದಿನ ಭಾಗವಾದ ಉತ್ತರ ಭಾಗವನ್ನು ಆರಂಭಿಸುತ್ತಾರೆ.

ಉತ್ತರ ಭಾಗದ ಆರಂಭದಲ್ಲಿ ವಿಜಯನಗರಕ್ಕೆ ಭೇಟಿಯಿತ್ತ ವಿದೇಶಿಯರು ವಿಜಯನಗರದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳ ವಿವರವಿದೆ. ವಿಜಯನಗರ ಸಾಮ್ರಾಜ್ಯವು ಎಷ್ಟು ಪ್ರಸಿದ್ಧಿಯನ್ನು ಪಡೆದಿತ್ತು ಎಂಬುದು ನಮ್ಮವರಿಂದ ತಿಳಿದುಕೊಳ್ಳುವುದಕ್ಕಿಂತ ವಿದೇಶಿಯರ ಗ್ರಹಿಕೆಯಿಂದ ತಿಳಿಯುವ, ತಿಳಿಸುವ ಪ್ರಯತ್ನ ಇಲ್ಲಿದೆ. ನಂತರ ವಿಜಯನಗರದ ಸ್ಮಾರಕಗಳನ್ನು ಕುರಿತು ಸವಿವರವಾಗಿ ಪರಿಚಯಿಸಲಾಗಿದೆ. ನಂತರ ಹಂಪಿ ಪ್ರದೇಶದಲ್ಲಿರುವ ಪ್ರಮುಖ ಸ್ಮಾರಕಗಳ ವಿಸ್ತೃತವಾದ ಪರಿಚಯವನ್ನು ಮಾಡುತ್ತಾ, ಗತಿಸಿ ಹೋದ ವಿಜಯನಗರದ ವೈಭವವನ್ನು ಓದುಗರ ಮುಂದಿಡುತ್ತಾರೆ. ಹಂಪೆಯಲ್ಲಿನ ಒಂದೊಂದು ಸ್ಮಾರಕಗಳನ್ನು ಹೊಗಳಲು ಒಂದಲ್ಲ ಸಾವಿರ ನಾಲಿಗೆಯಾದರೂ ಸಾಲದು ಎನ್ನುವಲ್ಲಿಯೇ ಹಂಪೆಯ ಬಗೆಗೆ ಅವರಿಗಿದ್ದ ಪ್ರೇಮಭಾವ ವ್ಯಕ್ತವಾಗುತ್ತದೆ. ಆಧುನಿಕಯುಗದ ಅಭಿಯಂತರರಿಗೂ ಇಲ್ಲಿನ ಶಿಲ್ಪಕಲಾ ನೈಪುಣ್ಯ ಸವಾಲಿನದಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ವಿಠ್ಠಲ ದೇವಾಲಯವನ್ನು ಕುರಿತು ಅವರು ಹೀಗೆ ಹೇಳುತ್ತಾರೆ.

> "ಏಕಶಿಲಾಮಯವಾಗಿ ಒಂದೊಂದು ಕಲ್ಲು ಕಂಭದಲ್ಲಿ ಹದಿನಾರು ಕಂಭಗಳು ವಿಂಗಡಿಸಲ್ಪಟ್ಟು ಅವುಗಳಲ್ಲಿ ನಾನಾ ವಿಧವಾದ ವಿಗ್ರಹಗಳು ಸಹಿತ ಕೆತ್ತಲ್ಪಟ್ಟಿರುವವು. ದೇವಾಲಯದ ಛಾವಣಿ ಕೂಡ ಶಿಲಾಮಯವಾಗಿ, ಅದರಲ್ಲಿನ ಶಿಲ್ಪ ಕೆಲಸಗಳನ್ನು ನೋಡಿದರೆ ಆ ಕಾಲದಲ್ಲಿನ ಶಿಲ್ಪಕಳಾವಿಜ್ಞಾನದ ಔನ್ನತ್ಯವನ್ನು ಸಾರಿ ಹೇಳುವಂತಿರುವುದು... ಕಬ್ಬಿಣವಾಗಲಿ, ಮರವಾಗಲಿ, ಮೊಳೆಗಳಾಗಲಿ ಇಲ್ಲದೆ ನಿರ್ಮಿಸಲ್ಪಟ್ಟಿರುವುದನ್ನು ನೋಡಿದ ಜನರು ಆಶ್ಚರ್ಯನಿಮಗ್ನಮಾನಸ್ಕರಾಗದೆ ಹೋಗಲಾರರು." (ಕೆ.ರಾಮಸ್ವಾಮಯ್ಯಂಗಾರ, 2006:55–56)

ಹೀಗೆ ವಿಜಯನಗರದ ವೈಭವಕ್ಕೆ ತಲೆಬಾಗಿ, ಇಂತಹ ವೈಭವದ ಸಾಮ್ರಾಜ್ಯವು ತುರುಷ್ಕರ ವಂಚನಾ ಕೃತ್ಯದಿಂದ ಹಾಳಾಗಿಹೋಯಿತೆನ್ನುತ್ತಾರೆ. ಒಂದೊಮ್ಮೆ ಇಂತಹ ವೈಭವದ ನಾಡು ಇಂದು ಹೇಗಾಗಿದೆಯೆಂಬುದನ್ನು ಹೀಗೆ ಹೇಳುತ್ತಾರೆ.

> "...ಐಶ್ವರ್ಯ ಶೌರ್ಯ ಪ್ರಾಭವಗಳಲ್ಲಿ ಪ್ರಪಂಚದಲ್ಲಿ ಇದಕ್ಕೆಣೆಯಾದುದು ಮತ್ತೊಂದಿಲ್ಲವೆಂದು ಪಶ್ಚಿಮಖಂಡ ವಾಸಿಗಳಿಂದಲೂ ಪೂರ್ವಖಂಡದ ವಾಸಿಗಳಿಂದಲೂ ಸಾವಿರ ಬಾಯಿಗಳಿಂದ ಹೊಗಳಿಕೆಯನ್ನು ಪಡೆದು ಶಿಲ್ಪಿಗಳ ನೈಪುಣ್ಯಕ್ಕೆ ವಿಹಾರಭೂಮಿಯಾಗಿ ಶರಣಾಗತರಿಗೆ ರಕ್ಷಕಸ್ಥಾನವಾಗಿ ಹೆಸರುಗೊಂಡ ವಿಜಯನಗರ ಸಂಸ್ಥಾನವು, ಈಗ ರೂಪರಹಿತವಾಗಿ, ಜನಶೂನ್ಯವಾಗಿ, ಅನಾರೋಗ್ಯ ಪ್ರದೇಶವಾಗಿ, ಅರಣ್ಯವಾಗಿ ನೋಟಕರಿಗೆ ಭಯವನ್ನೂ ಮನಸ್ಸಂತಾಪವನ್ನೂ ಉಂಟು ಮಾಡುತ್ತಲಿದೆ. ಆಹಾ! ಕಾಲಪ್ರಭಾವಕ್ಕೆ ಯಾರೇನು ಮಾಡಬಹುದು!!" (ಕೆ.ರಾಮಸ್ವಾಮಯ್ಯಂಗಾರ, 2006:58)

ಹಾಗೆಯೇ ಆ ಸಂದರ್ಭದಲ್ಲಿ ಬ್ರಿಟಿಷ ಸರ್ಕಾರವು ಹಂಪೆಯ ಜೀರ್ಣೋದ್ಧಾರಕ್ಕಾಗಿ ಮಾಡಿದ ಪ್ರಯತ್ನಗಳನ್ನು ನೆನೆದಿದ್ದಾರೆ. ಅಲ್ಲಿ ಪ್ರವಾಸಿಗರಿಗಾಗಿ ಇರುವ ವಸತಿ ಸೌಲಭ್ಯಗಳ ಸಂಕ್ಷಿಪ್ತ ಮಾಹಿತಿಯನ್ನು ಹೇಳುತ್ತಾರೆ. ಒಟ್ಟಾರೆಯಾಗಿ ಇದೊಂದು ಪ್ರವಾಸಿ ಕೃತಿಯೂ ಹೌದು, ಪ್ರವಾಸ ಕೈಪಿಡಿಯೂ ಹೌದು. ಒಬ್ಬ ಸಾಮಾನ್ಯ ಪ್ರವಾಸಿಗನೂ ಹಂಪಿ ಸ್ಮಾರಕಗಳ ಮಧ್ಯೆ ಸ್ವಾತಂತ್ರವಾಗಿ ಸುತ್ತಾಡಿ ಅವುಗಳನ್ನು ಸಮಗ್ರವಾಗಿ ವೀಕ್ಷಿಸುವ ಮಟ್ಟಿಗೆ ಉಪಯುಕ್ತವಾದ ಕೃತಿ ಇದಾಗಿದೆ.

–2–

**ಪ್ರವಾಸಿಗರ ಕೈಪಿಡಿಗಳಲ್ಲಿ ಹಂಪಿ ಸ್ಮಾರಕಗಳ ನಿರೂಪಣೆ :**

ಹಂಪೆಗೆ ಬರುವ ಪ್ರವಾಸಿಗರಿಗೆ ಅನುಕೂಲವಾಗಲೆಂದು ಕೆಲವು ಬರಹಗಾರರು 'ಹಂಪೆ' ಕುರಿತಾದ ಮಾರ್ಗದರ್ಶಿ ಕೈಪಿಡಿಗಳನ್ನು ಪ್ರಕಟಿಸಿದ್ದಾರೆ. ಹಂಪೆಗೆ ನಮ್ಮ ರಾಜ್ಯದಿಂದ (ಕರ್ನಾಟಕ) ಮಾತ್ರವಲ್ಲದೆ ಬೇರೆ ಬೇರೆ ರಾಜ್ಯಗಳಿಂದ ಹಾಗೂ ದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಈ ಪ್ರವಾಸಿಗರು ಹಂಪೆಯ ಚಾರಿತ್ರಿಕ ಮಹತ್ವವನ್ನು ಅರಿಯಲು ಮತ್ತು ಸುರಕ್ಷಿತವಾಗಿ ಪ್ರವಾಸಕೈಗೊಳ್ಳಲು ಅನುಕೂಲ ಕಲ್ಪಿಸುವ ಉದ್ಧೇಶದಿಂದ ಕನ್ನಡ ಮತ್ತು ಕನ್ನಡೇತರ (ಇಂಗ್ಲಿಷ್, ಹಿಂದಿ, ತೆಲಗು ಇತ್ಯಾದಿ) ಹಲವು ಭಾಷೆಗಳಲ್ಲಿ ಮಾರ್ಗದರ್ಶಿ ಕೈಪಿಡಿಗಳನ್ನು ಹೊರ ತರಲಾಗಿದೆ. ಈ ಪ್ರವಾಸಿ ಮಾರ್ಗದರ್ಶಿ ಕೈಪಿಡಿಗಳು ಹೆಚ್ಚಾಗಿ ಕನ್ನಡದಲ್ಲಿ ರಚನೆಗೊಂಡು ನಂತರ ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಗೊಂಡಿವೆ ಎಂದು ಹೇಳಬಹುದು.  ಬೇಲೂರು ಕೃಷ್ಣಮೂರ್ತಿಯವರು ತಮ್ಮ ಹಂಪೆ ಪ್ರವಾಸಿಗರ ಕೈಪಿಡಿಯ ಲೇಖಕರ ನುಡಿಯಲ್ಲಿ ಈ ರೀತಿ ಹೇಳಿದ್ದಾರೆ "ಈ ಮಾರ್ಗದರ್ಶಿ ಪುಸ್ತಕವನ್ನು ಕನ್ನಡ, ಹಿಂದಿ, ತೆಲುಗು ಹಾಗೂ ಆಂಗ್ಲಭಾಷೆಯಲ್ಲಿ ಹೊರತರುವ ಸಾಹಸ ಮಾಡಿದ ಪ್ರಕಾಶಕರು, ವ್ಯಾಪಾರಿಗಳೂ ಆದ ಹಂಪಿಯ ಶ್ರೀ ಆರ್. ವೆಂಕಟ್ರಮಣದಾಸ್ ರವರಿಗೆ ನನ್ನ ಕೃತಜ್ಞತೆಗಳು" (ಬೇಲೂರು ಕೃಷ್ಣಮೂರ್ತಿ : 3) ಎಂದಿದ್ದಾರೆ.

ವಯಸ್ಸು, ಲಿಂಗ, ಧರ್ಮಗಳ ಅಡೆತಡೆ ಇಲ್ಲದೆ ಪ್ರವಾಸ ಮಾಡುತ್ತಾರೆ.  ಆದ್ದರಿಂದ ಎಲ್ಲರಿಗೂ ಅರ್ಥವಾಗುವಂತ ಸರಳ ಭಾಷೆಯಲ್ಲಿ ಈ ಪುಸ್ತಕಗಳು ರೂಪುಗೊಂಡಿವೆ. ಪ್ರವಾಸಿಗರಿಗಾಗಿ ರೂಪುಗೊಂಡಿರುವ ಈ ಮಾರ್ಗದರ್ಶಿ ಪುಸ್ತಕಗಳನ್ನೂ ಬರೆಯುವ ಉದ್ದೇಶಗಳೇನು ಎನ್ನುವ ಸಂಗತಿ ಮುಖ್ಯವೆನಿಸುತ್ತದೆ.  ಈ ಕುರಿತು ಪ್ರವಾಸಿಗರ ಕೈಪಿಡಿಯನ್ನು ಬರೆದಿರುವ ಲೇಖಕರು ಮುನ್ನುಡಿಯಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ. ಅವುಗಳಲ್ಲಿ ಪ್ರಾತಿನಿಧಿಕ ಹೇಳಿಕೆಯನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ.  ಬೇಲೂರು ಕೃಷ್ಣಮೂರ್ತಿಯವರು 'ಹಂಪೆ' ಎನ್ನುವ ಪ್ರವಾಸಿಗರ ಕೈಪಿಡಿಯಲ್ಲಿ ಈ ರೀತಿ ಅಭಿಪ್ರಾಯ ಪಡುತ್ತಾರೆ. "ಇಂದು ಹಂಪೆ ಕೊಂಪೆಯಾಗಿರುವುದು ನಿಜ ಹಿಂದೆ ಆಳಿ–ಬಾಳಿ ಅಳಿದ

ರಾಜಮಹಾರಾಜರ ವೈಭವದಿಂದ ಮೆರೆದ ಸಾಮ್ರಾಜ್ಯದ ಚರಿತ್ರೆ ಕೇಳಿದಲ್ಲಿ ಕನ್ನಡಿಗರ ಹೃದಯ ಕರಗದಿರದು. ಇಂದು ಮರೆಯಾಗಿರುವ ಗತ ವೈಭವದ ಪರಿಚಯದ ಪ್ರಯತ್ನವೇ ಈ ಮಾರ್ಗದರ್ಶಿ"(ಬೇಲೂರು ಕೃಷ್ಣಮೂರ್ತಿ : 3)ಎಂದಿದ್ದಾರೆ.

> ಭವದೀಯ ವೀರಭದ್ರಯ್ಯಟವರು ತಮ್ಮ 'ಹಂಪೆ' ಎನ್ನುವ ಪ್ರವಾಸಿ ಕೈಪಿಡಿಯ(ಟೂರಿಸ್ಟ್ ಗೈಡ್‌ನ) ಮುನ್ನುಡಿಯಲ್ಲಿ "ಜಾಗತೀಕರಣದ ಹಿನ್ನೆಲೆಯಲ್ಲಿ ವಿಶ್ವ ಕಿರಿದಾಗುತ್ತಿದೆ. ಸಂಪರ್ಕ ಮಾದ್ಯಮಗಳು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ವಿಶ್ವದ ಜನತೆಗೆ ದೇಶಗಳಿಂದ ವಿದೇಶಕ್ಕೆ ಹೋಗಿಬರುವ ಅವಕಾಶಗಳು ಮೇಲಿಂದ ಮೇಲೆ ಒದಗಿ ಬರುತ್ತವೆ. ಈ ಹಿನ್ನೆಯಲ್ಲಿ ಮಾನವನ ಬಾಳ್ವೆಯ ಗತ ವೈಭವದ ಕುರುಹುಗಳನ್ನರಿಯುವ ಕುತೂಹಲಗಳು ಹೆಚ್ಚಾಗುತ್ತಿವೆ. ಮನುಷ್ಯರ ಪರಂಪರೆಯನ್ನು ಬೆನ್ನಲ್ಲಿ ಕಟ್ಟಿಕೊಂಡು ಅದನ್ನು ಉಳಿಸಿ ಕಾಪಾಡಲು ಬದ್ದನಾಗಿರುತ್ತಾನೆ. ಇಂತಹದಕ್ಕೆ ಕನ್ನಡಿಗರೇನು ಹಿಂದೆ ಬಿದ್ದಿಲ್ಲ ತನ್ನ ಪರಂಪರೆಯನ್ನು ವಿಶ್ವದಾದ್ಯಂತ ಸಾರಲು ಮುಂದಾಗಿರುವುದು ಅವನ ತುರ್ತಿನ ಅವಶ್ಯಕತೆಯೂ ಆಗಿದೆ. ಆದುದ್ದರಿಂದ ಇಂತಹ ಪ್ರವಾಸಿ ಸೂಚಿಗಳು ಅಗತ್ಯವೆನಿಸುತ್ತದೆ"(ಶ್ರೀ ಎಸ್.ಎಂ. ವೀರಭದ್ರಯ್ಯ : ಮುನ್ನುಡಿಯಿಂದ) ಎಂದು ಅಭಿಪ್ರಾಯ ಪಡುತ್ತಾರೆ.

ಈ ಮೇಲಿನ ಅಭಿಪ್ರಾಯವನ್ನು ಗಮನಿಸಿದಾಗ ಮಾರ್ಗದರ್ಶಿ ಪುಸ್ತಕಗಳು ಕೇವಲ ಮಾರ್ಗದರ್ಶಿಗಳಾಗಿರದೇ ಹಂಪೆಯ ಗತವೈಭವವನ್ನು ಹಾಗೂ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಒಳಗೊಂಡಿವೆ. ಚಾರಿತ್ರಿಕ ನೆನಪುಗಳೊಂದಿಗೆ ಕನ್ನಡದ, ಕನ್ನಡಿಗರ ಸಂಸ್ಕೃತಿಯ ಅನನ್ಯತೆಯನ್ನು ಪ್ರವಾಸಿಗರಿಗೆ ತಿಳಿಸುವ, ಜಾಗತಿಕ ಮಟ್ಟದಲ್ಲಿ ಕನ್ನಡಿಗರ ಅನನ್ಯತೆಯನ್ನು ಸ್ಥಾಪಿಸುವ ಮಹಾತ್ವಾಕಾಂಕ್ಷೆಯನ್ನು ಹೊಂದಿವೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗುತ್ತವೆ.

ಸಂಗಮ ವಂಶವು ವಿಜಯನಗರದ ಮೊದಲ ಅರಸು ಮನೆತನವಾಗಿದೆ. ಈ ಮನೆತನದ ಕುರಿತು ಚರಿತ್ರೆಕಾರರು ವಿಭಿನ್ನ ನಿಲುವು ತಾಳಿದ್ದಾರೆ. ಕನ್ನಡ ಮೂಲದವರೆಂದು ಕೆಲವರು, ಮತ್ತೆ ಕೆಲವರು ತೆಲುಗು ಮೂಲದವರೆಂದು ಅಭಿಪ್ರಾಯ ಪಡುತ್ತಾರೆ. ಆದರೂ ವಿಜಯನಗರದ ಅರಸರು ತೆಲುಗು ಮೂಲದವರು ಎಂದು ಹೇಳಲಿಕ್ಕೆ ಸಮರ್ಥವಾದ ದಾಖಲೆಗಳು ಇಲ್ಲವಾದ್ದರಿಂದ ಇವರನ್ನು ಕನ್ನಡಿಗರು ಎಂದು ಹೇಳುವುದರೊಂದಿಗೆ ಈ ಸಾಮ್ರಾಜ್ಯವನ್ನು ಕನ್ನಡಿಗರ ಸಾಮ್ರಾಜ್ಯವೆಂದು ಹೇಳಲಾಗುತ್ತದೆ. ಈ ಕುರಿತು ಡಾ.ಪಾಂಡುರಂಗ ದೇಸಾಯಿ ಅವರು ಈ ರೀತಿ ಹೇಳುತ್ತಾರೆ. "ವಿಜಯನಗರದ ಸಂಸ್ಥಾಪಕರು ಕನ್ನಡ ನಾಡಿನಲ್ಲಿ ಹುಟ್ಟಿದವರು. ಕನ್ನಡ ತಾಯಿಯ ಮಕ್ಕಳೇ ಆಗಿದ್ದರು. ಈ ಸತ್ಯವನ್ನು ಈ ಕಿರುಹೊತ್ತಿಗೆಯಲ್ಲಿ ಮೊದಲ ಬಾರಿಗೆ ಘಂಟಾಘೋಷವಾಗಿ ಸಾರಿ ಹೇಳಿದ್ದೇನೆ."(ಡಾ.ಪಾಂಡುರಂಗ ದೇಸಾಯಿ: ಮುನ್ನುಡಿಯಿಂದ)

ವಿಜಯನಗರದ ಸ್ಥಾಪನೆಯ ಉದ್ದೇಶವೇನು? ಎನ್ನುವ ವಿಚಾರವು ತುಂಬಾ ಕುತೂಹಲಕಾರಿಯಾಗಿದೆ. ಈ ನೆಲವು ಅನ್ಯ ಧರ್ಮೀಯರ (ಮುಸ್ಲಿಂ) ಆಕ್ರಮಣದಿಂದ ದುಸ್ಥಿತಿಯನ್ನು ತಲುಪಿತು. ಅಂದರೆ ಉತ್ತರ ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಮುಸ್ಲಿಮ್ ದೊರೆಗಳು ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದರು. ಅವರ ಉದ್ದೇಶವು (ಹಿಂದೂಸ್ಥಾನದಲ್ಲಿ) ಇಲ್ಲಿನ ರಾಜರುಗಳನ್ನು, ಅವರ ರಾಜ್ಯಗಳನ್ನು ನಾಶ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವುದಾಗಿತ್ತು. ಹಿಂದೂ ದೊರೆಗಳು ನಿರ್ಮಾಣ ಮಾಡಿದ ಪ್ರಮುಖ ಸ್ಮಾರಕಗಳನ್ನು ನಾಶಪಡಿಸುವುದು ಮತ್ತು ಇಸ್ಲಾಂ ಸಂಪ್ರದಾಯಕ್ಕೆ ಸರಿಹೊಂದುವಂತೆ ಮಾರ್ಪಡಿಸುವುದರೊಂದಿಗೆ ಸಮಸ್ತ ಹಿಂದೂಸ್ಥಾನದಲ್ಲಿ ಇಸ್ಲಾಂ ಧರ್ಮವನ್ನು ಸ್ಥಾಪಿಸುವುದಾಗಿತ್ತು. ಹೀಗಾಗಿ ಹಿಂದೂಸ್ಥಾನದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಅಸ್ಥಿರತೆ ಉಂಟಾಯಿತು. ಇಂತಹ ಸಂದರ್ಭದಲ್ಲಿ ವೈದಿಕ ಧರ್ಮದ ಪುನಃಶ್ಚೇತನಕ್ಕಾಗಿ ವಿದ್ಯಾರಣ್ಯರು ತಮ್ಮ ತಪಸ್ಸಿನ ಫಲದಿಂದ ಹಿಂದೂಸ್ಥಾನಕ್ಕೆ ಬಂದಿರುವ ಕುತ್ತನ್ನು ತಡೆದರು ಎಂದು ಹೇಳುವ ಮೂಲಕ ಬ್ರಾಹ್ಮಣತ್ವ/ಹಿಂದುತ್ವವನ್ನು ಪ್ರತಿಪಾದಿಸುವ ಅಂಶಗಳೇ ಹೆಚ್ಚಾಗಿ ಮಾರ್ಗದರ್ಶಕರ ಕೈಪಿಡಿಯಲ್ಲಿ ಕಾಣಸಿಗುತ್ತವೆ.

ಹರಿಹರ ಹಕ್ಕಬುಕ್ಕರು ನೆಪಕ್ಕಷ್ಟೆ, ವಿದ್ಯಾರಣ್ಯರ ಹನ್ನೆರಡು ವರ್ಷಗಳ ಕಠಿಣವಾದ ತಪಸ್ಸಿನ ಫಲವೆಂದು ಹೇಳುವ ಈ ಬರಹಗಳನ್ನು ಒಪ್ಪುವುದಾದರೆ ಅಷ್ಟೊಂದು ಕಠಿಣ ತಪಸ್ಸಿನ ಫಲದಿಂದ ಉದಯಿಸಿದ ಈ ಸಾಮ್ರಾಜ್ಯ ಯಾಕೆ ಅವನತಿ ಹೊಂದಿತೆಂಬ ಪ್ರಶ್ನೆ ಪ್ರವಾಸಿಗರಲ್ಲಿ ಮೂಡದೆ ಇರದು. ಆದ್ದರಿಂದ ಅದಕ್ಕೊಂದು ಕಟ್ಟು ಕಥೆಯನ್ನು ಇಲ್ಲಿ ವ್ಯವಸ್ಥಿತವಾಗಿ ಹೆಣೆಯಲಾಗಿದೆ. ಅದೇನೆಂದರೆ: ತುಂಗಭದ್ರ ತಟದಲ್ಲಿರುವ ಶ್ರೀವಿರೂಪಾಕ್ಷೇಶ್ವರ ದಿವ್ಯ ಸಾನಿಧ್ಯದಲ್ಲಿ ಮಾಧವಾಚಾರ್ಯರು ಶ್ರೀ ಭುವನೇಶ್ವರಿಯನ್ನು ಕುರಿತು ಹನ್ನೆರಡು ವರ್ಷಗಳ ಘೋರವಾದ ತಪಸ್ಸನ್ನು ಆಚರಿಸಿದರು. ಅದರ ಫಲವಾಗಿ ಮಾಧವರಿಗೆ ಭುವನೇಶ್ವರಿ ದರ್ಶನವಿತ್ತು ಸಕಲ ವಿದ್ಯೆಗಳಿಂದ ಪಾರಂಗತನಾಗು ಎಂದು ಅನುಗ್ರಹಿಸಿದಳು. ಅಲ್ಲದೆ ಈ ನಾಡಿಗೆ ಬಂದಿರುವ ದುಸ್ಥಿತಿಯು ನಿನ್ನಿಂದ ತೊಲಗುತ್ತದೆ ಎಂಬ ವರವನ್ನು ಕೊಟ್ಟು ಅದೃಶ್ಯಳಾದಳು. ದೇವಿಯ ಅನುಗ್ರಹದಂತೆ ವಿಜಯನಗರ ಸ್ಥಾಪನೆಯ ಶುಭದಿನವನ್ನು ತಿಳಿಸಿದಳು. ಆ ದಿನ ಅವರು ಮಾತಂಗ ಪರ್ವತದ ಮೇಲೆ ಏರಿ ಪೂಜಾ ವಿಧಿಗಳನ್ನು ಮಾಡಿ ಶುಭ ಗಳಿಗೆಯಲ್ಲಿ ಶಂಖ ಊದುವೇ ಆ ಸಮಯಕ್ಕೆ ಸರಿಯಾಗಿ ನೀವು ವಿಜಯನಗರವನ್ನು ಕಟ್ಟಲು ಪ್ರಾರಂಭಿಸಬೇಕೆಂದು ಹೇಳಿ ಮಾತಂಗ ಪರ್ವತದ ಕಡೆಗೆ ನಡೆದರು. ಇತ್ತ ಜನರು ಶುಭ ಸಂದೇಶಕ್ಕಾಗಿ ಕಾಯ ತೊಡಗಿದರು. ಆದರೆ ನಡೆದದ್ದೇ ಬೇರೆ ಅನ್ಯ ಧರ್ಮೀಯರು ವಿದ್ಯಾರಣ್ಯರು ಶಂಖ ಊದುವುದಕ್ಕಿಂತ ಮೊದಲೇ ಅಂದರೆ ರಾಹುಕಾಲದಲ್ಲಿ ಶಂಖ ಊದಿದರು. ಈ ಸಂದೇಶವನ್ನು ಕೇಳಿದ ಜನರು ವಿದ್ಯಾರಣ್ಯರೇ ಶಂಖ ಊದಿರಬಹುದೆಂದು ತಿಳಿದು ವಿಜಯನಗರ ಸ್ಥಾಪನೆಯ ಕಾರ್ಯಕ್ರಮವನ್ನು

ಪ್ರಾರಂಭಿಸಿದರು. ಅಪಗಳಿಗೆಯಲ್ಲಿ(ರಾಹುಕಾಲ) ಸ್ಥಾಪಿತವಾದ ಈ ಸಾಮ್ರಾಜ್ಯವು ಬಹುಕಾಲ ಮುನ್ನಡೆಯಲಿಲ್ಲ ಎಂದು ಹೇಳಲಾಗುತ್ತದೆ.

ಈ ಮೊದಲೇ ಹೇಳಿರುವಂತೆ ವಿಜಯನಗರ ಸಾಮ್ರಾಜ್ಯದ ಉದಯವಾದದ್ದು ಮುಸ್ಲಿಮ್ ದೊರೆಗಳ ಆಕ್ರಮಣ ಮತ್ತು ದುರಾಡಳಿತದ ಕಾರಣವೆನ್ನಲಾಗಿದೆ. ಹೀಗಾಗಿ ಮುಸ್ಲಿಂ ದೊರೆಗಳ ಮೇಲೆ ತಪ್ಪುಗಳನ್ನು ಆರೋಪಿಸುವ ಅಂಶಗಳೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಆದರೆ ರಾಜಪ್ರಭುತ್ವ ಕಾಲವಾಗಿದ್ದ ಆ ಸಂದರ್ಭದಲ್ಲಿ ಒಂದು ರಾಜ್ಯದ ಮೇಲೆ ದಾಳಿ ಮಾಡಿ ಗೆದ್ದರೆ ಆ ರಾಜ್ಯವು ಮತ್ತು ಅಲ್ಲಿನ ಸಂಪತ್ತು ಗೆದ್ದ ರಾಜರ ಸ್ವತ್ತು ಎನ್ನುವ ಕಾಲವದು. ಆ ಕಾಲದಲ್ಲಿ ಶತೃಗಳನ್ನು ಹೊಡೆದೋಡಿಸುವ ಸಾಹಸ, ಪರಾಕ್ರಮಶಾಲಿ ರಾಜನೀತಿ ಚತುರರಾದ ರಾಜರುಗಳು. ಸೈನ್ಯವನ್ನು ಮುನ್ನಡೆಸುವ ಸೈನ್ಯಾಧಿಪತಿಗಳ ಕೊರತೆಗಳಿದ್ದವು ಎನ್ನುವಂತಹ ಅಂಶಗಳು ಕಾರಣವಾಗಿದ್ದವು ಎನ್ನುವ ಸಂಗತಿಗಳು ಮಾರ್ಗದರ್ಶಿ ಪುಸ್ತಕಗಳಲ್ಲಿ ಗೌಣವಾಗಿದೆ. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಅಂದರೆ ಮುಸ್ಲಿಮರು ದಕ್ಷಿಣ ಭಾರತದ ಮೇಲೆ ದಾಳಿ ಮಾಡುತ್ತಿರುವ ಸಂದರ್ಭದಲ್ಲಿ ಆಡಳಿತ ಮಾಡುತ್ತಿದ್ದ ಸಂಸ್ಥಾನಗಳ ಆಡಳಿತ ಯಾವ ಸ್ವರೂಪದ್ದು. ಅಲ್ಲಿನ ಆಂತರಿಕ ಸಮಸ್ಯೆಗಳು ಯಾವುವು ಎನ್ನುವುದರ ಬಗ್ಗೆ ಯಾವುದೇ ವಿವರಗಳಿಲ್ಲ. ಆದರೆ ದಾಳಿ ಮಾಡಿದವರದ್ದೇ ತಪ್ಪು ಎನ್ನುವಂತೆ ಚಿತ್ರಿಸಲಾಗಿದೆ. ವಿಜಯನಗರ ಅರಸರು ಮಾಡಿದ ದಾಳಿಗಳನ್ನು ದಿಗ್ವಿಜಯಗಳೆಂದು ವರ್ಣಿಸುತ್ತಾರೆ. ಅದೇ ಕೆಲಸವನ್ನು ಬೇರೆ ರಾಜರು ಈ ಸಾಮ್ರಾಜ್ಯದ ಮೇಲೆ ಮಾಡಿದರೆ ಅದು ದಿಗ್ವಿಜಯವಾಗದೆ ಅದು ಆಕ್ರಮಣ, ದಾಳಿ ಎಂದು ಮೂದಲಿಸಲಾಗುತ್ತದೆ.

ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿ ಸುಮಾರು ನಾಲ್ಕು ಶತಮಾನಗಳು ಗತಿಸಿವೆ. ವಿಜಯನಗರದ ಸುವರ್ಣ ಯುಗದ ನೆನಪುಗಳ (ಸಾಂಸ್ಕೃತಿಕ ಚರಿತ್ರೆಯ) ಕುರುಹುಗಳಾಗಿ ಉಳಿದಿರುವ ಸ್ಮಾರಕಗಳು ಹಂಪಿ ಪರಿಸರದಲ್ಲಿ ಕಾಣಸಿಗುತ್ತವೆ. ಆದರೆ ವೈದಿಕ ಪರಂಪರೆಗೆ ಸಂಬಂಧಿಸಿದ ಪ್ರಮುಖ ಸ್ಮಾರಕಗಳಾದ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ, ಕಡಲೆ ಕಾಳು ಗಣಪತಿ, ಸಾಸಿವೆ ಕಾಳು ಗಣಪತಿ, ಬಡವಿ ಲಿಂಗ, ಉಗ್ರ ನರಸಿಂಹ, ಕೃಷ್ಣ ದೇವಸ್ಥಾನ, ಉದ್ದಾನ ವೀರಭದ್ರ, ಪಾತಾಳೇಶ್ವರ, ಡಣನಾಯಕನ ಕೋಟೆ, ಹಜಾರರಾಮ ದೇವಸ್ಥಾನ, ಅಗಸಗಿತ್ತಿ ಮಹಲ್, ಕಾವಲುಗೋಪುರ, ಆನೆ ಲಾಯ, ಮಹಾನವಮಿ ದಿಬ್ಬ, ಪುಷ್ಕರಣಿ, ರಾಣಿಯರ ಸ್ನಾನಗೃಹ, ಸರಸ್ವತಿ ದೇವಸ್ಥಾನ– ಮುಂತಾದ ಸ್ಮಾರಕಗಳ ಪರಿಚಯವನ್ನು ಮಾತ್ರ ಈ ಪ್ರವಾಸಿ ಮಾರ್ಗದರ್ಶಿ ಕೈಪಿಡಿಗಳು ಒಳಗೊಂಡಿವೆ. ಅಪರೂಪಕ್ಕೆಂಬಂತೆ ಜೈನ ಬಸದಿಗಳ ಹೆಸರನ್ನು ಹೇಳಲಾಗಿದೆ. ಈ ಮೇಲೆ ಹೇಳಿದ ಸ್ಮಾರಕಗಳು ಯಾರ ಕಾಲದಲ್ಲಿ ನಿರ್ಮಾಣವಾದವು, ಯಾವ ಪಂಥಕ್ಕೆ ಸಂಬಂಧಿಸಿದವು ಮತ್ತು ಅಲ್ಲಿನ ವಾಸ್ತುಶಿಲ್ಪ ಇತ್ಯಾದಿ

ವಿವರಣೆಯನ್ನು ವ್ಯವಸ್ಥಿತವಾಗಿ ಕೊಡಲಾಗಿದೆ. ಅಲ್ಲದೆ ಈ ಸ್ಮಾರಕಗಳನ್ನು ನೋಡಲು ಬರುವ ಪ್ರವಾಸಿಗರಿಗೆ ಅಲ್ಲಿಗೆ ತಲುಪಲು ಇರುವ ದಾರಿಗಳ ಕುರಿತು ವಿವರಿಸಲಾಗಿದೆ.

ಸರ್ವಧರ್ಮೀಯರಿಗೆ ಅವಕಾಶ ಕಲ್ಪಿಸಿದ ವಿಜಯನಗರದ ಅರಸರು ಜೈನ, ಇಸ್ಲಾಂ ಮುಂತಾದ ಧರ್ಮಕ್ಕೆ ಸಂಬಂಧಿಸಿದ ಅನೇಕ ಸ್ಮಾರಕಗಳನ್ನು ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿ ಗೌರವಿಸಿದ್ದಾರೆ. ಅಂತಹ ಅನೇಕ ಸ್ಮಾರಕಗಳು ಹಂಪಿ ಪರಿಸರದಲ್ಲಿದ್ದರೂ ಅವುಗಳ ಕುರಿತಾದ ಮಾಹಿತಿ ಮಾರ್ಗದರ್ಶಿ ಪುಸ್ತಕಗಳಲ್ಲಿ ಇಲ್ಲದಿರುವುದು ಕಂಡು ಬರುತ್ತದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸಕಲ ಧರ್ಮೀಯರಿಗೆ ಪ್ರೋತ್ಸಾಹವನ್ನು ನೀಡಿ ಗೌರವದಿಂದ ನೋಡಿಕೊಂಡದ್ದು ನಿರ್ವಿವಾದ. ಆದರೆ ವಿಜಯನಗರ ಸಾಮ್ರಾಜ್ಯವನ್ನು ಇಂದು ಇದೊಂದು ಹಿಂದೂ ಧರ್ಮದ ಕೇಂದ್ರವೆಂದು ಪ್ರವಾಸಿಗರಿಗೆ ಪರಿಚಯಿಸುತ್ತಾರೆ. ಇದರಿಂದಾಗಿ ಸಾಮ್ರಾಜ್ಯದ ನಿಜವಾದ ಚರಿತ್ರೆಯ ಘನತೆಯನ್ನು ಈ ಮಾರ್ಗದರ್ಶಿ ಕೈಪಿಡಿಗಳು ಮುಚ್ಚಿಹಾಕಿದಂತಾಗುತ್ತಿದೆ. ವೈದಿಕ ಪರಂಪರೆಯ ಮಹತ್ವವನ್ನು ಹೇಳುವುದು ಇಲ್ಲಿ ಮುಖ್ಯವೇ ಹೊರತು ವಿಜಯನಗರದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುವುದಲ್ಲ ಎನ್ನುವುದಕ್ಕೆ ಈ ಕೈಪಿಡಿಗಳಲ್ಲಿ ವಿವರಿಸಲಾದ ಮಾಹಿತಿಗಳೆ ಸಾಕ್ಷಿ.

ಜಾತಿ ಮತಗಳನ್ನು ಪರಿಗಣಿಸದೆಯೇ ಇದೊಂದು ಐತಿಹಾಸಿಕ ಕ್ಷೇತ್ರವೆಂದು ಹಲವು ಧರ್ಮೀಯರು ಪ್ರವಾಸ ಕೈಗೊಳ್ಳುತ್ತಾರೆ. ಪ್ರವಾಸಿಗರಿಗೆ ಈ ಸಾಮ್ರಾಜ್ಯವು ಮುಸ್ಲಿಮರ ದುರಾಡಳಿತದ ವಿರುದ್ಧ ಸ್ಥಾಪನೆಯಾಗಿತ್ತು. ಅವರಿಂದಲೇ ಅವನತಿ ಹೊಂದಿತು ಎನ್ನುವ ಅರೆಬರೆ ಚಾರಿತ್ರಿಕ ಸಂಗತಿಗಳನ್ನು ಹೇಳುತ್ತಾರೆ. ಇದರಿಂದಾಗಿ ಇತರೆ ಧರ್ಮೀಯರು ತಮ್ಮೆದುರಿಗಿನ ಮುಸ್ಲಿಮರನ್ನು ನೋಡುವ ದೃಷ್ಟಿಕೋನ ಆರೋಗ್ಯಕರವಾದುದಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಈ ಬಗೆಯ ವಿಚಾರಗಳು ಪ್ರವಾಸಿ ಕೈಪಿಡಿಗಿಂತಲೂ ಮಾರ್ಗದರ್ಶಕರ ನಿರೂಪಣೆಯಲ್ಲಿ ಇನ್ನೂ ಹೆಚ್ಚಿನ ಗೊಂದಲವನ್ನುಂಟು ಮಾಡುತ್ತವೆ.

**ಮಾರ್ಗದರ್ಶಕರು ನಿರೂಪಿಸುವ ವಿಜಯನಗರ :**

ಮಾರ್ಗದರ್ಶಕರು ಕೂಡ ಈ ಮೊದಲೇ ಹೇಳಿರುವಂತೆ ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ಇತಿಹಾಸದಿಂದ ಅವನತಿಯವರೆಗಿನ ಚರಿತ್ರೆಯನ್ನು ಕಥನ ರೂಪದಲ್ಲಿ ವಿವರಿಸುತ್ತಾರೆ. ಇಲ್ಲಿ ಅವರು ಹೇಳುವ ಚರಿತ್ರೆಯನ್ನು ಪುನಃ ಹೇಳುವುದಿಲ್ಲ. ಏಕೆಂದರೆ ಮಾರ್ಗದರ್ಶಿ ಕೈಪಿಡಿಯಲ್ಲಿ ವಿವರಿಸಲಾದ ಹಲವು ಅಂಶಗಳು ಮಾರ್ಗದರ್ಶಕರಲ್ಲಿ ವ್ಯಕ್ತವಾಗುತ್ತವೆ. ಕೆಲವು ಸಂಭರ್ಧದಲ್ಲಿ ಪ್ರವಾಸಿ ಕೈಪಿಡಿಯನ್ನು ನೋಡಿ ಮಾರ್ಗದರ್ಶಿಗಳು ಮಾರ್ಗದರ್ಶನ ಮಾಡುತ್ತಾರೊ, ಇಲ್ಲವೆ ಮಾರ್ಗದರ್ಶಕರ ಹೇಳಿಕೆಗಳನ್ನು ಕೇಳಿ ಈ ಕೈಪಿಡಿಗಳು ರೂಪುಗೊಂಡವೋ ಎನ್ನುವ ಸಂಶಯವು ವ್ಯಕ್ತವಾಗುತ್ತದೆ. ಅದು ಏನೇ ಇರಲಿ ಇಲ್ಲಿ ಮುಖ್ಯ ಸಂಗತಿಗಳೇನೆಂದರೆ ಮಾರ್ಗದರ್ಶಿಗಳು ಏನು ಹೇಳುತ್ತಾರೆ, ಯಾವ

ಪ್ರಮಾಣದಲ್ಲಿ ಹೇಳುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. ಅಂದರೆ ಮಾರ್ಗದರ್ಶಕರು ಪ್ರವಾಸಿಗರಿಗಿರುವ ಸಮಯ, ಅವರು ಕೊಡುವ ಹಣ ಮತ್ತು ಅವರ ಬೌದ್ಧಿಕ ಹಿನ್ನೆಲೆಯಲ್ಲಿ ಮಾಹಿತಿ ನೀಡಲು ಪ್ರಯತ್ನಿಸುತ್ತಾರೆ.

ಇಂದು ಹಂಪಿ ಎಂದು ಗುರುತಿಸುವ ಪ್ರದೇಶವು ವಿಶಾಲ ವ್ಯಾಪ್ತಿಯನ್ನು ಹೊಂದಿದ್ದು ಹಲವಾರು ಸ್ಮಾರಕಗಳಿಂದ ಆವೃತವಾಗಿದೆ. ಪ್ರವಾಸಿಗರು ಯಾವ ಭಾಗದಿಂದ ಹಂಪೆಯನ್ನು ನೋಡಲು ಬಯಸುತ್ತಾರೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಹಂಪೆಗೆ ಹಲವಾರು ಮಾರ್ಗಗಳಿವೆ. ಪ್ರವಾಸಿಗರು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ನೋಡಲು ಬಯಸುತ್ತಾರೆ. ಆದರೂ ಸಾಮಾನ್ಯವಾಗಿ ಹಂಪೆಯಲ್ಲಿ ಪ್ರಸಿದ್ಧ ದೇವಸ್ಥಾನವಾದ ವಿರೂಪಾಕ್ಷ ದೇವಾಲಯದಿಂದ ಹಂಪೆಯನ್ನು ನೋಡಲು ಪ್ರಾರಂಭಿಸುವುದು ವಾಡಿಕೆ. ಮಾರ್ಗದರ್ಶಕರು ಸಾಮಾನ್ಯವಾಗಿ ಹಂಪೆಯ ಚಾರಿತ್ರಿಕ ನೆನೆಪುಗಳನ್ನು ಸ್ಮಾರಕಗಳ ಮುಖೇನ ವಿವರಿಸುತ್ತಾರೆ. ಮುಸ್ಲಿಮರು ದಬ್ಬಾಳಿಕೆಯ, ದುರ್ನಡತೆಯ ಆಡಳಿತ ಮಾಡುತ್ತಿದ್ದರು. ಇದರಿಂದಾಗಿ ಹಿಂದೂ ಧರ್ಮದ ಅನುಯಾಯಿಗಳಿಗೆ ತೊಂದರೆ ಉಂಟಾಯಿತು. ಇದನ್ನು ವಿರೋಧಿಸಿದ ಹಿಂದೂ ಧರ್ಮೀಯ ಅನುಯಾಯಿಗಳು ಅನ್ಯರಾದ ಮುಸ್ಲಿಮರ ಆಡಳಿತವನ್ನು ವಿರೋಧಿಸಿ ಹಿಂದೂ ಧರ್ಮದ ತತ್ವಗಳ ಹಿನ್ನೆಲೆಯಲ್ಲಿ ಧರ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇದರಿಂದಾಗಿ ಈ ಸಾಮ್ರಾಜ್ಯವನ್ನು ಹಿಂದೂ ಧರ್ಮದ ಮತ್ತು ಕನ್ನಡಿಗರ ಸಾಮ್ರಾಜ್ಯವೆಂದು ಕರೆಯಲಾಗಿದೆ. ಈ ಸಾಮ್ರಾಜ್ಯವನ್ನು ಪ್ರಮುಖ ನಾಲ್ಕು ರಾಜಮನೆತನಗಳು ಆಡಳಿತ ಮಾಡಿದವು. ಆ ಆಡಳಿತದ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯ ಸುವರ್ಣಯುಗವನ್ನೇ ಕಂಡಿತ್ತು. ಆ ಕಾಲದಲ್ಲಿ ಸ್ಥಾಪಿತವಾದ ಸ್ಮಾರಕಗಳು ವಿಜಯನಗರ ಕಾಲದ ಚರಿತ್ರೆಯ ಭೂತದ ಬುತ್ತಿಯನ್ನು ಭವಿಷತ್ತಿಗೆ ಕೊಂಡೊಯ್ಯುವ ಕುರುಹುಗಳಾಗಿವೆ. ವಿಜಯನಗರ ಸಾಮ್ರಾಜ್ಯದಲ್ಲಿ ಈ ಮೊದಲೆ ಹೇಳಿರುವಂತೆ ಹಲವು ರಾಜರುಗಳು ತಮ್ಮ ಆಡಳಿತ ಅವಧಿಯಲ್ಲಿ ಅನೇಕ ಸ್ಮಾರಕಗಳನ್ನು ನಿರ್ಮಾಣ ಮಾಡಿದ್ದಾರೆ. ಅವರಲ್ಲಿ ಪ್ರಾಮುಖ್ಯತೆ ಪಡೆದ ಅರಸರೆಂದರೆ ಶೈವಪಂಥಕ್ಕೆ ಸೇರಿದ ಪ್ರೌಢದೇವರಾಯ ಮತ್ತು ವೈಷ್ಣವ ಪಂಥದ ಅನುಯಾಯಿಯಾದ ಕೃಷ್ಣದೇವರಾಯರು. ಇವರ ಆಡಳಿತದ ಅವಧಿಯಲ್ಲಿ ಹಲವು ಸ್ಮಾರಕಗಳು ನಿರ್ಮಾಣಗೊಂಡಿವೆ ಎಂದು ಹೇಳಲಾಗುತ್ತದೆ. ಹಂಪೆಯಲ್ಲಿರುವ ಸ್ಮಾರಕಗಳು ಸಂಪೂರ್ಣವಾಗಿ ಯಾವುದೇ ಒಂದು ಕಾಲಘಟ್ಟದಲ್ಲಿ ನಿರ್ಮಾಣಗೊಂಡಿಲ್ಲ. ಯಾವುದೋ ಒಬ್ಬ ರಾಜನ ಕಾಲಾವಧಿಯಲ್ಲಿ ಸ್ಥಾಪಿತವಾದರೂ ಅವುಗಳು ಬೇರೆ ಬೇರೆ ರಾಜರುಗಳ ಕಾಲದಲ್ಲಿ ಜೀರ್ಣೋದ್ಧಾರಗೊಂಡಿವೆ. ಹಾಗಾಗಿ ಈ ಸ್ಮಾರಕಗಳು ಇವರ ಆಡಳಿತದಲ್ಲಿಯೇ ನಿರ್ಮಾಣಗೊಂಡವೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ನಿಜವಾದ ಸತ್ಯವನ್ನು ಅರಿಯದೆ ಮಾರ್ಗದರ್ಶಕರು ಪ್ರಬಲರಾದ ರಾಜರುಗಳ ಚರಿತ್ರೆಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತಾರೆ. ಇದರಿಂದಾಗಿ ಈ ಪ್ರಮುಖ ರಾಜರುಗಳ ಹೆಸರುಗಳು ಕೇಳಿಬರುತ್ತಿವೆಯೇ ಹೊರತು ಇತರೆ ರಾಜರುಗಳ ಹೆಸರುಗಳು ಅನೇಕ ಸಂದರ್ಭದಲ್ಲಿ ಗೌಣವಾಗುತ್ತವೆ.

ಮಾರ್ಗದರ್ಶಕರು ಹಂಪೆಯ ಸ್ಮಾರಕಗಳ ಮುಖೇನ ಚರಿತ್ರೆಯನ್ನು ಕಟ್ಟಿಕೊಡುತ್ತಾ ಸ್ಮಾರಕಗಳ ಅವನತಿಯು ಹೇಗೆ ಹೊಂದಿದವು ಎನ್ನುವುದನ್ನು ಈ ಮುಂದಿನಂತೆ ಹೇಳುತ್ತಾರೆ. ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸೈನ್ಯ(ಅಳಿಯ ರಾಮರಾಯ) ಸೋಲನ್ನು ಅನುಭವಿಸಿತು. ಗೆದ್ದ ಮುಸ್ಲಿಂ (ಬಿಜಾಪೂರದ ಆದಿಲ್‌ಶಾಹಿಗಳು) ದೊರೆಗಳು ಸುಮಾರು ಆರು ತಿಂಗಳ ಕಾಲ ಸೂರೆಗೈದು ಇಲ್ಲಿನ ಸಂಪತ್ತನ್ನು ತೆಗೆದುಕೊಂಡು ಹೋದರೆಂದು ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ತಾಳಿಕೋಟಿ ಯುದ್ಧದಲ್ಲಿ ವಿಜಯನಗರ ಸೈನ್ಯ ಸೋಲು ಅನುಭವಿಸಿದ ಸಮಾಚಾರವನ್ನು ತಿರುಮಲನು ತಿಳಿದನು. ಮುಸ್ಲಿಮರ ಸೈನ್ಯ ವಿಜಯನಗರಕ್ಕೆ ಬರುವುದರೊಳಗಾಗಿ ಇಲ್ಲಿಂದ ಆನೆಗಳ ಮೇಲೆ ಸಾಮ್ರಾಜ್ಯದ ಸಂಪತ್ತನ್ನೆಲ್ಲ ತುಂಬಿಕೊಂಡು ತಪ್ಪಿಸಿಕೊಂಡು ಚಂದ್ರಗಿರಿಗೆ ಹೋದನು. ಅವನು ಹೋಗುವಾಗ ತನ್ನ ಜೊತೆ ಸಾಮ್ರಾಟ ಸದಾಶಿವರಾಯರನ್ನು, ಅಂತಃಪುರದ ಸ್ತ್ರೀಯರನ್ನು ಕರೆದುಕೊಂಡು ಹೋದನೆನ್ನುವ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ. ಅಲ್ಲದೆ ಹಂಪೆಯಲ್ಲಿರುವ ಸ್ಮಾರಕಗಳೆಲ್ಲವೂ ನಾಶವಾಗಿಲ್ಲ; ಕೆಲವು ಮಾತ್ರ ನಾಶ ಹೊಂದಿವೆ. ಅದರಲ್ಲಿ ಹೆಚ್ಚಾಗಿ ನಾಶ ಹೊಂದಿದವುಗಳೆಂದರೆ ವೈಷ್ಣವ ಪಂಥಕ್ಕೆ ಸಂಬಂಧಿಸಿದವು. ಹಿಂದೂ ಧರ್ಮದ ಕೇಂದ್ರವೆಂದು ಕರೆಸಿಕೊಳ್ಳುವ ಹಂಪೆಯಲ್ಲಿ ಜೈನ, ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಸ್ಮಾರಕಗಳಿದ್ದೂ ಅವುಗಳು ನಾಶ ಹೊಂದಿವೆ; ಅಲ್ಲದೆ ಪ್ರಕೃತಿಯ ವಿಕೋಪಗಳಿಂದಲೂ ನಾಶ ಹೊಂದಿರಲಿಕ್ಕೂ ಸಾಧ್ಯವಿದೆ. ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ನೋಡಿದಾಗ ಹಂಪೆಯ ಸ್ಮಾರಕಗಳನ್ನು ಮುಸ್ಲಿಂ ಸೈನಿಕರು ಮಾತ್ರ ಹಾಳು ಮಾಡಿದ್ದರೆಯೇ ಎನ್ನುವ ಸಂಶಯ ಮೂಡುತ್ತದೆ. ಒಂದು ವೇಳೆ ಮುಸ್ಲಿಮರೇ ಹಾಳು ಮಾಡಿದ್ದರೆ ಜೈನ ಮತ್ತು ಇಸ್ಲಾಂ ಸ್ಮಾರಕಗಳು ಹೇಗೆ ನಾಶ ಹೊಂದಿದವು ಎಂಬಿತ್ಯಾದಿ ಅಂಶಗಳು ಮಾರ್ಗದರ್ಶಕರ ಗಮನಕ್ಕೆ ಬರುವುದೇ ಇಲ್ಲ. ಅಲ್ಲದೆ ಇಂದು ಮಾರ್ಗದರ್ಶಕರ ಪರಿಚಯದ ವ್ಯಾಪ್ತಿಗೆ ಅನೇಕ ಜೈನ ಮತ್ತು ಇಸ್ಲಾಂ ಸ್ಮಾರಕಗಳು ಬರುವುದೇ ಇಲ್ಲ. ಅವರ ದೃಷ್ಟಿಯಲ್ಲೂ ಕೂಡ ಹಂಪೆಯು ಹಿಂದೂ ಧರ್ಮದ ಕೇಂದ್ರವಾಗಿದ್ದು, ಹಿಂದೂ ಧಾರ್ಮಿಕತೆಗೆ ಸಂಬಂಧಿಸಿದ ಸ್ಮಾರಕಗಳನ್ನು ಮಾತ್ರ ಪ್ರವಾಸಿಗರಿಗೆ ಪರಿಚಯಿಸುತ್ತಾರೆ. ಅದರಲ್ಲೂ ಶಾಕ್ತ ಪರಂಪರೆಗೆ ಸಂಬಂಧಿಸಿದ ಸ್ಮಾರಕಗಳನ್ನು ಕೂಡ ನಿರ್ಲಕ್ಷಿಸಿರುವುದು ಕಂಡುಬರುತ್ತದೆ. ಕಮಲಮಹಲ್‌ನ ಹಿಂಭಾಗದಲ್ಲಿರುವ ಪಾನ್‌ಸುಪಾರಿ ಬಜಾರ್‌ನ ಮುಂದಿನ ಭಾಗದಲ್ಲಿ ಹಲವು ಜೈನ ಬಸದಿಗಳಿವೆ. ಅವುಗಳನ್ನು ಕ್ರಮಿಸಿ ಸ್ವಲ್ಪ ಮುಂದೆ ಹೋದರೆ ಸೋಮವಾರದ ಹೆಬ್ಬಾಗಿಲು ಕಾಣಿಸುತ್ತದೆ. ಅದರ ಪಕ್ಕದಲ್ಲಿ ಗುಹಾಂತರ ದೇವಾಲಯಗಳು, ಅರಮನೆಗಳು ಇವೆ. ಅಲ್ಲಿಂದ ಕ್ರಮಿಸಿ ಮುಂದೆ ಹೋದರೆ ದಕ್ಷಿಣ ಮತ್ತು ಪೂರ್ವ ಭಾಗದಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಮಸೀದಿಗಳು ಇವೆ. ಆದರೂ ಇವುಗಳ ಕುರಿತಾದ ಮಾಹಿತಿಯನ್ನು ನೀಡಲು ಮಾರ್ಗದರ್ಶಕರು ಅಷ್ಟಾಗಿ ಅಪೇಕ್ಷಿಸುವುದಿಲ್ಲ. ಇದಕ್ಕೆ ಕಾರಣಗಳು ಹಲವು. ಒಂದು, ಸರಿಯಾದ ರಸ್ತೆ ಸಂಪರ್ಕ ಇಲ್ಲದಿರುವುದು. ಇದೊಂದು

ಹಿಂದೂ ಧರ್ಮದ ಕೇಂದ್ರ ಎಂದ ಮೇಲೆ ಇತರೆ ಧರ್ಮಗಳ ಸ್ಮಾರಕಗಳನ್ನು ನಿರ್ಲಕ್ಷಿಸುವುದು ಇತ್ಯಾದಿ.

ಚಾಲುಕ್ಯರ ಕಾಲದಿಂದಲೂ ಪ್ರಚಲಿತವಿರುವ ಹಂಪೆಯಲ್ಲಿರುವ ಶ್ರೀ ವಿರೂಪಾಕ್ಷ ದೇವಾಲಯವು ಅನೇಕ ಬಾರಿ ಜೀರ್ಣೋದ್ಧಾರಗೊಂಡು ಅನೇಕ ಪ್ರವಾಸಿಗರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೂ ಈ ದೇವಾಸ್ಥಾನ ಇದೇ ಕಾಲದಲ್ಲಿ ನಿರ್ಮಾಣವಾಯಿತು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಈ ದೇವಾಲಯದಲ್ಲಿ ಧ್ವಜಸ್ತಂಭ, ದೀಪಸ್ತಂಭಗಳು ಮತ್ತು ಅನೇಕ ಚಿಕ್ಕ ಚಿಕ್ಕ ಗುಡಿಗಳಿವೆ. ಎಡ ಭಾಗದಲ್ಲಿ ಪಾತಾಳೇಶ್ವರ, ಮುಕ್ತಿ, ನರಸಿಂಹ, ಸೂರ್ಯನಾರಾಯಣ ಗುಡಿಗಳು, ಬಲ ಭಾಗದಲ್ಲಿ ಲಕ್ಷ್ಮೀನರಸಿಂಹ, ಮಹಿಶಾಸುರ ಮರ್ದಿನಿ ದೇವಾಲಯಗಳಿವೆ. ಪಂಪಾಪತಿಯ ದರ್ಶನ ಪಡೆದು ದೇವಾಲಯದ ಉತ್ತರ ಭಾಗದಿಂದ ಹೊರಬಂದರೆ ಉತ್ತರ ದಿಕ್ಕಿಗೆ ಪಂಪಾದೇವಿ ಮತ್ತು ಭುವನೇಶ್ವರಿ ಮೂರ್ತಿಗಳನ್ನು ಮತ್ತು ನವಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲಿಂದ ಸ್ವಲ್ಪ ಕ್ರಮಿಸಿ ಮುಂದೆ ಬಂದರೆ ಎಡಭಾಗದಲ್ಲಿ ದೊಡ್ಡ ಪಾಠಶಾಲೆ, ಬಲಗಡೆ ಫಲಪೂಜೆ ಮಂಟಪವಿದೆ. ಶ್ರೀ ವಿರೂಪಾಕ್ಷ ದೇವಾಲಯದ ಮುಂದಿರುವುದೆ ವಿರೂಪಾಕ್ಷ ಬಜಾರ ಎಂದು ಕರೆಯುತ್ತಾರೆ. ಹಂಪೆಯಲ್ಲಿ ಪ್ರಮುಖವಾಗಿ ಆರು ಬಜಾರಗಳಿವೆಯೆಂದು ಗುರುತಿಸಲಾಗಿದೆ. ಈ ಬಜಾರಗಳು ದೇವಸ್ಥಾನಗಳ ಮುಂದೆ ಇವೆ. ಅವುಗಳೆಂದರೆ 1. ವಿರೂಪಾಕ್ಷ ಬಜಾರ, 2. ಪಾನಸುಪಾರಿ ಬಜಾರ (ಹಜಾರರಾಮ ದೇವಾಲಯ), 3. ಕೃಷ್ಣ ಬಜಾರ (ಶ್ರೀ ಕೃಷ್ಣದೇವಾಲಯ), 4. ವಿಠ್ಠಲಪುರ ಬಜಾರ (ಶ್ರೀ ವಿಠ್ಠಲ ದೇವಸ್ಥಾನ), 5. ಅಚ್ಚುತ ಬಜಾರ (ಅಚ್ಚುತ ದೇವಾಲಯ) ಈ ದೇವಾಲಯಗಳ ಮುಂದಿರುವ ಬಜಾರಗಳಲ್ಲಿ ಕಂಡುಬರುವ ಸಾಲು ಮಂಟಪಗಳು ವ್ಯಾಪಾರದ ತಾಣಗಳಾಗಿದ್ದವು ಎನ್ನಲಾಗಿದೆ. ಇದನ್ನು ಗಮನಿಸಿದಾಗ ಒಂದು ವಿಧದಲ್ಲಿ ವಿಜಯನಗರದ ಆರ್ಥಿಕ ಚಟುವಟಿಕೆ ಸಾಂಸ್ಕೃತಿಕ ಆಚರಣೆಗಳನ್ನು ಹಿಡಿತಲ್ಲಿರಿಸಿಕೊಂಡಿದ್ದವು ಎಂದು ಹೇಳಲು ಸಾಧ್ಯವಿದೆ. ಅದೇನೆ ಇರಲಿ ಈ ಬಜಾರಗಳಲ್ಲಿ ಸಾಮ್ರಾಜ್ಯದಲ್ಲಿ ಹೇರಳವಾಗಿ ಉತ್ಪಾದಿಸುತ್ತಿದ್ದ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿತ್ತು. ಅವುಗಳೆಂದರೆ ಬೆಲೆ ಬಾಳುವ ಚಿನ್ನದ ಆಭರಣಗಳು, ವಜ್ರ, ಹರಳು ಮುಂತಾದವುಗಳನ್ನು ಬೀದಿಯಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ಇಂತಹ ವಿವರಗಳನ್ನು ಹೇಳುವುದರ ಮೂಲಕ ವಿಜಯನಗರ ಸಾಮ್ರಾಜ್ಯವು ಆ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಾಗಿತ್ತೆಂದು ಹೇಳಲಾಗುತ್ತದೆ. ಆ ಕಾಲದಲ್ಲಿ ದೇಶ–ವಿದೇಶಗಳಿಂದ ವ್ಯಾಪಾರಿಗಳು ಬಂದು ವ್ಯಾಪಾರ ಮಾಡುತ್ತಿದ್ದರೆಂದು ಹೇಳುವುದರ ಮೂಲಕ ಸಾಮ್ರಾಜ್ಯದ ಆರ್ಥಿಕ ವಿಚಾರಗಳಿಗೆ ಸಂಬಂಧ ಕಲ್ಪಿಸಿ ಸುವರ್ಣಯುಗವೆಂದೇ ಪರಿಚಯಿಸುತ್ತಾರೆ. ಆದರೆ ಹಂಪೆಯ ಸಾಮ್ರಾಜ್ಯದಲ್ಲಿನ ಸಂಪತ್ತು ಬೇರೆ ಬೇರೆ ದೇಶಗಳಿಗೆ ಹೋಗುತ್ತಿತ್ತು. ಹಂಪೆಯಲ್ಲಿರುವ ಸಂಪತ್ತು ನಶಿಸುವುದರಲ್ಲಿಯೂ ಈ ಬಜಾರಗಳು ಪ್ರಮುಖ ಪಾತ್ರವಹಿಸುತ್ತವೆಂಬುದು ಮರೆಯುವಂತಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಹಂಪೆಯ ಅವನತಿಯಲ್ಲಿ ಇವುಗಳ ಪಾಲು ಇದೆಯೆಂದು ಹೇಳಬಹುದು.

ಅಚ್ಯುತರಾಯನ ದೇವಸ್ಥಾನದ ಮುಂದಿರುವುದೆ ಅಚ್ಯುತ ಬಜಾರ. ಈ ಬಜಾರಕ್ಕೆ ಇನ್ನೊಂದು ಹೆಸರು ಸೂಳೆ ಬಜಾರವೆಂದು ಕರೆಯುತ್ತಾರೆ. ಇದಕ್ಕೆ ಕಾರಣವೆಂದರೆ ಈ ಬಜಾರದಲ್ಲಿ ವೇಶ್ಯಾಂಗನೆಯರು ಇರುತ್ತಿದ್ದರೂ ಎನ್ನಲಾಗಿದೆ. ಗಮನಿಸಬೇಕಾದ ಸಂಗತಿಯೆಂದರೆ ಈ ವೇಶ್ಯಾಂಗನೆಯರು ರಾಜ ಮನ್ನಣೆಯನ್ನು ಪಡೆದವರು. ಯಾವ ಸಾಮ್ರಾಜ್ಯವನ್ನು ಸುವರ್ಣಯುಗದ ಕಲ್ಪನೆಯಲ್ಲಿ ನೋಡುತ್ತವೆಯೋ? ಅಂತಹ ಸಾಮ್ರಾಜ್ಯದಲ್ಲಿ ಇಂಥ ಅನಿಷ್ಠ ಚಟುವಟಿಕೆಗಳಿಗೆ ರಾಜ ಮನ್ನಣೆ ಇತ್ತು ಎನ್ನುವುದನ್ನು ಮರೆಯುವಂತಿಲ್ಲ. ಈ ಕುರಿತು ವಿದೇಶಿ ಪ್ರವಾಸಿ ಅಬ್ದುಲ್‌ರಜಾಕ್ ಅಭಿಪ್ರಾಯ ಈ ಮುಂದಿನಂತಿದೆ.

> "ದರಭಖಾನ್‌ಗೆ ಎದುರಾಗಿ ರಾಜ್ಯಪಾಲನ ಮನೆಯಿದೆ, ಇಲ್ಲಿ ಹನ್ನೆರಡು ಸಾವಿರ ಸೈನಿಕರು ಕಾವಲು ಕಾಯುತ್ತಾರೆ. ಈ ಕಾವಲು ಸೈನಿಕರಿಗೆ ಒಂದು ದಿನಕ್ಕೆ ಒಬ್ಬ ಸೈನಿಕನಿಗೆ ಒಂದು ಫನಂ ಸಂಬಳ ಕೊಡುತ್ತಾರೆ. ಈ ಸಂಬಳಕ್ಕೆ ಬೇಕಾದ ಹಣವನ್ನು ವೇಶ್ಯಾ ಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬರುತ್ತದೆ........ ಮಧ್ಯಾಹ್ನವಾದ ಮೇಲೆ ಭವ್ಯವಾಗಿ ಶೃಂಗರಿಸಿದ ಈ ಗೃಹಗಳ ಮುಂದೆ ವೇಶ್ಯಾಂಗನೆಯರು ಮೇಲೆ ತಿಳಿಸಿದ ಪೀಠಗಳ ಮೇಲೆ ಕುಳಿತುಕೊಳ್ಳುತ್ತಾರೆ. ಈ ವೇಶ್ಯಾಂಗನೆರು ಬೆಲೆಬಾಳುವ ಮುತ್ತು, ಮಾಣಿಕ್ಯಗಳಿಂದಲೂ, ವಸ್ತ್ರಗಳಿಂದಲೂ ಅಲಂಕೃತರಾಗಿರುತ್ತಾರೆ. ಇವರು ನವ ಯೌವ್ವನೆಯರು. ಹಾಗೂ ಬಹು ರೂಪವತಿಯರು. ಪ್ರತಿಯೊಬ್ಬ ವೇಶ್ಯಾಂಗನೆಯರ ಬಳಿ ಇಬ್ಬರು ದಾಸಿಯರಿದ್ದು ಮನರಂಜನೆಯನ್ನುಂಟು ಮಾಡುತ್ತಾರೆ. ಯಾರು ಬೇಕಾದರು ಈ ಬೀದಿಗೆ ಬಂದು ತಮಗೆ ಮೆಚ್ಚುಗೆಯಾದ ವೇಶ್ಯೆಯನ್ನು ಆರಿಸಿಕೊಂಡು ಅವಳೊಡನೆ ಕಾಲ ಕಳೆಯಬಹುದು....... ಈ ನಗರದಲ್ಲಿ ಏಳು ಕೋಟೆಗಳಲ್ಲಿಯೂ ಈ ತರಹದ ಅನೇಕ ವೇಶ್ಯಾಗೃಹಗಳಿವೆ. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಹನ್ನೆರಡು ಸಾವಿರ ಫನಂ ಆದಾಯ ಬರುತ್ತದೆ." (ಸಂ:ಡಾ.ಬಿ.ಎ.ವಿವೇಕ ರೈ, :17) ಎಂಬಿತ್ಯಾದಿ ಅಂಶಗಳನ್ನು ತಮ್ಮ ಪ್ರವಾಸಿ ಬರಹಗಳಲ್ಲಿ ದಾಖಲಿಸಿದ್ದಾರೆ.

ಇಂಥ ಮಾಹಿತಿಗಳನ್ನು ಪ್ರವಾಸಿಗರಿಗೆ ತಿಳಿಸುವ ಸಂದರ್ಭಗಳಲ್ಲಿ ಮಾರ್ಗದರ್ಶಕರುಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ. ಏಕೆಂದರೆ ಸತ್ಯ ಹೇಳಬೇಕೋ? ಬೇಡವೋ? ಎನ್ನುವ ಗೊಂದಲಕ್ಕೀಡಾಗುತ್ತಾರೆ. ಸತ್ಯ ಹೇಳಿದರೆ ವಿಜಯನಗರದ ಕೀರ್ತಿ ಏನಾದೀತು ಎಂಬಿತ್ಯಾದಿ ವಿಚಾರಗಳು ಅವರ ಮುಂದೆ ಸವಾಲಿನಂತಿವೆ. ಈ ಮೇಲಿನ ಅಂಶಗಳನ್ನು ಅವಲೋಕಿಸಿದಾಗ ಮಹಿಳೆಯರನ್ನು ಈ ಪರಿಯಲ್ಲಿ ದುಡಿಸಿಕೊಂಡ ವಿಜಯನಗರ ಕಾಲದ ಆಡಳಿತವನ್ನು ಸುವರ್ಣಯುಗವೆಂದು

ಕರೆಯುವವರು ಪುನರ್ ಪರಿಶೀಲಿಸಿಕೊಳ್ಳಬೇಕಿದೆ. ಇದು ಯಾರಿಗೆ, ಯಾರ ಸುವರ್ಣಯುಗವೆಂದು!

ವಿಜಯನಗರದ ಚಾರಿತ್ರಿಕ ದಾಖಲೆಗಳನ್ನು ಗಮನಿಸಿದಾಗ ರಾಜ್ಯಾಡಳಿತದ ಸಲುವಾಗಿ ಅನೇಕ ಒಳಜಗಳಗಳಿದ್ದದ್ದು ಕಂಡು ಬರುತ್ತದೆ. ರಾಜರು ವಿಲಾಸಿ ಪ್ರಿಯರಾಗಿದ್ದರು ಎನ್ನುವ ಅಂಶಗಳೂ ದೊರೆಯುತ್ತವೆ. ಇವೆಲ್ಲವೂ ವಿಜಯನಗರದ ಅವನತಿಗೆ ಕಾರಣವಾದವು ಎನ್ನುವುದನ್ನು ಮಾರ್ಗದರ್ಶಿಗಳು ಗಮನಿಸುವುದೇ ಇಲ್ಲ. ವಿಜಯನಗರದ ಸ್ಥಾಪನೆಗೆ ಮುಸ್ಲಿಮ್ ದೊರೆಗಳ ದುರಾಡಳಿತವೇ ಕಾರಣವೆಂದು ಹೇಳುವವರು, ವಿಜಯನಗರದ ಅವನತಿಗೆ ಹಿಂದೂ ದೊರೆಗಳ ಅದಕ್ಷ ಆಡಳಿತ ಕಾರಣವೆಂದು ಹೇಳುವುದಿಲ್ಲ. ಬದಲಾಗಿ ಮುಸ್ಲಿಮರ ದಾಳಿಗಳೇ ಕಾರಣವೆಂದು ಹೇಳುತ್ತಾರೆ. ಹಿಂದೂ ದೊರೆಗಳ ಅನೇಕ ತಪ್ಪುಗಳನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕುವ ಪ್ರಯತ್ನವನ್ನು ಮಾರ್ಗದರ್ಶಕರ ಮಾತುಗಳಲ್ಲಿ ಅರಿಯಬಹುದಾಗಿದೆ.

* * *

**ಉಲ್ಲೇಖಗಳು :**

ವಿ.ಸೀತಾರಾಮಯ್ಯ, 2005, ಪಂಪಯಾತ್ರೆ, (ಪ್ರವಾಸಿ ಕಂಡ ಇಂಡಿಯಾ ಸಂ:ಬಿ.ಎ.ವಿವೇಕ ರೈ.) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಅದೇ.
ಅದೇ.
ಅದೇ.
ಕೆ.ರಾಮಸ್ವಾಮಯ್ಯಂಗಾರ, 2006, ಜೀರ್ಣವಿಜಯನಗರಾದರ್ಶಂ (ಸಂ.ಲಕ್ಷ್ಮಣ ತೆಲಗಾವಿ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಅದೇ.
ಅದೇ.
ಅದೇ.
ಬೇಲೂರು ಕೃಷ್ಣಮೂರ್ತಿ :1986: ಹಂಪೆ. ಶ್ರೀ ವೆಂಕಟೇಶ್ವರ ಟಾಯ್ಸ್ ಸೆಂಟರ್, ಹಂಪಿ.

ಅದೇ

ಶ್ರೀ ಎಸ್.ಎಂ. ವೀರಭದ್ರಯ್ಯ : ಹಂಪೆ (ಟೂರಿಸ್ಟ್ ಗೈಡ್)

ಡಾ.ಪಾಂಡುರಂಗ ದೇಸಾಯಿ: 2003, ಹಂಪೆ, ಸಪ್ನ ಬುಕ್ ಹೌಸ್,ಬೆಂಗಳೂರು

ಬಿ.ಎ.ವಿವೇಕ ರೈ(ಸಂ), 2005, ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ಅಧ್ಯಾಯ–8

# ಸಮಾರೋಪ

8.1 ಅಧ್ಯಯನದ ಫಲಿತಗಳು

8.2 ಮುಂದಿನ ಅಧ್ಯಯನಕ್ಕಿರುವ ಸಾಧ್ಯತೆಗಳು

'ನಾನು ಕಂಡದ್ದು.... ರೋಮ್ ನಗರದಷ್ಟೇ ವಿಸ್ತಾರವಾದ
ನೋಡಲು ಬಹು ಸುಂದರವಾದ, ಜಗತ್ತಿನಲ್ಲೇ ಅತ್ಯಂತ
ಸಂಪತ್ಸಮೃದ್ಧಿಯಾಗಿರುವ ನಗರ'

–ಡಾಮಿಂಗೋ ಪೇಯಸ್

# ಅಧ್ಯಾಯ-8

# ಸಮಾರೋಪ

## 8.1. ಅಧ್ಯಯನದ ಫಲಿತಗಳು :

ಮುಸ್ಲಿಂ ದೊರೆಗಳ ದಬ್ಬಾಳಿಕೆಯಿಂದ ಹಿಂದೂಗಳು ಕಂಗೆಟ್ಟು ಹೋಗಿದ್ದರು. ಎಲ್ಲಿ ನೋಡಿದರೂ ಧಾರ್ಮಿಕ ಆಹಾಕಾರವೆದ್ದಿತ್ತು. ಸಾಮಾಜಿಕ ಜೀವನ ಅಸ್ತವ್ಯಸ್ತಗೊಂಡಿತ್ತು. ಅಂತಹ ಸಂದರ್ಭದಲ್ಲಿ ಧರ್ಮಕ್ಕೊದಗಿದ ಆಪತ್ತನ್ನು ತಪ್ಪಿಸಲು ಒಂದು ಪ್ರಬಲ ಸಾಮ್ರಾಜ್ಯದ ಅಗತ್ಯವಿತ್ತು. ಇದು ನಡೆದದ್ದು ಹದಿನಾಲ್ಕನೆಯ ಶತಮಾನದಲ್ಲಿ. 19ನೆಯ ಶತಮಾನದ ಆರಂಭ ಕಾಲದ ವಸಾಹತುಶಾಹಿ ಆಡಳಿತದ ಸಮಯದಲ್ಲಿಯೂ ಅಂತಹ ಸ್ಥಿತಿ ನಿರ್ಮಾಣವಾಗಿತ್ತು ಎಂದು ಅಂದಿನ ಬರಹಗಾರರು ತಳುಕು ಹಾಕಿ ನೋಡಿದ್ದಾರೆ. ಬ್ರಿಟಿಷರ ಆಳ್ವಿಕೆಯಿಂದ ನಾಡು ತತ್ತರಿಸಿ ಹೋಗಿತ್ತು. ಭಾಷೆ ಹತ್ತರಲ್ಲಿ ಒಂದಾಗಿ ಬಿಟ್ಟಿತ್ತು. ನಮ್ಮ ನೆಲ, ನಮ್ಮ ಜನ ಎಂದು ಹೇಳಿಕೊಳ್ಳಲು ಅಸ್ತಿತ್ವವೇ ಇಲ್ಲವಾಗಿತ್ತು. ಈ ಎರಡೂ ಘಟನೆಗಳಿಗೆ ಸಾಮ್ಯತೆ ಇದೆ. ಹಿಂದೆ ಹದಿನಾಲ್ಕನೆಯ ಶತಮಾನದಲ್ಲಿ ಧರ್ಮಕ್ಕಾದ ಆಪತ್ತನ್ನು ತಪ್ಪಿಸಿದ್ದು ವಿಜಯನಗರ. ಅದರಂತೆಯೇ ಹತ್ತೊಂಬತ್ತನೆಯ ಶತಮಾನದಲ್ಲಿ ನಾಡಿಗಾದ ಆಪತ್ತನ್ನು ತಪ್ಪಿಸಿಕೊಂಡು ದಾಸ್ಯದಿಂದ ಬಿಡುಗಡೆ ಹೊಂದಿ ಸ್ವಾತಂತ್ರ್ಯವಾಗಬೇಕಾದದ್ದು ಭಾರತ. ಮತ್ತೆ ಅದರೊಳಗೆ ಹಲವು ರಾಜ್ಯಗಳು. ಅವುಗಳಲ್ಲಿ ಕರ್ನಾಟಕವೂ ಒಂದು. ಕನ್ನಡ ಮಾತನಾಡುವ ಜನರು ಒಂದೇ ಆಡಳಿತದಡಿಯಲ್ಲಿ ಸೇರಬೇಕೆಂದು ಆಪೇಕ್ಷಿಸಿದ ಕಾಲ. ಕಾಲನ ಚಕ್ರಗತಿಯಲ್ಲಿ ಈ ಎರಡೂ ಘಟನೆಗಳು ಒಂದೇ ಬಗೆಯಲ್ಲಿ ನಡೆದಿವೆ. ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಇದ್ದ ಪರಿಸ್ಥಿತಿಯು ಸ್ವಾತಂತ್ರ್ಯಪೂರ್ವದಲ್ಲಿಯೂ ಇತ್ತು. ಮೊದಲಿನದು ಮುಸ್ಲಿಮರ ಪ್ರಾಬಲ್ಯದ ಕಾಲ. ನಂತರದ್ದು ಬ್ರಿಟಿಷರ ಪ್ರಾಬಲ್ಯದ ಕಾಲ. ಇವರಿಬ್ಬರ ದೃಷ್ಟಿಕೋನವೂ ಒಂದೇ. ಹಿಂದೂ ರಾಜ್ಯವನ್ನು ಸರ್ವನಾಶ ಮಾಡಿ ಭಾರತವನ್ನು ಇಸ್ಲಾಂ ರಾಷ್ಟ್ರವನ್ನಾಗಿ ಮಾಡಬೇಕೆಂಬುದು ಮುಸ್ಲಿಮರು ಮತಾಂಧತೆಯಿಂದ ಮುನ್ನಡೆದರು. ಹಾಗೆಯೇ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣ ನೀಡುವ ಹೆಸರಿನಲ್ಲಿ ಕ್ರೈಸ್ತ ತತ್ವಗಳನ್ನು ಪ್ರಸಾರ ಮಾಡುತ್ತ ಕ್ರೈಸ್ತ ಧರ್ಮವನ್ನು ಬ್ರಿಟಿಷರು ಪ್ರಸಾರ ಮಾಡತೊಡಗಿದರು ಎನ್ನುವ ಅಂಶಗಳು ವಿಜಯನಗರ ಕುರಿತು ಬಂದಿರು ಅನೇಕ ಪಠ್ಯಗಳಲ್ಲಿ ಕಾಣಸಿಗುತ್ತವೆ.

ಇಂತಹ ಸಂದರ್ಭದಲ್ಲಿ ದೇಶವನ್ನು, ಭಾಷೆಯನ್ನು, ಧರ್ಮವನ್ನು ರಕ್ಷಿಸಿಕೊಳ್ಳುವುದು ತೀರಾ ಅಗತ್ಯವಾಗಿತ್ತು. ಮುಸ್ಲಿಮರಿಂದಾದ ಆಪತ್ತಿನಿಂದ ತಪ್ಪಿಸಿಕೊಳ್ಳಲು ವಿಜಯನಗರವೆಂಬ ಮಹಾನ್ ಸಾಮ್ರಾಜ್ಯ ಸ್ಥಾಪನೆಯಾಯಿತು. ಅದು ಧರ್ಮವನ್ನು, ಭಾಷೆಯನ್ನು ರಕ್ಷಿಸುವುದಕ್ಕಾಗಿಯೇ ಹುಟ್ಟಿಕೊಂಡ ಸಾಮ್ರಾಜ್ಯವಾಯಿತು. ಅದು ತನ್ನ ಪಾಲಿನ ಕರ್ತವ್ಯವನ್ನು ಸಾಮರ್ಥ್ಯವಿರುವವರೆಗೂ ನಿರ್ವಹಿಸಿತು. ಅದರ ಸಾಮರ್ಥ್ಯ ಕುಗ್ಗಿದ ಮೇಲೆ ಅದು ಕಾಲನ

ಗರ್ಭದಲ್ಲಿ ಅಡಗಿ ಹೋಯಿತು. ಇದೇ ನೆಲದಲ್ಲಿ ಮತ್ತೆ ಹಿಂದಿನ ಭೀಕರತೆ ಗೋಚರವಾಯಿತು. ಅದನ್ನು ತಪ್ಪಿಸಿಕೊಳ್ಳಲು ಹೋರಾಟ ಅನಿವಾರ್ಯ. ಇಂತಹ ಹೋರಾಟಕ್ಕೆ ಚರಿತ್ರೆಯ ಮಹಾನ್ ಸಾಮ್ರಾಜ್ಯವಾದ ವಿಜಯನಗರ ಪ್ರೇರಕ ಶಕ್ತಿಯಾಗಿ, ಚೈತನ್ಯವನ್ನು ತುಂಬುವ ಚಿಲುಮೆಯಾಗಿ ಬಳಸಿಕೊಳ್ಳಲಾಯಿತು.

1936ರಲ್ಲಿ ವಿಜಯನಗರ ಸ್ಮಾರಕೋತ್ಸವವನ್ನು ಹಮ್ಮಿಕೊಂಡಾಗ ಅದರ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಶಂಕರಾಚಾರ್ಯರು ತಮ್ಮ ಸಮಾರೋಪದ ಭಾಷಣದಲ್ಲಿ ಹೀಗೆ ಹೇಳುತ್ತಾರೆ. "ಈ ಉತ್ಸವವನ್ನು ರಕ್ತದ ಅಕ್ಷರಗಳಿಂದ ಬರೆಯಬೇಕು. ಬದುಕಿದ್ದು ಸಾಯಲಿಕ್ಕೆ ತಯಾರಾಗಿರುವವರು ಇತಿಹಾಸವನ್ನು ರಕ್ತದಿಂದ ಬರೆಯಬಲ್ಲರು. ಅಂಥವನ ರಕ್ತದ ಅಕ್ಷರವಾಗದೆ ರತ್ನದ ಅಕ್ಷರವಾಗಬಹುದು. ಹಿಂದುಸ್ತಾನವು ಎಷ್ಟು ಸೌಮ್ಯವೋ ಅಷ್ಟೇ ಕಠೋರವಾಗಿರಬೇಕು. ವಜ್ರಾದಪಿ ಕಠೋರಾಣಿ ಮೃದೂನಿ ಕುಡುಮಾದಪಿ, ಈ ತರದ ವೃತ್ತಿಯಿರಬೇಕು. ವಿಜಯನಗರವು ಉದಯೋನ್ಮುಖವಾಗಲಿಕ್ಕೆ ನಷ್ಟವಾದ ರಾಜ್ಯ. ಈ ಹಾಳಿನಲ್ಲಿ ಎಲ್ಲಿ ಹೋದರೂ ಒಂದು ತರಹದ ಚೈತನ್ಯವು ಕಂಡುಬರುತ್ತದೆ. ಇದು ನಷ್ಟ ಆದವರನ್ನು ಬದುಕಿಸುವ ಸ್ಥಾನ. ನಿದ್ರೆಯು ವಿಶ್ರಾಂತಿಗಾಗಿ, ಪುನಃ ಹೆಚ್ಚು ಶ್ರಮ ಮಾಡಲಿಕ್ಕೆ. ವಿಜಯನಗರವು ನಷ್ಟವಾದಂತೆ ಕಾಣಿಸುವುದಿಲ್ಲ. ಈ ಮೂರ್ತಿಗಳನ್ನು ಭಂಗಮಾಡಿದವರು ಚೈತನ್ಯವನ್ನು ಉತ್ಪನ್ನ ಮಾಡಲಿಕ್ಕೆ ಮಾಡಿರುವರು. ನಮ್ಮ ನರಸಿಂಹನು ಭಿನ್ನನಾಗಿಲ್ಲ. ಅವನು ನಮಗೆ ಸ್ಫೂರ್ತಿಯನ್ನು ಕೊಡುತ್ತಲಿರುವನು." ಇಂತಹ ಮಾತುಗಳು ಚರಿತ್ರೆಯ ಬಗೆಗೆ ಅಭಿಮಾನವನ್ನು ತುಂಬಿಸುತ್ತವೆ. ಹೀಗೆ ನಾಡಿನ ಬಗ್ಗೆ ಅಭಿಮಾನ ಮೂಡಿಸುವ ಕಾರ್ಯವೇ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಮೂಲಕ ನಡೆಯಿತು ಎಂದು ಹೇಳಬಹುದು.

1900ರ ವೇಳೆಗಾಗಲೆ ಬ್ರಿಟಿಷರು ಭಾರತವನ್ನು ಸಂಪೂರ್ಣವಾಗಿ ತಮ್ಮ ರಾಜಕೀಯ ಹಿಡಿತದಲ್ಲಿಟ್ಟುಕೊಂಡಿದ್ದರು. ಆಗ ಭಾರತವು ಒಂದು ರಾಷ್ಟ್ರವಾಗಿ ರೂಪುಗೊಂಡಿತ್ತು. ಆ ಸಂದರ್ಭದಲ್ಲಿ ಹುಟ್ಟಿಕೊಂಡು ಸಮಸ್ಯೆಗಳಿಗೆ ಬ್ರಿಟಿಷರ ಆಡಳಿತವೇ ಕಾರಣ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಭಾರತದಲ್ಲಿರುವ ಸಮಸ್ಯೆಗಳಿಗೆ ಪರಿಹಾರವೆಂದರೆ ಬ್ರಿಟಿಷ್ ಆಡಳಿತದಿಂದ ಮುಕ್ತಿಯನ್ನು ಪಡೆಯುವುದಾಗಿತ್ತು. ಇದರಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರ ಸಮಸ್ಯೆಯೂ ಸೇರಿಕೊಂಡಿತ್ತು. ಇಂತಹ ಸಂದರ್ಭದಲ್ಲಿ ವ್ಯವಸ್ಥಿತವಾದ ಹೋರಾಟದ ಅಗತ್ಯತೆಯಿತ್ತು. ಅದಕ್ಕೆ ಜನರ ಪ್ರೋತ್ಸಾಹ ಅನಿವಾರ್ಯವಾಗಿತ್ತು. ಅದೊಂದು ಸಾರ್ವತ್ರಿಕವಾದ ಹೋರಾಟವಾಗಬೇಕಿತ್ತು. ಅದಕ್ಕಾಗಿ ಜನರನ್ನು ಸಂಘಟಿಸಬೇಕಾದ ಮಾರ್ಗವನ್ನು ಕಂಡುಕೊಳ್ಳಬೇಕಾಗಿತ್ತು.

ಅಂತಹ ಸಂದಿಗ್ಧ ಸಮಯದಲ್ಲಿ ಭಾರತೀಯರಿಗೆ ಸಹಾಯಕವಾದದ್ದು ಇಂಗ್ಲೀಷ ಶಿಕ್ಷಣ. ಈ ಶಿಕ್ಷಣದ ಫಲವಾಗಿ ಚಾರಿತ್ರಿಕ ಪ್ರಜ್ಞೆ, ಭಾಷಾವಾರು ಪ್ರಾಂತ್ಯದ ರಚನೆಯನ್ನು

ಮನಗಂಡರು. ಹೀಗಾಗಿ ಈ ಶಿಕ್ಷಿತ ಸಮುದಾಯವು ತಮ್ಮ ಪ್ರಾಂತ್ಯದ ಆದರ್ಶ ಸಾಮ್ರಾಜ್ಯಗಳನ್ನು ಮಾದರಿಯಾಗಿಟ್ಟುಕೊಂಡವು. ಜನರಲ್ಲಿ ರಾಷ್ಟ್ರ ಪ್ರೇಮವನ್ನು ಬೆಳೆಸುವುದಕ್ಕೆ ಇಂತಹ ಚಾರಿತ್ರಿಕ ಘಟನೆಗಳನ್ನು ಬಳಸಿಕೊಂಡರು. ಆಗ ವಿಜಯನಗರ ಸಾಮ್ರಾಜ್ಯ ಚರಿತ್ರೆಯನ್ನು ಆ ಕಾಲದ ಬರಹಗಾರರನ್ನು ಆಕರ್ಷಿಸಿತು. ರಾಷ್ಟ್ರವನ್ನು ಪರತಂತ್ರದಿಂದ ಮುಕ್ತಿಗೊಳಿಸಿ, ಕನ್ನಡಿಗರನ್ನು ಏಕೀಕರಿಸುವ ಉದ್ದೇಶದ ಹಿನ್ನೆಲೆಯಲ್ಲಿ ರೂಪುಗೊಂಡ ಬರಹಗಳು ಈ ಚರಿತ್ರೆಯಲ್ಲಿನ ಆಯ್ದ ಘಟನೆಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದರು. ಹೀಗೆ ಚರಿತ್ರೆಯನ್ನು ಆಯ್ದುಕೊಂಡಾಗ ಅಲ್ಲಿನ ಸಮಸ್ಯೆಗಳ ವಿವರಣೆಗೆ ತೊಡಗದೆ ತಮ್ಮ ಮುಂದಿನ ಸಮಸ್ಯೆಯ ಪರಿಹಾರಕ್ಕೆ ಪ್ರೇರಕವಾಗುವ ಅಂಶಗಳ ಕಡೆಗೆ ಹೆಚ್ಚಿನ ಗಮನ ಹರಿಸಿದಂತಿದೆ. ಹಾಗಾಗಿ ಈ ರೀತಿ ಅಭಿವ್ಯಕ್ತಗೊಂಡ ಚಿಂತನೆಗಳಲ್ಲಿ ಕಟ್ಟುವ ನಾಡು ಹೇಗಿರಬೇಕು ಎನ್ನುವುದನ್ನು ಕುರಿತು ಚಿಂತಿಸಿದ್ದಾರೆ.

ನಾಡು ಕಟ್ಟುವ ಕ್ರಿಯೆಯಲ್ಲಿ ಎಲ್ಲರೂ ಒಂದಾಗಬೇಕು. ಈ ಒಂದಾಗುವಿಕೆಗೆ ಬೇಕಾದ ಪ್ರೇರಣೆಗಳಾಗಿ ಅಸಂಖ್ಯಾತ ಗುರುತುಗಳನ್ನು ರೂಪಿಸಿಕೊಂಡರು. ಅವುಗಳಲ್ಲಿ ಕರ್ನಾಟಕ, ಭಾರತ ಮತ್ತು ಹಿಂದೂ ಗುರುತುಗಳು ಮುಖ್ಯವಾಗುತ್ತವೆ. ಭಾರತ ಎನ್ನುವ ಗುರುತು ಬ್ರಿಟಿಷರ ವಿರೋಧದ ನೆಲೆಯಲ್ಲಿ ಹುಟ್ಟಿಕೊಳ್ಳುತ್ತದೆ. ಹೀಗಾಗಿ ಇದನ್ನು ಬ್ರಿಟಿಷರು ದಯಪಾಲಿಸಿದ ಗುರುತು ಎಂದು ಕರೆಯುತ್ತಾರೆ.

ಕನ್ನಡ ಎನ್ನುವ ಗುರುತನ್ನೂ ಸಹ ಅನ್ಯರು ದಯಪಾಲಿಸಿದ ಗುರುತು ಎನ್ನಲಾಗುತ್ತದೆ. ಮರಾಠಿಗರು ಕನ್ನಡಿಗರನ್ನು 'ಕಾನಡಿಯಪ್ಪ' ಎಂದು ಗುರುತಿಸುತ್ತಿದ್ದರಿಂದ ವಿದ್ಯಾರ್ಜನೆಗಾಗಿ ಮುಂಬೈಗೆ ತೆರಳಿದ್ದ ಅಂದಿನ ವಿದ್ಯಾವಂತ ಯುವಕರಲ್ಲಿ ಕನ್ನಡಿಗರೆಲ್ಲ ಒಂದೇ ಎನ್ನುವ ಭಾವನೆ ಮೂಡಿತ್ತು. ಆದರೆ ಆ ಗುರುತು ಹೆಚ್ಚು ಗಟ್ಟಿಗೊಂಡದ್ದು ಚಾರಿತ್ರಿಕವಾದ ಪ್ರಜ್ಞೆ ಮೂಡಿದ ನಂತರ. ಅಂದರೆ ಕನ್ನಡದ ಗುರುತು ರೂಪುಗೊಳ್ಳಲು ವಿಜಯನಗರದ ಚಾರಿತ್ರಿಕ ಸಂಗತಿ ಆಕರಗಳಾಗುತ್ತವೆ. ವಿದ್ಯಾರಣ್ಯರಿಗಿದ್ದ 'ಕರ್ನಾಟಕ ಸಿಂಹಾಸನಾ ಸ್ಥಾಪನಾಚಾರ್ಯ' ಮತ್ತು ಇತರ ರಾಜರುಗಳಿದ್ದ 'ಕನ್ನಡರಾಜ್ಯ ರಮಾರಮಣ', 'ಕರ್ನಾಟಕ ವಿದ್ಯಾವಿಲಾಸ' ಮುಂತಾದ ಬಿರುದುಗಳು ಈ ಗುರುತು ರೂಪುಗೊಳ್ಳಲು ಪ್ರೇರಣೆಯಾದವು. ಮೊದಲು ಕನ್ನಡ ಎನ್ನುವ ಗುರುತು ನಿರ್ಮಾಣವಾಯಿತು. ಈ ಕನ್ನಡ ಎನ್ನುವುದು ಭಾಷಾವಾಚಿ ಗುರುತಾಯಿತು. ಕನ್ನಡ ಮಾತನಾಡುವವರು ಕನ್ನಡಿಗರಾದರು. ಆಗ ಕನ್ನಡಿಗರೆನ್ನುವುದು ಸಮೂಹವಾಚಿ ಗುರುತಾಯಿತು. ಕನ್ನಡ ಮಾತನಾಡುವ ಜನರನ್ನು ಒಳಗೊಂಡ ಪ್ರದೇಶವು 'ಕರ್ನಾಟಕ' ಎಂದು ಗುರುತಿಸಿಕೊಂಡಿತು. ಇದು ದೇಶವಾಚಿಯಾಗಿ ಗುರುತಿಸಲ್ಪಟ್ಟಿತು.

ಹೀಗೆಯೇ ವಿಜಯನಗರ ಚರಿತ್ರೆಯನ್ನಾಧರಿಸಿಯೇ ಹಿಂದೂ ಗುರುತು ಕೂಡ ರೂಪುಗೊಂಡಿತು. ವಿಜಯನಗರ ಸಾಮ್ರಾಜ್ಯದ ಉದಯ, ಉದ್ದೇಶ ಹಿಂದೂ ಧರ್ಮದ ರಕ್ಷಣೆ. ಈ ಉದ್ದೇಶದಿಂದ ಹುಟ್ಟಿಕೊಂಡ ಸಾಮ್ರಾಜ್ಯವು ತನ್ನ ಧರ್ಮವನ್ನು ರಕ್ಷಿಸುತ್ತಾ

ಪರಧರ್ಮಗಳನ್ನು ಪ್ರೋತ್ಸಾಹಿಸಿತು. ಆದರೂ ಅದಕ್ಕೆ ಹಿಂದೂ ಸಾಮ್ರಾಜ್ಯ ಎನ್ನುವ ಹಣೆಪಟ್ಟಿ ಕಟ್ಟಲಾಯಿತು. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಈ ಬಗೆಯ ದೃಷ್ಟಿಕೋನ ಇನ್ನೂ ಹೆಚ್ಚಾಯಿತು. ಸಾಹಿತ್ಯವು ತನ್ನ ಸಮಕಾಲೀನ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಇಂತಹ ಅಂಶಗಳಿಗೆ ಮತ್ತಷ್ಟು ಪ್ರೇರಣೆ ನೀಡಿತು. ತತ್ಪರಿಣಾಮವಾಗಿ 'ಹಿಂದೂ' ಎನ್ನುವ ಗುರುತು ಹುಟ್ಟಿಕೊಂಡಿತು. ಹಿಂದೂ ಎನ್ನುವ ಗುರುತಿನ ಮೂಲಕ ನಾವೆಲ್ಲರೂ ಒಂದು ಎನ್ನುವ ಭಾವನೆಯನ್ನು ಮೂಡಿಸುತ್ತಾರೆ. ಈ ಹಿಂದೂ ಎನ್ನುವ ಗುರುತಿನ ಹಿಂದೆ ಹಿಂದೂಸ್ತಾನದವರೆಲ್ಲರೂ ಒಂದೇ ಎನ್ನುವ ಭಾವನೆಯಿದೆ ಎನ್ನುವ ಗ್ರಹಿಕೆಗಳು ಹಿಂದೂ ರಾಷ್ಟ್ರೀಯತೆಗೆ ಪ್ರೇರಕವಾದವು. ಪ್ರದೇಶವಾಚಿಯಾಗಿ ಬಳಕೆಗೊಂಡಿದ್ದ 'ಹಿಂದೂ' ಪದವು 'ವೈದಿಕ' ಧರ್ಮದೊಂದಿಗೆ ಸಮೀಕರಿಸಿ ವೈದಿಕ ಧರ್ಮ ಎನ್ನುವುದನ್ನು ಹಿಂದೂ ಧರ್ಮ ಎನ್ನುವ ಅರ್ಥದಲ್ಲಿ ಬಳಸಲಾಯಿತು. ಯಾವಾಗ ಪ್ರದೇಶವಾಚಿಯಾಗಿದ್ದ ಪದವು ಧರ್ಮವಾಚಿಯಾಗಿ ಬಳಕೆಗೊಳ್ಳತೊಡಗಿತೋ ಆಗ ಧರ್ಮ ಆಧಾರಿತ ರಾಷ್ಟ್ರೀಯತೆ ಬೆಳೆಯಲು ಪ್ರೇರಕವಾದವು. ಆದರೆ ರಾಷ್ಟ್ರೀಯ ಹೋರಾಟದ ಸಂದರ್ಭ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿತ್ತು. ಭಾರತದಲ್ಲಿನ ನಾನಾ ಧರ್ಮಗಳನ್ನು ಒಗ್ಗೂಡಿಸಿಕೊಂಡು ಹೋರಾಟ ಮಾಡಬೇಕಾಗಿತ್ತು. ಯಾವಾಗ ಹಿಂದೂ ಎನ್ನುವುದು ಧರ್ಮವಾಚಿಯ ಅರ್ಥಪಡೆದುಕೊಂಡಿತೋ ಆಗ ಏಕರಾಷ್ಟ್ರ ಪರಿಕಲ್ಪನೆಗೆ ಪೆಟ್ಟು ಬಿದ್ದಿತು.

ಈ ಹಿನ್ನೆಲೆಯಲ್ಲಿಯೇ ರೂಪುಗೊಂಡ ಇನ್ನೊಂದು ಪರಿಕಲ್ಪನೆ ಎಂದರೆ ಭುವನೇಶ್ವರಿಯದು. ಚರಿತ್ರೆಯನ್ನು ಅವಲೋಕಿಸಿದಾಗ ಭೂಮಿ ನಿರ್ಣಾಯಕ ಪಾತ್ರವಹಿಸಿರುವುದು ಕಂಡು ಬರುತ್ತದೆ. ಉಳಿದೆಲ್ಲ ವಿಚಾರಗಳಿಗಿಂತ ಭೂಮಿ ಎನ್ನುವುದು ಬದುಕಿಗೆ ಹತ್ತಿರವಾದದ್ದು. ಈ ಕಾರಣಕ್ಕಾಗಿಯೇ ಹಲವಾರು ಸಂಘರ್ಷಗಳು ಸಾಮರಸ್ಯಗಳು ನಡೆದಿವೆ, ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಭೂಮಿಯನ್ನು ತಾಯಿ ಎನ್ನುವ ಪರಿಕಲ್ಪನೆ ಮೈದಳಿದಿದೆ. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎನ್ನುವ ಉಕ್ತಿಯು ಭಾವನಾತ್ಮಕ ಸಂಬಂಧ ಬೆಳೆಯಲು ಕಾರಣವಾಗಿದೆ. ಮೊದಲು ಈ ಪರಿಕಲ್ಪನೆಯು ರಾಜನ ಆಡಳಿತವನ್ನು ಸಮರ್ಥಿಸುವ ವರ್ಗವು ಭೂಮಿಯನ್ನು ಪವಿತ್ರವೆಂದು ಹೇಳಿ ಆ ಮೂಲಕ ಜನರಲ್ಲಿ ಸೇವಾಮನೋಭಾವನೆಯನ್ನು ಬೆಳೆಸುವುದಾಗಿತ್ತು. ಈ ತಂತ್ರವು ಅನಾದಿ ಕಾಲದಿಂದ ಬೆಳೆದು ಬಂದಿತ್ತಾದರೂ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹೆಚ್ಚು ಮನ್ನಣೆ ಪಡೆಯಿತು. ಆದರೆ ಭಾರತೀಯ ಪರಂಪರೆಯಲ್ಲಿ ಸ್ತ್ರೀಯರಿಗೆ ಎರಡನೆಯ ಸ್ಥಾನವಿದ್ದರೂ ದೈವಿಕ ನೆಲೆಯಲ್ಲಿ ಮೊದಲ ಸ್ಥಾನ ನೀಡಲಾಗಿದೆ. ವಸಾಹತುಶಾಹಿ ಪೂರ್ವದ ಸಂದರ್ಭದಲ್ಲಿ ನೆಲವನ್ನು ಮಾತೃ ದೇವತೆಯ ನೆಲೆಯಲ್ಲಿಯೇ ಗುರುತಿಸುವ ವಾಡಿಕೆ ಇತ್ತು. ಇಂತಹ ಅಭಿವ್ಯಕ್ತಿಯು ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಮಾತ್ರ ಸೀಮಿತವಾಗಿತ್ತು. ರಾಜಕೀಯ ನೆಲೆಯಲ್ಲಿ ರಾಜನನ್ನು ವರ ಎಂದು, ಭೂಮಿಯನ್ನು ವಧು ಎಂದು ಗುರುತಿಸುತ್ತಿದ್ದರು. ಇದಕ್ಕೆ ಶಾಸನಗಳಲ್ಲಿ ರಾಜರಿಗಾಗಿ ಅನೇಕ ಜನರು ಪ್ರಾಣತ್ಯಾಗ ಮಾಡಿರುವ ವೀರಗಲ್ಲುಗಳು ಸಾಕ್ಷಿಯಾಗಿವೆ. ಆದರೆ

ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ತಾಯಿ ಎನ್ನುವ ಪರಿಕಲ್ಪನೆ ರಾಜಕೀಯ ಸ್ವರೂಪ ಪಡೆದುಕೊಂಡಿತು. ತತ್ಫಲವಾಗಿ ಪ್ರಾಂತ್ಯಗಳು ತಮ್ಮದೇ ಆದ ಹೆಸರಿನಲ್ಲಿ ತಮ್ಮ ತಾಯ್ನೆಲವನ್ನು ಕರೆದುಕೊಂಡರು. ಈ ಹಿನ್ನೆಲೆಯಲ್ಲಿಯೇ ರೂಪುಗೊಂಡದ್ದೇ 'ಭುವನೇಶ್ವರಿ' ಪರಿಕಲ್ಪನೆ. ಏಕೆಂದರೆ ವಿದ್ಯಾರಣ್ಯರ ತಪಸ್ಸಿಗೆ ಮೆಚ್ಚಿ ರಾಜ್ಯ ಉದಯಿಸಲಿಕ್ಕೆ ಪ್ರೇರಕಶಕ್ತಿಯಾಗಿ ನಿಂತ ಚಾರಿತ್ರಿಕ ಘಟನೆಯು ಏಕೀಕರಣ ಸಂದರ್ಭದಲ್ಲಿ ಈ ಪರಿಕಲ್ಪನೆ ಹೆಚ್ಚು ಮಹತ್ವ ಪಡೆದುಕೊಂಡಿತ್ತು. ಭೂಮಿಯನ್ನು ಆರಾಧನಾ ನೆಲೆಗಳಿಗೆ ಕೊಂಡೊಯ್ದ ಅಂದಿನ ಸಾಹಿತಿಗಳು ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿಗಳನ್ನು ಜನರಲ್ಲಿ ಹುಟ್ಟು ಹಾಕಲು ಪ್ರಯತ್ನಿಸಿದರು. ಈ ಹಿನ್ನೆಲೆಯಲ್ಲಿಯೇ ಒಂದು ರಾಷ್ಟ್ರಕ್ಕೆ, ರಾಜ್ಯಕ್ಕೆ ಒಂದು ಧರ್ಮ, ಒಬ್ಬ ಕುಲಗುರು, ಒಂದು ಕುಲದೇವತೆ ಅಗತ್ಯ ಎನ್ನುವ ಭಾವನೆ ಬೆಳೆಯಿತು. ಒಂದು ಸಂಸ್ಕೃತಿಯ ಅಸ್ತಿತ್ವದ ಉಳಿವಿಗಾಗಿ ರೂಪುಗೊಂಡಂತ ಇಂತಹ ಗುರುತು ರಾಜಕಾರಣವು ಇಂದಿಗೂ ಪ್ರಬಲವಾಗಿ ಮುಂದುವರೆದಿದೆ. ಈ ಹಿನ್ನೆಲೆಯಲ್ಲಿಯೇ ಇಂದು ಅನೇಕ ಗುರುತುಗಳು ರೂಪುಗೊಳ್ಳುತ್ತಿವೆ.

ವಿಜಯನಗರ ಪ್ರತಿನಿಧಿಸಲ್ಪಟ್ಟಿರುವ ಸಾಹಿತ್ಯ ಪಠ್ಯಗಳನ್ನು ಅವಲೋಕಿಸಿದಾಗ ಗೋಚಸಿರುವ ಇನ್ನೊಂದು ಅಂಶವೆಂದರೆ. ವಿಜಯನಗರ ಸ್ಥಾಪಿಸಲ್ಪಟ್ಟಿದ್ದು ಹರಿಹರ-ಬುಕ್ಕರ ಕ್ಷಾತ್ರ ತೇಜಸ್ಸಿನಿಂದ. ಆ ಸಾಮ್ರಾಜ್ಯದ ಔನ್ನತ್ಯಕ್ಕೆ ದುಡಿದದ್ದು ಲಕ್ಷಾಂತರ ಶೂದ್ರ ಕೈಗಳು. ಕಾಲಗರ್ಭದಲ್ಲಿ ಸೇರಿ ಹೋಗುತ್ತಿದ್ದ ವಚನ ಸಾಹಿತ್ಯದ ಅಮೂಲ್ಯ ಖನಿಯನ್ನು ಕ್ರೂಢೀಕರಿಸಲು ಸಹಾಯ ಮಾಡಿದ್ದು ಪ್ರೌಢದೇವರಾಯನಂತಹ ಶೈವ ಪ್ರತಿಭೆ. ಆದರೆ ಬಹುತೇಕ ಪಠ್ಯಗಳಲ್ಲಿ ಇವುಗಳಿಗೆ ಬದಲಾಗಿ ಬ್ರಾಹ್ಮಣತ್ವವನ್ನೇ ಹೆಚ್ಚು Focuse ಮಾಡಲಾಗಿದೆ. ಹರಿಹರ ಬುಕ್ಕರ ಸಾಮರ್ಥ್ಯಕ್ಕಿಂತ ವಿದ್ಯಾರಣ್ಯರ ಅಲೌಕಿಕ ಶಕ್ತಿಯನ್ನೇ ಹೇಳುವುದು. ಬ್ರಾಹ್ಮಣೇತರರು ಆರಾಧಿಸುವ ಶಕ್ತಿ ದೇವತೆಗಳಿಗೆ ಬದಲಾಗಿ ಭುವನೇಶ್ವರಿಯನ್ನೇ ಸ್ತುತಿಸುವುದು- ಮುಂತಾವುಗಳೇ ಇದಕ್ಕೆ ನಿದರ್ಶನ.

ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ರಾಷ್ಟ್ರೀಯ ಹೋರಾಟಕ್ಕೆ ಅನುಗುಣವಾಗಿ ಹೆಣೆಯುವಾಗ ಮುಸ್ಲಿಮರು ಅನ್ಯರಾಗಿ ಕಾಣಿಸಿಕೊಳ್ಳುತ್ತಾರೆ. ಅನ್ಯರ ಆಡಳಿತದಿಂದಾಗಿ ಆಗುವ ಪರಿಣಾಮಕ್ಕೆ ಮುಸ್ಲಿಮರು ಕೇವಲ ಸಂಕೇತವಷ್ಟೆ. ಅಂದರೆ ಅಂದಿನ ಬ್ರಿಟಿಷರ ಆಡಳಿತದಿಂದ ಮುಕ್ತಿಗೊಳಿಸಲು ಈ ರೂಪಕಗಳನ್ನು ಬಳಸಿದರು. ಈ ರೂಪಕಗಳು ರಾಷ್ಟ್ರೀಯ ಹೋರಾಟಕ್ಕಾಗಿಯೇ ರೂಪಿಸಿದಂತವುಗಳು. ಆದರೆ ರಾಷ್ಟ್ರ ಪಾರತಂತ್ರ್ಯದಿಂದ ಬಿಡುಗಡೆಗೊಂಡ ನಂತರವೂ ಇವು ಮುಂದುವರೆದವು. ಏಕೆಂದರೆ ಸಾಹಿತ್ಯವು ಸಾರ್ವಕಾಲಿಕ ಸತ್ಯವನ್ನು ಬಿಂಬಿಸುವುದು ಎನ್ನುವ ಗ್ರಹಿಕೆಯಿದೆ. ಆದರೆ ಈ ಸಾರ್ವಕಾಲಿಕ ಸತ್ಯದ ಪರಿಣಾಮವು ರಾಷ್ಟ್ರೀಯ ಹೋರಾಟಕ್ಕಾಗಿ ರೂಪಿತವಾದ ರೂಪಕಗಳಲ್ಲಿ ವ್ಯತಿರಿಕ್ತವಾಯಿತು. ಅದು ಇಂದಿನವರೆಗೂ ನಿರಂತರವಾಗಿ ನಡೆದಿದೆ.

ಧರ್ಮದ ಹಿನ್ನೆಲೆಯಲ್ಲಿ ರೂಪುಗೊಂಡ ಹಿಂದೂ ರಾಷ್ಟ್ರೀಯ ವಾದವು ಬಹುಧರ್ಮೀಯ ದೇಶವಾದ ಭಾರತದಲ್ಲಿ ಒಂದು ಬಗೆಯಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆಯನ್ನುಂಟು ಮಾಡಿತು. ಆ ಕಾಲದ ಬರಹಗಾರರು ಇದನ್ನು ಅಷ್ಟಾಗಿ ಗಮನಿಸಿರಲಿಲ್ಲ ಎನಿಸುತ್ತದೆ. ಆದರೆ ಇಂದು ಬಲಪಂಥೀಯ ವಿಚಾರಧಾರೆಯನ್ನು ಹೊಂದಿರುವವರು ಅವನ್ನೇ ಆಕರಗಳು ಎಂದು ಪರಿಗಣಿಸುತ್ತಾರೆ. ಇದರಿಂದಾಗಿ ಕೋಮು ಗಲಭೆಗಳು ಶುರುವಾಗಿವೆ.

ರಾಷ್ಟ್ರೀಯ ಹೋರಾಟದಲ್ಲಿ ವಿದ್ಯಾರಣ್ಯರನ್ನು ಸಂಕೇತವಾಗಿಟ್ಟುಕೊಳ್ಳಲಾಯಿತು. ಸಮುದಾಯವೊಂದು ಅವರನ್ನು ಕರ್ನಾಟಕ ಚರಿತ್ರೆಯ ನಾಯಕನೆಂಬಂತೆ ಬಿಂಬಿಸಿತು. ಇದರ ಪರಿಣಾಮದಿಂದಾಗಿ ಅಸಂಖ್ಯಾತ ಜಾತಿ ನಾಯಕರುಗಳು ಸೃಷ್ಟಿಯಾದರು. ಒಂದೊಂದು ಸಮುದಾಯಗಳು ತಮ್ಮ ಸಮುದಾಯದ ಚಾರಿತ್ರಿಕ ನಾಯಕನನ್ನು ಹುಡುಕತೊಡಗಿದರು. ನಿಖರವಾದ ಚಾರಿತ್ರಿಕ ಅಂಶಗಳನ್ನು ಗಮನಿಸದೇ ಕಟ್ಟುಕತೆಯಂತಿರುವ ಚರಿತ್ರೆಯನ್ನೆ ನಂಬಿಕೊಂಡು ಅನೇಕ ಗೊಂದಲಗಳನ್ನು ಸೃಷ್ಟಿಸಿಕೊಂಡವು. ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಳ್ಳಲು ಇಂತಹ ನಾಯಕರು ಅಗತ್ಯವಾಗಿ ತೋರಿದರು. ಒಬ್ಬ ನಾಯಕನ ಸಂಕೇತವಾಗಿ ಆ ಸಮುದಾಯವು ಮುಂದೆ ಬರುವುದು ಸರಿ. ಆದರೆ ಆ ಭರದಲ್ಲಿ ಇತಿಹಾಸವನ್ನೇ ತಿರುವು ಮುರುವು ಮಾಡುವ ಘಟನೆಗಳಿಗೆ ಕಾರಣವಾಗಿವೆ. ಉದಾ: ಬಸವಣ್ಣನ, ಮಲೆಯ ಮಾದಪ್ಪ ಜಾತಿಯ ಮೂಲದ ಪ್ರಶ್ನೆಯನ್ನೇ ನೋಡಬಹುದು. ವಿವಿಧ ಸಮುದಾಯದವರು ಆಯ್ದ ದಾಖಲೆಗಳಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇವರು ನಮ್ಮ ಸಮುದಾಯಕ್ಕೆ ಸೇರಿದವರು ಎಂದು ಹೇಳುತ್ತಾರೆ. ಇದರಿಂದ ಸಮಾಜದಲ್ಲಿ ಅನೇಕ ಸಮಸ್ಯೆಗಳು ಉಂಟಾಗಿವೆ.

**8.2. ಹೆಚ್ಚಿನ ಅಧ್ಯಯನದ ಸಾಧ್ಯತೆಗಳು :**

ಕನ್ನಡ ಸಾಹಿತ್ಯದಲ್ಲಿ ವಿಜಯನಗರ ಪ್ರತಿನಿಧೀಕರಣ ಕುರಿತು ಅಧ್ಯಯನಗಳು ನಡೆದಿಲ್ಲ. ಇಲ್ಲಿ ಕೈಗೊಳ್ಳಲಾದ ಅಧ್ಯಯನವು 1900 ರಿಂದ 1956ರ ವರೆಗಿನ ವ್ಯಾಪ್ತಿಯಲ್ಲಿ ಬಂದ ಪ್ರಾತಿನಿಧಿಕ ಪಠ್ಯಗಳನ್ನಾಧರಿಸಿದೆ. ಈ ವ್ಯಾಪ್ತಿಯನ್ನು ಮೀರಿ ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಹಲವು ಸಾಧ್ಯತೆಗಳಿವೆ.


1. ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯು ವಿಶಾಲವಾಗಿದದ್ದು. ಅಂದರೆ ಆ ಸಾಮ್ರಾಜ್ಯಕ್ಕೆ ಒಳಪಟ್ಟ ಹಲವು ಪ್ರಾಂತ್ಯಗಳ ಐತಿಹಾಸಿಕ ಘಟನೆಗಳನ್ನಾಧರಿಸಿದ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಬೇಕು.
2. 1956ರ ನಂತರ ವಿಜಯನಗರ ಸಾಮ್ರಾಜ್ಯವನ್ನು ಸಾಹಿತಿಗಳು ಗ್ರಹಿಸಿದ ಬಗೆಯನ್ನು ಕುರಿತು ವಿವೇಚಿಸಬಹುದು.
3. ವಿದ್ಯಾರಣ್ಯರ ಜೀವನ ಮತ್ತು ಸಾಧನೆಯನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ.

4. ವಿಜಯನಗರದ ಇಂದಿನ ನಿರ್ವಚನ ಮತ್ತು ಜನಪ್ರಿಯ ಸಾಹಿತ್ಯದಲ್ಲಿ ವಿಜಯನಗರದ ಪ್ರತಿನಿಧೀಕರಣ ಎನ್ನುವುದರ ಅಧ್ಯಯನಕ್ಕೆ ಅವಕಾಶವಿದೆ.
5. ಜನಪದ ಸಾಹಿತ್ಯದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಗ್ರಹಿಸಿದ ಕುರಿತು ಅಧ್ಯಯನ ನಡೆಸಬಹುದಾಗಿದೆ.
6. ವಿಜಯನಗರ ಕುರಿತು ಬಂದಿರುವ ಸಾಹಿತ್ಯದಲ್ಲಿ ಸಾಮಾಜಿಕ ಜೀವನದ ಚಿತ್ರಣವನ್ನು ಕುರಿತು ಅಧ್ಯಯನ ಕೈಗೊಳ್ಳಬಹುದಾಗಿದೆ.

* * *



ಧ್ವಜವಂದನೆಯ ಕಾಲದ ನೋಟ



ಸ್ಮಾರಕೋತ್ಸವದ ಅಧ್ಯಕ್ಷರಾದ ಶ್ರೀ ಶಂಕರಾಚಾರ್ಯರೂ, ಶ್ರೀ ಮುದವೀಡು ಕೃಷ್ಣರಾಯರೂ, ಶ್ರೀ ಎಚ್. ರಾಮರಾಯರೂ, ಚಿತ್ರದಲ್ಲಿರುವವರು



ವ್ಯಾಪಾರಿ ಪರಿಷತ್ತಿನ ನೋಟ ಶ್ರೀ ಪ್ರಿ. ಸೀತಾರಾಮಯ್ಯನವರು ಮತ್ತು ಶ್ರೀ ಬೆಲ್ಲದ ಚನ್ನಪ್ಪನವರು



ತುಂಗಭದ್ರೆಯ ದಂಡೆಯಲ್ಲಿನ ನೋಟ



ಚಕ್ರತೀರ್ಥದಲ್ಲಿ ಅಸ್ಥಿಗಳನ್ನು ಅರ್ಪಿಸುವಮೊದಲು
ಶ್ರೀ ಶಂಕರಾಚಾರ್ಯರು ಉಪದೇಶ ಮಾಡುತ್ತಿರುವ ನೋಟ



ಸ್ಮಾರಕೋತ್ಸವಮಂಟಪದ ಸಮೀಪದ ನೋಟ



ಹಂಪಿಯಲ್ಲಿ ಶಕ್ತಿ ಪ್ರದರ್ಶನ ಮಾಡಿದ
ಚಿಕ್ಕೋಡಿ ತಂಡ




ಆಯುರ್ವೇದ-ಪರಿಷತ್ತುಗಳ ಅಧ್ಯಕ್ಷರು ಮತ್ತು
ಕಾರ್ಯಕರ್ತರು



ವಿಜಯ ವಿಠಲ ದೇವಾಲಯದ ಹೊರ ನೋಟ



ರಾಜ ಮುದ್ರೆ



ಭುವನೇಶ್ವರಿ



ವಿರುಪಾಕ್ಷ ದೇವಾಲಯದ ಒಳ ಪ್ರಾಂಗಣ



ಗಾಣಗಿತ್ತಿ ಜೈನಬಸದಿ


ರಾಜಪ್ರಾಂಗಣದಲ್ಲಿನ ಮಸೀದಿ


ಜೈನ ಬಸದಿ


ಮಸೀದಿ


ಉಗ್ರ ನರಸಿಂಹ


ಪಟ್ಟಾಭಿರಾಮ ದೇವಾಲಯ

## ಅನುಬಂಧ-1

## ಆಕರ ಗ್ರಂಥಗಳು

### ನಾಟಕ ಸಾಹಿತ್ಯ

ಗುಂಡಪ್ಪ ಡಿ.ವಿ., 1992, *ಶ್ರೀವಿದ್ಯಾರಣ್ಯ ವಿಜಯ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಮುಗಳಿ ರಂ.ಶ್ರೀ: 1948, *ವಿಜಯ ಸಾಮ್ರಾಜ್ಯ*, ವಿಜಯ ಗ್ರಂಥಮಾಲೆ, ಬೆಳಗಾಂವಿ.

ಶ್ರೀನಿವಾಸ ಮೂರ್ತಿ ಎಂ.ಆರ್. 1947, *ನಾಗರಿಕ*, ಸತ್ಯಶೋಧನಾ ಪ್ರಕಟಣಾ ಮಂದಿರ, ಬೆಂಗಳೂರು

ಶ್ರೀನಿವಾಸ, 1944, *ತಾಳಿಕೋಟೆ*, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ

ಸದಾಶಿವರಾಯ ಗರುಡ, 1980, *ಯಚ್ಚಮ ನಾಯಕ*, ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ, ಗದಗ

ಹಣಮಂತರಾಯ ಕಂದಗಲ್ಲ, 1994, *ವರಪ್ರದಾನ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಹೆಗ್ಡೆ ನರಸಿಂಹ ಲಕ್ಷ್ಮಣ, 1926, *ಕರ್ನಾಟಕ ಸಿಂಹಾಸನ ನಾಟಕವು*

### ಕಾದಂಬರಿ ಸಾಹಿತ್ಯ

ಆನಂದಕಂದ, 1935, *ಅಶಾಂತಿಪರ್ವ*, ಶರತ್ ಪ್ರಕಾಶನ ಮಂದಿರ, ಧಾರವಾಥ.

ಆನಂದಕಂದ,1934 *ರಾಜಯೋಗಿ*, ಮನೋಹರ ಗ್ರಂಥಮಾಲಾ, ಧಾರವಾಡ.

ಕರ್ಪೂರ್ ಆರ್.ಟಿ., 1927, *ಕನ್ನಡಿಗರ ಕಾರಸ್ಥಾನ*, ಶ್ರೀಕ್ಷೇತ್ರ ಆನಂದವನ.

ಕುಲಕರ್ಣಿ ಶಂಕರ ಅಣ್ಣಾಜಿ, 1922, *ಕರ್ನಾಟಕ ಸಿಂಹಾಸನ ಸ್ಥಾಪನೆ*, ಶ್ರೀವಿದ್ಯಾರಣ್ಯ ಪ್ರಕಾಶನ ಸಂಸ್ಥೆ, ಧಾರವಾಡ.

ಗಳಗನಾಥ, 1999, *ಕನ್ನಡಿಗರ ಕರ್ಮಕಥೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗಳಗನಾಥ, 1999, *ಮಾಧವ ಕರುಣಾವಿಲಾಸ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗೇಶ, 1936, *ಎಚ್ಚಮನಾಯಕ, ಸದ್ಭಾವಚಂದ್ರಿಕೆ*, ಆನಂದವನ ಅಗಡಿ.

ಸೀತರಾರಾಮಯ್ಯ ಶಾಸ್ತ್ರಿ ಎಂ., 1958 *ಸ್ವಪ್ನಸೃಷ್ಟಿ*, ಶಂಕರಮಠ ಬೆಂಗಳೂರು.

ಸೀತಾರಾಮ ಶಾಸ್ತ್ರಿ ವೀರಕೇಸರಿ, 1958, *ಧರ್ಮಗ್ಲಾನಿ*, ಪ್ರಸಾದ್ ಫಬ್ಲಿಕೇಷನ್,ಮೈಸೂರು.

ಸೀತಾರಾಮ ಶಾಸ್ತ್ರಿ ವೀರಕೇಸರಿ, 1958, *ಸಾಮ್ರಾಜ್ಯ ವೈಭವ*, ಪ್ರಸಾದ್ ಪಬ್ಲಿಕೇಷನ್,ಮೈಸೂರು.

## ಕವನ ಸಂಕಲನ

ಗೋಪಾಲಕೃಷ್ಣ ಅಡಿಗ, 2000, *ಸಮಗ್ರ ಕಾವ್ಯ*, ಸಪ್ನ ಬುಕ್ ಹೌಸ್, ಬೆಂಗಳೂರು.

ದೊಡ್ಡನಗೌಡ ಜೋಳದರಾಶಿ ಕೆ. : 1998, ಧಾರವಾಡಕರ ರಾ.ಯ. (ಸಂ), 1983, *ಶಾಂತರಸರ ಮೂರು ಕೀರ್ತನೆಗಳು*. ಡಾ.ರಾ.ಯ.ಧಾರವಾಡಕರ, ಸರಸ್ವತಿಪುರ, ಧಾರವಾಡ.

ಶಿದ್ಧಲಿಂಗಣಶೆಟ್ಟಿ (ಸಂ), 1996, *ಸಾಲಿ ರಾಮಚಂದ್ರರಾಯರ ಸಮಗ್ರ ಕಾವ್ಯ*, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

ಶಿವಾರೆಡ್ಡಿ ಕೆ.(ಸಂ) 2000, *ಕುವೆಂಪು ಸಮಗ್ರ ಕಾವ್ಯ ಸಂ–1*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೇಷಗಿರಿರಾವ್ ಎಲ್.ಎಸ್. (ಸಂ): 1993., *ಕನ್ನಡ ತಾಯಿಗೆ ನುಡಿನಮನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಬಿ.ಎಂ.ಶ್ರೀ. 2007, *ಕನ್ನಡದ ಬಾವುಟ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

## ಸ್ಮರಣ ಸಂಚಿಕೆ

ಶಾಂತಕವಿ ಮತ್ತು ಇತರರು (ಸಂ), 1938 *ವಿಜಯನಗರ ಸ್ಮಾರಕೋತ್ಸವ ಸಂಚಿಕೆ*, ವಿಜಯನಗರ ಸ್ಮಾರಕೋತ್ಸವ ಮಂಡಳಿ, ಧಾರವಾಡ.

ವೆಂಕಟೇಶ ಶ್ರೀನಿವಾಸ ಪಂಡಿತ (ಸಂ), 1936, ಅರುಣೋದಯ *ವಿಜಯನಗರ ಸಾಮ್ರಾಜ್ಯ ಸ್ಮಾರಕ ಮಹೋತ್ಸವ ಸಂಚಿಕೆ*, ಪಂ.ವೆಂಕಟರಾಯರು, ಬೆಳಗಾವಿ.

*ವಿಜಯನಗರ ಸ್ಮಾರಕೋತ್ಸವ ವರದಿ*, 1938, ವಿಜಯನಗರ ಸ್ಮಾರಕೋತ್ಸವ ಮಂಡಲ, ಧಾರವಾಡ.

*Vijayanagar Sexcentenary Commemoration Volume*, 1936, Auspices of The Vijayanagar Empire Sexcentenary Association and Karnataka Historical Research Society, Dharwar.

## ಪ್ರವಾಸ ಸಾಹಿತ್ಯ


ತೆಲಗಾವಿ ಲಕ್ಷ್ಮಣ (ಸಂ),2002, *ಕೆ.ರಾಮಸ್ವಾಮಿ ಅಯ್ಯಂಗಾರ್ ಅವರ ಜೀರ್ಣ ವಿಜಯನಗರಾದರ್ಶಂ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೀತಾರಾಮಯ್ಯ ವಿ. :2005, *ಪಂಪಯಾತ್ರೆ,* (ಪ್ರವಾಸಿ ಕಂಡ ವಿಜಯನಗರ, ಸಂ:ಬಿ.ಎ.ವಿವೇಕ ರೈ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೇಲೂರು ಕೃಷ್ಣಮೂರ್ತಿ :1986: ಹಂಪೆ. ಶ್ರೀ ವೆಂಕಟೇಶ್ವರ ಟಾಯ್ಸ್ ಸೆಂಟರ್, ಹಂಪಿ.

ಶ್ರೀ ಎಸ್.ಎಂ. ವೀರಭದ್ರಯ್ಯ : ಹಂಪೆ (ಟೂರಿಸ್ಟ್ ಗೈಡ್)

ಡಾ.ಪಾಂಡುರಂಗ ದೇಸಾಯಿ: 2003, ಹಂಪೆ, ಪ್ರವಾಸಿಗರ ಮಾರ್ಗದರ್ಶಿ, ಸಪ್ನಬುಕ್ ಹೌಸ್,ಬೆಂಗಳೂರು


## ಸಂಶೋಧನಾ ಕೃತಿಗಳು


ಗೋವಿಂದರಾಜು ಸಿ.ಆರ್., 2006, *ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಜಯಪ್ರಕಾಶ್ ಬಂಜಗೆರೆ, 2000, *ಕನ್ನಡ ರಾಷ್ಟ್ರೀಯತೆ,* ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು.

ಪಡಿಕಲ್ ಶಿವರಾಮ, 2001 *ನಾಡು ನುಡಿಯ ರೂಪಕ*, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

ರಾಮಕೃಷ್ಣಶರ್ಮ ಗಡಿಯಾರಂ (ಮೂಲ), ಗುಮಾಸ್ತೆ ರಾಮಚಂದ್ರರಾವ್ (ಅನು), 2002, *ವಿದ್ಯಾರಣ್ಯ : ಒಂದು ಚಾರಿತ್ರಿಕ ಅಧ್ಯಯನ,* ಮಾನಸ ಗಂಗೋತ್ರಿ, ಮೈಸೂರು, ಜುಲೈ, 2002.

ಶ್ರೀನಿವಾಸಮೂರ್ತಿ ಕಾ.ವೆಂ., 2003, *ಕನ್ನಡಪರ ಚಿಂತನೆ ಮತ್ತು ಪರಂಪರೆ,* ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು.

## ಲೇಖನಗಳು

ಮಧುರಚೆನ್ನ ಮತ್ತು ಲಿಂಗಣ್ಣಸಿಂಪಿ, 1936, *ಕನ್ನಡಿಗರ ಕುಲಗುರು*, ಅರವಿಂದ ಗ್ರಂಥಮಾಲ, ಹಲಸಂಗಿ.

ಮಾಸ್ತಿ , ಜುಲೈ 1965 *ವಿಜಯನಗರ ಹೇಳುವ ಕಥೆ* (ಪ್ರಸಂಗ–3, ಜೀವನ ಕಾರ್ಯಾಲಯ ಬೆಂಗಳೂರು,)

ವೆಂಕಟೇಶ ಭೀಮರಾವ್ ಆಲೂರು, 1920, *ಬಳ್ಳಾರಿಯು ಕನ್ನಡ ಜಿಲ್ಲೆಯಲ್ಲವೋ* (ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ–5, ಬೆಂಗಳೂರು)

ರಾಮರಾವ್ ಆರ್.ಎಸ್., ಜೂನ್–ಡಿಸೆಂಬರ್ 1951, *ವಿಜಯನಗರ ಸಾಮ್ರಾಜ್ಯದ ಕಲಾನನಿಕ್ಷೇಪ* (ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ–36, ಸಂಚಿಕೆ–1–2, ಬೆಂಗಳೂರು)

ರಾಮರಾವ್ ನರಗುಂದಕರ್, 1918–19, *ವಿಜಯನಗರ ಸಾಮ್ರಾಜ್ಯವೂ, ಕನ್ನಡಿಗರೂ* (ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ–3, ಬೆಂಗಳೂರು)

ರಾಮರಾವ್ ಬಿ. ಎಪ್ರೀಲ್ 1927, *ವಿಜಯನಗರಕ್ಕೆ ಸಂಬಂಧಪಟ್ಟ ಕಥೆ* (ಸಾಹಿತ್ಯ ಪರಿಷತ್ ಪತ್ರಿಕೆ, ಸಂಪುಟ–2, ಬೆಂಗಳೂರು)

ರಾಮರಾವ್ ಬಿ. ಏಪ್ರೀಲ್–1926, *ವಿದ್ಯಾರಣ್ಯರ ವೃತ್ತಾಂತ* (ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು)

ರಾಮರಾವ್ ಬಿ. ಜನವರಿ–1927, *ಬಳ್ಳಾರಿಯ ಕೈಫಿಯತ್ತು* (ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು)

ಶೇಷಗಿರಿರಾವ್. ಎಲ್.ಎಸ್., 1974, *ಕನ್ನಡ ಕಾದಂಬರಿಗಳಲ್ಲಿ ರಾಷ್ಟ್ರೀಯತೆ,* (ಚಿನ್ನದ ಗರಿ ಸಂ:ಹಾ.ಮ.ನಾಯಕ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶ್ರೀನಿವಾಸರಾವ್ ಕೊರಟಿ, 1974, *ಕನ್ನಡ ಕಾದಂಬರಿಗಳಲ್ಲಿ ಇತಿಹಾಸ,* (ಚಿನ್ನದ ಗರಿ ಸಂ:ಹಾ.ಮ.ನಾಯಕ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

# ಪೂರಕ ಸಾಹಿತ್ಯ


ಈಶ್ವರಚಂದ್ರ (ಅನು), 2006, *ಸೋಮುವಾರು ಸಮಸ್ಯೆ*(ಕರಾಚಿ ಅಧಿವೇಷನದ ವರದಿ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ.

ಎನ್ಕೆ, 2001 *ಉತ್ತರ ಕರ್ನಾಟಕದ ರಂಗಭೂಮಿ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಕಾಮತ್ ಸೂರ್ಯನಾಥ, 2003, *ಕರ್ನಾಟಕ ಏಕೀಕರಣ ಸಿದ್ಧಿ ಮತ್ತು ಸಾಧನೆ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕುಲಕರ್ಣಿ ಆರ್.ಬಿ., 1924, *ಕನ್ನಡಿಗನ ಸರ್ವಸ್ವ ಅಥವಾ ಸಂಯುಕ್ತ ಕರ್ನಾಟಕ ಪ್ರಾಂತ್ಯ*, ಆರ್.ಬಿ.ಕುಲಕರ್ಣಿ, ಕಾವ್ಯರತ್ನ, ಬೆಳಗಾಂವಿ.

ಕೋತಿನ ಎಸ್.ಎಸ್., 1993, *ಹರ್ಡೇಕರ ಮಂಜಪ್ಪ*, ಸಾಹಿತ್ಯ ಅಕಾದೆಮಿ, ನವದೆಹಲಿ.

ಕುರ್ತುಕೋಟಿ ಕೀರ್ತಿನಾಥ, 2002, *ಯುಗಧರ್ಮ ಮತ್ತು ಸಾಹಿತ್ಯ ದರ್ಶನ*, ಮನೋಹರ ಗ್ರಂಥಮಾಲಾ, ಧಾರವಾಡ.

ಕೃಷ್ಣಶರ್ಮ ಬೆಟಗೇರಿ, 1983 *ಕರ್ನಾಟಕ ಜನಜೀವನ*, ಕರ್ನಾಟಕ ಸರಕಾರ, ಬೆಂಗಳೂರು.

ಕೃಷ್ಣಮೂರ್ತಿ ಕಿತ್ತೂರು, 1971, *ಗಳಗನಾಥರ ಕಾದಂಬರಿಗಳು*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

ಗುರುಲಿಂಗಪ್ಪ ಕಾಪಸೆ (ಸಂ),2003 *ಆನಂದಕಂದ-ದೇಶೀ ಪ್ರತಿಭೆಯ ಸಾಧನೆ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು,

ಗೋವಿಂದರಾಜ ಗಿರಡ್ಡಿ, 2002, *ಮಿರ್ಜಿ ಅಣ್ಣಾರಾಯರ ಸಾಹಿತ್ಯ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಗೋವಿಂದರಾಜ್ ಗಿರಡ್ಡಿ, 2007, *ಪ್ರಮಾಣು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಗೋವಿಂದರಾಜು ಸಿ.ಆರ್., 2005, *ಕನ್ನಡಮ್ಮ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಎಸ್., 2006, *ವಸಹಾತು ಕಾಲೀನ ಕರ್ನಾಟಕ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಚಂದ್ರಶೇಖರ್ ಎಸ್., 2005, *ಏಕೀಕರಣ : ಒಂದು ಕಥನ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಚಂದ್ರಶೇಖರ್ ಎಸ್.(ಮೂಲ), ನಾಗಣ್ಣ ಸಿ.(ಅನು), 2000, *ದಕ್ಷಿಣ ಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಹಾಸಗುಪ್ತ ಅ.ರಾ., 1985, *ಆಡಳಿತದಲ್ಲಿ ಕನ್ನಡ*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಚನ್ನಬಸಪ್ಪ ಕೋ., 2007 *ಕರ್ನಾಟಕ ಏಕೀಕರಣ*, ಲೋಹಿಯಾ ಪ್ರಕಾಶನ, ಬಳ್ಳಾರಿ.

ಚಿದಾನಂದ ಮೂರ್ತಿ ಎಂ., 2006, *ಕನ್ನಡ ಸಂಸ್ಕೃತಿ : ನಮ್ಮ ಹೆಮ್ಮೆ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ತಂಬಂಡ ವಿಜಯ ಪೂಣಚ್ಚ, 2001 *ಚರಿತ್ರೆ*, (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತರೀಕೆರೆ ರಹಮತ್(ಸಂ), 2007, *ಇಂಗ್ಲೀಷ್ ಗೀತೆಗಳು : ಸಾಂಸ್ಕೃತಿಕ ಮುಖಾಮುಖಿ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತರೀಕೆರೆ ರಹಮತ್, 2001, *ಕರ್ನಾಟಕದ ಸೂಫಿಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತಲ್ವಾಡಿ ಬಿ.ಎಸ್., 1989, *ಕರ್ನಾಟಕ ಕ್ರೈಸ್ತರ ಇತಿಹಾಸ*, ಕನ್ನಡ ಕಥೋಲಿಕ ಸಂಘ, ಬೆಂಗಳೂರು.

ದೊರೆಸ್ವಾಮಿ ಎಚ್.ಎಸ್., 2006 *ಹೋರಾಟದ ದಿಟ್ಟ ಹೆಜ್ಜೆ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಧರ್ಮತೀರ್ಥ ಸ್ವಾಮಿ (ಮೂಲ), ಭಗವಾನ್ (ಅನು), 2003, *ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ*, ಮಹಿಮ ಪ್ರಕಾಶನ, ಮೈಸೂರು,

ಧಾರವಾಡಕರ ರಾ.ಯ. 1975(ಪ್ರಮುದ್ರಣ), *ಹೊಸಗನ್ನಡದ ಉದಯ ಕಾಲ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಾಯಕ ಹಾ.ಮಾ., 1975, *ಬಿಡುಗಡೆಯ ಬೆಳ್ಳಿ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ನಾರಾಯಣ ಕೆ.ವಿ., 2007, *ಕನ್ನಡ ಜಗತ್ತು ಅರ್ಧಶತಮಾನ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., 2005, *ನಮ್ಮೊಡನೆ ನಮ್ಮ ನುಡಿ*, ಲೋಹಿಯಾ ಪ್ರಕಾಶನ, ಬಳ್ಳಾರಿ.

ಪ್ರಭುಶಂಕರ, 1979, *ಸಾಹಿತ್ಯ ಮತ್ತು ಆಧುನಿಕತೆ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬಿಪನ್ ಚಂದ್ರ, ಅಮಲೇಳಶ ತ್ರಿಪಾಠಿ, ಬರುನ್ ಡೇ(ಮೂಲ), ಅನಂತರಾಮಯ್ಯ ಆರ್.ಎಲ್.(ಅನು), 2001, *ಸ್ವಾತಂತ್ರ್ಯದ ಹೋರಾಟ*, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ.

ಬಿಳಿಮಲೆ ಪುರುಷೋತ್ತಮ ಮತ್ತು ಚೆಲುವರಾಜ, 1996, *ಹಂಪಿ ಜಾನಪದ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬೆಳಗಲಿ, ದು.ನಿಂ, 1999, *ಆನಂದಕಂದ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

ಬೇವಿನಕಟ್ಟಿ ಮಂಜುನಾಥ (ಸಂ), 1997, *ವಿಜಯನಗರ ಸಾಂಸ್ಕೃತಿಕ ಆಯಾಮಗಳು*, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ತಾ॥ಹೊಸಪೇಟೆ.

ಮಹಾದೇವ ಸಿ., ಸೋಸಲೆ ಚಿನ್ನಸ್ವಾಮಿ ಎನ್. (ಸಂ), 2006, *ಹಂಪಿ ಅಂದು–ಇಂದು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮುಗಳಿ ರಂ.ಶ್ರೀ, 2006, *ಸಾಹಿತ್ಯೋಪಾಸನೆ*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ರಂಜೇರೆ ಅಶೋಕ ಕುಮಾರ, 2002, *ಸಾಹಿತ್ಯ ಮತ್ತು ಇತಿಹಾಸದ ಸಂಬಂಧಗಳು*, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು.

ರತ್ನ ಪಿ.ನಗುವನಹಳ್ಳಿ, 1995, *ಎಂ.ಆರ್.ಶ್ರೀ. ಒಂದು ಅಧ್ಯಯನ*, ಪ್ರಶಾಂತಿ ಪ್ರಕಾಶನ ಮೈಸೂರು.

ರಾಘವೇಂದ್ರರಾವ್ ಕೆ.(ಮೂಲ), ಆರ್ಯ(ಅನು), 2005, *ಕರ್ನಾಟಕ ಏಕೀಕರಣದ ನಾಲ್ವರು ಚಿಂತಕರು*, ಮನೋಹರ ಗ್ರಂಥಮಾಲಾ, ಧಾರವಾಡ.

ರಾಜಾರಾಂ ಎಸ್.ನವರತ್ನ, 2001, ಇತಿಹಾಸ, *ಸಂಸ್ಕೃತಿ ಮತ್ತು ರಾಷ್ಟ್ರೀಯತೆ*, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

ರಾಧಾಕೃಷ್ಣ ಕೆ.ಈ.(ಸಂ), 2004, *ಡಿ.ವಿ.ಜಿ. ಬದುಕು ಬರಹ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ರಾಬರ್ಟ್ ಸೆವೆಲ್(ಮೂಲ), ಸದಾನಂದ ಕನವಳ್ಳಿ (ಅನು), 2008, *ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (1992).

ರಾಮಚಂದ್ರಪ್ಪ ಬರಗೂರು, 2002, *ಕನ್ನಡಾಭಿಮಾನ,* ಅಂಕಿತ ಪುಸ್ತಕ, ಬೆಂಗಳೂರು, 2002.

ರಾಮಚಂದ್ರ ಸಿ.ಎನ್., 2002, *ಪರಂಪರೆ ಮತ್ತು ಪ್ರತಿರೋಧ,* ಸಂವಾದ ಮಲ್ಲಾಡಿಹಳ್ಳಿ.

ರಾಮಸ್ವಾಮಿ ಎಸ್.ಆರ್., 1998, *ಸ್ವಾತಂತ್ರ್ಯೋತ್ಸವದ ಮೈಲುಗಲ್ಲುಗಳು,* ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

ವಾಥಿಯೊಂಗೊ ಗೂಗಿ(ಮೂಲ), ತೇರಿಕೆರೆ ರಹಮತ್ (ಅನು), 1996, *ವಸಹಾತು ಪ್ರಜ್ಞೆ ಮತ್ತು ವಿಮೋಚನೆ,* ಬೆಳ್ಳಿಚುಕ್ಕೆ ಬುಕ್ ಟ್ರಸ್ಟ್, ಮೈಸೂರು.

ವಿವಿಧ ಲೇಖಕರು, 1996, *ಕನ್ನಡ-ಕನ್ನಡಿಗ-ಕರ್ನಾಟಕ,* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ವೆಂಕಟರಾಯ ಆಲೂರು, 1999, *ಕರ್ನಾಟಕತ್ವದ ವಿಕಾಸ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. (1957) 1999.

ವೆಂಕಟರಾಯ ಆಲೂರು, 2006, *ಕರ್ನಾಟಕ ಗತವೈಭವ,* ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವೆಂಕಟೇಶ ಜಿ.ಮಲ್ಲೇಪುರಂ, 1993, *ಕನ್ನಡ ವಾರ್ಷಿಕ-1992,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೆಂಕಟಸುಬ್ಬಯ್ಯ ಜಿ., 2007, *ಗತಿಪ್ರಜ್ಞೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರನಾರಾಯಣ ರಾವ್, 1991, *ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು,* ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಶಾಮರಾಯ ತ.ಸು.,2007, *ಕನ್ನಡ ನಾಟಕ,* ಪ್ರತಿಭಾ ಪ್ರಕಾಶನ, ಮೈಸೂರು.

ಶಿವರುದ್ರಪ್ಪ ಜಿ.ಎಸ್. (ಪ್ರಸಂ), 1971, *ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ,* ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶಿವರುದ್ರಪ್ಪ ಜಿ.ಎಸ್., 1976, *ನವೋದಯ,* ಶರತ್ ಪ್ರಕಾಶನ, ಮೈಸೂರು.

ಶಿವರುದ್ರಪ್ಪ ಜಿ.ಎಸ್., 1982, *ಭಾರತೀಯತೆ ಮತ್ತು ಕನ್ನಡ ಲೇಖಕ*, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಶ್ರೀನಿವಾಸಮೂರ್ತಿ ಕಾ.ವೆಂ., 1998, *ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ*, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಶ್ರೀನಿವಾಸ ರಿತ್ತಿ, ಸುರೇಂದ್ರ ದಾನಿ, 2007,*ಆಲೂರು ವೆಂಕಟರಾಯರ ಸಮಗ್ರ ಕೃತಿಗಳು ಸಂ-1*, ಆಲೂರು ವೆಂಟಕರಾವ ಪ್ರತಿಷ್ಠಾನ, ಧಾರವಾಡ.

ಷೇಕಅಲಿ ಬಿ. (ಪ್ರ.ಸಂ.), 1997, *ಕರ್ನಾಟಕ ಚರಿತ್ರೆ ಸಂಪುಟ-6*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಷೇಕಅಲಿ ಬಿ. (ಪ್ರ.ಸಂ.), 1997, *ಕರ್ನಾಟಕ ಚರಿತ್ರೆ ಸಂಪುಟ-7*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಬರದ ಬಸವರಾಜ, 2002, *ಸಮುದಾಯ ಮತ್ತು ಸಂಸ್ಕೃತಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸೂರ್ಯನಾರಾಯಣರಾವ್(ಮೂಲ), ಬಾಲಸುಬ್ರಹ್ಮಣ್ಯ(ಅನು), 2000, *ಮರೆಯಲಾಗದ ಮಹಾಸಾಮ್ರಾಜ್ಯ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಾವನೂರು ಶ್ರೀನಿವಾಸ, 2000, *ಹೊಸಗನ್ನಡದ ಅರುಣೋದಯ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಹಿಮ್ಮಡಿ ವೈ.ಬಿ. (ಸಂ), 2003, *ಚಲೇಜಾವ್ ಚಳುವಳಿಯ ಅರವತ್ತರ ನೆನಪು ಮತ್ತು ಬಸವರಾಜ ಕಟ್ಟಿಮನಿ ಸ್ಮರಣೆ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2003.

ಹುಲಿಕವಿ ಭೀಮಾಜಿ ಜೀವಾಜಿ, 1985, *ಶ್ರೀವಿದ್ಯಾರಣ್ಯ ಮಹಾಸ್ವಾಮಿಗಳು*, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

ಹೆಗಡೆ ರಾಜಾರಾಮ, 2005, *ಗತ-ಕಥನ(ರಾಷ್ಟ್ರೀಯ ಇತಿಹಾಸ ಮತ್ತು ಕನ್ನಡ ಜಗತ್ತು)*, ಆನಂದಕಂದ ಗ್ರಂಥಮಾಲಾ, ಮಲ್ಲಾಡಿಹಳ್ಳಿ.

ಹೆಗಡೆ ರಾಜರಾಮ(ಸಂ), 2004, *ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಹೆಗಡೆ ದಿವಸ್ಪತಿ, 1994, *ಕನ್ನಡ ನವ್ಯ ನಾಟಕ ಮತ್ತು ಪಾಶ್ಚಾತ್ಯ ಪ್ರಭಾವ*, ಕದಂಬ ಪ್ರಕಾಶನ, ಬೆಂಗಳೂರು.

## ಅನುಬಂಧ–2

## ವಕ್ತೃಗಳ ವಿವರ

| ಕ್ರಸಂ. | ಹೆಸರು | ವಯಸ್ಸು | ಉದ್ಯೋಗ | ಸ್ಥಳ |
|---|---|---|---|---|
| 1. | ಪ್ರಕಾಶ ಶೆಟ್ಟಿ | 39 | ಪ್ರವಾಸಿ ಮಾರ್ಗದರ್ಶಕರು | ಕಮಲಾಪುರ |
| 2. | ರಂಗನಾಥ | 40 | ,, | ಹಂಪೆ |
| 3. | ಬಿ.ಪ್ರಕಾಶ | 30 | ,, | ಕಮಲಾಪುರ |
| 4. | ಹನುಮಂತಪ್ಪ | 45 | ಕೃಷಿ | ಎಂ.ಪಿ.ಪಿ. ನಗರ |
| 5. | ವೆಂಕಟೇಶ | 43 | ವ್ಯಾಪಾರ | ಹಂಪೆ |

* * *

ಕರ್ನಾಟಕ ಸರ್ಕಾರ

# ಕನ್ನಡ ಕುಸುಮ-೧

ಕನ್ನಡ ತೃತೀಯ ಭಾಷೆ



ಎಂಟನೇ ತರಗತಿ

8